ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ—ಸಂಖ್ಯೆ ೩೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ ಆದ

ಯೋಗವಾಸಿಷ್ಠ

ಸಂಪುಟ ೧೩

ಉಪಶಮ ಪ್ರಕರಣ

ಕನ್ನಡಿಸಿದವರು :
ವೇದಾಂತ ಶಿರೋಮಣಿ
ಮಣಿಕುಂಡಲಂ ಎಸ್. ವೆಂಕಟೇಶ ಶಾಸ್ತ್ರಿ

ಶ್ರೀ ಗುರುನಾಥ ಪ್ರಿಂಟಿಂಗ್ ವರ್ಕ್ಸ್,
೨೧, ಮನವಾರ್ತೆಪೇಟೆ, ಬೆಂಗಳೂರು ನಗರ.
೧೯೪೯

ಯೋಗವಾಸಿಷ್ಠ

ಸಂಪುಟ ೧೩

ಉಪಶಮ ಪ್ರಕರಣ

ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ—ಸಂಖ್ಯೆ ೩೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ
ಆದ

ಯೋಗವಾಸಿಷ್ಠ

ಸಂಪುಟ ೧೩

ಉಪಶಮ ಪ್ರಕರಣ

ಕನ್ನಡಿಸಿದವರು :
ವೇದಾಂತ ಶಿರೋಮಣಿ
ಮಣಿಕುಂಡಲಂ ಎಸ್. ವೆಂಕಟೇಶ ಶಾಸ್ತ್ರಿ

ಶ್ರೀ ಗುರುನಾಥ ಪ್ರಿಂಟಿಂಗ್ ವರ್ಕ್ಸ್,
೨೧, ಮನವಾರ್ತೆಪೇಟೆ, ಬೆಂಗಳೂರು ನಗರ.
೧೯೪೯

ಪೀಠಿಕೆ

ಯೋಗವಾಸಿಷ್ಠವು ಅದ್ವೈತಸಿದ್ಧಾಂತಕ್ಕೆ ಸೇರಿದ ಪ್ರಕರಣ ಗ್ರಂಥ. ಇದಕ್ಕೆ ವಾಸಿಷ್ಠರಾಮಾಯಣ ಎಂದೂ ಹೆಸರುಂಟು. ಅದ್ವೈತ ಗುರುಪರಂಪರೆಯ ಆದ್ಯರಾದ ವಸಿಷ್ಠರು "ಸೃಷ್ಟಿಯ ಮೊದಲು ದಿನಗಳಲ್ಲಿ ಲೋಕದಲ್ಲಿ ಶಾಂತಿಯು ನೆಲೆಗೊಳ್ಳಲೆಂದು ಭಗವಂತನಾದ ಚತುರ್ಮುಖನು ಉಪದೇಶಿಸಿದ ಜ್ಞಾನವಿದ್ಯೆ"ಯನ್ನು ಶ್ರೀರಾಮನ ಚಿತ್ತಶಾಂತಿಗೆಂದು ಹೇಳಿದರೆಂದೂ, ಅದನ್ನೇ ವಾಲ್ಮೀಕಿಗಳು ಬ್ರಹ್ಮನಾಜ್ಞೆಯಿಂದ ಗ್ರಂಥವಾಗಿ ವಿರಚಿಸಿದರೆಂದೂ ಈ ಗ್ರಂಥದಲ್ಲಿ ಹೇಳಿದೆ. ವಿದ್ಯಾರಣ್ಯರು ನಿಶ್ಚಲದಾಸರು ಮೊದಲಾದ ಅದ್ವೈತಾಚಾರ್ಯರನೇಕರು ಈ ಗ್ರಂಥದ ಅನೇಕಾಂಶಗಳನ್ನು ತಮ್ಮ ಗ್ರಂಥಗಳಲ್ಲಿ ಸಂಗ್ರಹಿಸಿದ್ದಾರೆ. ವಾಸಿಷ್ಠ ಸಿದ್ಧಾಂತವೂ, ಶಾಂಕರ ಸಿದ್ಧಾಂತವೂ ಕೆಲವೆಡೆಗಳಲ್ಲಿ ಭಿನ್ನೈಸುವುದೆಂದು ಕೆಲವರ ಅಭಿಪ್ರಾಯವಿದೆ ಆದರೂ ಅದ್ವೈತ ಸಂಪ್ರದಾಯವನ್ನು ಹಿಡಿದ ಮುಮುಕ್ಷುಗಳೂ, ಜಿಜ್ಞಾಸುಗಳೂ ಈ ಗ್ರಂಥವನ್ನು ಪರಮಾದರದಿಂದ ಅಧ್ಯಯನ ಮಾಡುತ್ತಾರೆ.

ಭೋಗೈಕಪರಾಯಣವಾದ ಆಧುನಿಕ ನಾಗರಿಕತೆಯ ದೇಶಗಳಲ್ಲಿಯೇ ಹುಟ್ಟಿ ಬೆಳೆದ ಅನೇಕ ದಾರ್ಶನಿಕರು ನಿರೂಪಿಸಿರುವ ಸಿದ್ಧಾಂತಗಳಿಗೂ ಈ ವಾಸಿಷ್ಠ ಸಿದ್ಧಾಂತಕ್ಕೂ ಎಷ್ಟೋ ಅಂಶಗಳಲ್ಲಿ ಏಕತಾನತೆಯು ಇರುವುದು ಒಂದು ವಿಶೇಷ ಸಂಗತಿ.

ಈ ಗ್ರಂಥದಲ್ಲಿ ನಿರ್ಣಯಸಾಗರ ಪ್ರೆಸ್ಸಿನಲ್ಲಿ ತಾತ್ಪರ್ಯಪ್ರಕಾಶವೆಂಬ ವ್ಯಾಖ್ಯಾನದೊಡನೆ ಮುದ್ರಿತವಾಗಿರುವ ಮೂಲವನ್ನೇ ಬಹುಮಟ್ಟಿಗೆ ಅನುಸರಿಸಲಾಗಿದೆ. ಹಿಂದೆ ಆಸ್ಥಾನ ವಿದ್ವಾನ್ ಬ್ರಹ್ಮಶ್ರೀ ಗುಂಡಶಾಸ್ತ್ರಿಗಳು ಕೃಷ್ಣರಾಜ ವೈಭವವೆಂಬ ಹೆಸರಿನಿಂದ ವೈರಾಗ್ಯ, ಮುಮುಕ್ಷು, ವ್ಯವಹಾರ, ಉತ್ಪತ್ತಿ, ಸ್ಥಿತಿ ಉಪಶಮಗಳೆಂಬ ಮೊದಲಿನೈದು ಪ್ರಕರಣಗಳನ್ನು ಮೂಲ-ಅನುವಾದ ಸಹಿತವಾಗಿ ಪ್ರಕಟಿಸಿದ್ದರು. ಈಗ ಇಲ್ಲಿ ಪ್ರಕಟವಾಗಿರುವ ಅನುವಾದವು ಸ್ವತಂತ್ರವು. ಅವಶ್ಯವೆಂದು ತೋರಿದ ಕಡೆಗಳಲ್ಲಿಯೂ ಗ್ರಂಥಾಂತರಗಳಲ್ಲಿ ಹೇಳಿರುವುದು ಓದುಗರ ಗಮನಕ್ಕೆ ಬಂದು ಓದಿದ ವಿಷಯವು ದೃಢವಾಗಲೆಂದೂ ಟಿಪ್ಪಣಿಗಳನ್ನು ಕೊಡಲಾಗಿದೆ.

ಭಾರತವಿಂದು ಜಾಗ್ರತವಾಗಿದೆ. ಮಾದರಿಯ ಮೈಸೂರು ಅಕ್ಷರ ಪ್ರಚಾರವನ್ನು ದೇಶಾದ್ಯಂತವೂ ಹರಡಿ ಕೀರ್ತಿವಂತವಾಗಿದೆ. ನಾನಾಮುಖವಾಗಿ ಬೆಳೆಯುತ್ತಿರುವ ದೇಶದ ಸೌಭಾಗ್ಯ ಮಂದಿರಕ್ಕೆ ಕಲಶವಾಗಿ ಜನರೆಲ್ಲ ವಿದ್ಯಾವಂತರಾಗಬೇಕಾದರೆ ಬ್ರಹ್ಮವಿದ್ಯೆಯನ್ನು ಕಲಿಯಲೇಬೇಕೆಂಬ ಪ್ರಾಚೀನರ ಉಪದೇಶವಿಂದು ಎಲ್ಲರ ಮನಸ್ಸಿಗೂ ಬರುವ ಕಾಲವೂ ಬಂದಿದೆ. ಇಂತಹ ಸಂಧಿಕಾಲಗಳಲ್ಲಿ ಈ ಗ್ರಂಥವು ಸುಲಭ ಕನ್ನಡದಲ್ಲಿ ಬರುವುದು ಕನ್ನಡ ಲೋಕದ ಸುದೈವ. ಕಾವ್ಯಶೈಲಿಯಲ್ಲಿ ವೇದಾಂತವನ್ನು ಇಷ್ಟು ಸುಂದರವಾಗಿ, ಸುಲಭವಾಗಿ ಬೋಧಿಸುವ ಗ್ರಂಥ ಇನ್ನೊಂದಿಲ್ಲ. ಇದನ್ನು ಓದಿ ಅರ್ಥಮಾಡಿಕೊಳ್ಳಲು ಗ್ರಂಥಾಂತರಗಳ ಸಹಾಯವು ಬೇಕಿಲ್ಲ. ಶ್ರದ್ಧೆಯೊಂದಿದ್ದರೆ ಸಾಕು: ಆದರಿಂದ ಈ ಗ್ರಂಥದಿಂದ ಆಗುವ ಲೋಕೋಪಕಾರವು ಅಷ್ಟಿಷ್ಟಲ್ಲ.

ಈ ಗ್ರಂಥವು ಈ ರೂಪದಲ್ಲಿ ಬರುವುದಕ್ಕೆ ಕಾರಣರು ನಮ್ಮನ್ನಾಳುವ ಶ್ರೀಮನ್ಮಹಾರಾಜರು ಶ್ರೀ ಜಯಚಾಮರಾಜೇಂದ್ರ ಒಡೆಯರು ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ. ಅವರು. ಈ ಗ್ರಂಥ ಪಠನ ಪಾಠಗಳಿಂದ ಲಭಿಸುವ ಶ್ರೇಯಸ್ಸೆಲ್ಲವೂ ಮಹಾ ಸನ್ನಿಧಾನಕ್ಕೇ ಸೇರಿದುದು.

ಈ ಕಾರ್ಯಕ್ಕೆ ತನ್ನನ್ನು ನಿಯಮಿಸಿದ ಆಳುವ ಮಹಾಸ್ವಾಮಿಯವರಿಗೆ ಅನುವಾದಕನು ಅತ್ಯಂತ ಕೃತಜ್ಞನಾಗಿ ಈ ಗ್ರಂಥದ ಅಧ್ಯಯನದಿಂದ ತನಗೆ ಆದ ಪರಮೋಪಕಾರವನ್ನು ನೆನೆದು ಸಮಸ್ತ ಸನ್ಮಂಗಳಾನಿ ಭವಂತು ಎಂದು ಹರಕೆ ಹೊರುತ್ತಾನೆ.

ಬೆಂಗಳೂರು ನಗರ,
೨೦-೮-೪೯.

ದೇವುಡು.

ಸೂಚನೆ:— ಈ ಸಂಪುಟವನ್ನು ವೇದಾಂತ ಶಿರೋಮಣಿ ಬ್ರಹ್ಮಶ್ರೀ ಮ. ಸು. ವೆಂಕಟೇಶ ಶಾಸ್ತ್ರಿಗಳು ಕನ್ನಡಿಸಿದ್ದಾರೆ.

ವಿಷಯ ಸೂಚಿಕೆ

ಶ್ರೀ

ಯೋಗವಾಸಿಷ್ಠ

ಉಪಶಮ ಪ್ರಕರಣ

ದ್ವಿಸಪ್ತತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ದೇಹೇ ಜಾತೇ ನ ಜಾತೋಽಸಿ ದೇಹೇ ನಷ್ಟೇ ನ ನಶ್ಯಸಿ ।
ತವಾತ್ಮನ್ಯಕಲಂಕಾತ್ಮಾ ದೇಹಸ್ತವ ನ ಕಶ್ಚನ ॥ ೧ ॥

ಎಪ್ಪತ್ತೆರಡನೆಯ ಸರ್ಗ

ಶ್ರೀ ವಸಿಷ್ಠರು ಹೇಳಿದರು:—

೧. ಅಯ್ಯ ರಾಮ, ನೀನು ನಿಷ್ಕಳಂಕನಾದ ನಿತ್ಯ ಶುದ್ಧಾತ್ಮನೇ. ಇದರಲ್ಲಿ ಸಂಶಯವಿಲ್ಲ. ಆದಕಾರಣ, ನೀನು ನಿರತಿಶಯಾನಂದ ರೂಪ ಸ್ವಾತ್ಮ ಸ್ವರೂಪದಲ್ಲಿ ಸರ್ವದಾ ಅಭಿನ್ನನಾಗಿ ಪರಿನಿಷ್ಠಿತನಾಗಿದ್ದೀ. ಈ ದೇಹವು ಇಂತಹ ನಿನಗೆ ಹೇಗೂ ಸ್ವಲ್ಪವೂ ಯಾವುದೊಂದು ಸಂಬಂಧವನ್ನೂ ಪಡೆದುದಾಗಿಲ್ಲ. ಹೀಗಿರುವುದರಿಂದ-ದೇಹವು ಜನನವನ್ನು ಪಡೆದ ಮಾತ್ರದಿಂದ ಅದರೊಡನೆ ನೀನು ಜನನವನ್ನು ಪಡೆಯುವುದಿಲ್ಲ. ಮತ್ತು ದೇಹವು ನಾಶಹೊಂದಿದರೆ-ಆಗ ನೀನು ಅದರ ಜೊತೆಯಲ್ಲಿ ಎಂದಿಗೂ ನಾಶಪಡೆಯುವವನೂ ಆಗಿಲ್ಲ.

ಯಃ ಕುಂಡಬದರನ್ಯಾಯೋ ಯೋ ಘಟಾಕಾಶ ಸಂಸ್ಥಿತಿಃ ।
ತತ್ರೈತಸ್ಮಿನ್ಕ್ಷತೇ ಕ್ಷೀಣೇ ದ್ವೇ ಇತಿ ವ್ಯರ್ಥಕಲ್ಪನಾ ॥ ೨ ॥

ವಿನಾಶಿನಿ ವಿನಷ್ಟೇಽಸ್ಮಿನ್ದೇಹೇ ಸ್ವಾಂ ಸ್ಥಿತಿಮಾಗತೇ ।
ವಿನಶ್ಯಾಮೀತಿ ಯಃ ಖೇದೀ ತಂ ಧಿಗಸ್ತ್ವಂಧಚೇತಸಂ ॥ ೩ ॥

---

೨. ಒಂದು ಸ್ಥಾಲಿಯೊಳಗೆ ಎಳಚಿಹಣ್ಣು (ಬದರಫಲ) ಇರುವುದಾದರೂ ಆ ಸ್ಥಾಲಿಯೂ ಆ ಹಣ್ಣೂ ವಸ್ತುತಃ ಬೇರೆ ಬೇರೆಯಾಗಿಯೇ ಇರುವುವು. ಉಪಾಧಿಯಾದ ಒಂದು ಘಟದೊಳಗೆ ಇರುವ ಆಕಾಶವೂ, ಆ ಘಟವೂ ಅತ್ಯಂತ ಪೃಥಕ್ಕಾಗಿ (ಬೇರೆ ಬೇರೆ)ಯೇ ಆಗಿರುವುವು. ಇವುಗಳೊಳಗೆ ಒಂದು ಸ್ಥಾಲಿಯಾಗಲಿ ಮತ್ತು ಘಟವಾಗಲೀ ನಾಶಹೊಂದಿದ ಮಾತ್ರದಿಂದ-ಅವುಗಳೊಳಗಿರುವ ಬದರಫಲ ಮತ್ತು ಆಕಾಶಗಳು ನಾಶ ಹೊಂದುವುದೇನು ? ಅಥವಾ ಅವೂ ನಾಶಹೊಂದಿದುವು ಎಂದು ಹೇಳಲಾಗುವುದೇನು ? ಸರ್ವಥಾ ಇಲ್ಲವು. ಹೀಗಿರುವಾಗ ಆಧಾರವಾದ ಸ್ಥಾಲಿಯೊಂದರ ನಾಶದಿಂದ ಸ್ಥಾಲಿ ಬದರಫಲಗಳೆರಡೂ ಹಾಗೆಯೇ ಉಪಾಧಿಯಾದ ಘಟದ ನಾಶದಿಂದ ಘಟಾಕಾಶಗಳೆರಡೂ ಕೂಡ ನಾಶವಾದುವೆಂದು ಹೇಳುವುದು ಸರ್ವಥಾ ಅಸಮಂಜಸವು. ಮತ್ತು ವ್ಯರ್ಥಕಲ್ಪನೆಯು. ಈ ನ್ಯಾಯದಂತೆಯೇ, ದೇಹ ದೇಹಿಗಳೆರಡೂ ಒಟ್ಟಿಗಿರುವಂತೆ ತೋರಿದರೂ-ಪರಸ್ಪರ ಅಸಂಬಂಧಗಳಾಗಿ ಪೃಥಕ್ಕಾಗಿ ಇರತಕ್ಕವುಗಳು; ಮತ್ತು ದೇಹವು ನಷ್ಟವಾದ ಮಾತ್ರದಿಂದಲೇ-ದೇಹಿಯಾದ ಆತ್ಮನು ಎಂದಿಗೂ ನಾಶಹೊಂದುವುದಿಲ್ಲ ಹಾಗಲ್ಲದೆ ದೇಹದೊಂದಿಗೆ ದೇಹಿಯೂ ಅಂದರೆ ಒಟ್ಟಿಗೆ ಎರಡೂ ನಾಶಹೊಂದುವುವು ಎಂದು ಹೇಳುವುದು ನ್ಯಾಯ ಸಮ್ಮತವಲ್ಲ ಮತ್ತು ವ್ಯರ್ಥವಾದ ಕಲ್ಪನೆಯೆಂದು ತಿಳಿ.

೩. ವಿನಶ್ವರವಾದ ಸ್ವಭಾವವುಳ್ಳ (ಸ್ವಭಾವದಿಂದ ಅಲ್ಪಕಾಲದೊಳಗೆ ನಾಶಹೊಂದುವ) ಈ ದೇಹವು ನಾಶಹೊಂದಿ ತನ್ನ ಪ್ರಕೃತಿಯನ್ನು ಹೊಂದಿರಲಾಗಿ ಯಾವ ಮೂಢನು " ನಾನು ನಾಶಹೊಂದಿದೆನು" ಎಂದು ಭ್ರಾಂತಿಯಿಂದ ತಪ್ಪಾಗಿಯೇ ತಿಳಿದುಕೊಂಡು ದುಃಖಪಡುವನೋ, ಅಂತಹ ಅವಿವೇಕ ಚಿತ್ತನಾದ ಪ್ರಾಣಿಯ ಜನ್ಮವನ್ನು ಸುಡಬೇಕು. (ಅವನು ಎಂದಿಗೂ ಹಾಳಾದವನೇ) [ಪಂಚಭೂತಗಳಿಂದ ಉದಯಿಸಿದ ಶರೀರವು ನಾಶಹೊಂದಿ ಪುನಃ ತನ್ನ ಪ್ರಕೃತಿಯಾದ ಪಂಚಭೂತಗಳೊಂದಿಗೆಯೇ ಸೇರಿಕೊಂಡಿರುವುದು. ಇಷ್ಟುಮಾತ್ರದಿಂದ ಅಸಂಗನೂ ಅವಿಕ್ರಿಯನೂ ಆದ ಆತ್ಮನಿಗೆ ಯಾವಹಾನಿಯೂ ಇರುವುದಿಲ್ಲವೆಂದರ್ಥ]

ಯಾದೃಶೋ ರಶ್ಮಿರಥಯೋಃ ಸ್ನೇಹೋದ್ವೇಗವಿವರ್ಜಿತಃ ।
ಸಂಬಂಧಸ್ತಾದೃಶೋ ದೇಹಚಿತ್ತೇಂದ್ರಿಯ ಮುಖ್ಯೈಶ್ಚಿತೇಃ ॥ ೪ ॥

ಗತೇತರೇತರಾಪೇಕ್ಷಃ ಸರಃಪಂಕಾಮಲಾಂಭಸಾಂ ।
ಯಥಾ ರಾಘವ ಸಂಬಂಧಸ್ತಥಾ ದೇಹೇಂದ್ರಿಯಾತ್ಮನಾಂ ॥ ೫ ॥

---

೪. ಒಂದು ರಥ (ಗಾಡಿ) ಕ್ಕೆ ಕುದುರೆಗಳನ್ನೋ ಅಥವಾ ಎತ್ತುಗಳನ್ನೋ ಕಟ್ಟಬೇಕಾದರೆ ಹಗ್ಗಗಳು ಅಥವಾ ಲಗಾಮುಗಳು ಬೇಕಾಗುವುವು. ಹೀಗೆ ರಥಕ್ಕೆ ಬಿಗಿದು ಕಟ್ಟಿರುವ ಹಗ್ಗ (ಲಗಾಮು) ಗಳಿಗೂ ರಥಕ್ಕೂ ಇರುವ ಸಂಬಂಧವು ಹೇಗೆ ಪ್ರೀತಿಯೋಗ್ಯತೆಯಿಂದಲೂ ಮತ್ತು ದ್ವೇಷಯೋಗ್ಯತೆಯಿಂದಲೂ ವಿರಹಿತವಾಗಿ ಅಭಿಮಾನ ಶೂನ್ಯವಾಗಿದೆಯೋ, ಹಾಗೆಯೇ ಕೇವಲ ಚಿದ್ರೂಪನಾದ ಆತ್ಮನಿಗೆ (ದೇಹಿಗೆ) ದೇಹ, ಮನಸ್ಸು, ಇಂದ್ರಿಯ ಮೊದಲಾದುವುಗಳೊಡನೆ ಇರುವ ಸಂಬಂಧವೂ ಅಂತಹುದೇ ಅಂದರೆ ರಾಗದ್ವೇಷಯೋಗ್ಯತಾರಹಿತವಾಗಿ ಅಭಿಮಾನ ಶೂನ್ಯವಾಗಿಯೇ ಆಗಿರುವುದು.

೫. ಅಯ್ಯ ರಾಘವ, ಸರೋವರ, ಅದರೊಳಗಿರುವ ಕೆಸರು, ಮತ್ತು ತಿಳಿಯಾದ ನೀರು, ಇವುಗಳೊಳಗೆ ಪರಸ್ಪರ ಇರತಕ್ಕ ಸಂಬಂಧವು, ಒಂದರ ಅಪೇಕ್ಷೆಯು (ಅನುರಾಗವು) ಮತ್ತೊಂದಕ್ಕೆ ಇರತಕ್ಕುದಾಗಿ (ಅನ್ಯೋನ್ಯಸಾಪೇಕ್ಷವಾಗಿ) ಇಲ್ಲದಿರುವಂತೆ, ದೇಹ- ಇಂದ್ರಿಯ, ಆತ್ಮಗಳಿಗೆ ಇರುವ ಸಂಬಂಧವೂ ಪರಸ್ಪರ ಸಾಪೇಕ್ಷವಾಗಿರುವುದಿಲ್ಲ. [ಆತ್ಮನು ತನ್ನ ಇರುವಿಕೆಗೆ (ಸತ್ತೆಗೆ) ದೇಹೇಂದ್ರಿಯಾದಿಗಳ ಸತ್ತೆಯನ್ನು ಅಪೇಕ್ಷಿಸಿಕೊಂಡಿಲ್ಲ, ಅದು ಕಾರಣ, ದೇಹೇಂದ್ರಿಯಗಳು ನಾಶ ಹೊಂದಿದರೂ ಆತ್ಮನು ತನ್ನ ಪಾಡಿಗೆ ತಾನೂ ಸ್ವಭಾನುಸಾರವಾಗಿ ಅಕ್ಷತನಾಗಿಯೇ ಇರುವನು.]

(ಅವಿನಾಶಿತು ತದ್ವಿದ್ಧಿ ಯೇನ ಸರ್ವಮಿದಂ ತತಂ ।
ವಿನಾಶಮವ್ಯಯ ಸ್ಯಾಸ್ಯನಕಶ್ಚಿತ್ ಕರ್ತುಮರ್ಹತಿ॥ ಗೀತಾ ೨-೧೭)

(ಅಂದರೆ ಅವುಗಳ ಅನ್ಯೋನ್ಯ ಸಂಬಂಧವು ಪರಸ್ಪರ ಅನುರಾಗವುಳ್ಳದಾಗಿಲ್ಲವೆಂದರ್ಥ.)

ಯಾದೃಶೋಽಧ್ವಾ ಗತಾಧ್ವಾನಾಂ ನಿರಾಸ್ಥಾಪರಿದೇವನಃ
ಸಂಯೋಗೇ ವಿಪ್ರಯೋಗೇಚ ತಾದೃಶೋ ದೇಹದೇಹಿನೋಃ ॥ ೬ ॥

ಯಥಾ ಕಲ್ಪಿತವೇತಾಲವಿಕಾರ ಭಯಭೀತಯಃ ।
ಮಿಥ್ಯೈವ ಕಲ್ಪಿತಾ ಏತೇ ತಥಾ ಸ್ನೇಹಸುಖಾದಯಃ ॥ ೭ ॥

ಭೂತ ಪಂಚಕ ಸಂಪಿಂಡಾದ್ರಚಿತಾ ಜಾಗತಾಃ ಪೃಥಕ್ ।
ಏಕಸ್ಮಾದೇವ ವಿಟಪಾದ್ವಿಚಿತ್ರಾ ಇವ ಪುತ್ರಿಕಾಃ ॥ ೮ ॥

---

೬. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಯಾಣಮಾಡುತ್ತಿರುವ ಮಾರ್ಗಸ್ಥರಿಗೆ, ದಾರಿಯಲ್ಲಿ ನಡೆಯುತ್ತಿರುವಾಗ ಆ ಮಾರ್ಗದಮೇಲೆ ಸಂಯೋಗ ಜನರ ಅಹಂಕಾರ ಮತ್ತು ಮಮಕಾರರೂಪ ಅಭಿಮಾನವೂ, ಕಳೆದುಹೋದ ಮಾರ್ಗದಲ್ಲಿ ಆದರ ವಿಯೋಗದಿಂದುಂಟಾಗುವ ವಿಷಾದವೂ, ಇವೆರಡೂ ಹೇಗೆ ಸುತರಾಂ ಇರುವುದಿಲ್ಲವೋ, ಹಾಗೆಯೇ ಈ ದೇಹಗಳಿಗೂ ದೇಹಿಯಾದ ಆತ್ಮನಿಗೂ ಪರಸ್ಪರ ಸಂಯೋಗವುಂಟಾದಾಗ (ಒಟ್ಟಿಗೆ ಕಲೆತಕಾಲದಲ್ಲಿ) ಅಹಂತಾಮಮತಾ ರೂಪ ಅಭಿಮಾನವಾಗಲಿ. ಅಥವಾ ವಿಯೋಗವುಂಟಾದಾಗ (ಎರಡೂ ಬೇರೆ ಬೇರೆಯಾದಾಗ) ದುಃಖವಾಗಲೀ, ಇವೆರಡೂ ಇರುವುದೇ ಇಲ್ಲ.

೭. ಅಪ್ರಬುದ್ಧನಾದ ಬಾಲಕನು ತನ್ನ ಮನಸ್ಸಿನಲ್ಲಿ ಭ್ರಾಂತಿಯಮೂಲಕ ಬೇತಾಳನನ್ನು ಕಲ್ಪಿಸಿಕೊಳ್ಳುವುದು, ಆ ಕಲ್ಪಿತ ವೇತಾಳನು ತನ್ನ ಭಯಂಕರವಾದ ಮುಖವನ್ನು ತೋರಿಸುತ್ತಲೂ ದಾಡೆಗಳನ್ನು ತೆರೆಯುತ್ತಲೂ ಹೆದರಿಸುವುದೂ, ಮೊದಲೇ ಉಂಟಾಗಿದ್ದ ಭಯವನ್ನು ನೆನಸಿಕೊಂಡು ಪುನಃ ಪುನಃ ಭಯಪಡುವುದೂ ಇತ್ಯಾದಿ ವ್ಯವಹಾರಗಳೆಲ್ಲವೂ ಬಾಲನಿಗೆ ಹೇಗೆ ಮಿಥ್ಯೆಯಾಗಿಯೇ (ಕೇವಲ ಅಸತ್ಯವಾಗಿಯೇ) ಭ್ರಾಂತಿಯಿಂದ ಕಲ್ಪಿತವಾಗಿವೆಯೋ, ಹಾಗೆಯೇ, ಈ ಸ್ನೇಹ ಸುಖದುಃಖಾದಿ ವ್ಯವಹಾರಗಳೂ ಅವಿವೇಕಿಗಳಿಗೆ ಮಿಥ್ಯೆಯಾಗಿಯೇ, ಅಜ್ಞಾನದಿಂದ ಕಲ್ಪಿತಗಳಾಗಿರುವುವು.

೮. ಒಂದೇ ವೃಕ್ಷದ ಕೊಂಬೆಯೊಳಗಿರುವ ಒಂದೇ ದಾರುವಿನಿಂದಲೇ (ಮರ) ಬಡಗಿಯು ಅತ್ಯಂತ ವಿಚಿತ್ರಗಳಾದ ವಿವಿಧ ಗೊಂಬೆಗಳನ್ನು ನಾನಾಕಾರಗಳಾಗಿ ಹೇಗೆ ತಯಾರುಮಾಡುವನೋ (ರಚಿಸುವನೋ) ಅದರಂತೆಯೇ, ಆಕಾಶಾದಿ ಪಂಚ ಮಹಾಭೂತಗಳ ಸಮುದಾಯವೊಂದರಿಂದಲೇ, ಈ ಜಗತ್ತಿನಲ್ಲಿ ಅತಿವಿಚಿತ್ರಗಳಾದ ಪ್ರಾಣಿಗಳ ನಾನಾಕಾರದೇಹ ಸಮುದಾಯಗಳು ಪ್ರತ್ಯೇಕವಾಗಿ ರಚಿತವಾಗಿರುವುವು.

ಕಾಷ್ಠೇತರತ್ಕಾಷ್ಠಭಾರೇ ಕಿಂಚಿದನ್ಯನ್ನ ದೃಶ್ಯತೇ ।
ಭೂತಪಿಂಡೇತರದ್ದೇಹೇ ಕಿಂಚಿದನ್ಯನ್ನ ವಿದ್ಯತೇ　　॥ ೯ ॥

ಭೂತಪಂಚಕ ವಿಕ್ಷೋಭನಾಶೋತ್ಪಾದೇಷು ಹೇ ಜನಾಃ ।
ಹರ್ಷಾಮರ್ಷವಿಷಾದಾನಾಂ ಕಿಂ ಭವಂತೋ ವಶಂ ಗತಾಃ　　॥ ೧೦ ॥

ಕೋ ನಾಮಾತಿಶಯಃ ಪುಂಸಾಂ ಸ್ತ್ರೀನಾಮ್ನ್ಯಪರನಾಮ್ನಿ ಚ ।
ಪೇಲವೇ ಭೂತ ಸಂಘಾತೇ ಪ್ರೋದ್ಭೂತಜನಪಾತವತ್　　॥ ೧೧ ॥

---

೯. ಸೌದೆಗಳ ಹೊರೆಯನ್ನು ಬಿಚ್ಚಿ ಪ್ರತ್ಯೇಕ ಪ್ರತ್ಯೇಕವಾಗಿ, ಎಲ್ಲೆಲ್ಲಿ ಹುಡುಕಿದರೂ, ಅದರೊಳಗೆ ಕಾಷ್ಠಕ್ಕಿಂತಲೂ ಇತರ ವಸ್ತು ಯಾವುದೂ ಕಾಣುವುದಿಲ್ಲ. ಹಾಗೆಯೇ ಪಾಂಚಭೌತಿಕ (ಪಂಚಭೂತಗಳ ಸಮುದಾಯದಿಂದ ನಿರ್ಮಿತವಾದ) ದೇಹದೊಳಗೆ, ಎಲ್ಲೆಲ್ಲಿ ಎಷ್ಟೆಷ್ಟು ಹುಡುಕಿದರೂ, ಪಂಚಭೂತಗಳಿಗಿಂತ ಬೇರೆಯಾದ, ಯಾವುದೊಂದು ಇತರ ವಸ್ತುವೂ ಸರ್ವಥಾ ಕಾಣಿಸುವುದಿಲ್ಲ

೧೦ ವಸ್ತುಸ್ಥಿತಿಯು ಹೀಗಿರುವ ಕಾರಣ, ಎಲೈ ಅವಿವೇಕಿ ಜನಗಳೇ, ಈ ಪಂಚಭೂತಮಯವಾದ ದೇಹಗಳು ವಿಶೇಷವಾಗಿ ಕ್ಷೋಭೆಗೊಳಗಾಗಿ ಕಳವಳಪಡುವಕಾಲದಲ್ಲಿಯೂ, ನಾಶಹೊಂದಿದಾಗಲೂ, ಮತ್ತು ಉತ್ಪನ್ನವಾದ ಕಾಲದಲ್ಲಿಯೂ (ಜನನವಾದಾಗಲೂ) ನೀವೇಕೆ ಹೀಗೆ ವ್ಯರ್ಥವಾಗಿ, ಹರ್ಷ, ಕ್ರೋಧ ವಿಷಾದ (ದುಃಖ) ಮುಂತಾದ ವಿಕಾರಗಳಿಗೆ ಸಿಕ್ಕಿ ಪರವಶರಾಗಿ ನರಳುವಿರಿ ?

೧೧. ಲೋಕದಲ್ಲಿ ಕಾಮಾಂಧರಾದ ಪುರುಷಾಧಮರು ವ್ಯಾಮೋಹದಿಂದಲೂ ಅನುರಾಗದಿಂದಲೂ ಮರುಳಾಗಿ, ವಿಷಯಗಳಲ್ಲಿ (ಪ್ರಾಪಂಚಿಕ ಸುಖಗಳಲ್ಲಿ) ದೀಪದ ಹುಳುವು (ಪತಂಗವು) ದೀಪ ಜ್ವಾಲೆಯಮೇಲೆ ಎರಗುವಂತೆ, ಬಿದ್ದು ಹಾಳಾಗುತ್ತಿರುವರು. ಹೀಗೆಲ್ಲಾ ತೋರುವ ಅವರ ಈಬಗೆಯಾದ ಚೇಷ್ಟೆಗಳಿಗೆಲ್ಲಾ ಕಾರಣವಾಗಿರುವ ಅಸಾಧಾರಣವಾದ ಆ ಅತಿಶಯವು ಸ್ತ್ರೀಯೆಂಬ ಹೆಸರಿನಿಂದಾಗಲಿ ಅಥವಾ ಬೇರೊಂದು ಹೆಸರಿನಿಂದಾಗಲಿ, ಕರೆಯಲ್ಪಡುವ ಅತಿತುಚ್ಛವಾದ ಈ ಪಾಂಚಭೌತಿಕ ದೇಹದಲ್ಲಿ ಯಾವುದು ತಾನೇ ಇರುವುದು ? ಸ್ತ್ರೀ ದೇಹವೂ ಪುರುಷದೇಹವೂ, ಇವೆರಡೂ ಒಂದೇ ಪಂಚಭೂತಗಳಿಂದ ರಚಿತವಾದುವು. [ಹೀಗಿರುವಕಾರಣ, ಅವೆರಡಕ್ಕೂ ವಿಶೇಷವಾದ ಅತಿಶಯವು ಯಾವುದೂ ಇಲ್ಲ. ಅತಿಶಯವೇ ಇಲ್ಲದಮೇಲೆ

ಸಂನಿವೇಶಾಂಶ ವೈಚಿತ್ರ್ಯಮಜ್ಞಾನಾಮೇವ ತುಷ್ಟಯೇ ।
ತತ್ಜ್ಞಾನಾಂ ತು ಯಥಾಭೂತಭೂತ ಪಂಚಕ ದರ್ಶನಂ ॥ ೧೨ ॥

ಮಿಥಃ ಶಿಲಾಪುತ್ರಕಯೋರ್ಯಥೈಕೋ ಪಲಪುತ್ರಯೋಃ ।
ಶ್ಲಿಷ್ಟಯೋರಪಿ ನೋ ರಾಗಸ್ತಥಾ ಚಿತ್ತಶರೀರಯೋಃ ॥ ೧೩ ॥

ಅವರು ಹೀಗೆ ವಿಷಯ ಸುಖಗಳಲ್ಲಿ ಬಿದ್ದು ಹಾಳಾಗುವುದಕ್ಕೆ ಕಾರಣವೇನಿರಬಹುದು? ಅವರ ಮೌಢ್ಯವೆಷ್ಟೆಂದು ಹೇಳೋಣ.]

೧೨. ಕೋಮಲವೂ ಸುಂದರವೂ ಆದ ಅವಯವಗಳು ಎಲ್ಲ ಒಂದು ಕಡೆ ಒಟ್ಟಿಗೆ ಸೇರಿಕೊಂಡು ಅತಿ ವಿಚಿತ್ರವಾಗಿ ಲಾವಣ್ಯವನ್ನು ಬೀರುತ್ತಿರುವುದೇ, ಒಂದು ಅತಿಶಯವೆಂದು ಹೇಳೋಣವೆಂದರೆ ಅದೂ ಯುಕ್ತವಲ್ಲ. ಏಕೆಂದರೆ, ಅವುಗಳ ಯಥಾರ್ಥವಾದ ಕಲ್ಪನೆಯನ್ನು ಮತ್ತು ಸ್ವರೂಪವನ್ನು ಪರ್ಯಾಲೋಚಿಸದೆ ಅತ್ಯಂತ ಮೂಢರಾದ ಜನಗಳು ಮಾತ್ರವೆ ಅದರಿಂದ ಸಂತೋಷಪಡುವರು. ಆ ಅವಯುವ ಸನ್ನಿವೇಶದ ಸ್ವರೂಪವನ್ನು ಚೆನ್ನಾಗಿ ವಿಮರ್ಶೆಮಾಡಿ ತಿಳಿದಿರುವ ಜ್ಞಾನಿಗಳಿಗಾದರೋ ಅದೆಲ್ಲ ಯಥಾಸ್ಥಿತವಾದ ಆಕಾಶಾದಿ ಪಂಚಭೂತಮಯವಾಗಿಯೇ ತೋರುವುದು. ಪಂಚಭೂತವ್ಯತಿರಿಕ್ತವಾಗಿ ಬೇರೆಯಾವುದೊಂದೂ ಕಾಣುವುದಿಲ್ಲ. ಅದುಕಾರಣ ಅತ್ಯಂತ ಜುಗುಪ್ಸೆಗೆ ಕಾರಣವಾಗಿರುವುದು.

[ನಾರೀಸ್ತನಭರ ನಾಭೀದೇಶಂ । ದೃಷ್ಟ್ವಾ ಮಾಗಾ ಮೋಹಾವೇಶಂ ॥ ಏತನ್ಮಾಂಸವಸಾದಿ ವಿಕಾರಂ । ಮನಸಿ ವಿಚಿಂತಯ ವಾರಂ ವಾರಂ ॥ ಎಂದು ಶ್ರೀ ಮಚ್ಛಂಕರ ಭಗವತ್ಪೂಜ್ಯ ಪಾದಾಚಾರ್ಯರವರು ದ್ವಾದಶಮಂಜರೀ ಸ್ತೋತ್ರದಲ್ಲಿ ಮುಕ್ತಕಂಠದಿಂದ ಹೇಳಿರುವರು.]

೧೩. ಒಂದೇ ಬಂಡೆಯಲ್ಲಿ ಕೆತ್ತಿದ ಎರಡು ಕಲ್ಲು ಬೊಂಬೆಗಳು, ಎರಡು ಹುಲ್ಲಿನ ಬೊಂಬೆಗಳು ಒಂದನ್ನೊಂದು ಆಲಿಂಗನೆ ಮಾಡಿಕೊಂಡರೂ ಅವವಕ್ಕೆ ಅನ್ಯೋನ್ಯವಾಗಿ ಹೇಗೆ ಅನುರಾಗವು ಉದಯಿಸುವುದೇ ಇಲ್ಲವೋ, ಹಾಗೆಯೇ ಚಿತ್ತ ಶರೀರಗಳೆರಡೂ ಒಟ್ಟಿಗೇ ಕಲೆತಿದ್ದರೂ ಅನ್ಯೋನ್ಯ ಅನುರಾಗವು ಉದಯಿಸುವುದಿಲ್ಲ.

ಮೃತ್ಪಿಂಸಾಂ ಯಾದೃಶೋಽನ್ಯೋನ್ಯಮಾಶಯಃ ಸಂಗಮೇ ಭವೇತ್ ।
ಬುದ್ಧೀಂದ್ರಿಯಾತ್ಮಮನಸಾಂ ಸಂಗಮೇ ತಾದೃಶೋಽಸ್ತು ತೇ ॥ ೧೪ ॥

ನಾನ್ಯೋನ್ಯ ಸ್ನೇಹಸಂಬಂಧ ಭಾಜನಂ ಶೈಲಪುತ್ರಕಾಃ ।
ದೇಹೇಂದ್ರಿಯಾತ್ಮ ಪ್ರಾಣಾಶ್ಚ ಕಸ್ಯಾತ್ರ ಪರಿದೇವನಾ ॥ ೧೫ ॥

ಇತಶ್ಚೇತಶ್ಚ ಜಾತಾನಿ ಯಥಾ ಸಂಶ್ಲೇಷಯಂತ್ಯಲಂ ।
ತರಂಗಾಸ್ತೃಣಜಾಲಾನಿ ತಥಾ ಭೂತಾನಿ ದೇಹದೃಕ್ ॥ ೧೬ ॥

---

೧೪. ಮಣ್ಣಿನಿಂದ ನಿರ್ಮಿತಗಳಾದ ಅನೇಕ ಗಂಡು ಪ್ರತಿಮೆಗಳು ಪರಸ್ಪರ ಒಟ್ಟಿಗೆ ಕೂಡಿಕೊಂಡರೂ ಕೂಡ ಅವುಗಳ ಭಾವವು (ಆಶಯವು) ಎಂತಹ ಮಮತಾದಿ ಶೂನ್ಯವಾಗಿರುವುದೋ, ಅಯ್ಯಾ ರಾಮ, ನಿನ್ನ ಭಾವವೂ, ನಿನ್ನ ಬುದ್ಧಿ, ಇಂದ್ರಿಯ, ಆತ್ಮ, ಮನಸ್ಸುಗಳು ಒಟ್ಟಿಗೆ ಕೂಡಿದಾಗಲೂ ಹಾಗೆಯೇ ಇದ್ದುಕೊಂಡಿರಲಿ.

೧೫. ಕಲ್ಲಿನಿಂದ ರಚಿತವಾದ ಶಿಲಾ ವಿಗ್ರಹಗಳು ಪರಸ್ಪರ ಕೂಡಿಕೊಂಡಿರುವಾಗ ಅನ್ಯೋನ್ಯಾನುರಾಗ ರೂಪ ಸಂಬಂಧವನ್ನು ಪಡೆಯುವ ಯೋಗ್ಯತೆಯಿಲ್ಲದವುಗಳಾಗಿರುವಂತೆ ದೇಹ, ಇಂದ್ರಿಯ, ಆತ್ಮ, ಪ್ರಾಣಗಳೂ ಕೂಡ ಒಟ್ಟಿಗೆ ಕೂಡಿಕೊಂಡಿರುವಾಗ ಅನ್ಯೋನ್ಯ ಸ್ನೇಹ ಸಂಬಂಧಕ್ಕೆ ಯೋಗ್ಯತೆಯನ್ನು ಪಡೆದಿಲ್ಲ. ಹೀಗೆ ಸಂಯುಕ್ತಗಳಾಗಿರುವಾಗಲೂ ಅನ್ಯೋನ್ಯಾನುರಾಗಶೂನ್ಯವಾಗಿರುವಂತೆಯೇ, ವಿಯುಕ್ತಗಳಾದಾಗಲೂ, (ಪರಸ್ಪರ ಅಗಲಿರುವಾಗಲೂ) ಅನ್ಯೋನ್ಯ ದುಃಖ ಸಂತಾಪಗಳ ಸಂಬಂಧವೂ ಇಲ್ಲದವುಗಳೇ ಆಗಿವೆ. ಹೀಗಿರುವಾಗ, ಇವು ಒಂದಕ್ಕೊಂದು ಅಗಲಿದ ಕಾಲದಲ್ಲಿ, ಯಾರು ಯಾವುದಕ್ಕಾಗಿ ಅಳಬೇಕಾಗಿರುವುದು ?

೧೬. ಎಲ್ಲೆಲ್ಲಿಯೋ ನಾನಾ ವಿಭಿನ್ನ ಪ್ರದೇಶಗಳಲ್ಲಿ ಹುಟ್ಟಿ ಬಿದ್ದುಕೊಂಡಿರುವ ಹುಲ್ಲು ಕಡ್ಡಿಗಳ ಸಮೂಹಗಳನ್ನು, ಸಮುದ್ರದಲ್ಲಿನ ಅಲೆಗಳು ಸಂಪೂರ್ಣವಾಗಿ ಒಟ್ಟುಗೂಡಿಸುವಂತೆ ದೇಹವನ್ನು ಸಾಕ್ಷಿಯಾಗಿ ನೋಡುತ್ತಿರುವ ಆತ್ಮನು ಎಲ್ಲೆಲ್ಲಿಯೋ ಬೇರೆ ಬೇರೆ ಪೃಥಕ್ಕಾಗಿರುವ ಭೂತಗಳನ್ನು ಒಟ್ಟುಗೂಡಿಸುವನು.

ಸಂಯುಜ್ಯಂತೇ ವಿಯುಜ್ಯಂತೇ ತೃಣಾನ್ಯಬ್ಧಿಜಲೇ ಯಥಾ ।
ಮುಕ್ತಾಂತಃಕಲನಂ ದೇಹೇ ಭೂತಾನ್ಯಾತ್ಮನಿ ವೈ ತಥಾ ॥ ೧೭ ॥

ಆತ್ಮಾ ಚಿತ್ತತಯಾ ದೇಹಭೂತಾನ್ಯಾಶ್ಲೇಷಯನ್ಸ್ಥಿತಃ ।
ತೃಣಾನ್ಯಾವೃತ್ತ ವೃತ್ತಾಂತಕಲನೋಽತ್ಸಿಕ್ತವಬ್ಧಿವತ್ ॥ ೧೮ ॥

ಪ್ರಬೋಧಾಚ್ಛೇತ್ಯತಾಂ ತ್ಯಕ್ತ್ವಾ ವ್ರಜತ್ಯಾತ್ಮಾತ್ಮತಾಂ ಸ್ವಯಂ ।
ಸ್ವಸ್ಪಂದವಶತೋ ವಾರಿ ತ್ಯಕ್ತ್ವಾನಚ್ಛತ್ವಮಚ್ಛತಾಂ ॥ ೧೯ ॥

---

೧೭. ಸಮುದ್ರದೊಳಗೆ ನೀರಿನಲ್ಲಿ ತೃಣಗಳು ಎಲ್ಲಿಂದಲೋ ಕೊಚ್ಚಿಕೊಂಡು ಬಂದು ರಾಗದ್ವೇಷಾದ್ಯಭಿಮಾನಗಳೊಂದೂ ಇಲ್ಲದವುಗಳಾಗಿಯೇ ಹೇಗೆ ಆಕಸ್ಮಿಕವಾಗಿ ಒಟ್ಟಿಗೆ ಕಲೆಯುವುವೋ ಮತ್ತು ಕೂಡಲೇ ಬೇರೆಬೇರೆಯಾಗಿ ಬಿಡುವುವೋ ಹಾಗೆಯೇ ಆಕಾಶಾದಿ ಪಂಚ ಮಹಾಭೂತಗಳು ದೇಹದಲ್ಲಿಯೂ, ಪತ್ನೀಪುತ್ರ ಪಶ್ವಾದಿ ಪ್ರಾಣಿಗಳು ಆತ್ಮನಲ್ಲಿಯೂ ಒಟ್ಟಿಗೆ ಕಲೆತು ಸೇರಿರುವುವು. ಮತ್ತೆ ಸ್ವಲ್ಪ ಕಾಲದೊಳಗಾಗಿ ಆಕಸ್ಮಿಕವಾಗಿ ವಿಯುಕ್ತಗಳಾಗಿ ಬೇರೆ ಬೇರೆಯಾಗಿ ಬಿಡುವುವು. ಹೀಗೆ ಸಂಯುಕ್ತಗಳಾದಾಗಲೂ, ವಿಯುಕ್ತಗಳಾದಾಗಲೂ ಕೂಡ ಹರ್ಷ ವಿಷಾದ ಮೊದಲಾದ ಅಭಿಮಾನ ಶೂನ್ಯಗಳಾಗಿಯೇ ಇರುವುವು.

[ಯಥಾ ಕಾಷ್ಠಂಚ ಕಾಷ್ಠಂಚ ಸಮೇಯಾತಾಂ ಮಹೋದಧೌ । ಸಮೇತ್ಯಚ ವ್ಯಪೇಯಾತಾಂ ತದ್ವತ್ ಭೂತ ಸಮಾಗಮಃ ॥ ಎಂಬ ಅಭಿಯುಕ್ತೋಕ್ತಿಯನ್ನು ಸ್ಮರಿಸಿರಿ.]

೧೮. ಸಮುದ್ರವು ಸುಳಿಗಳ (ಆವರ್ತಗಳ) ಆಕಾರಗಳನ್ನು ಕಲ್ಪಿಸಿಕೊಳ್ಳುವುದರಿಂದ ವೃದ್ಧಿ ಹೊಂದಿದ ವೇಷವನ್ನು ಧರಿಸಿ ಹೇಗೆ ಹುಲ್ಲು ಕಡ್ಡಿ ಮುಂತಾದವುಗಳನ್ನು ಒಟ್ಟುಗೂಡಿಸುತ್ತಾ ಇರುವುದೋ ಹಾಗೆಯೇ ಆತ್ಮನೂ ಚಿತ್ತಾಕಾರವಾದ ವೇಷವನ್ನು ಹಾಕಿಕೊಂಡು ದೇಹಪ್ರಕೃತಿಗಳಾದ ಆಕಾಶಾದಿ ಪಂಚ ಭೂತಗಳನ್ನು ಒಟ್ಟಿಗೆ ಕಲೆ ಹಾಕುತ್ತಿರುವನು.

೧೯. ಕಾಲುಷ್ಯಯುಕ್ತವಾಗಿರುವ ಜಲವು ತನ್ನಲ್ಲಿ ಉಂಟಾದ ಚಲನೆಯ ವಶದಿಂದಲೇ ಕಾಲಾಂತರದಲ್ಲಿ ತನ್ನೊಳಗಿರುವ ಕಾಲುಷ್ಯವನ್ನು ಕಳೆದುಕೊಂಡು ನೈರ್ಮಲ್ಯವನ್ನು ಪಡೆಯುವಂತೆ ಆತ್ಮನೂ ದೃಢವಾದ ಸ್ವಾತ್ಮತತ್ತ್ವಜ್ಞಾನವಶದಿಂದ

ತತೋ ವಿಶ್ಲಿಷ್ಟಭೂತೌಘೋ ದೇಹಂ ಸಂಪ್ರತಿ ಪಶ್ಯತಿ ।
ವಾಯುಸ್ಕಂಧಗತೋ ಜಂತುರ್ವಸುಧಾ ಮಂಡಲಂ ಯಥಾ ॥ ೨೦ ॥

ಪೃಥಗ್ಭೂತಗಣಂ ದೃಷ್ಟ್ವಾ ದೇಹಾತೀತೋ ಭವತ್ಯಜಃ ।
ಪರಂ ಪ್ರಕಾಶಮಾಯಾತಿ ಸೂರ್ಯಕಾಂತಿರಿವಾಹನಿ ॥ ೨೧ ॥

ಚೇತ್ಯ ಭಾವವನ್ನು ಪರಿತ್ಯಾಗ ಮಾಡಿ, ತಾನಾಗಿಯೇ (ಸ್ವತ ಏವ) ಸ್ವೀಯ ಆತ್ಮ ಭಾವವನ್ನು ಪಡೆಯುವನು. [ಆತ್ಮನು ಅಜ್ಞಾನ ದೆಸೆಯಲ್ಲಿ ಚಿತ್ತರೂಪವನ್ನು ಧರಿಸಿ ಚೇತ್ಯ (ಚಿತ್ತದಿಂದ ತಿಳಿಯಲ್ಪಡುವ ದೃಶ್ಯ) ಭಾವದಿಂದ ಕಾಣುವನು. ಸ್ವಾತ್ಮತತ್ತ್ವಜ್ಞಾನವುಂಟಾದ ಕೂಡಲೆ, ಅಸ್ವಾಭಾವಿಕವಾದ (ಕಲ್ಪಿತವಾದ) ಚೇತ್ಯ ಭಾವವು ಕಳೆದು ಹೋಗಿ, ಸ್ವೀಯ ಆತ್ಮತ್ವವು ಸ್ವತಏವ ಆವಿರ್ಭವಿಸುವುದು. ಎಂದರ್ಥ.]

೨೦. ಅನಂತರ, ವಾಯು ಮಂಡಲದಲ್ಲಿ ಗಗನಚಾರಿಗಳಾದ ದೇವಾದಿ ಸಿದ್ಧ ಪುರುಷರು ಭೂಮಂಡಲವನ್ನು ಮೇಲಿನಿಂದ ಬಹು ದೂರದಲ್ಲಿದ್ದು ನೋಡವಂತೆ, ಪ್ರಬೋಧ ಕಾಲದಲ್ಲಿ ಆತ್ಮನು ಮಾನಸಿಕವಾದ ಪಂಚಭೂತ ಸಂಸರ್ಗದಿಂದ ವಿನಿರ್ಮುಕ್ತನಾಗಿ ದೇಹವನ್ನು ಬಹು ದೂರದಿಂದ ನೋಡುವನು.

೨೧. ಬಳಿಕ, ಆತ್ಮನು ಪಂಚ ಭೂತಗಳ ಸಮುದಾಯವು ತನಗೆ ಸ್ವಲ್ಪವೂ ಸಂಬಂಧ ಪಡೆಯದೆ ಪ್ರತ್ಯೇಕವಾಗಿರುವುದನ್ನು ಕಾಣುತ್ತಾ, ದೇಹಾತೀತನಾಗಿ ಬಿಡುವನು. (ದೇಹದಲ್ಲಿ ಅಜ್ಞಾನ ವಶದಿಂದ ಅಧ್ಯಸ್ತವಾದ ಆತ್ಮ ಬುದ್ಧಿಯು ಆತ್ಮತತ್ತ್ವಜ್ಞಾನ ಬಲದಿಂದ ತೊಲಗಿ ಹೋಗುವ ಕಾರಣ ತಾನು ವಸ್ತುತಃ ದೇಹಾತೀತನು. ದೇಹ ಸಂಬಂಧವನ್ನು ಪಡೆಯದೆ ಪೃಥಕ್ಕಾಗಿರುವವನು ಎಂಬ ಬುದ್ಧಿಯನ್ನು ಮಾಡುವನು.) ಹೀಗೆ ದೇಹ ಸಂಬಂಧವೇ ಇಲ್ಲವಾಗಿ ದೇಹಾತೀತನಾಗಿ ಬಿಟ್ಟ ಕಾರಣ, ದೇಹ ಸಂಬಂಧಗಳಾದ ಜನನ ಮರಣ ರೂಪ ದೇಹ ಧರ್ಮಗಳೂ ಇಲ್ಲವಾಗಿ ಅಜನು (ಜನ್ಮರಹಿತನು) ಆಗುವನು. ಆಗ ಮೇಘಾವರಣವಿಲ್ಲದ ಆಕಾಶದಲ್ಲಿ ಬೆಳಗುವ ಸೂರ್ಯನ ಕಾಂತಿಯು ಮಧ್ಯಾಹ್ನದ ಹೊತ್ತಿನಲ್ಲಿ ಬಹು ವಿಶೇಷವಾಗಿ (ಅನಾವೃತ) ಪ್ರಕಾಶಿಸುವಂತೆ, ಆತ್ಮನು ಚಿದ್ರೂಪನಾಗಿ ಸ್ವತಃ ಪ್ರಕಾಶಮಾನನಾದ ಕಾರಣ, ಅಜ್ಞಾನಕಾಲಿಕವಾದ ಜಡ ಭಾವವನ್ನು ಬಿಟ್ಟು, ಸ್ವಾಭಾವಿಕವಾದ ನಿರತಿಶಯ ಜ್ಯೋತೀರೂಪ ಪರಮ ಪ್ರಕಾಶನಾಗಿ ವಿರಾಜಿಸುವನು.

ಜಾನಾತ್ಯಥಾತ್ಮನಾತ್ಮಾನಂ ಮಾನಮೇಯಾಮಯೋಜ್ಝಿತಂ ।
ಮುಕ್ತಕ್ಷೀಬತಯೇವಾಂತಃ ಸ್ವಾಂ ಸಂವಿದಮನುಸ್ಮರನ್ ॥ ೨೨ ॥

ಆತ್ಮೈವ ಸ್ಪಂದತೇ ವಿಶ್ವಂ ವಸ್ತುಜಾತೈರಿವೋದಿತಂ ।
ತರಂಗಕಣಕಲ್ಲೋಲೈರನಂತಾಂಬ್ವಂಬುಧಾವಿವ ॥ ೨೩ ॥

ಏವಂಪ್ರಾಯಮಹಾಬೋಧಾ ವೀತರಾಗಾ ಗತೈನಸಃ ।
ಜೀವನ್ಮುಕ್ತಾಶ್ಚರಂತೀಹ ಮಹಾಸತ್ವಪದಂ ಗತಾಃ ॥ ೨೪ ॥

---

೨೨. ಅನಂತರ, ಮದ್ಯಪಾನವನ್ನು ಮಾಡಿ ಉನ್ಮತ್ತಚಿತ್ತನಾಗಿದ್ದ ಮನುಷ್ಯನು ಕಾಲಕ್ರಮದಲ್ಲಿ ಅಮಲು ಇಳಿದು ಹೋಗಲು, ಮದ್ಯಪಾನಜನ್ಯವಾಗಿದ್ದ ಮದವೆಲ್ಲವನ್ನೂ ಕಳೆದುಕೊಂಡವನಾಗಿ ತನ್ನ ನಿಜವಾದ ಸ್ವರೂಪವನ್ನು ತಾನು ಮನಸ್ಸಿನಲ್ಲಿ ಸ್ಮರಿಸಿಕೊಳ್ಳುವಂತೆ, ಆತ್ಮನು ಪೂರ್ವದಲ್ಲಿ ತನಗೆ ಅಜ್ಞಾನದಿಂದ ಉಂಟಾಗಿದ್ದ ಪ್ರಮಾಣ, ಪ್ರಮೇಯ ಮುಂತಾದ ಭೇದಗಳೆಂಬ ದುಃಖಗಳನ್ನು ಕಳೆದುಕೊಂಡವನಾಗಿ ಸ್ವಕೀಯವಾದ ಚಿದ್ರೂಪವನ್ನು ಸ್ಮರಿಸಿಕೊಂಡು ನಿರುಪದ್ರವವೂ, ನಿರ್ವಿಕಲ್ಪವೂ ಆದ ಅಸಂಸಾರ್ಯಾತ್ಮತತ್ತ್ವವನ್ನು (ಸ್ವಸ್ವರೂಪವನ್ನು) ಸಾಕ್ಷಾತ್ಕರಿಸಿ ಪಡೆಯುವನು.

೨೩. ಸಮುದ್ರದಲ್ಲಿರುವ ಅಪಾರವಾದ ಜಲವೇ ಅಲೆಗಳು, ಬಿಂದುಗಳು, ದೊಡ್ಡ ಅಲೆಗಳು ಮುಂತಾದ ನಾನಾ ರೂಪಗಳಾಗಿ ಚಲಿಸುತ್ತಿರುವಂತೆ, ಈ ಆತ್ಮನೇ ಅನೇಕ ವಿಧಗಳಾದ ವಸ್ತು ಸಮೂಹಗಳನ್ನೊಳಗೊಂಡು ಅತಿ ವಿಸ್ತಾರವಾಗಿ ಆವಿರ್ಭವಿಸಿರುವಂತೆ ತೋರುವ ಈ ಜಗದ್ರೂಪವಾಗಿ ಚಲಿಸುತ್ತಿರುವನು. [ಮೂಲ ಶ್ಲೋಕದಲ್ಲಿ ಇವೋದಿತಂ ಎಂಬಲ್ಲಿ ಇವ ಎಂಬ ಅವ್ಯಯವನ್ನು ಪ್ರಯೋಗಿಸಿರುವುದರಿಂದ ಪ್ರಪಂಚವು ನಾನಾ ವಸ್ತು ಸಮುದಾಯಗಳನ್ನೊಳಗೊಂಡು ಉದಯಿಸಿರುವುದು ಅತ್ಯಂತ ಮಿಥ್ಯಾಭೂತವಾದುದು ಮತ್ತು ಅಜ್ಞಾನ ವಿಜೃಂಭಿತವು. ವಾಸ್ತವವಲ್ಲ ಎಂಬರ್ಥವು ಸೂಚಿತವಾಗಿದೆ.]

೨೪. ಈ ಪ್ರಕಾರವಾದ ಸಂಶಯ ವಿಪರ್ಯಾಸಾದಿ ದೋಷರಹಿತವಾದ ಪಾರಮಾರ್ಥಿಕ ಆತ್ಮತತ್ತ್ವಜ್ಞಾನವನ್ನು ಪಡೆದವರಾಗಿಯೂ, ಸರ್ವತ್ರ ಮಮತಾರೂಪ ರಾಗಶೂನ್ಯರಾಗಿಯೂ (ವಿರಕ್ತರಾಗಿಯೂ) ಸಕಲ ಪಾಪ ವಿನಿರ್ಮುಕ್ತರಾಗಿಯೂ ಕೇವಲ ಸತ್ತ್ವ ಪ್ರಧಾನವಾದ ಪರಮ ಪದವನ್ನು ಸಂಪಾದಿಸಿ

ಯಥಾ ಚರಂತಿ ವಿವಿಧೈರ್ಮಣಿರತ್ನೈರ್ಮಹೋರ್ಮಯಃ ।
ನಿರಸ್ತವಾಸನಾಶ್ಚಿತ್ತವ್ಯವಹಾರೈಸ್ತಥೋತ್ತಮಾಃ ॥೨೫ ॥

ನ ಕೂಲಕಾಷ್ಠೈರ್ಜಲಧಿರ್ನ ರಜೋಭಿರ್ನಭಸ್ತಲಂ ।
ನ ಮ್ಲಾಯತಿ ನಿಜೈರ್ಲೋಕವ್ಯವಹಾರೈರಿಹಾತ್ಮನಾಂ ॥ ೨೬ ॥

ಗತೈರಭ್ಯಾಗತೈಃ ಸ್ವಚ್ಛೈ ಶ್ಚಪಲೈರ್ಮಲಿನೈರ್ಜಡೈಃ ।
ನ ರಾಗೋ ನಾಂಬುಧೇರ್ದ್ವೇಷೋ ಭೋಗೈಶ್ಚಾಧಿಗತಾತ್ಮನಃ ॥ ೨೭ ॥

ಸ್ವಸ್ಥರಾಗಿರುವ ಮಹಾತ್ಮರು ಈ ಜಗತ್ತಿನಲ್ಲಿ ಜೀವನ್ಮುಕ್ತರಾಗಿ ಸಂಚರಿಸುತ್ತಿರುವರು.

೨೫. ರತ್ನಾಕರವೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಸಮುದ್ರದ ದೊಡ್ಡ ಅಲೆಗಳು, (ತರಂಗಗಳು) ಅನೇಕ ವಿಧ ಶ್ರೇಷ್ಠವಾದ ದಿವ್ಯ ರತ್ನಗಳೊಡನೆ ಸಂಬಂಧ ಪಡೆದಿದ್ದರೂ ಕೂಡ ಆ ರತ್ನಗಳಲ್ಲಿ ಆಸಕ್ತಿಯನ್ನಿಡದವುಗಳಾಗಿಯೇ, (ಆ ರತ್ನಗಳನ್ನು ಸಾಧಾರಣವಾದ ಕಲ್ಲು ಚೂರುಗಳಿಗೆ ಸಮನಾಗಿ ಕಾಣುತ್ತಾ) ಹೇಗೆ ವ್ಯವಹರಿಸುವುವೋ, ಹಾಗೆ ಉತ್ತಮ ಜ್ಞಾನ ಸಂಪನ್ನರಾದ ಮಹಾತ್ಮರು ಬಗೆಬಗೆಯಾದ ಚಿತ್ತ ವ್ಯವಹಾರಗಳೊಡನೆ ಸಂಬಂಧಪಡೆದಿದ್ದರೂ ಕೂಡ, ಅವುಗಳಲ್ಲಿ ಅನಾಸಕ್ತರಾಗಿ ವಾಸನಾಶೂನ್ಯರಾಗಿಯೇ ವ್ಯವಹರಿಸಿಕೊಂಡಿರುವರು.

೨೬. ದಡದ ಮೇಲೆ ಎಷ್ಟೋ ಹೆಚ್ಚಾಗಿ ಕಸ ಕಡ್ಡಿ ಮುಂತಾದ ಮಲಿನ ವಸ್ತುಗಳು ಬಿದ್ದಿದ್ದರೂ, ಅವುಗಳಿಂದ ಸಮುದ್ರವು ಹೇಗೆ ಕಳಂಕಿತವಾಗದೆ ಶುದ್ಧವಾಗಿರುವುದೋ ಮತ್ತು ಆಕಾಶದಲ್ಲಿ ಎಷ್ಟೋ ಹೆಚ್ಚಾಗಿ ಧೂಳೀಪಟಲವು ತುಂಬಿಕೊಂಡಿದ್ದರೂ, ಆಕಾಶವು ಹೇಗೆ ಆ ಧೂಳಿಯಿಂದ ಮಾಲಿನ್ಯವನ್ನು ಹೊಂದದೆ ನಿರ್ಲಿಪ್ತವಾಗಿರುವುದೋ ಹಾಗೆಯೇ ಈ ಜಗತ್ತಿನಲ್ಲಿ ಆತ್ಮಜ್ಞಾನನಿಷ್ಠನು ಎಷ್ಟೋ ವಿಧದಲ್ಲಿ ನಾನಾ ಲೌಕಿಕ ವ್ಯವಹಾರಗಳನ್ನು ನಡೆಯಿಸುತ್ತಿದ್ದರೂ ಕೂಡ ಆ ವ್ಯವಹಾರಗಳಿಂದ ಸ್ವಲ್ಪವೂ ಕಂಗೆಡದೆ ನಿರ್ಲಿಪ್ತನಾಗಿರುವನು.

೨೭. ಸಮುದ್ರದಲ್ಲಿ ಸ್ವಚ್ಛವಾಗಿಯೂ ಅಥವಾ ಮಲಿನವಾಗಿಯೂ ಇರುವ ಅತ್ಯಂತ ಚಂಚಲವಾದ ನೀರುಗಳು ಸರ್ವದಾ ಹೋಗುತ್ತಲೂ, ಬರುತ್ತಲೂ ಇದ್ದಾಗ್ಯೂ ಕೂಡ ಆ ಸಮುದ್ರವು ನಿರ್ಮಲವಾದ ನೀರು ಬಂದಾಗ ರಾಗವನ್ನೂ,

ಯನ್ಮನೋ ಮನನಂ ಕಿಂಚಿತ್ಸಮಗ್ರಂ ಜಗತಿ ಸ್ಥಿತಂ ।
ತಜ್ಜ್ಞೇತ್ಯೋನ್ಮುಖಚಿತ್ತತ್ವವಿಲಾಸೋಲ್ಲಸನಂ ವಿದುಃ ॥ ೨೮॥

ಯದಹಂ ಯಚ್ಚ ಭೂತಾದಿ ಕಾಲತ್ರಿತಯಭಾವಿ ಯತ್ ।
ದೃಶ್ಯದರ್ಶನ ಸಂಬಂಧ ವಿಸ್ತಾರೈಸ್ತದ್ವಿಜೃಂಭತೇ ॥ ೨೯ ॥

ಮಲಿನವಾದ ನೀರು ಬಂದಾಗ ದ್ವೇಷವನ್ನೂ ಪಡೆಯದೆ ಅಚಲ ಪ್ರತಿಷ್ಠವಾಗಿ (ನಿರ್ವಿಕಾರವಾಗಿ) ಪ್ರಶಾಂತವಾಗಿರುವಂತೆ ಆತ್ಮಜ್ಞಾನ ಸಂಪನ್ನನಾದ ಮಹಾನುಭಾವನು ಸ್ವಚ್ಛಗಳೂ (ಶುಭ) ಚಂಚಲಗಳೂ (ಕ್ಷಣಿಕ) ಮಲಿನಗಳೂ (ಅಶುಭ) ಜಡಗಳೂ ಆದ ವಿವಿಧ ಪ್ರಾಪಂಚಿಕ ಭೋಗಗಳು (ಐಹಿಕಾ ಮುಷ್ಮಿಕಗಳೆಂಬ ಎರಡು ವಿಧ) ಅನೇಕಾನೇಕವಾಗಿ ಬರುತ್ತಲೂ, ಹೋಗುತ್ತಲೂ ಇದ್ದಾಗ್ಯೂ ಕೂಡ, ಇಷ್ಟ ಭೋಗ ಪ್ರಾಪ್ತಿ ಮತ್ತು ಅನಿಷ್ಟ ನಿವೃತ್ತಿ ಕಾಲದಲ್ಲಿ ರಾಗವನ್ನೂ ಇಷ್ಟಾಪ್ರಾಪ್ತಿ ಮತ್ತು ಅನಿಷ್ಟ ಪ್ರಾಪ್ತಿ ಕಾಲದಲ್ಲಿ ದ್ವೇಷವನ್ನೂ ಮಾಡದೆ ಸರ್ವದಾ ನಿರ್ವಿಕಾರನಾಗಿ ಪ್ರಶಾಂತನಾಗಿರುವನು.

೨೮. ಈ ಜಗತ್ತಿನಲ್ಲಿ ಮನಸ್ಸಿನ ಮನನಾತ್ಮಕವಾದ ಮನೋ ವ್ಯಾಪಾರವು ಯಾವಯಾವುದು ಎಷ್ಟೆಷ್ಟು ಇರುವುದೋ ಅದು ಅದು ಎಲ್ಲವೂ ಸಮಗ್ರವಾಗಿ, ಚೇತ್ಯಾಭಿಮುಖವಾದ ಚೈತನ್ಯ ತತ್ತ್ವದ (ಚಿದ್ರೂಪ ಆತ್ಮನ) ವಿಲಾಸವೇ ಎಂಬುದಾಗಿ ಆತ್ಮನಿಷ್ಠರು ದೃಢವಾಗಿ ತಿಳಿದುಕೊಂಡಿರುವರು. ಅದು ಕಾರಣ ಜ್ಞಾನಿಗಳಿಗೆ ಪ್ರಾಪಂಚಿಕ ಭೋಗಗಳಲ್ಲಿ ರಾಗ ದ್ವೇಷಗಳು ಉದಯಿಸುವುದಿಲ್ಲ.

೨೯. ಈ ಪ್ರಪಂಚದಲ್ಲಿ ಅಹಂ (ನಾನು) ಎಂಬ ರೂಪದಿಂದ ತೋರುವ ಅಹಂಭಾವತತ್ತ್ವವೆಂಬುದೂ, ಈ ಪಂಚ ಭೂತಗಳು ಮೊದಲಾದುದೂ ಮತ್ತು ಭೂತ ಭವಿಷ್ಯತ್ ವರ್ತಮಾನಗಳೆಂಬ ಕಾಲತ್ರಯಗಳಲ್ಲಿ ಸಂಭವಿಸತಕ್ಕುದೂ ಆದುದು ಯಾವಯಾವುದಿರುವುದೋ, ಅದೆಲ್ಲವೂ ದೃಕ್ ದೃಶ್ಯಗಳ ಸಂಬಂಧ ವಿಸ್ತಾರಗಳಿಂದ ಮಾತ್ರವೇ ಪ್ರಕಾಶಿಸುವುವು. ಅದೆಲ್ಲವೂ ಕೇವಲ ಮನಸ್ಸೇ ಆರೀತಿ ವಿಜೃಂಭಿಸುತ್ತಿರುವುದೇ ಹೊರತು ಬೇರೆಯಾವುದೂ ಅಲ್ಲ.

ಯದ್ದೃಶ್ಯಂ ತದಸತ್ಸದ್ವಾ ದೃಷ್ಟಿಮೇಕಾಮುಪಾಶ್ರಿತಂ ।
ಅನ್ಯತ್ವಲೇಪಕಂ ತಸ್ಮಾದ್ಧರ್ಷಶೋಕದೃಶೌ ಕುತಃ ॥ ೩೦ ॥

ಅಸತ್ಯಮೇವಾಸತ್ಯಂ ಹಿ ಸತ್ಯಂ ಸತ್ಯಂ ಸದೇವ ಹಿ ।
ಸತ್ಯಾಸತ್ಯಮಸದ್ವಿದ್ಧಿ ತದರ್ಥಂ ಕಿಂ ನು ಮುಹ್ಯಸಿ ॥ ೩೧ ॥

---

೩೦. ದೃಕ್ ದೃಶ್ಯಗಳೆಂಬ ಈ ಎರಡರ ಮಧ್ಯದಲ್ಲಿ ಕೇವಲ ದೃಕ್ಕನ್ನೇ ಆಶ್ರಯಿಸಿಕೊಂಡಿರುವ (ಅಂದರೆ ದೃಕ್ಕಿಗೆ ಅಧೀನವಾಗಿ ಸತ್ತೆಯನ್ನು ಪಡೆದುಕೊಂಡು ಸಿದ್ಧಿ ಪಡೆದಿರುವ) ದೃಶ್ಯವೆಂಬುದು ಅಸತ್ಯವೋ ಅಥವಾ ಸತ್ಯವೋ ಎಂಬುದು ನಿರ್ಣಯವಾಗದೇ ಇರುವುದರಿಂದ ಸದಸದ್ವಿಲಕ್ಷಣವೆನ್ನಿಸಿರುವ ಆ ದೃಶ್ಯವು ಹರ್ಷ ಶೋಕಾದಿಗಳಿಗೆ ಯೋಗ್ಯವಾಗಿರುವುದಿಲ್ಲ. ಮತ್ತೊಂದಾದ ಸ್ವತಸ್ಸಿದ್ಧ ದೃಗ್ರೂಪವಾದರೋ ಅಸಂಗವಾದುದು (ನಿರ್ಲಿಪ್ತವು) ಅದು ಕಾರಣ, ಒಂದು ವೇಳೆ ಹರ್ಷಶೋಕಗಳು ಉತ್ಪನ್ನವಾದರೂ ಕೂಡ ಅವುಗಳ ಸಂಬಂಧವು ದೃಗ್ರೂಪನಾದ ಆತ್ಮನಿಗೆ ಸರ್ವಥಾ ಸಂಭವಿಸುವುದೇ ಇಲ್ಲ. ಹೀಗಿರುವುದರಿಂದ ಆ ಹರ್ಷ ಶೋಕಗಳ ಸಂಭಾವನೆಯೂ ಕೂಡ (ಪ್ರಸಕ್ತಿಯೂ) ಸರ್ವಥಾ ಇಲ್ಲವೇ ಇಲ್ಲ. (ಹರ್ಷ ಶೋಕಗಳ ದೃಷ್ಟಿಗಳು ಎಲ್ಲಿಂದ ಬರುವುವು ? (ಹೇಗೂ ಇಲ್ಲ.)

೩೧. ಮತ್ತೂ ಕೂಡ, ಅಸತ್ಯವಾದ ವಸ್ತುವಿನ ವಿಷಯದಲ್ಲಿಯಾಗಲೀ ಅಥವಾ ಸತ್ಯ ವಸ್ತುವಿನ ವಿಷಯದಲ್ಲಿಯಾಗಲೀ ಅಥವಾ ಸತ್ಯಾಸತ್ಯರೂಪ ವಿಷಯದಲ್ಲಿಯಾಗಲೀ ಹೀಗೆ ಈ ಮೂರು ಕಲ್ಪಗಳಲ್ಲಿಯೂ ಹರ್ಷ ಶೋಕಗಳ ಯೋಗ್ಯತೆಯು ಇಲ್ಲ. ಏಕೆಂದರೆ ಯಾವುದು ಗಗನ ಕುಸುಮಾದಿಗಳಂತೆ ಅತ್ಯಂತಾಪ್ರಸಿದ್ಧವಾದ ಅಸದ್ವಸ್ತುವೋ ಅದು ಕಾಲತ್ರಯದಲ್ಲಿಯೂ ಸರ್ವಥಾ ಅಸತ್ಯವಾದುದೇ ಸರಿ. ಅಸತ್ಯವಾದ ವಸ್ತುವಿನ ವಿಷಯದಲ್ಲಿ ಹರ್ಷ ಶೋಕಗಳು ನಿರ್ವಿಷಯವೆಂಬುದು ಸುಸ್ಪಷ್ಟವು. ಮತ್ತು ಯಾವುದು ಸತ್ಯವಾದುದೋ ಅದು ಕಾಲತ್ರಯಾ ಬಾಧಿತವಾದ ಪರಮಾರ್ಥಸತ್ತೇ ಸರ್ವದಾ ಆಗಿರುವುದು. ಅದು ನಿತ್ಯ ಸತ್ಯವೂ, ನಿತ್ಯಾಪ್ತವೂ ಆದುದು. ಅದು ಕಾರಣ ಅದರ ಲಾಭ ಪ್ರಯುಕ್ತವಾದ ಸಂತೋಷಕ್ಕಾಗಲಿ ಅಥವಾ ಸಿಗದಿರುವುದರಿಂದ ಶೋಕಕ್ಕಾಗಲಿ ಪ್ರಸಕ್ತಿ ಕೂಡ ಇಲ್ಲವು. ಒಂದೇ ವಸ್ತುವು ಸತ್ಯವಾಗಿಯೂ, ಅಸತ್ಯವಾಗಿಯೂ ಇರುವುದು ಸರ್ವಥಾ ಲೋಕದಲ್ಲಿ ಅಪ್ರಸಿದ್ಧವೂ, ಅಸಂಭವವೂ ಆದಕಾರಣ ಅದೂ (ಸತ್ಯಾಸತ್ಯವೆಂಬುದೂ) ಅಸದ್ರೂಪವೆಂದೇ ತಿಳಿ. (ಶುಕ್ತಿಯಲ್ಲಿ ಭ್ರಾಂತಿ ಕಲ್ಪಿತ

ಅಸಮ್ಯಗ್ದರ್ಶನಂ ತ್ಯಕ್ತ್ವಾ ಸಮ್ಯಕ್ಪಶ್ಯ ಸುಲೋಚನ ।
ನ ಕ್ವಚಿನ್ಮುಹ್ಯತಿ ಪ್ರೌಢಃ ಸಮ್ಯಗ್ದರ್ಶನವಾನಿಹ ॥ ೩೨ ॥

ದೃಶ್ಯದರ್ಶನಸಂಬಂಧ ವಿಸ್ತಾರೈಸ್ತದ್ವಿಜೃಂಭತೇ ।
ದೃಶ್ಯದರ್ಶನಸಂಬಂಧೇ ಯತ್ಸುಖಂ ಪಾರಮಾರ್ಥಿಕಂ ।
ಅನುಭೂತಿಮಯಂ ತಸ್ಮಾತ್ಸಾರಂ ಬ್ರಹ್ಮೇತಿ ಕಥ್ಯತೇ ॥ ೩೩ ॥

ವಾದ ರಜತದಂತೆ ಮಿಥ್ಯೆ) ಅದು ಕಾರಣ, ಅದರ ವಿಷಯದಲ್ಲಿಯೂ ಹರ್ಷ ಶೋಕಗಳಿಗೆ ಅವಕಾಶವಿಲ್ಲ. ಹೀಗಿರುವಾಗ ಅಯ್ಯ ರಾಮ, ಈ ಜಗತ್ತಿನಲ್ಲಿ ಹರ್ಷಶೋಕಗಳಿಗೆ ಯೋಗ್ಯವಾದುದೊಂದೂ ಇಲ್ಲದಿರಲು ನೀನು ಇದಕ್ಕೋಸ್ಕರ ಏತಕ್ಕಾಗಿ ಹೀಗೆ ಭ್ರಾಂತನಾಗಿರುವೆ? (ಸರ್ವಥಾ ನಿನ್ನ ಮೋಹವು ಅಯುಕ್ತವೇ ಸರಿ.)

("ತತ್ರಕೋ ಮೋಹಃಕಃ ಶೋಕಃ ಏಕತ್ವಮನು ಪಶ್ಯತಃ") ಶ್ರುತಿಃ.

೩೨. ಪ್ರಶಸ್ತವಾದ ದಿವ್ಯ ಜ್ಞಾನದೃಷ್ಟಿಯುಳ್ಳ ರಾಮ, ನೀನು ಅಯಥಾರ್ಥವಾದ ಈ ಭ್ರಾಂತ ದೃಷ್ಟಿಯನ್ನು ನಿವಾರಣೆ ಮಾಡಿಕೊಂಡು ಯಥಾರ್ಥವಾದ ಪರಮಾರ್ಥಾತ್ಮತತ್ತ್ವ ಸ್ವರೂಪ ಜ್ಞಾನ ದೃಷ್ಟಿಯನ್ನು ಅವಲಂಬಿಸು. ಯಥಾರ್ಥವಾಗಿ ಆತ್ಮೈಕತ್ತ್ವ ಸಾಕ್ಷಾತ್ಕಾರವನ್ನು ಮಾಡಿಕೊಂಡು ಸುನಿಶ್ಚಿತವಾದ ವೇದಾಂತ ವಿಜ್ಞಾನದಲ್ಲಿ ಪರಿನಿಷ್ಠಿತನಾಗಿರುವ ಪ್ರಬುದ್ಧನು ಈ ಜಗತ್ತಿನಲ್ಲಿ ಎಂದೆಂದಿಗೂ ಯಾವುದರಲ್ಲಿಯೂ ಸ್ವಲ್ಪವಾದರೂ ಮೋಹಗೊಂಡು ಭ್ರಾಂತನಾಗುವುದಿಲ್ಲ.

೩೩. ಲೋಕದಲ್ಲಿ ಸಕಲ ಪ್ರಾಣಿಗಳೂ ಭೋಗ ಸುಖಕ್ಕೋಸ್ಕರವಾಗಿ ದೃಶ್ಯಗಳಾದ ವಿಷಯಗಳಿಗೂ, ದರ್ಶನಗಳಾದ ಇಂದ್ರಿಯಗಳಿಗೂ ಸಂಬಂಧವನ್ನು ಬಯಸುವರು. ಹೀಗೆ ದೃಶ್ಯ ದರ್ಶನಗಳೆನ್ನಿಸಿರುವ ವಿಷಯೇಂದ್ರಿಯಗಳ ಸಂಬಂಧ ವುಂಟಾದಾಗ ಅಭಿವ್ಯಕ್ತವಾಗುವ ಸುಖವು ದೃಶ್ಯ ದರ್ಶನ ಸಂಬಂಧ ವಿಸ್ತಾರಗಳಿಂದ ಅತಿಶಯವಾಗಿ ವಿಜೃಂಭಿಸುವುದು. ಇಂತಹ ಸುಖವು ಪರಮಾತ್ಮ ಸಂಬಂಧಿಯಾದುದೇ. (ಪಾರಮಾರ್ಥಿಕವೇ). ಅದು ಸ್ವಪ್ರಕಾಶವಾಗಿರುವ ಕಾರಣ ಸ್ವಾನುಭವಾಭಿನ್ನವಾದುದಾಗಿರುವುದು. ಚಿತ್ತವೃತ್ತಿರೂಪ ಉಪಾಧಿಗಳಿಂದುಂಟಾದ ಭೇದ ತಾರತಮ್ಯಗಳನ್ನು ನಿರಸನಮಾಡಿಬಿಟ್ಟರೆ, ಆಗ ಈ ಸುಖವು ಅಖಂಡವಾದ ನಿರತಿಶಯಾನಂದದಲ್ಲಿ ಐಕ್ಯವನ್ನು ಹೊಂದಿ ಪರಬ್ರಹ್ಮರೂಪವೇ ಆಗಿಬಿಡುವುದು. ಅದು ಕಾರಣ, ಪರಬ್ರಹ್ಮವು ನಿಶತಿಶಯಾನಂದ ಭೂತವಾದುದೆಂದೂ ಪರಮ ಪ್ರೇಮಾಸ್ಪದವಾದುದೆಂದೂ ಶಾಸ್ತ್ರಗಳು ಹೇಳುವುವು.

ದೃಶ್ಯದರ್ಶನಸಂಬಂಧೇ ಸುಖಸಂವಿದನುತ್ತಮಾ ।
ದದಾತ್ಯಜ್ಞಾಯ ಸಂಸಾರಂ ಜ್ಞಾಯ ಮೋಕ್ಷಂ ಸದೋದಯಂ ॥ ೩೪ ॥

ದೃಶ್ಯದರ್ಶನಸಂಬಂಧಸುಖಮಾತ್ಮವಪುರ್ವಿದುಃ ।
ತದ್ದೃಶ್ಯವಲಿತಂ ಬಂಧಸ್ತನ್ಮುಕ್ತಂ ಮುಕ್ತಿರುಚ್ಯತೇ ॥ ೩೫ ॥

ದೃಶ್ಯದರ್ಶನ ಸಂಬಂಧ ಸುಖಸಂವಿದನಾಮಯಂ ।
ಕ್ಷಯಾತಿಶಯಮುಕ್ತಾ ಚೇನ್ಮುಕ್ತಿಃ ಸೋಚ್ಯತೇ ಬುಧೈಃ ॥ ೩೬ ॥

---

೩೪. ದೃಶ್ಯದರ್ಶನಗಳ (ವಿಷಯೇಂದ್ರಿಯಗಳ) ಪರಸ್ಪರ ಸಂಬಂಧದಿಂದುಂಟಾಗುವ ಸುಖಾನುಭವವು, ಭೇದ ತಾರತಮ್ಯಯುತವಾಗಿಬಿಟ್ಟರೆ, ಅನಾತ್ಮಜ್ಞನಾದ ಮೂಢನಿಗೆ ಸಕಲಾನರ್ಥಮಯವಾದ ಸಂಸಾರವನ್ನು ಕಲ್ಪಿಸುವುದು. ಚಿತ್ತವೃತ್ತಿರೂಪ ಉಪಾಧಿಗಳಿಂದ ಕಲ್ಪಿತವಾದ ಭೇದ ತಾರತಮ್ಯಗಳನ್ನು ಕಳೆದುಬಿಟ್ಟರೋ' ಆ ಸುಖಾನುಭವವೇ, ಉತ್ತಮೋತ್ತಮವಾಗಿ, ಆತ್ಮಜಾನನಿಷ್ಠನಿಗೆ ಸದೋದಿತವಾದ (ಶಾಶ್ವತವೂ ಸ್ವತಸ್ಸಿದ್ಧವೂ ಆದ) ನಿತ್ಯನಿರತಿಶಯಾನಂದರೂಪ ಮೋಕ್ಷವನ್ನೇ ಸಾಧಿಸಿಕೊಡುವುದು.

[ವಿಷಯಾಕಾರವೃತ್ತಿಯಿಂದ ಆಸ್ವಾದಿಸಲ್ಪಡುವ ವೈಷಯಿಕಾನಂದವು, ವಿಷಯಗಳಲ್ಲಿ ರಾಗದ್ವೇಷಾದಿಗಳನ್ನುಂಟುಮಾಡುವುದರಮೂಲಕ ಸಂಸಾರ ಹೇತುವಾಗುವುದು. ಅದನ್ನು ವಿವೇಕ ಪೂರ್ವಕವಾಗಿ ಅಖಂಡವಾದ ಏಕಾತ್ಮಭಾವದಿಂದ ಗ್ರಹಿಸಿದರೆ ಆಗ ಮೋಕ್ಷ ಹೇತುವಾಗುವುದು ಎಂದರ್ಥ.]

೩೫. ದೃಶ್ಯ ದರ್ಶನಸಂಬಂಧದಿಂದುಂಟಾಗುವ ಸುಖವು ಆತ್ಮಸ್ವರೂಪವೆಂದೇ ಜ್ಞಾನಿಗಳು ತಿಳಿದುಕೊಂಡಿರುವರು. ಆ ಸುಖವು ದೃಶ್ಯದಿಂದ ಆವೃತವಾಗಿದ್ದರೆ ಬಂಧವೆನ್ನಿಸುವುದು. ದೃಶ್ಯವಿವರ್ಜಿತವಾದರೆ ಮುಕ್ತಿಯೆನ್ನುವುದು.

೩೬. ದೃಶ್ಯ ಸಂಬಂಧದಿಂದುಂಟಾಗುವ ಸುಖಾನುಭವರೂಪಜ್ಞಾನವು ದೃಶ್ಯವಿವರ್ಜಿತವಾಗಿದ್ದುಕೊಂಡು, ನಿರುಪದ್ರವವೂ ಕ್ಷಯಾತಿಶಯ ರಹಿತವೂ (ಅಂದರೆ ಅಕ್ಷಯವೂ ನಿರತಿಶಯವೂ) ಆಗಿದ್ದರೆ, ಆಗ ಅದನ್ನು ಜ್ಞಾನಿಗಳಾದ ಪಂಡಿತರು ಮುಕ್ತಿಯೆಂದು ಕರೆಯುವರು. (ಪುಣ್ಯ ತಾರತಮ್ಯವಶದಿಂದ ಸುಖತಾರತಮ್ಯವೆಂದರ್ಥ.)

ದೃಶ್ಯದರ್ಶನಸಂಬಂಧೇ ಯಾನುಭೂತಿಃ ಸ್ವಗೋಚರಾ ।
ದೃಶ್ಯದರ್ಶನನಿರ್ಮುಕ್ತಾ ತಾಮಾಲಂಬ್ಯ ಭವಾಭವಃ ॥ ೩೭ ॥

ಸೌಷುಪ್ತೀ ದೃಷ್ಟಿರೇಷಾ ಹಿ ಯಾತ್ಯೇವಂ ಸಂಪ್ರಕಾಶತೇ ।
ಏವಂ ಚ ಯಾತಿ ತುರ್ಯತ್ವಮೇವಂ ಮುಕ್ತಿರಿತಿ ಸ್ಮೃತಾ ॥ ೩೮ ॥

ದೃಶ್ಯದರ್ಶನಮುಕ್ತಾಯಾಂ ಯುಕ್ತಾಯಾಂ ಪರಯಾ ಧಿಯಾ ।
ದೃಶ್ಯದರ್ಶನಸಂಬಂಧಸಂವಿದಸ್ಯಾಂ ತು ರಾಘವ ॥ ೩೯ ॥

ನಾತ್ಮಾ ಸ್ಥೂಲೋ ನ ಚೈವಾಣುರ್ನ ಪ್ರತ್ಯಕ್ಷೋ ನ ಚೇತರಃ ।
ನ ಚೇತನೋ ನ ಚ ಜಡೋ ನಚೈವಾಸನ್ನ ಸನ್ಮಯಃ ॥ ೪೦ ॥

ನಾಹಂ ನಾನ್ಯೋ ನ ಚೈವೇಕೋ ನಾನೇಕೋ ವಾಪ್ಯನೇಕವಾನ್ ।
ನಾಭ್ಯಾಶಸ್ಥೋ ನ ದೂರಸ್ಥೋ ನೈವಾಸ್ತಿ ನ ಚ ನಾಸ್ತಿ ಚ ॥ ೪೧ ॥

ನ ಪ್ರಾಪ್ಯೋ ನಾತಿ ಚಾಪ್ರಾಪ್ಯೋ ನಹಾ ಸರ್ವೋ ನ ಸರ್ವಗಃ ।
ನ ಪದಾರ್ಥೋ ನಾಪದಾರ್ಥೋ ನ ಪಂಚಾತ್ಮಾ ನ ಪಂಚ ನ ॥ ೪೨ ॥

---

೩೭. ದೃಶ್ಯ ದರ್ಶನಸಂಬಂಧದಲ್ಲಿ, ಯಾವ ಅನುಭವವು ಅಖಂಡಪೂರ್ಣಾನಂದಸ್ಫುರಣಾತ್ಮಕವಾಗಿಯೂ, ದೃಶ್ಯದರ್ಶನಾದಿ ಭೇದರಹಿತವಾಗಿಯೂ, ಗೋಚರಿಸುವುದೋ, ಅಂತಹ ಅನುಭವವನ್ನು ಆಶ್ರಯಿಸಿ, ಅಯ್ಯ ರಾಮ, ನೀನು ಸಂಸಾರಬಂಧದಿಂದ ತಪ್ಪಿಸಿಕೊಳ್ಳುವವನಾಗು.

೩೮. ಹೀಗೆ ಪೂರ್ವೋಕ್ತವಾದ ಅಖಂಡಪೂರ್ಣಾನಂದ ಸ್ವರೂಪದ ಅವಲಂಬನದಿಂದ, ಸುಷುಪ್ತ ಸ್ಥಿತಿಯಲ್ಲಿರುವಂತೆ ಸ್ವರೂಪಾವರಣಾತ್ಮಕವಾದ ದೃಷ್ಟಿಯು ತೊಲಗಿಹೋಗುವುದು. ಅನಾವೃತವಾದ ಸ್ವರೂಪದೃಷ್ಟಿಯು ಚೆನ್ನಾಗಿ ಸ್ವಯಂ ಪ್ರಕಾಶಿಸುವುದು. ಇಂತಹ ಸ್ವಪ್ರಕಾಶ ಸ್ವರೂಪದೃಷ್ಟಿಯಿಂದ, ದೃಶ್ಯದರ್ಶನ ಸಂಬಂಧಜ್ಞಾನವು ತುರ್ಯಾತ್ಮ ಸ್ಥಿತಿಯನ್ನು ಪಡೆಯುವುದು. ಕ್ರಮೇಣ ಈ ತುರ್ಯಾತ್ಮಸ್ಥಿತಿಯೇ ಪರಿಸಿಸ್ಥಿತವಾಗಿ ಸ್ಥೈರ್ಯದಿಂದನಿಂತರೆ ಮುಕ್ತಿಯೆಂಬುದಾಗಿ ವ್ಯವಹರಿಸಲ್ಪಡುವುದು.

೩೯–೪೨. ಅಯ್ಯ ರಾಘವ, ದೃಶ್ಯದರ್ಶನಾದಿ ಭೇದವಿವರ್ಜಿತವಾಗಿಯೂ, ಪ್ರಶಸ್ತತಮವಾದ ಪರಮಾರ್ಥ ಸ್ವಾತ್ಮತತ್ವಜ್ಞಾನದಿಂದ ಸಂಪೂರ್ಣವಾಗಿಯೂ

ಯದಿದಂ ದೃಶ್ಯತಾಂ ಪ್ರಾಪ್ತಂ ಮನಃಷಷ್ಠೇಂದ್ರಿಯಾಸ್ಪದಂ ।
ತದತೀತಂ ಪದಂ ಯತ್ಸ್ಯಾತ್ತನ್ನ ಕಿಂಚದಿವೇಹ ತತ್ ॥ ೪೩

ಇರುವ ತುರ್ಯತ್ವವೆಂಬ ಈ ಮುಕ್ತಿಯಲ್ಲಿಯಾದರೋ, ಆತ್ಮನು, ಸ್ಥೂಲನಾಗಿಯೂ ಇರುವುದಿಲ್ಲ. ಅಣುವಾಗಿಯೂ ಇಲ್ಲ. ಪ್ರತ್ಯಕ್ಷನಾಗಿಯೂ ಇಲ್ಲ. ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಅಗೋಚರವಾದ ಬೇರೆಯಾವುದೋ ಒಂದು ವಸ್ತುವೂ ಆಗಿಲ್ಲ. ಚೈತನ್ಯವುಳ್ಳವನೂ ಅಲ್ಲ. ಅಂತೆಯೇ ಜಡನೂ ಆಗಿಲ್ಲ. ಅಸದ್ರೂಪನೂ ಆಗಿಲ್ಲ. ಸನ್ಮಯನೂ ಅಲ್ಲ. (ಸನ್ಮಯಃ= ಅಸ್ತಿತ್ವವೆಂಬ ಭಾವವಿಕಾರ ಪ್ರಚುರನೂ) ಅಹಂಭಾವಾಸ್ಪದನೂ ಅಲ್ಲ. ಅಹಂಭಾವಕ್ಕಿಂತ ಅನ್ಯನೂ ಅಲ್ಲ. ಏಕತ್ವಸಂಖ್ಯಾಗುಣಾಶ್ರಯನೂ ಅಲ್ಲ. (ಒಂದು ಎಂಬ ಸಂಖ್ಯಾರೂಪಗುಣಕ್ಕೆ ಆಶ್ರಯನಲ್ಲ.) ಅಂತೆಯೇ ಅನೇಕತ್ವ (ಬಹುತ್ವ) ಸಂಖ್ಯಾಗುಣಾಶ್ರಯನಾಗಿಯೂ ಇಲ್ಲ. ಮತ್ತು ಅನೇಕ ರೂಪ ಪ್ರಪಂಚವನ್ನೊಳಗೊಂಡಿರುವವನೂ ಆಗಿಲ್ಲ. ಹತ್ತಿರದಲ್ಲಿರುವವನೂ ಇಲ್ಲ. ದೂರವಲ್ಲಿರತಕ್ಕವನೂ ಆಗಿಲ್ಲ. ಸತ್ತಾಶ್ರಯನೂ ಅಲ್ಲ. ಸತ್ತಾಶ್ರಯನಾಗಿಲ್ಲದೆಯೂ ಇಲ್ಲ, ಪ್ರಾಪ್ಯನೂ ಅಲ್ಲ, (ಹೊಸದಾಗಿ ಸಂಪಾದಿಸಲ್ಪಡತಕ್ಕವನಲ್ಲ. ಏಕೆಂದರೆ ನಿತ್ಯಾಪ್ತವಾದ ಸ್ವರೂಪವೇ ಆಗಿರುವನು.) ಅತ್ಯಂತ ಅಪ್ರಾಪ್ಯನೂ ಆಗಿಲ್ಲ. ಸರ್ವಜಗದ್ರೂಪನೂ ಅಲ್ಲ. ಅಥವಾ ಸರ್ವಗತನೂ ಅಲ್ಲ. ವಾಚಾಮಗೋಚರನಾದ ಕಾರಣ, ಒಂದು ಪದಾರ್ಥವಾಗಿಯೂ ಇಲ್ಲ. ತುರ್ಯಾದಿ ಪದಲಕ್ಷ್ಯವಾಗಿರುವ ಕಾರಣ, ಆತ್ಮನು ಅಪದಾರ್ಥವೆಂದು ಹೇಳುವುದಕ್ಕೂ ಆಗುವುದಿಲ್ಲಿ. ಆಕಾಶಾದಿ ಪಂಚಭೂತಗಳಿಗೆ ಆತ್ಮನಾಗಿಯೂ ಇಲ್ಲ. ಮತ್ತು ಪಂಡಭೂತಸ್ವಭಾವನೂ ಅಲ್ಲವೇಅಲ್ಲ,

೪೩. ದೃಶ್ಯವಾಗಿರುವ ಈ ಜಗತ್ತೆಲ್ಲವೂ ಅಂತಾ, ಕಾರಣವಾದ ಮನಸ್ಸಿಗೂ ಚಕ್ಷುರಾದಿ ಪಂಚಜ್ಞಾನೇಂದ್ರಿಯಗಳಿಗೂ ವಿಷಯವಾಗಿರುವುದು. ಇಂತಹ ಇಂದ್ರಿಯ ಗೋಚರವಾದ ಜಗತ್ತಿಗೆ ಅತೀತವಾಗಿರುವ ಪರಮಪದವು ಯಾವುದು ಇರುವುದೋ ಅದು ಪೂರ್ವೋಕ್ತ ಸ್ಥೂಲತ್ವ ಅಣುತ್ವ ಮೊದಲಾದ ಧರ್ಮವಿಶಿಷ್ಟವಾಗಿಯೂ ಇತ. ಈ ಪ್ರಪಂಚದೊಳಗೂ ಇಲ್ಲ.

[ಸಏಷನೇತಿನೇತ್ಯಾತ್ಮಾ, ಅಗ್ರಾಹ್ಯೋನಹಿಗೃಹ್ಯತೇ, ಅಶೀರ್ಯೋನಹಿ ಶೀರ್ಯತೇ, ಅಸಙ್ಗೋನಹಿಸಜ್ಯತೇ, ಅಸಿತೋಸವ್ಯಥತೇ ನರಿಷ್ಯತಿ ವಿಜ್ಞಾತಾರಮರೇ ಕೇನ ವಿಜಾನೀಯಾತ್ ಇತ್ಯಾದಿ ಬೃಹದಾರಣ್ಯಕ ೬ ಅಧ್ಯಾಯ ೫ ಬ್ರಾಹ್ಮಣ ಮಂತ್ರ

ಯಥಾಭೂತಮಿದಂ ಸಮ್ಯಕ್‌ಜ್ಞಸ್ಯ ಸಂಪಶ್ಯತೇ ಜಗತ್ ।
ಸರ್ವಮಾತ್ಮಮಯಂ ವಿಶ್ವಂ ನಾಸ್ತ್ಯನಾತ್ಮಮಯಂ ಕ್ವಚಿತ್ ॥ ೪೪ ॥

ಕಾಠಿನ್ಯದ್ರವಣಸ್ಪಂದ ಖಾವಕಾಶಾವಲೋಕನೈಃ ।
ಆತ್ಮೈವ ಸರ್ವಂ ಸರ್ವೇಷು ಭೂವಾರ್ಯನಿಲಖಾಗ್ನಿಷು ॥ ೪೫ ॥

ಸತ್ತೈವಾಸ್ತಿ ನ ವಸ್ತೂನಾಂ ಯಾ ಯಾ ರಾಮ ಚಿತ್ತಾಂ ವಿನಾ ।
ವ್ಯತಿರಿಕ್ತಂ ತತೋಽಸ್ಮೀತಿ ವಿದ್ಧಿ ಪ್ರೋನ್ಮತ್ತಜಲ್ಪಿತಂ ॥ ೪೬ ॥

೧೫"ರಲ್ಲಿ ಇದಂನ, ಇದಂನ "(ಇದು ಅಲ್ಲ. ಇದು ಅಲ್ಲ)'' ಎಂಬುದಾಗಿ ಸರ್ವದೃಶ್ಯಗಳನ್ನು ನಿಷೇಧಮಾಡಿ ಆತ್ಮಸ್ವರೂಪವು ಉಪದಿಷ್ಟವಾಗಿರುವುದು. ಆತ್ಮವು ವಿಶ್ವಾತೀತ ಇಂದ್ರಿಯಾಗೋಚರ. ಸರ್ವ ಧರ್ಮ ಗುಣ, ರೂಪಾದಿವಿವರ್ಜಿತವು.]

೪೪. ಈ ರೀತಿಯಾಗಿ, ಸಮಸ್ತವಾದ ಜಗತ್ತನ್ನು ಯಥಾಸ್ಥಿತವಾಗಿ, ಚೆನ್ನಾಗಿ ತತ್ತ್ವತಃ ನೋಡುತ್ತಿರುವ ತತ್ತ್ವಜ್ಞನಾದ ಪ್ರಾಜ್ಞನಿಗೆ, ಈ ವಿಶ್ವವೆಲ್ಲವೂ ಆತ್ಮಮಯವಾಗಿಯೇ ಇರುವುದು. ಆತ್ಮಮಯವಲ್ಲದುದು ಯಾವುದೊಂದೂ ಎಲ್ಲಿಯೂ ಯಾವಾಗಲೂ ಇಲ್ಲವೇ ಇಲ್ಲ.

೪೫. ಆತ್ಮನೇ ತನ್ನಲ್ಲಿ ಕಾಠಿಣ್ಯವನ್ನು ಕಾಣುವುದರಿಂದ ಪೃಥಿವಿಯಲ್ಲಿಯೂ ದ್ರವತ್ವವನ್ನು ಕಾಣುವುದರಿಂದ ಜಲದಲ್ಲಿಯೂ, ಸ್ಪಂದ (ಚಲನ) ವನ್ನು ಕಾಣುವುದರಿಂದ ವಾಯುವಿನಲ್ಲಿಯೂ ದೊಡ್ಡಛಿದ್ರ (ರಂಧ್ರ) ವನ್ನೂ ಕಾಣುವುದರಿಂದ ಆಕಾಶದಲ್ಲಿಯೂ, ಪ್ರಕಾಶವನ್ನೂ ಕಾಣುವುದರಿಂದ ತೇಜಸ್ಸಿನಲ್ಲಿಯೂ, ಹೀಗೆ ಸಕಲ ಜಗದ್ಭಾವಗಳಲ್ಲಿಯೂ ಇರುವನು. ಅದು ಕಾರಣ, ಸರ್ವವೂ ಆತ್ಮವೇ.

೪೬. ಅಯ್ಯರಾಮ, ಪ್ರಪಂಚದಲ್ಲಿರುವ ಸಕಲವಸ್ತುಗಳಿಗೆ ಯಾವ ಯಾವ ಸತ್ತೆಯು (ಅಸ್ತಿತ್ವವು ಸದ್ಭಾವವು.) ಇರುವುದೋ ಆ ಆ ಸತ್ತೆಯು, ಅದರ ಪ್ರಕಾಶಾತ್ಮಕವಾದ (ಪ್ರಸಿದ್ಧಿರೂಪವಾದ) ಚೈತನ್ಯವಿಲ್ಲದೆ (ಚೈತನ್ಯವನ್ನು ಬಿಟ್ಟು) ಇಲ್ಲವೇ ಇಲ್ಲ. ಅದುಕಾರಣ "ನಾನು ಅಂತಹ ಚೈತನ್ಯಕ್ಕಿಂತ ವ್ಯತಿರಿಕ್ತನಾದವನು." ಎಂದು ಯಾವನಾದರೂ ಹೇಳಿದ್ದೇ ಆದರೇ ಅವನ ಆ ಮಾತನ್ನು ಉನ್ಮತ್ತನ ಹರಟೆಯೆಂದು (ಹುಚ್ಚನ ಅರ್ಥವಿಲ್ಲದ ಮಾತು) ಖಚಿತವಾಗಿ ತಿಳಿಯುವವನಾಗು,

ಏಕೋ ಜಗಂತಿ ಸಕಲಾನಿ ಸಮಸ್ತಕಾಲ
　　ಕಲ್ಪಕ್ರಮಾಂತರಗತಾನಿ ಗತಾಗತಾನಿ
ಆತ್ಮೈವ ನೇತರಕಲಾಕಲನಾಸ್ತಿ ಕಾಚಿ
　　ದಿತ್ಥಂ ಮತಿರ್ಭವ ತಯಾತಿಗತೋ ಮಹಾತ್ಮನ್ || ೪೭ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷೂ ಪಶಮಪ್ರಕರಣೇ "ಮೋಕ್ಷಸ್ವರೂಪೋಪದೇಶೋ" ನಾಮ ದ್ವಿಸಪ್ತತಿತಮಃ ಸರ್ಗಃ

---

೪೭. ಅಯ್ಯ ಮಹಾತ್ಮನಾದ ರಾಮಚಂದ್ರ, ಸಮಸ್ತಕಾಲಗಳಲ್ಲಿಯೂ ಮತ್ತು ಅನಂತವಾದ ಕಲ್ಪ (ಪ್ರಳಯ) ಕ್ರಮಗಳಲ್ಲಿಯೂ ಒಳಗೆ ಮಧ್ಯದಲ್ಲಿ ಇದ್ದುಗೊಂಡಿರುವ ಸಕಲ ಜಗತ್ತುಗಳೂ ಮತ್ತು ಆ ಜಗತ್ತುಗಳಲ್ಲಿ ಬಂದು ಹೋಗುತ್ತಿರುವ ಸಕಲ ಜೀವ ಸಂಸಾರಗಳೂ ಕೂಡ ಇವೆಲ್ಲವೂ ಅದ್ವಿತೀಯವಾದ ಅತ್ಮವೇಯೇ, ಅದಕ್ಕಿಂತ ಇತರವಾದ ಕಲಾಕಲ್ಪನೆಯು ಯಾವುದೊಂದೂ ಸರ್ವದಾ ಇಲ್ಲವೇಇಲ್ಲ. ರಾಮ, ನೀನು ಈ ಪ್ರಕಾರವಾಗಿ ತಾತ್ತ್ವಿಕವಾದ ಪರಮಾರ್ಥ ಜ್ಞಾನವನ್ನು ಪಡೆಯುವವನಾಗು. ಈ ಪಾರಮಾರ್ಥಿಕ ಜ್ಞಾನದಿಂದ ಸಂಸಾರ ವನ್ನೂ ಅತಿಕ್ರಮಿಸಿ ನಿತ್ಯಮುಕ್ತನಾಗಿರು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಮೋಕ್ಷ ಸ್ವರೂಪೋಪದೇಶ" ಎಂಬ ಎಪ್ಪತ್ತೆರಡನೆಯ ಸರ್ಗವು.

ತ್ರಿಸಪ್ತತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಏವಂ ವಿಚಾರಯಾ ದೃಷ್ಟ್ವಾ ದ್ವೈತತ್ಯಾಗೇನ ರಾಘವ ।
ಸ್ವಭಾವಃ ಪ್ರಾಪ್ಯತೇ ತಜ್ಞೈಸ್ತಜ್ಞೈಶ್ಚಿಂತಾಮಣಿರ್ಯಥಾ ॥ ೧ ॥

ಅಥೇಮಾಮಪರಾಂ ದೃಷ್ಟಿಂ ಶೃಣು ರಾಮಾನಯಾ ಯಥಾ ।
ದೃಷ್ಟಸ್ಯಾತ್ಮಾನಮಚಲಂ ಭವಿಷ್ಯಸಿ ಚ ದಿವ್ಯದೃಕ್ ॥ ೨ ॥

ಎಪ್ಪತ್ತ ಮೂರನೆಯ ಸರ್ಗ

ಶ್ರೀ ವಸಿಷ್ಠರು ಹೇಳಿದರು :—

೧. ಅಯ್ಯ ರಾಘವ, ಚಿಂತಾಮಣಿಯೆಂಬ ದಿವ್ಯ ರತ್ನದ ತತ್ತ್ವಜ್ಞರಾದ ಇಂದ್ರಾದಿ ದೇವತೆಗಳು ಚಿಂತಾಮಣಿಯನ್ನು ಪಡೆಯುವಂತೆ ಆತ್ಮಜ್ಞರಾದ ಮಹಾತ್ಮರು ಪೂರ್ವ ಸರ್ಗದಲ್ಲಿ ನಾನು ಹೇಳಿದ ಪ್ರಕಾರವಾಗಿ ದೃಗ್ದೃಶ್ಯಗಳ ವಿವೇಕವನ್ನು ವಿಚಾರ ಪೂರ್ವಕ, ನಿಶ್ಚಯವಾಗಿ ತಿಳಿದುಕೊಂಡು, ಬಳಿಕ ಪರಮಾರ್ಥಾತ್ಮೈಕತ್ವ ಜ್ಞಾನದಿಂದ ಸಮಸ್ತ ದ್ವೈತ ಭಾವಗಳನ್ನೂ ಅಸತ್ಯವೆಂದು ಭಾವಿಸಿ, ಅವುಗಳನ್ನು ಪರಿತ್ಯಾಗ ಮಾಡುವುದರ ಮೂಲಕ ಸ್ವಸ್ವರೂಪಾವಸ್ಥಿತಿ ರೂಪ ಮುಕ್ತಿಯನ್ನು ಹೊಂದುವರು.

೨. ಅಯ್ಯ ರಾಮ, ಇದೋ ಈಗ ನಾನು ನಿನಗೆ ಬೇರೊಂದು ವಿಧವಾದ ದೃಷ್ಟಿಯನ್ನು ಉಪದೇಶ ಮಾಡುವೆನು. ಅವಧರಿಸು. (ಕೇಳು.) ನೀನು ಈ ದೃಷ್ಟಿಯನ್ನು ಅವಲಂಬಿಸಿದರೆ ಸ್ಥಿರವಾದ ಸ್ವಾತ್ಮ ಸ್ವರೂಪವನ್ನು ತತ್ತ್ವತಃ ಸಾಕ್ಷಾತ್ಕರಿಸುವವನಾಗುವೆ ಮತ್ತು ದೃಶ್ಯದರ್ಶನವರ್ಜಿತನಾದ ಕೇವಲ ದಿವ್ಯ ದೃಗ್ರೂಪನೇ ಆಗುವೆ.

ಅಹಂ ಸ್ವಮಹಮಾದಿತ್ಯೋ ದಿಶೋಽಹಮಹಮ ಪೃಥಃ ।
ಅಹಂ ದೈತ್ಯಾ ಅಹಂ ದೇವಾ ಲೋಕಾಶ್ಚಾಹಮಹಂ ಮಹಃ　　　　|| ೩ ||

ಅಹಂ ತಮೋಽಹಮಭ್ರಾಣಿ ಭೂಃ ಸಮುದ್ರಾದಿಕಂ ತ್ವಹಂ
ರಜೋ ವಾಯುರಥಾಗ್ನಿಶ್ಚ ಜಗತ್ಸರ್ವಮಿದಂ ತ್ವಹಂ　　　　|| ೪ ||

ಜಗತ್ರಯೇಽಹಂ ಸರ್ವತ್ರ ಯ ಆತ್ಮೈವ ಕಿಲಾಸ್ಥಿತಃ ।
ಕೋಽಹಂ ಕಿಮನ್ಯದ್ದೇಹಾದಿ ದ್ವಿತ್ವಮೇಕಸ್ಯ ಕೀದೃಶಂ　　　　|| ೫ ||

ಇತಿ ನಿಶ್ಚಯವಾನಂತರ್ಭೂತಮಾತ್ಮತಯಾ ಜಗತ್ ।
ಪಶ್ಯ ಹರ್ಷವಿಷಾದಾಭ್ಯಾಂ ನಾವಶಃ ಪರಿಭೂಯಸೇ　　　　|| ೬ ||

ತನ್ಮಯೇಽಸ್ಮಿಸ್ಕಿಲ ಜಗತ್ಯಖಿಲೇ ಸಂಸ್ಥಿತೇಽನಘ ।
ಕಿಮಾತ್ಮೀಯಂ ಪರಂ ಕಿಂ ಸ್ಯಾತ್ಕಮಲೇಕ್ಷಣ ಕಥ್ಯತಾಂ　　　　|| ೭ ||

೩-೬. ಆಕಾಶವು ನಾನೇ, ಆದಿತ್ಯನೂ ನಾನೇ, ದಿಕ್ಕುಗಳೂ ನಾನೇ, ಕೆಳಗಡೆಯೂ ನಾನೇ, ದೈತ್ಯರೂ ನಾನೇ, ದೇವತೆಗಳೂ ನಾನೇ, ಭೂಲೋಕಗಳೂ ಮತ್ತು ಸೂರ್ಯ ಚಂದ್ರ ಮೊದಲಾದ ತೇಜಸ್ಸುಗಳ ಪ್ರಭೆಯೂ ನಾನೇ, ತಮಸ್ಸೂ ನಾನೇ, ಮೇಘಗಳೂ ನಾನೇ, ಈ ಭೂಮಿಯೂ ನಾನೇ, ಸಮುದ್ರಾದಿ ಜಲಾಶಯಗಳೂ ನಾನೇ, ರಜಸ್ಸು, ವಾಯು ಅಂತೆಯೇ ಅಗ್ನಿ ಮತ್ತು ಈ ಸಮಸ್ತ ಜಗತ್ತೂ ನಾನೇ, ಈ ಮೂರು ಲೋಕಗಳಲ್ಲಿಯೂ ಯಾವ ಅದ್ವಿತೀಯನಾದ ಆತ್ಮನು ಸರ್ವತ್ರ ವ್ಯಾಪಿಸಿಕೊಂಡಿರುವನೋ ಆ ಆತ್ಮನೂ (ಸರ್ವ ವ್ಯಾಪಿಯಾದ) ನಾನೇಯೆ, ಸರ್ವಾತಿರಿಕ್ತವಾದ ಮತ್ತು ಪರಿಚ್ಛಿನ್ನವಾದ ಯಾವ ವಸ್ತುವಾಗಿ ನಾನು ಇರುವೆನು ? ನನಗಿಂತಲೂ ಇತರವಾದ ದೇಹಾದಿ ವಸ್ತುವು ಯಾವುದಿರುವುದು ? ಸರ್ವಾತ್ಮಕನಾಗಿಯೂ ಸರ್ವದಾ ಅದ್ವಿತೀಯನಾಗಿಯೂ ಇರುವ ನನಗೆ ಸ್ವಗತಭೇದರೂಪವಾದ ದ್ವಿತ್ವವು ಎಂತಹುದು ? ಎಂಬುದಾಗಿ ಮನಸ್ಸಿನೊಳಗೆ ದೃಢನಿಶ್ಚಯವುಳ್ಳವನಾಗು. ಬಳಿಕ, ಈ ಸಮಸ್ತ ದೃಶ್ಯ ಜಗತ್ತೂ ಸ್ವಾಂತರ್ಗತವಾಗಿರುವುದೆಂದೂ ಮತ್ತು ಸ್ವಾತ್ಮಭಾವದಿಂದಿರುವುದೆಂದೂ ಕಾಣುವವನಾಗು. ಹೀಗೆ ಭಾವನೆ ಮಾಡಿದರೆ ತರುವಾಯ ನೀನು ಎಂದಿಗೂ ಹರ್ಷಶೋಕಗಳಿಗೆ ಪರವಶನಾಗದೆಯೂ ಅವುಗಳಿಂದ ಪರಾಭವವನ್ನು ಹೊಂದದವನಾಗಿಯೂ ಸ್ವಸ್ಥನಾಗಿರುವೆ.

೭. ಅಯ್ಯ ಅನಘನೂ ಕಮಲನೇತ್ರನೂ ಆದ ರಾಮ, ಈ ಸಮಸ್ತ

ಕಿಂ ತಜ್ಞವ್ಯತಿರೇಕೇಣ ವಿದ್ಯತೇ ಯದುಪಾಗತಂ ।
ಹರ್ಷಮೇತು ವಿಷಾದಂ ವಾ ವಿಷಾದೇಽಜ್ಞೋ ಜಗನ್ಮಯಃ ॥ ೮ ॥

ಅಹಂಕಾರದೃಶಾವೇತೇ ಸಾತ್ವಿಕೇ ದ್ವೇಽತಿನಿರ್ಮಲೇ ।
ತತ್ವಜ್ಞಾನಾತ್ಪ್ರವರ್ತೇತೇ ಮೋಕ್ಷದೇ ಪಾರಮಾರ್ಥಿಕೇ ॥ ೯ ॥

ಪರೋಽಣುಃ ಸಕಲಾತೀತರೂಪೋಽಹಂ ಚೇತ್ಯಹಂಕೃತಿಃ ।
ಪ್ರಥಮಾ ಸರ್ವಮೇವಾಹಮಿತ್ಯನ್ಯೋಕ್ತಾ ರಘೂದ್ವಹ ॥ ೧೦ ॥

ಅಹಂಕಾರದೃಗನ್ಯಾ ತು ತೃತೀಯಾ ವಿದ್ಯತೇಽನಘ ।
ದೇಹೋಽಹಮಿತಿ ತಾಂ ವಿದ್ಧಿ ದುಃಖಾಯೈವ ನ ಶಾಂತಯೇ ॥ ೧೧ ॥

ಜಗತ್ತೂ ವಸ್ತುತಃ ಕೇವಲ ಆತ್ಮರೂಪವೇ ಆಗಿದ್ದುಕೊಂಡಿರಲು, ಇದರೊಳಗೆ ಸ್ವಕೀಯವಾದುದು (ಆತ್ಮೀಯ) ಯಾವುದು ? ಪರಕೀಯವಾದುದು ಯಾವುದು ? ಹೇಳು ಕೇಳೋಣ.

೮. ಯಾವುದರ ಸಂಪ್ರಾಪ್ತಿಯಿಂದ ಆತ್ಮತತ್ತ್ವಜ್ಞನು ಹರ್ಷವನ್ನಾಗಲಿ ಶೋಕವನ್ನಾಗಲಿ ಹೊಂದುವನೋ, ಅಂತಹುದು ಆತ್ಮಜ್ಞನಿಗಿಂತ ವ್ಯತಿರಿಕ್ತವಾಗಿ ಯಾವುದಿರುವುದು ? (ಯಾವುದೂ ಇಲ್ಲವು.) ಶೋಕವು ಉಂಟಾಗಿಬಿಟ್ಟರೋ ಅವನು ನಿಜವಾಗಿಯೂ ಅಜ್ಞನಾಗಿರುವವನೇ ಹೊರತು ಪ್ರಾಜ್ಞನಾಗಿರುವುದಿಲ್ಲ. ಏಕೆಂದರೆ ಅವನು ಇನ್ನೂ ಜಗದ್ರೂಪನಾಗಿರುವವನೇ ಹೊರತು ಚಿನ್ಮಯನಾಗಿ ಇಲ್ಲವೇ ಇಲ್ಲ.

೯. ಅಯ್ಯಾ ರಾಮ, ಈಗಲೇ ಇನ್ನು ಮುಂದೆ ನಾನು ನಿನಗೆ ಈ ಎರಡು ಪ್ರಕಾರಗಳಾದ ಅತಿ ನಿರ್ಮಲವಾದ ಸಾತ್ತ್ವಿಕಾಹಂಭಾವ ದೃಷ್ಟಿಗಳನ್ನು ಉಪದೇಶಿಸುವೆನು. ಇವೆರಡೂ ಆತ್ಮತತ್ತ್ವಜ್ಞಾನದಿಂದಲೇ ಪ್ರವರ್ತಿಸುವುವು. ಪಾರಮಾರ್ಥಿಕಗಳು ಮತು ಮೋಕ್ಷಪ್ರದಾಯಕಗಳು.

೧೦. ಅಯ್ಯ ರಘೂದ್ವಹ,—“ನಾನು ಪರಮಾತ್ಮನ್' ನಾನು ಆಕಾಶದಂತೆ ಅಸ್ಥೂಲ ಸ್ವಭಾವವುಳ್ಳವನು. ಮತ್ತು ಅವಸ್ಥಾತ್ರಯ ದೃಶ್ಯವಾದ ಸಕಲ ಜಗತ್ತಿಗಿಂತ ಅತೀತನಾದ ಸ್ವರೂಪನು ನಾನು ” ಎಂಬ ಅಹಂಕಾರವು ಮೊಲನೆಯದು. “ಈ ದೃಶ್ಯವೆಲ್ಲವೂ ನಾನೇ ” ಎಂಬ ಅಹಂಕಾರವೇ ಎರಡನೆಯದು.

೧೧. ಅಯ್ಯ ಅನಘ ಇವೆರಡೂ ಅಲ್ಲದೆ, ಮೂರನೆಯದಾದ, “ಈ ದೇಹವು

ಅಥ ಚೈತತ್ತ್ರಯಮಪಿ ತ್ಯಕ್ತ್ವಾ ಸಕಲಸಿದ್ಧಯೇ ।
ಯಚ್ಚೇಷಂ ತದುಪಾಲಂಬ್ಯ ತಿಷ್ಠಾವಷ್ಟಬ್ಧತತ್ಪರಃ ॥ ೧೨ ॥

ಸರ್ವಾತೀತಸ್ವರೂಪೋಽಪಿ ಸರ್ವಸತ್ತಾತಿಗೋಽಪಿ ಚ ।
ಅಸತ್ತಾ ಪೂರಿತಜಗದಸ್ತ್ಯೇವಾತ್ಮಾ ಪ್ರಕಾಶಕಃ ॥ ೧೩ ॥

ನಾನು" ಎಂದು ಭಾವಿಸುವ, ವಿಲಕ್ಷಣವಾದ ಮತ್ತೊಂದು ಅಹಂಕಾರವೂ ಅಜ್ಞ ಜನರಲ್ಲಿ ಸ್ವಭಾವತಃ ಇರುವುದು. (ಆದರೆ ಶಾಸ್ತ್ರ ಸಿದ್ಧವಾಗಿಲ್ಲ.) ಇಲ್ಲಿಯೇ ಹೇಳಿದ, ಈ ಮೂರನೆಯ ಅಹಂಕಾರವು ಸರ್ವದಾ ಕೇವಲ ಸರ್ವದುಃಖಹೇತುವಾಗಿರುವುದು. ಮತ್ತು ಅದರಿಂದ ಎಂದಿಗೂ ಶಾಂತಿಯು ದೊರಕುವುದೇ ಇಲ್ಲ ಎಂದು ಸ್ಪಷ್ಟವಾಗಿ ತಿಳಿ.

೧೨. ಮತ್ತೂ, ನೀನು ಈ ಮೂರು ವಿಧಗಳಾದ ಅಹಂಕಾರ ಭಾವನೆಗಳನ್ನೂ ಸಂಪೂರ್ಣವಾಗಿ ಪರಿತ್ಯಜಿಸಿ, ಎಲ್ಲವನ್ನೂ ಕಳೆದ ಬಳಿಕ, ಉಳಿಯುವ, ನಿರಹಂಭಾವರೂಪ ಪೂರ್ಣಚಿನ್ಮಾತ್ರಾತ್ಮಕವಾದ ಸ್ವಾತ್ಮತತ್ವವನ್ನು ಅವಲಂಬಿಸಿದರೆ ಆನಂದೈಕರಸ ಪರಮಪದದಲ್ಲಿ ಪರಿನಿಷ್ಠಿತನಾಗಿ ಸರ್ವದಾ ವಿಶ್ರಾಂತನಾಗುವೆ. ಆಗ ನಿನಗೆ ಸಕಲ ಸಿದ್ಧಿಗಳೂ ತಾನಾಗಿಯೇ ಲಭಿಸುವುವು.

೧೩. ಆತ್ಮನು, ಅಜ್ಞಾನದಿಂದ ಆರೋಪಿತವಾದ ಸಕಲದೃಶ್ಯರೂಪ ಮಾಲಿನ್ಯವನ್ನೂ ಶೋಧಿಸಿ ಬಿಟ್ಟಬಳಿಕ, ಸ್ವಭಾವತಃ, ಸಕಲ ಪ್ರಾಪಂಚಿಕ ಭಾವಗಳನ್ನೂ ಅತಿಕ್ರಮಿಸಿದ ಸ್ವರೂಪವುಳ್ಳವನಾಗಿರುವನು. ಮತ್ತು ಸ್ವಾತ್ಮಸ್ವರೂಪವಾದ ಅಧಿಷ್ಠಾನದಲ್ಲಿ ಅವಿದ್ಯಾ ಕಲ್ಪಿತಗಳಾದ ಸರ್ವ ವಿಕಾರಗಳನ್ನೂ ಜ್ಞಾನ ಬಾಧಿತಗಳನ್ನಾಗಿ ಮಾಡಿ ಲಯಗೊಳ್ಳಿಸುವುದರಿಂದ ಸಕಲ ಸತ್ತೆಗಳನ್ನೂ (ಸದ್ಭಾವ) ಅತಿಕ್ರಮಿಸಿರತಕ್ಕವನು ಆದಾಗ್ಯೂ ಜಗತ್ತು ಅಸತ್ ಆಗಿರುವಕಾರಣ, ಅದನ್ನು ಜ್ಞಾನದಿಂದ ಬಾಧೆಗೊಳಿಸುವ ಉಪಾಯದಿಂದಲೇ ಆತ್ಮನು ತಾನೇ ಜಗತ್ತಿನಲ್ಲೆಲ್ಲಾ ಪೂರ್ಣವಾಗಿ ತುಂಬಿಕೊಂಡು, ಅನಾತ್ಮ ಜಡವಸ್ತುಗಳನ್ನೆಲ್ಲಾ ಪ್ರಕಾಶಗೊಳಿಸ ತಕ್ಕವನಾಗಿ ಚೈತನ್ಯರೂಪದಿಂದ ಇದ್ದೇ ಇರುವನು. (ಹೀಗಿರುವ ಕಾರಣ, ಆತ್ಮನು ಪರಿಶೇಷವಾಗುವುದಿಲ್ಲವೆಂಬ ಶಂಕೆಗೆ ಅವಕಾಶವೇ ಇಲ್ಲವು.)

ಸ್ವಾನುಭೂತ್ಯೈವ ಪಶ್ಯಾಶು ಸ ಏವಾಸಿ ಸದೋದಿತಃ ।
ಸಾಶಯಂಹೃದಯಗ್ರಂಥಿಂ ತ್ಯಜ ತತ್ವವಿದಾಂವರ ॥ ೧೪ ॥

ನಾತ್ಮಾಸ್ತ್ಯನುಮಯಾ ರಾಮ ನ ಚಾಪ್ತವಚನಾದಿನಾ ।
ಸರ್ವದಾ ಸರ್ವದಾ ಸರ್ವಂ ಸ ಪ್ರತ್ಯಕ್ಷೋಽನುಭೂತಿತಃ ॥ ೧೫ ॥

---

೧೪. ಅಯ್ಯ ತತ್ವಜ್ಞಾನಿಗಳಲ್ಲಿ ಶ್ರೇಷ್ಠನಾದ ರಾಮ, ಸ್ವಾನುಭವದಿಂದ ಮಾತ್ರವೆ, ನೀನು ತಡಮಾಡದೆ ಈಗಲೇ ಸ್ವಾತ್ಮಸ್ವರೂಪವನ್ನು ಸಾಕ್ಷಾತ್ತಾಗಿ ಕಾಣುವವನಾಗು. (ಸ್ವಾನುಭವವು ಒಂದೇ ಸ್ವಾತ್ಮಸ್ವರೂಪ ಸಾಕ್ಷಾತ್ಕಾರಕ್ಕೆ ಮುಖ್ಯಹೇತುವು. ಯುಕ್ತಿಗಳು, ಶಾಸ್ತ್ರಗಳು ಮತ್ತು ಗುರೂಪದೇಶ ಮುಂತಾದು ವುಗಳು ಕೇವಲ ಮಾರ್ಗದರ್ಶಿಗಳು ಎಂದರ್ಥ.) ನೀನು ಸರ್ವದಾ ಸ್ವತಸ್ಸಿದ್ಧನೂ ಶಾಶ್ವತನೂ ಆಗಿರುವ ಆ ಸಚ್ಚಿದಾನಂದರೂಪ ಪರಮಾತ್ಮನೇ ಆಗಿದ್ದೀಯೆ. ಇನ್ನು ನೀನು ದೇಹೇಂದ್ರಿಯಾದಿವಾಸನಾಸಹಿತವಾದ, ಅಹಂಕಾರ ತಾದಾತ್ಮ್ಯಾಧ್ಯಾಸ ವನ್ನು (ಹೃದಯ ಗಂಥಿ) ಸಂಪೂರ್ಣವಾಗಿ ಬಿಟ್ಟುಬಿಡು.

೧೫. ಅಯ್ಯ ರಾಮ, ಆತ್ಮನ (ಅಸ್ತಿತ್ವವು, ಸದ್ಭಾವವು) ಸತ್ತೆಯು ಅನು ಮಾನ ಪ್ರಮಾಣದಿಂದ ಸಿದ್ಧವಾಗತಕ್ಕುದಲ್ಲ. ಮತ್ತು (ಆಪ್ತವಾಕ್ಯ) ಶಬ್ದ, ಉಪ ಮಾನ, ಮೊದಲಾದ ಪ್ರಮಾಣಗಳಿಂದಲೂ ಸಿದ್ಧವಾಗತಕ್ಕುದಲ್ಲ, ಆದರೆ ಆತ್ಮನು ಸರ್ವದಾ (ಯಾವಾಗಲೂ) ಸರ್ವಥಾ (ಸರ್ವಪ್ರಪ್ರಕಾರಗಳಲ್ಲೂ) ಸರ್ವಾತ್ಮಕ ನಾಗಿ ಅನುಭವದಿಂದ ಮಾತ್ರವೇ ಪ್ರತ್ಯಕ್ಷನಾಗಿ (ಅಪರೋಕ್ಷ) ಇರುವನು. [ತಂತ್ವೌಪನಿಷದಂ ಪುರುಷಂ ಪೃಚ್ಛಾಮಿ ಎಂಬ ಬೃಹದಾರಣ್ಯಕ ಶ್ರುತಿಯಲ್ಲಿ ಔಪನಿ ಷದಂ ಎಂಬ ವಿಶೇಷಣವನ್ನು ಹೇಳಿರುವುದರಿಂದ ಧರ್ಮಾಧರ್ಮಗಳಂತೆ ಆತ್ಮನು ಅತ್ಯಂತಪರೋಕ್ಷನೆಂದೂ ಉಪನಿಷತ್ತುಗಳಲ್ಲಿ ಮಾತ್ರವೇ ಪ್ರತಿಪಾದ್ಯಮಾನನಾಗಿರು ವನೆಂದೂ ಅನುಭವಗೋಚರನಲ್ಲವೆಂದೂ ಭ್ರಮಿಸಬಾರದು. ಆದರೆ ಮೇಲೆ ಉದಹರಿಸಿದ ಶ್ರುತಿಯೂ, ಸರ್ವಾನುಭವಸಿದ್ಧನೂ ಪರಮಾರ್ಥ ಸದ್ರೂಪನೂ ತ್ರಿಕಾಲಾಬಾಧ್ಯನೂ ಆದ ಆತ್ಮನ ಸ್ವರೂಪವನ್ನು ಪ್ರತಿಪಾದಿಸುವುದು. ಲೋಕದಲ್ಲಿ ಅನೇಕ ವಾದಿಗಳು ನಾನಾ ಪ್ರಕಾರಗಳಾಗಿ ಆತ್ಮಸ್ವರೂಪ ವಿಷಯದಲ್ಲಿ ತಮತಮಗೆ ತೋರಿದಂತೆ ಅನೇಕವಿಧ ವಿಪ್ರತಿಪತ್ತಿಯುಳ್ಳವರಾಗಿರುವ ಕಾರಣ ಅವಿವೇಕದಿಂದ ಯಾವುದೋ ಒಂದು ಪ್ರಕಾರವಾದ ಆತ್ಮತತ್ವವನ್ನು ಗ್ರಹಿಸಿದರೆ, ಆದರಿಂದ ಪುರು ಷಾರ್ಥವು ಸಿಗದೆಯೇ ಅನರ್ಥಕ್ಕೆ ಗುರಿಯಾಬೇಕಾಗಿ ಬರುವುದು. ಇದನ್ನು ತಪ್ಪಿ

ಯದಿದಂ ಸ್ಪರ್ಶನಂ ಸ್ಪಂದಂ ಕಿಂಚಿದ್ಯತ್ಸಂವಿದಾದ್ಯಪಿ ।
ತತ್ಸರ್ವಮಾತ್ಮಾ ಭಗವಾನ್ದೃಶ್ಯದರ್ಶನವರ್ಜಿತಃ　　॥ ೧೬ ॥

ನ ಸನ್ನಾಸನ್ನಸೌ ದೇವೋ ನಾಣುರ್ನಾಪಿ ಮಹಾನಸೌ ।
ನಾಪ್ಯೇತಯೋರ್ದ್ವಯೋರ್ಮಧ್ಯಂ ಸ ಏವೇದಂ ಚ ಸರ್ವತಃ　　॥ ೧೭ ॥

ಸುವ ಸಲುವಾಗಿ, ಶ್ರುತಿಗಳು ಆತ್ಮಸ್ವರೂಪವನ್ನು ವಿವೇಚನಪಡಿಸುವುದಕ್ಕೆ ಹೊರಟಿವೆ. ಅಷ್ಟೇ ಹೊರತು ಸರ್ವಥಾ ಅಪ್ರತ್ಯಕ್ಷವಾದ ಅಲೌಕಿಕವಾದ ಆತ್ಮಸ್ವರೂಪವನ್ನು ಪ್ರತಿಪಾದನೆಮಾಡಲು ಹೊರಟಿಲ್ಲ, ಎಂದು ತಿಳಿಯಬೇಕು. ಆದುದರಿಂದಲೇ "ನ ಧರ್ಮಜಿಜ್ಞಾಸಾಯಾಮಿವ ಶ್ರುತ್ಯಾದಯ ಏವ ಪ್ರಮಾಣಂ ಬ್ರಹ್ಮಜಿಜ್ಞಾಸಾಯಾಂ, ಕಿಂತುಶ್ರುತ್ಯಾದಯಃ ಅನುಭವಾದಯಶ್ಚಯಥಾ ಸಂಭವಂ ಇಹ ಪ್ರಮಾಣಂ. ಅನುಭವಾವಸ್ಯಾನತ್ವಾತ್ ಭೂತವಸ್ತು ವಿಷಯತ್ವಾಚ್ಚ, ಬ್ರಹ್ಮ ಜ್ಞಾನಸ್ಯ" ಎಂದು ಶ್ರೀ ಮಚ್ಛಂಕರಭಗತ್ಪಾದಾಚಾರ್ಯರು, ಸೂತ್ರಭಾಷ್ಯದ ಜನ್ಮಾದ್ಯಧಿಕರಣ ಭಾಷ್ಯದಲ್ಲಿ ಸ್ಪಷ್ಟಪಡಿಸಿರುವರು.

ಯತ್ಸಾಕ್ಷಾದಪರೋಕ್ಷಾದ್ಬ್ರಹ್ಮ ಅಯಮಾತ್ಮಾ ಬ್ರಹ್ಮಸರ್ವಾನುಭೂಃ ಬೃಹ ಇತ್ಯಾದಿ ಶ್ರುತಿಗಳು ಆತ್ಮನು ಸರ್ವಾನುಭವ ವೇದ್ಯನೆಂಬರ್ಥದಲ್ಲಿ ಪ್ರಮಾಣ.]

೧೬. ಬಾಹ್ಯಾಭ್ಯಂತರಗಳಾದ ಸಕಲ ವಿಷಯಗಳಲ್ಲಿ ಅಂತಃಕರಣವೃತ್ತಿ ರೂಪ ಸ್ಪಂದಪೂರ್ವಕವಾಗಿ ಸಾಕ್ಷಾತ್ತಾಗಿ ಉದ್ಭವಿಸುವ ಅರ್ಥಪ್ರಕಾಶನ ರೂಪವಾದ ಅಪರೋಕ್ಷ ಜ್ಞಾನವೂ ಮತ್ತು ಅನುಮಾನ, ಉಪಮಾನ, ಶಾಬ್ದ, ಅರ್ಥಾಪತ್ತಿ, ಅನುಪಲಬ್ಧಿ ಮುಂತಾದ ಪ್ರಮಾಣ ಜನ್ಯ ಜ್ಞಾನಾದಿಗಳೂ ಇವೆಲ್ಲವೂ, ದೃಶ್ಯವಾದ ವಿಷಯವನ್ನೂ ದರ್ಶನವಾದ ಅಂತಃಕರಣ ವೃತ್ತ್ಯುಪಾಧಿಯನ್ನೂ ವಿವರ್ಜನಮಾಡಿ ಬಿಡಲಾಗಿ ಪರಿಶಿಷ್ಟವಾದ, ನಿತ್ಯಾಪರೋಕ್ಷನೂ ಸರ್ವಾನುಭವಸಿದ್ಧನೂ ಸ್ವತಃಪ್ರಕಾಶನೂ ಭಗವಂತನೂ ಆಗಿರುವ ಆತ್ಮನೇ. (ಬೇರೊಂದಲ್ಲವು. ಎಂದರ್ಥ)

[" ಪ್ರತಿಬೋಧ ವಿದಿತಂ ಮತ ಮಮೃತತ್ವಂ ಹಿ ವಿಂದತೇ ," ಎಂಬ ಶ್ರುತಿಯು ಈ ಅರ್ಥದಲ್ಲಿ ಪ್ರಮಾಣ]

೧೭. ಸ್ವಪ್ರಕಾಶನಾದ ಆತ್ಮನು ಸತ್ತೂ ಅಲ್ಲ ಮತ್ತು ಅಸತ್ತೂ ಅಲ್ಲ.

ಸ ಏವ ಚೈವಂ ವದತಿ ಸ ಚ ವಕ್ತುಂ ನ ಯುಜ್ಯತೇ ।
ನ ತದನ್ಯದಿದಂ ತಾತ ಪಶ್ಯಾತ್ಮಾನಮನಾಮಯಂ ॥ ೧೮ ॥

ನಾತ್ಮಾಯಮಯಮಾತ್ಮೇತ್ಯಾತ್ಮಾ ಸಂಜ್ಞಾಭೇದ ಇತಿ ಸ್ವಯಂ ।
ತೇನೈವ ಸರ್ವಗತಯಾ ಶಕ್ತ್ಯಾ ಸ್ವಾತ್ಮನಿ ಕಲ್ಪಿತಃ ॥ ೧೯ ॥

ಸಂಸ್ಥಿತಃ ಸ ಹಿ ಸರ್ವತ್ರ ತ್ರಿಷು ಕಾಲೇಷು ಭಾಸ್ವರಃ ।
ಸೂಕ್ಷ್ಮತ್ವಾತ್ಸ್ವಮಹತ್ವಾಚ್ಚ ಕೇವಲಂ ನ ವಿಭಾವ್ಯತೇ ॥ ೨೦ ॥

ಅಣುವೂ ಅಲ್ಲ. ಮಹತ್ತೂ ಅಲ್ಲ. ಮತ್ತು ಸದಸತ್, ಅಣುಮಹತ್, ಎಂಬ ಈ ಎರಡೆರಡು ದೃಷ್ಟಿಗಳಿಗೂ ಮಧ್ಯವೂ ಅಲ್ಲ. ಸರ್ವದಿಕ್ಕುಗಳಲ್ಲಿಯೂ ಈ ಜಗತ್ತೆಲ್ಲವೂ ಆ ಆತ್ಮನೇ.

೧೮. ಅಪ್ಪಾ ರಾಮ, ಮತ್ತು ಆ ಆತ್ಮನೇ ಹೀಗೆ ಎಲ್ಲವನ್ನೂ ವಾಗಿಂದ್ರಿಯದ ಮೂಲಕ ಹೇಳುತ್ತಿರುವನು. ಆದರೆ ಆತ್ಮನು ಮಾತ್ರ ವಾಗಿಂದ್ರಿಯದಿಂದ ಹೇಳಲ್ಪಡಲು ಯೋಗ್ಯನಾಗಿಲ್ಲ. ಈ ವಾಗಾದಿ ಕರ್ಮೇಂದ್ರಿಯಗಳೂ ಆ ಇಂದ್ರಿಯಗಳಿಂದ ವ್ಯವಹರಿಸಲ್ಪಡತಕ್ಕ ಕರ್ಮಗಳೂ ಆತ್ಮನಿಗಿಂತ ಅನ್ಯವಾದವುಗಳಲ್ಲ. ನೀನು ಈ ರೀತಿಯಾಗಿ ನಿರುಪದ್ರವನಾದ ಆತ್ಮನನ್ನು ಸರ್ವದಾ ಸಾಕ್ಷಾತ್ಕರಿಸುವವನಾಗು. [ನ ತತ್ರ ಚಕ್ಷುರ್ಗಚ್ಛತಿ, ನ ವಾಕ್ ಗಚ್ಛತಿ ನೋಮನಃ ನ ವಿದ್ಮಃ, ನವಿಜಾನೀಮಃ, ಇತ್ಯಾದಿ ಮಂತ್ರವನ್ನೂ, ಮತ್ತು ಯದ್ವಾಚಾನಭ್ಯುದಿತಂ, ಯೇನವಾಗ ಭ್ಯುದ್ಯತೇ, ಇತ್ಯಾದಿ ಮಂತ್ರವನ್ನೂ ಪರಾಮರ್ಶಿಸಿರಿ. ಕೇನೋಪನಿಷತ್ ಮಂತ್ರ ೩-೪.]

೧೯. "ನಾತ್ಮಾ ಅಯಂ" (ಇದು ಅನಾತ್ಮವು) "ಅಯಂ ಆತ್ಮಾ" (ಇದು ಆತ್ಮವು.) ಎಂಬೀ ಪ್ರಕಾರವಾದ ಆತ್ಮಾನಾತ್ಮ ನಾಮರೂಪ ವಿಭಾಗವೆಂಬ ಸಂಜ್ಞಾ ಭೇದವೂ ಕೂಡ ಆತ್ಮನಿಂದಲೇ, ತಾನಾಗಿಯೇ ಸರ್ವಗತವಾದ ಸ್ವಕೀಯ ಅಜ್ಞಾನ ಶಕ್ತಿಯ ಮೂಲಕ ಕಲ್ಪಿತ ವಾಗಿರುವುದು.

[ಅದು ಅಜ್ಞಾನಕಲ್ಪಿತವಾದ ಕಾರಣ ಬಾಧ್ಯವಾದುದೆಂಬುದು ಉಪಪನ್ನವೇ ಸರಿ ಎಂದರ್ಥ.]

೨೦. ಆತ್ಮನು ಸ್ವಪ್ರಕಾಶನಾಗಿ ಸರ್ವ ಕಾಲಗಳಲ್ಲಿಯೂ, ನಿತ್ಯಾಪರೋಕ್ಷ

ಸತ್ಸ್ವನಂತಪದಾರ್ಥೇಷು ಜೀವತ್ವೇನಾಭಿಬಿಂಬತಿ ।
ಆತ್ಮಾ ಪುರ್ಯಷ್ಟಕಾದರ್ಶೇ ಸ್ವಭಾವವಶತಃ ಸ್ವತಃ ॥ ೨೧ ॥

ಪುರ್ಯಷ್ಟಕೋದಯಾದೇವ ಸ್ವಯಮಾತ್ಮಾನುಭೂಯತೇ ।
ಸರ್ವದಾ ಸರ್ವಸಂಸ್ಥಃ ಖೇ ಘನಾಸ್ಪಂದಾದಿವಾನಿಲಃ ॥ ೨೨ ॥

ಚಿದಾತ್ಮಾ ಸರ್ವಗೋ ವ್ಯಾಪೀ ನ ಕ್ವಚಿನ್ನಾಮ ಸಂಸ್ಥಿತಃ ।
ಯದ್ವತ್ಸರ್ವಪದಾರ್ಥಾನಾಂ ಸತ್ತಾ ತದ್ವನ್ಮಹೇಶ್ವರಃ ॥ ೨೩ ॥

ನಾಗಿ ಪರಿಪೂರ್ಣನಾಗಿರುವನು. ಆದರೂ ಅವನು ಸೂಕ್ಷ್ಮವಾಗಿಯೂ ಅತ್ಯಂತ ಮಹತ್ತಾಗಿಯೂ ಇರುವ ಕಾರಣ, ಕೇವಲ ಸ್ಥೂಲ ವಸ್ತುಗಳಲ್ಲಿ ಆಸಕ್ತವಾದ ಬುದ್ಧಿಯುಳ್ಳ ಅಜ್ಞ ಜನರ ಭಾವನೆಗೆ ಸಿಕ್ಕುವವನಾಗಿಲ್ಲ. ಅಂದರೆ ಗೋಚರಿಸ ತಕ್ಕವನಾಗಿಲ್ಲ.

೨೧. ಸೃಷ್ಟಿ ಕ್ರಮದಿಂದ ಉತ್ಪನ್ನವಾದ ಭೋಗ್ಯ ಭೋಗ ಶರೀರ ಮುಂತಾದ ಅನೇಕ ಪದಾರ್ಥಗಳು ಅನಂತವಾಗಿದ್ದರೂ ಕೂಡ, ಆತ್ಮನು ಸ್ವಭಾವ ವಶದಿಂದಲೇ ಸ್ವತ ಏವ ಪುರ್ಯಷ್ಟಕವೆಂಬ ಕನ್ನಡಿಯೊಳಗೆ ಜೀವಭಾವದಿಂದ ಪ್ರತಿ ಬಿಂಬಿಸುವನು.

[ಭೂತಗಳು, ಇಂದ್ರಿಯಗಳು, ಮನಸ್ಸು, ಬುದ್ಧಿ, ವಾಸನಾ, ಕರ್ಮ, ಪ್ರಾಣ, ಅವಿದ್ಯೆ ಈ ಎಂಟರ ಸಮುದಾಯಕ್ಕೆ ಪುರ್ಯಷ್ಟಕವೆಂದು ಸಂಜ್ಞೆ.]

೨೨. ವಾಯುವು ಆಕಾಶದಲ್ಲಿ ಎಲ್ಲ ಕಡೆಗಳಲ್ಲಿಯೂ ಸರ್ವದಾ ಇದ್ದುಕೊಂಡಿದ್ದರೂ ಕೂಡ (ಮೂರ್ತ ವಸ್ತು) ಸಾಕಾರವಾದ ಬೀಸಣಿಗೆ ಮುಂತಾದವುಗಳಿಂದ ಬೀಸಿಕೊಂಡಾಗ ಮಾತ್ರವೇ ಅದು ಅನುಭವಗೋಚರವಾಗುವಂತೆ ಆತ್ಮನು ಕಾಲ ತ್ರಯಗಳಲ್ಲಿ ನಿರಂತರವೂ ಸರ್ವತ್ರ ಇದ್ದುಕೊಂಡಿರುವವನಾದರೂ ಈ ಪುರ್ಯಷ್ಟಕ ದೊಳಗೆ ಪ್ರತಿಬಿಂಬಿತನಾಗಿ ಉದಯವಾಗುವುದರಿಂದಲೇ ಆಗಲೇ ಸ್ವತಃ "ಅಹಂ" (ನಾನು) ಎಂಬುದಾಗಿ ಅಭಿವ್ಯಕ್ತವಾದ ಸ್ವರೂಪವುಳ್ಳವನಾಗಿ ಅನುಭವಗೋಚರ ನಾಗುವನು.

೨೩. ಸಚ್ಚಿದ್ರೂಪನಾದ ಪರಮೇಶ್ವರನು ಸರ್ವಗತನೂ, ಸರ್ವವ್ಯಾಪಿಯೂ ಆಗಿರುವಂತೆಯೇ ಪುರ್ಯಷ್ಟಕವೆಂಬ ಉಪಾಧಿಯಲ್ಲಿ ಪ್ರತಿಬಿಂಬಿಸಿ ಜೀವ ಭಾವಾ

ಸತಿ ಪುರ್ಯಷ್ಟಕೇ ತಸ್ಮಿಞ್ಜೀವಃ ಸ್ಫುರತಿ ನೋಪಲೇ ।
ಸತಿ ವಾಯಾವಿವ ರಜಃ ಸತಿ ದೀಪ ಇವೇಕ್ಷಣಂ ॥ ೨೪ ॥

ಇಯಂ ಪುರ್ಯಷ್ಟಕೇ ಸ್ವೇಚ್ಛಾ ಸ್ವಾತ್ಮನ್ಯೇವಾತ್ಮನಿ ಸ್ಥಿತೇ ।
ಸತಿ ಸ್ಫುರತ್ಯಭ್ಯುದಿತೇ ಭಾನಾವಿವ ಜನೈಷಣಾ ॥ ೨೫ ॥

ಪನ್ನನಾದರೂ ಸ್ವಭಾವತಃ ಸಚ್ಚಿದ್ರೂಪನಾದ ಬಿಂಬ ಭೂತ ಪರಮೇಶ್ವರನಿಗಿಂತ ಅಭಿನ್ನನಾದ ಆತ್ಮನೂ ಸ್ವಸತ್ತೆಯಿಂದಲೇ ಸರ್ವ ಪದಾರ್ಥಗಳಿಗೂ ಸತ್ತೆಯನ್ನು ಉಂಟುಮಾಡುತ್ತಾ ಸರ್ವಗತನಾಗಿಯೂ, ಸರ್ವವ್ಯಾಪಿಯಾಗಿಯೂ ಇರುವನು. ಇವನು ಎಲ್ಲಿಯೋ ದೇಹದಲ್ಲಿ ಮಾತ್ರವೇ ಇರತಕ್ಕವನಾಗಿಲ್ಲ.

೨೪. ವಾಯುವಿರುವ ಸ್ಥಳದಲ್ಲಿ ಮಾತ್ರವೇ ರಜಸ್ಸೂ (ಧೂಳಿಯೂ) ಮತ್ತು ದೀಪವಿರುವ ಕಡೆಯಲ್ಲಿ ಮಾತ್ರವೇ ಕಣ್ಣೂ ಪ್ರಸರಿಸುವಂತೆ (ಸ್ಫುರಿಸುವಂತೆ) ಪುರ್ಯಷ್ಟಕವಿದ್ದರೇನೇ ಅದರಲ್ಲಿ ಆತ್ಮನು ಸ್ಫುರಿಸುವನು. ಕಲ್ಲಿನಲ್ಲಿ ಎಂದಿಗೂ ಸ್ಫುರಿಸುವುದಿಲ್ಲ.

೨೫. ಸೂರ್ಯನು "ಉದಯಿಸಿ ಗಗನ ಮಂಡಲದಲ್ಲಿ ವಿರಾಜಿಸುತ್ತಿರಲಿಕ್ಕಾಗಿ ಹೇಗೆ ಸಮಸ್ತ ಜನಗಳಿಗೂ "ಆಯಾ ಕೆಲಸಗಳನ್ನು ಮಾಡಬೇಕು. ಅವುಗಳ ಫಲ ವನ್ನು ಅನುಭವಿಸಬೇಕು." ಎಂಬೀ ಪ್ರಕಾರವಾದ ಅಭಿಲಾಷೆಯು ಸ್ಫುರಿಸುವುದೋ ಹಾಗೆಯೇ ನಿತ್ಯ ನಿರತಿಶಯಾನಂದನೂ ಸ್ವಾತ್ಮಭೂತನೂ ಆದ ಪರಮಾತ್ಮನು ಪರಮ ಪ್ರೇಮಾಸ್ಪದನಾಗಿದ್ದುಕೊಂಡಿರಲಿಕ್ಕಾಗಿಯೇ ಈ ಪುರ್ಯಷ್ಟಕದಲ್ಲಿ ಪ್ರೀತಿಯೂ ವಿಚಿತ್ರವಾದ ಭೋಗೇಚ್ಛೆಯೂ ಕೂಡ ಸ್ಫುರಿಸುವುವು.

[ಆತ್ಮನ ಸ್ತುಕಾಮಾಯ ಸರ್ವಂ ಪ್ರಿಯಂ ಭವತಿ ಇತ್ಯಾದಿ ಬೃಹದಾರಣ್ಯಕ ಶ್ರುತಿಯು. "ಆತ್ಮನು ಸರ್ವ ವ್ಯವಹಾರಗಳಿಂದಲೂ ಅಸಂಸ್ಪೃಷ್ಟನಾಗಿ ದೂರ ವಾಗಿರುವವನಾದರೂ, ಪ್ರಿಯಾ ಪ್ರಿಯಾದಿ ಸರ್ವ ವ್ಯವಹಾರ ನಿರ್ವಾಹಕನಾಗಿರು ವನು" ಎಂಬರ್ಥವನ್ನು ಬೋಧಿಸುವುದು.]

ಯದಿ ಸೂರ್ಯೇ ಸ್ಥಿತೇ ವ್ಯೋಮ್ನಿ ತಾದೃಶೋಚಿತಸಂಸ್ಥಿತಿಃ ।
ನಶ್ಯತಿ ವ್ಯವಹಾರೋಽಯಂ ಭಾಸ್ಕರೇ ತತ್ಕಿಮಾಗತಂ ॥ ೨೬ ॥

ಯದ್ಯಾತ್ಮನಿ ಸ್ಥಿತೇ ದೇವೇ ತತ್ಸತ್ತಾ ಲಬ್ಧಸಂಸ್ಥಿತಿಃ ।
ದೇಹೋ ನಾಶಮುಪಾಯಾತಿ ತತ್ಕಿಂ ನಷ್ಟಮಿಹಾತ್ಮನಿ ॥ ೨೭ ॥

ನ ಜಾಯತೇ ನ ಮ್ರಿಯತೇ ನಾದತ್ತೇ ನಾಭಿವಾಂಛತಿ ।
ನ ಮುಕ್ತೋ ನ ಚ ಬದ್ಧೋಽಯಮಾತ್ಮಾ ಸರ್ವಸ್ಯ ಸರ್ವದಾ ॥ ೨೮ ॥

ಆತ್ಮಾಪ್ರಬೋಧಾಭ್ಯುದಿತಾ ನಿರಾತ್ಮನ್ಯಾತ್ಮತಾಂ ಗತಾ ।
ಸರ್ಪರಜ್ಜುಭ್ರಮಾಕಾರಾ ಭ್ರಾಂತಿದುಃಖಾಯ ಕೇವಲಂ ॥ ೨೯ ॥

೨೬-೨೭. ಸೂರ್ಯನು ಆಕಾಶದಲ್ಲಿ ವಿರಾಜಮಾನನಾಗಿರಲು ಪ್ರಪಂಚದಲ್ಲಿ ಜನಗಳು ಇಚ್ಛಿಸುವ ಫಲಗಳಿಗೆ ಅನುರೂಪವಾದ ಸ್ಥಿತಿಯುಳ್ಳ ಈ ಪ್ರಾಪಂಚಿಕ ವ್ಯವಹಾರವು ಒಂದುವೇಳೆ ನಷ್ಟವಾಗಿ ನಿಂತುಹೋದ ಮಾತ್ರದಿಂದ ಸೂರ್ಯನಿಗೆ ಯಾವ ವಿಧವಾದ ನಷ್ಟವಾಗಲಿ, ಹಾನಿಯಾಗಲಿ ಉಂಟಾಗುವುದು ? ಇದರಂತೆಯೇ ಸ್ವಪ್ರಕಾಶನಾದ ಪರಮಾತ್ಮನು ಸದಾ ನಿತ್ಯ ಶುದ್ಧ ಬುದ್ಧಮುಕ್ತನಾಗಿ ಇದ್ದುಕೊಂಡಿರಲು, ಆ ಆತ್ಮ ಸತ್ತೆಯಿಂದಲೇ ಜೀವಿಸಿಕೊಂಡಿರತಕ್ಕ ದೇಹವು ನಾಶ ಹೊಂದಿದ್ದೇ ಆದರೆ ಅಷ್ಟುಮಾತ್ರದಿಂದ ಆ ಪರಮಾತ್ಮನಿಗೆ ಯಾವ ನಷ್ಟವು ಸಂಭವಿಸಿದಂತಾಗುವುದು ? (ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ ಅವ್ಯಕ್ತ ನಿಧನಾನ್ಯೇವ ತತ್ರಕಾ ಪರಿದೇವನಾ. ಗೀತಾ ೨-೨೮.)

೨೮. ಸರ್ವಕ್ಕೂ ಆತ್ಮನಾಗಿರುವ ಈ ದೇಹಿಯು ಸರ್ವದಾ ದೇಹದೊಂದಿಗೆ ಹುಟ್ಟುವವನೂ ಅಲ್ಲ. ಮತ್ತು ಸಾಯುವವನೂ ಅಲ್ಲ. ಈ ದೇಹಕ್ಕೋಸ್ಕರ ಯಾವುದನ್ನೂ (ಪ್ರಾಪ್ತವಾದುದನ್ನು) ಪರಿಗ್ರಹಿಸುವುದೂ ಇಲ್ಲ. ಮತ್ತು ಅಪ್ರಾಪ್ತವಾದುದನ್ನು ಯಾವುದನ್ನೂ ಅಪೇಕ್ಷಿಸುವುದೂ ಇಲ್ಲ. ಬದ್ಧನಾಗಿಯೂ ಇಲ್ಲ. ಮತ್ತು ಮುಕ್ತನೆನ್ನಿಸುವುದೂ ಇಲ್ಲ.

(ನ ನಿರೋಧಃ ನಚೋತ್ಪತ್ತಿಃ ನ ಬದ್ಧೋ ನ ಚ ಸಾಧಕಃ । ನಮುಮುಕ್ಷುಃ ನವೈಮುಕ್ತಃ ಇತ್ಯೇಷಾ ಪರಮಾರ್ಥತಾ. ಮಾಂಡೂಕ್ಯ ಕಾರಿಕೆ.)

೨೯. ಇಂತಹ ನಿತ್ಯಶುದ್ಧ ಬುದ್ಧ ಮುಕ್ತಾತ್ಮನ ತಾತ್ತ್ವಿಕವಾದ ಸ್ವರೂಪ

ಅನಾದಿತ್ವಾನ್ನ ಜಾತೋಽಯಮಜಾತತ್ವಾನ್ನ ನಶ್ಯತಿ ।
ಆತ್ಮಾತ್ಮವ್ಯತಿರಿಕ್ತಂ ತು ನಾಭಿವಾಂಛತ್ಯಸಂಭವಾತ್ ॥ ೩೦ ॥

ದಿಕ್ಕಾಲಾದ್ಯನವಚ್ಛೇದಾನ್ನ ಬದ್ಧೋಽಯಂ ಕದಾಚನ ।
ಬಂಧಾಭಾವೇ ಕ್ವ ಮುಕ್ತಿಃ ಸ್ಯಾದಮೋಕ್ಷಸ್ತೇನ ಸಂಸ್ಥಿತಿಃ ॥ ೩೧ ॥

ಜ್ಞಾನವನ್ನು ಪಡೆಯದೇ ಇರುವುದರಿಂದ, ರಜ್ಜುವಿನ ಸ್ವರೂಪ ಜ್ಞಾನವಿಲ್ಲದಿರುವಾಗ, ಸರ್ಪವಲ್ಲದ ರಜ್ಜುವಿನಲ್ಲಿ ಅಜ್ಞಾನದಮೂಲಕ ಸರ್ಪಭ್ರಾಂತಿಯು ಉದಯಿಸುವಂತೆ ಅನಾತ್ಮ ದೇಹೇಂದ್ರಿಯಾದಿಗಳಲ್ಲಿ ಆತ್ಮಭಾವವನ್ನು ಮಾಡುವ ಮಹಾಮೋಹಮಯವಾದ ಭ್ರಾಂತಿಯು ಮಿಥ್ಯೆಯಾಗಿಯೇ ಉದಯಿಸುವುದು. ಈ ಭ್ರಾಂತಿಯು ಮಹಾದುಃಖ ಪರಂಪರೆಗೆ ಮಾತ್ರವೇ ಕಾರಣವಾಗಿ ಸರ್ವಾನರ್ಥಕಾರಿಯಾದುದು.

೩೦. ಆತ್ಮನು ಅನಾದಿಯಾದ ಕಾರಣ. (ಆದಿಯಿಲ್ಲದವನು.) ಜನನವನ್ನು ಹೊಂದತಕ್ಕವನಲ್ಲ ಅಜಾತನಾಗಿರುವ ಕಾರಣವೇ, ಮರಣವನ್ನೂ ಹೊಂದತಕ್ಕವನೂ ಅಲ್ಲ. (ಯಾವುದು ಹುಟ್ಟುವುದೋ ಅದು ಸಾಯಲೇಬೇಕು. ಹುಟ್ಟೇ ಇಲ್ಲದೆ ಹೋದ ಬಳಿಕ ಸಾವೂ ಇಲ್ಲವೇ ಇಲ್ಲ. ಹೀಗೆ ಜನನ ಮರಣಗಳು ಅನ್ಯೋನ್ಯಾಶ್ರಯಗಳು. ಜಾತಸ್ಯಹಿ ಧ್ರುವೋಮೃತ್ಯುಃ ಧ್ರುವಂ ಜನ್ಮಮೃತಸ್ಯ ಚ ಎಂದು ಗೀತೆಯು ಹೇಳುವುದು. ಗೀತಾ ೨.೩೭:) ಮತ್ತು ಆತ್ಮವ್ಯತಿರಿಕ್ತವಾದ ವಸ್ತುವಿರುವುದೇ ಅತ್ಯಂತಾಸಂಭವವಾದ ಕಾರಣ, ಆತ್ಮನು ಯಾವುದೊಂದನ್ನೂ ಅಪೇಕ್ಷಿಸುವವನಾಗಿಯೂ ಇಲ್ಲವು.

೩೧. ಈ ಆತ್ಮನು ಕಾಲದೇಶಾದಿಗಳಿಂದ ಸರ್ವದಾ ಅಪರಿಚ್ಛಿನ್ನನಾಗಿ, ಸರ್ವತ್ರ ಪರಿಪೂರ್ಣನಾಗಿರುವ ಕಾರಣ, ಇವನು ಎಂದಿಗೂ ಎಲ್ಲಿಯೂ ಬದ್ಧನಲ್ಲವೇ ಅಲ್ಲ. ಬಂಧವೆಂಬುದೇ ಸರ್ವಥಾ ಇಲ್ಲವಾಗಿ (ಅಪ್ರಸಿದ್ಧವಾಗಿ) ಬಿಟ್ಟಾಗ ಇನ್ನು ಮೋಕ್ಷವೆಂಬ ವ್ಯವಹಾರವು ಎಲ್ಲಿರುವುದು.? ಹೀಗಿರುವಕಾರಣ ಆತ್ಮನು ಮೋಕ್ಷವಿಲ್ಲದವನೇ ಆಗಿರುವನು ಅಂದರೆ ಸ್ವಭಾವತಃ ನಿತ್ಯ ಸಿದ್ಧಮುಕ್ತನಾಗಿಯೇ ಇರುವನು.

(ಈ ಬಂಧ ಮೋಕ್ಷ ರೂಪ ವ್ಯವಹಾರಗಳೆಲ್ಲವೂ ವ್ಯವಹಾರಕ್ಕೋಸ್ಕರ ಕಲ್ಪಿತವಾದವುಗಳೇ ಹೊರತು ವಾಸ್ತವವಾದವುಗಳಲ್ಲವೆಂದು ತಿಳಿಯಬೇಕು.)

ಏವಂ ಗುಣವಿಶಿಷ್ಟೋಽಯಮಾತ್ಮಾ ಸರ್ವಸ್ಯ ರಾಘವ ।
ಅವಿಚಾರವಶಾನ್ಮೂಢೋ ಲೋಕೋಽಯಂ ಪರಿರೋದತಿ ॥ ೩೨ ॥

ಸಮ್ಯಗಾಲೋಕಿತಾಶೇಷಪೂರ್ವಾಪರಜಗತ್ಕ್ರಮಃ ।
ಮಾ ಶೋಕಂ ಗಚ್ಛ ಸುಮತೇ ಮೌರ್ಖ್ಯೋಪಗತಲೋಕವತ್ ॥ ೩೩ ॥

ದ್ವೇ ಏವ ಕಲನೇ ತ್ಯಕ್ತ್ವಾ ಮೋಕ್ಷಬಂಧಾತ್ಮಿಕೇ ಯಥಾ ।
ವಿದುಷಾ ವ್ಯವಹರ್ತವ್ಯಂ ಯಂತ್ರೇಣೇವಾತ್ಮಮೌನಿನಾ ॥ ೩೪ ॥

---

೩೨. ಇಂತಹ ನಿತ್ಯ ಶುದ್ಧ ಬುದ್ಧ ಮುಕ್ತ ಸ್ವಭಾವನಾದ ಆತ್ಮನು ಸಮಸ್ತ ಜಗತ್ತಿಗೂ ಆತ್ಮನಾಗಿ ಸದಾಸಾಕ್ಷಿ ಚೈತನ್ಯ ರೂಪನಾಗಿರುವನು. ಅಯ್ಯ ರಾಘವ, ಆದರೂಕೂಡ, ಪ್ರಪಂಚದಲ್ಲಿ ಸಾಧಾರಣವಾಗಿ ಅಜ್ಞಾನಿಗಳು ಮೋಹಪರವಶರಾಗಿ, ಸ್ವಾತ್ಮಸ್ವರೂಪವನ್ನು ಮರೆತುಬಿಟ್ಟಿರುವರು. ಮತ್ತು ಸ್ವಾತ್ಮತತ್ವ ಜ್ಞಾನಲಾಭಕ್ಕಾಗಿ ವಿಚಾರಮಾಡಬೇಕೆಂಬ ಸಂಕಲ್ಪವನ್ನೂ ಮಾಡದೆಯೇ, ಸ್ವಾಸಂಬಂಧಗಳಾದ ನಾನಾ ಸಾಂಸಾರಿಕ ಕ್ಲೇಶಗಳನ್ನು ಅನುಭವಿಸುತ್ತಾ ವ್ಯರ್ಥವಾಗಿ ಸಂತತವೂ ಗೋಳಿಡುತ್ತಿರುವರು.

೩೩. ಅಯ್ಯ, ಪ್ರಶಸ್ತವಾದ ಮತಿಯುಳ್ಳ ರಾಮ, ನೀನು ಈ ಜಗತ್ತಿನ ಸಮಸ್ತವಾದ ಪೂರ್ವಾಪರ ಸಂದರ್ಭಗಳನ್ನು ಚೆನ್ನಾಗಿ ಪರ್ಯಾಲೋಚಿಸಿ, ಯಥಾಸ್ಥಿತವಾಗಿ ಇದೆಲ್ಲವೂ ಅತ್ಯಂತಾಸತ್ಯವಾದುದೆಂದು ನಿಶ್ಚಿತವಾಗಿ ತಿಳಿದುಕೊಂಡವನಾಗಿ, ಮೂರ್ಖರಾದ ಸಾಮಾನ್ಯ ಜನರು ಶೋಕಿಸುವ ತೆರದಲ್ಲಿ, ಇನ್ನುಮೇಲೆ ಇದರಿಂದ ಶೋಕವನ್ನು ಪಡೆಯದೆ ಸ್ವಸ್ಥನಾಗಿರು.

೩೪. ಒಂದು ಯಂತ್ರವು ಗಿರ್ರನೆ ಸುತ್ತುತ್ತಾ ಕೆಲಸಮಾಡುತ್ತಿರುವಾಗ, ಅದರ ಹತ್ತಿರ ನಿಂತಿರುವ ಮನುಷ್ಯನು: ಸಾನ್ನಿಧ್ಯ ಮಾತ್ರದಿಂದ ಅವನೇ ಕೆಲಸಮಾಡುತ್ತಿರುವವನಂತೆ ಕಂಡುಬಂದರೂ ಸ್ವತಃ ತನ್ನ ಪಾಡಿಗೆ ತಾನೇ ಯಾವದೊಂದು ಕೆಲಸವನ್ನೂ ಮಾಡದೆ ಇರುವವನಾಗಿಯೇ ಮೌನಿಯಾಗಿ ಹೇಗೆ ವ್ಯವಹರಿಸುವನೋ, ಹಾಗೆ ಆತ್ಮತತ್ವಜ್ಞನಾದ ಪಂಡಿತನು, ದೇಹವು ಕೆಲಸಮಾಡುತ್ತಿರುವಾಗ, ಅವನೇ ಕೆಲಸಮಾಡುತ್ತಿರುವನೆಂದು ಇತರರಿಗೆ ತೋರಿದರೂ, ಅವುಗಳಲ್ಲಿ ಅಹಂಭಾವ ಮಮಭಾವಗಳನ್ನು ಇಡದೆ, ಸ್ವತಃ ತಾನು ಕಾಮಾದಿ ಸರ್ವವ್ಯಾಪಾರಶೂನ್ಯನಾಗಿದ್ದುಕೊಂಡು ಬಂಧ ಮೋಕ್ಷಗಳೆಂಬ ಎರಡುವಿಧ ಕಲ್ಪನೆಗಳನ್ನೂ

ನ ಮೋಕ್ಷೋ ನಭಸಃ ಪೃಷ್ಠೇ ನ ಪಾತಾಲೇ ನ ಭೂತಲೇ ।
ಮೋಕ್ಷೋ ಹಿ ಚೇತೋ ವಿಮಲಂ ಸಮ್ಯಗ್ಜ್ಞಾನವಿಬೋಧಿತಂ ॥ ೩೫ ॥

ಸಕಲಾಶಾಸ್ವಸಂಸಕ್ತ್ಯಾ ಯತ್ಸ್ವಯಂ ಚೇತಸಃ ಕ್ಷಯಃ ।
ಸ ಮೋಕ್ಷನಾಮ್ನಾ ಕಥಿತಸ್ತತ್ವಜ್ಞೈರಾತ್ಮದರ್ಶಿಭಿಃ ॥ ೩೬ ॥

ಯಾವತ್ಪ್ರಬೋಧೋ ವಿಮಲೋ ನೋದಿತಸ್ತಾವದೇವ ಸಃ ।
ಮೌಖ್ಯಾರ್ದ್ದೀನತಯಾ ರಾಮ ಭಕ್ತ್ಯಾ ಮೋಕ್ಷೋಭಿವಾಂಛ್ಯತೇ ॥ ೩೭ ॥

ಪರಂ ಪ್ರಬೋಧಮಾಸಾದ್ಯ ಚಿತ್ತೇತ್ವ ಚಿತ್ತತಾಂ ಗತೇ ।
ದಶ ಮೋಕ್ಷಾ ನ ವಾಂಛ್ಯಂತೇ ಕಿಮುತೈಕೋ ಹಿ ಮೋಕ್ಷಕಃ ॥ ೩೮ ॥

ಪರಿತ್ಯಾಗಮಾಡಿ, ಪ್ರಪಂಚದಲ್ಲಿ ಅನಾಸಕ್ತನಾಗಿ ದೇಹದಿಂದ ವ್ಯವಹಾರ ಮಾಡಿಕೊಂಡಿರಬೇಕು.

೩೫. ಮೋಕ್ಷವೆಂಬುದು ಸ್ವರ್ಗಲೋಕದಲ್ಲಿಯೂ ಇಲ್ಲ, ಪಾತಾಳದಲ್ಲಿಯೂ ಇಲ್ಲ ಮತ್ತು ಭೂಮಿತಲದಲ್ಲಿಯೂ ಇಲ್ಲ. ಯಥಾರ್ಥವಾದ ಆತ್ಮತತ್ವ ಜ್ಞಾನದಿಂದ ಕೇವಲ ಚಿದ್ರೂಪವಾಗಿ ಪರಿಣತವಾದ ಮತ್ತು ಅವಿದ್ಯಾಕಾಮಾದಿ ಸರ್ವಮಲರಹಿತ ರಾದ ಮನಸ್ಸೇ ನಿಜವಾಗಿ ಮೋಕ್ಷವೆನ್ನಿಸುವುದು.

೩೬. ಸ್ಪೃಹಣೀಯಗಳಾದ ಸಮಸ್ತ ವಿಷಯಗಳಲ್ಲಿಯೂ ಸುತರಾಂ ಆಸಕ್ತಿಯನ್ನಿಡದ ಮನಸ್ಸು ತಾನಾಗಿಯೇ ಕ್ರಮೇಣ, ಆತ್ಮತತ್ವಜ್ಞಾನ ರೂಪ ವೃತ್ತಿಯ ದೆಸೆಯಿಂದ, ನಾಶವಾಗಿ ಹೋಗಿಬಿಡುವುದು ಯಾವುದುಂಟೋ, ಅದನ್ನೇ ಆತ್ಮಸಾಕ್ಷಾತ್ಕಾರ ಮಾಡಿಕೊಂಡಿರುವ ತತ್ತ್ವಜ್ಞರು ಮೋಕ್ಷವೆಂಬ ಹೆಸರಿನಿಂದ ಕರೆಯುವರು.

(ಮನೋನಾಶವೇ ಮೋಕ್ಷವೆಂದರ್ಥ)

೩೭. ಅಯ್ಯ ರಾಮ, ಎಲ್ಲಿಯವರೆಗೆ ಅತಿನಿರ್ಮಲವಾದ ಆತ್ಮತತ್ತ್ವ ಜ್ಞಾನವು ಉದಯಿಸಲಿಲ್ಲವೋ, ಅದುವರೆಗೆ ಮಾತ್ರವೇ ಸಾಧಕನು ತನ್ನ ಮೂಢ ತನದ ಮೂಲಕ ಅತಿದೀನನಾಗಿ, ಅತ್ಯಂತ ಭಕ್ತಿಯೊಡನೆ ಆ ಮೋಕ್ಷವನ್ನು ಬಯಸುವನು.

೩೮. ಯಾವಾಗ ಸಾಧಕನ ಚಿತ್ತವು (ಮನಸ್ಸು) ಪ್ರಶಸ್ತವಾದ ಆತ್ಮತತ್ತ್ವ

ಅಯಂ ಮೋಕ್ಷಸ್ತ್ವಯಂ ಬಂಧಃ ಪೇಲವಾಂ ಕಲನಾಮಿತಿ ।
ಪರಿತ್ಯಜ್ಯ ಮಹಾತ್ಯಾಗೀ ಸತ್ವಮೇವ ಭವಾಭವ ॥ ೩೯ ॥

ಪರಿಗಲಿತವಿಕಲ್ಪನಾಂ ಪ್ರಯಾತಃ ।
ಸಗರಸುತೌಘನಿಖಾತನೇಖಲಾಂಕಂ ॥
ಅವನಿವಲಯಮಂತರಸ್ತಸಂಗ ।
ಶ್ಚಿರಮನುಪಾಲಯ ಸರ್ವದೋದಿತಶ್ರೀಃ ॥ ೪೦ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷೂ ಪಶಮ ಪ್ರಕರಣೇ "ಸ್ವಾತ್ಮವಿಚಾರೋ" ನಾಮ ತ್ರಿಸಪ್ತತಿತಮಃ ಸರ್ಗಃ

ಜ್ಞಾನವನ್ನು ಪಡೆದು, ಪಾರಮಾರ್ಥಿಕ ಚಿನ್ಮಾತ್ರ ಸ್ವಾತ್ಮರೂಪವನ್ನು ಹೊಂದಿಬಿಡುವುದೋ ಆಗ, ಸ್ವಾತ್ಮವ್ಯತಿರಿಕ್ತಗಳಾದ ಹತ್ತು ಮೋಕ್ಷಗಳು ಒಂದುವೇಳೆ ಇದ್ದರೂ ಕೂಡ ಅವುಗಳನ್ನು ಅಪೇಕ್ಷಿಸುವುದಿಲ್ಲ. ಇನ್ನು ಈ ಒಂದೇ ಒಂದಾದ ಅಲ್ಪ ಮೋಕ್ಷವನ್ನು ಬಯಸುವುದೇ ಇಲ್ಲವೆಂದು ಬೇರೆ ಹೇಳಬೇಕಾದ ಅವಶ್ಯಕತೆಯೇನಿರುವುದು. ?

(ಅದು ಕೈಮುತಿಕ ನ್ಯಾಯ ಸಿದ್ಧವೆಂದರ್ಥ.)

೩೯. ಅಯ್ಯ ಅಸಂಸಾರಿಯಾದ ರಾಮ, ಇದು ಮೋಕ್ಷ, ಅದು ಬಂಧ ವೆಂಬೀ ಅತಿತುಚ್ಛವಾದ ಭ್ರಾಂತಿ ಕಲ್ಪನೆಯನ್ನು ಸಂಪೂರ್ಣವಾಗಿ ಬಿಟ್ಟು ಬಿಟ್ಟು, ಮಹಾತ್ಯಾಗ ಮಾಡಿದವನಾಗಿ, ನೀನೇ ಆ ಮೋಕ್ಷವಾಗಿರು.

೪೯. ಅಯ್ಯ ರಾಮಚಂದ್ರ, ನೀನು ಸಮಸ್ತವಿಕಲ್ಪ ಕಲ್ಪನೆಗಳನ್ನು ಪರಿತ್ಯಜಿಸಿ ನಿರ್ವಿಕಲ್ಪ ಸ್ಥಿತಿಯನ್ನು ಪಡೆದವನಾಗಿ, ಸರ್ವದಾ ಉದಯಿಸಿ ಪರಿನಿಷ್ಠಿತವಾದ ಜ್ಞಾನವೈರಾಗ್ಯ ಸಂಪತ್ತಿಯಿಂದ ಸಂಪನ್ನನಾಗಿ, ಚತುಸ್ಸಾಗರಪರ್ಯಂತವೂ ಅತಿವಿಸ್ತಾರವಾಗಿರುವ ಈ ಭೂಮಂಡಲವನ್ನು ಚಿರಕಾಲ, ಅಂತಸ್ಸಂಗರಹಿತನಾಗಿ ಪರಿಪಾಲಿಸುತ್ತಿರುವನಾಗು. ಆದರೂ, ನೀನು ಅಂತಸ್ಸಂಗ ಶೂನ್ಯನಾಗಿರುವ ಕಾರಣ, ನಿನಗೆ ರಾಜ್ಯಪಾಲನಾದಿ ವ್ಯವಹಾರವು ಎಂದಿಗೂ ದೋಷಾವಹವಾಗುವುದಿಲ್ಲ.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಸ್ವಾತ್ಮವಿಚಾರವೆಂಬ" ಎಪ್ಪತ್ತಮೂರನೆಯ ಸರ್ಗವು.

ಚತುಃ ಸಪ್ತತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಲೀಲಯೊಾ ಪಶ್ಯತಿ ವಪುಃ ಕಾಲೇನಾತ್ಮನಿ ಜಾಯತೇ ।
ರಮ್ಯಸ್ಯಾಪಶ್ಯತೋ ವಕ್ತ್ರಂ ಹೃದಿ ದೌರೂಪ್ಯಧೀರಿವ ॥ ೧ ॥

ತದ್ವಶಾದಿಯಮಾಯಾತಾ ಮಹತೀ ಮೇದುರೋದರಾ ।
ಮಾಯಾ ಮದ ಮಹಾಶಕ್ತಿಃ ಸುರಾಸ್ವಾದಲವಾದಿವ ॥ ೨ ॥

ಎಪ್ಪತ್ತ ನಾಲ್ಕನೆಯ ಸರ್ಗ

ಶ್ರೀ ವಸಿಷ್ಠರು ಹೇಳಿದರು :—

೧. ಲೋಕದಲ್ಲಿ ತನಗೆ ಅತ್ಯಂತ ಪ್ರಿಯರಾದ ಪತ್ನೀಪುತ್ರಾದಿಗಳ ಮುಖವನ್ನು ಚಿರಕಾಲದಿಂದ ನೋಡದೆಯೇ, ವಿರಹಿತನಾದ ಮನುಷ್ಯನ ಮನಸ್ಸಿನೊಳಗೆ ನಿರಂತರವೂ ಶರೀರಕ್ಕೆ ದೌರ್ಬಲ್ಯವನ್ನೂ, ಕೃಶತ್ವವನ್ನೂ ಉಂಟುಮಾಡಿ ಅದನ್ನು ವಿಕಾರಗೊಳಿಸತಕ್ಕ ದೌರ್ಮನಸ್ಯ ಬುದ್ಧಿಯು ಹೇಗೆ ಉದ್ಭವಿಸುವುದೋ, ಹಾಗೆಯೇ ನಿರತಿಶಯಾನಂದ ರೂಪವಾಗಿ ಪರಮ ಪ್ರೇಮಾಸ್ಪದವಾದ ಸ್ವಸ್ವರೂಪವನ್ನು ಕಾಣದೆ ಚಿರಕಾಲದಿಂದ ಅನುವರ್ತಿಸಿಕೊಂಡು ಬೆಂಬಿಡದಿರುವ ಅಜ್ಞಾನದಿಂದ ಆವೃತನಾಗಿರುವ ಆತ್ಮನಲ್ಲಿ ಕಾಮ ಕರ್ಮವಾಸನಾದಿಗಳ ಪರಿಪಾಕದಿಂದ ಕ್ರಮ ಪ್ರಾಪ್ತವಾದ ಸೃಷ್ಟಿ ಜಾಗ್ರತ್ ಮುಂತಾದ ಕಾಲಗಳಲ್ಲಿ ಚಿತ್ತಿನ ವಿಲಾಸದಿಂದಲೇ ಸೂಕ್ಷ್ಮ (ಸಮಷ್ಟಿ) ಸ್ಥೂಲ (ವ್ಯಷ್ಟಿ) ಗಳೆಂಬ ಎರಡು ಬಗೆಯಾದ ಶರೀರವು ಉತ್ಪನ್ನವಾಗುವುದು.

೨. ಆ ಎರಡು ದೇಹಗಳ ವಶದಿಂದ (ಅಂದರೆ ಆ ದೇಹದ್ವಯದಲ್ಲಿ ಅಹಂ ಭಾವವನ್ನು ಅಧ್ಯಾಸ ಮಾಡಿಕೊಂಡು ಅವುಗಳಿಗೆ ಅಧೀನನಾಗಿಬಿಡುವುದರಿಂದ) ಈ ಸಕಲಾನರ್ಥ ರೂಪವೂ, ರಾಗದ್ವೇಷ ಲೋಭ ಮೋಹಾದಿಗಳಿಂದ ನಿಬಿಡವಾದ ಕುಕ್ಷಿಯುಳ್ಳದೂ ಕೇವಲ ಮಿಥ್ಯಾಭೂತವೂ, ಅತ್ಯಂತ ದುರ್ಭರವೂ ಆದ ಮದದ ಮಹಾ ಶಕ್ತಿಯು ಸುರಾಪಾನದ ಪ್ರಭಾವದಿಂದ ಹೆಚ್ಚಾದ ಮದವು ಹೇಗೋ ಹಾಗೆ ಉತ್ಪನ್ನವಾಗಿ ಬಹು ಬೇಗ ವೃದ್ಧಿ ಹೊಂದುವುದು.

ತಯಾಸಯಾ ವಿಕಾರಿಣ್ಯಾ ತದತದ್ಭಾವಭೂತಯಾ ।
ಇದಂ ಸಂಪನ್ನಮಖಿಲಂ ತಾಪಾದಿವ ಮರೌ ಪಯಃ ॥ ३ ॥

ಮನೋ ಬುದ್ಧಿರಹಂಕಾರೋ ವಾಸನಾಶ್ಚೇಂದ್ರಿಯಾಣ್ಯಪಿ ।
ಏವಂ ಕಲಿತನಾಮಾಂಕೈಃ ಸ್ಫುರತ್ಯಾತ್ಮಾಬ್ಧಿರಂಬುಭಿಃ ॥ ४ ॥

ಚಿತ್ತಾಹಂಕಾರಯೋರ್ದ್ವಿತ್ವಂ ವಚಸಾಸ್ತಿ ನ ವಸ್ತುತಃ ।
ಯಚ್ಚಿತ್ತಂ ಸ್ಯಹಂಕಾರೋ ಯೋಽಹಂಕಾರೋ ಮನೋಹಿ ತತ್ ॥ ೫ ॥

---

೩. ಈ ರಾಗ ದ್ವೇಷಾದಿ ಮದದ ಮಹಾಶಕ್ತಿಯು ಪ್ರವೃತ್ತಿ, ಭೋಗ, ಪುಣ್ಯ, ಪಾಪ, ವಾಸನಾ ಮುಂತಾದ ಅನರ್ಥ ಪರಂಪರೆಗಳಿಂದ ಸರ್ವದಾ ಬಹಳ ವಾಗಿ ವಿಕಾರಗೊಂಡಿರುವುದು. ಮತ್ತು ಈ ರಾಗಾದಿ ಮದ ಮಹಾ ಶಕ್ತಿಯು ಪರಮಾತ್ಮನ ತಾತ್ತ್ವಿಕವಾದ ಶುದ್ಧ ಬುದ್ಧ ಮುಕ್ತ ಸ್ವಭಾವವನ್ನು ಅರಿಯದೆ ಅದಕ್ಕೆ ವಿರುದ್ಧವಾದ (ಮಲಿನ ಜಡ ಬದ್ಧ ಇತ್ಯಾದಿ) ಅವಿದ್ಯಾಕಲ್ಪಿತ ಭಾವವನ್ನು ತಪ್ಪಾಗಿ ಗ್ರಹಿಸುವುದರಿಂದ ಸ್ಥಿತಿಯನ್ನು ಪಡೆದಿರುವುದು. ಸೂರ್ಯಾತಪದ ತಾಪ ದಿಂದ ಮರುಭೂಮಿಯಲ್ಲಿಯೂ ಜಲ ಭ್ರಾಂತಿಯು ಅತ್ಯಂತಾಸತ್ಯವಾಗಿಯೇ ಉದಯಿಸುವಂತೆ ಈ ರಾಗಾದಿ ಮದ ಶಕ್ತಿಯಿಂದ ಮಿಥ್ಯೆಯಾಗಿಯೇ ಸಮಸ್ತವಾದ ಈ ಜಗದ್ಭ್ರಾಂತಿಯೂ ಉದಯಿಸಿರುವುದು.

೪. ಮನಸ್ಸು, ಬುದ್ಧಿ, ಅಹಂಕಾರ ವಾಸನೆಗಳು ಮತ್ತು ಇಂದ್ರಿಯಗಳು ಇತ್ಯಾದಿ ನಾನಾ ವಿಧಗಳಾಗಿ ಕಲ್ಪಿತಗಳಾದ ನಾಮ ರೂಪಗಳುಳ್ಳಂಥ ಸ್ವಸ್ವರೂಪ ಗಳೆಂಬ ಜಲಗಳಿಂದ ಪರಮಾತ್ಮನೆಂಬ ಸಮುದ್ರವು ಸ್ಫುರಿಸುತ್ತಿರುವುದು.

೫. ಅಯ್ಯ ರಾಮ, ಚಿತ್ತ ಮತ್ತು ಅಹಂಕಾರ ಎಂಬೀ ಎರಡರ ಪರಸ್ಪ ಭೇದವು ಬರಿಯ ಮಾತಿನಲ್ಲಿರುವುದೇ ಹೊರತು ವಸ್ತುತಃ ಇಲ್ಲ. (ಅವೆರಡು ಭಿನ್ನವಸ್ತುಗಳಾಗಿಲ್ಲ. ಒಂದೇ ಒಂದಕ್ಕೆ ಆ ಎರಡು ಹೆಸರುಗಳೂ ರೂ ವಾಗಿವೆ.) ಚಿತ್ತವೆಂಬುದು ಯಾವುದೋ ಅಹಂಕಾರವೆಂಬುದೂ ಅದೇಯೆ; ಯಾವುದು ಅಹಂಕಾರವೆನ್ನಿಸಿಕೊಂಡಿರುವುದೋ ಅದೇಯೇ ಚಿತ್ತವೆಂದೂ ಎನ್ನಿ ಕೊಂಡಿರುವುದು.

ವ್ಯತಿರಿಕ್ತಂ ಹಿಮಾಚ್ಛೌಕ್ಲ್ಯಮಿತಿ ಸಂಕಲ್ಪ್ಯತೇ ಯಥಾ ।
ಮುಧೈವ ಕಲ್ಪ್ಯತೇ ಭೇದಶ್ಚಿತ್ತಾಹಂಕಾರಯೋಸ್ತಥಾ ॥ ೬ ॥

ಮನೋಽಹಂಕಾರಯೋರಂತರ್ದ್ವಯೋರೇಕತರಕ್ಷಯೇ ।
ಕ್ಷೀಣೇ ದ್ವೇ ಏವ ಹಿ ಯಥಾ ಪಟಶೌಕ್ಲ್ಯೇ ಪಟಕ್ಷಯೇ ॥ ೭ ॥

ತುಚ್ಛಾಂ ಮೋಕ್ಷಧಿಯಂ ತ್ಯಕ್ತ್ವಾ ಬಂಧಬುದ್ಧಿಂ ತಥೈಷಣಾಂ ।
ಸ್ವವೈರಾಗ್ಯವಿವೇಕಾಭ್ಯಾಂ ಕೇವಲಂ ಕ್ಷಪಯೇನ್ಮನಃ ॥ ೮ ॥

---

೬. ಶುಕ್ಲತ್ವವು (ಬಿಳುಪು) ಹಿಮಕ್ಕಿಂತ ವ್ಯತಿರಿಕ್ತವಾದುದು ಎಂದು ಭೇದವು ಕಲ್ಪಿತವಾಗಿರುವಂತೆಯೇ ಚಿತ್ತ ಮತ್ತು ಅಹಂಕಾರ ಇವುಗಳಿಗೆ ಭೇದವು ವ್ಯರ್ಥವಾಗಿಯೇ ಅಜ್ಞಾನದಿಂದ ಕಲ್ಪಿತವಾದುದು. ಅದು ಕಾರಣ ಅವೆರಡರ ಭೇದವು ಅಸತ್ಯವು. ವಾಸ್ತವವಲ್ಲ.

[ವಿಷಯಗಳನ್ನು ಅರಿಯುವುದರಿಂದ ಚಿತ್ತವೆಂದೂ ಅವುಗಳನ್ನು ಮನನ ಮಾಡುವುದರಿಂದ ಮನಸ್ಸೆಂದೂ ಅವುಗಳನ್ನು ನಿಶ್ಚಯವಾಗಿ ತಿಳಿಯುವುದರಿಂದ ಬುದ್ಧಿಯೆಂದೂ ಅವುಗಳಲ್ಲಿ ಅಭಿಮಾನವನ್ನಿಡುವುದರಿಂದ ಅಹಂಕಾರವೆಂದೂ ಒಂದೇ ಒಂದಾದ ಅಂತಃಕರಣವು ನಾಮಾಂತರಗಳಿಂದ ವ್ಯವಹಾರಯೋಗ್ಯವಾಗಿರುವುದು.]

೭. ಬೆಳ್ಳಗಿರುವ ಬಟ್ಟೆಯು (ಪಟ) ನಾಶ ಹೊಂದಲಾಗಿ, ಅದೊಂದರ ನಾಶದಿಂದಲೇ ಆ ಬಟ್ಟೆ ಮತ್ತು ಅದರ ಬಿಳುಪು. (ಪಟವೂ ಶುಕ್ಲತ್ವವೂ) ಎಂಬಿವೆರಡೂ ನಾಶಹೊಂದುವಂತೆ ಮನಸ್ಸು ಅಹಂಕಾರಗಳೆಂಬ ಎರಡು ಅಂತಃಕರಣಗಳೊಳಗೆ ಯಾವುದೊಂದು ಕ್ಷೀಣವಾಗಿ ನಾಶ ಹೊಂದಿದರೂ, ಅವೆರಡೂ ಕೂಡ ನಾಶವಾಗಿ ಬಿಡುವುವು. ಇದು ನಿಶ್ಚಯ.

೮ ಹೀಗಿರುವ ಕಾರಣ, ಅತ್ಯಂತ ತುಚ್ಛವಾದ ಮೋಕ್ಷ ಬುದ್ಧಿಯನ್ನೂ, ಬಂಧ ಬುದ್ಧಿಯನ್ನೂ ಮತ್ತೂ ಹಾಗೆಯೇ ಸಕಲ ವಿಧವಾದ ಇಚ್ಛೆಯನ್ನೂ ಸಂಪೂರ್ಣವಾಗಿ ಪರಿತ್ಯಾಗ ಮಾಡಿ, ತನ್ನ ವಿವೇಕ ವೈರಾಗ್ಯಗಳಿಂದ ತನ್ನ ಮನಸ್ಸನ್ನು ಆತ್ಯಂತಿಕವಾಗಿ (ಮುಖ್ಯವಾಗಿ) ಕ್ಷಯಗೊಳ್ಳಿಸಬೇಕು.

ಮೋಕ್ಷೋ ಮೇಽಸ್ತ್ವಿತಿ ಚಿಂತಾಂತರ್ಜಾತಾ ಚೇದುತ್ಥಿತಂ ಮನಃ ।
ಮನನೋತ್ಥೇ ಮನಸ್ಯಸ್ಮಿನ್ವಪುರ್ದೋಷಾಯ ಕೇವಲಂ ॥ ೯ ॥

ಆತ್ಮನ್ಯತೀತೇ ಸರ್ವಸ್ಮಾತ್ಸರ್ವಭೂತೇಽಥ ವಾ ತತೇ ।
ಕೋ ಬಂಧಃ ಕಸ್ಯ ವಾ ಮೋಕ್ಷೋ ನಿರ್ಮೂಲಂ ಮನನಂ ಕುರು ॥ ೧೦ ॥

ವಾಯುಃ ಸ್ಪಂದನಧರ್ಮತ್ವಾದ್ಯದಾ ಚಲತಿ ದೇಹಕೇ ।
ತದಾ ಸ್ಫುರತಿ ಹಸ್ತಾಂಗರಸನಾಪಲ್ಲವಾವಲೀ ॥ ೧೧ ॥

---

೯. "ನನಗೆ ಮೋಕ್ಷವು ಸಿದ್ಧಿಸಬೇಕು" ಎಂಬ ಚಿಂತೆಯು ಮನಸ್ಸಿನೊಳಗೆ ಉದ್ಭವಿಸಿದ್ದೇ ಆದರೆ, ಆಗ ಮನಸ್ಸೂ ವಿಷಯಾಭಿಮುಖವಾಗಿ ಏಳುವುದು. ಮನಸ್ಸು ಯಾವ ವಿಷಯವನ್ನು ಮನನ ಮಾಡುತ್ತಾ ಉತ್ಕಂಠಿತವಾಗಿರಲು, ಅದು ಅದೇ ವಿಷಯಾಕಾರವಾದ ಶರೀರವುಳ್ಳದ್ದಾಗುವುದು. ಈ ಶರೀರವೂ ಕೂಡ ಮನಸ್ಸಿಗೆ ಬಹಿರ್ಮುಖತ್ವವನ್ನು ಅತ್ಯಧಿಕವಾಗಿ ಉಂಟುಮಾಡುವ ಕಾರಣ, ಕೇವಲ ರಾಗ ದ್ವೇಷಾದಿ ದೋಷಗಳೆಂಬ ಅನರ್ಥ ಹೇತುವಾಗಿಯೇ ಇರುವುದು. ಆದುದರಿಂದ ಮೋಕ್ಷೇಚ್ಛೆಯನ್ನೂ ಪರಿತ್ಯಾಗ ಮಾಡಬೇಕಾಗಿರುವುದು.

೧೦. ಅಯ್ಯ ರಾಮ, ಆತ್ಮನು ಸಮಸ್ತವಾದ ಈ ಜಗತ್ತಿಗಿಂತ ಅತೀತನಾಗಿಯಾಗಲಿ ಅಥವಾ ಸರ್ವಭೂತಾತ್ಮನಾಗಿ ಸರ್ವವ್ಯಾಪಿಯಾಗಲಿ ಇದ್ದುಕೊಂಡಿರಲು, ಅಂತಹ ಎರಡು ಪ್ರಕಾರದಲ್ಲಿಯೂ ಕೂಡ, ಆತ್ಮನಲ್ಲಿ ಬಂಧವೆಂಬುದನ್ನಾಗಲಿ, ಮತ್ತು ಮೋಕ್ಷವೆಂಬುದನ್ನಾಗಲಿ ಕಲ್ಪನೆ ಮಾಡುವುದಕ್ಕೂ ಸುತರಾಂ ಸ್ವಲ್ಪವೂ ಆಸ್ಪದವೇ ಇಲ್ಲ. ಆದುಕಾರಣ, ನೀನು, ಯಾವುದೊಂದು ಬಗೆಯಲ್ಲಿಯೂ ಬಂಧಮೋಕ್ಷಾದಿಗಳನ್ನು ಯೋಚಿಸದೆಯೇ, ಮನಸ್ಸಿನ ಮನನರೂಪ ವ್ಯಾಪಾರವನ್ನೂ ನಿರ್ಮೂಲಮಾಡಿ ನಿಶ್ಚಿಂತನಾಗಿರು.

೧೧. ಸರ್ವದಾ ಚಲಿಸುವ ಸ್ವಭಾವವುಳ್ಳದ್ದಾಗಿರುವ ಕಾರಣ, ಪ್ರಾಣವಾಯುವು ಈ ದೇಹದೊಳಗೆ ಎದುವರೆವಿಗೆ ಚಲಿಸುತ್ತಿರುವುದೋ, ಅದುವರೆವಿಗೆ ಮಾತ್ರವೇ ಕರಚರಣಾದಿ ಕರ್ಮೇಂದ್ರಿಯಗಳೂ ನಾಲಗೆ ಮುಂತಾದ ಜ್ಞಾನೇಂದ್ರಿಯಗಳೂ, ಮರದಲ್ಲಿರುವ ಪಲ್ಲವಗಳ ಸಮುದಾಯವು ವಾಯುವಿನಿಂದ ಚಲಿಸುವಂತೆ, ಈ ದೇಹದಲ್ಲಿಯೂ ಚಲಿಸುವುವು.

ಪಾದಪೇ ಪಲ್ಲವಶ್ರೇಣೀಂ ಚಾಲಯತ್ಯನಿಲೋ ಯಥಾ ।
ತಥೈವಾಂಗಾವಲೀಂ ವಾಯುರ್ದೇಹೇ ಸಂಚಾಲಯತ್ಯಲಂ ॥ ೧೭ ॥

ಚಿತ್ಸರ್ವವ್ಯಾಪಿನೀ ಸೂಕ್ಷ್ಮಾ ನ ಚಲಾ ನೈವ ಚಾಲ್ಯತೇ ।
ನ ಸ್ವತಃ ಸ್ಪಂದಮಾಯಾತಿ ದೇವಾಚಲ ಇವಾನಿಲೈಃ ॥ ೧೩ ॥

ಪ್ರತಿಬಿಂಬಿತಸರ್ವಾರ್ಥಾ ಕೇವಲಂ ಸ್ವಾತ್ಮನಿ ಸ್ಥಿತಾ ।
ಪ್ರಕಾಶಯತಿ ಬೋಧೇನ ಜಗಂತೀಮಾನಿ ದೀಪವತ್ ॥ ೧೪ ॥

---

೧೨. ಹೊರಗೆಬೀಸುವ ವಾಯುವು ಮರಗಳಲ್ಲಿರುವ ಪಲ್ಲವಾದಿಗಳ (ಚಿಗುರೆಲೆ ಮುಂತಾದುವುಗಳ) ಶ್ರೇಣಿಯನ್ನು ಹೇಗೆ ಅಲುಗಾಡಿಸುವುದೋ ಹಾಗೆಯೇ, ಪ್ರಾಣವಾಯುವು ದೇಹದೊಳಗೆ ಸಂಚಲಿಸುತ್ತಾ ಅವಯವ ಸಮುದಾಯವನ್ನೆಲ್ಲ ಅತ್ಯಧಿಕವಾಗಿ ಚಲನಗೊಳ್ಳಿಸುವುದು. (ಚಲಿಸುವಂತೆ ಮಾಡುವುದು) (ದೇಹೇಂದ್ರಿಯಾದಿಗಳ ಚಲನಾದಿ ಧರ್ಮಗಳು ಪ್ರಾಣವಾಯುವಿಗೆ ಅಧೀನವಾದವು. ಆತ್ಮನಾದರೋ ತದ್ವಿಲಕ್ಷಣವಾಗಿ ಪರ್ವತದಂತೆ ಅಚಲನಾಗಿರುವನು)

೧೩. ಕೇವಲ ಚಿದ್ರೂಪನಾದ ಆತ್ಮನಾದರೋ ಸರ್ವವ್ಯಾಪಿಯಾದವನು; ಮತ್ತು ಅತಿಸೂಕ್ಷ್ಮವಾದವನು. ಅವನು ಚಲಿಸುವನನೂ ಅಲ್ಲ. ಮತ್ತು ಬೇರೆ ಯಾವುದರಿಂದಲೂ ಚಲಿಸಲ್ಪಡತಕ್ಕವನೂ ಅಲ್ಲ. ಎಷ್ಟೇ ಹೆಚ್ಚಾಗಿ ಬಿರುಗಾಳಿ ಬೀಸಿದರೂ ಹೇಗೆ ಮೇರುಪರ್ವತವು ಸ್ವಲ್ಪವೂ ಕಟ್ಟಕದಲದಂತೆ ನಿಶ್ಚಲವಾಗಿರುವುದೋ ಹಾಗೆ ಆತ್ಮನು ಸ್ವಲ್ಪಮಾತ್ರವೂ ಚಲನಗೊಳ್ಳದೆ ಸ್ವಭಾವತಃ ಸರ್ವದಾ ನಿಶ್ಚಲನಾಗಿಯೇ ಇರುವನು.

೧೪. ಒಂದು ಸ್ವಚ್ಛವಾದ ಸ್ಫಟಿಕ ಶಿಲೆಯೊಳಗೆ ಅದರ ಸಮೀಪದಲ್ಲಿರುವ ಅನೇಕ ಪದಾರ್ಥಗಳು ಪ್ರತಿಬಿಂಬಿಸಿ, ಅವು ಚಲಿಸುತ್ತಿದ್ದರೂ ಕೂಡ ಆ ಸ್ಫಟಿಕ ಶಿಲೆಯು ಸ್ವಲ್ಪವೂ ಕದಲದೆ ವಸ್ತುತಃ ಹೇಗೆ ನಿಶ್ಚಲವಾಗಿಯೇ ಇರುವುದೋ, ಹಾಗೆ ಈ ಚಿದ್ರೂಪನಾದ ಆತ್ಮನಲ್ಲಿ ಸಕಲ ವಸ್ತುಗಳೂ ಪ್ರತಿಬಿಂಬಿಸಿ, ನಾನಾ ವ್ಯವಹಾರಗಳನ್ನು ಮಾಡುತ್ತಾ ಚಲಿಸುತ್ತಿದ್ದರೂ ಕೂಡ, ಆತ್ಮನು ಮಾತ್ರ ಸ್ವಾತ್ಮಸ್ವರೂಪದಿಂದ ಪ್ರಚ್ಯುತನಾಗದೆಯೇ ನಿಶ್ಚಲನಾಗಿ ಕೂಟಸ್ಥನಾಗಿಯೇ ಇದ್ದುಕೊಂಡು, ದೊಡ್ಡ ದೀಪವು ತನ್ನ ಪ್ರಕಾಶದಿಂದ ಸಕಲ ವಸ್ತುಗಳನ್ನೂ ಬೆಳಗಿಸುವಂತೆ ತನ್ನ ಸ್ವರೂಪವಾದ ಜ್ಞಾನದಿಂದ ಈ ಜಗತ್ತುಗಳನ್ನೆಲ್ಲಾ ಪ್ರಕಾಶಗೊಳಿಸುತ್ತಾ (ಕೇವಲ) ಅದ್ವಿತೀಯನಾಗಿರುವನು.

ತತ್ರ ಕೋಽಯಂ ಮುಧಾ ಮೋಹೋ ಭವತಾಮತಿದುಃಖದಃ ।
ಅಯಂ ಸೋಽಹಂ ಮಮಾಂಗಾನಿ ಮಮೇದಂ ಚೇತಿ ದುರ್ಧಿಯಾಂ ॥ ೧೫ ॥

ಇತಿ ಕಲ್ಲೋಲಹತಯಾ ದೃಶಾ ನಿತ್ಯಮನಿತ್ಯಯಾ ।
ಜ್ಞತ್ವಕರ್ತೃತ್ವ ಭೋಕ್ತೃತ್ವಕ್ರಿಯಾ ಸಮುಪಲಭ್ಯತೇ ॥ ೧೬ ॥

ತತ್ರಾಯಮಹಮಾಗಂತಾ ಭೋಕ್ತಾ ಕರ್ತೇತಿ ಜಾಯತೇ ।
ಮುಧೈವಾಜ್ಞಾತತಾಪೋತ್ಥಾ ಮೃಗತೃಷ್ಣೇವ ವಾಸನಾ ॥ ೧೭ ॥

---

೧೫. ಹೀಗೆ ದೇಹಾದ್ಯನಾತ್ಮ ವಸ್ತುಗಳಿಗೂ ಆತ್ಮನಿಗೂ ಅನ್ಯೋನ್ಯ ವಿರುದ್ಧವಾದ ಅತ್ಯಂತವೈಲಕ್ಷಣ್ಯವಿರುತ್ತಿರಲು, ಎಲೈ ದುರ್ಬುದ್ಧಿಯುಳ್ಳ ಮಹಾ ಭ್ರಾಂತರಾದ ಮನುಷ್ಯರೇ, ನಿಮಗೆ, "ಇದು ನನ್ನ ದೇಹ; ನಾನು ಲೋಕದಲ್ಲಿ ವಿಖ್ಯಾತನಾದ ದೊಡ್ಡ ಮನುಷ್ಯ. ಇವು ನನ್ನ ಅಂಗಗಳು. ಪತ್ನೀ ಪುತ್ರ ಗೃಹ ಕ್ಷೇತ್ರಾದಿ ಈ ಬಾಹ್ಯ ವಸ್ತು ಜಾತವೆಲ್ಲವೂ ನನ್ನದು." ಎಂದು ವ್ಯರ್ಥವಾಗಿಯೇ ಉದಯಿಸಿರುವ ಮಹಾದುಃಖಪ್ರದವಾದ ಈ ಮೋಹ ಯಾವುದು? ಅದೆಲ್ಲಿಯದು.?

೧೬. ಈ ರೀತಿಯಾಗಿ, ಅಯ್ಯ ರಾಮ, ದೇಹಕ್ಕೂ ಆತ್ಮನಿಗೂ ಅತ್ಯಂತ ವೈಧರ್ಮ್ಯವಿದ್ದಾಗ್ಯೂ ಕೂಡ, ಅಪಾರವಾದ ಅವಿದ್ಯೆ (ಅಜ್ಞಾನ) ಯೆಂಬ ಜಲಾಶಯದಲ್ಲಿ ದೊಡ್ಡ ಅಲೆಗಳಂತೆ ಬೀಸುತ್ತಿರುವ ರಾಗದ್ವೇಷಾದಿಗಳ ಹೊಡೆತಕ್ಕೆ ಸಿಕ್ಕಿ ಕಂಗೆಟ್ಟಿರುವ, ಮತ್ತು ದೇಹಾದಿಗಳಲ್ಲಿ ಆತ್ಮ ತಾದಾತ್ಮ್ಯವನ್ನು ಅಧ್ಯಾಸಮಾಡುವುದರ ಮೂಲಕ ಆವಿರ್ಭವಿಸಿರುವ ಕಾರಣ ಸರ್ವದಾ ಅನಿತ್ಯವಾಗಿರುವ ಭ್ರಾಂತಿ ದೃಷ್ಟಿಯಿಂದ ಮಾತ್ರವೇ, ಈ ಜಡವಾದ ದೇಹದಲ್ಲಿ ವಿರುದ್ಧವಾದ ಪ್ರಾಜ್ಞತ್ವಾದಿ ಧರ್ಮಗಳೂ, ಹಾಗೆಯೇ ಆತ್ಮನಲ್ಲಿ ಕರ್ತೃತ್ವ ಭೋಕ್ತೃತ್ವಾದಿ ಅತ್ಯಂತ ವಿರುದ್ಧವಾದ ಧರ್ಮಗಳೂ ಇರುವಂತೆ ಯಾವಾಗಲೂ ತಿಳಿಯಲ್ಪಡುತ್ತಿರುವುವು.

೧೭. ಈ ಬಗೆಯಾದ ತಪ್ಪುತಿಳುವಳಿಕೆಗೆ ಅನುಗುಣವಾಗಿಯೇ, ಉತ್ತರೋತ್ತರ ಸಕಲಭ್ರಾಂತಿಗಳಿಗೂ ಬೀಜಪ್ರಾಯವಾಗಿರುವ ಅವಿದ್ಯಕ ಕಾಮ ಕರ್ಮಾದಿ ವಾಸನೆಯೂ ಕೂಡ, "ಇದು ಸೂರ್ಯನ ತಾಪವು (ಬಿಸಿಲು ಗುದುರೆ)" ಎಂಬ ಜ್ಞಾನವಿಲ್ಲದಿರುವಾಗ ಅಜ್ಞಾನದಿಂದ ಮರುಭೂಮಿಯಲ್ಲಿ (ಮೃಗತೃಷ್ಣಾ ರೂಪ) ಜಲಭ್ರಾಂತಿಯು ಉದಯಿಸುವಂತೆ, ಅವಿಕ್ರಿಯನಾದ ಚಿದ್ರೂಪಾತ್ಮನಲ್ಲಿ, "ಇಗೋ ನಾನು ಬರುವೆನು; ನಾನು ಕರ್ತೃವು; ನಾನು ಭೋಕ್ತೃವು ನಾನು

ಅಜ್ಞತ್ವೈಷಾ ಮನೋಮತ್ತಮೃಗಂ ವಿಷಯತರ್ಷುಲಂ ।
ಅಸತ್ಯೈವ ಹಿ ಸತ್ಯೇವ ಮೃಗತೃಷ್ಣೇವ ಕರ್ಷತಿ ॥ ೧೮ ॥

ವಿಜ್ಞಾತಾ ಸತ್ಯರೂಪಾಂಗ ನಾಶಂ ಯಾತಿ ಪಲಾಯತೇ ।
ವಿಪ್ರಮಧ್ಯಾತ್ಪರಿಜ್ಞಾತಾ ಯಥಾ ಚಾಂಡಾಲಕನ್ಯಕಾ ॥ ೧೯ ॥

ಅವಿದ್ಯಾ ಸಂಪರಿಜ್ಞಾತಾ ನ ಚೈನಂ ಪರಿಕರ್ಷತಿ ।
ಮೃಗತೃಷ್ಣಾ ಪರಿಜ್ಞಾತಾ ತರ್ಷುಲಂ ನಾವಕರ್ಷತಿ ॥ ೨೦ ॥

ಈ ಕಾರ್ಯವನ್ನು ಮಾಡುವೆನು; ಇದರ ಫಲವನ್ನು ಅನುಭೋಗಿಸುವೆನು.'' ಎಂಬೀ ನಾನಾ ರೂಪವಾಗಿ, ವ್ಯರ್ಥವಾಗಿ, ಯಾವ ಕಾರಣವೂ ಇಲ್ಲದೆ, ಅಜ್ಞಾನ ದಿಂದ ಅಸತ್ಯವಾಗಿಯೇ ಉದ್ಭವಿಸುವುದು.

೧೮ ಈ ಅಜ್ಞಾನವು ಅತ್ಯಂತ ಅಸತ್ಯವೇ ಆಗಿದ್ದರೂ ಕೂಡ, ಮಾಯಾ ಮಯವಾಗಿರುವ ಕಾರಣ, ಸತ್ಯವಾಗಿರುವಂತೆ ಮೇಲೆ ಕಾಣಿಸಿಕೊಳ್ಳುತ್ತಾ ವಿಷಯಾಸಕ್ತಿಯೆಂಬ ನೀರಡಿಕೆಯಿಂದ ಬಾಯಾರಿ ವಿಷಯಗಳೆಂಬ ನೀರನ್ನು ಹುಡುಕುತ್ತಾ ತೊಳಲುತ್ತಿರುವ, ಮನಸ್ಸೆಂಬ ಮದಿಸಿದ ಕಾಡುಮೃಗವನ್ನು ಮರು ಮರೀಚಿಕೆ (ಬಿಸಿಲು ಗುದುರೆ) ಯಂತೆ ಬಹುದೂರ ಎಲ್ಲೆಲ್ಲಿಗೋ ವ್ಯರ್ಥವಾಗಿ ಎಳೆದುಕೊಂಡು ಹೋಗುತ್ತಿರುವುದು.

೧೯. ಅಯ್ಯ ರಾಮ, ಈ ಅಜ್ಞಾನ ಭ್ರಾಂತಿಯು ಬಿಸಿಲುಗುದುರೆ ಯಂತೆಯೇ ಅತ್ಯಂತ ಅಸತ್ಯವಾದುದು. ಎಂದು ತತ್ತ್ವತಃ ನಿರ್ಣಯವಾಗಿ ದೃಢ ವಾದ ಜ್ಞಾನವು ಉಂಟಾಗಿಬಿಟ್ಟರೆ ಬಳಿಕ ಬ್ರಾಹ್ಮಣರ ಮಧ್ಯದಲ್ಲಿ ವೇಷವನ್ನು ಮರೆಯಿಸಿಕೊಂಡು ಬಂದು ಸೇರಿಕೊಂಡಿರುವ ಚಂಡಾಲ ಕನ್ಯೆಯು ತನ್ನ ಜಾತಿಯು ಅವರಿಗೆ ಸ್ಪಷ್ಟವಾಗಿ ತಿಳಿದೊಡನೆಯೇ ಅಲ್ಲಿ ನಿಲ್ಲದೆ ಓಡಿಹೋಗಿ ಬಿಡು ವಂತೆ, ಈ ಅಜ್ಞಾನ ಭ್ರಾಂತಿಯೂ ಒಡನೆಯೇ ಎಲ್ಲಿಗೋ ಓಡಿಹೋಗಿಬಿಡುವುದು. ಕೊನೆಗೆ ನಾಶವನ್ನೂ ಹೊಂದಿಬಿಡುವುದು. (ಅಂದರೆ ಪುನಃ ತಲೆದೋರುವುದೇ ಇಲ್ಲ ಎಂದರ್ಥ.)

೨೦. "ಇದು ಮೃಗತೃಷ್ಣಿಕೆಯೇ ಸರಿ. ನೀರು ಅಲ್ಲವೇ ಅಲ್ಲ" ಎಂಬು ದಾಗಿ ವಸ್ತುತಃ ತಾತ್ತ್ವಿಕನಾಗಿ ಯಥಾರ್ಥವಾದ ಪ್ರಮಾಣ ಜ್ಞಾನ ಉಂಟಾದ

ಪರಮಾರ್ಥಾವಬೋಧೇನ ಸಮೂಲಂ ರಾಮ ವಾಸನಾ ।
ದೀಪೇನೇವಾಂಧಕಾರಶ್ರೀರ್ಗಲತ್ಯಾಲೋಕ ಏತಿ ಚ ॥ ೨೧ ॥

ನಾಸ್ತ್ಯವಿದ್ಯೇತಿ ಸಂಜಾತೇ ನಿಶ್ಚಯೇ ಶಾಸ್ತ್ರಯುಕ್ತಿತಃ ।
ಗಲತ್ಯವಿದ್ಯಾ ತಾಪೇನ ತುಷಾರಕಣಿಕಾ ಯಥಾ ॥ ೨೨ ॥

ದೇಹಸ್ಯಾಸ್ಯ ಜಡಸ್ಯಾರ್ಥೇ ಕಿಂ ಭೋಗೈರಿತಿ ನಿಶ್ಚಯಃ ।
ಭಿನತ್ಯಾಶಾಮಲಂ ಜ್ಞಾತಾ ಪಂಜರಂ ಕೇಸರೀ ಯಥಾ ॥ ೨೩ ॥

ಮೇಲೆ ಭ್ರಾಂತಿ ಕಲ್ಪಿತವಾಗಿದ್ದ ಬಿಸಿಲುಗುದುರೆಯು ಮೊದಲಿನಂತೆ ಬಾಯಾರಿಕೆಯಿಂದ ನರಳುತ್ತಿರುವವನಾದರೂ, ಆ ಪ್ರಾಣಿಯನ್ನು ಹೇಗೆ ಬಹು ದೂರ ಎಳೆದುಕೊಂಡು ಹೋಗಲಾರದೋ ಹಾಗೆಯೇ ಈ ಕರ್ತೃತ್ವ ಭೋಕ್ತೃತ್ವಾದಿ ಭ್ರಾಂತಿಯೆಲ್ಲವೂ ಕೇವಲ ಅವಿದ್ಯೆಯು. ಅಸತ್ಯವಾದುದು. (ಯಾ ನವಿದ್ಯತೇ ಸಾ ಅವಿದ್ಯಾ) ಎಂಬುದಾಗಿ ಯಥಾರ್ಥವಾದ ತತ್ತ್ವ ಜ್ಞಾನವು ದೃಢವಾಗಿ ಉಂಟಾದ ಮೇಲೆಯೂ ಅದು ಮನುಷ್ಯನನ್ನು ಪುನಃ ಪೂರ್ವದಂತೆ ವಿಷಯಗಳ ಕಡೆಗೆ ಸೆಳೆಯುವುದಿಲ್ಲ.

೨೧. ಅಯ್ಯ ರಾಮ, ಪಾರಮಾರ್ಥಿಕವಾದ ಸ್ವಾತ್ಮತತ್ತ್ವಜ್ಞಾನ ದಾರ್ಢ್ಯದಿಂದ, ಅವಿದ್ಯಾಕಾಮುಕರ್ಮಾದಿ ವಾಸನೆಯು ಸಮೂಲವಾಗಿ, ದೀಪಪ್ರಕಾಶದಿಂದ ಗಾಢಾಂಧಕಾರವು ತೊಲಗಿಹೋಗುವಂತೆ ಸರ್ವ ನಾಶವನ್ನು ಹೊಂದಿಬಿಡುವುದು. ಮತ್ತು ಕಾಲದೇಶಾದಿಗಳಿಂದ ಅಪರಿಚ್ಛಿನ್ನವಾದ ಅಖಂಡಾತ್ಮ ಪ್ರಕಾಶವು ಅನಾವೃತವಾಗಿ ಸ್ವತ ಏವ, ಆವಿರ್ಭವಿಸುವುದು.

೨೨. ಸೂರ್ಯನ ಬಿಸಿಲಿನ ತಾಪದಿಂದ ಹಿಮಜಲದ ಬಿಂದುಗಳು ಬತ್ತಿಹೋಗಿ (ಸ್ವರೂಪನಾಶವನ್ನು ಹೊಂದಿ) ಅದೃಶ್ಯವಾಗಿಬಿಡುವಂತೆ—"ಅವಿದ್ಯೆಯೆಂಬುದು ವಸ್ತುತಃ ಎಂದೆಂದಿಗೂ ಇಲ್ಲವೇ ಇಲ್ಲ" ಎಂಬುದಾಗಿ ದೃಢವಾದ ನಿಶ್ಚಯಜ್ಞಾನವು, ಶಾಸ್ತ್ರಾಭ್ಯಾಸದಿಂದಲೂ ಯುಕ್ತಿಪೂರ್ವಕವಾದ ವಿಚಾರಬಲದಿಂದಲೂ ಉಂಟಾಗಿಬಿಟ್ಟರೆ, ಆಗಲೇ ಈ ಮಿಥ್ಯಾರೂಪವಾದ ಜಗದ್ಭ್ರಾಂತಿಯು ಸ್ವತ ಏವ ಸಂಪೂರ್ಣವಾಗಿ ಸರ್ವನಾಶವನ್ನು ಹೊಂದಿಬಿಡುವುದು,

೨೩. ಸರ್ವಥಾ ಕೇವಲ ಜಡವಾಗಿರುವ (ಪಾಷಾಣದಂತೆ) ಈ ದೇಹಕ್ಕೆ

ಆಶಾಪರಿಕರೇ ರಾಮ ನೂನಂ ಪರಿಹೃತೇ ಹೃದಾ ।
ಪುಮಾನಾಗತಸೌಂದರ್ಯೋ ಹ್ಲಾದಮಾಯಾತಿ ಚಂದ್ರವತ್ ॥ ೨೪ ॥

ಪರಾಂ ಶೀತಲತಾ ಮೇತಿ ವೃಷ್ಟಿಧೌತ ಇವಾಚಲಃ ।
ನಿರ್ವೃತಿಂ ಪರಮಾಂ ಧತ್ತೇ ಪ್ರಾಪ್ತರಾಜ್ಯ ಇವಾಧಮಃ ॥ ೨೫ ॥

ವಿಷಯೋಪಭೋಗಗಳಿಂದ ಯಾವ ಪ್ರಯೋಜನವಿರುವುದು ? ಪ್ರಯೋಜನವಿಲ್ಲದಿರುವಾಗ ದೇಹದ ಸಲುವಾಗಿ ಈ ಭೋಗಗಳನ್ನು ಏಕೆ ಆಶಿಸಬೇಕು ? ಎಂಬುದಾಗಿ ದೃಢನಿಶ್ಚಯಜ್ಞಾನವುಳ್ಳ ತತ್ತ್ವಜ್ಞನು ಮೃಗರಾಜನಾದ ಸಿಂಹವು ಪಂಜರವನ್ನು ಭೇದಿಸುವಂತೆ ಮನಸ್ಸಿನಲ್ಲಿ ಸಕಲ ಆಶೆಗಳನ್ನೂ ಉಂಟುಮಾಡುವಂತಹ ಅಜ್ಞಾನವೆಂಬ ಮಲವನ್ನು ಸಂಪೂರ್ಣವಾಗಿ ಭೇದಿಸಿಬಿಡುವನು.

೨೪. ಅಯ್ಯಾ ರಾಮ, ಹೀಗೆ ಆಶೆಗೆ ಒತ್ತಾಸೆ ಮಾಡುತ್ತ ಅದರ ಪರಿವಾರದಂತಿರುವ ದೇಹಾಭಿಮಾನಾದಿಗಳನ್ನು ನಿಜವಾಗಿಯೂ ಪರಿಹರಿಸಿಕೊಂಡು ಅವು ಪುನಃ ಸುಳಿದಾಡದಂತೆ ಮನಸ್ಸಿನಿಂದ ಸಂಪೂರ್ಣವಗಿ ಓಡಿಸಿಬಿಟ್ಟಿದ್ದೇ ಆದರೆ, ಆಗಲೇ ಆ ಪುರುಷೋತ್ತಮನು ಲೋಕೋತ್ತರವಾದ ಸಹಜ ದಿವ್ಯ ಸೌಂದರ್ಯವನ್ನು ಪಡೆದವನಾಗಿ ಚಂದ್ರನಂತೆ ಅತಿ ಶೀತಲನಾಗಿ ಸಕಲ ಸಂತಾಪಗಳನ್ನು ಪರಿಹರಿಸುತ್ತಾ ಸರ್ವ ಜನಾಹ್ಲಾದಕನಾಗಿ (ನಿರತಿಶಯಾನಂದರೂಪ ಪರಮಪ್ರೇಮಾಸ್ಪದನಾಗಿ) ಸ್ವಾಭಾವಿಕ ಚಿದ್ರೂಪನಾಗಿ ರಾರಾಜಿಸುವನು.

೨೫. ಮತ್ತು ವಿಶೇಷವಾಗಿ ಮಳೆ ಸುರಿದುದರಿಂದ ತನ್ನಲ್ಲಿದ್ದ ಕಶ್ಮಲವನ್ನೆಲ್ಲಾ ಹೋಗಲಾಡಿಸಿಕೊಂಡು ಅತಿ ಶುಭ್ರವಾಗಿಯೂ ಶೀತಲವಾಗಿಯೂ ಇರುವ ದೊಡ್ಡ ಪರ್ವತದಂತೆ ಪ್ರಾಪಂಚಿಕ ಮಲರಹಿತನಾಗಿಯೂ ಅಂತಃ ಅತ್ಯಂತ ಶೀತಲನಾಗಿಯೂ (ಪ್ರಶಾಂತ= ಸಂತಾಪರಹಿತ) ಇರುವನು. ಸ್ವಭಾವತಃ ತಾನು ರಾಜಪುತ್ರನೆಂಬ ಜ್ಞಾನವೇ ಇಲ್ಲದೆ, ಅಜ್ಞಾನದಿಂದ ತಾನು ಕಡುಬಡವನೆಂದೇ ಭಾವಿಸಿಕೊಂಡು ಸಾಮಾನ್ಯ ಮನುಷ್ಯನಂತೆ ಜೀವಿಸಿಕೊಂಡಿದ್ದ ಮನುಷ್ಯನಿಗೆ ಹೇಗೋ ದೈವಯೋಗದಿಂದ ಆಕಸ್ಮಿಕವಾಗಿ “ಜನ್ಮತಃ ತಾನು ರಾಜಪುತ್ರನೇ ಕಡುಬಡವನಾದ ಸಾಮಾನ್ಯ ಮನುಷ್ಯನಲ್ಲ” ಎಂಬ ನಿಶ್ಚಯಜ್ಞಾನವುಂಟಾಗಲು ಅವನು ಸ್ವಪ್ರಯತ್ನದಿಂದ ಶತ್ರುಗಳನ್ನು ಸಂಹರಿಸಿ ತನ್ನದೇ ಆಗಿ ಕುಲಕ್ರಮಪ್ರಾಪ್ತವಾದ ಪಿತ್ರಾರ್ಜಿತ ರಾಜ್ಯವನ್ನು ಪುನಃ ಸಂಪಾದಿಸಿದರೆ ಅವನು ಅದರಿಂದ ಹೇಗೆ ನಿರತಿಶಯವಾಗಿ ಆನಂದಿಸುವನೋ ಹಾಗೆಯೇ ದೇಹಾಭಿಮಾನರಹಿತನಾದ ಮಹಾತ್ಮನೂ

ಶೋಭತೇ ಪರಯಾ ಲಕ್ಷ್ಮ್ಯಾ ಶರದೀವ ನಭಸ್ತಲಂ ।
ಆತ್ಮನ್ಯೇವ ನ ಮಾತ್ಯುಚ್ಚೈಃ ಕಲ್ಪಸ್ಯಾಂತ ಇವಾರ್ಣವಃ ॥ ೨೬ ॥

ಭವತ್ಯಪೇತಸಂರಂಭೋ ವೃಷ್ಟಿಮೂಕ ಇವಾಂಬುದಃ ।
ತಿಷ್ಠತ್ಯಾತ್ಮನಿ ಸಂವೇತ್ತಾ ಪ್ರಶಾಂತ ಇವ ವಾರಿಧಿಃ ॥ ೨೭ ॥

ನಿರತಿಶಯವಾದ ಆನಂದಸಾಮ್ರಾಜ್ಯವನ್ನು ಸ್ವತ ಏವ ಪಡೆದು ನಿತ್ಯನಿರ್ವೃತನಾಗಿರುವನು.

(ಪ್ರಾಪ್ತರಾಜ್ಯ ಇವಾಧನಃ ಎಂದಿದ್ದರೆ ಕಡುಬಡವನು ದೊರೆತನವನ್ನು ಸಂಪಾದಿಸಿಕೊಂಡವನಾಗಿ ಆನಂದಿಸುವಂತೆ ಎಂದರ್ಥ ಮಾಡಬೇಕು. ನಿರತಿಶಯಾನಂದವು ನಿತ್ಯಾಪ್ತ ಸಹಜವಾದ ಸ್ವರೂಪವು. ಅದು ಪ್ರಾಪ್ಯವಲ್ಲ. ಆದುದರಿಂದ ಮೇಲೆ ವರ್ಣಿಸಿದ ದೃಷ್ಟಾಂತಪ್ರಕಾರವೇ ಸಮಂಜಸವಾಗಿದೆ.) ಮೂಲದಲ್ಲಿ ಪ್ರಾಪ್ತರಾಜ್ಯ ಇವಾಧಮಃ ಎಂಬ ಪಾಠವನ್ನು ಟೀಕಾಕಾರರು ಒಪ್ಪಿಕೊಂಡು ಅಧಮಃ ಎಂಬ ಪದಕ್ಕೆ ದರಿದ್ರಃ ಎಂದರ್ಥ ಮಾಡಿರುವರು. ಆ ಅರ್ಥವು ಶ್ರೀ ವಸಿಷ್ಠರಿಗೆ ಅಭಿಪ್ರೇತವಾಗಿದ್ದಿದ್ದರೆ ಅಧನಃ ಎಂದೇ ಅವರು ಹೇಳಬಹುದಾಗಿತ್ತಲ್ಲವೆ. ಅದು ಕಾರಣ. ಆ ಅರ್ಥವನ್ನು ಉಪೇಕ್ಷಿಸಿ ಅಧಮನಾದ ಮನುಷ್ಯನು ಎಂಬರ್ಥವನ್ನಿಟ್ಟುಕೊಂಡು ಮೇಲ್ಕಂಡ ರೀತಿಯಲ್ಲಿ ನಾವು ಇಲ್ಲಿ ತಾತ್ಪರ್ಯವನ್ನು ವಿವರಿಸಿರುವೆವು.)

೨೬. ಶರದೃತುವಿನಲ್ಲಿ ಮೇಘಗಳ ಆವರಣವಿಲ್ಲದೆ ಆಕಾಶವು ನಿರ್ಮಲವಾಗಿ ಪ್ರಕಾಶಿಸುವಂತೆ ನಿರವಧಿಕ ದಿವ್ಯವಾದ ಸ್ವಪ್ರಕಾಶದಿಂದ ಶೋಭಿಸುವನು. ಪ್ರಳಯಕಾಲಾಂತದಲ್ಲಿನ ಸಮುದ್ರದಂತೆ ಸ್ವಸ್ವರೂಪದಲ್ಲಿಯೇ ಅಡಗಲಾರದವನಾಗಿ ಅಪರಿಮಿತನಾಗುವನು. (ಅಳವಡೆಯದವನಾಗಿ ಅಪರಿಚ್ಛಿನ್ನನಾಗಿ ಅಖಂಡಾಕಾರನಾಗಿರುವನು.)

೨೭. ಮತ್ತು ವರ್ಷರ್ತುವಿನಲ್ಲಿ ಪೂರ್ತಿಯಾಗಿ ಮಳೆಗರೆದು ಬರಿಯದಾಗಿರುವ ಮೇಘವು ಶರದೃತುವಿನಲ್ಲಿ ಗರ್ಜಿಸದೆ ಮೌನದಿಂದಿರುವಂತೆ ಅವನು ದುರಭಿಮಾನಗಳನ್ನು ಬಿಟ್ಟುಬಿಟ್ಟು ಆಡಂಬರವಿಲ್ಲದವನಾಗಿ ಶಾಂತಿಯಿಂದಿರುವನು. ಅವನು

ಪರಂ ಧೈರ್ಯಮುಪಾದತ್ತೇ ಸ್ಥೈರ್ಯಂ ಮೇರುರಿವಾಚಲಃ ।
ರಾಜತೇ ಸ್ವಚ್ಛಯಾ ಲಕ್ಷ್ಮ್ಯಾ ಶಾಂತೇಂಧನ ಇವಾನಲಃ ॥ ೨೮ ॥

ಭವತ್ಯಾತ್ಮನಿ ನಿರ್ವಾಣಃ ಪ್ರಶಾಂತ ಇವ ದೀಪಕಃ ।
ತೃಪ್ತಿಮಾಯಾತಿ ಪರಮಾಂ ನರಃ ಪೀತಾಮೃತೋ ಯಥಾ ॥ ೨೯ ॥

ಅಂತರ್ದೀಪೋ ಘಟ ಇವ ಮಧ್ಯಜ್ವಾಲ ಇವಾನಲಃ ।
ಸ್ಫುರದ್ದೀಪ್ತಿರ್ಮಣಿರಿವ ಪ್ರಯಾತ್ಯಂಶಃ ಪ್ರಕಾಶತಾಂ ॥ ೩೦ ॥

ಚೆನ್ನಾಗಿ ಆತ್ಮತತ್ತ್ವವನ್ನು ತಿಳಿದುಕೊಂಡು ಪ್ರಶಾಂತವಾದ ಸಮುದ್ರದಂತೆ ಸ್ವಾತ್ಮ ಸ್ವರೂಪದಲ್ಲಿ ಅಚಲ ಪ್ರತಿಷ್ಠನಾಗಿರುವನು.

೨೮. ಮೇರು ಪರ್ವತವು ವಿಶೇಷವಾದ ಸ್ಥೈರ್ಯವನ್ನು ಪಡೆದಿರುವಂತೆ ತತ್ತ್ವಜ್ಞನು ವಿಷಯಗಳಿಂದ ವಿಕಾರಗೊಳ್ಳದಿರುವಂತಹ ಮನಸ್ಸಿನ ಪ್ರಬಲವಾದ ಧೈರ್ಯವನ್ನೂ ಭಯಸ್ಥಾನಗಳಿಂದ ಹೆದರದೆ ಇರುವಂತಹ ಸ್ಥೈರ್ಯವನ್ನೂ ಸ್ವೀಕರಿಸಿ ಅಚಲನಾಗಿರುವನು. ಸೌದೆಯ ಭಾಗವೆಲ್ಲವೂ ಚೆನ್ನಾಗಿ ಉರಿದು ಹೋಗಿ ಕೆಂಡವಾಗಿ ಉಳಿದಿರುವ ಅಗ್ನಿಯಂತೆ ಸ್ವಚ್ಛವಾದ (ಹೊಗೆಯಿಲ್ಲದ) ತೇಜಸ್ಸಿನಿಂದ ವಿರಾಜಿಸುವನು.

೨೯. ಪ್ರಶಾಂತವಾದ ದೀಪದಂತೆ ತತ್ತ್ವಜ್ಞನು ಅವಿದ್ಯಾಕಲ್ಪಿತವಾಗಿದ್ದ ತನ್ನ ದೇಹಾದಿ ರೂಪವನ್ನು ಲಯಗೊಳಿಸಿ, ಸ್ವಾತ್ಮ ಸ್ವರೂಪದಲ್ಲಿ ವಿಲೀನನಾಗಿ ಐಕ್ಯವನ್ನು ಪಡೆಯುವನು. ಅಮೃತಪಾನ ಮಾಡಿದ ದೇವತೆಯು ನಿರವಧಿಕ ತೃಪ್ತಿಯನ್ನು ಪಡೆದು ಅನ್ನೋದಕಗಳನ್ನು ಬಯಸದಿರುವಂತೆ ತತ್ತ್ವಜ್ಞನಾದ ಮನುಷ್ಯನು ಆಪ್ತಸರ್ವಕಾಮನಾಗಿರುವ ಕಾರಣ ನಿತ್ಯ ಸಂತೃಪ್ತನಾಗಿ ಪುನಃ ಅತಿ ತುಚ್ಛವಾದ ಈ ಕ್ಷಣಿಕ ವಿಷಯ ಸುಖಗಳನ್ನು ಆಶಿಸದೆ ಇರುವನು.

೩೦. ಮತ್ತು ತನ್ನೊಳಗೆ ಪ್ರಕಾಶಮಾನವಾದ ದೀಪವನ್ನು ಧರಿಸಿಕೊಂಡಿರುವ ಘಟದಂತೆಯೂ ಮಧ್ಯದಲ್ಲಿ ಜಾಜ್ವಲ್ಯಮಾನವಾಗಿ ಉರಿಯುತ್ತಿರುವ ಅಗ್ನಿಯಂತೆಯೂ, ಥಳಥಳನೆ ಹೊಳೆಯುವ ವಿಶೇಷವಾದ ಕಾಂತಿಯಿಂದ ಕೂಡಿರುವ ದಿವ್ಯ ರತ್ನದಂತೆಯೂ ತತ್ವಜ್ಞನು ತನ್ನೊಳಗೆ ಸ್ವಾತ್ಮ ಚೈತನ್ಯ ಪ್ರಕಾಶದಿಂದ ಸ್ವತಃ ಪ್ರಕಾಶಮಾನನಾಗಿ ಸೂರ್ಯ ಚಂದ್ರ ಮುಂತಾದ ದಿವ್ಯ ಜ್ಯೋತಿಗಳನ್ನೂ ಬೆಳಗಿಸುತ್ತಾ ಇರುವನು.

ಸರ್ವಾತ್ಮಕಂ ಸರ್ವಗತಂ ಸರ್ವೇಶಂ ಸರ್ವನಾಯಕಂ ।
ಸರ್ವಾಕಾರಂ ನಿರಾಕಾರಂ ಸ್ವಮಾತ್ಮಾನಂ ಪ್ರಪಶ್ಯತಿ ॥ ೩೧ ॥

ಹಸತ್ಯಲಮತೀತಾಸ್ತಾಃ ಪೇಲವಾ ದಿವಸಾವಲೀಃ ।
ಯಾಸು ಸ್ಮರಶರಶ್ರೇಣೀಚಪಲಂ ಚಿತ್ತಮಾಸ್ಥಿತಂ ॥ ೩೨ ॥

ಸಂಗರಂಗ ವಿನಿಷ್ಕ್ರಾಂತಃ ಶಾಂತಮಾನ ಮನೋಜ್ವರಃ ।
ಅಧ್ಯಾತ್ಮರತಿರಾಸೀನಃ ಪೂರ್ಣಃ ಪಾವನ ಮಾನಸಃ ॥ ೩೩ ॥

---

೩೧. ಮತ್ತು ತತ್ತ್ವಜ್ಞನು ಸರ್ವಾತ್ಮಕನಾಗಿಯೂ, ಸರ್ವಗತನಾಗಿಯೂ ಸರ್ವ ಜಗದೀಶ್ವರನಾಗಿಯೂ, ಸರ್ವಾಂತರ್ಯಾಮಿಯಾಗಿಯೂ, (ಸರ್ವನಾಯಕ) ವ್ಯವಹಾರ ದೆಸೆಯಲ್ಲಿ ಸರ್ವಾಕಾರನಾಗಿಯೂ ಆದರೆ ಪರಮಾರ್ಥತಃ ನಿರಾಕಾರ ನಾಗಿಯೂ ಇರುವ ಸ್ವಾತ್ಮ ಸ್ವರೂಪವನ್ನು ಯಥಾಸ್ಥಿತವಾಗಿ ತತ್ತ್ವತಃ ಸಾಕ್ಷಾತ್ಕರಿಸಿ ಧನ್ಯನಾಗುವನು.

೩೨. ಮತ್ತು ತತ್ವಜ್ಞನು ಪೂರ್ವಕಾಲದ ಯಾವ ಯಾವ ದಿವಸಗಳಲ್ಲಿ ತನ್ನ ಚಿತ್ತವು ಮನ್ಮಥನ ಬಾಣಾವಳಿಗಳಿಂದ ಪೆಟ್ಟು ತಿಂದು ದಿಙ್ಮೂಢವಾಗಿ ಅತ್ಯಂತ ಚಪಲತೆಯಿಂದ ಓಡುತ್ತಲಿದ್ದಿತೋ, ಅಂತಹ ಅತಿ ತುಚ್ಛವಾದ (ಜುಗುಪ್ಸಾವಹ ವಾದ) ಕಳೆದುಹೋದ ದಿವಸಾವಳಿಗಳನ್ನು ಸ್ಮರಿಸಿಕೊಂಡು ಈಗ ಲೀಲೆಯಿಂದ ವಿಶೇಷವಾಗಿ ಪರಿಹಾಸ ಮಾಡುವನು.

೩೩. ಮತ್ತು ತತ್ತ್ವಜ್ಞನು ವಿಷಯಾಸಕ್ತಚಿತ್ತರಾದ ದುರ್ಜನರ ಸಹವಾಸ ದಿಂದಲೂ, ದುಷ್ಟ ವಿಷಯಾನುರಾಗದಿಂದಲೂ ತಪ್ಪಿಸಿಕೊಂಡು ಹೊರಕ್ಕೆ ಬಂದವ ನಾಗಿಯೂ ಅಭಿಮಾನವೆಂಬ ತನ್ನ ಮನೋಜ್ವರವನ್ನು ನಿವಾರಣೆ ಮಾಡಿಕೊಂಡವ ನಾಗಿಯೂ, ಅಖಂಡಾನಂದ ಪರಿಪೂರ್ಣನಾಗಿಯೂ, ಪರಮ ಪಾವನವಾದ ಹೃದಯ ವುಳ್ಳವನಾಗಿಯೂ, ಆತ್ಮಾರಾಮನಾಗಿಯೂ, (ಆಧ್ಯಾತ್ಮಿಕವಾದ ಸ್ವರೂಪಾನಂದ ರಸದಿಂದ ಸಂತೋಷವುಳ್ಳವನು ವೈಷಯಿಕಾನಂದದಿಂದ ಸಂತುಷ್ಟನಾಗದವನು.) ಸುಪ್ರತಿಷ್ಠಿತನಾಗಿರುವನು.

ನಿರ್ಮೃಷ್ಟಕಾಮ ಪಂಕಾಂಕಶ್ಛಿನ್ನಬಂಧ ನಿಜಭ್ರಮಃ ।
ದ್ವಂದ್ವದೋಷ ಭಯೋನ್ಮುಕ್ತಸ್ತೀರ್ಣಸಂಸಾರ ಸಾಗರಃ ॥ ೩೪ ॥

ಪ್ರಾಪ್ತಾನುತ್ತಮ ವಿಶ್ರಾಂತಿರ್ಲಬ್ಧಾಲಭ್ಯ ಪರಾಸ್ಪದಃ ।
ಅನಿವೃತ್ತಿಪದಂ ಪ್ರಾಪ್ತೋ ಮನಸಾ ಕರ್ಮಣಾ ಗಿರಾ ॥ ೩೫ ॥

ಸರ್ವಾಭಿವಾಂಛಿತಾರಂಭೋ ನ ಕಿಂಚಿದಪಿ ವಾಂಛತಿ ।
ಸರ್ವಾನುಮೋದಿತಾನಂದೋ ನ ಕಿಂಚಿದನುಮೋದತೇ ॥ ೩೬ ॥

ನ ದದಾತಿ ನ ಚಾದತ್ತೇ ನ ಸ್ತೌತಿ ನ ಚ ನಿಂದತಿ ।
ನಾಸ್ತಮೇತಿ ನ ಚೋದೇತಿ ನ ತುಷ್ಯತಿ ನ ಶೋಚತಿ ॥ ೩೭ ॥

---

೩೪. ಮತ್ತು ಕಾಮೋಪಭೋಗಗಳೆಂಬ ಕೆಸರಿನ ಮಾಲಿನ್ಯವನ್ನು ಚೆನ್ನಾಗಿ ಮನಸ್ಸಿನಿಂದ ತೊಳೆದುಬಿಡುವನು. ತನ್ನ ನಾನಾ ಭ್ರಾಂತಿಗಳೆಂಬ ಬಂಧನ ಜಾಲವನ್ನು ಪೂರ್ತಿಯಾಗಿ ಕತ್ತರಿಸಿಹಾಕುವನು. ಶೀತೋಷ್ಣ ಸುಖ ದುಃಖಾದಿ ದ್ವಂದ್ವ ದೋಷಗಳ ಭಯವನ್ನು ಕಳೆದುಕೊಂಡು ನಿರ್ಭಯನಾಗುವನು. ಮತ್ತು ಅಪಾರವಾದ ಸಂಸಾರ ಸಾಗರವನ್ನು ದಾಟಿಬಿಟ್ಟು ಕೃತಕೃತ್ಯನಾಗುವನು.

೩೫. ಮತ್ತು ತತ್ತ್ವಜ್ಞನು ಉತ್ತಮೋತ್ತಮವಾದ (ನಿರತಿಶಯ) ಸ್ವಸ್ಥತಾ ರೂಪ ವಿಶ್ರಾಂತಿಯನ್ನು ಪಡೆದವನಾಗುವನು. ಸಾಧಾರಣವಾಗಿ ಅಜ್ಞ ಜನರಿಗೆ ಸರ್ವಥಾ ಅಲಭ್ಯವಾದ ಪರಮ ಪದದಲ್ಲಿ ಆಶ್ರಯವನ್ನು ಸ್ಥಿರವಾಗಿ ಪಡೆಯುವನು. ಪುನರಾವೃತ್ತಿರಹಿತವಾದ ಸಾಮ್ರಾಜ್ಯ ಪದವಿಯನ್ನು ಪಡೆದು ಸುಸ್ಥಿರನಾಗಿರುವನು.

೩೬. ಮತ್ತು ಇವನು, ಮನೋವಾಕ್ಕಾಯಗಳೆಂಬ ಕರಣತ್ರಯದಿಂದ ಆಚರಿಸುವ ವ್ಯವಹಾರವನ್ನು ಲೋಕದಲ್ಲಿನ ಇತರ ಸಾಧು ಜನರೆಲ್ಲರೂ ತಮ್ಮ ಆಚರಣೆಗೋಸ್ಕರ ಪರಿಗ್ರಾಹ್ಯವೆಂದು ತಿಳಿದು ಇಚ್ಛಿಸುವರು. ಅವನುಮಾತ್ರ ಯಾವುದೊಂದನ್ನೂ ಇಚ್ಛಿಸದೆ ಇರುವನು. ಇವನ ವ್ಯವಹಾರ ಫಲವಾದ ಆನಂದವನ್ನು ಎಲ್ಲಾ ಜನರೂ ಶ್ಲಾಘನೆಮಾಡುವರು. ಆದರೆ ಆವನು ಯಾವುದೊಂದನ್ನೂ ಶ್ಲಾಘಿಸುವುದೂ ಇಲ್ಲ.

೩೭. ಮತ್ತು ಇವನು ಯಾವುದನ್ನೂ ಕೊಡುವುದಿಲ್ಲ. ತೆಗೆದುಕೊಳ್ಳು

ಸರ್ವಾರಂಭ ಪರಿತ್ಯಾಗೀ ಸರ್ವೋಪಾಧಿ ವಿವರ್ಜಿತಃ ।
ಸರ್ವಾಶಾ ಸಂಪರಿತ್ಯಾಗೀ ಜೀವನ್ಮುಕ್ತ ಇತಿ ಸ್ಮೃತಃ || ೩೮ ||

ಸರ್ವೈಷಣಾಃ ಪರಿತ್ಯಜ್ಯ ಚೇತಸಾ ಭವ ಮೌನವಾನ್ ।
ಧಾರಾನಿರವಶೇಷೇಣ ಯಥಾ ತ್ಯಕ್ತ್ವಾ ಪಯೋಧರಃ || ೩೯ ||

ನ ತಥಾ ಸುಖಯತ್ಯಂಗ ಸಂಲಗ್ನಾ ವರವರ್ಣಿನೀ ।
ಯಥಾ ಸುಖಯತಿ ಸ್ವಾಂತಮಿಂದು ಶೀತಾನಿರಾಶತಾ || ೪೦ ||

ವುದೂ ಇಲ್ಲ ಹೊಗಳುವುದೂ ಇಲ್ಲ. (ತನ್ನ ಪಾರಮಾರ್ಥಿಕವಾದ ಸ್ವಾತ್ಮ ಸ್ವರೂಪವನ್ನು ಮರೆಯಿಸಿಕೊಂಡು) ಅಸ್ತಂಗತನಾಗುವುದಿಲ್ಲ. ಮತ್ತು (ಸರ್ವದಾ ಸ್ವತಃ ಪ್ರಕಾಶನಾದ ಕಾರಣ, ಪುನಃ ಸ್ವರೂಪಾವಿರ್ಭಾವವನ್ನು ಹೊಂದಿ) ಉದಯಿಸುವುದೂ ಇಲ್ಲ. ಹರ್ಷ ಪಡುವುದೂ ಇಲ್ಲ. ಶೋಕಿಸುವುದೂ ಇಲ್ಲ.

೩೮. ಹೀಗೆ ಸರ್ವಕರ್ಮಾರಂಭಗಳನ್ನೂ ಪರಿತ್ಯಜಿಸಿದವನಾಗಿಯೂ, ಸಮಸ್ತ ಉಪಾಧಿಗಳಿಂದ ವಿವರ್ಜಿತನಾಗಿಯೂ, ಸಮಸ್ತ ಆಶೆಗಳನ್ನೂ ಬಿಟ್ಟವನಾಗಿಯೂ ಇರುವ ತತ್ತ್ವಜ್ಞನನ್ನೇ ಜೀವನ್ಮುಕ್ತನೆಂದು ಶಾಸ್ತ್ರಗಳು ವ್ಯವಹರಿಸುವುವು.

೩೯. ಮೇಘವು ತನ್ನಲ್ಲಿರುವ ನೀರನ್ನೆಲ್ಲಾ ನಿಶ್ಶೇಷವಾಗಿ ಧಾರಾಕಾರವಾಗಿ ಮಳೆಗರೆದು, ಕಳೆದುಕೊಂಡು ಬಳಿಕ ಗರ್ಜನೆಮಾಡದೆ ಹೇಗೆ ಮೌನದಿಂದಿರುವುದೋ ಹಾಗೆ, ಅಯ್ಯ ರಾಮ, ನೀನು ಕೂಡ, ನಿನ್ನ ಮನಸ್ಸಿನಿಂದ (ಮನಃ ಪೂರ್ವಕವಾಗಿ) ಸಮಸ್ತ ಕಾಮನೆಗಳನ್ನು ನಿಶ್ಶೇಷವಾಗಿ ಪರಿತ್ಯಜಿಸಿ ಮೌನದಿಂದಿರು.

೪೦. ಚಂದ್ರನ ಚಂದ್ರಿಕೆ (ಬೆಳದಿಂಗಳು) ಯಂತೆ ಅತಿಶೀತಲವಾದ ಆಶಾರಾಹಿತ್ಯವು (ನಿಷ್ಕಾಮಸ್ಥಿತಿಯು) ಹೇಗೆ, ಸಕಲಸಂತಾಪಗಳನ್ನೂ ನಿವಾರಣೆಮಾಡಿ ಎಷ್ಟುಮಟ್ಟಿಗೆ ತತ್ತ್ವಜ್ಞನ ಮನಸ್ಸಿಗೆ ಆನಂದವುಂಟುಮಾಡುವುದೋ, ಹಾಗೆ ಅಷ್ಟುಮಟ್ಟಿಗೆ, ತಾನಾಗಿಯೇ ಬಂದು ಗಾಢಾನುರಾಗದಿಂದ ತನ್ನ ದೇಹವನ್ನು ಆಲಿಂಗನ ಮಾಡಿಕೊಂಡು ಬಿಡದಿರುವ ಯುವತಿಯಾದ ಸುಂದರಿಯೂ ಕೂಡ ಕಾಮುಕನ ಮನಸ್ಸಿನಲ್ಲಿ ಆನಂದವುಂಟು ಮಾಡುವುದಿಲ್ಲ.

ನ ತಥೇಂದುಃ ಸುಖಯತಿ ಕಂಠಲಗ್ನೋಽಪಿ ರಾಘವ ।
ನೈರಾಶ್ಯಂ ಸುಖಯತ್ಯಂತರ್ಯಥಾ ಸಕಲ ಶೀತಲಂ ॥ ೪೧ ॥

ಪುಷ್ಪಪೂರ್ಣನವಲತೋ ನ ತಥಾ ರಾಜತೇ ಮಧುಃ ।
ಯಥೋದಾರಮತಿರ್ಮೌನೀ ನೈರಾಶ್ಯಸಮ ಮಾನಸಃ ॥ ೪೨

ನ ಹಿಮಾದ್ರೇರ್ನ ಮುಕ್ತಾಭ್ಯೋ ನ ರಂಭಾಭ್ಯೋ ನ ಚಂದನಾತ್ ।
ನ ಚ ಚಂದ್ರಮಸಃ ಶೈತ್ಯಂ ನೈರಾಶ್ಯಾದ್ಯದವಾಪ್ಯತೇ ॥ ೪೩ ॥

ಅಪಿ ರಾಜ್ಯಾದಪಿ ಸ್ವರ್ಗಾದಪೀಂದೋರಪಿ ಮಾಧವಾತ್ ।
ಅಪಿ ಕಾಂತಾಸಮಾಸಂಗಾತ್ ನೈರಾಶ್ಯಂ ಪರಮಂ ಸುಖಂ ॥ ೪೪ ॥

---

೪೧. ಅಯ್ಯಾ ರಾಘವ, ಸಮಸ್ತ ಜಗತ್ತಿಗೂ ಶೀತಲವನ್ನು (ಶಾಂತಿಯನ್ನು ತಂಪನ್ನು, ಸಂತಾಪರಾಹಿತ್ಯವನ್ನು) ಉಂಟುಮಾಡತಕ್ಕ ನಿಷ್ಕಾಮನ ಸ್ಥಿತಿಯು (ಆಶಾರಾಹಿತ್ಯವು) ಹೇಗೆ ಎಷ್ಟುಮಟ್ಟಿಗೆ ಮನಸ್ಸಿನಲ್ಲಿ ಸುಖವನ್ನುಂಟುಮಾಡುವುದೋ ಹಾಗೆ ಅಷ್ಟುಮಟ್ಟಿಗೆ ಚಂದ್ರನನ್ನೇ ತಂದು ಕೊರಳಿಗೆ ಕಟ್ಟಿಕೊಂಡರೂ ಆ ಚಂದ್ರನೂ ಕೂಡ ಮನಸ್ಸಿಗೆ ಸುಖವನ್ನುಂಟುಮಾಡುವುದಿಲ್ಲ.

೪೨. ನೈರಾಶ್ಯದಿಂದ (ನಿಷ್ಕಾಮಸ್ಥಿತಿಯಿಂದ) ಸಕಲ ವಿಷಯಗಳಲ್ಲಿಯೂ ರಾಗದ್ವೇಷಶೂನ್ಯವಾಗಿ ಸಮಚಿತ್ತನಾಗಿರುವ ಮಹಾ ಉದಾರ ಚಿತ್ತನಾದ (ವಿಶೇಷವಾಗಿ ಹರಟದೆ) ಮೌನದಿಂದಿರುವ ತತ್ತ್ವಜ್ಞನು ಈ ಲೋಕದಲ್ಲಿ ಎಷ್ಟುಮಟ್ಟಿಗೆ ವಿರಾಜಿಸುವನೋ ಅಷ್ಟುಮಟ್ಟಿಗೆ ಪುಷ್ಪಪಲ್ಲವರಾಶಿಗಳಿಂದ ಪರಿಪೂರ್ಣವಾದ ಹೊಸ ಹೊಸ ಲತೆಗಳಿಂದ ಕೂಡಿದ ಚೈತ್ರಮಾಸದ ಸೊಬಗೂ ಕೂಡ ವಿರಾಜಿಸುವುದಿಲ್ಲ.

೪೩. ನಿಷ್ಕಾಮ ಸ್ಥಿತಿಯಿಂದ ಎಂತಹ ಶೈತ್ಯವು (ತಂಪು) (ಶಾಂತಿ) ಲಭ್ಯವಾಗುವುದೋ ಅಂತಹ ಶೈತ್ಯವು ಲೋಕದಲ್ಲಿ ಹಿಮಾಲಯದಿಂದಲೂ ಲಭ್ಯವಾಗುವುದಿಲ್ಲ. ಅಥವಾ ಮುಕ್ತಾಫಲ (ಮುತ್ತು)ಗಳಿಂದಲಾಗಲೀ, ಬಾಳೆಗಿಡಗಳಿಂದಲಾಗಲೀ, ಶ್ರೀಗಂಧದಿಂದಲಾಗಲೀ ಮತ್ತು ಚಂದ್ರನಿಂದಾಗಲೀ ಮತ್ತೆ ಯಾವುದರಿಂದಲೂ ಲಭ್ಯವಾಗುವುದಿಲ್ಲ.

೪೪. ಭೂಮಂಡಲದ ಏಕಛತ್ರಾಧಿಪತ್ಯಕ್ಕಿಂತಲೂ ಸ್ವರ್ಗಲೋಕದಲ್ಲಿ ಇಂದ್ರನ ಪದವಿಗಿಂತಲೂ ಚಂದ್ರಮಂಡಲ ಸ್ಥಿತಿಗಿಂತಲೂ ವಸಂತಕಾಲದಲ್ಲಿನ

ತೃಣವನ್ನೋಽಪಕುರ್ವಂತಿ ಯತ್ರ ತ್ರಿಭುವನಶ್ರಿಯಃ ।
ಸಾ ಪರಾ ನಿರ್ವೃತಿಃ ಸಾಧೋ ನೈರಾಶ್ಯಾದುಪಲಭ್ಯತೇ ॥ ೪೫ ॥

ಆಪತ್ಕರಂಜ ಪರಶುಂ ಪರಾಯಾ ನಿರ್ವೃತೇಃ ಪದಂ ।
ಪುಷ್ಪಗುಚ್ಛಂ ಶಮತರೋರಾಲಂಬಸ್ವ ನಿರಾಶತಾಂ ॥ ೪೬ ॥

ಗೋಷ್ಪದಂ ಪೃಥಿವೀ ಮೇರುಃ ಸ್ಥಾಣುರಾಶಾಃ ಸಮುದ್ಗಕಾಃ ।
ತೃಣಂ ತ್ರಿಭುವನಂ ರಾಮ ನೈರಾಶ್ಯಾಲಂಕೃತಾಕೃತೇಃ ॥ ೪೭ ॥

ಸ್ವೇಚ್ಛಾ ವಿಹಾರಕ್ಕಿಂತಲೂ ಪ್ರಾಣವಲ್ಲಭೆಯರೆನಿಸಿಕೊಂಡ ಕಾಂತೆಯರ ಸಮಾಲಿಂಗನಕ್ಕಿಂತಲೂ ಕೂಡ ನಿಷ್ಕಾಮಸ್ಥಿತಿಯು ಹೆಚ್ಚು ನಿರತಿಶಯಾನಂದ ಪ್ರದವಾದುದು.

೪೫. ಅಯ್ಯಾ ಸಾಧುವೇ, ಯಾವ ಸ್ಥಿತಿಯಲ್ಲಿ ಲೋಕತ್ರಯದೊಳಗಿರುವ ಸಕಲ ಸಂಪತ್ತುಗಳೂ ತೃಣದಂತೆ ಅಪ್ರಯೋಜಕಗಳಾಗಿ ಬಿಡುವುವೋ ಅಂತಹ ನಿರತಿಶಯಾನಂದೈಕರಸರೂಪ (ಪರಮ ಪುರುಷಾರ್ಥರೂಪ) ಮೋಕ್ಷಸ್ಥಿತಿಯು ನಿಷ್ಕಾಮನ ಸ್ಥಿತಿಯಿಂದ ಲಭ್ಯವಾಗುವುದು. ["ತಸ್ಯೇಯಂ ಪೃಥಿವೀಸರ್ವಾವಿತ್ತಸ್ಯ ಪೂರ್ಣಾಸ್ಯಾತ್ ಸಏಕೋ ಮಾನುಷ ಆನಂದಃ" ಇತ್ಯಾದಿ (ತೈತ್ತಿರೀಯೋಪನಿಷತ್ತಿನ ಆನಂದವಲ್ಲೀ) ಶ್ರುತಿಯು ವಿಸ್ತಾರವಾಗಿ ಬ್ರಹ್ಮಾನಂದವು ನಿರತಿಶಯವೂ ಸರ್ವೋತ್ತಮವೂ ಆದುದು ಎಂದು ಪ್ರತಿಪಾದಿಸಿರುವುದು.)

೪೬. ಹೀಗಿರುವುದರಿಂದ, ಅಯ್ಯಾ ರಾಮ, ಆಪತ್ತುಗಳೆಂಬ ಮುಳ್ಳುಗಿಡಗಳಿಗೆ ಪರಶು (ಕೊಡಲಿ)ವಾಗಿಯೂ, ನಿರತಿಶಯವಾದ ಆನಂದಕ್ಕೆ ಆಸ್ಪದವಾಗಿಯೂ ಆಶ್ರಯಸ್ಥಾನ) ಶಾಂತಿ (ಇಂದ್ರಿಯನಿಗ್ರಹ)ಎಂಬ ವೃಕ್ಷಕ್ಕೆ ಹೂಗಳ ಗೊಂಚಲಾಗಿಯೂ ಇರುವ ನಿಷ್ಕಾಮಸ್ಥಿತಿಯನ್ನು ನೀನು ಸರ್ವದಾ ಅವಲಂಬಿಸಿರುವವನಾಗು.

೪೭. ಅಯ್ಯಾ ರಾಮ, ಆಶಾರಾಹಿತ್ಯಸ್ಥಿತಿಯಿಂದ (ನೈರಾಶ್ಯದಿಂದ) ಅಲಂಕೃತವಾದ ಆಕಾರವುಳ್ಳ (ನಿಷ್ಕಾಮ) ಮಹಾತ್ಮನಿಗೆ ಈ ಭೂಮಂಡಲವೆಲ್ಲವೂ ಒಂದು ಗೋವಿನ ಹೆಜ್ಜೆಯಷ್ಟು ಅಲ್ಪವಾಗಿಯೂ ಮಹಾ ಮೇರುಪರ್ವತವು ಒಂದು ಸಣ್ಣ ಮೋಟುಮರದಂತೆ ಅತಿ ತುಚ್ಛವಾಗಿಯೂ ಎಲ್ಲಾ ದಿಕ್ಕುಗಳೂ ಸಣ್ಣ ಸಂಪುಟ

ದಾನಾದಾನಸಮಾಹಾರ ವಿಹಾರ ವಿಭವಾದಿಕಾಃ ।
ಕ್ರಿಯಾ ಜಗತಿ ಹಸ್ಯಂತೇ ನಿರಾಶೈಃ ಪುರುಷೋತ್ತಮೈಃ ॥ ೪೮ ॥
ಪದಂ ಯಸ್ಯ ನ ಬಧ್ನಾತಿ ಕದಾಚಿತ್ಕಲನಾ ಹೃದಿ ।
ತೃಣೀಕೃತತ್ರಿಭುವನಃ ಕೇನಾಸಾವುಪಮೀಯತೇ ॥ ೪೯ ॥
ಇದಂಮೇಽಸ್ತ್ವಿದಂ ಮಾಸ್ತು ಮಮೇತಿ ಹೃದಿ ರಂಜನಾ ।
ನ ಯಸ್ಯಾಸ್ತಿ ತಮಾತ್ಮೇಶಂ ತೋಲಯಂತಿ ಕಥಂ ಜನಾಃ ॥ ೫೦ ॥

ಗಳಂತೆ ಹ್ರಸ್ವವಾಗಿಯೂ ಸ್ವರ್ಗಾದಿ ಮೂರು ಲೋಕಗಳೂ ಒಂದು ಹುಲ್ಲುಕಡ್ಡಿಯಂತೆ ಉಪೇಕ್ಷಣೀಯವಾದವುಗಳಾಗಿಯೂ ಕಾಣುವುವು.

೪೮. ನಿರಾಶರಾದ (ಆಶಾರಹಿತ) ಪುರುಷ ಶ್ರೇಷ್ಠರು ಈ ಪ್ರಪಂಚದಲ್ಲಿನ ವಿಮೂಢರಾದ ಕ್ಷುದ್ರ ಜನರ ಪ್ರತಿ ದಿನದಲ್ಲಿಯೂ ನಿರಂತರವಾಗಿ ನಡೆಸುವ ಲೌಕಿಕವೂ ಶಾಸ್ತ್ರೀಯವೂ ಆದ ದಾನಗಳು, ಧನವಸ್ತ್ರಾದಿಗಳನ್ನು ಸ್ವೀಕರಿಸುವುದು ಧನಾದಿಗಳನ್ನು ಕೂಡಿಟ್ಟು ಒಂದು ಕಡೆ ಸುರಕ್ಷಿತವಾಗಿ ಉತ್ತರೋತ್ತರ ಉಪಯೋಗಿಸಿಕೊಳ್ಳುವುದಕ್ಕಾಗಿ ಶೇಖರಿಸುವುದು (ಸಮಾಹಾರ) ಹಣವನ್ನು ವೆಚ್ಚಮಾಡಿ ಪತ್ನೀಪುತ್ರಾದಿಗಳ ಸಂಗಡ ಕ್ರೀಡಿಸುವುದು (ವಿಹಾರ) ಉಡಿಗೆ ತೊಡಿಗೆ ಅನ್ನಪಾನಾದಿ ಭೋಗ್ಯವಸ್ತುಗಳ ಸಂಪತ್ತಿಯನ್ನು ಸಂಪಾದಿಸುವಿಕೆ ಮುಂತಾದ ವ್ಯವಹಾರಗಳನ್ನು ನೋಡಿ (ಅವರ ಆಯಾಸ ಬಾಹುಳ್ಯಕ್ಕೆ ತಕ್ಕಷ್ಟು ಪ್ರತಿಫಲವಿಲ್ಲದಿದ್ದರೂ ಮೌಢ್ಯದಿಂದ ಅವರು ಅದೇ ಪುರುಷಾರ್ಥವೆಂದು ನಂಬಿಕೊಂಡಿರುವ ಕಾರಣ) ಪರಿಹಾಸಮಾಡುವರು.

೪೯. ಯಾವ ಮಹಾನುಭಾವನ ಹೃದಯದಲ್ಲಿ, ಆಶೆಯು ಎಂದಿಗೂ ಹೆಜ್ಜೆ ಹಾಕದೆ, ದೂರದಲ್ಲಿದ್ದು ಬಿಡುವುದೋ, ಮತ್ತು ಯಾವಾತನು ಮೂರು ಲೋಕಗಳನ್ನೂ ಒಂದು ಹುಲ್ಲುಕಡ್ಡಿಗೆ ಸಮವಾಗಿ ಅತಿತುಚ್ಛವಾಗಿ ಕಾಣುವನೋ ಅಂತಹ ಮಹಾತ್ಮನನ್ನು ಯಾರೊಡನೆ ಹೋಲಿಸಲಾಗುವುದು?

[ಹೋಲಿಸಬಹುದಾದ ಉಪಮಾನವು ಯಾವುದೂ ಇಲ್ಲವೇ ಇಲ್ಲವು.]

೫೦. ಯಾವ ಮಹಾತ್ಮನ ಹೃದಯದಲ್ಲಿ, “ ನನಗೆ ಇದೇ ಬೇಕು, ಇದು ನನಗೆ ಬೇಡ. ” ಎಂಬ ರಾಗದ್ವೇಷಗಳ ಲೇಪವು, ಯಾವಾಗಲೂ ಉಂಟಾಗುವುದಿಲ್ಲವೋ ಅಂತಹ, ತನ್ನ ಮನಸ್ಸನ್ನು ಗೆದ್ದು ಸ್ವಾಧೀನ ಪಡಿಸಿಕೊಂಡಿರುವ, ಮಹಾ

ಸರ್ವ ಸಂಕಟಪರ್ಯಂತಮಸಂಕಟಮಲಂ ಸುಖಂ ।
ಸೌಭಾಗ್ಯಂ ಪರಮಂ ಬುದ್ಧೇರ್ನೈರಾಶ್ಯಮವಲಂಬ್ಯತಾಂ ॥ ೫೧ ॥

ನಾಶಾಸ್ತೇ ನ ತ್ವಮಾಶಾನಾಂ ವಿದ್ಧಿ ಮಿಥ್ಯಾಭ್ರಮಂ ಜಗತ್ ।
ವಹದ್ರಥಸ್ಥದಿಕ್ಚಕ್ರ ಪರಾವರ್ತ ವದುತ್ಥಿತಂ ॥ ೫೨ ॥

ಕಿಂ ಮುಹ್ಯಸಿ ಮಹಾಬಾಹೋ ಮೂರ್ಖವದ್ಬೋಧಿತೋಽಪಿ ಸನ್ ।
ಮಮೇದಂ ತದಯಂ ಸೋಽಹಮಿತ್ಯುದ್ಭ್ರಾಂತೇನ ಚೇತಸಾ ॥ ೫೩ ॥

ತ್ಮನನ್ನು ಜನರು ಹೇಗೆ ತಾನೆ (ಅವರಿಗೆ ಸಮಾನರಾದ ಬೇರೆ ಜನಗಳೇ ಲೋಕದಲ್ಲಿಲ್ಲದಿರುವ ಕಾರಣ) ಹೋಲಿಸಬಲ್ಲರು. ?

೫೧. ಅದು ಕಾರಣ, ಸಮಸ್ತ ಸಂಕಟಗಳಿಗೂ ಆಚೆ. (ಹೊರಗಡೆ) ಬಹು ದೂರದಲ್ಲಿ ಸ್ವಲ್ಪವೂ ಅಂಟಿಸಿಕೊಳ್ಳದೆ ಇರುವ, ಆದುದರಿಂದಲೇ ಯಾವ ಸಂಕಟವೂ ಇಲ್ಲದೆ ನಿರುಪದ್ರವವಾಗಿರುವ, ಇತರಾಪೇಕ್ಷೆಯಿಲ್ಲದಂತೆ ಸ್ವತಃ ಪರ್ಯಾಪ್ತವಾದ ನಿರತಿಶಯ ಸುಖಸ್ವರೂಪವಾಗಿರುವ ಬುದ್ಧಿಗೆ ವಿಶೇಷವಾಗಿ ಸಾರ್ಥಕ್ಯವನ್ನು ಉಂಟುಮಾಡುವ, ಈ ಉತ್ತಮೋತ್ತಮವಾದ ನೈರಾಶ್ಯವನ್ನು (ನಿಷ್ಕಾಮಸ್ಥಿತಿ) ಸರ್ವಜನರೂ ಪರಮ ಪುರುಷಾರ್ಥಸಿದ್ಧಿಗಾಗಿ ಆಶ್ರಯಿಸಬೇಕು.

೫೨. ಅಯ್ಯ ರಾಮ, ನಿನಗೆ ಆಶೆಗಳೂ ಇಲ್ಲ, ಮತ್ತು ಆಶೆಗಳ ಸಂಬಂಧವನ್ನು ಪಡೆದವನೂ ಅಲ್ಲ. ಒಂದು ರಥವು ಬಹುವೇಗದಿಂದ ಓಡುತ್ತಿರುವಾಗ, ಅದರಲ್ಲಿ ಕುಳಿತು ಪ್ರಯಾಣಮಾಡುವ ಮನುಷ್ಯನಿಗೆ ದಿಕ್ಕುಗಳೆಲ್ಲವೂ ಚಕ್ರದಂತೆ ಗರಗರನೆ ಸುತ್ತುತ್ತಾ, ಅವನಿಗೆ ತೀರಾ ವಿರೋಧವಾಗಿ ಎದುರು ಕಡೆಯಿಂದ ಅವನು ಹಿಂದೆ ಬಿಟ್ಟುಕೊಂಡು ಬರುತ್ತಿರುವ ಕಡೆಗೆ ಎರಡು ಕಡೆಗಳಲ್ಲಿರುವ ಮರ, ಗಿಡ, ಗುಡ್ಡ ಮುಂತಾದುವು ಚಲಿಸುತ್ತಿರುವಂತೆ ಹೇಗೆ ಭ್ರಾಂತಿಯಿಂದ ಗೋಚರವಾಗುವುದೋ, ಹಾಗೆ ಈ ಜಗತ್ತು ಮಿಥ್ಯಾಭೂತ ಭ್ರಾಂತಿಮಯವಾಗಿ ಆವಿರ್ಭವಿಸಿ (ಅಜ್ಞಾನಕಲ್ಪಿತವಾಗಿ) ತೋರುತ್ತಿರುವುದೆಂದು ತಿಳಿಯುವವನಾಗು.

೫೩. ಅಯ್ಯ ಮಹಾಬಾಹುವೆ, ರಾಮ, ನಾನು ನಿನಗೆ ಎಷ್ಟೋ ಬಗೆಯಾಗಿ ಪುನಃ ಪುನಃ ದೇಹಾದಿಗಳಲ್ಲಿ ಅಹಂಭಾವ ಮಮಭಾವಗಳನ್ನು ತ್ಯಾಗಮಾಡುವುದೇ ನೈರಾಶ್ಯವನ್ನು ಸಾಧಿಸುವ ಉಪಾಯವೆಂದು ಬೋಧಿಸಿರುವೆನು. ಆದಾಗ್ಯೂ ಕೂಡ, ನೀನೇಕೆ ಕಡುಮೂರ್ಖನಂತೆ, “ ಈ ದೇಹಸಂಬಂಧಿಯಾದ ಸುಖ

ಆತ್ಮೈವೇದಂ ಜಗತ್ಸರ್ವಂ ನಾನಾತೇಹ ನ ವಿದ್ಯತೇ ।
ಏಕರೂಪಂ ಜಗದ್ ಜ್ಞಾತ್ವಾ ಧೀರೈರ್ನಾಮ ನ ಖಿದ್ಯತೇ ॥ ೫೪ ॥

ಯಥಾ ಭೂತ ಪದಾರ್ಥೌಘದರ್ಶನಾದೇವ ರಾಘವ ।
ಪರಮಾಶ್ವಾಸನಂ ಬುದ್ಧೇ ರ್ನೈರಾಶ್ಯಮಧಿಗಚ್ಛತಿ ॥ ೫೫ ॥

ದುಃಖಾದಿಗಳು ನನ್ನವು; ಆ ದೇಹವು ನಾನು; ಈ ನಾನು ಇಂತಹವನು; ಇತ್ಯಾದಿ ಪ್ರಕಾರಗಳಲ್ಲಿ ವಿಶೇಷವಾಗಿ ಭ್ರಾಂತಿಗೊಂಡಿರುವ ಮನಸ್ಸಿನಿಂದ ಹೀಗೆ ಮೋಹ ಪಡುತ್ತಿರುವೆ ?

೫೪. ಈ ಸಮಸ್ತ ಜಗತ್ತೂ ಆತ್ಮವೇ. ನಾನಾತ್ವವು (ದ್ವೈತವೆಂಬುದು, ಭೇದ ಬುದ್ಧಿಯು) ಈ ಆತ್ಮನಲ್ಲಿ ಇಲ್ಲವೇ ಇಲ್ಲ. ಧೀರರಾದ ತತ್ತ್ವಜ್ಞರು ಜಗತ್ತೆಲ್ಲವೂ ಕೇವಲ ಮಾಯಾವಿಜೃಂಭಿತವೆಂದೂ, ತತ್ತ್ವತಃ ಅದು ಅದ್ವೈತಾತ್ಮಸ್ವರೂಪವೇ ಎಂದೂ ನಿಶ್ಚಯವಾಗಿ ತಿಳಿದುಕೊಂಡು' ವಿವೇಕಿಗಳು ಅಜ್ಞಾನಕಲ್ಪಿತವಾದ ಅಸತ್ಯ ಬೇತಾಳನಿಂದ ಭಯಶೋಕಗಳನ್ನು ಪಡೆಯದೆ ನಿಶ್ಚಿಂತರಾಗಿರುವಂತೆ, ಅಜ್ಞಾನ ಬಲದಿಂದ ಎಂದಿಗೂ ಪ್ರಾಪಂಚಿಕ ಶೋಕ ಮೋಹಗಳಿಂದ ಖಿನ್ನರಾಗುವುದೇ ಇಲ್ಲ.

[" ಆತ್ಮೈವೇದಗ್ಂ ಸರ್ವಂ । ಇದಂಸರ್ವಂ ಯದಯಮಾತ್ಮಾ । ನೇಹ ನಾನಾಸ್ತಿ ಕಿಂಚ ನ । ಮೃತ್ಯೋಃ ಸಮೃತ್ಯು ಮಾಪ್ನೋತಿ ಯ ಇಹನಾನೇವ ಪಶ್ಯತಿ । ಅತೋಽನ್ಯದಾರ್ತಂ । ವಾಚಾರಂಭಣಂವಿಕಾರೋ ನಾಮಧೇಯಂ ನತುತದ್ದ್ವಿತೀಯ ಮಸ್ತಿ, ಇತ್ಯಾದಿ ಸಾವಿರಾರು ಶ್ರುತಿಗಳನ್ನು ಗಮನಿಸಬೇಕು. ತರತಿಶೋಕಮಾತ್ಮವಿತ್ ಇತ್ಯಾದಿ]

೫೫. ಅಯ್ಯ ರಾಘವ, ಈ ಪ್ರಕಾರವಾಗಿ, ಸಕಲ ಪ್ರಾಪಂಚಿಕ ಪದಾರ್ಥ ಸಮುದಾಯಗಳನ್ನು ಯಥಾರ್ಥವಾಗಿ ಸ್ವಾತ್ಮಭೂತವಾದವುಗಳೆಂದೇ ಭಾವಿಸಿ, ಅವುಗಳ ತತ್ತ್ವವನ್ನು ಅವಧರಿಸುವುದರಿಂದ ಮಾತ್ರವೇ, ವಿವೇಕಿಯಾದ ಸಾಧಕನು ಬುದ್ಧಿಗೆ ಆತ್ಯಂತಿಕ ಸಮಾಧಾನವನ್ನು ನೀಡುವ (ಅನಾಯಾಸಕರವಾದ ವಿಶ್ರಾಂತಿಯನ್ನು ಕೊಡುವ, ನೈರಾಶ್ಯವನ್ನು ಪಡೆದು ನಿಶ್ಚಿಂತನಾಗುವನು.

ಭಾವಾಭಾವ ವಿಸಂವಾದ ಮುಕ್ತಮಾದ್ಯಂತಯೋಃ ಸ್ಥಿತಂ ।
ಯದ್ರೂಪಂ ತತ್ಸಮಾಲಂಬ್ಯ ಪದಾರ್ಥಾನಾಂ ಸ್ಥಿತಿಂ ಕುರು ॥ ೫೬ ॥

ವೈರಾಗ್ಯವೀರ ಮನಸೋ ಮಾಯೇಯಮತಿ ಮೋಹಿನೀ ।
ಪಲಾಯ್ಯ ಯಾತಿ ಸಂಸಾರೀ ಮೃಗೀ ಕೇಸರಿಣೋ ಯಥಾ ॥ ೫೭ ॥

ಕಾಂತಾ ಮುದ್ದಾಮ ಮದನಾಂ ಲೋಲಾಂ ವನಲತಾಮಿವ ।
ಜರ್ಜರೋಪಲಪಾಂಚಾಲೀಸಮಾಂ ಪಶ್ಯತಿ ಧೀರಧೀಃ ॥ ೫೮ ॥

---

೫೬. ಅಯ್ಯ ರಾಮ, ಆದಿಯಲ್ಲಿ ಜನನರೂಪ ವಿಕಲ್ಪದಿಂದಲೂ(ಅಂತೆಯೇ ಮಧ್ಯಕಾಲದಲ್ಲಿ ಇತರ ವಿಕಾರ ವಿಕಲ್ಪಗಳಿಂದಲೂ) ಸರ್ವಥಾ ವಿವರ್ಜಿತವಾಗಿ (ಕಾಲತ್ರಯಾಬಾಧಿತ ಪರಮಾರ್ಥಸತ್ಯವಾಗಿ) ಇದ್ದುಕೊಂಡಿರುವ ಸಚ್ಚಿದಾನಂದ ರೂಪ ಆತ್ಮ ಸತ್ತೆಯನ್ನು ಅವಲಂಬಿಸಿ, ಪ್ರಪಂಚಗತವಾದ ಸಕಲ ಪದಾರ್ಥಗಳೂ ಸ್ಥಿತಿಯನ್ನು (ಸತ್ತೆಯನ್ನು) ಪಡೆದಿರುವುವು. [ಆತ್ಮ ಸತ್ತಾತಿರಿಕ್ತವಾದ ಸ್ವತಂತ್ರ ಸತ್ತೆಯು ಪ್ರಪಂಚಕ್ಕೆ ಇಲ್ಲವೇ ಇಲ್ಲವೆಂದರ್ಥ]

೫೭. ಸಿಂಹದ ಗರ್ಜನೆಯನ್ನು ಕೇಳಿದ ಮಾತ್ರದಿಂದಲೇ, ಹೆಣ್ಣು ಜಿಂಕೆಯು ಬಹಳ ಭಯಗೊಂಡು ಓಡಿಹೋಗುವಂತೆ, ಮಹಾಮೋಹಪ್ರದವಾದ, ಅಪಾರ ಸಂಸಾರಕ್ಕೆ ಮೂಲವಾದ ಈ ಮಾಯೆಯು, ವಿವೇಕ ವೈರಾಗ್ಯಾಭ್ಯಾಸವಶದಿಂದ, ಪ್ರಶಸ್ತವಾಗಿಯೂ ಅತಿಧೀರವಾಗಿಯೂ ಇರುವ ಮನಸ್ಸುಳ್ಳ ತತ್ತ್ವಜ್ಞನ ದೆಸೆಯಿಂದ ಭಯಪಟ್ಟುಕೊಂಡು ಓಡಿಹೋಗಿಬಿಡುವುದು.

೫೮. ವಿಕಾರ ಹೇತುಗಳಾದ ಸಾಮಗ್ರಿಗಳಿಂದಲೂ ವಿಕೃತವಾಗದೆ ಅತಿ ಧೀರವಾದ ಚಿತ್ತವೃತ್ತಿಯುಳ್ಳ ಪ್ರಾಜ್ಞನು, ಸುಕುಮಾರವಾದ ವನಲತೆಯಂತೆ ಅತಿಕೃಶಾಂಗಿಯಾಗಿ ಚಲಿಸುತ್ತಾ ಅತ್ಯಂತ ಚಪಲೆಯೂ ವಿಶೇಷವಾಗಿ ಕಾಮ ಮೋಹಿತೆಯೂ ಆಗಿರುವ ಮನೋಮೋಹಕಳಾದ ಕಾಂತಾಮಣಿಯನ್ನು ಅತಿ ಜೀರ್ಣವಾದ ಕಲ್ಲುಗೊಂಬೆಗೆ ಸಮಾನವಾಗಿ ಭಾವಿಸಿ ತಿರಸ್ಕಾರದಿಂದಲೂ, ಔದಾಸೀನ್ಯ ದಿಂದಲೂ ಕಾಣುವನು.

ಭೋಗಾ ನಾನಂದಯಂತ್ಯಂತಃ ಖೇದಯಂತಿ ನ ಚಾಪದಃ ।
ದೃಶ್ಯಶ್ರಿಯೋ ಹರಂತ್ಯಂಗ ನತಮದ್ರಿ ಮಿವಾನಿಲಾಃ ॥ ೫೯ ॥

ರಕ್ತಬಾಲಾಂಗನಸ್ಯಾಪಿ ಜ್ಞಸ್ಯೋದಾರಧಿಯೋ ಮುನೇಃ ।
ಕಣಶಃ ಪಾಂಸುತಾಂ ಯಾಂತಿ ಮನಸಃ ಸ್ಮರಸಾಯಕಾಃ ॥ ೬೦ ॥

ರಾಗದ್ವೇಷೈಃ ಸ್ವರೂಪಜ್ಞೋ ನಾವಶಃ ಪರಿಕೃಷ್ಯತೇ ।
ಸ್ಪಂದ ಏವಾಸ್ಯ ನೈತಾಭ್ಯಾಂ ಕಿಮುತಾಕ್ರಮಣಂ ಭವೇತ್ ॥ ೬೧ ॥

---

೫೯. ದೇಹಾಭಿಮಾನರಹಿತನಾಗಿ ನಿಷ್ಕಾಮನ ಸ್ಥಿತಿಯಲ್ಲಿರುವ ಮಹಾತ್ಮನನ್ನು ಸಕಲವಾದ ವಿಷಯೋಪಭೋಗಗಳೂ ಮನಸ್ಸಿನಲ್ಲಿ ಆನಂದಪಡಿಸುವುದಿಲ್ಲ. ಆಪತ್ತುಗಳು ದುಃಖಗೊಳಿಸುವುದೂ ಇಲ್ಲ. ವಾಯುಗಳು ಪರ್ವತವನ್ನು ಹೇಗೆ ಕದಲಿಸಲಾರವೋ ಹಾಗೆ ಈ ಸಮಸ್ತ ದೃಶ್ಯಸಂಪತ್ತುಗಳೂ ಆತನನ್ನು ಎಂದಿಗೂ ಧೈರ್ಯಗೆಡಿಸುವುದಿಲ್ಲ. ಅಂದರೆ ವಿಕಾರಗೊಳಿಸುವುದಿಲ್ಲ ವೆಂದರ್ಥ.

೬೦. ನೈರಾಶ್ಯಾಲಂಬನದಿಂದ ಉದಾರ ಬುದ್ಧಿಯುಳ್ಳವನಾಗಿಯೂ ತತ್ತ್ವಜ್ಞನಾಗಿಯೂ ಸದಾ ಆತ್ಮತತ್ತ್ವಮನನಶೀಲನಾಗಿಯೂ ಇರುವ ಮಹಾತ್ಮನು ಅನುರಕ್ತಳಾದ ಯುವತಿಯಿಂದ ಆಲಿಂಗಿತನಾಗಿದ್ದರೂ ಕೂಡ ಅವನ ಮನಸ್ಸನ್ನು ಭೇದಿಸುವುದಕ್ಕಾಗಿ ಮನ್ಮಥನು ಗುರಿಯಿಟ್ಟು ಪ್ರಯೋಗಿಸಿದ ಬಾಣಗಳೂ ವಜ್ರದ ಮೇಲೆ ಪ್ರಯೋಗಿಸಲ್ಪಟ್ಟ ಆಯುಧಗಳಂತೆ ಚೂರುಚೂರಾಗಿ ಕೊನೆಗೆ ಧೂಳಿಯಾಗಿ (ಚೂರ್ಣವಾಗಿ) ಬಿಡುವುವು.

೬೧. ಸ್ವಾತ್ಮತತ್ತ್ವ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಂಡಿರುವ ಜ್ಞಾನಿಯು ರಾಗದ್ವೇಷಗಳಿಂದ ಪರವಶನಾಗಿ ಎಂದಿಗೂ ಸೆಳೆಯಲ್ಪಡುವುದಿಲ್ಲ ರಾಗದ್ವೇಷಗಳಿಂದ ತತ್ತ್ವಜ್ಞನು ಸ್ವರೂಪ ಸ್ಥಿತಿಯನ್ನು ಬಿಟ್ಟು ಎಂದಿಗೂ ಸ್ವಲ್ಪವೂ ಚಲಿಸುವುದೇ ಇಲ್ಲ. ಹೀಗಿರುವಾಗ ಅವು ಅವನನ್ನು ಆಕ್ರಮಿಸಿ ವಶಪಡಿಸಿಕೊಳ್ಳಲಾರವು ಎಂದು ಮತ್ತೆ ಬೇರೆ ಹೇಳಬೇಕೇನು? (ಹೇಳಬೇಕಾದ ಅವಶ್ಯಕತೆಯು ಇಲ್ಲ ವೆಂದರ್ಥ.)

೬೨. ಪುಷ್ಪಭಾರದಿಂದ ಬಗ್ಗಿರುವ ಬಾಲಲತೆಯನ್ನೂ ಕಾಮೋದ್ರೇಕದಿಂದ ಅನುರಕ್ತಳಾಗಿ ತನ್ನಲ್ಲಿಗೆ ಬಂದು ಹಾರಾಡುತ್ತಾ ಸ್ತನಭಾರದಿಂದ ಬಳುಕಿದ ಕೋಮಲಾಂಗಿಯಾದ ವನಿತಾಮಣಿಯನ್ನೂ ಏಕರೂಪವಾದ (ಸಮಾನವಾದ)

ಸಮುದೃಷ್ಟಲತಾ ಲೋಲವನಿತೋಽದ್ರಿಶಿಲಾಕೃತಿಃ ।
ರಮತೇ ನೈಷ ಭೋಗೇಷು ಪಾಂಥೋ ಮರುಮಹೀಷ್ವಿವ ॥ ೬೨ ॥

ಅಯತ್ನೋಪನತಂ ಸರ್ವಂ ಲೀಲಯಾ ಸಕ್ತಮಾನಸಃ ।
ಭುಂಕ್ತೇ ಭೋಗಭರಂ ಪ್ರಾಜ್ಞಸ್ತ್ವಾಲೋಕಮಿವ ಲೋಚನಂ ॥ ೬೩ ॥

ಕಾಕತಾಲೀಯ ವತ್ಪ್ರಾಪ್ತಾ ಭೋಗಾಲೀ ಲಲನಾದಿಕಾ ।
ಸ್ವಾದಿತಾಪ್ಯಂಗ ಧೀರಸ್ಯ ನ ದುಃಖಾಯ ನ ತುಷ್ಟಯೇ ॥ ೬೪ ॥

ಸಮ್ಯಗ್ದೃಷ್ಟಪಥಂ ತಜ್ಞಂ ಸುಖದುಃಖಮತೀ ಮನಾಕ್ ।
ದ್ವೇ ವೀಚ್ಯಾವಿವ ಶೈಲೇಂದ್ರಂ ಕ್ಷೋಭಂ ನೇತುಂ ನ ಶಕ್ನುತಃ ॥ ೬೫ ॥

ತಿರಸ್ಕಾರಪೂರ್ವಕವಾದ ದೃಷ್ಟಿಯಿಂದ ಕಾಣುವ ಅದು ಕಾರಣವೇ ಪರ್ವತದ ಕಲ್ಲು ಗುಂಡುಗಳಂತೆ ಅವಿಕಾರವಾದ ಸುಸ್ಥಿರಾಕಾರವುಳ್ಳ ತತ್ತ್ವಜ್ಞನು ಐಹಿಕಾಮುಷ್ಮಿಕ ವಿಷಯೋಪಭೋಗಗಳಲ್ಲಿ ಪ್ರಯಾಣಿಕನು ಮರುಭೂಮಿಗಳಲ್ಲಿ ರಮಿಸದೆ ಇರುವಂತೆ ಎಂದಿಗೂ ರಮಿಸುವುದಿಲ್ಲ.

ಪ್ರಾಜ್ಞನು ಅನಾಸಕ್ತವಾದ ಮನಸ್ಸಿನಿಂದ ಕೂಡಿದವನಾದ ಕಾರಣ, ಕಣ್ಣು ಪ್ರಯತ್ನವಿಲ್ಲದೆಯೇ ತಾನಾಗಿ ಸಂಪ್ರಾಪ್ತವಾದ ಬೆಳಕನ್ನು ಉಪಯೋಗಿಸಿಕೊಳ್ಳುವಂತೆ ಸ್ವಪ್ರಯತ್ನವಿಲ್ಲದೆಯೇ ಯಾದೃಚ್ಛಿಕವಾಗಿ ಒದಗುವ ಅನಿಷಿದ್ಧಗಳಿಂದ ಅನ್ನಪಾನಾದಿ ಸಮಸ್ತ ಭೋಗ್ಯ ವಸ್ತುಗಳ ರಾಶಿಯನ್ನು ಕೇವಲ ದೇಹಧಾರಣಾನುಕೂಲವಾದ ವ್ಯಾಪಾರದಿಂದ ಉಪಯೋಗಿಸಿಕೊಳ್ಳುವನು. (ಅನುಭವಿಸುವನು.)

೬೪. ವತ್ಸ ರಾಮ, ಕಾಕತಾಲೀಯ ನ್ಯಾಯಾನುಗುಣವಾಗಿ, ತಾನಾಗಿ ಆಕಸ್ಮಿಕವಾಗಿ ಬಂದೊದಗಿದ ಕಾಮಿನ್ಯಾದಿ ವಿವಿಧ ಭೋಗ ಸಾಮಗ್ರಿಗಳನ್ನು ಧೀರನಾದ ತತ್ತ್ವಜ್ಞನು ಅನುಭವಿಸುತ್ತಿರುವವನಾಗಿ ಕಂಡರೂ, ಅವನು ಆ ಭೋಗಾನುಭವದಲ್ಲಿ ಅನಾಸಕ್ತನಾಗಿರುವ ಕಾರಣದಿಂದಲೇ ಅವು ಆ ಧೀರನ ಮನಸ್ಸಿನಲ್ಲಿ ದುಃಖವನ್ನಾಗಲಿ ಅಥವಾ ಸಂತುಷ್ಟಿಯನ್ನಾಗಲಿ ಎಂದಿಗೂ ಉಂಟು ಮಾಡುವುದಿಲ್ಲ. [ಸುಖದುಃಖಗಳಿಗೆ ಹೇತುವಾಗುವುದಿಲ್ಲ.]

೬೫. ಪ್ರತ್ಯಗಾತ್ಮದರ್ಶನ ಮಾರ್ಗವನ್ನು ಚೆನ್ನಾಗಿ ಕಂಡು ಪರಿಚಯ

ಹೇಲಯಾಲೋಕಯನ್ಭೋಗಾನ್ಮೃದುರ್ದಾಂತೋ ಗತಜ್ವರಃ ।
ಸ್ವಮೇವ ಪದಮಾಲಂಬ್ಯ ಸರ್ವಭೂತಾಂತರ ಸ್ಥಿತಂ ॥ ೬೬ ॥

ಜ್ಞಸ್ತಿಷ್ಠತಿ ಗತವ್ಯಗ್ರೋ ವ್ಯಗ್ರೇಣಾಪಿ ಸಮನ್ವಿತಃ ।
ಜಗಂತಿ ಜನಯನ್ನೇವ ಬ್ರಹ್ಮೇವಾತ್ಮಪರಾಯಣಃ ॥ ೬೭ ॥

ಆಪತತ್ಸು ಯಥಾಕಾಲಂ ಯಥಾದೇಶಂ ಯಥಾಕ್ರಮಂ ।
ಸುಖದುಃಖೇಷು ನ ಕ್ಷೋಭಮೇತಿ ಭೂಭೃದೃತುಷ್ವಿವ ॥ ೬೮ ॥

ಮಾಡಿಕೊಂಡಿರುವ ತತ್ತ್ವಜ್ಞನನ್ನು ಈ ಪ್ರಾಪಂಚಿಕ ಸುಖದುಃಖ ಜ್ಞಾನಗಳು ಮಂದರ ಪರ್ವತವನ್ನು ಎರಡು ಅಲೆಗಳು ಕ್ಷೋಭೆಗೊಳಿಸಲಾರದಿರುವಂತೆ ಎಂದಿಗೂ ಸ್ವಲ್ಪವೂ ಕ್ಷೋಭೆಗೊಳಿಸುವುದಕ್ಕೆ ಶಕ್ತಿಯಿಲ್ಲದವುಗಳಾಗಿಯೇ ಇರುವುವು.

೬೬-೬೭. ತತ್ತ್ವಜ್ಞನು ಮೃದು ಸ್ವಭಾವವುಳ್ಳವನಾಗಿಯೂ (ಕರುಣಾರಸದಿಂದ ಮೃದುವಾದ ಚಿತ್ತವುಳ್ಳವನು.) ಚಕ್ಷುರಾದಿ ಬಾಹ್ಯೇಂದ್ರಿಯಗಳ ವೃತ್ತಿಗಳನ್ನು ನಿಗ್ರಹಿಸಿದವನಾಗಿಯೂ (ಜಿತೇಂದ್ರಿಯ) ಸಕಲ ಸಂತಾಪರಹಿತನಾಗಿಯೂ ಸಕಲ ಪ್ರಾಪಂಚಿಕ ಭೋಗಗಳೂ ಅಸತ್ಯವಾದವುಗಳೆಂಬ ನಿಶ್ಚಯ ಜ್ಞಾನವುಳ್ಳವನಾಗಿ ಅವುಗಳನ್ನು ತಿರಸ್ಕಾರದಿಂದ ಕಾಣುತ್ತಾ, ಸರ್ವಭೂತಾಶಯಸ್ಥಿತವಾದ ಸ್ವಾತ್ಮತತ್ತ್ವರೂಪ ಪರಮ ಪದವನ್ನು ಬಿಡದೆ ಆಶ್ರಯಿಸಿಕೊಂಡಿರುವನು ಮತ್ತು ಹಿರಣ್ಯಗರ್ಭನೆಂಬ ಹೆಸರುಳ್ಳ ಚತುರ್ಮುಖ ಬ್ರಹ್ಮನು ಸದಾ ಜಗತ್ತುಗಳನ್ನು ಸೃಷ್ಟಿ ಮಾಡುತ್ತಲೇ ಇರುವವನಾದರೂ ವಿಕ್ಷೇಪರಹಿತನಾಗಿಯೇ ಆತ್ಮಪರಾಯಣನಾಗಿರುವಂತೆ ಈ ತತ್ವಜ್ಞನೂ, ಆಯಾ ಕಾಲಾನುಗುಣವಾಗಿ ಅವಶ್ಯ ಕರ್ತವ್ಯಗಳಾದ ನಾನಾ ವ್ಯವಹಾರಗಳಲ್ಲಿ ನಿರತವಾದ ದೇಹೇಂದ್ರಿಯಗಳಿಂದ ಸಮನ್ವಿತನಾಗಿದ್ದರೂ ಕೂಡ ತಾನು ಸ್ವಲ್ಪವೂ ವಿಕ್ಷೇಪಗೊಳ್ಳದೆಯೇ ನಿರಂತರವೂ ಆತ್ಮಜ್ಞಾನ ಪರಾಯಣ (ನಿಷ್ಠ)ನಾಗಿ (ಸ್ಥಿತಪ್ರಜ್ಞ= ಜೀವನ್ಮುಕ್ತ) ಇರುವನು.

೬೮. ವಸಂತಾದಿ ಷಡೃತುಗಳು ಅವಿಚ್ಛಿನ್ನವಾಗಿ ಒಂದೊಂದಾಗಿ ಕಳೆದು ಹೋಗುತ್ತಲೂ ಕ್ರಮವಾಗಿ ಹೊಸ ಹೊಸ ಋತುಗಳು ಬರುತ್ತಲೂ ಇದ್ದಾಗ್ಯೂ ಕೂಡ ಪರ್ವತವು ಅವುಗಳೊಂದರಲ್ಲಿಯೂ ಆಸಕ್ತಿಯನ್ನಿಡದೆ ತಾಟಸ್ಥ್ಯವನ್ನು ವಹಿಸಿ ಕ್ಷೋಭೆಗೊಳ್ಳದೆ ಇರುವಂತೆ ತತ್ತ್ವಜ್ಞನು ಆಯಾ ಕಾಲದೇಶ ಕ್ರಮಾದಿ

ಮಜ್ಜತೋಽಪಿ ಬಹುಜ್ಞಸ್ಯ ರಾಮ ಕರ್ಮೇಂದ್ರಿಯೈರ್ಭೃಶಮ್ ।
ಅಸಕ್ತ ಮನಸೋ ನಿತ್ಯಂ ನ ಕಿಂಚಿದಪಿ ಮಜ್ಜತಿ ॥ ೧೯ ॥

ಕಲಂಕ್ಯಂತಃ ಕಲಂಕೇನ ಪ್ರೋಚ್ಯತೇ ಹೇಮ ನಾನ್ಯಥಾ ।
ಭಾವಾಸಕ್ತ್ಯಾ ಸಮಾಸಕ್ತ ಉಕ್ತೋ ಜಂತುರ್ಹಿ ನಾನ್ಯಥಾ ॥ ೨೦ ॥

ಶರೀರಾದ್ಯತಿರಿಕ್ತಂ ಜ್ಞಂ ಪಶ್ಯತಃ ಪ್ರವಿವೇಕಿನಃ ।
ವಿಕರ್ತಿತಾಂಗಕಸ್ಯಾಪಿ ನ ಕಿಂಚಿತ್ಪ್ರವಿಕರ್ತಿತಂ ॥ ೨೧ ॥

ಗಳಿಗನುಗುಣವಾಗಿ ಸುಖದುಃಖಗಳು ಬರುತ್ತಲೂ, ಕಳೆದುಹೋಗುತ್ತಲೂ ಇದ್ದರೂ ಕೂಡ ಅವುಗಳಿಂದ ಕ್ಷೋಭೆಗೊಳ್ಳದೆ ಪ್ರಶಾಂತನಾಗಿರುವನು.

೧೯. ಅಯ್ಯ ರಾಮ, ಬ್ರಹ್ಮ ಜ್ಞಾನಿಯಾದ ಪುರುಷಶ್ರೇಷ್ಠನು, ಸರ್ವದಾ ಅಸಂಸಕ್ತಚಿತ್ತನಾಗಿರುವ ಕಾರಣ, ಒಂದು ವೇಳೆ, ಅವನು ವಾಗಾದಿ ಕರ್ಮೇಂದ್ರಿಯಗಳ ವ್ಯವಹಾರಗಳಿಂದ ಪ್ರಾಪಂಚಿಕ ವಿಷಯಗಳಲ್ಲಿ ಮುಣುಗಿಹೋಗುತ್ತಿರುವವನಾಗಿ ಕಂಡುಬಂದರೂ ಅವನಿಗೆ ಯಾವುದೊಂದೂ ಮುಣುಗಿ ನಷ್ಟವಾಗುವುದಿಲ್ಲ. ಏಕೆಂದರೆ, ಅವನು ಆ ವ್ಯವಹಾರಗಳೆಲ್ಲವೂ ಕೇವಲ ಭ್ರಾಂತಿಯೆಂದು ಧೃಢವಾಗಿ ತಿಳಿದುಕೊಂಡಿರುವನು.

೨೦. ಚಿನ್ನದ ಒಳಗಡೆಯಲ್ಲಿ ಲೋಹಾಂತರ ಸಂಸರ್ಗವೆಂಬ ದೋಷವಿರುವಾಗಲೇ ಅದನ್ನು ಕಳಂಕವುಳ್ಳದ್ದು (ಕಳಂಕಿ) ಎಂದು ಲೋಕದಲ್ಲಿ ಜನರು ಹೇಳುವರು. ಅನ್ಯಥಾ ಅಂದರೆ ಅದರ ಹೊರಗಡೆಯಲ್ಲಿ ಮಸಿಯನ್ನೋ ಬೂದಿಯನ್ನೋ ಅಥವಾ ಮಣ್ಣನ್ನೋ ಮೆತ್ತಿಸಿರುವಾಗ (ಲೇಪನಮಾಡಿರುವಾಗ) ಅದನ್ನು ಹಾಗೆ ಕಳಂಕಿಯೆಂದು ಹೇಳಲಾಗುವುದಿಲ್ಲ. ಇದರಂತೆಯೇ, ಯಾವನೊಬ್ಬನ ಅಂತಃ ಕರಣದಲ್ಲಿ (ಮನಸ್ಸಿನೊಳಗೆ) ಆಂತಸ್ಸಂಸಕ್ತಿಯೆಂಬ ಮಲವು ತುಂಬಿಕೊಂಡಿರುವುದೋ ಅಂತಹ ನರಪಶುವನ್ನು ಮಾತ್ರವೇ ಸಮಾಸಕ್ತನೆಂದು ಹೇಳಬೇಕೇ ಹೊರತು, ಅನ್ಯಥಾ ಅವನ ಬಾಹ್ಯವ್ಯಾಪಾರಗಳನ್ನು ಮಾತ್ರನೋಡಿ ಅವನನ್ನು ಸಮಾಸಕ್ತನೆಂದು ಹೇಳುವುದಕ್ಕಾಗುವುದೇ ಇಲ್ಲ. (ಒಳಗೆ ಆಂತಃಕರಣದ ದೋಷಸಂಸಂಗವು ದೋಷದುಷ್ಟವೇ ಹೊರತು ಬಹಿಸ್ಸಂಗವು ದೋಷಾವಹವಲ್ಲ.)

೨೧ ಪ್ರಾಜ್ಞನು ಆತ್ಮಾನಾತ್ಮ ವಿವೇಕಜ್ಞಾನ ಸಂಪನ್ನನಾಗಿ, " ಚಿದ್ರೂಪ

ಸಕೃತ್ಪ್ರಭಾತಂ ವಿಮಲಂ ಯದ್ಜ್ಞಾತಂ ಜ್ಞಾತಮೇವ ತತ್ ।
ನಹಿ ಬಂಧುಃ ಪರಿಜ್ಞಾತಃ ಪುನರಜ್ಞಾತತಾಂ ವ್ರಜೇತ್ ॥ ೭೨ ॥

ಸರ್ಪಭ್ರಾಂತೌ ನಿವೃತ್ತಾಯಾಂ ನ ರಜ್ವ್ವಾಂ ಸರ್ಪಭಾವನಾ ।
ಪುನರೇತಿ ಯಥಾ ಪ್ರಾವೃಣ್ಣದೀ ಗಿರಿತಟಾಚ್ಚ್ಯುತಾ ॥ ೭೩ ॥

ನಾದ ಆತ್ಮನು ಜಡಭೂತ ದೇಹೇಂದ್ರಿಯಾದಿಗಳಿಗಿಂತ ಅತೀತನು" ಎಂದು ದೃಢ ವಾಗಿ ಆತ್ಮತತ್ತ್ವವನ್ನು ಸಾಕ್ಷಾತ್ಕರಿಸಿ ಕೊಂಡಿರುವನಾದ ಕಾರಣ, ಅಂತಹ ಜ್ಞಾನ ನಿಷ್ಠನ ಸರ್ವಾವಯವಗಳನ್ನೂ ಶಸ್ತ್ರಗಳಿಂದ ಕತ್ತರಿಸಿ ಹಾಕಿದರೂ ವಾಸ್ತವವಾಗಿ ಅವನಿಗೆ ಯಾವೊಂದನ್ನು ಕತ್ತರಿಸದಂತೆ ಭಾವನೆಯೇ ಆಗುವುದಿಲ್ಲ. (ಅಂತಸ್ಸಂಗ ವನ್ನು ತ್ಯಾಗಮಾಡಿದ ಬಳಿಕ, ದೇಹದ ಸುಖದುಃಖಾದಿಗಳು ಆತ್ಮನಿಗೆ ಪ್ರಸಕ್ತ ವಾಗುವುದಿಲ್ಲವೆಂದರ್ಥ)

೭೨. ಸ್ವತಃ ಪ್ರಕಾಶವೂ ಅವಿದ್ಯಾದಿ ಮಲ ರಹಿತವೂ ಆಗಿರುವ ಪರಮಾತ್ಮ ತತ್ತ್ವವನ್ನು ಒಂದು ಸಾರಿ, ಚೆನ್ನಾಗಿ ಸುನಿಶ್ಚಿತವಾಗಿ ಮತ್ತು ನಿಸ್ಸಂಶಯವಾಗಿ ಮನಗಂಡು ತಿಳಿದುಕೊಂಡು ಬಿಟ್ಟರೆ, ಪುನಃ ಅದು ಎಂದಿಗೂ ವಿಸ್ಮೃತವಾಗುವ ಪ್ರಸಕ್ತಿಯೂ ಇಲ್ಲ. ಅದು ಸರ್ವದಾ ಪರಿಜ್ಞಾತವಾಗಿಯೇ ಇರುವುದು. ಒಬ್ಬ ಮನುಷ್ಯನನ್ನು ನೋಡಿ ಚೆನ್ನಾಗಿ ವಿಚಾರಮಾಡಿ "ಅವನು ನಮ್ಮ ಬಂಧುವೇ ಸರಿ" ಎಂದು ಒಂದುಸಲ ದೃಢವಾಗಿ ತಿಳಿದು ಬಿಟ್ಟ ಬಳಿಕ ಅವನು ತಮ್ಮ ಬಂಧು ವೆಂಬ ಜ್ಞಾನವು ಎಂದೆಂದಿಗೂ ಅಚ್ಚಳಿಯದೆ ಇರುವುದೇ ಹೊರತು; ಅವನು ಬಂಧು ವೆಂಬ ವಿಚಾರವನ್ನು ಮರೆಯಲಾಗುವುದೇನು? ಎಂದಿಗೂ ಸಾಧ್ಯವಿಲ್ಲ.

೭೩. ಮಂದಾಂಧಕಾರದಲ್ಲಿ ಬಿದ್ದಿರುವ ಒಂದುರಜ್ಜು (ಹಗ್ಗ) ವನ್ನು ನೋಡಿ, ಅದು ರಜ್ಜುವೆಂಬ ಜ್ಞಾನವಿಲ್ಲದೆ ಅಜ್ಞಾನದಿಂದ ಆ ಹಗ್ಗವನ್ನು ಭ್ರಾಂತನು ಸರ್ಪ ವೆಂದು ತಪ್ಪಾಗಿ ತಿಳಿದುಕೊಂಡು ಭಯಪಟ್ಟುಕೊಂಡಿರುವನು. ಇವನ ಭಯ ಭ್ರಾಂತಿಗಳಿಗೆ ಆಶ್ರಯವಾದ ಆ ರಜ್ಜುವಿನ ತಾತ್ತ್ವಿಕವಾದ ಸ್ವರೂಪವನ್ನು ಚೆನ್ನಾಗಿ ಬಲ್ಲವನಾದ ವಿವೇಕಿಯು ಕರುಣೆಯಿಂದ, ಅವನಿಗೆ ಅನ್ವಯವ್ಯತಿರೇಕ ಪೂರ್ವಕ ವಾಗಿ, ಭ್ರಾಂತಿಯು ನಿಶ್ಶೇಷವಾಗಿ ತೊಲಗುವಂತೆ ಆ ರಜ್ಜುವಿನ ವಾಸ್ತವವಾದ ಸ್ವರೂಪವನ್ನು ಉಪದೇಶಿಸಿ, ಅವನ ಸಂಶಯಗಳನ್ನೆಲ್ಲಾ ನಿವಾರಣೆಮಾಡಿ, "ಅಯ್ಯ ಇದು ಹಗ್ಗವೇ ಹಾವಲ್ಲ, ಚೆನ್ನಾಗಿ ಮುಟ್ಟಿನೋಡು" ಎಂಬೀಮೊದಲಾಗಿ, ಅವನಿಗೆ ದೃಢವಾಗಿ ನಿಶ್ಚಿತವಾದ ರಜ್ಜು ಸ್ವರೂಪಜ್ಞಾನವನ್ನು ಉಂಟುಮಾಡಿಬಿಟ್ಟ ಬಳಿಕ,

ನ ಹೇಮ ತಾಪಶುದ್ಧಾಂಗಂ ಸ್ವಭಾವಮಲಮಾಗತಂ ।
ಕರ್ದಮೇ ಮಗ್ನಮಪಿ ಸತ್ಸಮಾದತ್ತೇ ಮಲಂ ಪುನಃ ॥ ೭೪ ॥

ಕ್ಷೀಣೇ ಸ್ವಹೃದಯಗ್ರಂಥೌ ನ ಬಂಧೋಽಸ್ತಿ ಪುನರ್ಗುಣೈಃ ।
ಯತ್ನೇನಾಪಿ ಪುನರ್ಬದ್ಧಂ ಕೇನ ವೃಂತೇ ಚ್ಯುತಂ ಫಲಂ ॥ ೭೫ ॥

ಅದೇ ರಜ್ಜುವಿನ ವಿಷಯದಲ್ಲಿ ಪುನಃ ಸರ್ಪಭ್ರಾಂತಿಯು ಅವನಿಗೆ ಉದಯಿಸುವ ಪ್ರಸಂಗವು ಸುತರಾಂ ಇಲ್ಲವಷ್ಟೇ, ಮತ್ತು ಎತ್ತರವಾದ ಪರ್ವತದ ಮೇಲಿನಿಂದ ಒಂದುಸಾರಿ ಕೆಳಕ್ಕೆ ಧುಮ್ಮಿಕಿದ ವರ್ಷಾಕಾಲದ ಹೊಳೆಯು ಪುನಃ ಮೇಲಕ್ಕೆ ಹತ್ತಿ ಕೊಂಡು ಹೋಗುವುದಿಲ್ಲವಷ್ಟೇ.

೭೪. ಮತ್ತು ಒಂದುಸಲ ಚೆನ್ನಾಗಿ ಅಗ್ನಿರಾಶಿಯಲ್ಲಿ ಪುಟಕ್ಕೆಹಾಕಿ ಕಾಯಿಸಿ, ಅದರಲ್ಲಿರುವ ಶ್ಯಾಮಿಕಾದಿ (ಲೋಹಾಂತರ ಸಂಸರ್ಗ) ಮಾಲಿನ್ಯವನ್ನು ನಿಶ್ಶೇಷ ವಾಗಿ ತೆಗೆದುಹಾಕಿ, ಶುದ್ಧಿಗೊಳಿಸಿ, ಆತ್ಯಂತಿಕವಾಗಿ, ಅಪರಂಜಿ ಚಿನ್ನದ ಸ್ವಭಾವ ವನ್ನು ಹೊಂದಿಸಲ್ಪಟ್ಟ, ನಿರ್ಮಲವಾದ ಚಿನ್ನದ ಗಟ್ಟಿಯನ್ನು, ಕೆಸರಿನಲ್ಲಿ ಮುಳು ಗಿಸಿ ಇಟ್ಟಿದ್ದರೂ ಕೂಡ, ಪುನಃ ಅದು ತನ್ನೊಳಗೆ ಮಾಲಿನ್ಯವನ್ನು ಎಂದಿಗೂ ಸ್ವೀಕರಿಸುವುದಿಲ್ಲವಷ್ಟೇ, ಇದರಂತೆಯೇ, ನಿಶ್ಚಿತವಾದ, ಸಂಶಯ ವಿಪರ್ಯಾಸಾದಿ ರಹಿತವಾದ ಆತ್ಮತತ್ತ್ವಜ್ಞಾನವು ದೃಢವಾಗಿ ಉಂಟಾದ ಬಳಿಕ ಮತ್ತೆ ಅದಕ್ಕೆ ವಿಸ್ಮೃತಿಯುಂಟಾಗುವ ಸಂಭವವೇ ಸುತರಾಂ ಇಲ್ಲವೆಂದು ತಿಳಿಯಬೇಕು.

[ಇದೇ ಅಭಿಪ್ರಾಯವನ್ನೇ ಶ್ರೀ ಮಚ್ಛಂಕರಭಗವತ್ಪಾದಾಚಾರ್ಯರವರು, ಸೂತ್ರ ಭಾಷ್ಯದ ಸಮನ್ವಯಾಧಿಕರಣದಲ್ಲಿ, " ಸ್ಥಿತಪ್ರಜ್ಞಸ್ಯಕಾಭಾಷಾ ಇತ್ಯಾದ್ಯಾಸ್ಮೃತಿ ರಪಿ ಚ, ವಿದುಷಃ ಸರ್ವಪ್ರವೃತ್ತ್ಯ ಸಂಬಂಧಂ ದರ್ಶಯತಿ ತಸ್ಮಾತ್ ನ, ಅವಗತ ಬ್ರಹ್ಮಾತ್ಮಭಾವಸ್ಯಯಥಾಪೂರ್ವಂ ಸಂಸಾರಿತ್ವಂ ಯಸ್ಯ ತು ಯಥಾಪೂರ್ವಂ ಸಂಸಾ ರಿತ್ವಂ ನ ಅಸೌ ಅವಗತ ಬ್ರಹ್ಮಾತ್ಮಭಾವಃ ಇತ್ಯನವದ್ಯಂ, ಎಂಬ ವಾಕ್ಯಗಳಿಂದ ಸ್ಪಷ್ಟವಾಗಿ ಉಪದೇಶಿಸಿರುವರು.]

೭೫. ತೊಟ್ಟಿನಿಂದ ಕಳಚಿಕೊಂಡು, ಒಂದುಸಾರಿ ಕೆಳಗೆ ಬಿದ್ದುಬಿಟ್ಟ ಹಣ್ಣನ್ನು ಪುನಃ ಮೊದಲಿನಂತೆ ಆ ತೊಟ್ಟಿನಲ್ಲಿ ಸೇರಿಸಬೇಕೆಂದು ಯಾರು ಎಷ್ಟು ಕಷ್ಟಪಟ್ಟು ಯಾವಯಾವ ಪ್ರಯತ್ನಮಾಡಿದರೂ ಕೂಡ, ಮತ್ತೆ ಆ ಬಿದ್ದಹಣ್ಣು ಪೂರ್ವದಂತೆ ಆ ತೊಟ್ಟಿನಲ್ಲಿ ಸೇರಿಕೊಳ್ಳಲಾಗುವದೇ ಇಲ್ಲವಷ್ಟೆ. ಇದೇ ರೀತಿ

ಅವಚ್ಛೇದ ವಿಚಾರಾಭ್ಯಾಮಭಿತಃ ಖಂಡಶೋ ಗತಂ ।
ಪಾಷಾಣಂ ಚ ಮಣಿಂ ಚೈವ ಸಂಧಾತುಂ ಕಸ್ಯ ಶಕ್ತತಾ ॥ ೭೬ ॥

ವಿಜ್ಞಾತಾಯಾಮವಿದ್ಯಾಯಾಂ ಕಃ ಪುನಃ ಪರಿಮಜ್ಜತಿ ।
ಪರಿಜ್ಞಾಯ ಶ್ವಪಕಾನಾಂ ಯಾತ್ರಾಂ ಕಃ ಪ್ರೇಕ್ಷತೇ ದ್ವಿಜಃ ॥ ೭೭ ॥

ಯಲ್ಲಿ, ಆತ್ಮತತ್ತ್ವ ಸಾಕ್ಷಾತ್ಕಾರದಿಂದ ಒಂದುಸಲ ತತ್ತ್ವಜ್ಞನ ಹೃದಯಗ್ರಂಥಿಗಳು ನಿಶ್ಶೇಷವಾಗಿ ಕತ್ತರಿಸಲ್ಪಟ್ಟು ಬಿದ್ದುಹೋದ ಬಳಿಕ, ಪುನಃ ಆ ಗ್ರಂಥಿಗಳು ಸತ್ವರ ಜಸ್ತಮೋಗುಣಗಳೆಂಬ ರಜ್ಜುಗಳ ಸಹಾಯದಿಂದ ತತ್ತ್ವಜ್ಞನ ಹೃದಯದೊಂದಿಗೆ ಎಂದೆಂದಿಗೂ ಹೇಗೂ ಬಂಧಿಸಲ್ಪಡುವುದಿಲ್ಲ.

[ಭಿದ್ಯತೇ ಹೃದಯಗ್ರಂಥಿ: ಛಿದ್ಯಂತೇ ಸರ್ವಸಂಶಯಾಃ । ಕ್ಷೀಯಂತೇ ಚಾಸ್ಯಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ಮುಂಡಕೋಪನಿಷತ್.]

೭೬. ಒಂದು ದೊಡ್ಡ ಕಲ್ಲಿನೊಳಗೆ ಒಂದು ರತ್ನವು ಸಿಕ್ಕಿಬಿದ್ಧಿರುವುದೆಂದು ತಿಳಿದಬಳಿಕ ರತ್ನಾಭಿಲಾಷೆಯುಳ್ಳ ಮನುಷ್ಯನು ಸ್ವಪ್ರಯತ್ನದಿಂದ ಉಪಾಯದೊಡನೆ ಕಲ್ಲಿಗೆಮಾತ್ರ ಸುತ್ತಲೂ ಏಟುಬೀಳುವಂತೆ ಹೊಡೆದು ಬಹು ಜಾಗರೂಕತೆಯಿಂದ, ಕಲ್ಲನ್ನು ಚೂರುಚೂರಾಗಿ ಒಡೆದುಬಿಟ್ಟು, ರತ್ನದ ಸ್ವರೂಪವನ್ನು ವಿಚಾರದಿಂದ ತಿಳಿದುಕೊಂಡು, ಕಲ್ಲು ಚೂರುಗಳಿಂದ ಬೇರ್ಪಡಿಸಿ ಆ ರತ್ನವನ್ನು ಗ್ರಹಿಸುವನು. ಹೀಗೆ ಸುಮ್ಮನಿರದೆ ಒಂದುಸಲ ಕಲ್ಲನ್ನು ಒಡೆದೊಡೆದು ಚೂರುಚೂರುಮಾಡಿ, ರತ್ನವನ್ನು ಬೇರ್ಪಡಿಸಿ ಬಿಟ್ಟಬಳಿಕ, ಯಾವನಾದರೊಬ್ಬ ನಿರ್ಭಾಗ್ಯನು ಪುನಃ ಒಂದುವೇಳೆ ಆ ಒಡೆದು ಹೋದ ಕಲ್ಲು ಚೂರುಗಳನ್ನೂ, ಆ ರತ್ನವನ್ನೂ ಪೂರ್ವದಂತೆ ಒಟ್ಟಿಗೆ ಸೇರಿಸಿ ಒಂದೇ ಕಲ್ಲು ಆಗುವಂತೆ ಬೆಸೆದುಬಿಡುವೆನೆಂದು ಪ್ರಯತ್ನಪಟ್ಟರೆ, ಹಾಗೆ ಬೆಸೆಯಲು ಅವನಿಗೆ ಶಕ್ತಿಯಿರುವುದೇನು ? ಇಲ್ಲವಷ್ಟೆ. ಈ ರೀತಿಯಲ್ಲಿಯೇ ದೇಹದೊಂದಿಗೆ ಆತ್ಮವು ಒಟ್ಟಿಗೆ ಸೇರಿಕೊಂಡಿರಲು, ವಿವೇಕಿಯಾದ ಪ್ರಾಜ್ಞನು, ಅನಾತ್ಮ ದೇಹಾದಿ ಜಡವಸ್ತುಗಳನ್ನು ಜ್ಞಾನದಿಂದ ಲಯಗೊಳ್ಳಿಸಿ, ತದ್ವಿಲಕ್ಷಣವಾಗಿ ದೇಹಾದ್ಯತೀತನಾದ ಆತ್ಮನನ್ನು ವಿಚಾರ ವಿಮರ್ಶೆಯಿಂದ ಬೇರ್ಪಡಿಸಿ ತತ್ತ್ವತಃ ಗ್ರಹಿಸಿದ ಬಳಿಕ, ಯಾವನಿರ್ಭಾಗ್ಯನು ತಾನೇ ಮತ್ತೆ ದೇಹಾದಿಗಳನ್ನೂ ಆತ್ಮನನ್ನೂ ಒಟ್ಟಿಗೆ ಬೆರಸಿ ದೇಹಾದಿಗಳಲ್ಲಿ ಆತ್ಮತಾದಾತ್ಮ್ಯ ಸಂಸರ್ಗವನ್ನು ಮಾಡಲು ಸಮರ್ಥನಾಗುವನು ?

೭೭. " ಇದು ಅವಿದ್ಯೆಯೇ ಸರಿ " ಎಂದು ನಿಶ್ಚಿತವಾಗಿ ಅವಿದ್ಯೆಯ ಸ್ವರೂ

ಶುದ್ಧಾಂಭಸಿ ಯಥಾ ಕ್ಷೀರಧೀರ್ವಿಚಾರಾನ್ನಿವರ್ತತೇ ।
ಸಂಸಾರವಾಸನಾ ತದ್ವದ್ಧಿಯೀವಿಚಾರಾನ್ನಿವರ್ತತೇ　　　　॥ ೭೮ ॥

ಮಧ್ವಂಬುಬುದ್ಧ್ಯಾ ತಾವದ್ವಿಪ್ರವರ್ಗೈಃ ಪ್ರಪೀಯತೇ ।
ಯಾವನ್ನಾತ್ರ ಪರಿಜ್ಞಾತಂ ಪರಿಜ್ಞಾತಂ ಪ್ರಹೀಯತೇ　　　　॥ ೭೯ ॥

ಷವು ತಿಳಿದುಬಿಟ್ಟ ಬಳಿಕ, ಯಾವನು ಮತ್ತೆ ಆ ಅವಿದ್ಯೆಯಲ್ಲಿ ಮಗ್ನನಾಗಲು ಬಯಸುವನು ? (ರಾತ್ರಿಯವೇಳೆ ಕತ್ತಲೆಯಲ್ಲಿ ಕಣ್ಣು ಕಾಣದಿರುವಾಗಲೇ, "ಇಲ್ಲಿ ಇಗೋ ಭಾವಿಯಿರುವುದು." ಎಂದು ಗೊತ್ತುಮಾಡಿಕೊಂಡು ಜಾಗರೂಕನಾಗಿರುವ ಮನುಷ್ಯನು ಹಗಲು ಹೊತ್ತಿನಲ್ಲಿ ಆ ಭಾವಿಯಲ್ಲಿ ಬಿದ್ದು ಸಾಯಲು ಬಯಸುವುದಿಲ್ಲವಷ್ಟೆ.) ಇದು ಬರಿಯ ಶ್ವಪಚರ (ಉತ್ಸವ) ಜಾತ್ರೆಯೆಂದು ಚೆನ್ನಾಗಿ ತಿಳಿದ ಬಳಿಕ, ಬ್ರಾಹ್ಮಣನೆನ್ನಿಸಿಕೊಂಡವನು ಯಾವನಾದರೂ ಆ ಜಾತ್ರೆಯನ್ನು ನೋಡಲು ಹೋಗುವನೇನು ?

೭೮. ನಿರ್ಮಲವಾಗಿ ಬೆಳ್ಳಗಿರುವ ನೀರಿನಲ್ಲಿ ಉಂಟಾಗಿದ್ದ "ಇದು ಹಾಲು" ಎಂಬ ಭ್ರಾಂತಿಯು, ವಸ್ತು ತತ್ತ್ವವಿಚಾರದಿಂದ ಹೇಗೆ ನಿವೃತ್ತಿಯಾಗುವುದೋ ಹಾಗೆ ಈ ಸಂಸಾರ ಭ್ರಾಂತಿಯು, ಬುದ್ಧಿಯಲ್ಲಿ ಆತ್ಮತತ್ತ್ವ ವಿಚಾರಮಾಡಿ, ಆ ವಿಚಾರಾಭ್ಯಾಸ ದಾರ್ಢ್ಯದಿಂದ ಪರಮಾರ್ಥತಃ ಆತ್ಮತತ್ತ್ವ ಸಾಕ್ಷಾತ್ಕಾರವನ್ನು ಪಡೆದರೆ ಅದರಿಂದ ನಿಸ್ಸಂದೇಹವಾಗಿ ಪುನಃ ತಲೆದೋರದಂತೆ ನಿವೃತ್ತಿಯಾಗಿ ಬಿಡುವುದು.

೭೯. "ಇದು ಮದ್ಯವು" ಎಂಬ ವಾಸ್ತವವಾದ ಜ್ಞಾನವು ಎಲ್ಲಿಯವರೆಗೆ ಮದ್ಯದ ವಿಷಯದಲ್ಲಿ ಉಂಟಾಗುವುದಿಲ್ಲವೋ, ಅದುವರೆವಿಗೂ ಭ್ರಾಂತಿಯಿಂದ ತಪ್ಪಾಗಿಯೇ ಅದನ್ನು ನೀರೆಂದು ತಿಳಿದುಕೊಂಡು ಉತ್ತಮರಾದ ಬ್ರಾಹ್ಮಣರೂ ಒಂದುವೇಳೆ ಕುಡಿದು ಮೋಸಹೋಗಬಹುದು ಅದು ಮದ್ಯವೇ ಎಂಬುದಾಗಿ ಯಥಾರ್ಥವಾದ ಅದರ ಸ್ವರೂಪಜ್ಞಾನವು ನಿಶ್ಚಯವಾಗಿ ತಿಳಿದುಬಿಟ್ಟಬಳಿಕ, ಆ ಮದ್ಯವನ್ನು ಅವರು ಹತ್ತಿರಕ್ಕೂ ಬರಗೊಳಿಸುವುದೂ ಇಲ್ಲ, ಕಣ್ಣಿನಿಂದ ನೋಡಲೂ ಬಯಸುವುದಿಲ್ಲ. (ಹೀಗೇ ಸಂಸಾರವಾಸನೆಯು ತತ್ತ್ವಜ್ಞಾನೋದಯವಾಗುವವರೆವಿಗೆ ಮಾತ್ರವೇ ಇದ್ದುಕೊಂಡು ಸರ್ವಾನರ್ಥ ಹೇತುವಾಗುವುದು. ತತ್ತ್ವಜ್ಞಾನೋದಯವಾದ ಕೂಡಲೆ ಅದು ನಿರ್ಮೂಲವಾಗಿ ಬಿಡುವುದು.)

ರೂಪಲಾವಣ್ಯ ಯುಕ್ತಾಪಿ ಚಿತ್ರಕಾಂತೇವ ಕಾಮಿನೀ ।
ದ್ರವ್ಯಮಾತ್ರ ಸಮಾರಂಭಾತ್ತತ್ವವಿದ್ಭಿರ್ವಿಲೋಕ್ಯತೇ ॥ ೮೦ ॥

ಯಥಾ ಮಷೀಕುಸುಂಭಾದಿ ಸ್ತ್ರಿಯಾಶ್ಚಿತ್ರೇ ತಥೈವ ಹಿ ।
ಜೀವತ್ಯಾ ಅಪಿ ಕೇಶೋಷ್ಠಂ ಕಸ್ತಾಂ ಪರಿ ಕಿಲ ಗ್ರಹಃ ॥ ೮೧ ॥

ಅನುಭೂತೋ ಗುಡಃ ಸ್ವಾದುರಪಿ ದಾಹವಿಕರ್ತನೈಃ ।
ನ ಶಕ್ಯತೇಽನ್ಯಥಾಕರ್ತುಂ ತತ್ತ್ವಾವಲೋಕಸ್ತಥಾತ್ಮನಃ ॥ ೮೨ ॥

---

೮೦. ಲೋಕೋತ್ತರವಾದ ರೂಪಲಾವಣ್ಯಯುಕ್ತಳಾದ ಕಾಮಿನೀ ಮಣಿಯನ್ನೂ ಕೂಡ ತತ್ತ್ವಜ್ಞರು, ಕೇವಲ ಚಿತ್ರದಲ್ಲಿ ಬರೆಯಲ್ಪಟ್ಟಿರುವ ಒಂದು ಸ್ತ್ರೀ ಪ್ರತಿಮೆಯಂತೆ, ನಾನಾ ವಿಧಗಳಾದ ಬಣ್ಣಮುಂತಾದ ದ್ರವ್ಯಗಳಿಂದ ಮಾತ್ರವೇ ಕಲ್ಪಿತವಾದ ಆಕಾರವುಳ್ಳವಳನ್ನಾಗಿ, ಅತಿ ಜುಗುಪ್ಸೆಯಿಂದ ಕಾಣುವರು ಆದರಿಂದ ಎಂದಿಗೂ ಮೋಹಿತರಾಗುವುದಿಲ್ಲ. (ಚಿತ್ರಾರ್ಪಿತಕಾಂತೆಯು, ಬಟ್ಟೆಯಮೇಲೆ ವಿವಿಧ ಬಣ್ಣಗಳಿಂದ ಮನೋರಂಜಕವಾಗಿ ಚಿತ್ರಿತವಾಗಿರುವಂತೆ ಒಂದು ಸ್ತ್ರೀ ವ್ಯಕ್ತಿಯೂ ಕೂಡ ಪಂಚ ಭೂತ ವಿಕಾರಗಳಾದ ರಕ್ತ, ಮಾಂಸ, ಮೇದಸ್ಸು ಮುಂತಾದ ದ್ರವ್ಯಗಳಿಂದಲೂ ತನ್ಮಾತ್ರಗಳಿಂದಲೂ ರಂಜಿತವಾಗಿರುವುದು. ಅಂತಹ ತುಚ್ಛವಾದ ಅತಿ ಜುಗುಪ್ಸಿತವಾದ ಆಕಾರದಿಂದ ಏಕೆ ಮೋಹಗೊಳ್ಳಬೇಕು. ?)

೮೧. ಒಂದು ಸ್ತ್ರೀವ್ಯಕ್ತಿಯ ಆಕಾರವನ್ನು ಚಿತ್ರಿಸಿರುವ ಒಂದು ಚಿತ್ರಪಟದಲ್ಲಿ ಹೇಗೆ ಹೇಗೆ ಪರೀಕ್ಷಿಸಿ ನೋಡಿದರೂ, ಅದರ ಕರಚರಣಾದಿ ಅಂಗಭೇದಗಳು ಕಪ್ಪು ಕೆಂಪು ಕೇಸರಿ ಮುಂತಾದ ನಾನಾ ಬಣ್ಣಗಳಿಂದ ಮಾತ್ರವೇ ಕೂಡಿರುವುದಾಗಿ ಹೇಗೆ ಕೇವಲ ಪಾಂಚ ಭೌತಿಕವಾಗಿಯೇ ಇರುವುವೋ ಹಾಗೆಯೇ ಬದುಕಿರುವ ಸ್ತ್ರೀ ವ್ಯಕ್ತಿಗೂ ಕೂಡ, ಕೇಶಪಾಶ ತುಟಿ ಮೊದಲಾದ ಅಂಗಭೇದಗಳು ಕೇವಲ ಪಂಚಭೂತಮಯವಾದವುಗಳೇ ಆಗಿವೆ. ಈ ರಹಸ್ಯವನ್ನು ಚೆನ್ನಾಗಿ ತಿಳಿದುಕೊಂಡಿರುವ ತತ್ತ್ವಜ್ಞನು, ಸ್ತ್ರೀವ್ಯಕ್ತಿಯನ್ನು ಕಂಡು ಮೋಹಗೊಳ್ಳುವನೇನು ? ಅಥವಾ ಪರಿಗ್ರಹಿಸುವನೇನು ?

೮೨. ಬೆಲ್ಲದುಂಡೆಯ ಮಧುರರಸವನ್ನು ಒಂದುಸಲ ಚೆನ್ನಾಗಿ ಅನುಭವಿಸಿ ಬಿಟ್ಟಬಳಿಕ, ಅನುಭೂತವಾದ ಗುಡಖಂಡವನ್ನಾಗಲಿ ಅಥವಾ ಅನುಭವಕಾರಣವಾದ ನಾಲಿಗೆಯನ್ನಾಗಲಿ ಅಥವಾ ಅನುಭವಿಸಿದವನಾದ ಮನುಷ್ಯನನ್ನಾಗಲಿ ಸುಟ್ಟ

ಪರವ್ಯಸನಿನೀ ನಾರೀ ವ್ಯಗ್ರಾಪಿ ಗೃಹಕರ್ಮಣಿ ।
ತದೇವಾಸ್ವಾದಯತ್ಯಂತಃ ಪರಸಂಗ ರಸಾಯನಂ ॥ ೭೩ ॥

ಏವಂ ತತ್ವೇ ಪರೇ ಶುದ್ಧೇ ಧೀರೋ ವಿಶ್ರಾಂತಿ ಮಾಗತಃ ।
ನ ಶಕ್ಯತೇ ಚಾಲಯಿತುಂ ದೇವೈರಪಿ ಸವಾಸವೈಃ ॥ ೭೪ ॥

ನಾಶಮಾಡಿದರೂ ಸಣ್ಣತುಂಡುಗಳಾಗಿ ಕತ್ತರಿಸಿ ಹಾಕಿದರೂ ಅಥವಾ ಇನ್ನೂ ನೂರಾರು ವಿಧಗಳಲ್ಲಿ ಪ್ರಯತ್ನಪಟ್ಟರೂ, ಪೂರ್ವದ ಮಾಧುರ್ಯಾನುಭವವನ್ನು ಬದಲಾಯಿಸಿ, "ಇದು ಮಧುರರಸವಲ್ಲ, ಕಹಿ ಹುಳಿ ಲವಣ ಮುಂತಾದ ರಸಾಂತರಾನುಭವವು" ಎಂಬೀ ಬೇರೆ ಪ್ರಕಾರವಾಗಿ ಹೇಗೆ ಮಾಡುವುದು ಸರ್ವಥಾ ಆಗುವುದೇ ಇಲ್ಲವೋ ಹಾಗೆಯೇ ಆತ್ಮನ ತಾತ್ತ್ವಿಕವಾದ ಆನಂದಾನುಭವಪನ್ನು ಕೂಡ ಪ್ರಕಾರಾಂತರವಾಗಿ ಬದಲಾಯಿಸುವುದಕ್ಕೆ ಎಂದೆಂದಿಗೂ ಸಾಧ್ಯವೇ ಇಲ್ಲ.

೭೩-೭೪. ಪರಪುರುಷನಲ್ಲಿ ಮೋಹಗೊಂಡು, ವಿಶೇಷ ಅನುರಕ್ತಳಾಗಿ, ಕಾಮವಶತೆಯಿಂದ, ಆವನೊಡನೆ ಸುರತ ಸುಖಾನುಭವಮಾಡಬೇಕೆಂಬ ಮನೋರಥವುಳ್ಳವಳಾಗಿ ಸದಾ ಆವನ ಸಮಾಗಮವನ್ನೇ ಮನಸ್ಸಿನಲ್ಲಿ ಧ್ಯಾನ ಮಾಡುತ್ತಿರುವ ಒಬ್ಬ ಯುವತಿಯು, ಮನೆಯ ಕೆಲಸಗಳಲ್ಲಿ ನಿರತಳಾಗಿರುವಂತೆ ಹೊರಗೆ ಕಂಡು ಬಂದರೂಕೂಡ ಮನಸ್ಸಿನೊಳಗೆ, ತನ್ನಪ್ರೇಮ ಪಾತ್ರನಾದ ಆ ಪರಪುರುಷನೊಡನೆ ಸಾಂಗತ್ಯ ರತಿಕ್ರೀಡಾದಿ ಸುಖವನ್ನೇ ನಿರಂತರವೂ ಆಸ್ವಾದನೆಮಾಡುತ್ತಾ ಅದೊಂದರಲ್ಲಿ ಮಾತ್ರವೇ ನೆಟ್ಟ ಮನಸ್ಸುಳ್ಳವಳಾಗಿ, ಅನ್ಯತ್ರ ಅಮನಸ್ಕಳಾಗಿಯೇ ಇರುವಳಲ್ಲವೆ; ಇದರಂತೆ ನಿತ್ಯಶುದ್ಧವಾದ ನಿರತಿಶಯಾನಂದೈಕರಸ ಸ್ವರೂಪವಾಗಿ ಪರಮಪ್ರೇಮಾಸ್ಪದವಾದ ಸ್ವಾತ್ಮರೂಪ ಪರತತ್ತ್ವದಲ್ಲಿ ಮಾತ್ರವೇ ಪರಿಸಿಷ್ಠಿತನಾಗಿ ನಿರಂತರವೂ ವಿಶ್ರಾಂತಿಯನ್ನು ಪಡೆದವನಾಗಿಯೂ, ಅನ್ಯತ್ರ ಬಾಹ್ಯದೃಶ್ಯಗಳಿಂದ (ಅಸತ್ಯಗಳಾದ ಕಾರಣ) ಸ್ವಲ್ಪವೂ ವಿಕಾರಗೊಳ್ಳದೆ ಧೀರನಾಗಿಯೂ ಅಚಲನಾಗಿಯೂ ಇರುವ, ಆತ್ಮೈಕಪರಾಯಣನಾದ ಜ್ಞಾನ ನಿಷ್ಠನನ್ನು ಆ ಸ್ವಾತ್ಮಸ್ಥಿತಿಯಿಂದ ಒಂದು ಕ್ಷಣಕಾಲವಾದರೂ ಕದಲಿಸುವುದಕ್ಕೆ ಕೂಡ, ಇಂದ್ರಾದಿ ದೇವತೆಗಳಿಗೂ ಸ್ವಲ್ಪವೂ ಸರ್ವಥಾ ಶಕ್ತಿಯಿಲ್ಲವೇ ಇಲ್ಲವು,

೭೫. ಪರಪುರುಷನೊಡನೆ ಕಾಮೋಪಭೋಗದಲ್ಲಿ ಆಸಕ್ತಳಾದ ಜಾರಿಣಿಯಾದ ಯುವತಿಯು ತನ್ನ ಮನಸ್ಸಂಕಲ್ಪದಿಂದ ಅನುಭವಿಸುತ್ತಿರುವ ವಿಟ ಪುರುಷ

ಪರವ್ಯಸನಿನೀ ನಾರೀ ಕೇನ ಭರ್ತ್ರಾ ಬಲೀಯಸಾ ।
ವಿಸ್ಮಾರಿತಾ ಸ್ವಯಂ ಕಲ್ಪಕಾಂತಸಂಗ ಮಹೋತ್ಸವಂ ॥ ೮೫ ॥

ಜಗತ್ಸಮರಸಾನಂದ ಚಿದಾಲೋಕಾವಲಂಬನಂ ।
ಕೇನ ವಿಸ್ಮಾರ್ಯತೇ ಬುದ್ಧಿಸ್ತತ್ವಜ್ಞಸ್ಯ ಮಹಾತ್ಮನಃ ॥ ೮೬ ॥

ಸಮಗ್ರಸುಖದುಃಖಾಢ್ಯಂ ವ್ಯವಹಾರಮ ಖಂಡಿತಂ ।
ಕುರ್ವನ್ ಕುಲಜನಾಯುಕ್ತೋ ಭರ್ತೃಶ್ವಶುರಖೇದಿತಃ ॥ ೮೭ ॥

ಯಥಾಸಂಕಲ್ಪಕಾಂತೇನ ಭವತ್ಯಾನಂಧಮಂಥರಃ ।
ವಧೂಲೋಕೋ ವ್ಯಸನವಾನ್ದುಃಖವೃಂದೈರ್ನ ಬಾಧ್ಯತೇ ॥ ೮೮ ॥

ನೊಡನೆ ಕೂಡಿ ಸರಸಸಂಲ್ಲಾಪ, ರತಿಕ್ರೀಡೆ ಇತ್ಯಾದಿಗಳುಂಟಾಗುವ ಅಪರಿಮಿತ ಸುಖಾನುಭವವನ್ನು ಯಾವ ಪತಿಯುತಾನೆ, ಎಷ್ಟೇ ಬಲಿಷ್ಠನಾಗಿದ್ದರೂ ಕೂಡ ಮರೆಯಿಸಲು ಸಮರ್ಥನಾಗುವನು ?

೮೬. ಇದರಂತೆಯೇ, ಲೋಕದಲ್ಲಿನ ನಾನಾವಿಧ ಪುಷ್ಪರಸಗಳು ಓಟ್ಟು ಗೂಡಿ ಸಮರಸವಾಗಿ ಮಧುಭಾವದಿಂದ ಪರಿಣತವಾಗುವಂತೆ, ಪ್ರಾಪಂಚಿಕಗಳಾದ ಬಗೆಬಗೆಯ ಸಕಲ ವೈಷಯಿಕಾನಂದಗಳೂ ಸಾಮರಸ್ಯವನ್ನು ಹೊಂದುವಂತಹ ನಿರತಿಶಯ ಸ್ವಾತ್ಮಾನಂದ ಚಿದ್ರೂಪ ಆತ್ಮತತ್ತ್ವ ಸಾಕ್ಷಾತ್ಕಾರವನ್ನು ಎಡೆಬಿಡದೆ ನಿರಂತರವೂ ಆಸ್ವಾದಿಸುತ್ತಿರುವ ತತ್ತ್ವಜ್ಞನಾದ ಮಹಾತ್ಮನ ಬುದ್ಧಿಯನ್ನು, ಯಾವನು ತಾನೇ ಮರೆಯಿಸಲು ಶಕ್ತನಾಗುವನು ?

[ಜ್ಞಾನಾಮೃತರಸೋಯೇನ ಸಕೃದಾಸ್ವಾದಿತೋಭವೇತ್ । ವಿಹಾಯ ಸರ್ವಕಾರ್ಯಾಣಿ ಮನಸ್ತತ್ರೈವ ಧಾವತಿ ॥ ಯಾವ ತತ್ತ್ವಜ್ಞನು ತನ್ನ ಮನಸ್ಸಿನಿಂದ ಒಂದುಸಲ, ಜ್ಞಾನವೆಂಬ ದಿವ್ಯವಾದ ಅಮೃತರಸವನ್ನು ಆಸ್ವಾದನೆ ಮಾಡುವನೋ ಅಂತಹ ಮಹಾತ್ಮನ ಮನಸ್ಸು, ಸ್ವಲ್ಪವೂ ಕ್ಷಣಿಕವೂ ಆದ ಸುಖಾಭಾಸವನ್ನು ಕೊಡುವ ಸಕಲ ಕಾರ್ಯಗಳನ್ನೂ ಸಂಪೂರ್ಣವಾಗಿ ಪರಿತ್ಯಜಿಸಿ, ಸರ್ವದಾ ಜ್ಞಾನಾಮೃತರಸಾಸ್ವಾದನೆಗಾಗಿ, ಅದರಕಡೆಗೆ ಓಡಿಹೋಗುವುದು. ಶಿವಧರ್ಮೋತ್ತರ]

೮೭-೮೮-೮೯. ಪರಪುರುಷರೊಡನೆ ರತಿಸುಖಾನುಭವದಲ್ಲಿ ವ್ಯಗ್ರರಾದ ಜಾರಿಣಿಯರು, ಸಮಗ್ರವಾಗಿ ಸುಖಗಳಿಂದಲೂ ದುಃಖಗಳಿಂದಲೂ ಪ್ರಚುರವಾದ

ತಥಾ ವಿಗಲಿತಾವಿದ್ಯೋ ವ್ಯವಹಾರಪರೋಽಪ್ಯಲಂ ।
ಸಮ್ಯಗ್ದೃಷ್ಟಿಃ ಸದಾಚಾರೋ ಮುದಮೇತ್ಯಂತರಾತ್ಮನಾ ॥ ೮೯ ।

ಛಿದ್ಯತೇ ನ ನಿಕೃತ್ತಾಂಗೋ ಗಲದಶ್ರುರ್ನ ರೋದಿತಿ ।
ದಹ್ಯತೇ ನ ಪ್ರದಗ್ಧೋಽಪಿ ನಷ್ಟೋಽಪಿ ನ ವಿನಶ್ಯತಿ ॥ ೯೦ ॥

ಮನೆಕೆಲಸಗಳನ್ನೆಲ್ಲಾ ಸರ್ವದಾ ಮಾಡುತ್ತಿದ್ದರೂ, ತಮ್ಮ ಮನೆಯಲ್ಲಿರುವ ಎಲ್ಲ ಬಂಧು ಜನಗಳಿಗೆ ಅಧೀನರಾಗಿ ಅಸ್ವತಂತ್ರರಾಗಿದ್ದರೂ, ಗಂಡಂದಿರಿಂದಲೂ ಅತ್ತೆ ಮಾವಂದಿರಿಂದಲೂ ದುಷ್ಕಾರ್ಯದಿಂದ ತಪ್ಪಿಸುವುದಕ್ಕಾಗಿ ನಾನಾ ಶಿಕ್ಷೆಗಳಿಂದ ಪೀಡಿತರಾದರೂ, ಕೂಡ, ಅವರು ಮನಸ್ಸಂಕಲ್ಪದಿಂದ, ತಮಗೆ ಪ್ರಿಯತಮರಾದ ಪುರುಷರೊಡನೆ ಪರಮಾನಂದ ಭರಿತರಾಗಿ ಹೇಗೆ ಸುಖಾನುಭವಮಾಡುವರೋ ಮತ್ತು ಅವರಿಗೆ ಆ ಸಮಯದಲ್ಲಿ ದುರ್ಭರವಾದ ದುಃಖಗಳು ಮೇಲಿಂದಮೇಲೆ ಬಂದೊದಗಿದರೂ, ಅವೊಂದರಿಂದಲೂ ಅವರು ಹೇಗೆ ಸ್ವಲ್ಪವೂ ವ್ಯಥೆಗೆ ಒಳಪಡುವುದಿಲ್ಲವೋ, ಹಾಗೆಯೇ ನಿಶ್ಶೇಷವಾಗಿ ಅವಿದ್ಯೆಯನ್ನು ನಾಶಪಡಿಸಿಕೊಂಡಿರುವ ಸ್ವಾತ್ಮತತ್ತ್ವಜ್ಞನು ಹೊರಗೆ, ನಿರಂತರವೂ ಸಕಲ ವ್ಯವಹಾರ ನಿರತನಾಗಿದ್ದರೂ ಕೂಡ, ಪಾರಮಾರ್ಥಿಕವಾದ ಯಥಾರ್ಥ ಜ್ಞಾನಸಂಪನ್ನನಾಗಿರುವ ಕಾರಣ, ಸದಾಚಾರ ನಿರತನಾಗಿರುತ್ತಾ, ತನ್ನ ಮನಸ್ಸಿನಲ್ಲಿ ಅಖಂಡವಾದ ನಿರತಿಶಯಾನಂದ ರೂಪ ಸ್ವಾತ್ಮಸುಖವನ್ನು ಅನುಭವಿಸುತ್ತಾ ಅಪ್ರಮತ್ತನಾಗಿರುವನು. ಮತ್ತು ಪ್ರಾಪಂಚಿಕ ವ್ಯವಹಾರಜನ್ಯವಾದ ದುಃಖಗಳೆಂದೂ ತತ್ತ್ವಜ್ಞನ ದೃಷ್ಟಿಗೆ ಗೋಚರ ವಾಗುವುದು ಕೂಡ ಇಲ್ಲ.

೯೦. ತತ್ತ್ವಜ್ಞನ ಅವಯವಗಳನ್ನು ಶಸ್ತ್ರಗಳಿಂದ ಕತ್ತರಿಸಿ ಹಾಕಿದರೂ, ಅವನು ಮಾತ್ರ ಅವುಗಳಲ್ಲಿ ಅಭಿಮಾನವಿಲ್ಲದವನಾಗಿರುವ ಕಾರಣ ಎಂದಿಗೂ ಕತ್ತರಿಸಲ್ಪಟ್ಟವನಾಗುವುದಿಲ್ಲ. ಅವನ ಕಣ್ಣುಗಳಿಂದ ನೀರು ಸುರಿಯುತ್ತಿದ್ದರೂ, ಅವನು ಶೋಕದಿಂದ ಅಳುವುದಿಲ್ಲ. ಅವನು ದೇಹಾತೀತನಾಗಿರುವ ಕಾರಣ, ಅವನ ದೇಹವನ್ನು ಚಿತೆಯ ಮೇಲಿರಿಸಿ ಅಗ್ನಿಯಿಂದ ದಹಿಸಿದರೂ ಅವನು ಎಂದಿಗೂ ಸುಡಲ್ಪಟ್ಟವನಾಗುವುದಿಲ್ಲ. ಅವನ ದೇಹವು ನಾಶಹೊಂದಿದರೂ ಕೂಡ ತತ್ತ್ವಜ್ಞನು ನಾಶಹೊಂದುವವನು ಅಲ್ಲವೇ ಅಲ್ಲವು (ಅವನು ದೇಹೇಂದ್ರಿಯಾದ್ಯತೀತನಾಗಿ) ಅವುಗಳಲ್ಲಿ ಆತ್ಮಾಭಿಮಾನವಿಲ್ಲದವನಾಗಿರುವ ಕಾರಣ, ತನ್ನಿಷ್ಠವಾದ ಸುಖದುಃಖಾದಿ ವಿಕಾರಗಳಿಂದ ಅಸಂಸ್ಪೃಷ್ಟನಾಗಿ ಸದಾ ಶೋಕ ಮೋಹರಹಿತನಾಗಿ

ವ್ಯಪಗತ ಸುಖದುಃಖ ಸಂನಿಪಾತೋ ।
ವಿಧಿವಿಧುರೇಷ್ವಪಿ ಸಂಕಟೇಷ್ವಚಿತ್ತಃ ॥
ವಿಲಸತು ಸದನೇ ಪುರೋತ್ತಮೇ ವಾ ।
ವಿತತಗಿರೌ ವಿಪಿನೇ ತಪೋವನೇ ವಾ ॥ ೯೧ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ಉಪಶಮಪ್ರಕರಣೇ "ವೈರಾಗ್ಯೋಪದೇಶೋ" ನಾಮ
ಚತುಃಸಪ್ತತಿತಮಃ ಸರ್ಗಃ

ಅವಿನಾಶಿಯಾಗಿ ಸರ್ವ ಬಂಧಶೂನ್ಯನಾಗಿ ಆತ್ಮಾರಾಮನಾಗಿರುವನು ಎಂದರ್ಥ. ನೈನಂಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ । ನಚೈನಂಕ್ಲೇದಯಂತ್ಯಾಪಃ ನಶೋಷಯತಿ ಮಾರುತಃ ॥ ಅಚ್ಛೇದ್ಯೋಯಂ ಅದಾಹ್ಯೋಯಂ ಅಕ್ಲೇದ್ಯಃ ಅಶೋಷ್ಯ ಏವಚ । ನಿತ್ಯಃ ಸರ್ವಗತಃ ಸ್ಥಾಣುಃ ಅಚಲಃ ಅಯಂ ಸನಾತನಃ ॥ ಅವ್ಯಕ್ತೋಯಂ ಅಚಿಂತ್ಯೋಯಂ ಅವಿಕಾರ್ಯೋಯ ಮುಚ್ಯತೇ ॥ ಗೀತಾ. ಅಧ್ಯಾಯ ೨. ಶ್ಲೋಕ. ೨೩-೨೪-೨೫.]

೯೧. ಅಯ್ಯ ರಾಮ, ಜ್ಞಾನನಿಷ್ಠೆಯಿಂದ ಮನೋನಾಶವನ್ನು ಮಾಡಿಕೊಂಡಿರುವ ಮಹಾತ್ಮನು ಪೂರ್ವಜನ್ಮಾರ್ಜಿತವಾದ ಪ್ರಾರಬ್ಧ ಕರ್ಮಫಲವಾಗಿ ಸಂಪ್ರಾಪ್ತವಾದ ಭೋಗ ಲೇಶವೂ ಇಲ್ಲದ ದಾರಿದ್ರ್ಯಾದಿ ದುಃಖಗಳಲ್ಲಿಯಾಗಲಿ, ಗಲ್ಲಿಗೆ (ಶೂಲಕ್ಕೆ) ಏರಿಸುವಿಕೆ ಮೊದಲಾದ ಮಹಾ ಸಂಕಟಗಳಲ್ಲಿಯಾಗಲಿ, ಪ್ರಶಸ್ತವಾದ ನಗರದೊಳಗೆ ಸುಂದರವಾದ ಪ್ರಾಸಾದದಲ್ಲಿಯಾಗಲೀ, ಪರ್ವತ ಶ್ರೇಣಿಗಳಿಂದ ವ್ಯಾಪ್ತವಾದ ಮಹಾರಣ್ಯ ಮಧ್ಯದಲ್ಲಿ ತಪೋವನದೊಳಗೆ ಪರ್ಣಶಾಲೆಯಲ್ಲಿಯಾಗಲಿ ವಾಸಮಾಡಿಕೊಂಡಿರಲಿ. ಈರೀತಿಯಲ್ಲಿ ಅವನು ಎಲ್ಲಿಯಾದರೂ ಹೇಗಾದರೂ ಇದ್ದರೂ, ಸರ್ವದಾ ಪ್ರಾಪಂಚಿಕ ಸುಖದುಃಖಗಳಿಂದ ಸಂತಪ್ತನಾಗದೆಯೇ ಸ್ವಸ್ಥನಾಗಿರುವನು ಎಂದಿಗೂ ಸ್ವಲ್ಪವೂ ಸಾಂಸಾರಿಕ ಹರ್ಷಶೋಕಗಳಿಂದ ಸಂಪರ್ಕವನ್ನು ಹೊಂದುವುದೇ ಇಲ್ಲ.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ "ವೈರಾಗ್ಯೋಪದೇಶ" ಎಂಬ
ಎಪ್ಪತ್ತ ನಾಲ್ಕನೆಯ ಸರ್ಗವು.

ಪಂಚ ಸಪ್ತತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಜನಕಃ ಸಂಸ್ಥಿತೋ ರಾಜ್ಯೇ ವ್ಯವಹಾರಪರೋಽಪಿ ಸನ್ ।
ವಿಗತಜ್ವರ ಏವಾಂತರನಾಕುಲಮತಿಃ ಸದಾ ॥ ೧ ॥

ಪಿತಾಮಹೋ ದಿಲೀಪಸ್ತೇ ಸರ್ವಾರಂಭ ಪರೋಽಪ್ಯಲಂ ।
ವೀತರಾಗತಯೈವಾಂತರ್ಬುಭುಜೇ ಮೇದಿನೀಂ ಚಿರಂ ॥ ೨ ॥

ನಿರಂಜನತಯಾ ಬುದ್ಧೋ ಜನತಾಂ ಪಾಲಯಂಶ್ಚಿರಂ ।
ಜೀವನ್ಮುಕ್ತಾಕೃತಿರ್ನಿತ್ಯಂ ಮನೂ ರಾಜ್ಯಮಪಾಲಯತ್ ॥ ೩ ॥

ಎಪ್ಪತ್ತೈದನೆಯ ಸರ್ಗ

ಶ್ರೀ ವಸಿಷ್ಠರು ಹೇಳಿದರು :—

೧. ಅಯ್ಯ ರಾಮ, ವಿದೇಹಾಧಿಪತಿಯಾದ ಜನಕ ಮಹಾರಾಜನು ರಾಜ್ಯ ಭಾರ ಮಾಡುತ್ತಾ ಪ್ರಜಾಪಾಲನಾದಿ ಸಕಲ ವ್ಯವಹಾರನಿರತನಾಗಿದ್ದರೂ ಕೂಡ ಅಸಂಸಕ್ತಚಿತ್ತನಾದ ಕಾರಣ ಮನಸ್ಸಿನಲ್ಲಿ ವ್ಯಾಕುಲವಿಲ್ಲದವನಾಗಿಯೂ, ಶೋಕ ಮೋಹಪರವಶನಾಗದೆಯೂ ಸದಾ ಸಕಲ ಸಂತಾಪರಹಿತನಾಗಿಯೇ ಸ್ವಾತ್ಮ ನಿಷ್ಠನಾಗಿದ್ದನು.

೨. ನಿನ್ನ ಪಿತಾಮಹನಾದ ದಿಲೀಪ ಚಕ್ರವರ್ತಿಯು ಸಮಗ್ರವಾಗಿ ಸರ್ವದಾ ಸಮಸ್ತ ರಾಜಕಾರ್ಯಗಳಲ್ಲಿ ನಿರತನಾಗಿದ್ದರೂ ಕೂಡ, ಮನಸ್ಸಿನೊಳಗೆ ಅಭಿಮಾನ ಹೇತುಗಳಾದ ರಾಗ ದ್ವೇಷಾದಿಗಳಿಂದ ವಿರಹಿತನಾಗಿಯೇ ಬಹು ದೀರ್ಘಕಾಲ ಭೂಮಂಡಲವನ್ನು ಪರಿಪಾಲನೆ ಮಾಡಿದನು.

೩. ಆತ್ಮಜ್ಞಾನ ಪ್ರಬುದ್ಧನಾದ ವೈವಸ್ವತ ಮನುಚಕ್ರವರ್ತಿಯು ರಾಗ ದ್ವೇಷಾದಿ ಮನಃ ಕಾಲುಷ್ಯರಹಿತನಾಗಿದ್ದುಕೊಂಡು, ಅಪರಿಮಿತ ಸಂವತ್ಸರಗಳು

ವಿಚಿತ್ರಬಲಯುದ್ಧೇಷು ವ್ಯವಹಾರೇಷು ಭೂರಿಷು ।
ಮಾನ್ಧಾತಾ ಸುಚಿರಂ ತಿಷ್ಠನ್ಪ್ರಾಪ್ತವಾನ್ಸೈ ಪರಂ ಪದಂ ॥ ೪ ॥

ಬಲಿಃ ಪಾತಾಲಪೀಠಸ್ಥಃ ಕುರ್ವನ್ಸದಿವ ಸಂಸ್ಥಿತಿಂ ।
ಸದಾ ತ್ಯಾಗೀ ಸದಾಸಕ್ತೋ ಜೀವನ್ಮುಕ್ತ ಇತಿ ಸ್ಥಿತಃ ॥ ೫ ॥

ಧರ್ಮದಿಂದ ಪ್ರಜಾಪಾಲನೆ ಮಾಡುತ್ತಾ, ನಿರಂತರವೂ ಜೀವನ್ಮುಕ್ತನಾಗಿದ್ದು ಕೊಂಡೇ ರಾಜ್ಯವಾಳಿದನು.

೪. ಮಾಂಧಾತೃ ಚಕ್ರವರ್ತಿಯೂ ಕೂಡ ಸರ್ವರಿಗೂ ಆಶ್ಚರ್ಯವನ್ನುಂಟು ಮಾಡುವಷ್ಟುಮಟ್ಟಿಗೆ ಅಪಾರವಾದ ಸೈನ್ಯಗಳನ್ನು ಸೇರಿಸಿಕೊಂಡು ಅದ್ಭುತವಾಗಿ ತನ್ನ ಬಾಹುಬಲದಿಂದ ಅನೇಕ ಯುದ್ಧಗಳಲ್ಲಿ ಶತ್ರುಗಳೊಡನೆ ಹೋರಾಡಿ, ಜಯವನ್ನು ಹೊಂದಿದವನಾಗಿಯೂ ಅನೇಕಾನೇಕ ರಾಜಕೀಯ ವ್ಯವಹಾರಗಳಲ್ಲಿ ವ್ಯಾಪೃತನಾಗಿಯೂ, ಚಿರಕಾಲ ರಾಜ್ಯಭಾರ ಮಾಡುತ್ತಾ ಇದ್ದು ಕೊನೆಗೆ ವಿವೇಕ ವೈರಾಗ್ಯಾಭ್ಯಾಸಬಲದಿಂದ ಸ್ವಾತ್ಮತತ್ತ್ವ ಜ್ಞಾನವನ್ನು ಸಂಪಾದಿಸಿ ಪರಮ ಪದವನ್ನು ಪಡೆದನು.

೫. ಬಲಿ ಚಕ್ರವರ್ತಿಯು ಪಾತಾಳ ಲೋಕದಲ್ಲಿ ಪ್ರತಿಷ್ಠಿತನಾಗಿದ್ದುಕೊಂಡು ಸಾಮಾನ್ಯ ಜನರು ಲೋಕದಲ್ಲಿ ಪ್ರಪಂಚ ವ್ಯವಹಾರವನ್ನು ಯಥಾರ್ಥವೆಂದು ಭಾವಿಸಿ ಎಷ್ಟು ಆದರದಿಂದ ನಿರ್ವಹಿಸುವರೋ ಅಷ್ಟೇ ಆದರದಿಂದ (ಯಥಾರ್ಥಮಿವ= ವಸ್ತುತಃ ಯಥಾರ್ಥವಲ್ಲದಿದ್ದರೂ ಯಥಾರ್ಥವಾದುದರಂತೆ) ಲೌಕಿಕ ವ್ಯವಹಾರಗಳನ್ನು ಮಾಡುವವನಾಗಿ ಕಂಡುಬಂದರೂ ಅವನು ಸದಾ ಸರ್ವತ್ರ ಮಮತಾಶೂನ್ಯನಾಗಿ ಸರ್ವಸ್ವ ತ್ಯಾಗಶೀಲನಾಗಿಯೂ, ಸರ್ವದಾ ಅನಾಸಕ್ತನಾಗಿಯೂ, ಜೀವನ್ಮುಕ್ತ ಸ್ಥಿತಿಯಿಂದಲೇ ವ್ಯವಹರಿಸುತ್ತಾ ಸ್ಥಿತಪ್ರಜ್ಞನಾಗಿದ್ದನು.

[ಕುರ್ವನ್ ಸ ದಿವ ಸಂಸ್ಥಿತಿಮ್ ಎಂಬ ಪಾಠವನ್ನು ಇಟ್ಟುಕೊಂಡು ಮೇಲ್ಕಂಡಂತೆ ವಿವರಿಸಿದ್ದಾಗಿದೆ. ಆದರೆ ಕುರ್ವನ್‌ಸ ದಿವಸ ಸ್ಥಿತಿಂ ಎಂಬ ಪಾಠಾಂತರವು ಇರುವುದೆಂದು ತಾತ್ಪರ್ಯ ಪ್ರಕಾಶ ಟೀಕಾಕಾರರು ಒಪ್ಪಿಕೊಂಡು ಸಃ ಬಲಿಃ ಪ್ರಸಿದ್ಧನಾದ ಬಲಿಚಕ್ರವರ್ತಿಯು ದಿವಸ ಸ್ಥಿತಿಂ= ಶ್ರೀಮನ್ನಾರಾಯಣನಿಂದ ಬಲಿಯು ಪಾತಾಳದಲ್ಲಿ ವಾಸಮಾಡಿಕೊಂಡಿರುವುದಕ್ಕಾಗಿ ನಿಯಮಿತವಾದ

ನಮುಚಿರ್ದಾನವಾಧೀಶೋ ದೇವದ್ವಂದ್ವಪರಃ ಸದಾ ।
ನಾನಾ ಚಾರವಿಚಾರೇಷು ಕ್ವಚಿನ್ನಾಂತರತಪ್ಯತ ॥ ೬ ॥

ವಾಸವಾಜೌ ತನುತ್ಯಾಗೀ ವೃತ್ರೋ ವಿತತಮಾನಸಃ ।
ಅಂತಃಶಾಂತಮನಾ ಮಾನೀ ಚಕಾರ ಸುರಸಂಗರಂ ॥ ೭ ॥

ಕುರ್ವನ್ದಾನವಕಾರ್ಯಾಣಿ ಪಾತಾಲತಲಪಾಲಕಃ ।
ಅನಾಯಾಸಂ ನಿರಾಕ್ರೋಶಂ ಪ್ರಹ್ಲಾದೋ ಹ್ಲಾದಮಾಗತಃ ॥ ೮ ॥

(ಕ್ಲುಪ್ತವಾದ= ನಿಗದಿಯಾದ) ದಿವಸಗಳ (ಕಾಲದ) ಪಾಲನೆಯನ್ನು ಎಂದರ್ಥ ಮಾಡಿರುವರು.]

೬. ದಾನವೇಂದ್ರನಾದ ನಮುಚಿಯು ಸರ್ವದಾ ಇಂದ್ರಾದಿ ದೇವಗಣ ಗಳೊಡನೆ ಮರ್ಯಾದೋಲ್ಲಂಘನ ಪೂರ್ವಕವಾಗಿ ಯುದ್ಧಗಳನ್ನು ಮಾಡುವುದ ರಲ್ಲಿ ನಿರತನಾಗಿದ್ದುಕೊಂಡು ದೇವಾಸುರರಿಗೆ ಸಂಬಂಧಿಸಿದ ವಿವಿಧಗಳಾದ ಆಚಾರಗಳ ವಿಮರ್ಶೆಗಳಲ್ಲಿಯೂ ಕೂಡ, ಯಾವೊಂದು ಸಂದರ್ಭದಲ್ಲಿಯೂ, ಸ್ವಲ್ಪವೂ ಮನಸ್ಸಿನೊಳಗೆ ಸಂತಾಪಗೊಳ್ಳದೆ ನಿಶ್ಚಿಂತನಾಗಿದ್ದನು.

೭. ಮಹಾ ಮಾನಿಯೂ (ಆತ್ಮ ಗೌರವದಲ್ಲಿ ದೃಷ್ಟಿಯುಳ್ಳವನು) ಅತ್ಯಂತೋದಾರಮನಸ್ಕನೂ ಆಗಿದ್ದ ವೃತ್ರಾಸುರನು ದೇವೇಂದ್ರನೊಡನೆ ಅನೇಕ ಯುದ್ಧಗಳನ್ನು ಮಾಡಿ ಕೊನೆಗೆ ದೇವೇಂದ್ರನಿಂದ ಯುದ್ಧದಲ್ಲಿ ಶರೀರತ್ಯಾಗಮಾಡಿ ದವನಾದರೂ, ದೇವತೆಗಳೊಡನೆ ಯುದ್ಧಮಾಡುವ ಕಾಲದಲ್ಲಿಯೂ ಕೂಡ ಮನಸ್ಸಿನೊಳಗೆ ಸ್ವಲ್ಪವೂ ಅಭಿಮಾನವಿಲ್ಲದವನಾಗಿ ಪ್ರಶಾಂತನಾಗಿಯೇ ಇದ್ದನು.

೮. ಮಹಾನುಭಾವನಾದ ಪ್ರಹ್ಲಾದನು ಪಾತಾಳ ಲೋಕದಲ್ಲಿ ರಾಜ್ಯಭಾರ ಮಾಡುತ್ತಾ, ತನ್ನ ಪ್ರಜೆಗಳಾದ ರಾಕ್ಷಸರ ಪರಿಪಾಲನಾರ್ಥವಾಗಿ ರಾಜೋಚಿತವಾದ ಸಕಲ ಕಾರ್ಯಗಳನ್ನೂ ನಿರ್ವಹಿಸುತ್ತಿದ್ದರೂ, ಸರ್ವದಾ ಆತ್ಮಾನುಸಂಧಾನ ಪರನಾಗಿರುತ್ತಾ, ಅಕ್ಷಯವೂ ವಾಚಾಮಗೋಚರವೂ ಆದ, ನಿತ್ಯನಿರತಿಶಯಾತ್ಮಾ ನಂದವನ್ನು ಅನುಭವಿಸಿದನು.

ಶಂಬರೈಕಪರೋಽಪ್ಯಂತಃ ಶಂಬರೈಕತಯೋದಿತಃ ।
ಸಂಸಾರಶಂಬರಂ ರಾಮ ಶಂಬರಸ್ತ್ಯಕ್ತವಾನಿದಂ ॥ ೯ ॥

ಅಸಕ್ತಬುದ್ಧಿರ್ಹರಿಣಾ ಕುರ್ವನ್ನಾನವಸಂಗರಂ ।
ಪರಾಂ ಸಂವಿದಮಾಸಾದ್ಯ ಕುಶಲಸ್ತ್ಯಕ್ತವಾನಿದಂ ॥ ೧೦ ॥

ಸರ್ವಾಮರಮುಖೋ ವಹ್ನಿಃ ಕ್ರಿಯಾಜಾಲಪರೋ ಹ್ಯಪಿ ।
ಯಜ್ಞಲಕ್ಷ್ಮೀಶ್ಚಿರಂ ಭುಂಕ್ತೇ ಮುಕ್ತ ಏವೇಹ ತಿಷ್ಠತಿ ॥ ೧೧ ॥

ಪೀಯಮಾನಃ ಸುರೈಃ ಸರ್ವೈಃ ಸೋಮಃ ಸಮರಸಾಶಯಃ ।
ಕ್ವಚಿದೇತಿ ನ ಸಂಸಂಗಮಾಕ್ರಾಂತಾಮಂಬರಂ ಯಥಾ ॥ ೧೨ ॥

---

೯. ಅಯ್ಯಾ ರಾಮ, ಶಂಬರಾಸುರನು ಅತ್ಯಂತ ಮಹಾಮಾಯನಾಗಿದ್ದರೂ ಕೂಡ, ಅಂತರಂಗದಲ್ಲಿ ಚಿದಾಕಾಶದೊಡನೆ ಐಕ್ಯವನ್ನು ಪಡೆದು ಆವಿರ್ಭವಿಸಿದವನಾಗಿ, ಈ ಸಂಸಾರವೆಂಬ ಮಾಯಾಜಾಲವದ್ನು ಆತ್ಯಂತಿಕವಾಗಿ ಪರಿತ್ಯಾಗ ಮಾಡಿ ಮುಕ್ತನಾದನು.

೧೦. ಕುಶಲನೆಂಬ ಮತ್ತೊಬ್ಬ ರಾಕ್ಷಸರಾಜನು ಸದಾ ಅಸಂಸಕ್ತಚಿತ್ತನಾಗಿದ್ದುಕೊಂಡೇ, ಹರಿಯೊಡನೆ ರಾಕ್ಷಸಸ್ವಭಾವೋಚಿತವಾದ ಮಾಯಾಯುದ್ಧಗಳನ್ನು ಮಾಡಿದವನಾದರೂ ಕೂಡ, ಪರಾತ್ಪರವಾದ ಚಿದ್ರೂಪವನ್ನು ಸ್ವಾತ್ಮಭಾವದಿಂದ ಸಾಕ್ಷಾತ್ಕರಿಸಿ ಈ ಸಂಸಾರಬಂಧದಿಂದ ವಿಮುಕ್ತನಾದನು.

೧೧. ಸಮಸ್ತ ದೇವತೆಗಳಿಗೂ ಮುಖವಾಗಿರುವ ಈ ಅಗ್ನಿದೇವನು, ನಿತ್ಯನೈಮಿತ್ತಿಕ ಕಾಮ್ಯಗಳೆಂಬ ಭೇದಗಳಿಂದ ವಿವಿಧಗಳಾಗಿರುವ ಸಕಲ ಶ್ರೌತಸ್ಮಾರ್ತ ಕರ್ಮಜಾಲಗಳಲ್ಲಿ ನಿತ್ಯವೂ ತತ್ಪರನಾಗಿದ್ದರೂ ಮತ್ತು ಸರ್ವಕಾಲಗಳಲ್ಲಿಯೂ ಅಪರಿಮಿತವಾದ ಯಜ್ಞಭಾಗಗಳನ್ನು ಸಮೃದ್ಧಿಯಾಗಿ ಅನಾದಿಕಾಲದಿಂದ ಅನುಭೋಗಿಸುತ್ತಿದ್ದರೂ ಕೂಡ, ಅಂತಸ್ಸಂಗರಹಿತನಾಗಿರುವ ಕಾರಣ, ನಿತ್ಯಮುಕ್ತನಾಗಿಯೇ ಲೋಕದಲ್ಲಿ ವಿಹರಿಸುತ್ತಲಿರುವನು.

೧೨. (ಕೃಷ್ಣಪಕ್ಷದಲ್ಲಿ ಪಾಡ್ಯದ ಮೊದಲು, ದಿನಕ್ರಮೇಣ ಒಂದೊಂದನ್ನಾಗಿ, ದೇವತೆಗಳು ಚಂದ್ರನ ಕಲೆಗಳನ್ನು ನುಂಗುವರು. ಪುನಃ ಶುಕ್ಲಪಕ್ಷದಲ್ಲಿ ಚಂದ್ರನು ದಿನಕ್ರಮವಾಗಿ ಒಂದೊಂದು ಕಲೆಯನ್ನಾಗಿ ತೆಗೆದುಕೊಂಡು ಅಭಿವೃದ್ಧಿ ಪಡೆದು ಹುಣ್ಣಿಮೆ ದಿನದಲ್ಲಿ ಷೋಡಶಕಲಾ ಪರಿಪೂರ್ಣನಾಗಿ ವಿರಾಜಿಸುವನು.

ಬೃಹಸ್ಪತಿ ರ್ದೇವಗುರುರ್ದಾರಾರ್ಥಂ ಚಂದ್ರಯೋಧ್ಯಪಿ ।
ಆಚರನ್ವಿವಿ ಚಿತ್ರೇಹಾಂ ಮುಕ್ತ ಏವ ಹ್ಯವಸ್ಥಿತಃ ॥ ೧೩ ॥

ಶುಕ್ರೋಂಬರತಲದ್ಯೋತೀ ಬುಧಃ ಸರ್ವಾರ್ಥಪಾಲಕಃ ।
ನಿರ್ವಿಕಾರಮತಿಃ ಕಾಲಂ ನಯತ್ಯಸುರದೇಶಿಕಃ ॥ ೧೪ ॥

ಎಂಬ ಪ್ರಸಿದ್ಧಿಯನ್ನು ಅನುಸರಿಸಿ ಹೇಳಿರುವ ಮಾತು ಇದು.) ಚಂದ್ರನು ಸರ್ವದಾ ಪ್ರತಿಯೊಂದು ಕೃಷ್ಣಪಕ್ಷದಲ್ಲಿಯೂ ಪದೇಪದೇ ದೇವತೆಗಳಿಂದ ಪಾನ ಮಾಡಲ್ಪಡುತ್ತಿರುವವನಾದ ಕಾರಣ ಕಲಾಹೀನನಾಗಿ, ಅತ್ಯಂತ ಕೃಶನಾಗಿ ಸರ್ವಸ್ವವನ್ನೂ ಕಳೆದುಕೊಂಡು, ಅಪಾರವಾದ ವಿಪತ್ತಿನಲ್ಲಿ ಸಿಕ್ಕಿಕೊಳ್ಳುತ್ತಿದ್ದರೂ (ಮನಸ್ಸಿನಲ್ಲಿ ನೊಂದುಕೊಂಡು ಕೊರಗದೆಯೂ, ಅಭಿವೃದ್ಧಿ ಪಡೆದಾಗ ಸಂತೋಷಪಡದೆಯೂ) ಸಂಪತ್ಕಾಲದಲ್ಲಿಯೂ ವಿಪತ್ಕಾಲದಲ್ಲಿಯೂ ಏಕರೀತಿಯಾದ ಚಿತ್ತವೃತ್ತಿಯುಳ್ಳವನಾಗಿರುತ್ತಾ, ಪಾದಗಳಿಂದ ತುಳಿದರೂ (ಒದ್ದರೂ) ಆಕಾಶವು ವಿಕಾರಗೊಳ್ಳದೆ ನಿರ್ಲಿಪ್ತವಾಗಿರುವಂತೆ, ಆ ಚಂದ್ರನು ತನ್ನೊಳಗೆ ಪುನರುಜ್ಜೀವನಶಕ್ತವಾದ ಪರಬ್ರಹ್ಮವೆಂಬ ನಿರತಿಶಯಾಮೃತರಸದಿಂದ ಪರಿಪೂರ್ಣನಾಗಿರುವ ಕಾರಣ, ಯಾವೊಂದು ಸಂಧರ್ಭದಲ್ಲಿಯೂ ಸುಖದುಃಖಾದಿ ವಿಕಾರಗಳಿಂದ ಸಂಪರ್ಕವನ್ನು ಪಡೆಯದೆ ನಿರ್ಲಿಪ್ತನಾಗಿ ಅತ್ಯುಚ್ಚಪದವಿಶ್ರಾಂತನಾಗಿ ಮೆರೆಯುತ್ತಿರುವನು.

[ನಿರ್ದೋಷಂಹಿ ಸಮಂಬ್ರಹ್ಮ ಎಂಬ ಶ್ರುತಿಗೆ ಅನುಸಾರವಾಗಿ ಸಮಂ= ಎಂದರೆ ಬ್ರಹ್ಮವೆಂದರ್ಥ]

೧೩. ಸುರಾಚಾರ್ಯನಾದ ಬೃಹಸ್ಪತಿಯು, ತನ್ನ ಪತ್ನಿಯನ್ನು ಅಪಹರಿಸಿದವನಾದ ಚಂದ್ರನೊಡನೆ ಸರ್ವದಾ ಯುದ್ಧಮಾಡುವವನಾಗಿದ್ದರೂ, (ದ್ವೇಷಿಯಾಗಿದ್ದರೂ) ತನ್ನ ಪತ್ನಿಯ ಸಲುವಾಗಿಯೇ ಅತ್ಯಂತ ವಿಗರ್ಹಿತವಾದ ದೇವಪೌರೋಹಿತ್ಯಾಧಿಕಾರರೂಪ ವಿಚಿತ್ರ ವ್ಯವಹಾರದಲ್ಲಿ ನಿರತನಾಗಿದ್ದರೂ ಕೂಡ, ವಾಸ್ತವವಾಗಿ ನಿತ್ಯಮುಕ್ತನಾಗಿಯೇ ಇದ್ದುಕೊಂಡಿರುವನು.

೧೪. ಗಗನಮಂಡಲವನ್ನೆಲ್ಲಾ ತನ್ನ ತೇಜಸ್ಸಿನಿಂದ ಬೆಳಗಿಸುವ ಮಹಾವಿದ್ವಾಂಸನಾದ ಶುಕ್ರಾಚಾರ್ಯನು ತನ್ನ ವೈದುಷ್ಯದಿಂದ ನೀತಿ ಶಾಸ್ತ್ರವನ್ನು ವಿರಚಿಸಿ ಅಭಿಮತಗಳಾದ ಸಕಲ ವಿಧ ಅರ್ಥಗಳನ್ನು ಪಾಲಿಸುತ್ತಿರುವವನಾಗಿಯೂ,

ಜಗದ್ಭೂತಗಣಾಂಗಾನಿ ಚಿರಂ ಸಂಚಾರಯನ್ನಪಿ ।
ಸರ್ವದಾ ಸರ್ವ ಸಂಚಾರೀ ಮುಕ್ತ ಏವ ಸಮೀರಣಃ ॥ ೧೫ ॥

ಲೋಕಾಜವಂ ಜೀವಭಾವ ಪ್ರೋದ್ವೇಗಜ್ಞೋಽಪ್ಯಖಿನ್ನಧೀಃ ।
ಬ್ರಹ್ಮಾ ಸಮಮನಾ ರಾಮ ಕ್ಷಪಯತ್ಯಾಯುರಾತತಂ ॥ ೧೬ ॥

ಜರಾಮರಣ ಯುದ್ಧಾದಿ ದ್ವಂದ್ವಸಂಗರಲೀಲಯಾ ।
ಚರತೀಹ ಚಿರಂ ಕಾಲಂ ಮುಕ್ತೋಽಪಿ ಭಗವಾನ್ಹರಿಃ ॥ ೧೭ ॥

ರಾಕ್ಷಸರ ಗುರುವಾಗಿದ್ದುಕೊಂಡು ಅವರ ಪೌರೋಹಿತ್ಯವನ್ನು ನಡೆಯಿಸುತ್ತಿರುವವನಾಗಿಯೂ ಇದ್ದರೂ ಕೂಡ ರಾಗದ್ವೇಷಗಳಿಗೆ ಅಧೀನನಾಗದೆ ನಿರ್ವಿಕಾರವಾದ ಚಿತ್ತವೃತ್ತಿಯುಳ್ಳವನಾಗಿ ಪ್ರಾರಬ್ಧ ಕ್ಷಯವನ್ನು ನಿರೀಕ್ಷಿಸುತ್ತಾ ಕಾಲವನ್ನು ತಳ್ಳುತ್ತಿರುವನು.

೧೫. ಸರ್ವ ಕಾಲಗಳಲ್ಲಿಯೂ ಅವಿಶ್ರಾಂತವಾಗಿ ಸರ್ವಸ್ಥಳಗಳಲ್ಲಿಯೂ ಸಂಚರಿಸುವ ಸ್ವಭಾವವುಳ್ಳವನಾದರೂ (ಅತಿಚಪಲನಾದ) ವಾಯುವು ಊರ್ಧ್ವ ಲೋಕಗಳನ್ನೂ ಪ್ರಾಣಿ ಸಮುದಾಯಗಳ ಅಂಗಗಳನ್ನೂ ಒಂದೇ ಸಮನಾಗಿ ಚಿರಕಾಲ ಸಂಚಾರಮಾಡಿಸುವವನಾಗಿದ್ದರೂ, ತಾನು ಮುಕ್ತನಾಗಿಯೇ ವ್ಯವಹರಿಸಿಕೊಂಡಿರುವನು.

೧೬. ಅಯ್ಯ ರಾಮ, ಚತುರ್ಮುಖಬ್ರಹ್ಮನು ಪ್ರಾಣಿಗಳು ಕರ್ಮವಶರಾಗಿ ಮುಂದೆ ಮುಂದೆ ನುಗ್ಗುವುದನ್ನೂ, ಊರ್ಧ್ವಲೋಕಗಳಲ್ಲಿಯೂ ಮಧ್ಯಲೋಕಗಳಲ್ಲಿಯೂ ಅವರವರ ಕರ್ಮಾನುಗುಣವಾಗಿ ಸಂಚರಿಸುವುದರಿಂದ ಉಂಟಾಗುವ ಪರಿವರ್ತನಗಳನ್ನೂ ಅವುಗಳಿಂದ ಪ್ರಾಣಿಗಳು ಅನುಭವಿಸುವ ಭಯ ಭ್ರಾಂತಿಗಳನ್ನೂ ಸ್ಪಷ್ಟವಾಗಿ ತಿಳಿದಿರುವವನಾಗಿದ್ದರೂ ತಾನು ಮಾತ್ರ ಅವುಗಳಿಂದ ಮನಸ್ಸಿನಲ್ಲಿ ಸ್ವಲ್ಪವೂ ಖೇದಗೊಳ್ಳದೆಯೇ, ಸದಾ ಸರ್ವತ್ರ ಸಮವಾದ (ವೈಷಮ್ಯರಹಿತವಾದ) ಮನಸ್ಸುಳ್ಳವನಾಗಿ ಎರಡು ಪರಾರ್ಧಗಳ ಪರಿಮಿತಿಯುಳ್ಳ ಅತಿ ದೀರ್ಘವಾದ ತನ್ನ ಆಯುಸ್ಸನ್ನು ಕಳೆಯುವನು.

೧೭. ಭಗವಂತನಾದ ಹರಿಯು ನಿತ್ಯಮುಕ್ತನಾಗಿದ್ದರೂ ವಾರ್ಧಕ್ಯ, ಮರಣ, ಯುದ್ಧ, ದ್ವಂದ್ವಯುದ್ಧ ಮುಂತಾದ ನಾನಾ ಲೀಲೆಗಳನ್ನು

ಮುಕ್ತೇನಾಪಿ ತ್ರಿನೇತ್ರೇಣ ಸೌಂದರ್ಯತರುಮಂಜರೀ ।
ದೇಹಾರ್ಧೇ ಧಾರ್ಯತೇ ಗೌರೀ ಕಾಮುಕೇನೇವ ಕಾಮಿನೀ ॥ ೧೮ ॥

ಮುಕ್ತಯಾಪಿ ಗಲೇ ಬದ್ಧೋ ಗೌರ್ಯಾ ಗೌರಸ್ತ್ರಿಲೋಚನಃ ।
ಸಂಶುದ್ಧ ಇವ ಮುಕ್ತಾನಾಂ ಹಾರಃ ಶಶಿಕಲಾಮಲಃ ॥ ೧೯ ॥

ಗುಹೋ ಗಹನಧೀರ್ವೀರಸ್ತಾರಕಾದಿರಣಕ್ರಿಯಾಂ ।
ಮುಕ್ತೋಽಪಿ ಕೃತವಾನ್ಸರ್ವಾಂ ಜ್ಞಾನರತ್ನೈಕ ಸಾಗರಃ ॥ ೨೦ ॥

ತೋರುತ್ತಾ ಈ ಲೋಕದಲ್ಲಿ ಚಿರಕಾಲ ಸಂಚರಿಸುತ್ತಿರುವನು. (ಅವತಾರಗಳನ್ನು ಎತ್ತಿ ತಿರುಗುವನು.)

೧೮. ನಿತ್ಯ ಶುದ್ಧ ಮುಕ್ತನಾದ ಸಾಕ್ಷಾತ್ ತ್ರಿಲೋಚನನು ಕೂಡ ಸೌಂದರ್ಯವೆಂಬ ವೃಕ್ಷವನ್ನು ಆಶ್ರಯಿಸಿಕೊಂಡಿರುವ ಲತೆಯೋ ಎಂಬಂತಿರುವ ಗೌರೀದೇವಿಯನ್ನು-ಕಾಮುಕನು ಕಾಮಿನಿಯನ್ನು ಧರಿಸಿಕೊಂಡಿರುವಂತೆ ಸರ್ವದಾ ತನ್ನ ವಾಮಾರ್ಧ ದೇಹದಲ್ಲಿ ಧರಿಸಿಕೊಂಡಿರುವನು.

(ತ್ರಿಲೋಚನಃ ಎಂಬುದು ಸಾಭಿಪ್ರಾಯ ವಿಶೇಷಣ. ಇದರಿಂದ ಮನ್ಮಥ ನನ್ನು ಮೂರನೆಯ ಕಣ್ಣಿನಿಂದ ಸುಟ್ಟು ಬೂದಿ ಮಾಡಿದಂಥ ಮಹಾ ವೈರಾಗ್ಯ ಸಂಪನ್ನನಾದ ಅವಿಕಾರಚಿತ್ತನು ಎಂಬ ಅರ್ಥವು ಸೂಚಿತವಾಗುವುದು. ಇಂತಹ ವಿರಕ್ತನಾಗಿದ್ದರೂ ತನ್ನ ಹೆಂಡತಿಗೆ ಅರ್ಧ ದೇಹವನ್ನೇ ಕೊಟ್ಟು ಧರಿಸಿಕೊಂಡಿರುವನು. ಎಂದು ತಾತ್ಪರ್ಯ.)

೧೯. ಇದರಂತೆಯೇ ಗೌರೀದೇವಿಯೂ ಕೂಡ ನಿತ್ಯಮುಕ್ತಳಾಗಿದ್ದರೂ ಚಂದ್ರನ ಕಲೆಯಂತೆ ನಿರ್ಮಲವಾಗಿ ಅತಿ ಶುಭ್ರವಾಗಿರುವ ಮುಕ್ತಾಹಾರವನ್ನು ಧರಿಸುವ ರೀತಿಯಲ್ಲಿ ಶುದ್ಧ ಸ್ಫಟಿಕಸಂಕಾಶನಾದ ನಿತ್ಯಶುದ್ಧನಾದ ಮುಕ್ಕಣ್ಣನಾದ ಪರಮೇಶ್ವರನನ್ನು ಯಾವಾಗಲೂ ತನ್ನ ಕಂಠದಲ್ಲಿಯೇ ಕಟ್ಟಿಕೊಂಡಿರುವಳು.

೨೦. ಲೋಕೋತ್ತರ (ಅತಿ ವಿಚಿತ್ರ)ವಾದ ಮಹಾ ಗಂಭೀರಹೃದಯುನಾಗಿಯೂ, ವೀರಾಗ್ರಣಿಯಾಗಿಯೂ ಪರತತ್ತ್ವ ಜ್ಞಾನವೆಂಬ ದಿವ್ಯವಾದ ಕೌಸ್ತುಭ

ಭೃಂಗೀಶೋ ರಕ್ತಮಾಂಸಂ ಸ್ವಂ ಸ್ವಮಾತ್ರೇ ಪ್ರವಿತೀರ್ಣವಾನ್ ।
ಮುಕ್ತಯೈವ ಧಿಯಾ ರಾಮ ಧೀರಯಾ ಧ್ಯಾನಧೌತಯಾ ॥ ೨೧ ॥

ಮಣಿಗೆ ಆಕರವಾದ ಸಮುದ್ರಪ್ರಾಯನಾಗಿಯೂ ಇರುವ ಷಣ್ಮುಖ ಸ್ವಾಮಿಯೂ ನಿತ್ಯಮುಕ್ತನಾಗಿದ್ದರೂ, ತಾರಕಾಸುರನೇ ಮೊದಲಾದ ರಾಕ್ಷಸರೊಂದಿಗೆ ಯುದ್ಧ ಮಾಡುವಿಕೆ ಮುಂತಾದ ಸರ್ವ ವ್ಯವಹಾರಗಳನ್ನು ನಡೆಸಿದನು.

[ಮೂಲದಲ್ಲಿ " ಸರ್ವಂ " ಎಂಬುದನ್ನು " ಸರ್ವಾಂ " ಎಂದು ತಿದ್ದಿ ಕೊಳ್ಳಬೇಕು.]

೨೧. ಅಯ್ಯ ರಾಮ, ಪರಮೇಶ್ವರನ ಪ್ರಮಥ ಗಣಗಳಲ್ಲಿ ಪ್ರಮುಖನಾದ ಭೃಂಗೀಶ್ವರನು ಮುಕ್ತವಾಗಿಯೂ ಅವಿಕೃತ (ಧೀರ)ವಾಗಿಯೂ, ಅವಿಚ್ಛಿನ್ನವಾದ ಪರಮೇಶ್ವರ ಧ್ಯಾನದಿಂದ ಅತ್ಯಂತ ನಿರ್ಮಲವಾಗಿಯೂ ಇರುವ ತನ್ನ ಮನಸ್ಸಿನಿಂದ ತಾಯಿಯಾದ ಪಾರ್ವತೀದೇವಿಗೆ ತನ್ನ ದೇಹದಿಂದ ರಕ್ತಮಾಂಸಗಳನ್ನು ಸಂತೋಷದಿಂದ ಕತ್ತರಿಸಿ ಅರ್ಪಣೆ ಮಾಡಿ ಕೃತಾರ್ಥನಾದನು.

[ಭೃಂಗೀಶ್ವರನು ಪರಮೇಶ್ವರನ ಸೇವಕರಾದ ಪ್ರಮಥ ಗಣಗಳಲ್ಲಿ ಪ್ರಮುಖನಾದವನು. ಪಾರ್ವತೀ ಪರಮೇಶ್ವರರ ಪುತ್ರನಾಗಿಯೂ ಇದ್ದನು. ಅವನು ಮೊದಲು ಪಾರ್ವತೀ ದೇವಿಯನ್ನು ಅನಾದರಿಸಿ ಪರಮೇಶ್ವರನ ಆರಾಧನವಲ್ಲಿ ಮಾತ್ರವೇ ನಿರತನಾಗಿದ್ದನು. ಅದು ಕಾರಣ ದೇವಿಗೆ ಕೋಪ ಬಂತು. ಕೂಡಲೆ ಆ ದೇವಿಯು "ಎಲಾ ಭೃಂಗೀಶ, ನಿನ್ನ ಈ ರಕ್ತ ಮಾಂಸಾಸ್ಥಿಮಯವಾದ ದೇಹಕ್ಕೆ ತಾಯಿ ತಂದೆಗಳಿಬ್ಬರೂ ಕಾರಣವಾಗಿರುವುದರಿಂದ ಅವರಿಬ್ಬರಿಗೂ ಅದರಲ್ಲಿ ಒಂದೇಸಮನಾದ ಹಕ್ಕು ಇರುವ ಕಾರಣ ಇಬ್ಬರಿಗೂ ಅರ್ಧ ಅರ್ಧ ಭಾಗ ಸಮವಾಗಿ ಸಲ್ಲಬೇಕಾದುದು ನ್ಯಾಯ. ಈಗ ನೀನು ನನ್ನ ಅರ್ಧ ಭಾಗವನ್ನು ನನಗೆ ಹಿಂದಕ್ಕೆ ಕೊಡು" ಎಂದು ಕೇಳಿದಳು. ಆಗ ಅವನು ಸಂತೋಷಪಟ್ಟು ಕೊಂಡು ತನ್ನ ತಾಯಿಯಾದ ಪಾರ್ವತೀ ದೇವಿಗೆ ತನ್ನ ಮಾಂಸ ರಕ್ತಗಳನ್ನು ದೇಹದಿಂದ ಕತ್ತರಿಸಿ ಕೊಟ್ಟು ಆ ದೇವಿಯ ಪರಮಾನುಗ್ರಹಕ್ಕೆ ಪಾತ್ರನಾದನು. ಎಂಬ ಪೌರಾಣಿಕ ಕಥೆಯನ್ನು ಇಲ್ಲಿ ಸ್ಮರಿಸಬೇಕು.]

ಮುನಿರ್ಮುಕ್ತ ಸ್ವಭಾವೋಽಪಿ ಜಗಜ್ಜಂಗಲಖಂಡಕಂ ।
ನಾರದೋ ವಿಜಹಾರೇಮಂ ಶೀತಯಾ ಕಾರ್ಯಶೀಲಯಾ ॥ ೨೨ ॥

ಜೀವನ್ಮುಕ್ತಮನಾ ಮಾನ್ಯೋ ವಿಶ್ವಾಮಿತ್ರೋಽಪ್ಯಯಂ ಪ್ರಭುಃ ।
ವೇದೋಕ್ತಾಂ ಮಖನಿರ್ಮಾಣಕ್ರಿಯಾಂ ಸಮಧಿತಿಷ್ಠತಿ ॥ ೨೩ ॥

ಧಾರಯತ್ಯವನೀಂ ಶೇಷಃ ಕರೋತ್ಯರ್ಕೋ ದಿನಾವಲೀಂ ।
ಯಮೋ ಯಮತ್ವಂ ಕುರುತೇ ಜೀವನ್ಮುಕ್ತತಯೈವ ಹಿ ॥ ೨೪ ॥

ಅನ್ಯೇಽಪ್ಯಸ್ಮಿನ್ ತ್ರಿಭುವನೇ ಯಕ್ಷಾಸುರನರಾಃ ಸುರಾಃ ।
ಶತಶೋ ಮುಕ್ತತಾಂ ಯಾತಾಃ ಸಂತಸ್ತಿಷ್ಠಂತಿ ಸಂಸೃತೌ ॥ ೨೫ ॥

---

೨೨. ದೇವರ್ಷಿಯಾದ ನಾರದನೂ ಕೂಡ ಮುಕ್ತ ಸ್ವಭಾವನಾಗಿದ್ದರೂ ಅತಿ ವಿಚಿತ್ರ ಕುತೂಹಲಜನಕಗಳಾದ ಮತ್ತು ಶಮ ಪ್ರಧಾನಗಳಾದ ಲೀಲಾ ವಿನೋದಗಳಿಂದ ಈ ನಾನಾ ಪ್ರಪಂಚಗಳೆಂಬ ವನಭೂಮಿಗಳಲ್ಲೆಲ್ಲ ನಿರಂತರವೂ ವಿಹರಿಸಿದನು.

೨೩. ಅಯ್ಯ ರಾಮ, ಸರ್ವಶಕ್ತನಾಗಿಯೂ, ಸರ್ವಪೂಜ್ಯನಾಗಿಯೂ, ಇರುವ ಈ ವಿಶ್ವಾಮಿತ್ರ ಮಹರ್ಷಿಯೂ ಜೀವನ್ಮುಕ್ತನಾಗಿದ್ದುಕೊಂಡು ಅಸಂಸಕ್ತ ಚಿತ್ತನಾಗಿದ್ದರೂ, ವೇದವಿಹಿತಗಳಾದ ಯಜ್ಞಕರ್ಮಗಳನ್ನು ಅನುಷ್ಠಾನಮಾಡುವ ವ್ಯಾಪಾರದಲ್ಲಿ ನಿರಂತರವೂ ವ್ಯಗ್ರನಾಗಿರುವನು.

೨೪. ಜೀವನ್ಮುಕ್ತ ಸ್ಥಿತಿಯಲ್ಲಿ ಸದಾ ಇರುವವರಾಗಿಯೇ, ಆದಿಶೇಷನು ಭೂಮಿಯನ್ನು ಹೊತ್ತಿರುವನು. ಸೂರ್ಯನು ಗಗನದಲ್ಲಿ ಸಂಚರಿಸುತ್ತಾ ದಿವಸಗಳ ಸಮೂಹಗಳನ್ನು ಕ್ರಮೇಣ, ಉಂಟುಮಾಡುತ್ತಿರುವನು. (ನಿಮಿಷ, ಘಂಟೆ, ಅಹೋರಾತ್ರಿಗಳು, ಪಕ್ಷ ಮಾಸ, ವರ್ಷ, ಯುಗ, ಇತ್ಯಾದಿ ಕಾಲಬೇದ ಗಳನ್ನು ಅಳೆಯುತ್ತಿರುವನು.) ಮತ್ತು ಯಮನು, ತನ್ನ ಕರ್ತವ್ಯವಾದ ದಂಡ ನವನ್ನು (ಪಾಪಿಗಳನ್ನು ಶಿಕ್ಷಿಸುವಿಕೆ) ಪಾಲಿಸುತ್ತಿರುವನು ಇವರೆಲ್ಲರೂ ಜೀವನ್ಮುಕ್ತರೇ.

೨೫. ಇವರಂತೆಯೇ, ಈ ಮೂರುಲೋಕದಲ್ಲಿರತಕ್ಕ ಯಕ್ಷ, ರಾಕ್ಷಸ, ನರ, ಸುರ ಮುಂತಾದ, ಜೀವನ್ಮುಕ್ತಿಯನ್ನು ಪಡೆದವರಾದ ಇನ್ನೂ ಇತರ ಅಸಂಖ್ಯಾಕ

ಸಂಸ್ಥಿತಾ ವ್ಯವಹಾರೇಷು ವಿಚಿತ್ರಾಚಾರಧಾರಿಷು ।
ಅಂತರಾಶೀತಲಾಃ ಕೇಚಿತ್ಕೇಚಿನ್ಮೂಢಾಃ ಶಿಲಾಸಮಾಃ ॥ ೨೬ ॥

ಪರಮಂ ಬೋಧಮಾಸಾದ್ಯ ಕೇಚಿತ್ಕಾನನಮಾಗತಾಃ ।
ಯಥಾ ಭೃಗು ಭರದ್ವಾಜ ವಿಶ್ವಾಮಿತ್ರ ಶುಕಾದಯಃ ॥ ೨೭ ॥

ಕೇಚಿದ್ರಾಜ್ಯೇಷು ತಿಷ್ಠಂತಿ ಛತ್ರಚಾಮರಪಾಲಿತಾಃ ।
ಯಥಾ ಜನಕ ಶರ್ಯಾತಿ ಮಾಂಧಾತೃ ಸಗರಾದಯಃ ॥ ೨೮ ॥

ಮಹಾತ್ಮರು, ಈ ಸಂಸಾರದಲ್ಲಿದ್ದುಕೊಂಡಿದ್ದರೂ ಜ್ಞಾನನಿಷ್ಠರಾಗಿಯೇ ವಿಹರಿಸುತ್ತಿರುವರು.

೨೬. ಅತ್ಯಂತ ವಿಚಿತ್ರಗಳಾದ ಶೋಕಮೋಹಾದ್ಯನರ್ಥ ಪರಂಪರೆಗಳಿಗೆ ನಿದಾನಗಳಾದ ಪತ್ನೀಪುತ್ರಧನಾದಿ ನಾನಾ ಭೋಗ ಸಾಮಗ್ರಿಗಳನ್ನು ಸಂಪಾದಿಸುತ್ತಲೂ ಯುದ್ಧಾದಿಗಳನ್ನು ಮಾಡುತ್ತಲೂ, ರಾಜ್ಯ ಪರಿಪಾಲನಾದಿ ನಾನಾ ವ್ಯವಹಾರಗಳಲ್ಲಿ ನಿರತರಾಗಿದ್ದರೂ ಕೂಡ ಕೆಲವರು ಮಹಾತ್ಮರು, ಮನಸ್ಸಿನೊಳಗೆ ಯಾವದೊಂದು ಸಂತಾಪವೂ ಇಲ್ಲದೆ ಪರಮ ಪ್ರಶಾಂತರಾಗಿಯೂ ಮುಕ್ತರಾಗಿರುವರು. ಇನ್ನೂ ಕೆಲವರು ಶಿಲಾಸದೃಶರಾಗಿ (ಜ್ಞಾನಲೇಶವೂ ಇಲ್ಲದೆ) ಅತ್ಯಂತ ಮೂಢರಾಗಿರುವರು. (ಕರ್ತೃತ್ವ ಭೋಕ್ತೃತ್ವಗಳನ್ನು ಆರೋಪಿಸಿಕೊಂಡು, ಸರ್ವತ್ರ ಮೋಹಿತರಾಗಿರುವರು.)

೨೭, ಮತ್ತೆ ಕೆಲವರು ದಿವ್ಯವಾದ ಆತ್ಮತತ್ತ್ವ ಜ್ಞಾನವನ್ನು ಪಡೆದು, ಪುನಃ ಚಿತ್ತವಿಕ್ಷೇಪವುಂಟಾಗದಿರುವುದಕ್ಕಾಗಿ. ಭೃಗು, ಭರದ್ವಾಜ, ವಿಶ್ವಾಮಿತ್ರ, ಶುಕ ಮುಂತಾದ ಮಹನೀಯರಂತೆ ವಿಜನವಾದ ಅರಣ್ಯಗಳನ್ನು ಸೇರಿ ಪ್ರಶಾಂತರಾಗಿರುವರು.

೨೮. ಇನ್ನೂ ಕೆಲವರು ಜನಕ, ಶರ್ಯಾತಿ, ಮಾಂಧಾತೃ ಸಗರ ಮುಂತಾದ ಚಕ್ರವರ್ತಿಗಳಂತೆ ಛತ್ರ ಚಾಮರಾದಿ ಲಾಂಛನಗಳಿಂದ ವಿಭೂಷಿತರಾಗಿ ರಾಜೋಚಿತವಾದ ಪ್ರಜಾ ಪಾಲನಾದಿ ವ್ಯವಹಾರಗಳಲ್ಲಿ ನಿರತರಾಗಿ ರಾಜ್ಯಗಳಲ್ಲಿ ಇದ್ದರೂ ಅನಿರ್ವಿಣ್ಣರಾಗಿಯೇ ಇರುವರು.

ಕೇಚಿದ್ವ್ಯೋಮನಿ ತಿಷ್ಠಂತಿ ಧಿಷ್ಣ್ಯಚಕ್ರಾಂತರಸ್ಥಿತಾಃ ।
ಯಥಾ ಬೃಹಸ್ಪತ್ಯುಶನಶ್ಚಂದ್ರ ಸೂರ್ಯ ಮುನೀಶ್ವರಾಃ ॥ ೨೯ ॥

ಕೇಚಿತ್ಸುರಪದೇ ಯಾತಾ ವಿಮಾನಾವಲಿ ಮಾಸ್ಥಿತಾಃ ।
ಯಥಾಗ್ನಿ ವಾಯು ವರುಣ ಯಮ ತುಂಬುರು ನಾರದಾಃ ॥ ೩೦ ॥

ಕೇಚಿತ್ಪಾತಾಲಕುಹರೇ ಜೀವನ್ಮುಕ್ತಾ ವ್ಯವಸ್ಥಿತಾಃ ।
ಯಥಾ ಬಲಿಸುಹೋತ್ರಾಂಧ ಪ್ರಹ್ಲಾದಾಹ್ಲಾದ ಪೂರ್ವಕಾಃ ॥ ೩೧ ॥

ತಿರ್ಯಗ್ಯೋನಿಷ್ವಪಿ ಸದಾ ವಿದ್ಯಂತೇ ಕೃತಬದ್ಧಯಃ ।
ದೇವಯೋನಿಷ್ವಪಿ ಪ್ರಾಜ್ಞಾ ವಿದ್ಯಂತೇ ಮೂರ್ಖ ಬುದ್ಧಯಃ ॥ ೩೨ ॥

---

೨೯. ಬೃಹಸ್ಪತಿ, ಶುಕ್ರ, ಚಂದ್ರ, ಸೂರ್ಯ ಅರುಂಧತೀ ದೇವೀಸಹಿತರಾದ ಸಪ್ತರ್ಷಿಗಳು ಮುಂತಾದವರಂತೆ ಕೆಲವರು ಗ್ರಹನಕ್ಷತ್ರಾದಿಗಳಿಗೆ ಆಧಾರಭೂತವಾದ ಜ್ಯೋತಿಶ್ಚಕ್ರದ ಮಧ್ಯವರ್ತಿಗಳಾಗಿ ಗಗನ ಮಂಡಲದಲ್ಲಿರುವರು.

೩೦. ಮತ್ತು, ಅಗ್ನಿ ವಾಯು ವರುಣ, ಯಮಾದಿ ದೇವತೆಗಳೂ ತುಂಬುರು ನಾರದಾದಿ ದೇವಮುನಿಗಳೂ ಮುಂತಾದವರಂತೆ ಕೆಲವರು ದೇವಲೋಕದಲ್ಲಿದ್ದುಕೊಂಡು ದಿವ್ಯವಾದ ವಿಮಾನಗಳಲ್ಲಿ ಸಂಚರಿಸುತ್ತಿರುವರು.

೩೧. ಬಲಿ ಸುಹೋತ್ರ, ಅಂಧ, ಪ್ರಹ್ಲಾದ ಆಹ್ಲಾದ, ಮುಂತಾದ ಇನ್ನೂ ಕೆಲವರು ಜೀವನ್ಮುಕ್ತರು ಪಾತಾಳಲೋಕದ ಪ್ರದೇಶಗಳಲ್ಲಿ ವಿಹರಿಸುತ್ತಲಿರುವರು.

೩೨. ಗರುತ್ಮಂತ, ಹನುಮಂತ ಜಾಂಬವಂತ ಮುಂತಾದ ಕೆಲವರು ತಿರ್ಯಗ್ಯೋನಿಗಳಲ್ಲಿ ಜನ್ಮವನ್ನು ಪಡೆದಿರುವವರಾದರೂ ಸರ್ವದಾ ಆತ್ಮತತ್ತ್ವಜ್ಞರಾಗಿಯೇ ವಿಹರಿಸಿಕೊಂಡಿರುವರು ಅಯ್ಯ ಪ್ರಾಜ್ಞನೇ ದೇವಯೋನಿಗಳಲ್ಲಿಯೂ ಕೂಡ ಕೆಲವರು ಮೂರ್ಖ ಬುದ್ಧಿಗಳಾಗಿರುವರು.

[ಮೂಲದಲ್ಲಿ ಪ್ರಾಜ್ಞಾಃ ಎಂದಿರುವುದನ್ನು ಪ್ರಾಜ್ಞ ಎಂದು ತಿದ್ದಿಕೊಳ್ಳಬೇಕು. ಅಥವಾ ಪ್ರಾಜ್ಞಾಃ ಪ್ರ+ಅಜ್ಞಾಃ= ಹೆಚ್ಚಾದ ಅಜ್ಞಾನಿಗಳು. ಸ್ವಲ್ಪವೂ ಆತ್ಮಜ್ಞಾನವಿಲ್ಲದ ಮೂರ್ಖರು ಎಂದರ್ಥ ಮಾಡಬೇಕು.]

ಸರ್ವಂ ಸರ್ವೇಣ ಸರ್ವತ್ರ ಸರ್ವಥಾ ಸರ್ವದೈವ ಹಿ ।
ಸಂಭವತ್ಯೇವ ಸರ್ವಾತ್ಮನ್ಯಾತ್ಮನ್ಯಾತತರೂಪಿಣಿ ॥ ೩೩ ॥

ವಿಧೇರ್ವಿಚಿತ್ರಾ ನಿಯತಿರನಂತಾರಂಭ ಮಂಥರಾ ।
ಸಂನಿವೇಶಾಂಶ ವೈಚಿತ್ರ್ಯಾತ್ಸರ್ವಂ ಸರ್ವತ್ರ ದೃಶ್ಯತೇ ॥ ೩೪ ॥

ವಿಧಿರ್ದೈವಂ ವಿಧಿರ್ಧಾತಾ ಸರ್ವೇಶಃ ಶಿವ ಈಶ್ವರಃ ।
ಇತಿ ನಾಮಭಿರಾತ್ಮಾನಃ ಪ್ರತ್ಯಕ್ಚೇತನ ಉಚ್ಯತೇ ॥ ೩೫ ॥

ಅಸ್ತ್ಯವಸ್ತುನಿ ವಸ್ತ್ವಂತಃ ಕಾಂಚನಂ ಸಿಕತಾಸ್ವಿವ ।
ಅಸ್ತಿ ವಸ್ತುನ್ಯವಸ್ತ್ವಂತರ್ಮಲಂ ಹೇಮಕಣೇಷ್ವಿವ ॥ ೩೬ ॥

---

೩೩. ಸರ್ವಕ್ಕೂ ಆತ್ಮನಾಗಿರುವ ಸರ್ವವ್ಯಾಪಿಯಾಗಿ ಅಪರಿಚ್ಛಿನ್ನನಾಗಿರುವ ಆತ್ಮನಲ್ಲಿ ಸರ್ವಭಾವದಿಂದಲೂ, ಸರ್ವ ಸ್ಥಳಗಳಲ್ಲಿಯೂ, ಸರ್ವ ಪ್ರಕಾರ ದಿಂದಲೂ, ಸರ್ವ ಕಾಲಗಳಲ್ಲಿಯೂ, ಸರ್ವವೂ ಅತ್ಯವಶ್ಯವಾಗಿ ಸಂಭವಿಸು ವುದು. (ಆದುದರಿಂದ ದೇವಯೋಸಿಗಳಲ್ಲಿಯೂ ಮೂರ್ಖರಿರುವರೆಂಬುದು ಯುಕ್ತವೇ ಸರಿ.)

೩೪. ದೈವದ ನಿಯತಿಯು ಅತ್ಯಂತ ವಿಚಿತ್ರವಾದುದು. ಅದರ ಗತಿಯು ಅಪರಿಮಿತವಾದ ಕಾರ್ಯಗಳಿಂದ ಕುಂಠಿತವಾಗಿರುವುದು. ಅದರ ನಾನಾ ಸನ್ನಿ ವೇಶಗಳ ವೈಚಿತ್ರ್ಯ ವಶದಿಂದ ಸರ್ವವೂ ಸರ್ವತ್ರ ಸಂಭವಿಸಿ ದೃಷ್ಟಿಗೆ ಗೋಚರಿ ಸುವುದು. (ಅಸಂಭವವೆಂಬುದೇ ಇಲ್ಲವು.)

೩೫. ನಮ್ಮೆಲ್ಲರ ಆತ್ಮನಾಗಿಯೂ ಚೇತನನಾಗಿಯೂ ಇರುವ ಪ್ರತ್ಯಕ್ ಸ್ವರೂಪವೇ ವಿಧಿ (ಬ್ರಹ್ಮ) ದೈವ, ವಿಧಿ (ವಿಷ್ಣು) ಧಾತೃ. ಸರ್ವೇಶ್ವರ, ಶಿವ, ಈಶ್ವರ ಇತ್ಯಾದಿ ನಾನಾ ನಾಮಗಳಿಂದ ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವುದು.

೩೬. ಮರಳೊಳಗೆ ಸುವರ್ಣವಿರುವಂತೆ ಅವಸ್ತುವಿನಲ್ಲಿ (ಕೇವಲ ನಿಸ್ಸಾರವಾದ ವಸ್ತುವಿನೊಳಗೆ, ಒಂದು ಸಾರವಾದ ವಸ್ತುವು ಇರುವುದು. ಹಾಗೆಯೇ ಸುವರ್ಣದ ಸಣ್ಣ ಸಣ್ಣ ಚೂರುಗಳೊಳಗೆ ಕಶ್ಮಲವಿರುವಂತೆ ಸಾರವತ್ತರವಾದ ವಸ್ತುವಿನೊಳಗೆ ನಿಸ್ಸಾರವಾದುದೂ ಇರುವುದುಂಟು. (ಹೀಗೆ ಅತ್ಯಂತ ಅಸಂ

ಅಯುಕ್ತೇ ಯುಕ್ತತಾ ಯುಕ್ತ್ಯಾ ಪ್ರೇಕ್ಷ್ಯಮಾಣಾ ಪ್ರದೃಶ್ಯತೇ ।
ಪಾಪಸ್ಯ ಹಿ ಭಯಾಲ್ಲೋಕೋ ರಾಮ ಧರ್ಮೇ ಪ್ರವರ್ತತೇ ॥ ೩೭ ॥

ಅಸತ್ಯೇ ಸತ್ಯತಾ ಸಾಧೋ ಶಾಶ್ವತೀ ಪರಿಲಕ್ಷ್ಯತೇ ।
ಶೂನ್ಯೇನ ಧ್ಯಾನಯೋಗೇನ ಶಾಶ್ವತಂ ಪದಮಾಪ್ಯತೇ ॥ ೩೮ ॥

ಯನ್ನಾಸ್ತಿ ತದುದೇತ್ಯಾಶು ದೇಶಕಾಲವಿಲಾಸತಃ ।
ಶಶಕಾಃ ಶೃಂಗವಂತೋ ಹಿ ದೃಶ್ಯಂತೇ ಶಂಬರಸ್ಥಿತೌ ॥ ೩೯ ॥

ಭಾವಿತಗಳಾದರೂ, ವಸ್ತ್ವವಸ್ತುಗಳು ಒಂದೊಂದು ಮತ್ತೊಂದೊಂದರೊಳಗೆ ಇರುವುದು ಲೋಕದಲ್ಲಿ ಸಂಭಾವಿತವಾಗಿರುವಲ್ಲಿ, ಸರ್ವಶಕ್ತನಾದ ಸರ್ವೇಶ್ವರನಲ್ಲಿ ಅಸಂಭಾವಿತವಾದುದು ಯಾವುದೂ ಇಲ್ಲವೆಂದು ತಾತ್ಪರ್ಯ.)

೩೭. ಅಯ್ಯ ರಾಮ, ಪಾಪವೆಂಬುದು ಲೋಕದಲ್ಲಿ ಸಕಲ ಐಹಿಕಾಮುಷ್ಮಿಕ ದುಃಖಗಳಿಗೆ ಕಾರಣವಾಗಿರುವ ಕಾರಣ ಅತ್ಯಂತ ಅಯುಕ್ತವಾಗಿದ್ದರೂ ವಿಮರ್ಶೆ ಮಾಡಿ ನೋಡಿದರೆ ಅದು ಯುಕ್ತವೇ ಆಗಿರುವುದು. ಏಕೆಂದರೆ ಎಲ್ಲಾ ಜನಗಳೂ ಪ್ರಪಂಚದಲ್ಲಿ ಪಾಪಕರ್ಮಗಳಿಗೆ ಭಯಪಟ್ಟುಕೊಂಡೇ (ಪಾಪಾಚರಣೆಯಿಂದ ನರಕಾದಿ ನಾನಾ ದುರ್ಭರದುಃಖಗಳನ್ನು ಅನುಭವಿಸಬೇಕಾಗುವುದೆಂಬ ಭಯದಿಂದಲೇ) ಪಾಪ ಕರ್ಮಗಳನ್ನು ಮಾಡಲು ಹಿಂಜರಿಯುತ್ತಲೂ ಧರ್ಮ ಕಾರ್ಯಗಳಲ್ಲಿ ಪ್ರವರ್ತಿಸುತ್ತಲೂ ಇರುವರು. ಈ ದೃಷ್ಟಿಯಿಂದ ನೋಡಲಾಗಿ ಒಂದು ವಿಧದಲ್ಲಿ ಪಾಪವೂ ಕೂಡ ಯುಕ್ತವಾದುದೆಂದೇ ಹೇಳಬೇಕು. ಹೀಗೆ ಯುಕ್ತಿಯಿಂದ ವಿಮರ್ಶೆ ಮಾಡಲಾಗಿ ಅತ್ಯಂತಾಯುಕ್ತವಾದುದೂ ಗುಣಯುಕ್ತವಾಗಿಯೇ ಕಾಣುವುದು.

೩೮. ಅಯ್ಯ ಸಾಧುವೇ, ಮತ್ತು ಅಸತ್ಯವಾದುದರಲ್ಲಿಯೂ ಫಲತಃ ಸತ್ಯತ್ವವು ಶಾಶ್ವತವಾಗಿ ಕಾಣುವುದು. ಹೇಗೆಂದರೆ ಸರ್ವಶೂನ್ಯವಾದ ನಿರ್ಗುಣಾತ್ಮ ಧ್ಯಾನರೂಪ ನಿರ್ವಿಕಲ್ಪ ಸಮಾಧಿಯೋಗದಿಂದ ಕೊನೆಗೆ ಧ್ಯಾನಸಾಕ್ಷಿಯಾದ ಸ್ವಪ್ರಕಾಶಾತ್ಮನು ಅನುಭವಗೋಚರನಾಗಿ ಸಿದ್ಧಿಸುವ ಕಾರಣ ಶಾಶ್ವತವಾದ ಪರಮ ಪದವು ದೊರಕುವುದು.

೩೯. ಯಾವುದು ಲೋಕದಲ್ಲಿ ಅತ್ಯಂತ ಅಪ್ರಸಿದ್ಧವಾಗಿ ಅಸತ್ಯವಾದುದೋ (ಇಲ್ಲವಾದುದೋ) ಅದೂ ಕೂಡ ದೇಶಕಾಲಾದಿ ಸನ್ನಿವೇಶ ವಿಶೇಷದ ಪ್ರಭಾವ

ಯೇ ವಜ್ರಸಾರಾಃ ಸುದೃಢಾ ದೃಶ್ಯಂತೇ ತೇ ಕ್ಷಯಂ ಗತಾಃ ।
ಕಲ್ಪಸ್ಯಾಂತೇ ಯಥೇಂದ್ವರ್ಕಧರಾಬ್ಧಿವಿಬುಧಾದಯಃ ॥ ೪೦ ॥

ಇತಿ ಪಶ್ಯನ್ಮಹಾಬಾಹೋ ಭಾವಾಭಾವಭವ ಕ್ರಮಂ ।
ಹರ್ಷಾಮರ್ಷವಿಷಾದೇಹಾಃ ಸಂತ್ಯಜ್ಯ ಸಮತಾಂ ಪ್ರಜ ॥ ೪೧ ॥

ಅಸತ್ಸದೇವ ಭಾತೀಹ ಸದಸಚ್ಚಾಪಿ ದೃಶ್ಯತೇ ।
ಆಸ್ಥಾನಾಸ್ಥೇ ಪರಿತ್ಯಜ್ಯ ತೇನಾಶು ಸಮತಾಂ ವ್ರಜ ॥ ೪೨ ॥

ದಿಂದ ಅತ್ಯಲ್ಪ ಕಾಲದೊಳಗೆ ಎದ್ದು ಸತ್ಯ ವಸ್ತುವಿನಂತೆಯೇ ತೋರುವುದು. ಹೇಗೆಂದರೆ ಒಬ್ಬ ಐಂದ್ರಜಾಲಿಕನ ಮಾಯಾ ಶಕ್ತಿಯ ಮಹಿಮೆಯಿಂದ ಅವನ ಸೃಷ್ಟಿಯೊಳಗೆ ಕೊಂಬುಗಳನ್ನು ಧರಿಸಿಕೊಂಡಿರುವ ಅತಿ ವಿಚಿತ್ರಗಳಾದ ಮೊಲಗಳೂ ಉತ್ಪನ್ನವಾಗಿ ಕಾಣುವುದುಂಟು.

೪೦. ಚಂದ್ರ, ಸೂರ್ಯ, ಭೂಮಿ, ಸಮುದ್ರಗಳು ದೇವತೆಗಳು ಮುಂತಾದ ಶಾಶ್ವತವೆನ್ನಿಸಿಕೊಂಡಿರುವ ದಿವ್ಯ ವ್ಯಕ್ತಿಗಳೂ ಕೂಡ ಮಹಾ ಪ್ರಳಯ ಕಾಲದಲ್ಲಿ ಸರ್ವನಾಶವನ್ನು ಹೊಂದಿಬಿಡುವರು. ಇದೇ ರೀತಿಯಲ್ಲಿ ಯಾರ ಯಾರ ವಿನಾಶವು ಎಂದಿಗೂ ಅತ್ಯಂತ ಅಸಂಭಾವಿತವಾಗಿರುವುದೋ ಅಂತಹ ನಿಶ್ಯ ಶಾಶ್ವತವೆನ್ನಿಸಿಕೊಂಡಿರುವ ವಜ್ರದಂತೆ ದುರ್ಭೇದ್ಯರಾಗಿ ಸಾರಭೂತರೂ, ಅತ್ಯಂತ ಸುದೃಢರೂ, ಆದವರೂ ಕೂಡ ಕಾಲಾಂತರದಲ್ಲಿ ಕ್ಷಯ ಹೊಂದಿಬಿಡುವುದು ಲೋಕದಲ್ಲಿ ಅನುಭವ ಗೋಚರವಾಗಿಯೇ ಇರುವುದು.

೪೧. ಅಯ್ಯ ಮಹಾಬಾಹುವೇ, ನಾನು ಇದುವರೆವಿಗೆ ಉಪದೇಶ ಮಾಡಿದ ಕ್ರಮದಲ್ಲಿ ನೀನು ಭಾವಾಭಾವ ಮಯವಾದ ಈ ಸಂಸಾರದ ಕ್ರಮವನ್ನು ಪರ್ಯಾಲೋಚಿಸಿ ಅದರ ಅಸತ್ಯತೆಯನ್ನು ಯಥಾರ್ಥವಾಗಿ ಮನಗಂಡು ಹರ್ಷ, ಕೋಪ, ವಿಷಾದ, ಮನೋರಥ (ಇಚ್ಛೆ) ಮೊದಲಾದವುಗಳನ್ನು ಸಂಪೂರ್ಣವಾಗಿ ಪರಿತ್ಯಜಿಸು. ಸರ್ವತ್ರ ಸಮತ್ವ ಬುದ್ಧಿಯುಳ್ಳವನಾಗಿರು.

೪೨. ಈ ಸಂಸಾರದಲ್ಲಿ (ಪ್ರಪಂಚದಲ್ಲಿ) ಭ್ರಾಂತಿಯ ಮೂಲಕ ವಸ್ತುತಃ ಅಸತ್ ಆದುದು ಸದ್ವಸ್ತುವಾಗಿಯೇ ಭಾಸಿಸುವುದು. ಹಾಗೆಯೇ ಸತ್ಯ ವಸ್ತುವು ಅಸತ್ಯವಾಗಿಯೂ ತೋರುವುದು. ಅದು ಕಾರಣ ಈ ಭ್ರಾಂತಿಮಯವಾದ

ಮುಕ್ತೌ ರಾಘವ ಲೋಕೇಸ್ಮಿನ್ನ ಪ್ರಾಪ್ತಿಃ ಸಂಭವತ್ಯಲಂ ।
ಅಪ್ರವೃತ್ತೌ ವಿವೇಕಸ್ಯ ಮಗ್ನಾ ಹಿ ಜನಕೋಟಯಃ　　|| ೪೩ ||

ಮುಕ್ತೌ ರಾಘವ ಲೋಕೇಽಸ್ಮಿನ್ಪ್ರಾಪ್ತಿರಸ್ತಿ ಸದೈವ ಹಿ ।
ಪ್ರವೃತ್ತ್ಯಾ ಹಿ ವಿವೇಕಸ್ಯ ವಿಮುಕ್ತಾ ಭೂತಕೋಟಯಃ　　|| ೪೪ ||

ಸಂಸಾರದಲ್ಲಿ ನೀನು ಇನ್ನು ತಡಮಾಡದೆ ಬೇಗನೆ ಆಸ್ಥೆಯನ್ನೂ, ಅನಾಸ್ಥೆಯನ್ನೂ (ಆಸಕ್ತಿ ಮತ್ತು ಅನಾಸಕ್ತಿ) ಪರಿತ್ಯಾಗ ಮಾಡಿ, ತಟಸ್ಥನಾಗಿದ್ದುಕೊಂಡು ಸರ್ವತ್ರ ಸಮನಾಗಿರು.

೪೩. ಅಯ್ಯ ರಾಘವ, ಸ್ವಾತ್ಮತತ್ತ್ವ ಜ್ಞಾನನಿಷ್ಠೆಯಿಂದ ಮುಕ್ತಿಯುಂಟಾಗಿ ಬಿಡಲು ಆಮೇಲೆ ಪುನಃ ಈ ಪ್ರಪಂಚದಲ್ಲಿ ಮುಕ್ತನಿಗೆ ಸಂಸಾರ ಪ್ರಾಪ್ತಿಯು ಸರ್ವಥಾ ಎಂದಿಗೂ ಸಂಭವಿಸುವ ಪ್ರಸಕ್ತಿಯೂ ಇಲ್ಲವೇ ಇಲ್ಲ. ಏಕೆಂದರೆ ಅಸಂಸಾರ್ಯಾತ್ಮತತ್ತ್ವ ವಿವೇಕರೂಪವಾದ ತತ್ತ್ವಜ್ಞಾನವು ಪ್ರವರ್ತಿಸದೆ ಇರುವ ಅಜ್ಞಾನ ದಸೆಯಲ್ಲಿಯೇ ಅತ್ಯಂತಾಸಂಭಾವಿತಗಳಾದ ಬಹುವಿಧ ಅನೇಕಾನೇಕ ಅನರ್ಥಗಳನ್ನು ಕೋಟಿ ಕೋಟಿಯಾಗಿ ಸಂಭಾವನೆ ಮಾಡುವ ಮಿಥ್ಯಾ ಭ್ರಾಂತಿಯಲ್ಲಿ ಅಜ್ಞರಾದ ಈ ಜನ ಕೋಟಿಗಳು ಮಗ್ನರಾಗುವರೇ ಹೊರತು ಮುಕ್ತಿ ದಶೆಯಲ್ಲಿ ಈ ಅನರ್ಥ ಪರಂಪರೆಗೆ ನಿಮಿತ್ತವಾದ ಅಜ್ಞಾನವೇ ಸಂಪೂರ್ಣವಾಗಿ ನಾಶ ಹೊಂದಿರುವ ಕಾರಣ ಮುಕ್ತನಿಗೆ ಪುನಃ ಸಂಸಾರ ಮಜ್ಜನ ಪ್ರಸಕ್ತಿಯೇ ಎಂದಿಗೂ ಸಂಭವಿಸುವುದಿಲ್ಲ.

೪೪. ರಾಘವ, ಸ್ವಾತ್ಮತತ್ತ್ವ ವಿವೇಕರೂಪ ಜ್ಞಾನವು ಪ್ರವರ್ತಿಸಲಾಗಿ, ಸಮಸ್ತ ಭೂತಕೋಟಿಗಳೂ (ತತ್ತ್ವಜ್ಞಾನವನ್ನು ದೊರಕಿಸಿಕೊಂಡ) ನಿರ್ವಿಶೇಷವಾಗಿ (ಉತ್ತಮಾಧಮಾದಿ ಭೇಧವೇ ಇಲ್ಲದೆ) ಮುಕ್ತಿಯನ್ನು ಹೊಂದುವುವು. ಹೀಗೆ ಈ ಲೋಕದಲ್ಲಿ ಮುಕ್ತಿಯೆಂಬುದು ನಿತ್ಯಪ್ರಾಪ್ತವಾದ ಸ್ವಾತ್ಮಸ್ವರೂಪವಾಗಿರುವ ಕಾರಣ, ಪೂರ್ವವಿಸ್ಮೃತವಾಗಿ ತನ್ನ ಕಂಠ ಲಗ್ನವಾಗಿಯೇ ಇರುವ ಆಭರಣವು ವಿವೇಕಜ್ಞಾನದಿಂದ ಮಾತ್ರವೇ ಲಭ್ಯವಾಗುವಂತೆ ಅದೂ ಆತ್ಮತತ್ತ್ವ ವಿವೇಕದಿಂದ ಲಭ್ಯವಾಗಿರುವುದು. ಮುಕ್ತಿಗೆ ಎಂದಿಗೂ ಅಪಾಯಶಂಕೆಯು ಪ್ರಸಕ್ತಿಯೇ ಇಲ್ಲವು. ಅದು ಸರ್ವದಾ ನಿತ್ಯಪ್ರಾಪ್ತವಾಗಿಯೇ ಇರುವುದು.

ಪ್ರವಿವೇಕಾವಿವೇಕಾಭ್ಯಾಂ ಸುಲಭಾ ಲಭ್ಯತಾಂ ಗತಾ ।
ಮುಕ್ತಿರ್ಮನಃ ಕ್ಷಯಪ್ರಾಪ್ತ್ಯಾ ವಿವೇಕಂ ತೇನ ದೀಪಯ ॥ ೪೫ ॥

ಆತ್ಮಾವನೇ ಸದಾ ಯತ್ನಃ ಕರ್ತವ್ಯೋ ಭೂತಿಮಿಚ್ಛತಾ ।
ಸರ್ವದುಃಖ ಶಿರಶ್ಛೇದ ಆತ್ಮಾಲೋಕೇನ ಜಾಯತೇ ॥ ೪೬ ॥

ನೀರಾಗಾ ನಿರುಪಾಸಂಗಾ ಜೀವನ್ಮುಕ್ತಾ ಮಹಾಧಿಯಃ ।
ಸಂಭವಂತೀಹ ಬಹುಶಃ ಸುಹೋತ್ರ ಜನಕಾ ಇವ ॥ ೪೭ ॥

---

೪೫. ಈ ಮುಕ್ತಿಯು, ಹೀಗೆ ಪರಿನಿಷ್ಠಿತವಾದ ಸುದೃಢ ಸುನಿಶ್ಚಿತಾತ್ಮ ವಿವೇಕದಿಂದ ನಿತ್ಯಪ್ರಾಪ್ತವಾಗಿರುವ ಕಾರಣ ಅತ್ಯಂತ ಸುಲಭವಾಗಿರುವಂತೆ, ಅವಿವೇಕದಿಂದ (ವಿವೇಕವಿಲ್ಲದಿರುವಾಗ) ಸರ್ವಥಾ ಅಲಭ್ಯವಾಗಿಯೇ ಇರುವುದು. ಅದು ಕಾರಣ, ರಾಮಚಂದ್ರ, ನೀನು ನಿನ್ನ ಮನಸ್ಸನ್ನು ಆತ್ಮ ತತ್ತ್ವ ವಿಚಾರ ದಿಂದ ಸಮಗ್ರವಾಗಿ ಲಯಗೊಳ್ಳಿಸಿ, ಆತ್ಮತತ್ತ್ವ ವಿವೇಕವನ್ನು ಉದ್ದೀಪನಗೊಳಿಸು. (ಬೆಳಗಿಸು= ದೃಢವಾಗಿನಿಲ್ಲುವಂತೆ ವೃದ್ಧಿಗೊಳಿಸು.)

೪೬. ಸ್ವಾತ್ಮತತ್ತ್ವ ಸಾಕ್ಷಾತ್ಕಾರದಿಂದ ಅಜ್ಞಾನ ವಿಜೃಂಭಿತಗಳಾದ ಸಮಸ್ತ ಸಾಂಸಾರಿಕ ದುಃಖಗಳಿಗೂ ಶಿರಶ್ಛೇದವಾಗುವುದರಿಂದ (ಆತ್ಯಂತಿಕ ಸರ್ವನಾಶ ವಾಗುವ ಕಾರಣ), ಪರಮಪುರುಷಾರ್ಥರೂಪ ನಿಃಶ್ರೇಯಸವನ್ನು ಬಯಸುವ ಮುಮುಕ್ಷುವು, ಪ್ರಧಾನವಾಗಿ ಆತ್ಮತತ್ತ್ವ ಸಾಕ್ಷಾತ್ಕಾರಕ್ಕೋಸ್ಕರವಾಗಿ ದೃಢ ಮಹಾ ಪ್ರಯತ್ನಗಳನ್ನು ಸಂತತವೂ ಮಾಡಬೇಕು. (ಗುರೂಪಸದನ, ಶಾಸ್ತ್ರಾರ್ಥ ಶ್ರವಣ, ಮನನ, ನಿದಿಧ್ಯಾಸನ, ಇತ್ಯಾದಿ ನಾನಾ ಮಹಾಪ್ರಯತ್ನಗಳನ್ನು ತತ್ತ್ವ ಜ್ಞಾನ ಪ್ರಾಪ್ತಿಪರ್ಯಂತ ನಿರಂತರವೂ ಮಾಡಬೇಕು. ಎಂದರ್ಥ)

೪೭. ಅಯ್ಯಾ ರಾಮ, ಪೂರ್ವಕಾಲದಲ್ಲಿ ಮಾತ್ರವೇ ಅಲ್ಲದೆ, ಈಗಲೂ

ತಸ್ಮಾತ್ತ್ವಮಪಿ ವೈರಾಗ್ಯವಿವೇಕೋದಿತಧೀರಧೀಃ ।
ಜೀವನ್ಮುಕ್ತೋ ವಿಹರ ಭೋ ಸಮಲೋಷ್ಟಾಶ್ಮಕಾಂಚನಃ ॥ ೪೮ ॥

ದ್ವಿವಿಧಾ ಮುಕ್ತತಾ ಲೋಕೇ ವಿದ್ಯತೇ ದೇಹಧಾರಿಣಾಂ ।
ಸದೇಹೈಕಾ ವಿದೇಹಾನ್ಯಾ ವಿಭಾಗೊಯಂ ತಯೋಃ ಶೃಣು ॥ ೪೯ ॥

ಅಸಂಸಂಗಾತ್ ಪದಾರ್ಥಾನಾಂ ಮನಃಶಾಂತಿರ್ವಿಮುಕ್ತತಾ ।
ಸತ್ಯಸತ್ಯಪಿ ದೇಹೇ ಸಾ ಸಂಭವತ್ಯನಘಾಕೃತೇ ॥ ೫೦ ॥

ಕೂಡ, ಈ ಪ್ರಪಂಚದಲ್ಲಿ ಸುಹೋತ್ರ, ಜನಕ (ವೈದೇಹ) ಮುಂತಾದ ಜೀವನ್ಮುಕ್ತರಂತಹ, ರಾಗದ್ವೇಷಾದಿ ರಹಿತರಾದ ಸರ್ವತ್ರ ಅನಾಸಕ್ತರಾದ ಮತ್ತು ಮಹಾ ಜ್ಞಾನಿಗಳಾಗಿರುವ ಜೀವನ್ಮುಕ್ತರು ಅಸಂಖ್ಯಾಕರಾಗಿ ಇದ್ದುಕೊಂಡಿರುವರು.

೪೮. ಅದು ಕಾರಣ, ಅಯ್ಯ ರಾಮಭದ್ರ, ನೀನೂಕೂಡ ಸುದೃಢವಾದ ವಿವೇಕ ವೈರಾಗ್ಯಗಳನ್ನು ಹೊಂದಿ, ಸಚ್ಛಾಸ್ತ್ರ ವಿಚಾರದಿಂದ ಆವಿರ್ಭವಿಸಿದ ಪಾರಮಾರ್ಥಿಕ ಆತ್ಮತತ್ತ್ವ ಜ್ಞಾನನಿಷ್ಠನಾಗಿರುತ್ತಾ, ಮಣ್ಣುಹೆಂಟೆ, ಕಲ್ಲು, ಸುವರ್ಣ ಮುಂತಾದುವುಗಳನ್ನು ಒಂದೇ ಸಮನಾಗಿ (ರಾಗದ್ವೇಷಾದಿಗಳಿಲ್ಲದೆ ಹೇಯೋಪಾದೇಯ ಬುದ್ಧಿ ಶೂನ್ಯನಾದ ಸಮ ಬುದ್ಧಿಯಿಂದ) ಕಾಣುತ್ತಾ ಜೀವನ್ಮುಕ್ತನಾಗಿ ವಿಹರಿಸುವವನಾಗು.

೪೯. ಅಯ್ಯ ರಾಮ, ಲೋಕದಲ್ಲಿ ದೇಹಿಗಳಿಗೆ ಮುಕ್ತಿಯೆಂಬುದು ಸದೇಹಮುಕ್ತಿಯೆಂಬುದಾಗಿಯೂ ವಿದೇಹಮುಕ್ತಿಯೆಂಬುದಾಗಿಯೂ ಎರಡು ವಿಧವಾಗಿರುವುದು. ಅದರ ವಿಭಾಗಕ್ರಮವನ್ನು ಈಗ ನಾನು ನಿನಗೆ ಹೇಳುವೆನು ಕೇಳು.

೫೦. ಪ್ರಾಪಂಚಿಕಗಳಾದ (ಅನಾತ್ಮ ಬಾಹ್ಯ ದೃಶ್ಯ) ಪದಾರ್ಥಗಳಲ್ಲಿ ಸರ್ವತ್ರಸಂಸಕ್ತಿರಹಿತವಾಗಿ ಸದಾ ಮನಸ್ಸು ಪ್ರಶಾಂತವಾಗಿರುವಿಕೆಯೇ ಮುಕ್ತಿಯೆನ್ನಿಸುವುದು. ಅಯ್ಯ ಅನಘಾಕಾರನಾದ ರಾಮನೇ, ಹೀಗೆ ಮನಸ್ಸು ಪ್ರಶಾಂತ

ಸ್ನೇಹಸಂಕ್ಷಯಮೇವಾಂಗ ವಿದುಃ ಕೈವಲ್ಯಮುತ್ತಮಂ ।
ತತ್ಸಂಭವತಿ ದೇಹಸ್ಯ ಭಾವೇ ಚಾಭಾವ ಏವ ಚ । ॥ ೫೧ ॥

ಯೋ ಜೀವತಿ ಗತಸ್ನೇಹಃ ಸ ಜೀವನ್ಮುಕ್ತ ಉಚ್ಯತೇ ।
ಸಸ್ನೇಹ ಜೀವಿತೋ ಬದ್ಧೋ ಮುಕ್ತ ಏವ ತೃತೀಯಕಃ ॥ ೫೨ ॥

ಯತ್ನೋ ಯತ್ನೇನ ಕರ್ತವ್ಯೋ ಮೋಕ್ಷಾರ್ಥಂ ಯುಕ್ತಿಪೂರ್ವಕಂ ।
ಯತ್ನಯುಕ್ತಿ ವಿಹೀನಸ್ಯ ಗೋಷ್ಪದಂ ದುಸ್ತರಂ ಭವೇತ್ ॥ ೫೩ ॥

ವಾಗಿದ್ದುಕೊಂಡು ಜ್ಞಾನನಿಷ್ಠೆಯುಂಟಾಗಿ ಬಿಟ್ಟರೆ ಸಾಕು, ಆಗಲೇ ಈ ಪ್ರಾರಬ್ಧ ದೇಹವೂ ಇರಲಿ ಅಥವಾ ಇಲ್ಲದಿರಲಿ ಹೇಗೂ ಮುಕ್ತಿಯೆಂಬುದು ಸರ್ವದಾ ಸರ್ವಥಾ ಕರತಲಗತವಾಗಿಯೇ ಇರುವುದು.

೫೧. ಮಗು ರಾಮ, ಸರ್ವತ್ರ, ಪತ್ನೀ ಪುತ್ರ ಗೃಹಾರಾಮಧನಾದಿ ಸಕಲ ವಸ್ತುಗಳಲ್ಲಿ ಮಮತಾರೂಪವಾದ ಸ್ನೇಹವನ್ನು ಆತ್ಯಂತಿಕವಾಗಿ ನಾಶಗೊಳ್ಳಿಸಿ (ಅಸಂಗಾತ್ಮರೂಪನಾಗಿ ಪ್ರಶಾಂತ ಸ್ಥಿತಿಯನ್ನು ಪಡೆಯುವಿಕೆಯೇ ಉತ್ತಮೋತ್ತಮವಾದ ಕೈವಲ್ಯವೆಂದು ಜ್ಞಾನಿಗಳು ತಿಳಿದಿರುವರು. ಕೈವಲ್ಯವು ದೇಹವಿದ್ದುಕೊಂಡಿರುವಾಗಲೂ, ಮತ್ತು ದೇಹವಿಲ್ಲದಿರುವಾಗಲೂ ಕೂಡ (ದೇಹದ ಅಪೇಕ್ಷೆಯಿಲ್ಲದೆ) ಸ್ನೇಹಸಂಕ್ಷಯ ಮಾತ್ರದಿಂದ ಸಂಭವಿಸುವುದು.

೫೨. ಯಾವನು ಬದುಕಿಕೊಂಡಿರುವಾಗಲೇ, (ದೇಹವನ್ನು ಧರಿಸಿಕೊಂಡಿದ್ದರೂ) ಸರ್ವತ್ರ ಮಮತಾರೂಪ ಸ್ನೇಹರಹಿತನಾಗಿ ಬಿಡುವನೋ, ಅವನು ಜೀವನ್ಮುಕ್ತನೆನ್ನಿಸುವನು ಯಾವನು ಸರ್ವತ್ರ ಅಹಂ, ಮಮತಾರೂಪ ಭ್ರಾಂತಿಯಿಂದ ಸ್ನೇಹಯುಕ್ತನಾಗಿ ಜೀವಿಸಿರುವನೋ ಅವನು (ಸ್ನೇಹರಹಿತನಾಗುವ ಪರ್ಯಂತವೂ) ನಿತ್ಯಬದ್ಧನೇ ಸರಿ (ಬೇರೆ ರೀತಿಯಲ್ಲಿ) ಯಾವನಾದರೆ ತತ್ತ್ವಜ್ಞಾನಸಂಪನ್ನನಾಗಿಯೂ ಸರ್ವತ್ರ ಸ್ನೇಹವರ್ಜಿತನಾಗಿಯೂ ಇದ್ದು ಪ್ರಾರಬ್ಧ ದೇಹದಿಂದಲೂ ಬಿಡುಗಡೆ ಹೊಂದಿರುವನೋ ಅವನು ವಿದೇಹಮುಕ್ತನೆನ್ನಿಸಿರುವನು.

೫೩. ಸಾಧಕನು (ಮುಮುಕ್ಷುವು) ಸಾಧನ ಚತುಷ್ಟಯದೊಳಗೆ ಬಹು ಪ್ರಯಾಸದಿಂದ ಮಹಾ ಪ್ರಯತ್ನಗಳನ್ನು ಮಾಡುತ್ತಾ (ಶ್ರೇಯೋ ವಿಘ್ನಗಳನ್ನು

ನತ್ವನಧ್ಯವಸಾಯಸ್ಯ ದುಃಖಾಯ ವಿಪುಲಾತ್ಮನೇ ।
ಆತ್ಮಾ ಪರವಶಃ ಕಾರ್ಯೋ ಮೋಹಮಾಶ್ರಿತ್ಯ ಕೇವಲಂ　　　　|| ೫೪ ||

ನಿವಾರಣೆ ಮಾಡಿಕೊಂಡು) ಯುಕ್ತಿ ಪೂರ್ವಕವಾಗಿ ಪೂರ್ವ ಪೂರ್ವ ಸಾಧನಗಳನ್ನು ಸಾಧಿಸಿಕೊಂಡು ಬಳಿಕ ಉತ್ತರೋತ್ತರ ಸಾಧನಗಳನ್ನು ಸಾಧಿಸುವ ವಿಷಯದಲ್ಲಿ ನಿರಂತರವೂ ಪ್ರಯತ್ನಮಾಡಲೇಬೇಕು. ಹೀಗೆ ಮಾಡುವುದರಿಂದಲೇ ಮೋಕ್ಷವು ಕೈಗೂಡುವುದು. (ಅನ್ಯಥಾ ಕೈಗೂಡುವುದಿಲ್ಲ.) ಯತ್ನ ಯುಕ್ತಿಗಳಿಂದ ಸಂಸಾರೋತ್ತರಣಕ್ಕಾಗಿ ಸತತವೂ ಪ್ರಯತ್ನಪಡುವ ವಿವೇಕಿಗಳಿಗೆ ಈ ಅಪಾರವಾದ ಸಂಸಾರ ಸಮುದ್ರವು ಒಂದು ಗೋವಿನ ಹೆಜ್ಜೆಯಷ್ಟು ಮಾತ್ರವೇ ಅಗಲವಾದ ಒಂದು ಸಣ್ಣ ಕಾಲುವೆಯಂತೆ ಸುತರವಾಗಿ ಬಿಡುವುದು. (ಸುತರ ಅನಾಯಾಸವಾಗಿ ದಾಟುವುದಕ್ಕೆ ಯೋಗ್ಯವಾದುದು.) ಹೀಗೆ ವಿವೇಕಿಯಾದವನಿಗೆ ಗೋಷ್ಪದದಂತೆ ಸುತರವಾಗಿರುವ ಈ ತುಚ್ಛವಾದ ಸಂಸಾರವೇ ಯತ್ನಯುಕ್ತಿ ವಿಹೀನರಾದ ಅಜ್ಞಾನಿಗಳಿಗೆ ಅಪಾರವಾಗಿ ದುಸ್ತರವಾಗಿಬಿಡುವುದು. (ಅಂದರೆ ಗೋಷ್ಪದವೂ ದುಸ್ತರವಾಗಿಬಿಡುವುದು.) (ಯತ್ನ ಯುಕ್ತಿವಂತನಾದ ಮಹಾತ್ಮನಾದ ಆಂಜನೇಯನಿಗೆ ಅಪಾರವಾದ ಸಮುದ್ರವೂ ಒಂದು ಗೋಷ್ಪದದಷ್ಟು ಸುಲಭವಾಗಿ ದಾಟಲು ಸಾಧ್ಯವಾಯಿತು. ಆದರೆ ಅವಿವೇಕಿಯಾದ ಅಲ್ಪ ಮನುಜನಿಗೆ ಒಂದು ಗೋಷ್ಪದವೂ ಮಹಾ ಸಮುದ್ರದಂತೆ ದುಸ್ತರವೇ ಆಗಿಬಿಡುವುದು.)

[ನಿತ್ಯಾನಿತ್ಯ ವಸ್ತು ವಿವೇಕಃ, ಇಹಾಮುತ್ರಾರ್ಥ ಫಲ ಭೋಗ ವಿರಾಗಃ, ಶಮದಮಾದಿ ಸಂಪತ್ ಮುಮುಕ್ಷುತ್ವ ಇವು ಸಾಧನ ಚತುಷ್ಟಯಗಳು. ಪ್ರಮಾಣ ತಾತ್ಪರ್ಯ ಪ್ರಮೇಯ ತತ್ತ್ವಾವಧಾರಣಾನುಕೂಲವಾದ ತರ್ಕಗಳೇ ಯುಕ್ತಿಗಳು.]

೫೪. ಆತ್ಯಂತಿಕವಾಗಿ ವಿಶೇಷವಾದ ಮೋಹವನ್ನು ಆಶ್ರಯಿಸಿ, ಸ್ವಪ್ರಯತ್ನ

ಸುಮಹದ್ಧೈರ್ಯಮಾಲಂಬ್ಯ ಮನಸಾ ವ್ಯವಸಾಯಿನ್ಯಾ ।
ವಿಚಾರಯಾತ್ಮನಾತ್ಮಾನಮಾತ್ಮನ ಶ್ಚಿರಸಿದ್ಧಯೇ ।
ವಿತತಾಧ್ಯವಸಾಯಸ್ಯ ಜಗದ್ಭವತಿ ಗೋಷ್ಪದಂ ॥ ೫೫ ॥

ಗಳ ಶೈಥಿಲ್ಯದಿಂದಲೂ ಅನಾದರದಿಂದಲೂ, ಸ್ವಾತ್ಮ ತತ್ತ್ವವು ದೃಢವಾಗಿಯೂ ನಿರ್ಣೀತವಾಗಿಯೂ ಸಾಕ್ಷಾತ್ಕೃತವಾಗದಿರಲು, ಮಧ್ಯದಲ್ಲಿ ಅತ್ಯಂತ ನಿರ್ವಿಣ್ಣನಾಗಿ ಬೇಸರಪಟ್ಟುಕೊಂಡು ಸ್ವಪ್ರಯತ್ನಗಳನ್ನು ನಿಲ್ಲಿಸಿ ಪುನಃ ಆತ್ಮವನ್ನು ಅತಿ ವಿಸ್ತಾರವಾದ ದುಃಖಪರಂಪರೆಗೆ ಎಂದಿಗೂ ಪರವಶನನ್ನಾಗಿ ಮಾಡಕೂಡದು. (ಯುಕ್ತಿ ಯುಕ್ತನಾಗಿ ಸಾಧಕನು ಆತ್ಮತತ್ತ್ವದ ಅಧ್ಯವಸಾಯ ಪರ್ಯಂತವೂ ಸ್ವಪ್ರಯತ್ನವನ್ನು ಮಾಡಲೇಬೇಕು. ಅನ್ಯಥಾ ಅನರ್ಥ ಪರಂಪರೆಗೆ ವಶವರ್ತಿಯಾಗುವನು.)

೫೫. ಅದುಕಾರಣ, ಅಯ್ಯ ರಾಮ, ನೀನು ಅತ್ಯಂತ ದೃಢವಾದ ಮಹಾ ಧೈರ್ಯವನ್ನು ಅವಲಂಬಿಸಿ ಸ್ಥಿರಚಿತ್ತನಾಗಿದ್ದುಕೊಂಡು, ಆತ್ಮತತ್ತ್ವ ಸಾಕ್ಷಾತ್ಕಾರರೂಪ ಫಲಸಿದ್ಧಿಪರ್ಯಂತರವೂ ಪ್ರಯತ್ನವನ್ನು ಬಿಡದೆ ಮಾಡಲೇ ಬೇಕೆಂಬ ದೃಢನಿಶ್ಚಯಗೊಂಡ ಮನಸ್ಸಿನಿಂದ, ನಿನ್ನಿಂದ ನೀನೆ ನಿನ್ನ ಶಾಶ್ವತವಾದ ಮೋಕ್ಷ ಸಿದ್ಧಿಯ ಸಲುವಾಗಿ ಸ್ವಾತ್ಮಸ್ವರೂಪವನ್ನು ಸದ್ಗುರುವಿನ ಅನುಗ್ರಹವನ್ನು ಪಡೆದು, ಸಚ್ಛಾಸ್ತ್ರಗಳಮೂಲಕ ವಿಚಾರಮಾಡಿ ತತ್ತ್ವತಃ ತಿಳಿಯುವವನಾಗು. ಮಹಾ ಪ್ರಯತ್ನ ವಿಶೇಷಗಳಿಂದ ಆತ್ಮತತ್ತ್ವ ನಿಶ್ಚಯ ಜ್ಞಾನವುಳ್ಳ ಮಹಾತ್ಮನಿಗೆ ಈ ವಿಸ್ತಾರವಾದ ಜಗತ್ತು ಎಲ್ಲವೂ ಒಂದು ಗೋಷ್ಪದದಂತೆ ಅತ್ಯಂತ ಸುತರವಾಗುವುದು. [ಈ ಜನ್ಮದಲ್ಲಿ ಪ್ರತಿಬಂಧವಶದಿಂದ ಜ್ಞಾನಸಿದ್ಧಿಯು ಆಗದಿದ್ದರೂ, ಮುಂದೆ ಬಹು ಜನ್ಮಗಳಿಂದಲಾದರೂ ಜ್ಞಾನಸಿದ್ಧಿಯಾಗುವ ರೀತಿಯಲ್ಲಿ ಬಿಡದೆ ಪ್ರಯತ್ನ ಮಾಡಬೇಕು ಎಂದು ತಾತ್ಪರ್ಯ ಪ್ರಕಾಶ]

ಯದುಪಗತಃ ಸುಗತಃ ಪದಂ ಪ್ರಧಾನಂ ।
ಯದಪಗತೋಽಧ್ರುವತಾಂ ನೃಪಶ್ಚ ಕಶ್ಚಿತ್ ।
ಯದುಪಗತಾಃ ಪದಮುತ್ತಮಂ ಮಹಾಂತಃ
ಪ್ರಯತನಕಲ್ಪತರೋರ್ಮಹಾಫಲಂ ತತ್ ॥ ೫೬ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಮುಕ್ತಾಮುಕ್ತವಿಚಾರೋ" ನಾಮ ಪಂಚಸಪ್ತತಿತಮಃ ಸರ್ಗಃ

---

೫೬. ಅರ್ಥ:—(ಸುಗತಃ= ಬುದ್ಧ ಮತ್ತು ಒಳ್ಳೆವಿವೇಕವನ್ನು ಪಡೆದವನಾದ ಕಪಿಲ ಇವರಿಬ್ಬರೂ ಬೌದ್ಧಮತ ಮತ್ತು ಸಾಂಖ್ಯಮತ ಪ್ರವರ್ತಕರು,)

ಬುದ್ಧನೂ, ಮತ್ತು ಪ್ರಶಸ್ತ ವಿವೇಕವುಳ್ಳ ಕಪಿಲನೂ, ಬಹುವಾಗಿ ಶಾಸ್ತ್ರಾರ್ಥಗಳನ್ನು ವಿಚಾರಮಾಡಿಯೂ ಕೂಡ ಯಾವ ಪರಂಜ್ಯೋತಿಃ ಸ್ವರೂಪವಾದ ಸ್ವಾತ್ಮತತ್ತ್ವವೆಂಬ ಪರಮ ಪದವನ್ನು ನಿಶ್ಚಿತವಾಗಿ ತಿಳಿದುಕೊಳ್ಳಲು ಅಸಮರ್ಥರಾಗಿದ್ದು ಯಾವ ಆತ್ಮತತ್ತ್ವ ಪದದಿಂದ ಚ್ಯುತರಾಗಿ ಬಹು ದೂರದಲ್ಲಿ ನಿಂತರೋ (ಬುದ್ಧನು ಆತ್ಮನ ಕ್ಷಣಿಕವಿಜ್ಞಾನ ಸಂತಾನ ರೂಪವಾದ ಅನಿತ್ಯತ್ವವನ್ನು ತಿಳಿದುಕೊಂಡು ಆ ತತ್ತ್ವವನ್ನೇ ಗ್ರಹಿಸಿದನು. ಅಂತೆಯೇ ಕಪಿಲನು ಗುಣತ್ರಯ ಸಾಮ್ಯಾವಸ್ಥಾ ರೂಪವಾದ ಮೂಲ ಪ್ರಕೃತಿಯನ್ನು (ಪ್ರಧಾನ) ತತ್ತ್ವವೆಂದು ತಿಳಿದನು.) ಇವರಂತೆಯೇ ಯಾವನೋ ಒಬ್ಬ ರಾಜನು ಕ್ಷತ್ರಿಯನಾಗಿದ್ದರೂ ಕೂಡ ಯಾವ ಆತ್ಮತತ್ತ್ವವನ್ನು ಪಡೆಯಲಾರದವನಾಗಿ ಆತ್ಮನು ಚಿದ್ರೂಪನೆಂದು ಒಪ್ಪಿಕೊಂಡರೂ ದೇಹದೊಂದಿಗೆ ದೇಹ ಧರ್ಮಗಳನ್ನು ಪಡೆಯುತ್ತಾ ಪರಿಣಾಮ ಹೊಂದತಕ್ಕವನೆಂದು ಭ್ರಾಂತಿಯಿಂದ ಭಾವನೆ ಮಾಡುತ್ತಾ, ಅನಿತ್ಯತೆಯನ್ನು ಪಡೆದನು. ಹೀಗೆ ಇವರು ಮೂವರೂ ಅನುತ್ತಮವಾದ (ಅಪ್ರಶಸ್ತವಾದ) ಮಿಥ್ಯಾಭೂತವಾದ ಪದದಲ್ಲಿಯೇ ಮುಳುಗಿ ಹಾಳಾದರು. ಇವರೆ ವೇದ ರಹಸ್ಯವನ್ನು ಚೆನ್ನಾಗಿ ತಿಳಿದಿರುವ ಮಹಾತ್ಮರು ಸತ್ಯಜ್ಞಾನಾನಂದ ರೂಪವಾದ ಆತ್ಮನನ್ನು ಪಡೆದವರಾಗಿ ಯಾವ ಪರಮ ಪದದಲ್ಲಿ ವಿಶ್ರಾಂತರಾಗಿರುವರೋ ಅಂತಹ ಪರಮ ಪದವೇ ವೇದೋಕ್ತ ಸಾಂಪ್ರದಾಯಿಕ ಕ್ರಮದಿಂದ ಮಾಡುವ ಸತತ ಪ್ರಯತ್ನವೆಂಬ ಕಲ್ಪ ವೃಕ್ಷದ ಮಹಾಫಲವಾಗಿರುವುದು. ಸರ್ವರೂ ಆ ಮಹಾಫಲಕ್ಕಾಗಿ ಪ್ರಯತ್ನ ಶೀಲರಾಗಬೇಕು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಮುಕ್ತಾಮುಕ್ತ ವಿಚಾರ" ವೆಂಬ ಎಪ್ಪತ್ತೈದನೆಯ ಸರ್ಗವು.

ಷಟ್ಸಪ್ತತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಬ್ರಹ್ಮಣಃ ಸಮುಪಾಯಾಂತಿ ಜಗಂತೀಮಾನಿ ರಾಘವ ।
ಸ್ಥೈರ್ಯಂ ಯಾಂತ್ಯವಿವೇಕೇನ ಶಾಮ್ಯಂತ್ಯೇವ ವಿವೇಕತಃ ॥ ೧ ॥

ಜಗಜ್ಜಾಲಜಲಾವರ್ತ ವೃತ್ತಯೋ ಬ್ರಹ್ಮವಾರಿಧೌ ।
ಸಂಖ್ಯಾತುಂ ಕೇನ ಶಕ್ಯಂತೇ ಭಾಸಾಂ ಚ ತ್ರಸರೇಣವಃ ॥ ೨ ॥

ಎಪ್ಪತ್ತಾರನೆಯ ಸರ್ಗ

ಶ್ರೀ ವಸಿಷ್ಠರು ಹೇಳಿದರು :—

೧. ರಾಘವ, ಈ ದೃಶ್ಯಗಳಿಂದ ಸಕಲ ಜಗತ್ತುಗಳೂ, ಅವಿಜ್ಞಾತವಾದ ಬ್ರಹ್ಮನ ದೆಸೆಯಿಂದಲೇ ಆವಿರ್ಭವಿಸುವುವು. ಅವಿವೇಕದಿಂದ ಸ್ಥೈರ್ಯವನ್ನು ಪಡೆದು ನಿಲ್ಲುವುವು. ಆತ್ಮತತ್ತ್ವ ವಿವೇಕವುಂಟಾದ ಕೂಡಲೆ ಶಾಂತವಾಗಿ ಬಿಡುವುವು. [ಬ್ರಹ್ಮನು ನಿಷ್ಪ್ರಪಂಚವೆಂದು ತತ್ತ್ವತಃ ತಿಳಿಯದಿರುವಾಗ, ಭ್ರಾಂತಿಯಿಂದ ಜಗತ್ತುಗಳು ಉದಯಿಸುವುವು. ಆತ್ಮತತ್ತ್ವಾ ವಿವೇಕದಿಂದ ಸ್ಥಿರವಾಗಿರುವುವು. ನಿಷ್ಪ್ರಪಂಚಾಸಂಗಾತ್ಮ ವಿವೇಕದಿಂದ ಕೂಡಲೆ ಲಯಹೊಂದಿರುವುವು.)

೨. ಪರಬ್ರಹ್ಮವೆಂಬ ಮಹಾಸಮುದ್ರದೊಳಗೆ ನೀರಿನ ಸುಳಿಗಳಂತೆ ಸದಾ ಸುತ್ತುತ್ತಿರುವ ನಾನಾ ಜಗತ್ತುಗಳ ಸಮುದಾಯಗಳೆಂಬ ನೀರಿನ ಸುಳಿಗಳ ಸುತ್ತುಗಳನ್ನು ಮತ್ತು ಮನೆಯೊಳಕ್ಕೆ ಕಿಟಕಿಯ ಮೂಲಕ ಪ್ರವೇಶಮಾಡಿರುವ ಸೂರ್ಯ ಕಿರಣಗಳೊಳಗೆ ಕಾಣುವ (ಪರಮಾಣು ಸದೃಶ) ತ್ರಸರೇಣುಗಳನ್ನು ಕೂಡ ಎಣಿಸಿ ಲೆಕ್ಕಮಾಡುವುದಕ್ಕೆ ಯಾವನು ಶಕ್ತನಾಗಿರುವನು ?

ಅಸಮ್ಯಕ್ಪ್ರೇಕ್ಷಣಂ ವಿದ್ಧಿ ಕಾರಣಂ ಜಗತಃ ಸ್ಥಿತೌ ।
ಸಂಸಾರ ಶಾಂತಯೇ ಕಾಂತ ಕಾರಣಂ ಸಮ್ಯಗೀಕ್ಷಣಂ ॥ ೩ ॥

ಅಯಂ ಹಿ ಪರದುಷ್ಪಾರೋ ಘೋರಃ ಸಂಸಾರಸಾಗರಃ ।
ವಿನಾ ಯುಕ್ತಿಪ್ರಯತ್ನಾಭ್ಯಾಮಸ್ಮಾದ್ರಾಮ ನ ತೀರ್ಯತೇ ॥ ೪ ॥

ಯಸ್ಯಾಯಂ ಸಾಗರಃ ಪೂರ್ಣೋ ಮೋಹಾಂಬುಭರ ಪೂರಿತಃ ।
ಅಗಾಧ ಮರಣಾ ವರ್ತಕಲ್ಲೋಲಾಕುಲಕೋಟರಃ ॥ ೫ ॥

ಪ್ರಭ್ರಮತ್ಪುಣ್ಯಡಿಂಡೀರೋ ಜ್ವಲನ್ನರಕವಾಡವಃ ।
ತೃಷ್ಣಾವಿಲೋಲಲಹರಿ ರ್ಮನೋಜಲಮತಂಗಜಃ ॥ ೬ ॥

---

೩. ಜ್ಞಾನ ಸುಂದರನಾದ ರಾಮ, ಹೀಗೆ ಜಗತ್ತಿನ ಸ್ಥಿತಿಗೆ, ಯಥಾರ್ಥವಾಗಿ ಆತ್ಮತತ್ತ್ವವನ್ನು ತಿಳಿಯದೆ, ಭ್ರಾಂತಿಯಿಂದ ತಪ್ಪಾಗಿ ತಿಳಿದುಕೊಳ್ಳುವ ಅಜ್ಞಾನವೇ ಕಾರಣವೆಂದೂ, ಜಗದ್ರೂಪವಾದ ಈ ಸಂಸಾರನಾಶಕ್ಕೆ ಆತ್ಮತತ್ತ್ವಜ್ಞಾನವೇ ಕಾರಣವೆಂದೂ ಸ್ಪಷ್ಟವಾಗಿ ಅವಧರಿಸು

೪. ಅಯ್ಯ ರಾಮ, ಈ ಸಂಸಾರವೆಂಬ ಸಮುದ್ರವು ಅತಿಭಯಂಕರವು. ಅತ್ಯಂತ ದುಸ್ತರವಾದುದು. ಮತ್ತು ಅಪಾರವಾದುದು. ತತ್ತ್ವಾವಧಾರಣಾನುಕೂಲವಾದ ತರ್ಕಗಳೂ (ಯುಕ್ತಿ) ಸತತವಾದ ದೃಢಪ್ರಯತ್ನವೂ ಇಲ್ಲದಿದ್ದರೆ, ಇಂತಹ ಸಂಸಾರ ಸಮುದ್ರವನ್ನು ದಾಟುವುದು ಸರ್ವಥಾ ಸರ್ವರಿಗೂ ಅತ್ಯಂತ ಅಸಾಧ್ಯವೇ ಸರಿ.

೫. (ಈ ಶ್ಲೋಕದ ಮೊದಲನೆ ಪಾದವನ್ನು ಇದೇ ಸರ್ಗದ ೧೨ನೆಯ ಶ್ಲೋಕದ ಉತ್ತೀರ್ಯತೇ ಚೇತ್ ಎಂಬ ಕ್ರಿಯಾಪದದೊಡನೆ ಅನ್ವಯಮಾಡಿ ಅರ್ಥ ಹೇಳಬೇಕು.) ಈ ಸಂಸಾರ ಸಾಗರವು ಮಧ್ಯದಲ್ಲಿ, ಮರಣ ಪರಂಪರೆಗಳೆಂಬ ಅಗಾಧವಾದ ಅನೇಕ ನೀರಿನ ಸುಳಿಗಳಿಂದಲೂ ದೊಡ್ಡ ದೊಡ್ಡ ಅಲೆಗಳಿಂದಲೂ ಆಕುಲವಾಗಿರುವುದು.

೬. ಇದರಲ್ಲಿ, ಪುಣ್ಯಕರ್ಮಗಳೆಂಬ ನೊರೆಗಳು ವಿಶೇಷವಾಗಿ ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ಸುತ್ತುತ್ತಾ ತೇಲುತ್ತಿರುವುವು. ನಾನಾ ನರಕಯಾತನೆಗಳೆಂಬ

ಆಲೀನ ಜೀವಿತ ಸರಿದ್ಭೋಗರತ್ನ ಸಮುದ್ಗಕಃ ।
ಕ್ಷುಬ್ಧರೋಗೋರಗಾಕೀರ್ಣ ಇಂದ್ರಿಯಗ್ರಾಹಘರ್ಘರಃ ॥ ೭ ॥

ಪಶ್ಯಾಸ್ಮಿನ್ಪ್ರಸೃತಾ ರಾಮ ವೀಚಯಶ್ಚಾರು ಚಂಚಲಾಃ ।
ಇಮಾ ಮುಗ್ಧಾಂಗನಾನಾಮ್ನ್ಯಃ ಶಿಖರಾಕರ್ಷಣ ಕ್ಷಮಾಃ ॥ ೮ ॥

ಛದಶ್ರೀ ಪದ್ಮರಾಗಾಢ್ಯಾ ನೇತ್ರನೀಲೋತ್ಪಲಾಕುಲಾಃ ।
ದಂತ ಪುಷ್ಪಫಲಾಕೀರ್ಣಾಃ ಸ್ಮಿತಫೇನೋಪಶೋಭಿತಾಃ ॥ ೯ ॥

ಅನೇಕ ಬಡಬಾಗ್ನಿಗಳು ನಿರಂತರವೂ ಪ್ರಜ್ವಲಿಸುತ್ತಿರುವುವು. ತೃಷ್ಣೆಗಳೆಂಬ ಅನೇಕ ಪ್ರವಾಹಗಳು ಅತಿಚಂಚಲವಾಗಿ ವೇಗದಿಂದ ಹರಿಯುತ್ತಿರುವುವು. ಮನಸ್ಸು ಎಂಬ ಆನೆಯಷ್ಟು ದೊಡ್ಡ ಆಕಾರವುಳ್ಳ ಒಂದು ದೊಡ್ಡ ಜಲಜಂತುವು, ನೀರಿನಮೇಲೆ ಎದ್ದು ಕಾಣುತ್ತಿರುವುದು.

೭. ಪ್ರಾಣಿಗಳ ಜೀವಿತಗಳೆಂಬ ನದಿಗಳು ಈ ಸಮುದ್ರದಲ್ಲಿ ಸೇರಿ ನಿರ್ನಾಮವಾಗಿ ಅಡಗಿ ಹೋಗಿರುವುವು. ವಿಷಯೋಪಭೋಗಗಳೆಂಬ ರತ್ನಗಣಿಗಳು ಹೇರಳವಾಗಿರುವುವು. ನಾನಾ ರೋಗಗಳೆಂಬ ಸರ್ಪಗಳು ವ್ಯಾಪಿಸಿಕೊಂಡು ಈ ಸಂಸಾರಸಾಗರವನ್ನು ಸರ್ವದಾ ಕ್ಷೋಭಗೊಳ್ಳಿಸುತ್ತಿರುವುವು. ಇಂದ್ರಿಯಗಳೆಂಬ ಮೊಸಳೆಗಳು ಭಯಂಕರವಾಗಿ ಕೂಗುತ್ತಿರುವುವು.

೮. ಅಯ್ಯ ರಾಮ, ಇಗೋ ನೋಡು. ಈ ಮುಗ್ಧಾಂಗನೆಯರೆಂಬ ಹೆಸರುಳ್ಳ ಅಲೆಗಳು ಈ ಸಂಸಾರಸಾಗರದಲ್ಲಿ ಬಹುಮನೋಹರವಾಗಿರುವಂತೆ ಅತಿ ಚಂಚಲರಾಗಿ ಸಂಚಾರ ಮಾಡುತ್ತಾ ಸರ್ವತ್ರ ವ್ಯಾಪಿಸಿಕೊಂಡಿರುವುವು. ಇವರು ಪರ್ವತ ಶಿಖರಗಳಂತೆ ಅತ್ಯಂತ ಸ್ಥೈರ್ಯದಿಂದಿರುವ ಧೀರರನ್ನು ಕೂಡ ಆಕರ್ಷಿಸುವಷ್ಟು ಸಾಮರ್ಥ್ಯವುಳ್ಳವರಾಗಿರುವರು.

೯. ಈ ಸಂಸಾರಸಾಗರದಲ್ಲಿನ ಮುಗ್ಧಾಂಗನೆಯರೆಂಬ ತರಂಗಗಳು, ಅಧರ ಕಾಂತಿಗಳೆಂಬ ಪದ್ಮರಾಗಗಳಿಂದ ಪ್ರಚುರವಾಗಿರುವುವು, ನಯನಗಳೆಂಬ ಕನ್ನೈದಿಲೆಗಳಿಂದ ನಿಬಿಡವಾಗಿರುವುವು. ದಂತಪಂಗ್ತಿಗಳೆಂಬ ಮೊಗ್ಗುಗಳಿಂದ ವ್ಯಾಪ್ತನಾಗಿರುವುವು. ಮಂದಹಾಸಗಳೆಂಬ ನೊರೆಯಿಂದ ಶೋಭಿಸುತ್ತಿರುವುವು.

ಕೇಶೇಂದ್ರ ನೀಲವಲಯಾ ಭೂವಿಲಾಸತರಂಗಿತಾಃ ।
ನಿತಂಬ ಪುಲಿನಸ್ಫೀತಾಃ ಕಂಠಕಂಬು ವಿಭೂಷಿತಾಃ ॥ ೧೦ ॥

ಲಲಾಟಮಣಿ ಪಟ್ಟಾಢ್ಯಾ ವಿಲಾಸಗ್ರಾಹ ಸಂಕುಲಾಃ ।
ಕಟಾಕ್ಷಲೋಲಗಹನಾ ಕರ್ಣಕಾಂಚನ ವಾಲುಕಾಃ ॥ ೧೧ ॥

ಏವಂ ವಿಲೋಲಲಹರೀಭೀಮಾತ್ಸಂಸಾರಸಾಗರಾತ್ ।
ಉತ್ತೀರ್ಯತೇ ಚೇನ್ಮಗ್ನೇನ ತತ್ಪರಂ ಪೌರುಷಂ ಭವೇತ್ ॥ ೧೨ ॥

ಸತ್ಯಾಂ ಪ್ರಜ್ಞಾಮಹಾನಾವಿ ವಿವೇಕೇ ಸತಿ ನಾವಿಕೇ ।
ಸಂಸಾರ ಸಾಗರಾದಸ್ಮಾದ್ಯೋ ನ ತೀರ್ಣೋ ಧಿಗಸ್ತು ತಂ ॥ ೧೩ ॥

---

೧೦. ಕೇಶಪಾಶಗಳೆಂಬ ಇಂದ್ರ ನೀಲಮಣಿಗಳಿಂದ ಸುತ್ತುವರಿದಿರುವುವು. ಕಣ್ಣು ಹುಬ್ಬುಗಳ ಲೀಲಾಮಯವಾದ ವಿಲಾಸಗಳೆಂಬ ಅಲೆಗಳ ಹೊಡೆತಗಳಿಂದ ಕೂಡಿರುವುವು. ನಿತಂಬಗಳೆಂಬ ವಿಶಾಲವಾದ ಪುಳಿನಗಳು ಇರುವುವು. ಕಂಠಗಳೆಂಬ ಶಂಖಗಳಿಂದ ಅಲಂಕೃತವಾಗಿರುವುವು.

೧೧. ಮತ್ತು ಲಲಾಟಗಳೆಂಬ ರತ್ನಗಳ ಹಲಗೆಗಳಿಂದ ತುಂಬಿರುವುವು. ವಿಲಾಸಗಳೆಂಬ ಮೊಸಳೆಗಳಿಂದ ಕೂಡಿರುವುವು. ಕಟಾಕ್ಷಗಳಿಂದ ಅತಿ ಚಂಚಲವಾಗಿರುವ ಕಾರಣ ದುರವಗಾಹಗಳಾಗಿರುವುವು, ದೇಹಕಾಂತಿಗಳೆಂಬ ಮರಳುಗಳು ತುಂಬಿಕೊಂಡಿರುವುವು.

೧೨. ಇಂತಹ ಸಂಸಾರವೆಂಬ ಸಾಗರವು ಯಾವನ ಮಹಾಮೋಹವೆಂಬ ಜಲಸಮೃದ್ಧಿಯಿಂದ ಪರಿಪೂರ್ಣವಾಗಿರುವುದೋ, ಮತ್ತು ಯಾವನು ಆ ಸಂಸಾರ ಸಾಗರದಲ್ಲಿ ಮುಳುಗಿ ಹೋಗಿರುವನೋ, ಅವನು ಇಂತಹ ಅತಿಚಂಚಲವಾದ ಪ್ರವಾಹಗಳಿಂದ ಭಯಂಕರವಾಗಿರುವ ಸಂಸಾರ ಸಮುದ್ರದ ದೆಸೆಯಿಂದ; ಉತ್ತೀರ್ಣನಾದರೆ ಅದು ಅವನ ಮಹಾ ಉತ್ತಮ ಪೌರುಷವೆನ್ನಿಸುವುದು.

೧೩. ಪ್ರಜ್ಞೆಯೆಂಬ ಸುದೃಢವಾದ ದೊಡ್ಡ ನಾವೆಯೂ ಮತ್ತು ವಿವೇಕವೆಂಬ ನಾವಿಕನೂ ಸಹಾಯಮಾಡಲು ಸಿದ್ಧವಾಗಿರುವಾಗ, ಯಾವನು ಆ ಸಾಧನೆಗಳನ್ನು ಉಪೇಕ್ಷಿಸಿ, ಉಪಯೋಗಿಸಿಕೊಳ್ಳದೆ, ಈ ಸಂಸಾರ ಸಾಗರದಿಂದ ಉತ್ತೀರ್ಣ

ಅಪಾರಾವಾರ ಮಾಕ್ರಮ್ಯ ಪ್ರಮೇಯೀಕೃತ್ಯ ಸರ್ವತಃ ।
ಸಂಸಾರಾಬ್ಧಿಂ ಗಾಹತೇ ಯಃ ಸ ಏವ ಪುರುಷಃ ಸ್ಮೃತಃ ॥ ೧೪ ॥

ವಿಚಾರ್ಯಾರ್ಯೈಃ ಸಹಾಲೋಕ್ಯ ಧಿಯಾ ಸಂಸಾರ ಸಾಗರಂ ।
ಏತಸ್ಮಿಂಸ್ತದನುಕ್ರೀಡಾ ಶೋಭತೇ ರಾಮ ನಾನ್ಯಥಾ ॥ ೧೫ ॥

ಇಹ ಭವ್ಯೋ ಭವಾನ್ಸಾಧೋ ವಿಚಾರಪರಯಾ ಧಿಯಾ ।
ತ್ವಯಾಧುನೈವ ತೇನಾಯಂ ಸಂಸಾರಃ ಪ್ರವಿಚಾರ್ಯತೇ ॥ ೧೬ ॥

ನಾಗುವುದಿಲ್ಲವೋ ಅಂತಹ ನರಾಧಮನನ್ನು ಸುಡಬೇಕು. ಅವನು ಧಿಕ್ಕಾರ ಪಾತ್ರನೇ ಸರಿ.

೧೪. ಆಚೆಯ ಮತ್ತು ಈಚೆಯ ದಡಗಳೊಂದೂ ಇಲ್ಲದೆ ಅಪರಿಮಿತವಾದ ಈ ಸಂಸಾರ ಸಮುದ್ರವನ್ನು, ತತ್ತ್ವಸಾಕ್ಷಾತ್ಕಾರ ರೂಪ ಪರಮಾರ್ಥ ಜ್ಞಾನದಿಂದ ಆಕ್ರಮಿಸಿ, ಬಾಧೆಗೊಳಿಸಿ, ಯಾವ ಮಹಾತ್ಮನು ಆ ಸಂಸಾರಸಮುದ್ರವನ್ನು ಪ್ರಮೇಯ ಬ್ರಹ್ಮಮಾತ್ರ ಸ್ವರೂಪವನ್ನಾಗಿ ಮಾಡಿಕೊಂಡು ಸರ್ವತಃ ಪ್ರವೇಶ ಮಾಡುವನೋ, ಅಂತಹ ಮಹಾತ್ಮನೇ ನಿಜವಾದ ಪುರುಷ ಧೌರೇಯನೆನ್ನಿಸುವನು. (ಮಿಕ್ಕವೆಲ್ಲರೂ ಪುರುಷಾಕಾರದಿಂದ ಸಂಚರಿಸುವ ಪಶುಗಳೇ !

೧೫. ಅಯ್ಯ ರಾಮ, ಆರ್ಯರಾದ ತತ್ತ್ವಜ್ಞಾನಿಗಳೊಡನೆ ಈ ಸಂಸಾರ ಸಮುದ್ರದ ಸ್ವರೂಪವನ್ನು, ವಿವೇಕ ಪೂರ್ಣವಾದ ಬುದ್ಧಿಯಿಂದ ಚೆನ್ನಾಗಿ ವಿಚಾರ ಮಾಡಿ, ಅದು ಕೇವಲ ಮಿಥ್ಯಾಭೂತವಾದುದೇ ಎಂದು ನಿಷ್ಕರ್ಷೆಮಾಡಿಕೊಂಡು, ಅದನ್ನು ಸ್ವಾತ್ಮತತ್ತ್ವ ಜ್ಞಾನದಲ್ಲಿ ಲಯಗೊಳ್ಳಿಸಿ, ಬಳಿಕ ಬ್ರಹ್ಮಭಾವಾಪನ್ನವಾದ ಈ ಜಗತ್ತಿನಲ್ಲಿ ಕ್ರೀಡಿಸುವುದು, ಶೋಭಿಸುವುದೇ ಹೊರತು, ಅನ್ಯಥಾ ತತ್ತ್ವಜ್ಞಾನ ರಹಿತನಾಗಿ, ಈ ಸಂಸಾರದಲ್ಲಿ ಸತ್ಯತ್ವಭ್ರಾಂತಿಯಿಂದ ವಿಹರಿಸುವುದು ಶ್ರೇಯಸ್ಕರ ವಾದುದಲ್ಲವು, ಮಹಾ ಅನರ್ಥ ಹೇತುವೇ ಆಗುವುದು.

೧೬. ಎಲೈ ಸಾಧುವೇ, ನಿನಗೆ ವಿಚಾರಪರವಾದ ಪ್ರಶಸ್ತವಾದ ವಿವೇಕ ಪೂರ್ಣವಾದ ಬುದ್ಧಿಯಿರುವ ಕಾರಣ, ನೀನು ಈ ಸಂಸಾರದಲ್ಲಿಯೂ ಪರಮ ಧನ್ಯನು. ಅದು ಕಾರಣವೇ, ಈ ಪೂರ್ವವಯಸ್ಸಿನಲ್ಲಿಯೇ ನೀನು ಈ ಸಂಸಾರ ಸ್ವರೂಪವನ್ನು ವಿಚಾರಮಾಡುತ್ತಿರುವೆ.

ಭವಾನಿವ ವಿಚಾರ್ಯಾದೌ ಸಂಸಾರಮತಿಕಾಂತಯಾ ।
ಮತ್ಯಾ ಯೋ ಗಾಹತೇ ಲೋಕೋ ನೇಹಾಸೌ ಪರಿಮಜ್ಜತಿ ॥ ೧೭ ॥

ಪೂರ್ವಂ ಧಿಯಾ ವಿಚಾರ್ಯೈತೇ ಭೋಗಾ ಭೋಗಿಭಯ ಪ್ರದಾಃ ।
ಭೋಕ್ತವ್ಯಾಶ್ಚರಮಂ ರಾಮ ಗರುಡೇನೇವ ಪನ್ನಗಾಃ ॥ ೧೮ ॥

ವಿಚಾರ್ಯ ತತ್ತ್ವಮಾಲೋಕ್ಯ ಸೇವ್ಯಂತೇ ಯಾ ವಿಭೂತಯಃ ।
ತಾ ಉದರ್ಕೋದಯಾ ಜಂತೋಃ ಶೇಷಾ ದುಃಖಾಯ ಕೇವಲಂ ॥ ೧೯ ॥

---

೧೭. ಯಾವ ಅಧಿಕಾರಿ ಪುರುಷನು, ನಿನ್ನಂತೆ ಪ್ರಥಮತಃ, ಬಹುಪ್ರಶಸ್ತವಾದ ವಿವೇಕಪೂರ್ಣವಾದ ಪ್ರಶಾಂತಬುದ್ಧಿಯಿಂದ, ವಿವೇಕಪೂರ್ವಕವಾಗಿ, ಈ ಸಂಸಾರಸ್ವರೂಪ ವಿಚಾರಮಾಡಿ, ಮಿಥ್ಯೆಯೆಂದು ತಿಳಿದು, ಪಾರಮಾರ್ಥಿಕವಾದ ಬ್ರಹ್ಮಾತ್ಮ ತತ್ತ್ವದಲ್ಲಿ ಪ್ರವೇಶಮಾಡಿ ಪರಿನಿಷ್ಠಿತನಾಗುವನೋ ಅಂತಹ ಜ್ಞಾನಿಯು ಎಂದಿಗೂ ಈ ಸಂಸಾರ ಸಾಗರದಲ್ಲಿ ಮುಳುಗಿ ಹಾಳಾಗುವುದಿಲ್ಲ.

೧೮. ಅಯ್ಯ ರಾಮ, ಗರುಡನು ಹೇಗೆ ಅಮೃತವನ್ನು ತರುವುದಕ್ಕಿಂತ ಮುಂಚೆ ಸರ್ಪಗಳನ್ನು ಉಪೇಕ್ಷೆಮಾಡಿಬಿಟ್ಟಿದ್ದನೋ, ಹಾಗೆ ಸರ್ಪಗಳಂತೆ ಭಯಪ್ರದಗಳಾಗಿರುವ ಈ ಪ್ರಾಪಂಚಿಕ ಭೋಗಗಳನ್ನು ಮೊದಲು" ವಿವೇಕ ಪೂರ್ಣವಾದ ಬುದ್ಧಿಯಿಂದ ವಿಚಾರಮಾಡಿ ಕೇವಲ ಭ್ರಾಂತಿವಿಜೃಂಭಿತಗಳೆಂದು ನಿರ್ಣಯಿಸಿ ಉಪೇಕ್ಷೆಯಿಂದ ಕಾಣಬೇಕು. ತರುವಾಯ ಗರುಡನು, ಮಾತೃಶಾಪವಿಮೋಚನಾನಂತರ ನಿಃಶಂಕನಾಗಿ ಸರ್ಪಗಳನ್ನು ತನ್ನ ಮನಬಂದಂತೆ ಉಪಭೋಗಿಸಿದ ರೀತಿಯಲ್ಲಿ ಇವುಗಳನ್ನು ಉಪಭೋಗಿಸಬೇಕು. (ಅಸಂಸಕ್ತನಾಗಿ)

೧೯. ಮೊದಲು ವಿವೇಕದಿಂದ ವಿಚಾರಮಾಡಿ ತತ್ತ್ವವನ್ನು ಸಾಕ್ಷಾತ್ಕರಿಸಿ ನಿರ್ಣಯವಾಗಿ ತಿಳಿದುಕೊಂಡು ತರುವಾಯ ಯಾವಯಾವ ಭೋಗೈಶ್ವರ್ಯಗಳನ್ನು ಮನುಷ್ಯನು ಅನುಭವಿಸುವನೋ, ಅವುಗಳೇ ಅವನಿಗೆ ಉತ್ತರೋತ್ತರ ನಿಃಶ್ರೇಯಸ ಹೇತುಗಳಾದ ಉತ್ತಮ ಫಲಗಳನ್ನು (ವಿವೇಕ ವೈರಾಗ್ಯ) ಕೊಡತಕ್ಕವುಗಳಾಗುವುವು. ಮಿಕ್ಕವುಗಳು ಕೇವಲ ದುಃಖಹೇತುಗಳೇ ಆಗುವುವು.

ಬಲಂ ಬುದ್ಧಿಶ್ಚ ತೇಜಶ್ಚ ದೃಷ್ಟತತ್ತ್ವಸ್ಯ ವರ್ಧತೇ ।
ಸವಸಂತಸ್ಯ ವೃಕ್ಷಸ್ಯ ಸೌಂದರ್ಯಾದ್ಯಾ ಗುಣಾ ಇವ ॥ ೨೦ ॥

ಘನರಸಾಯನ ಪೂರ್ಣ ಸುಶೀತಯಾ ।
ವಿಮಲಯಾ ಸಮಯಾ ಸತತಂ ಶ್ರಿಯಾ ।
ಶಿಶಿರರಶ್ಮಿರಿವಾತಿ ವಿರಾಜಸೇ ।
ವಿದಿತವೇದ್ಯ ಸುಖಂ ರಘುನಂದನ ॥ ೨೧ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷೂಪಶಮಪ್ರಕರಣೇ "ಸಂಸಾರಸಾಗರಸಾಮ್ಯಪ್ರತಿಪಾದನಂ" ನಾಮ ಷಟ್ಸಪ್ತತಿತಮಃ ಸರ್ಗಃ

೨೦. ತತ್ತ್ವಸಾಕ್ಷಾತ್ಕಾರವನ್ನು ಪಡೆದಿರುವ ಜ್ಞಾನನಿಷ್ಠನಿಗೆ, ವಸಂತ ಋತುವಿನ ಸಾಹಾಯ್ಯವನ್ನು ಪಡೆದಿರುವ ವೃಕ್ಷಕ್ಕೆ ಸೌಂದರ್ಯಾದಿ ಗುಣಗಳು ತಾವಾಗಿಯೇ ವೃದ್ಧಿ ಹೊಂದುವಂತೆ, ಬಲವೂ ಬುದ್ಧಿಯೂ ತೇಜಸ್ಸೂ ತಾವಾಗಿಯೇ ವೃದ್ಧಿ ಹೊಂದುವುವು. [ಬಲ= ಇಂದ್ರಿಯ ನಿಗ್ರಹಕ್ಕೆ ತಕ್ಕ ಸಾಮರ್ಥ್ಯ ಬುದ್ಧಿ= ಸದಸದ್ವಿವೇಕ ಪೂರ್ಣವಾದ ಮನನ ಶಕ್ತಿ ತೇಜಸ್ಸು= ಅವಿದ್ಯಾದಿ ಆವರಣಗಳನ್ನು ನಿವಾರಣೆಮಾಡಿಕೊಳ್ಳತಕ್ಕ ಜ್ಞಾನಶಕ್ತಿ.]

೨೧. ಅತ್ಯವಶ್ಯವೇದ್ಯವಾದ ಬ್ರಹ್ಮತತ್ತ್ವವನ್ನು ತಿಳಿದುಕೊಂಡಿರುವ ರಘುನಂದನನೇ, ಈಗ ನಿತ್ಯನಿರತಿಶಯಾನಂದೈಕರಸ ಘನವಾದ ಅಮೃತದಿಂದ ಪರಿಪೂರ್ಣವಾಗಿ, ಅತ್ಯಂತ ಶೀತಲವಾದ ತ್ರಿವಿಧ ಸಂತಾಪವಿರಹಿತವಾದ, ಅವಿದ್ಯಾದಿ ದೋಷರಹಿತವಾಗಿ ಸುಪ್ರಸನ್ನವಾದ ವೈಷಮ್ಯಶೂನ್ಯವಾದ (ದುಂಡಗಿರುವ= ಪೂರ್ಣ ಮಂಡಲವಾಗಿ ವಕ್ರವಲ್ಲದ)ಬ್ರಹ್ಮ ತೇಜಸ್ಸಿನಿಂದ ನಿರಂತರವೂ ಪೂರ್ಣಚಂದ್ರನಂತೆ, ಅನಾಯಾಸ ಸ್ಥಿತಿಯಲ್ಲಿ ಪರಮ ಸುಖಸ್ವರೂಪನಾಗಿ ವಿಶೇಷವಾಗಿ ವಿರಾಜಿಸುತ್ತಿರುವೆ.

ಇಂತಿದು ವಾಸಿಷ್ಠ ರಾಮಾಯಣದಉಪಶಮ ಪ್ರಕರಣದಲ್ಲಿ
" ಸಂಸಾರ ಸಾಗರ ಸಾಮ್ಯಪ್ರತಿಪಾದನ " ವೆಂಬ
ಎಪ್ಪತ್ತಾರನೆಯ ಸರ್ಗವು

ಸಪ್ತಸಪ್ತತಿತಮಃ ಸರ್ಗಃ

ಶ್ರೀರಾಮ ಉವಾಚ :—

ಸಮಾಸೇನ ಮುನೇ ಭೂಯೋ ದೃಷ್ಟತತ್ವಚಮತ್ಕೃತೇಃ ।
ಕಥಯೋದಾರ ವೃತ್ತಾಂತಂ ಕಸ್ತೇ ವಚಸಿ ತೃಪ್ಯತಿ ॥ ೧ ॥

ಶ್ರೀ ವಸಿಷ್ಠ ಉವಾಚ :—

ಜೀವನ್ಮುಕ್ತಸ್ಯ ಬಹುಧಾ ಕಥಿತಂ ಲಕ್ಷಣಂ ಮಯಾ ।
ಭೂಯೋಽಪಿ ತ್ವಂ ಮಹಾಬಾಹೋ ಕಥ್ಯಮಾನಮಿದಂ ಶೃಣು ॥ ೨ ॥

ಎಪ್ಪತ್ತೇಳನೆಯ ಸರ್ಗ

ಶ್ರೀರಾಮನು ಹೇಳಿದನು :—

೧. ಸ್ವಾಮಿ, ಬ್ರಹ್ಮರ್ಷಿವರ್ಯರಾದ ಗುರುಗಳೇ, ತಾವು ಈಗಾಗಲೇ ಅನೇಕ ಸಂದರ್ಭಗಳಲ್ಲಿ ಅಲ್ಲಲ್ಲಿ ಆತ್ಮತತ್ತ್ವ ಸಾಕ್ಷಾತ್ಕಾರಮಾಡಿಕೊಂಡಿರುವ ಜೀವನ್ಮುಕ್ತರ. ಅತಿಚಮತ್ಕಾರವಾಗಿರುವ ಲಕ್ಷಣಭೂತವಾದ ಉದಾತ್ತ ಗುಣಗಳನ್ನು ನನಗೆ ಉಪದೇಶಮಾಡಿಯೇ ಇರುವಿರಿ. ಈಗ ಮತ್ತೊಮ್ಮೆ ಆವೃತ್ತಾಂತವನ್ನು ಕೇಳಬೇಕೆಂದು ಇಚ್ಛಿಸುವೆನು. ಅದುಕಾರಣ, ತಾವು ದಯೆಮಾಡಿ ಸಂಗ್ರಹವಾಗಿ ಜೀವನ್ಮುಕ್ತರ ಲಕ್ಷಣಗಳನ್ನು ಕೇಳಬೇಕೆಂದು ತಮ್ಮನ್ನು ವಿನೀತನಾಗಿ ಪ್ರಾರ್ಥಿಸುವೆನು. ತಮ್ಮ ಉಪದೇಶವಚನಗಳೆಂಬ ಅಮೃತರಸವನ್ನು ನಿರಂತರವೂ ಪಾನಮಾಡುತ್ತಿದ್ದರೂಕೂಡ ಲೋಕದಲ್ಲಿ ಯಾವನಿಗೂ ತೃಪ್ತಿಯುಂಟಾಗುವುದಿಲ್ಲವು.

ಶ್ರೀ ವಸಿಷ್ಠರು ಹೇಳಿದರು:—

೨. ಎಲೈ ಮಹಾಬಾಹುವೇ, ನಾನು ಇದುವರೆಗೆ ಜೀವನ್ಮುಕ್ತನ ಲಕ್ಷಣಭೂತಗಳಾದ ಗುಣಗಳನ್ನು ಅನೇಕ ಪ್ರಕಾರವಾಗಿ ವರ್ಣಿಸಿರುವೆನು, ಈಗ ಮತ್ತೊಂದುಸಲವೂ ನಿನಗೆ ಸಂಗ್ರಹವಾಗಿ ಉಪದೇಶಮಾಡುವೆನು. ಅದನ್ನು ನೀನು ಅವಹಿತಚಿತ್ತನಾಗಿ ಕೇಳಿ ಅವಧರಿಸು.

ಸುಷುಪ್ತವದಿದಂ ನಿತ್ಯಂ ಪಶ್ಯತ್ಯಪಗತೈಷಣಃ ।
ಅಸದ್ರೂಪ ಮಿವಾಸಕ್ತಂ ಸರ್ವತ್ರಾಖಿಲಮಾತ್ಮವಾನ್ ॥ ૩ ॥

---

૩. ಈ ಸಮಸ್ತ ದೃಶ್ಯವಿಕಾರಜಾತವನ್ನು ಸ್ವಾತ್ಮಭಾವದಿಂದ ನೋಡುತ್ತಿರುವ ಜ್ಞಾನನಿಷ್ಠನು ಸರ್ವೈಷಣಾರಹಿತನಾಗಿ, ಈ ಸಮಸ್ತ ಜಗತ್ತೂ, ಸುಷುಪ್ತಸ್ಥಿತಿಯಲ್ಲಿ ಹೇಗೋ ಹಾಗೆ ಕಾರಣವಾದ ಸದ್ರೂಪ ಆತ್ಮನಲ್ಲಿ ಸಂಪನ್ನವಾಗಿ ಪರಮಾರ್ಥತಃ ಸರ್ವದಾ ಕಾರಣಾನನ್ಯವಾಗಿರುವುದೆಂದೂ, (ಕಾರಣಕ್ಕಿಂತ ಅತಿರಿಕ್ತವಾಗಿ ಸ್ವತಂತ್ರ ಸತ್ತೆಯನ್ನು ಪಡೆದು ಎಂದಿಗೂ ಇಲ್ಲವೆಂದೂ) ವ್ಯವಹಾರ ದೆಸೆಯಲ್ಲಿ, ಅತ್ಯಂತಾಸದ್ವಸ್ತುಗಳಾದ ಶಶವಿಷಾಣ, ಮರುಮರೀಚಿಕಾದಿಗಳಂತೆ ಭ್ರಾಂತಿಮಯವಾದ ಅಜ್ಞಾನದಿಂದ ಮಾತ್ರವೇ ತೋರುತ್ತಾ ಕಲ್ಪಿತವಾಗಿರುವುದೆಂದೂ ತಿಳಿದು ಆದುದರಿಂದಲೇ ಸರ್ವತ್ರ ಅನಾಸಕ್ತನಾಗಿ ಸರ್ವದಾ ಕಾಣುತ್ತಿರುವನು.

(ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ । ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ. ಗೀತಾ. ೬-೨೯. ಸದೇವ ಸೋಮ್ಯ ಇದಮಗ್ರ ಆಸೀತ್ ಏಕಮೇವಾ ದ್ವಿತೀಯಂ ಛಾಂದೋಗ್ಯ ೬-೨-೧. ಆತ್ಮಾವಾ ಇದಮೇಕ ಏವಾಗ್ರ ಆಸೀತ್. ಐತರೇಯ ೨-೧೧-೧. ತದೇತತ್ ಬ್ರಹ್ಮ ಅಪೂರ್ವಂ. ಅನಪರಂ ಅನಂತರಂ ಅಬಾಹ್ಯಂ ಅಯಮಾತ್ಮಾ ಬ್ರಹ್ಮ ಸರ್ವಾನುಭೂಃ ಬೃಹದಾರಣ್ಯ ೨-೫-೧೯. ಬ್ರಹ್ಮೈವೇದಮಮೃತಂ ಪುರಸ್ತಾತ್ ಮುಂಡಕ ೨-೨-೧೧. ಇತ್ಯಾದಿ ಸಾವಿರಾರು ಶ್ರುತಿಗಳು ಕಾರ್ಯವು ಕಾರಣವ್ಯತಿರಿಕ್ತವಾಗಿ ಇಲ್ಲವೇ ಇಲ್ಲವೆಂದೂ, ಕಾರಣಾಭಿನ್ನವಾದುದೆಂದೂ, ಈ ಜಗತ್ತು ಮೊದಲು ಸದ್ರೂಪವಾದ ಆತ್ಮವೇ ಆಗಿದ್ದಿತೆಂದೂ ಮುಂದೆಯೂ ಉತ್ತರತ್ರ ಕಾರಣದಲ್ಲಿಯೇ ಲಯವಾಗಿ ಕಾರಣಾತ್ಮಕವಾಗಿಯೇ ಇರುವುದೆಂದೂ ಈಗಮಾತ್ರ ಬಿಸಿಲ್ಗುದುರೆಯಂತೆ ಅಸದ್ರೂಪವಾಗಿಯೇ ಭ್ರಾಂತಿಕಲ್ಪಿತವಾಗಿ ಭಾಸಿಸುವುದೆಂದೂ ತತ್ತ್ವಜ್ಞನು ಸರ್ವದಾ ಸರ್ವವನ್ನೂ ಆತ್ಮವಾಗಿಯೇ ಕಾಣುವನೆಂದೂ ಘಂಟಾಘೋಷವಾಗಿ ಸಾರುತ್ತಿರುವುವು. ಆದರೆ ಈ ಶ್ಲೋಕದ ವ್ಯಾಖ್ಯಾನಾವಸರದಲ್ಲಿ ತಾತ್ಪರ್ಯ ಪ್ರಕಾಶ ಟೀಕಾಕಾರರು, "ವ್ಯವಹಾರ ದೃಶಾಸ-ುಪ್ತವತ್ ತಮೋಮಾತ್ರಂ, ಪರಮಾರ್ಥ ದೃಶಾತು ಬಾಧಿತಾನುವೃತ್ತಿ ಮಾತ್ರತ್ವಾತ್ ಅಸದ್ರೂಪಮಿವ" ಎಂದು ವ್ಯಾಖ್ಯಾನಮಾಡಿರುವರು. ಇದರ ಔಚಿತ್ಯವನ್ನು ಪ್ರಾಜ್ಞರಾದ ವಾಚಕರೇ ಪರ್ಯಾಲೋಚಿಸಬೇಕು. ಆರಂಭಣಾಧಿಕರಣದಲ್ಲಿ, ಕಾರ್ಯವು ಕಾರಣಾನನ್ಯವೆಂಬ ವಿಷಯವು ಸ್ಪಷ್ಟವಾಗಿ ನಿರ್ಣೀತವಾಗಿರುವುದು.

ಕೈವಲ್ಯಮಿವ ಸಂಪ್ರಾಪ್ತಃ ಪರಿಸುಪ್ತಮನಾ ಇವ ।
ಘೂರ್ಣಮಾನ ಇವಾನಂದೀ ತಿಷ್ಠತ್ಯಧಿಗತಾತ್ಮದೃಕ್ ॥ ೪ ॥

ನಾದತ್ತಮಪ್ಯುಪಾದತ್ತೇ ಗೃಹೀತಮಪಿ ಪಾಣಿನಾ ।
ಅಂತರ್ಮುಖತಯೋದಾತ್ತ ರೂಪಯಾ ಸಮಯಾ ಧಿಯಾ ॥ ೫ ॥

ಯಂತ್ರ ಪುತ್ರಕ ಸಂಚಾರ ಇತೀಮಂ ಜನತಾಕ್ರಮಂ ।
ಅಂತಃಸಂಲೀನಯಾ ದೃಷ್ಟ್ಯಾ ಪಶ್ಯನ್ ಹಸತಿ ಶಾಂತಧೀಃ ॥ ೬ ॥

---

೪. ಆತ್ಮ ತತ್ತ್ವಜ್ಞಾನವನ್ನು ಸಂಪಾದಿಸಿಕೊಂಡ ಮಹನೀಯನು ಒಂದೊಂದುಸಲ, ಕೈವಲ್ಯವನ್ನು ಪಡೆದವನಂತೆಯೂ, ನಿಷ್ಪ್ರಪಂಚಾತ್ಮ ಭಾವಾಪತ್ತಿಯಿಂದ, ಸುಷುಪ್ತ ಸ್ಥಿತಿಯಂತೆ ಸ್ವಸ್ಥವಾದ ವ್ಯವಹಾರ ಪರಾಙ್ಮುಖವಾದ ಮನಸ್ಸುಳ್ಳವನಂತೆಯೂ, ಒಂದೊಂದುಸಲ, ಅಲ್ಲಿಂದಿಲ್ಲಿಗೆ ಓಡಾಡುತ್ತಾ ವ್ಯವಹಾರ ನಿರತನಾದವನಂತೆಯೂ ಕಾಣುತ್ತಿದ್ದರೂ, ಸರ್ವದಾ ಸರ್ವಾವಸ್ಥೆಗಳಲ್ಲಿಯೂ, ಆನಂದಿಯಾಗಿಯೇ ಇರುವನು.

೫. ಜ್ಞಾನನಿಷ್ಠನು, ಪ್ರಥಮತಃ ಚಕ್ಷುರಾದೀಂದ್ರಿಯಗಳಿಂದ ಗ್ರಹಿಸಿ ತರುವಾಯ ತನ್ನ ಕೈಯ್ಯಿಂದ ಎತ್ತಿ ಹಿಡಿದುಕೊಂಡಿರತಕ್ಕಂತಹದುದಾಗಿದ್ದರೂ ಧನ ವಸ್ತ್ರಾದಿ ಯಾವುದೊಂದೂ ವಸ್ತುವನ್ನೂ, ಇವನು ಬಾಹ್ಯವ್ಯವಹಾರ ಪರಾಙ್ಮುಖನಾಗಿ ಸರ್ವದಾ ಅಂತರ್ಮುಖನಾಗಿ ಆತ್ಮತತ್ತ್ವಾನುಸಂಧಾನ ಪರನಾಗಿರುವ ಕಾರಣ, ಅತ್ಯಂತ ಉಚ್ಚಸ್ಥಿತಿಯಲ್ಲಿದ್ದುಕೊಂಡು ಮಹಾ ಉದಾರವಾಗಿಯೂ ಸದಾ ಸರ್ವತ್ರ ಸಮವಾಗಿ ಅವಿಕೃತವಾಗಿಯೂ ಇರುವ ಬುದ್ಧಿಯಿಂದ ಪರಿಗ್ರಹಮಾಡದವನಾಗಿಯೇ ಇರುವನು.

೬, ಜ್ಞಾನನಿಷ್ಠನು ಲೋಕದಲ್ಲಿನ ಪ್ರಾಣಿಸಮುದಾಯಗಳು ಪ್ರತಿನಿತ್ಯವೂ ವ್ಯವಹರಿಸುವ ಸಕಲ ವ್ಯಾಪಾರಗಳನ್ನೂ, ಅವು ಅಸಂಗನೂ ಉದಾಸೀನ ಸ್ವಭಾವನೂ ಆಗಿರುವ ಆತ್ಮನ ಸಾನ್ನಿಧ್ಯ ಮಾತ್ರದಿಂದಲೇ ಪ್ರವೃತ್ತವಾಗಿರುವ ಕಾರಣ, ಯಂತ್ರಗಳ ಸಹಾಯದಿಂದ ಚಲಿಸುವ, ಶಿಲಾದಾರ್ವಾದಿಮಯ ಪ್ರತಿಮೆಗಳ ವ್ಯವಹಾರ ಸದೃಶವಾದುದೇ, ಎಂದು ಅಂತರ್ಮುಖವಾಗಿ, ಸ್ವಾತ್ಮಭಾವಾಪತ್ತಿಯಿಂದ ಸದ್ರೂಪ ಆತ್ಮತತ್ತ್ವದಲ್ಲಿ ಮಾತ್ರ ಪ್ರಶಾಂತವಾದ ಬುದ್ಧಿಯುಳ್ಳವನಾಗಿ, ಅವಿಕೃತನಾಗಿಯೇ ಆತ್ಮಾರಾಮನಾಗಿ ಸಂತೋಷದಿಂದಿರುವನು.

ನೋಪೇಕ್ಷತೇ ಭವಿಷ್ಯಂ ಚ ವರ್ತಮಾನೇ ನ ತಿಷ್ಠತಿ ।
ನ ಸಂಸ್ಮರತ್ಯತೀತಂ ಚ ಸರ್ವಮೇವ ಕರೋತಿ ಚ ॥ ೭ ॥

ಸುಪ್ತಃ ಪ್ರಬುದ್ಧೋ ಭವತಿ ಪ್ರಬುದ್ಧೋಽಪಿ ಚ ಸುಪ್ತವಾನ್ ।
ಸರ್ವಂ ಕರ್ಮ ಕರೋತ್ಯಂತರ್ನ ಕರೋತಿ ಚ ಕಿಂಚನ ॥ ೮ ॥

ಅಂತಃ ಸರ್ವಪರಿತ್ಯಾಗೀ ನಿತ್ಯಮಂತರನೇಷಣಃ ।
ಕುರ್ವನ್ನಪಿ ಬಹಿಃ ಕಾರ್ಯಂ ಸಮಮೇವಾವತಿಷ್ಠತೇ ॥ ೯ ॥

---

೭. ಇನ್ನುಮುಂದೆ ತನಗೆ ಇಂತಹ ಫಲವು ಲಭಿಸಬೇಕೆಂದು ಇವನು ಅಪೇಕ್ಷಿಸುವುದೂ ಇಲ್ಲ. ಈಗ ಲಬ್ಧವಾಗಿರತಕ್ಕ ಸುಖದುಃಖಾದಿ ಫಲದಲ್ಲಿ ಆಸ್ಥೆಯನ್ನಿಡುವುದೂ ಇಲ್ಲ. ಹಿಂದೆ ಕಳೆದು ಹೋದುದನ್ನು ಸ್ಮರಿಸಿಕೊಂಡು ಪಶ್ಚಾತ್ತಾಪ ಪಡುವುದೂ ಇಲ್ಲ. ಆದರೂ ಕೂಡ, ಇತರರಂತೆಯೇ ತಾನೂ ಎಲ್ಲ ವ್ಯವಹಾರಗಳನ್ನೂ ಮಾಡುತ್ತಲೂ ಇರುವನು.

೮. ತತ್ತ್ವಜ್ಞನು, ಪ್ರಪಂಚ ವ್ಯವಹಾರದಲ್ಲಿ ಸುಪ್ತಪ್ರಾಯನಾಗಿರುತ್ತಿದ್ದರೂ ಪಾರಮಾರ್ಥಿಕವಾದ ಸ್ವಾತ್ಮದರ್ಶನದಲ್ಲಿ ಪ್ರಬುದ್ಧನಾಗಿಯೇ ಇರುವನು. ಒಂದು ವೇಳೆ ಇವನು ಪ್ರಪಂಚ ವ್ಯವಹಾರದಲ್ಲಿ ಪ್ರಬುದ್ಧನಾಗಿರುವವನಂತೆ ಕಂಡು ಬಂದರೂ ವಸ್ತುತಃ ಅವನು ಅದರಲ್ಲಿ ಸುಪ್ತನಾಗಿಯೇ ಇರುವನು. ಅವನು ಬಾಹ್ಯ ದೃಷ್ಟಿಯಲ್ಲಿ ಸಕಲ ಕರ್ಮಗಳನ್ನೂ ಮಾಡುತ್ತಿರುವನು. ಆದರೆ ಅಂತರಂಗದಲ್ಲಿ ಯಾವುದೊಂದು ವ್ಯವಹಾರವನ್ನು ಮಾಡದವನಾಗಿಯೇ ಸ್ವಸ್ಥನಾಗಿರುವನು.

(ಯಾ ನಿಶಾಸರ್ವಭೂತಾನಾಂ ತಸ್ಯಾಂಜಾಗರ್ತಿ ಸಂಯಮೀ । ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋಮುನೇಃ ಗೀತಾ ೨-೬೯. ಭಾಷ್ಯಸಹಿತವಾಗಿ ಓದಿತಿಳಿಯಿರಿ.)

೯. ತತ್ತ್ವಜ್ಞನು, ಸರ್ವದಾ ಮನಸ್ಸಿನೊಳಗೆ ಸಮಸ್ತವನ್ನೂ ಪರಿತ್ಯಾಗ ಮಾಡಿರುವನು. ಇವನ ಮನಸ್ಸಿನಲ್ಲಿ ಸಮಸ್ತ ಏಷಣೆಗಳೂ ಸಂಪೂರ್ಣವಾಗಿ, ನಿರಂತರವೂ ಇಲ್ಲದೆ ಹೋಗಿಬಿಟ್ಟಿರುವುವು. ಮತ್ತು ಇವನು ಬಹಿಃ ಕಾರ್ಯ

ಬಹಿಃ ಪ್ರಕೃತಸರ್ವೇಹೋ ಯಥಾ ಪ್ರಾಪ್ತ ಕ್ರಿಯೋನ್ಮುಖಃ ।
ಸ್ವಕರ್ಮಕ್ರಮ ಸಂಪ್ರಾಪ್ತ ಬಂಧು ಕಾರ್ಯಾನುವೃತ್ತಿಮಾನ್ ॥ ೧೦ ॥

ಸಮಗ್ರಸುಖಭೋಗಾತ್ಮಾ ಸರ್ವಾಶಾಸ್ವಿವ ಸಂಸ್ಥಿತಃ ।
ಕರೋತ್ಯಖಿಲಕರ್ಮಾಣಿ ತ್ಯಕ್ತಕರ್ತೃತ್ವವಿಭ್ರಮಃ ॥ ೧೧ ॥

ಉದಾಸೀನವದಾಸೀನಃ ಪ್ರಕೃತಃ ಕ್ರಮಕರ್ಮಸು ।
ನಾಭಿವಾಂಛತಿ ನ ದ್ವೇಷ್ಟಿ ನ ಶೋಚತಿ ನ ಹೃಷ್ಯತಿ ॥ ೧೨ ॥

ಗಳನ್ನು ಮಾಡುತ್ತಿರುವವನಾಗಿ ಕಂಡರೂ ಕೂಡ, ಸಿದ್ಧ್ಯಸಿದ್ಧಿಗಳಲ್ಲಿ ಏಕರೀತಿಯಾದ ವರ್ತನವುಳ್ಳವನಾಗಿಯೇ ಸರ್ವದಾ ಇದ್ದುಕೊಂಡಿರುವನು.

(ಗೀತಾ ಅಧ್ಯಾಯ ೪. ಶ್ಲೋಕಗಳು ೧೯ರಿಂದ ೨೩ರವರೆಗೆ ನೋಡಿ)

೧೦. ಜ್ಞಾನನಿಷ್ಠನು, ಸಕಲ ಕಾಮಗಳನ್ನೂ ಜಯಿಸಿದವನಾಗಿ (ಅಂದರೆ ಕಾಮಗಳವಶವರ್ತಿಯಾಗದವನಾಗಿ) ಹೊರಗಡೆ ಯಾದೃಚ್ಛಿಕವಾಗಿ ಸಂಪ್ರಾಪ್ತವಾದ ಕೇವಲ ಶಾರೀರ ಕರ್ಮಗಳಲ್ಲಿ ಮಾತ್ರ ಅಭಿಮುಖನಾಗಿರುವನು. ಮತ್ತು ತನ್ನ ದೇಹ ವರ್ಣಾಶ್ರಮೋಚಿತವಾದ ಕರ್ಮವನ್ನೂ ಪಿತೃಪಿತಾಮಹಾದಿವಂಶ ಪಾರಂಪರ್ಯವಾಗಿ ಕ್ರಮ ಪ್ರಾಪ್ತವಾದ ರಾಜ್ಯಾದಿಗಳನ್ನೂ ಮತ್ತು ಬಂಧು ಜನಗಳಿಗೆ ಮಾಡಬೇಕಾದ ದಾನಮಾನಾದಿಗಳನ್ನು ಮಾತ್ರವೇ ಅನುವರ್ತಿಸಿಕೊಂಡಿರುವನು.

೧೧. ತತ್ತ್ವಜ್ಞನು- ಸಮಸ್ತ ಸುಖ ಭೋಗಗಳೂ ತನ್ನ ಆತ್ಮವಾಗಿಯೇ ಉಳ್ಳವನಾಗಿ (ಅಥವಾ ಸಮಸ್ತ ಸುಖಭೋಗಗಳಿಗೂ ತಾನೇ ಆತ್ಮನಾಗಿ) ಇರುತ್ತಾ ಬೋಗ ಕಾಲದಲ್ಲಿ ಸಕಲ ವಿಷಯಗಳ ಆಶೆಗಳಲ್ಲಿ ಆಸ್ಥೆಯುಳ್ಳವನಂತೆ ಅಜ್ಞ ದೃಷ್ಟಿಯಿಂದ ಮಾತ್ರ ತೋರುವನು. (ಆದರೆ ಅಜ್ಞ ಜನರಿಗಿರುವಂತೆ ಅದರಲ್ಲಿ ಇವನಿಗೆ ಭೋಕ್ತೃತ್ವಾಭಿಮಾನವು ಇರುವುದಿಲ್ಲ) ಮತ್ತು ತತ್ತ್ವಜ್ಞನು ತಾನು ಕರ್ತೃವೆಂಬ ಭ್ರಾಂತಿ ಮೂಲವಾದ ಕರ್ತೃತ್ವಾಭಿಮಾನವು ಸುತರಾಂ ಇಲ್ಲದವನಾಗಿಯೇ ಸಕಲ ಕರ್ಮಗಳನ್ನು ಮಾಡುತ್ತಿರುವನು.

೧೨. ತತ್ತ್ವಜ್ಞನು ತಾನಾಗಿ ಕ್ರಮ ಪ್ರಾಪ್ತವಾದ ಸಕಲ ಕರ್ಮಗಳಲ್ಲಿ ವ್ಯಾಪೃತನಾಗಿದ್ದರೂ ಉದಾಸೀನನಂತೆಯೇ ಇರುತ್ತಾ ಆ ವ್ಯವಹಾರದಿಂದ ಪ್ರಾಪ

ಅನುಬಂಧಪರೇ ಜಂತಾವಸಂಸಕ್ತೇನ ಚೇತಸಾ ।
ಭಕ್ತೇ ಭಕ್ತಸಮಾಚಾರಃ ಶಠೇ ಶಠ ಇವ ಸ್ಥಿತಃ ॥ ೧೩ ॥

ಬಾಲೋ ಬಾಲೇಷು ವೃದ್ಧೇಷು ವೃದ್ಧೋ ಧೀರೇಷು ಧೈರ್ಯವಾನ್ ।
ಯುವಾ ಯೌವನ ವೃತ್ತೇಷು ದುಃಖಿತೇಷ್ವನುದುಃಖಿತಃ ॥ ೧೪ ॥

ಪ್ರವೃತ್ತವಾಕ್ಪುಣ್ಯಕಥೋ ದೈನ್ಯಾದ್ವ್ಯಪಗತಾಶಯಃ ।
ಧೀರಧೀ ರುದಿತಾನಂದಃ ಪೇಶಲಃ ಪುಣ್ಯಕೀರ್ತನಃ ॥ ೧೫ ॥

ವಾದ ಇಷ್ಟ ಫಲವನ್ನು ಅಪೇಕ್ಷಿಸುವುದಿಲ್ಲ ಅನಿಷ್ಟ ಫಲವನ್ನು ದ್ವೇಷಿಸುವುದಿಲ್ಲ. ಅನಿಷ್ಟ ಫಲವು ಪ್ರಾಪ್ತವಾದಾಗ ದುಃಖಿಸುವುದಿಲ್ಲ. ಇಷ್ಟ ಫಲ ಲಾಭದಿಂದ ಸಂತೋಷಿಸುವುದೂ ಇಲ್ಲ.

೧೩-೧೪. ತನಗೆ ಯಾರಾದರೂ ಅನುಕೂಲ್ಯವನ್ನಾಗಲಿ ಅಥವಾ ಪ್ರಾತಿಕೂಲ್ಯವನ್ನಾಗಲಿ ಆಚರಿಸುವುದರಲ್ಲಿ ನಿರತರಾಗಿದ್ದರೂ, ತತ್ತ್ವಜ್ಞನು ಮಾತ್ರ ಸರ್ವತ್ರ ಅಸಂಸಕ್ತವಾದ ಮನಸ್ಸಿನಿಂದ ಭಕ್ತರ ವಿಷಯದಲ್ಲಿ ಭಕ್ತನಂತೆ ಆಚರಿಸುತ್ತಲೂ, ಧೂರ್ತರ ವಿಷಯದಲ್ಲಿ ಧೂರ್ತನಂತೆಯೂ, ಬಾಲಕರಲ್ಲಿ ಬಾಲಕನಂತೆಯೂ, ವೃದ್ಧರ ವಿಷಯದಲ್ಲಿ ವೃದ್ಧನಂತೆಯೂ, ಧೀರರಲ್ಲಿ ಧೈರ್ಯಶಾಲಿಯಂತೆಯೂ, ಯೌವನಸ್ಥರಲ್ಲಿ ಯುವಕನಂತೆಯೂ, ದುಃಖಿತರಲ್ಲಿ ತಾನೂ ಅವರಂತೆಯೇ ದುಃಖಿತನಾಗಿರುವಂತೆಯೂ ವ್ಯವಹಾರ ಮಾಡಿಕೊಂಡಿರುವನು.

೧೫. ತತ್ತ್ವಜ್ಞನು ಮಾತನಾಡುವುದರಲ್ಲಿ ಪ್ರವೃತ್ತನಾದರೆ ಅವನು ಯಾವಾಗಲೂ, ಅತಿ ಪವಿತ್ರಗಳಾದ ಕಥೆಗಳನ್ನೇ ಹೇಳುವನು. (ಬಾಲರಂತೆಯೂ ಇತರ ಅಜ್ಞ ಜನರಂತೆಯೂ ವ್ಯರ್ಥವಾಗಿ ಪ್ರಲಪಿಸುವುದಿಲ್ಲ.) ಇವನ ಮನಸ್ಸು ಸರ್ವದಾ ದೈನ್ಯವನ್ನು ಸಂಪೂರ್ಣವಾಗಿ ಕಳೆದುಕೊಂಡಿರುವುದು, ಇವನು ಸರ್ವದಾ ಧೀರವಾದ ವಿಕಾರಗಳಿಗೆ ಒಳಪಡದ ಬುದ್ಧಿಯುಳ್ಳವನಾಗಿಯೂ, ನಿರತಿಶಯಾನಂದರಸಾವಿರ್ಭಾವವುಳ್ಳವನಾಗಿಯೂ, ಅತ್ಯಂತ ಮೃದುಮಧುರ ಸ್ವಭಾವವುಳ್ಳವನಾಗಿಯೂ, ಪುಣ್ಯಕೀರ್ತನನಾಗಿಯೂ ಇರುವನು. (ಲೋಕದಲ್ಲಿ ಯಾವನ ಕೀರ್ತನಗಳು ಪುಣ್ಯಕರವಾಗಿವೆಯೋ ಅವನು ಪುಣ್ಯಕೀರ್ತನನು.)

ಪ್ರಾಜ್ಞಃ ಪ್ರಸನ್ನಮಧುರಃ ಪೂರ್ಣಃ ಸ್ವಪ್ರತಿಭೋದಯೇ ।
ನಿರಸ್ತಖೇದ ದೌರ್ಗತ್ಯಃ ಸರ್ವಸ್ಮಿನ್ಸ್ನಿಗ್ಧ ಬಾಂಧವಃ ॥ ೧೬ ॥

ಉದಾರರುಚಿರಾಕಾರಃ ಸಮಃ ಸೌಮ್ಯಸುಖೋದಧಿಃ ।
ಸುಸ್ನಿಗ್ಧಃ ಶೀತಲಸ್ಪರ್ಶಃ ಪೂರ್ಣಚಂದ್ರ ಇವೋದಿತಃ ॥ ೧೭ ॥

ನ ತಸ್ಯ ಸುಕೃತೇನಾರ್ಥೋ ನ ಭೋಗೈರ್ನ ಚ ಕರ್ಮಭಿಃ ।
ನ ದುಷ್ಕೃತೈರ್ನ ಭೋಗಾನಾಂ ಸಂತ್ಯಾಗೇನ ನ ಬಂಧುಭಿಃ ॥ ೧೮ ॥

---

೧೬. ತತ್ತ್ವಜ್ಞನು, ಸರ್ವದಾ ಪ್ರಾಜ್ಞನಾಗಿಯೂ, ಸೌಮ್ಯನಾಗಿಯೂ ಮಧುರನಾಗಿಯೂ, ತನ್ನ ಪ್ರತಿಭಾವಿಶೇಷದ ಅವಿರ್ಭಾವದಿಂದ ಪರಿಪೂರ್ಣನಾಗಿಯೂ, ಸಮಸ್ತ ಖೇದಗಳಿಂದಲೂ ದೌರ್ಗತ್ಯದಿಂದಲೂ ವಿವರ್ಜಿತನಾಗಿಯೂ ಸರ್ವಜನರಲ್ಲಿಯೂ ಮಿತ್ರಶತ್ರುಗಳು, ಆತ್ಮೀಯ ಪರಕೀಯರೆಂಬ ಭೇದ ಭಾವವಿಲ್ಲದೆ, ಒಂದೇ ರೀತಿಯಾಗಿ ಸ್ನೇಹರಸ ಪೂರ್ಣವಾದ ಬಂಧುವಾಗಿಯೂ, ಇರುವನು.

೧೭. ಮತ್ತು ಸ್ಥಿತಪ್ರಜ್ಞನ ಆಚಾರವೂ ಆಕಾರವೂ ಅತ್ಯುದಾರವಾಗಿರುವುವು, ಅವನು ಸರ್ವಾವಸ್ಥೆಗಳಲ್ಲಿಯೂ ಸಮನಾಗಿರುವನು, ಸದಾ ಸೌಮ್ಯನಾಗಿಯೂ ಆನಂದಸಾಗರನಾಗಿಯೂ, ಎಲ್ಲರಲ್ಲಿಯೂ ಒಂದೇ ಸಮವಾಗಿ ಸಂಪೂರ್ಣ ಸ್ನೇಹವುಳ್ಳವನಾಗಿಯೂ ಇರುವನು. ಮತ್ತು ನಿಶಾಮುಖದಲ್ಲಿ ಉದಯಿಸಿದ ಪೂರ್ಣಿಮಾ ಪೂರ್ಣಚಂದ್ರನು ತನ್ನ ಹಿಮಮಯವಾದ ಸುಶೀತಲ ಕಿರಣ ಸಂಪರ್ಕದಿಂದ ಸಂತಾಪವನ್ನು ಪರಿಹರಿಸುವಂತೆ, ಈ ತತ್ತ್ವಜ್ಞನು ತನ್ನ ಸಂಸಂಗದಿಂದ ಜನರ ಸಕಲ ತ್ರಿವಿಧತಾಪಗಳನ್ನೂ ಪರಿಹರಿಸುವಷ್ಟು ಶೀತಲವಾದ ಸ್ವಭಾವವುಳ್ಳವನಾಗಿರುವನು.

೧೮ ಅಂತಹ ಜೀವನ್ಮುಕ್ತನಿಗೆ, ಪುಣ್ಯದಿಂದ ಯಾವದೊಂದು ಪ್ರಯೋಜನವೂಇಲ್ಲ. ಭೋಗಗಳಿಂದಲೂ, ಕರ್ಮಗಳಿಂದಲೂ ದುಷ್ಕೃತಗಳಿಂದಲೂ ಅನಿಷಿದ್ಧಗಳಾದ ಭೋಗಗಳನ್ನು ಪರಿತ್ಯಾಗಮಾಡುವುದರಿಂದಲೂ, ಬಂಧುಮಿತ್ರರಿಂದಲೂ ಯಾವಪ್ರಯೋಜನವೂ ಎಂದಿಗೂ ಸ್ವಲ್ಪವೂ ಇಲ್ಲವೇ ಇಲ್ಲ

ನ ಕಾರ್ಯಕರಣಾರಂಭೈರ್ನ ನಿಷ್ಕೃತತಯಾ ತಥಾ ।
ನ ಬಂಧೇನ ನ ಮೋಕ್ಷೇಣ ನ ಪಾತಾಲೇನ ನೋ ದಿವಾ ॥ ೧೯ ॥

ಯಥಾವಸ್ತು ಯಥಾದೃಷ್ಟಂ ಜಗದೇಕಮಯಾತ್ಮಕಂ ।
ತದಾ ಬಂಧವಿಮೋಕ್ಷಾಣಾಂ ನ ಕ್ವಚಿತ್ಕೃಪಣಂ ಮನಃ ॥ ೨೦ ॥

ಸಮ್ಯಕ್ ಜ್ಞಾನಾಗ್ನಿನಾ ಯಸ್ಯ ದಗ್ಧಾಃ ಸಂದೇಹಜಾಲಿಕಾಃ ।
ನಿಃಶಂಕಮಲಮುಡ್ಡೀನಸ್ತಸ್ಯ ಚಿತ್ತವಿಹಂಗಮಃ ॥ ೨೧ ॥

---

೧೯. ಮತ್ತು ಅವಶ್ಯಕರ್ತವ್ಯಗಳಾಗಿಯೂ ಐಹಿಕಾಮುಷ್ಮಿಕಫಲ ಕಾರಣಗಳಾಗಿಯೂ ಇರುವ ಕರ್ಮಗಳನ್ನು ಆಚರಿಸುವುದರಿಂದಲೂ ಯಾವ ಪ್ರಯೋಜನವೂ ಇಲ್ಲ. ಅಂತೆಯೇ, ಸರ್ವಕರ್ಮಸನ್ಯಾಸದಿಂದ ನಿಷ್ಕ್ರಿಯನಾಗಿರುವುದರಿಂದಲೂ ಪ್ರಯೋಜನವಿಲ್ಲ. ಮತ್ತು ತತ್ತ್ವಜ್ಞನಿಗೆ ಬಂಧದಿಂದಲೂ ಹಾನಿಯಿಲ್ಲ. ಮೋಕ್ಷದಿಂದಲೂ. ಪ್ರಯೋಜನವಿಲ್ಲ! ಪಾತಾಳಲೋಕದಿಂದಲೂ ಮತ್ತು ಸ್ವರ್ಗಲೋಕದಿಂದಲೂ ಯಾವುದೊಂದೂ ಅರ್ಥವೂ ಇಲ್ಲವೇ ಇಲ್ಲ. (ಭಗವದ್ಗೀತಾ ಅಧ್ಯಾಯ ೩ ಶ್ಲೋಕ ೧೭-೧೮. ನೋಡಿ)

೨೦. ಈ ಜಗತ್ತೆಲ್ಲವೂ ಅದ್ವಿತೀಯವಾದ ಬ್ರಹ್ಮಮಯವಾಗಿರುವ ಕಾರಣ ಸ್ವಾತ್ಮಭೂತವಾದುದೇ ಎಂಬುದಾಗಿ ವಸ್ತು ಸ್ವಭಾವಾನುಗುಣವಾಗಿ ಯಥಾವಸ್ಥಿತವಾದ ರೀತಿಯಲ್ಲಿ ತಾತ್ತ್ವಿಕವಾಗಿ ಜ್ಞಾನನಿಷ್ಠನು ಯಾವಾಗ ತಿಳಿದುಕೊಂಡುಬಿಟ್ಟಿರುವನೋ ಆಗಲೇ ಬಂಧಗಳಾದ ಸಾಂಸಾರಿಕ ಸುಖಗಳ ಮತ್ತು ವಿಮೋಕ್ಷಗಳಾದ ಸರ್ವ ದುಃಖಗಳ ಅಂತೆಯೇ ಆ ದುಃಖ ಕಾರಣಗಳ ನಿವೃತ್ತಿಗಳ ಮಧ್ಯದಲ್ಲಿ ಯಾವದೊಂದರಲ್ಲಿಯೂ ಜ್ಞಾನನಿಷ್ಠನ ಮನಸ್ಸು ಕಾರ್ಪಣ್ಯಯುಕ್ತವಾಗಿರುವುದಿಲ್ಲ.

೨೧. ಯಾವ ತತ್ತ್ವಜ್ಞನು ತನ್ನ ಯಥಾರ್ಥವಾದ ಆತ್ಮತತ್ತ್ವಜ್ಞಾನವೆಂಬ ಅಗ್ನಿಯಿಂದ ಸಂದೇಹಗಳೆಂಬ ಬಲೆಗಳನ್ನು ಸುಟ್ಟುಬಿಡುವನೋ ಅವನ ಮನಸ್ಸೆಂಬ ಪಕ್ಷಿಯು ಬಂಧನದಿಂದ ತಪ್ಪಿಸಿಕೊಂಡು ನಿರಾತಂಕವಾಗಿ ಬಲು ಬೇಗನೆ ಹಾರಿ ಹೋಗಿ ಪರಮಾಕಾಶದಲ್ಲಿ ವಿಹರಿಸಿಕೊಂಡಿರುವುದು.

ಯಸ್ಯ ಭ್ರಾಂತಿವಿನಿರ್ಮುಕ್ತಂ ಮನಃ ಸಮರಸಂ ಸ್ಥಿತಂ ।
ನಾಸ್ತಮೇತಿ ನ ಚೋದೇತಿ ವ್ಯೋಮವತ್ಸರ್ವ ದೃಷ್ಟಿಷು ॥ ೨೨ ॥

ಮಂಜೂಷಾಯಾಂ ನಿಷಣ್ಣಸ್ಯ ಯಥಾ ಬಾಲಸ್ಯ ಚೇಷ್ಟತೇ ।
ಅಂಗಾವಲ್ಯನು ಸಂಧಾನ ವರ್ಜಿತಂ ಯಸ್ಯ ವೈ ತಥಾ ॥ ೨೩ ॥

ಘೂರ್ಣಕ್ಷೀಬ ಇವಾನಂದೀ ಮಂದೀಭೂತ ಪುನರ್ಭವಃ ।
ಅನುಪಾದೇಯಬುದ್ಧ್ಯಾ ತು ನ ಸ್ಮರತ್ಯಕೃತಂ ಕೃತಂ ॥ ೨೪ ॥

ಸರ್ವಂ ಸರ್ವಪ್ರಕಾರೇಣ ಗೃಹ್ಣಾತಿ ಚ ಜಹಾತಿ ಚ ।
ಅನುಪಾದೇಯ ಸರ್ವಾರ್ಥೋ ಬಾಲವಚ್ಚ ವಿಚೇಷ್ಟತೇ ॥ ೨೫ ॥

ಸ ತಿಷ್ಠನ್ನಪಿ ಕಾರ್ಯೇಷು ದೇಶಕಾಲಕ್ರಿಯಾಕ್ರಮೈಃ ।
ನ ಕಾರ್ಯಸುಖದುಃಖಾಭ್ಯಾಂ ಮನಾಗಪಿ ಹಿ ಗೃಹ್ಯತೇ ॥ ೨೬ ॥

೨೨-೨೬. ಯಾವ ಮಹಾನುಭಾವನ ಮನಸ್ಸು ಸರ್ವದಾ ಸಕಲ ಭ್ರಾಂತಿಗಳಿಂದ ವಿವರ್ಜಿತವಾಗಿ ಬ್ರಹ್ಮಭಾವಾಪನ್ನವಾಗಿ ಸರ್ವ ವ್ಯವಹಾರ ದೃಷ್ಟಿಗಳಲ್ಲಿಯೂ, ಆಕಾಶದಂತೆ ನಿರ್ಲಿಪ್ತವಾಗಿರುತ್ತಾ ದುಃಖ ಭರದಿಂದ ಅಸ್ತಂಗತವಾಗದೆಯೂ ಸುಖಾಧಿಕ್ಯದಿಂದ ಉದಯಿಸದೆಯೂ ಅವಿಕಾರಿಯಾಗಿರುವುದೋ ಮತ್ತು ಯಾವಾತನ ಕರಚರಣಾದ್ಯವಯವ ಸಮುದಾಯವು ತೊಟ್ಟಿಲಿನಲ್ಲಿ ಸುಖವಾಗಿ ಮಲಗಿರುವ ಮಗುವಿನ ಅಂಗಗಳಂತೆ ಯಾವೊಂದು ಅನುಸಂಧಾನವೂ ಇಲ್ಲದೆ ತಾನಾಗಿಯೇ ಸ್ವಾನಂದಾವಿರ್ಭಾವೋಲ್ಲಾಸದಿಂದ ಮಾತ್ರವೇ ಚಲಿಸುವುದೋ ಮತ್ತು ಯಾವನು ಲೋಕದಲ್ಲಿ ಮಧು ಮತ್ತನಂತೆ ಯಾವುದೊಂದು ಉದ್ದೇಶವೂ ಇಲ್ಲದೆ ಅಲ್ಲಿ ಇಲ್ಲಿ ತಿರುಗಾಡುತ್ತಲೂ, ಪ್ರೇಮರತು ಆನಂದ ನಿರ್ಭರನಾಗಿ ದೇಹಾಭಿಮಾನವನ್ನು ಬಿಟ್ಟು ಸ್ವಾತ್ಮಾನಂದ ರೂಪನಾಗಿರುವನೋ, ಯಾವನು ಪುನರ್ಜನ್ಮಗಳ ಬಾಧೆಯಿಂದ ಸಂಪೂರ್ಣವಾಗಿ ತಪ್ಪಿಸಿಕೊಂಡು ಈ ಪ್ರಪಂಚದಲ್ಲಿ ತನಗೆ ಯಾವುದೊಂದೂ ಉಪಾದೇಯವಾಗಿಲ್ಲವೆಂದು ಭಾವಿಸಿ, ಸರ್ವತ್ರ ಅನುಪಾದೇಯ ಬುದ್ಧಿಯನ್ನು ಆಶ್ರಯಿಸಿ ಇದು ಕೃತವು ಅದು ಅಕೃತವು ಇದನ್ನು ನಾನು ಮಾಡಿದೆನು. ಅದನ್ನು ಇನ್ನೂ ಮಾಡಿಲ್ಲ ಎಂಬುದನ್ನು ಸ್ಮರಣೆಗೆ ಬರುವಂತೆ ಮಾಡುವ ಕ್ರಿಯಾ ಫಲಗಳಲ್ಲಿ ಉಪಾದೇಯತಾ ಬುದ್ಧಿಯಿಲ್ಲದ ಕಾರಣ ಕೃತಾಕೃತಗಳನ್ನು ಎಂದಿಗೂ ಸ್ಮರಿಸದೆ ಇರುವನೋ ಮತ್ತು ಯಾವನು ಪ್ರಪಂಚದಲ್ಲಿ ಸರ್ವ ಪದಾರ್ಥಗಳೂ ತನಗೆ ಅನು

ಬಹಿಃ ಪ್ರಕೃತ ಸರ್ವಾರ್ಥೋಽಸ್ಯಂತಃ ಪುನರನೀಹಯಾ ।
ನ ಸತ್ತಾಂ ಯೋಜಯತ್ಯರ್ಥೇ ನ ಫಲಾನ್ಯನುಧಾವತಿ ॥ ೨೭ ॥

ನೋಪೇಕ್ಷತೇ ದುಃಖದಶಾಂ ನ ಸುಖಾಶಾಮುಪೇಕ್ಷತೇ ।
ಕಾರ್ಯೋದಯೇ ನೈತಿ ಮುದಂ ಕಾರ್ಯನಾಶೇ ನ ಖಿದ್ಯತೇ ॥ ೨೮ ॥

ಪಾದೇಯವಾದವುಗಳೇ ಎಂದು ನಿರ್ಣಯಿಸಿ ಅನಾಸ್ಥೆಯಿಂದಲೇ ಎಲ್ಲವನ್ನೂ ಎಲ್ಲ ಪ್ರಕಾರಗಳಿಂದಲೂ ಸ್ವೀಕರಿಸುತ್ತಲೂ, ಬಿಡುತ್ತಲೂ, ಎಳೆಯ ಮಗುವಿನಂತೆ ಅಭಿಮಾನರಹಿತವಾಗಿ ಲೌಕಿಕ ವ್ಯವಹಾರವನ್ನು ನಡೆಯಿಸುವನೋ, ಅಂತಹ ಜೀವನ್ಮುಕ್ತನಾದ ಮಹಾತ್ಮನು ದೇಶಕಾಲ ಕರ್ಮಾನುಗುಣವಾಗಿ ಯದೃಚ್ಛಾ ಪ್ರಾಪ್ತವಾದ ವ್ಯವಹಾರಗಳಲ್ಲಿ ನಿರತನಾಗಿರುತ್ತಿದ್ದರೂ ಕೂಡ ಆಯಾ ವ್ಯವಹಾರ ಪ್ರಯುಕ್ತಗಳಾದ ಸುಖ ದುಃಖಗಳಿಂದ ಅವನು ಸ್ವಲ್ಪಮಾತ್ರವೂ ವಾಸ್ತವವಾಗಿ ಬದ್ಧನಾಗುವುದೇ ಇಲ್ಲ. (ಗೀತಾ. ೪. ಶ್ಲೋಕ ೧೯ ರಿಂದ ೨೩. ಮತ್ತು ಗೀತಾ. ೫. ಶ್ಲೋಕ ೭ ರಿಂದ ೧೩. ನೋಡಿ.)

೨೭. ಜೀವನ್ಮುಕ್ತನು ಹೊರಗಡೆಯಲ್ಲಿ ಸಕಲ ವ್ಯವಹಾರಗಳನ್ನು ಮಾಡುತ್ತಿರುವವನಾಗಿ ಕಂಡುಬಂದರೂ ಒಳಗಡೆಯಲ್ಲಿ ಮಾತ್ರ ಸರ್ವತ್ರ ನಿಸ್ಪೃಹತೆಯಿಂದಲೇ ಯಾವುದೊಂದು ಬಾಹ್ಯಾರ್ಥದಲ್ಲಿಯೂ ಸತ್ಯತ್ವ ಬುದ್ಧಿಯನ್ನಿಡದೆ ಎಲ್ಲದರಲ್ಲಿಯೂ ಆಸ್ಥಾಶೂನ್ಯನಾಗಿರುವನು. ಅದು ಕಾರಣವೇ ಅವನು ಎಂದಿಗೂ ಫಲಗಳನ್ನು ಹುಡುಕಿಕೊಂಡು ಓಡಿಹೋಗದೆ ತಟಸ್ಥನಾಗಿರುವನು. (ಫಲಗಳಲ್ಲಿ ಅಭಿಸಂಧಿ ರಹಿತನಾಗಿರುವನು.)

೨೮. ಸಮೀಪದಲ್ಲಿಯೇ ಸನ್ನಿಹಿತವಾಗಿದ್ದರೂ ಕೂಡ ದುಃಖ ದೆಸೆಯನ್ನು ತತ್ತ್ವಜ್ಞನು ನೋಡುವುದೂ ಇಲ್ಲ. ಸುಖ ಸ್ಥಿತಿಯನ್ನು ಅಪೇಕ್ಷಿಸುವುದೂ ಇಲ್ಲ. ಹಿಡಿದ ಕಾರ್ಯವನ್ನು ಸಾಧಿಸಿ ಜಯಶೀಲನಾದರೆ ಸಂತೋಷಪಡುವುದೂ ಇಲ್ಲ. ಕಾರ್ಯವು ಕೆಟ್ಟು ನಾಶವಾದರೆ ಅದರಿಂದ ದುಃಖಪಡುವುದೂ ಇಲ್ಲ.

ಅಪಿ ಶೀತರುಚಾವರ್ಕೇ ಸುತಪ್ತೇಽಪೀಂದು ಮಂಡಲೇ ।
ಅಪ್ಯಧಃ ಪ್ರಸರತ್ಯಗ್ನೌ ವಿಸ್ಮಯೋಽಸ್ಯ ನ ಜಾಯತೇ ॥ ೨೯ ॥

ಚಿದಾತ್ಮನ ಇಮಾ ಇತ್ಥಂ ಪ್ರಸ್ಫುರಂತೀಹ ಶಕ್ತಯಃ ।
ಇತ್ಯಸ್ಯಾಶ್ಚರ್ಯ ಜಾಲೇಷು ನಾಭ್ಯುದೇತಿ ಕುತೂಹಲಂ ॥ ೩೦ ॥

ನ ದಯಾದೈನ್ಯಮಾದತ್ತೇ ನ ಕ್ರೌರ್ಯ ಮನುಧಾವತಿ ।
ನ ಲಜ್ಜಾಮನುಸಂಧತ್ತೇ ನಾಲಜ್ಜತ್ವಂ ಚ ಗಚ್ಛತಿ ॥ ೩೧ ॥

---

೨೯. ಒಂದುವೇಳೆ ಸೂರ್ಯನು ಶೀತ ಕಿರಣನಾದರೂ ಆಗಬಹುದು. ಚಂದ್ರಮಂಡಲವು ಸ್ವಭಾವಕ್ಕೆ ವಿರುದ್ಧವಾಗಿ ಮಹಾ ಸಂತಾಪಕರವಾದ ರೀತಿಯಲ್ಲಿ ಬಿಸಿಲನ್ನು ಕಾದರೂ ಕಾಯಬಹುದು. ಅಗ್ನಿಯು ಕೆಳಮುಖವಾಗಿ ಜ್ವಾಲೆಗಳನ್ನು ಪ್ರಸರಿಸುತ್ತಾ ದಹನ ಶಕ್ತಿಹೀನನಾಗಿಯೂ ಆಗಬಹುದು. ಹೀಗೆ ಸ್ವಭಾವ ವಿರುದ್ಧವಾಗಿ ಲೋಕದಲ್ಲಿ ಅತ್ಯಂತಾಸಂಭಾವ್ಯವಾದ ವಿಚಾರಗಳು ಒಂದು ವೇಳೆ ಸಂಭವಿಸಿದರೂ ಕೂಡ ಪ್ರಪಂಚದಲ್ಲಿ ಜೀವನ್ಮುಕ್ತನ ಮನಸ್ಸಿಗೆ ಯಾವುದೊಂದು ಅರ್ಥವೂ, ಸ್ವಲ್ಪವೂ, ಎಂದಿಗೂ ವಿಸ್ಮಯವನ್ನೂ ಉದ್ರೇಕವನ್ನೂ ಉಂಟುಮಾಡುವ ಪ್ರಸಕ್ತಿಯೇ ಸರ್ವಥಾ ಇಲ್ಲವು.

೩೦. ಈ ಜಗತ್ತಿನಲ್ಲಿ ಚಿದ್ರೂಪನಾದ ಆತ್ಮನ ದೆಸೆಯಿಂದಲೇ ಈ ಮಾಯಾ ರೂಪ ಶಕ್ತಿ ವಿಶೇಷಗಳು ಈ ಪ್ರಕಾರವಾಗಿ ಸ್ಫುರಿಸುತ್ತಲಿರುವುವು” ಎಂಬುದಾಗಿ ಜೀವನ್ಮುಕ್ತನು ಸರ್ವದಾ ದೃಢನಿಶ್ಚಯ ಜ್ಞಾನವುಳ್ಳವನಾಗಿರುವ ಕಾರಣ ಎಂತೆಂತಹ ಆಶ್ಚರ್ಯ ಜಾಲಗಳಲ್ಲಿಯೂ ಎಂದೆಂದಿಗೂ ಇವನಿಗೆ ಕುತೂಹಲವು ಉದಯಿಸುವುದೇ ಇಲ್ಲ.

೩೧. ಜೀವನ್ಮುಕ್ತನು ಯಾವಾಗಲೂ ಇತರರ ದಯೆಯನ್ನು ಬೇಡುತ್ತಾ ದೈನ್ಯವನ್ನು ತೋರುವುದಿಲ್ಲ ಅಥವಾ ಕ್ರೌರ್ಯವನ್ನು ಅನುಸರಿಸುವುದೂ ಇಲ್ಲ. ಪರಾಪಮಾನ ಭೈಕ್ಷ ಚರ್ಯಾದಿಗಳಿಂದ ನಾಚಿಕೆಗೊಳ್ಳುವುದೂ ಇಲ್ಲ. ಮತ್ತು ಅಕಾರ್ಯಗಳಲ್ಲಿ ಇವನು ನಿರ್ಲಜ್ಜನಾಗಿಯೂ ಇರುವುದಿಲ್ಲ.

ನ ಕದಾಚನ ದೀನಾತ್ಮಾ ನೋದ್ಧತಾತ್ಮಾ ಕದಾಚನ ।
ನ ಪ್ರಮತ್ತೋ ನ ಖಿನ್ನಾತ್ಮಾ ನೋದ್ವಿಗ್ನೋ ನ ಚ ಹರ್ಷವಾನ್ ॥ ೩೨ ॥

ನಾಸ್ಯ ಚೇತಸಿ ಸುಸ್ಫಾರೇ ಶರದಂಬರ ನಿರ್ಮಲೇ ।
ಕೋಪಾದಯಃ ಪ್ರಜಾಯಂತೇ ನಭಸೀವ ನವಾಂಕುರಾಃ ॥ ೩೩ ॥

ಅನಾರತಪತಜ್ಜಾತ ಭೂತಾಯಾಂ ಜಗತಃ ಸ್ಥಿತೌ ।
ಕ್ವ ಕಥಂ ಕಿಲ ಕಾಸೌ ಸ್ಯಾತ್ಸುಖಿತಾಸುಖಿತಾಥ ವಾ ॥ ೩೪ ॥

ಫೇನಾಜವಂ ಜವೀಭಾವೇ ಜಲೇ ಭೂತಕ್ರಮೇ ತಥಾ ।
ಕ್ವ ಕಿಲೇದಂ ಕುತಃ ಕೋತಃ ಪ್ರಸಂಗಃ ಸುಖದುಃಖಯೋಃ ॥ ೩೫ ॥

---

೩೨. ಮತ್ತು ಜೀವನ್ಮುಕ್ತನು ಯಾವಾಗಲೂ ಅತಿ ದೈನ್ಯವನ್ನು ಆಶ್ರಯಿಸಿ ಕುಗ್ಗುವುದೂ ಇಲ್ಲ. ಅಥವಾ ಅತ್ಯಂತ ಔದ್ಧತ್ಯದಿಂದ ಎಂದೆಂದಿಗೂ ಮೆರೆಯುವುದೂ ಇಲ್ಲ. ಯಾವುದರಲ್ಲಿಯೂ ಪ್ರಮತ್ತನಾಗಿರುವುದಿಲ್ಲ. ಅವನ ಮನಸ್ಸು ಎಂದಿಗೂ ಖೇದಗೊಳ್ಳುವುದಿಲ್ಲ. ಮತ್ತು ಎಂದಿಗೂ ಸಂತೋಷಪಡುವುದೂ ಇಲ್ಲ.

೩೩. ಗಗನ ತಲದಲ್ಲಿ ಹೇಗೆ ಎಂದಿಗೂ ಗರಕೆ ಪೈರು ಮುಂತಾದ ನವಾಂಕುರಗಳು ಉದ್ಭವಿಸುವುದೇ ಇಲ್ಲವೋ ಹಾಗೆಯೇ ಶರದೃತುವಿನಲ್ಲಿನ ಆಕಾಶದಂತೆ ಅತ್ಯಂತ ನಿರ್ಮಲವಾಗಿಯೂ, ಅತ್ಯುದಾರವಾಗಿಯೂ, ವಿಸ್ತಾರವಾಗಿಯೂ, ಇರುವ ಜೀವನ್ಮುಕ್ತನ ಮನಸ್ಸಿನಲ್ಲಿ ಎಂದಿಗೂ ಕೋಪತಾಪಾದಿ ವಿಕಾರಗಳು ಉದ್ಭವಿಸುವುದೇ ಇಲ್ಲ.

೩೪. ಸಂತತವೂ ಸಾಯುತ್ತಲೂ, ಹುಟ್ಟುತ್ತಲೂ, ಮರಣ ಜನನ ಪ್ರವಾಹಗಳಲ್ಲಿ ಸಿಕ್ಕಿಬಿದ್ದಿರುವ ಪ್ರಾಣಿ ಸಮೂಹಗಳುಳ್ಳಂಥ ಈ ಪ್ರಪಂಚ ಸ್ಥಿತಿಯಲ್ಲಿ ಜೀವನ್ಮುಕ್ತನಿಗೆ ಸುಖಿತ್ವವಾಗಲಿ ಅಥವಾ ಅಸುಖಿತ್ವವಾಗಲೀ ಯಾವುದು? ಅಥವಾ ಅದು ಹೇಗೆ ಎಲ್ಲಿ ಯಾವಾಗ ಉಂಟಾಗಬಹುದು? (ದೇಶಕಾಲಗಳಿಂದಲೂ, ಸರ್ವ ಪ್ರಕಾರದಿಂದಲೂ ಸ್ವರೂಪದಿಂದಲೂ ಸರ್ವಥಾ ಜೀವನ್ಮುಕ್ತನಿಗೆ ಈ ಪ್ರಪಂಚದಲ್ಲಿ ಸುಖ ದುಃಖಗಳ ಪ್ರಸಕ್ತಿಯೂ ಅಸಂಭಾವಿತವೇ ಎಂದು ತಾತ್ಪರ್ಯ.)

೩೫. ಮೇಲಿಂದ ಮೇಲೆ ಎಡಬಿಡದೆ ಬರುತ್ತಿರುವ ಅಲೆಗಳ ಹೊಡೆತಕ್ಕೆ

ಭಾವಾಭಾವೈರಪರ್ಯಂತೈರಜಸ್ರಂ ಜಂತುಸಂಭವೈಃ ।
ನ ವಿಶೀರ್ಯಂತಿ ನೋದ್ಯಂತಿ ದೃಷ್ಟಿಸೃಷ್ಟಿಕ್ಷಮಾ ನರಾಃ ॥ ३६ ॥

ನಿಮೇಷಂ ಪ್ರತಿಯಾಮಿನ್ಯಾಂ ಯಥಾನ್ಯಾಃ ಸ್ವಪ್ನದೃಷ್ಟಯಃ ।
ಕ್ಷಣೋತ್ಪತ್ತಿ ವಿನಾಶಿನ್ಯಸ್ತಥೈತಾ ಲೋಕದೃಷ್ಟಯಃ ॥ ३೭ ॥

ಸಿಕ್ಕಿಬಿದ್ದಿರುವ ನೀರಿನಲ್ಲಿ ಉದ್ಭವಿಸಿದ ನೊರೆಗಳ ಅತಿ ವೇಗವಾದ ಸುತ್ತಾಟದಲ್ಲಿಯೂ ಮತ್ತು ಹಾಗೆಯೇ ಪ್ರಾಣಿಗಳ ಜನನ ಮರಣ ಪ್ರವಾಹ ರೂಪ ಪ್ರಪಂಚ ಸ್ಥಿತಿಯಲ್ಲಿಯೂ ಕೂಡ ಸ್ಥೈರ್ಯವೆಂಬುದು ಯಾವುದಿರುವುದು ? ಎಲ್ಲಿರುವುದು ? ಅಥವಾ ಅದು ಹೇಗೆ ಯಾವುದರ ದೆಸೆಯಿಂದ ಸಂಭವಿಸುವುದು ? ಹೀಗೆ ಸ್ಥೈರ್ಯವೇ ಇಲ್ಲದಿರಲು ಇನ್ನು ಸುಖ ದುಃಖ ಪ್ರಸಕ್ತಿಗೆ ಅವಕಾಶವು ಯಾವುದಿರುವುದು ?

३६. ಪ್ರಾತಿಭಾಸಿಕವಾಗಿ, ಶುಕ್ತಿ ರಜತದಂತೆ ಭ್ರಾಂತಿಯಿಂದ ಮಿಥ್ಯೆಯಾಗಿಯೇ ತೋರುವ ಈ ಜಗತ್ತಿನ ದೃಷ್ಟಿಯೆಂಬ ಸೃಷ್ಟಿಯಲ್ಲಿ ದಕ್ಷರಾದ ಅಂದರೆ "ನಾನೇ ನನ್ನೊಳಗೆ ಜಗನ್ಮಾಯೆಯನ್ನು ಸೃಷ್ಟಿಸುವೆನು. ನನ್ನಿಂದಲೇ ಈ ಜಗತ್ತು ಅಜ್ಞಾನದಿಂದ ಸ್ವಾಂತರ್ಗತವಾಗಿಯೇ= ಅನನ್ಯವಾಗಿಯೇ ಕಲ್ಪಿತವಾಗಿ ಭಾಸಮಾನವಾಗಿರುವುದು" ಎಂದು ದೃಢ ನಿಶ್ಚಯ ಜ್ಞಾನದಿಂದ ಜಗತ್ತನ್ನು ಕಾಣುತ್ತಿರುವ ಜೀವನ್ಮುಕ್ತರು ಸರ್ವದೇಶ ಕಾಲಗಳಲ್ಲಿ ಅವಿಚ್ಛಿನ್ನವಾಗಿ ಪ್ರಪಂಚದಲ್ಲಿ ಸಕಲ ಪ್ರಾಣಿಗಳಿಗೂ ಸಂಭವಿಸುತ್ತಿರುವ ಅಪರಿಮಿತ ಸಂಖ್ಯಾಕಗಳಾದ ಜನನ ಮರಣಗಳಿಂದ ಕೊರಗಿ ಕ್ಷಯಿಸುವುದಿಲ್ಲ ನಾಶ ಹೊಂದುವುದಿಲ್ಲ. ಖೇದ ಪಡುವುದೂ ಇಲ್ಲ. ಹಾಗೆಯೇ ವೃದ್ಧಿ ಹೊಂದುವುದಿಲ್ಲ. ಹುಟ್ಟುವುದಿಲ್ಲ ಮತ್ತು ಸಂತೋಷ ಪಡುವುದೂ ಇಲ್ಲ.

३೭. ರಾತ್ರಿ ಕಾಲದಲ್ಲಿ ಒಂದೊಂದು ನಿಮಿಷದಲ್ಲಿಯೂ ಹೇಗೆ ಬೇರೆ ಬೇರೆ ವಿವಿಧ ಸ್ವಪ್ನ ದೃಷ್ಟಿಗಳು ಕ್ಷಣ ಕಾಲ ಮಾತ್ರ ಸ್ಥಾಯಿಗಳಾಗಿ ಉತ್ಪತ್ತಿಯನ್ನೂ, ವಿನಾಶವನ್ನೂ ಹೊಂದುತ್ತಿರುವುವೋ ಹಾಗೆ ಈ ಪ್ರಾಪಂಚಿಕ ದೃಷ್ಟಿಗಳೂ, ಸಂತತವೂ, ಪ್ರತಿ ನಿಮಿಷದಲ್ಲಿಯೂ ಬೇರೆ ಬೇರೆ ಉತ್ಪತ್ತಿ ವಿನಾಶಗಳನ್ನು ಹೊಂದುತ್ತ ಕ್ಷಣಿಕವಾಗಿರುವುವು.

ಅನಾರತಸಮುತ್ಪತ್ತಾವನಾರತ ವಿನಾಶಿನಿ ।
ಕಃ ಕ್ರಮೋ ದಗ್ಧ ಸಂಸಾರೇ ಕಾರುಣ್ಯಾನಂದಯೋರಿಹ । ॥ ೩೮ ॥

ಶುಭಾಭಾ ವಾತ್ಸುಖಾಭಾವೇ ಸ್ಥಿತಿಂ ಯಾತೇ ವಿಲಕ್ಷಣಾಃ ।
ಕೀದೃಶ್ಯಃ ಕಥಮಾಯಾತಾಃ ಕ್ವ ವಾ ತಾ ದುಃಖ ಸಂವಿದಃ ॥ ೩೯ ॥

ಸುಖಸಂವೇದನಾಂತೋತ್ಥಾ ಸ್ವಬೀಜಂ ವಿತನೋತಿ ಯಾ ।
ಶಾಂತಾ ದುಃಖದಶಾ ಸೇಯಂ ಕಥಮಂತರ್ಹಿತೇ ಸುಖೇ ॥ ೪೦ ॥

---

೩೮. ಹೀಗೆ ಒಂದೊಂದು ಕ್ಷಣದಲ್ಲಿಯೂ ನಿರಂತರವಾಗಿ ಉತ್ಪನ್ನವಾಗುತ್ತಲೂ, ವಿನಾಶ ಹೊಂದುತ್ತಲೂ ಇರುವ ಕ್ಷಣಿಕವಾದ ಈ ಹಾಳು ಸಂಸಾರದಲ್ಲಿ, ಕರುಣೆಗಾಗಲಿ ಆನಂದಕ್ಕಾಗಲಿ ಪ್ರಸಕ್ತಿಯು ಯಾವುದಿರುವುದು.

೩೯. ಪ್ರಪಂಚದಲ್ಲಿ, ಸ್ವಾರ್ಜಿತವಾದ ಶುಭ ಕರ್ಮಗಳ ಫಲವಾಗಿ ಜನರು ಸುಖಾನುಭವ ಮಾಡುವರೆಂಬುದು ಪ್ರಸಿದ್ಧವು. ಜೀವನ್ಮುಕ್ತರಿಗಾದರೋ ಶುಭಾಶುಭ ಕರ್ಮಗಳೆರಡೂ ಸರ್ವಥಾ, ಏಕರೀತಿಯಾಗಿ ಅನರ್ಥಕಾರಿಗಳೇ. ಹೀಗೆ ಅವರು ಶುಭವನ್ನಾಗಲೀ ಅಶುಭವನ್ನಾಗಲಿ ಎಂದಿಗೂ ಆಚರಿಸುವುದಿಲ್ಲ. ಅವರಿಗೆ ಶುಭ ಕರ್ಮವೇ ಇಲ್ಲದಿರಲು, ಇನ್ನು ಅದರಿಂದ ಉಂಟಾಗುವ ಸುಖರೂಪ ಫಲವೆಲ್ಲಿಯದು ? ಅಂತೂ ಹೀಗೆ ಸುಖವೇ ಇಲ್ಲವೆಂದು ಸ್ಥಿರವಾಗಿ ಬಿಟ್ಟಬಳಿಕ, ಅದಕ್ಕೆ ವಿಲಕ್ಷಣಗಳಾದ ಈ ದುಃಖಜ್ಞಾನಗಳು ತಾನೇ ಅವರಿಗೆ ಎಂತಹವು ? ಅವು ಎಲ್ಲರುವುವು? ಹೇಗೆ ಯಾವ ಕಾರಣದಿಂದ ಅವು ಸಂಭವಿಸುವುವು?

೪೦. ದುಃಖದಶೆಯೆಂಬುದು ಸಾಧಾರಣವಾಗಿ ಲೋಕದಲ್ಲಿ, ಸುಖಾನುಭವದ ಕೊನೆಯಲ್ಲಿ, ಉದಯಿಸಿ ಕ್ರಮೇಣ ಸ್ಥಿತಿಯನ್ನು ಪಡೆದುದಾಗಿ, ತನ್ನ ಕಾರ್ಯಗಳಾದ ಶೋಕ ಮೋಹಾದಿಗಳನ್ನು ವಿಶೇಷವಾಗಿ ತಂದೊಡ್ಡುವುದು. ಆದರೆ ಜೀವನ್ಮುಕ್ತನಿಗೆ ಶುಭಕರ್ಮವೇ ಇಲ್ಲದಿರುವುದರಿಂದ ಸುಖವೂ ಇಲ್ಲವಾಗಿ ಬಿಟ್ಟಿರುವುದು. ಹೀಗೆ ಸುಖವೇ ಅಂತರ್ಹಿತವಾಗಿರಲು, ಇನ್ನು ಆ ದುಃಖದಸೆಯೆಂಬುದೂ ಶಾಂತವಾಗಲೇಬೇಕು. ದುಃಖದಶೆಯು ಅದು ಹೇಗೆ ನಿಷ್ಕಾರಣವಾಗಿ ಯಾವಾಗ ಎಲ್ಲಿ ಯಾವ ರೂಪವಾಗಿ ಉದಯಿಸೀತು ?

ಕ್ಷೀಣಾಭ್ಯಾಂ ಸುಖದುಃಖಾಭ್ಯಾಂ ಹೇಯೋಪಾದೇಯಯೋಃ ಕ್ಷಯೇ ।
ಈಪ್ಸಿತಾನೀಪ್ಸಿತೇ ಕ್ವ ಸ್ತೋ ಗಲಿತೇಽಥ ಶುಭಾಶುಭೇ ॥ ೪೧ ॥

ರಮ್ಯಾರಮ್ಯದೃಶೋರ್ನಾಶಾದ್ಯಾತೇ ಭೋಗಾಭಿವಾಂಛನೇ ।
ನೈರಾಶ್ಯೇ ಸತತಂ ಪ್ರೌಢೇ ಹಿಮವದ್ವಿಗಲೇನ್ಮನಃ ॥ ೪೨ ॥

ಆಮೂಲಾನ್ಮನಸಿ ಕ್ಷೀಣೇ ಸಂಕಲ್ಪಸ್ಯ ಕಥಾ ಚ ಕಾ ।
ತಿಲೇಷ್ವಿವಾತಿ ದಗ್ಧೇಷು ತೈಲಸ್ಯ ಕಲನಾ ಕುತಃ ॥ ೪೩ ॥

ಭಾವೇಷ್ವಭಾವ ಘನ ಭಾವನಯಾ ಮಹಾತ್ಮಾ ।
ನಿರ್ಮುಕ್ತ ಸಂಕಲನ ಮಂಬರವತ್ಸ್ಥಿತೇಷು ।
ಚಿತ್ತಂ ಪ್ರತಿ ಸ್ವಮುದಿತೋ ವಿತತೈಕರೂಪೀ ।
ಜ್ಞಸ್ತಿಷ್ಠತಿ ಸ್ವಪಿತಿ ಜೀವತಿ ನಿತ್ಯತೃಪ್ತಃ ॥ ೪೪ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಜೀವನ್ಮುಕ್ತ ಸ್ವರೂಪ ವರ್ಣನಂ" ನಾಮ ಸಪ್ತಸಪ್ತತಿತಮಃ ಸರ್ಗಃ

---

೪೧. ಹೀಗೆ ಸುಖದುಃಖಗಳೂ ಸುತರಾಂ ಇಲ್ಲವಾಗಿ ಬಿಟ್ಟ ಬಳಿಕ ಶುಭಾಶುಭಗಳ ಜ್ಞಾನವೂ ತಪ್ಪಿಹೋಗಿ, ಇದು ಹೇಯ ಅದು ಉಪಾದೇಯವೆಂಬ ಭೇದಜ್ಞಾನವೂ ನಾಶವಾಗಿ ಬಿಡಲಾಗಿ, ಇನ್ನು ಜೀವನ್ಮುಕ್ತನಿಗೆ ಇದು ಇಷ್ಟ ಅದು ಅನಿಷ್ಟವೆಂಬ ಬುದ್ಧಿಯು ಎಲ್ಲಿಯದು ?

೪೨. ಇದು ರಮ್ಯ (ಸುಂದರ) ಅದು ಅರಮ್ಯ ಎಂಬ ದೃಷ್ಟಿಗಳು, ನಷ್ಟವಾಗಿಬಿಟ್ಟಿರುವ ಕಾರಣ, ಅದರ ಮೂಲಕವಾದ ಭೋಗಾಭಿಲಾಷೆಯು ಕಳೆದು ಹೋದಬಳಿಕ, ನೈರಾಶ್ಯವು (ನಿಷ್ಕಾಮಸ್ಥಿತಿಯು) ಅವಿಚ್ಛಿನ್ನವಾಗಿ ಸ್ಥೈರ್ಯವನ್ನು ಹೊಂದಿ ನೆಲೆಸಿಬಿಟ್ಟರೆ, ಆಮೇಲೆ ಸೂರ್ಯನ ಬಿಸಿಲಿನಿಂದ ಮಂಜುಗಡ್ಡೆಯು ಬೇಗ ಕರಗಿ ಹೋಗುವಂತೆ, ಮನಸ್ಸೂ ಗಳಿತವಾಗಿ ಪ್ರಶಾಂತವಾಗಿರುವುದು. (ಮನೋನಾಶವಾಗುವುದು.)

೪೩. ಹೀಗೆ ಮನಸ್ಸು, ಸಮೂಲವಾಗಿ ನಾಶಹೊಂದಿ ಬಿಟ್ಟಬಳಿಕ, ಸಂಕಲ್ಪಕ್ಕೆ ಆಧಾರವೇ ಇಲ್ಲದುದರಿಂದ, ಅದೂ ನಾಶಹೊಂದುವುದು. ಎಳ್ಳುಗಳು ನಿಃಶೇಷವಾಗಿ ಬೆಂಕಿಯಿಂದ ದಗ್ಧವಾಗಿ ಹೋಗಿಬಿಟ್ಟರೆ ಬಳಿಕ ಆ ದಗ್ಧವಾದ ಎಳ್ಳುಗಳಿಂದ ಎಣ್ಣೆಯನ್ನು ತೆಗೆಯುವ ಪ್ರಸ್ತಾಪವು ಎಲ್ಲಿಂದ ಬರಬೇಕು?

೪೪. ಸ್ವಾತ್ಮವ್ಯತಿರಿಕ್ತನಾಗಿ ವಸ್ತುತಃ ಯಾವುದೊಂದೂ ಇಲ್ಲವೇ ಇಲ್ಲ

ವೆಂಬ ದೃಢನಿಶ್ಚಯದಿಂದ ಸಕಲ ದೃಶ್ಯಪದಾರ್ಥಗಳು ಸಂಕಲ್ಪವಿಕಲ್ಪಗಳೊಂದೂ ಇಲ್ಲದರೀತಿಯಲ್ಲಿ, ಆಕಾಶದಂತೆ ಶೂನ್ಯವಾಗಿ ಸನ್ಮಾತ್ರಸ್ವಭಾವದಿಂದ ಇದ್ದು ಕೊಂಡಿರಲು ಮಹಾತ್ಮನಾದ ಜೀವನ್ಮುಕ್ತನು ಪರಿಚ್ಛೇದಹೇತುರಾಹಿತ್ಯದಿಂದ ಸರ್ವತ್ರ ವ್ಯಾಪಿಸಿಕೊಂಡಿರುವ ಅಪರಿಚ್ಛಿನ್ನವಾದ ಅದ್ವಿತೀಯಾತ್ಮ ರೂಪನಾಗಿಯೂ ನಿತ್ಯತೃಪ್ತನಾಗಿಯೂ, ನಿರತಿಶಯಾನಂದಾತ್ಮಕ ಸ್ವರೂಪಾನುಭವದಿಂದಲೇ ಆನಂದಿಯಾಗಿಯೂ, ಇರುತ್ತಾ, ಜಾಗ್ರತ್ತಿನಲ್ಲಿಯೂ ಸ್ವಪ್ನದಲ್ಲಿಯೂ ಕೂಡ ಯಥಾಪ್ರಾಪ್ತವಾದ ಅರ್ಥಗಳನ್ನು (ಎಂದರೆ ಪ್ರಾಸಂಚಿಕ ವಸ್ತುಗಳನ್ನು) ಮಾತ್ರ ಆಲೋಚಿಸುವ ತನ್ನ ಚಿತ್ತವನ್ನು ಪ್ರತಿಭಟಿಸುವನು. ಆ ಮನಸ್ಸು ಸುಷುಪ್ತಿ ಯಲ್ಲಿ ಲಯಹೊಂದಲು ತಾನು ಸ್ವಸ್ಥವಾಗಿ ಸತ್ಸಂಪನ್ನನಾಗಿರುವನು. ಮತ್ತು ಪ್ರಾರಬ್ಧಕ್ಷಯ ಪರ್ಯಂತವೂ ಜೀವನ್ಮುಕ್ತನಾಗಿಯೇ ಜೀವಿಸಿಕೊಂಡಿರುತ್ತಾ ನಿರ್ಲಿ ಪ್ತನಾಗಿರುವನು. (ತಸ್ಯತಾವದೇವಚಿರಂ ಯಾವನ್ನವಿಮೋಕ್ಷ್ಯೇ ಅಥಸಂಪತ್ಸ್ಯೇ ಇತ್ಯಂತವಾದ ಛಾಂದೋಗ್ಯೋಪನಿಷತ್ತಿನ ಆರನೆಯ ಅಧ್ಯಾಯದ ಶ್ರುತಿಯು, ಜೀವನ್ಮುಕ್ತ ಸ್ಥಿತಿಯನ್ನು ಸ್ಪಷ್ಟಪಡಿಸಿರುವುದು. ಮತ್ತು ಅದೇ ಅಧ್ಯಾಯದಲ್ಲಿ ಸತಾಸೌಮ್ಯ ತದಾ ಸಂಪನ್ನೋ ಭವತಿ ಸ್ವಮಪೀತೋ ಭವತಿ ತಸ್ಮಾದೇನಗ್ಂ ಸ್ವಪಿತೀತಿ ಆಚಕ್ಷತೇ, ಸ್ವಗ್ಂ ಹ್ಯಪೀತೋ ಭವತಿ ಎಂಬೀ ಮೊದಲಾಗಿ ಸುಷುಪ್ತಿ ಕಾಲದಲ್ಲಿ ಸರ್ವರಿಗೂ ಸ್ವಾಪ್ಯಯವನ್ನು ಹೇಳಿರುವುದು. ಈ ಸುಷುಪ್ತ್ಯನುಭವವು ಸರ್ವ ಪ್ರಾಣಿ ಸಾಧಾರಣವಾಗಿರುವುದು, ಆಗ ನಿಷ್ಪ್ರಪಂಚಾದ್ವಿತೀಯಾತ್ಮ ಸ್ವರೂ ಪವು ಅನುಭವಾರೂಢವಾಗುವುದು. ಜಾಗ್ರತ್ ಸ್ವಪ್ನಗಳೆರಡರಲ್ಲಿಯೂ ಪ್ರಪಂಚವು ಸಮಾನವಾಗಿ ತೋರುವುದು, ಅದರಮೂಲಕ ದುಃಖವು ಆತ್ಮನಲ್ಲಿ ಭ್ರಾಂತಿಯಿಂದ ಅಧ್ಯಸ್ತವಾಗಿ ಭಾಸಿಸುವುದು. ಸುಷುಪ್ತಿಯಲ್ಲಿ ಪ್ರಪಂಚವು ಗೋಚರಿಸುವುದಿಲ್ಲ. ಆತ್ಮನು ಸತ್ಸಂಪತ್ತಿಯಿಂದ ಸ್ವರೂಪದಲ್ಲಿರುವನು. ನಿರ್ದುಃಖನಾಗುವನು. ಹೀಗೆ ಅಧ್ಯಸ್ತವಾದ ದುಃಖಧ್ವಂಸವೇ, ನಿರತಿಶಯಾನಂದ ಸ್ವರೂಪಮೋಕ್ಷವು ಎಂಬುದು ಇಲ್ಲಿಯೇ ಜೀವಿಸಿರುವಾಗಲೇ ಅನುಭವಗೋಚರವಾಗುವುದು. ಅದು ಕಾರಣ) ಅವಸ್ಥಾತ್ರಯ ಸ್ವರೂಪವನ್ನು ತತ್ತ್ವತಃ ಚೆನ್ನಾಗಿ ವಿಚಾರಮಾಡಿ ತಿಳಿಯುವುದು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ "ಜೀವನ್ಮುಕ್ತ ಸ್ವರೂಪವರ್ಣನ" ವೆಂಬ
ಎಪ್ಪತ್ತೇಳನೆಯ ಸರ್ಗವು

ಅಷ್ಟಸಪ್ತತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಯಥಾಲಾತಪರಿಸ್ಪಂದಾದಗ್ನಿ ಚಕ್ರಂ ಪ್ರದೃಶ್ಯತೇ ।
ಅಸದೇವ ಸದಾಭಾಸಂ ಚಿತ್ತಸ್ಪಂದಾತ್ತಥಾ ಜಗತ್ ॥ ೧ ॥

ಯಥಾ ಜಲಪರಿಸ್ಪಂದಾದ್ವ್ಯತಿರಿಕ್ತ ಇವಾಂಭಸಃ ।
ದೃಶ್ಯತೇ ವರ್ತುಲಾವರ್ತಶ್ಚಿತ್ತಸ್ಪಂದಾತ್ತಥಾ ಜಗತ್ ॥ ೨ ॥

ಯಥಾ ವ್ಯೋಮ್ನೀಕ್ಷಣಸ್ಪಂದಾತ್ಪಿಚ್ಛಮೌಕ್ತಿಕಮಂಡಲಂ ।
ದೃಶ್ಯತೇ ಸದಿವಾಸತ್ಯಂ ಚಿತ್ತಸ್ಪಂದಾತ್ತಥಾ ಜಗತ್ ॥ ೩ ॥

ಎಪ್ಪತ್ತೆಂಟನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು:—

೧. ಉರಿಯುತ್ತಿರುವ ಒಂದು ಕೊಳ್ಳಿಯನ್ನು ಕೈಯ್ಯಲ್ಲಿ ಹಿಡಿದುಕೊಂಡು, ರಾತ್ರಿಕಾಲದಲ್ಲಿ ಗಿರ್ರನೆ ತಿರುಗಿಸುವುದರಿಂದ ವಾಸ್ತವವಾಗಿ ಅಗ್ನಿಯು ಚಕ್ರಾಕಾರವಾಗಿ ದುಂಡಗೆ ಇಲ್ಲದಿದ್ದರೂ ಭ್ರಾಂತಿಯಿಂದ ಅಗ್ನಿಮಯವಾದ ಚಕ್ರವು ಹೇಗೆ ತೋರುವುದೋ ಹಾಗೆಯೇ, ಚಿತ್ತದ ಸ್ಪಂದದಿಂದ ಈ ಜಗತ್ತು ವಸ್ತುತಃ ಅಸತ್ತೇ ಆಗಿದ್ದರೂ ಅಜ್ಞಾನದಿಂದ ಸತ್ತಾಗಿರುವಂತೆ ಭಾಸಿಸುತ್ತಿರುವುದು.

೨. ನೀರು ವೇಗವಾಗಿ ಹರಿಯೋಣದರಿಂದ ಅದರಲ್ಲಿ ವರ್ತುಲಾಕಾರವಾಗಿ ಉದಯಿಸುವ ಸುಳಿಯು ಅದರ ಪ್ರಕೃತಿಯಾದ ನೀರಿಗಿಂತಲೂ ವ್ಯತಿರಿಕ್ತವಾಗಿರುವಂತೆ ಹೇಗೆ ಕಾಣುವುದೋ ಹಾಗೆಯೇ ಈ ಚಿತ್ತದ ಸ್ಪಂದದಿಂದ, ಜಗತ್ತೂ ತನಗೆ ಪ್ರಕೃತಿಯಾದ, ಆತ್ಮನಿಗಿಂತ ವ್ಯತಿರಿಕ್ತವಾಗಿರುವಂತೆ ಭ್ರಾಂತಿಯಿಂದ ಕಾಣುವುದು.

೩. ಬಿಸಿಲಿಗೆ ಅಭಿಮುಖವಾಗಿ ಆಕಾಶದಲ್ಲಿ ಕಣ್ಣುಗಳ ಸ್ಪಂದದಿಂದ ನವಿಲುಗರಿಯ ಆಕಾರವೂ, ಬೇರೊಂದು ಕಡೆಯಲ್ಲಿ ನೇತ್ರ ಸ್ಪಂದದಿಂದ ಮೌಕ್ತಿಕಮಂಡ

ಶ್ರೀ ರಾಮ ಉವಾಚ :—

ಯೇನ ಪ್ರಸ್ಪಂದತೇ ಚಿತ್ತಂ ಯೇನ ನ ಸ್ಪಂದತೇ ತಥಾ ।
ತದ್ಬ್ರಹ್ಮನ್ಬ್ರೂಹಿ ಮೇ ಯೇನ ಚಿಕಿತ್ಸೇಯಂ ತದೇವ ಹಿ ॥ ೪ ॥

ಶ್ರೀ ವಸಿಷ್ಠ ಉವಾಚ :—

ಯಥಾ ಶೌಕ್ಲ್ಯಹಿಮೇ ರಾಮ ತಿಲತೈಲಲವೌ ಯಥಾ ।
ಯಥಾ ಕುಸುಮಸೌಗಂಧ್ಯೇ ಯಥೌಷ್ಣ್ಯದಹನೌ ಯಥಾ ॥ ೫ ॥

ತಥಾ ರಾಘವ ಸಂಶ್ಲಿಷ್ಟೌ ಚಿತ್ತಸ್ಪಂದೌ ತಥೈವ ಹಿ ।
ಅಭಿನ್ನೌ ಕೇವಲಂ ಮಿಥ್ಯಾ ಭೇದಃ ಕಲ್ಪಿತ ಏತಯೋಃ ॥ ೬ ॥

ಲಾಕಾರವೂ ವಸ್ತುತಃ ಇಲ್ಲದಿದ್ದರೂ, ಭ್ರಾಂತಿಯಿಂದ ಇರುವಂತೆ ಹೇಗೆ ಭಾಸಿಸುವುದೋ ಹಾಗೆಯೇ ಈ ಜಗತ್ತು ಮರುಮರೀಚಿಕಾ ಜಲದಂತೆ ಅತ್ಯಂತಾ ಸತ್ಯವಾದುದಾಗಿದ್ದರೂ ಚಿತ್ತದ ಸ್ಪಂದದಿಂದಲೇ ಸತ್ಯವಾಗಿರುವಂತೆ ಭ್ರಾಂತಿಮಯವಾಗಿ ಭಾಸಮಾನವಾಗಿರುವುದು.

ಶ್ರೀರಾಮನು ಕೇಳಿದನು:—

೪. ಸ್ವಾಮಿ ಬ್ರಹ್ಮರ್ಷಿವರ್ಯರಾದ ಸದ್ಗುರುಗಳೇ, ಈ ಚಿತ್ತವು ಯಾವ ಸ್ವಭಾವದಿಂದ ಕೂಡಿದ್ದರೆ ಚಲನಹೊಂದುವುದು ? ಮತ್ತು ಹಾಗೆಯೇ ಯಾವ ಉಪಾಯವನ್ನು ಆಶ್ರಯಿಸಿದರೆ, ಚಿತ್ತವು ಚಲಿಸದಂತೆ ಮಾಡಿಕೊಂಡು ಅದನ್ನು ನಿರೋಧಮಾಡಬಹುದು ? ಆ ವಿಚಾರವನ್ನು ತಾವು ದಯೆಮಾಡಿ ನನಗೆ ಉಪದೇಶ ಮಾಡಬೇಕೆಂದು ಪ್ರಾರ್ಥಿಸುವೆನು. ತಮ್ಮಿಂದ ಈ ವಿಚಾರವನ್ನು ಚೆನ್ನಾಗಿ ತಿಳಿದುಕೊಂಡು, ಆ ಚಿತ್ತನಿರೋಧೋಪಾಯವನ್ನು ಆಶ್ರಯಿಸಿ, ಚಿತ್ತದ ಸ್ಪಂದಸ್ವಭಾವಕ್ಕೆ ತಕ್ಕಚಿಕಿತ್ಸೆಮಾಡಿ, ಅದನ್ನು ನಾನು ನಿರೋಧಪಡಿಸಬೇಕೆಂದಿರುವೆನು. ಅದು ಕಾರಣ, ದಯವಿಟ್ಟು ಚಿತ್ತನಿರೋಧೋಪಾಯವನ್ನು ಅಪ್ಪಣೆ ಕೊಡಿಸೋಣವಾಗಲಿ.

ಶ್ರೀ ವಸಿಷ್ಠರು ಹೇಳಿದರು:—

೫-೬. ಅಯ್ಯ ರಘೂತ್ತಮ, ರಾಮ, ಲೋಕದಲ್ಲಿ ಶುಕ್ಲತ್ವ ಹಿಮಗಳೆರಡೂ, ತಿಲತೈಲಗಳೂ ಮತ್ತು ಉಷ್ಣತ್ವ ಅಗ್ನಿಗಳೂ, ಹೇಗೆ ಒಂದಕ್ಕೊಂದು ಅವಿನಾಭಾವದಿಂದ, ಒಂದೊಂದನ್ನು ಯಾವಾಗಲೂ ಬಿಟ್ಟಿರದೆ, ಅನ್ಯೋನ್ಯ ಸಂಯುಕ್ತಗಳಾಗಿಯೇ ಇರುತ್ತಾ ಅಭಿನ್ನಗಳಾಗಿವೆಯೋ ಹಾಗೆಯೇ ಈ ಚಿತ್ತವೂ ಅದರ ಸ್ಪಂದವೂ

ಚಿತ್ತಚಿತ್ತಪರಿಸ್ಪಂದಪಕ್ಷಯೋರೇಕಸಂಕ್ಷಯೇ ।
ಸ್ವಯಂ ಗುಣಗುಣೀ ಸ್ಥಿತ್ವಾ ನಶ್ಯತೋ ದ್ವೌ ನ ಸಂಶಯಃ ॥ ೭ ॥

ದ್ವೌ ಕ್ರಮೌ ಚಿತ್ತನಾಶಸ್ಯ ಯೋಗೋ ಜ್ಞಾನಂ ಚ ರಾಘವ ।
ಯೋಗಸ್ತದ್ವೃತ್ತಿರೋಧೋ ಹಿ ಜ್ಞಾನಂ ಸಮ್ಯಗವೇಕ್ಷಣಂ ॥ ೮ ॥

ಯಾವಾಗಲೂ ಒಂದು ಒಂದನ್ನು ಬಿಟ್ಟಿರದೆ ಅವಿನಾಭಾವದಿಂದ ಒಟ್ಟಿಗೆ ಕೂಡಿಕೊಂಡಿರುವುವು. ವಾಸ್ತವವಾಗಿ ಇವೆರಡಕ್ಕೂ ಭೇದವಿಲ್ಲ. ಆದರೆ ಭ್ರಾಂತಿಯಿಂದ ಕೇವಲ ಮಿಥ್ಯಾಭೂತವಾಗಿಯೇ ಇವೆರಡಕ್ಕೂ ಭೇದವು ಕಲ್ಪಿತವಾಗಿ ತೋರುವುದು. (ಹೀಗೆ ಗುಣಗುಣಿಗಳಿಗೂ ಧರ್ಮಧರ್ಮಿಗಳಿಗೂ ಸರ್ವತ್ರ ಅವಿಚಾರದಿಂದ ಭೇದವು ತೋರುವುದು. ಅವುಗಳ ಸಂಶ್ಲೇಷವು ಅಭೇದವೇ ಸರಿ ಅವುಗಳನ್ನು ವಿಚಾರ ಮಾಡಿ ತಿಳಿದರೆ ಭೇದವು ಕೇವಲ ಮಿಥ್ಯೆಯೆಂದೂ, ಅಭೇದವು ವಾಸ್ತವವೆಂದೂ ಸುಸ್ಪಷ್ಟವಾಗುವುದು.)

೭. ಆದುದರಿಂದ, ಚಿತ್ತ ಮತ್ತು ಚಿತ್ತಸ್ಪಂದ ಎಂಬ ಎರಡು ಪಕ್ಷಗಳ ಮಧ್ಯದಲ್ಲಿ ಯಾವೊಂದು ಪಕ್ಷವು ನಾಶಹೊಂದಿದರೂ ಕೂಡ, ಉಳಿದುಕೊಂಡ ಇನ್ನೊಂದು ಪಕ್ಷವೇ ಸ್ವಯಂ ಗುಣವಾಗಿಯೂ ಗುಣಿಯಾಗಿಯೂ ಆಗಿಯೇ, ಗುಣ ಗುಣಿಗಳೆಂಬ ಎರಡು ವಿಕಲ್ಪಗಳೂ ಕೂಡ ಒಟ್ಟಿಗೆ ನಾಶಹೊಂದಿ ಬಿಡುವುವು. ಇವರಲ್ಲಿ ಸಂಶಯವಿಲ್ಲ. (ಉಷ್ಣತ್ವ ಅಗ್ನಿಗಳೊಳಗೆ, ಉಷ್ಣತ್ವವು ನಷ್ಟವಾದರೆ ಉಷ್ಣತ್ವವೂ ಅಗ್ನಿಯೂ ಎರಡೂ ಇರುವುದಿಲ್ಲ. ಹಾಗೆ ಅಗ್ನಿಯು ನಷ್ಟವಾದರೂ ಎರಡೂ ಇರುವುದಿಲ್ಲ. ಎರಡೂ ನಾಶವಾಗುವುವು)

೮. ಅಯ್ಯ ರಾಘವ, ಇಂತಹ ಚಿತ್ತವನ್ನು ನಾಶಗೊಳಿಸುವ ವಿಷಯದಲ್ಲಿ ಯೋಗ ಮತ್ತು ಜ್ಞಾನ ಎಂಬ ಎರಡು ಮಾರ್ಗಗಳು ಶಾಸ್ತ್ರದಲ್ಲಿ ಉಕ್ತವಾಗಿರುವುವು. ಚಿತ್ತವೃತ್ತಿಗಳನ್ನು ನಿರೋಧ ಮಾಡುವುದೇ ಯೋಗವೆನ್ನಿಸುವುದು. ಯಥಾವಸ್ಥಿತವಾಗಿ ಸ್ವಾತ್ಮತತ್ತ್ವವನ್ನು ಸಾಕ್ಷಾತ್ಕರಿಸುವುದೇ ಜ್ಞಾನವೆಂದು ವ್ಯವಹೃತವಾಗಿರುವುದು.

(ಯೋಗಃ ಚಿತ್ತವೃತ್ತಿ ನಿರೋಧಃ ಪಾತಂಜಲ ಯೋಗ ಸೂತ್ರ.)

ಶ್ರೀ ರಾಮ ಉವಾಚ :—
ಕದಾ ಕೀದೃಕ್ಕಯಾ ಯುಕ್ತ್ಯಾ ಪ್ರಾಣಾಪಾನನಿಬಂಧಯಾ ।
ಯೋಗನಾಮ್ನ್ಯಾ ಮನಃ ಶಾಂತಿಮೇತ್ಯನಂತಸುಖಪ್ರದಾಂ ॥ ೯ ॥

ಶ್ರೀ ವಸಿಷ್ಠ ಉವಾಚ :—
ದೇಹೇಽಸ್ಮಿನ್ದೇಹನಾಡೀಷು ವಾತಃ ಸ್ಫುರತಿ ಯೋಽಭಿತಃ ।
ಸ್ಪಂದೇಷ್ವಿವ ಭುವೋ ವಾರಿ ಸ ಪ್ರಾಣ ಇತಿ ಕೀರ್ತಿತಃ ॥ ೧೦ ॥

ತಸ್ಯ ಸ್ಪಂದವಶಾದಂತಃ ಕ್ರಿಯಾವೈಚಿತ್ರ್ಯಮೀಯುಷಃ ।
ಅಪಾನಾದೀನಿ ನಾಮಾನಿ ಕಲ್ಪಿತಾನಿ ಕೃತಾತ್ಮಭಿಃ ॥ ೧೧ ॥

ಶ್ರೀರಾಮನು ಕೇಳಿದನು :—

೯. ಸ್ವಾಮಿ ಗುರುಗಳೇ, ಪ್ರಾಣಾಪಾನ ನಿರೋಧ ರೂಪವಾಗಿ ಯೋಗವೆಂಬ ಹೆಸರಿನಿಂದ ವ್ಯವಹೃತವಾಗಿರುವ ಮನೋನಾಶ ಹೇತುವಾದ ಉಪಾಯವು ಯಾವುದು ? ಅದರಿಂದ ಚಿತ್ತವು ಶಾಶ್ವತವಾದ ನಿರತಿಶಯಾನಂದ ಪ್ರದವಾದ ಶಾಂತಿಯನ್ನು ಯಾವಾಗ ಪಡೆಯುವುದು ? ಮತ್ತು ಅದು ಆಗ ಯಾವ ಪ್ರಕಾರ ವಾಗಿರುವುದು ?

ಶ್ರೀ ವಸಿಷ್ಠರು ಹೇಳಿದರು :—

೧೦. ರಾಮ, (ಚಿತ್ತದ ಸ್ಪಂದವು ಪ್ರಾಣವಾಯುವಿನ ಸ್ಪಂದಕ್ಕೆ ಅಧೀನ ವಾಗಿರುವ ಕಾರಣ ಮೊದಲು ಪ್ರಾಣವಾಯುವಿನ ಸ್ವರೂಪವನ್ನು ವರ್ಣಿಸುವೆನು ಕೇಳು.) ಭೂಕಂಪವುಂಟಾಗಿ ಭೂಮಿಯು ಚಲಿಸಿದ ಕಾಲಗಳಲ್ಲಿ ಅದರೊಳಗೆ ರಂಧ್ರಗಳಲ್ಲಿ ಜಲವು ಸರ್ವತ್ರ ವ್ಯಾಪಿಸಿಕೊಂಡು ಪ್ರವಹಿಸುವ ರೀತಿಯಲ್ಲಿ ಈ ದೇಹದೊಳಗೆ ದೇಹ ನಾಡಿಗಳಲ್ಲಿ ಸರ್ವತ್ರ ಯಾವ ವಾಯುವು ಸ್ಫುರಿಸು ತ್ತಿರುವುದೋ ಅದನ್ನೇ ಪ್ರಾಣವೆಂದು ಪ್ರಾಜ್ಞರು ಶಾಸ್ತ್ರಗಳಲ್ಲಿ ಹೇಳಿರುವರು.

೧೧. ಆ ಪ್ರಾಣವಾಯುವಿಗೆ ಸ್ಪಂದವುಂಟಾಗಿ ಅದರ ಮೂಲಕ ಶರೀರ ದೊಳಗೆ ಉಂಟಾದ ನಾನಾ ಕ್ರಿಯಾ ವೈಚಿತ್ರ್ಯಗಳನ್ನು ಹೊಂದಿದ ಆ ಪ್ರಾಣ ವಾಯುವಿಗೇ ಅಪಾನ, ವ್ಯಾನ, ಉದಾನ, ಸಮಾನ ಮುಂತಾದ ನಾಮಧೇಯ ಜ್ಞಗಳನ್ನು ಪ್ರಾಜ್ಞರು ವ್ಯವಹಾರಕ್ಕೋಸ್ಕರ ಕಲ್ಪಿಸಿಕೊಂಡಿರುವರು. (ಅಪಾನಾದಿ

ಆಮೋದಸ್ಯ ಯಥಾ ಪುಷ್ಪಂ ಶೌಕ್ಲ್ಯಸ್ಯ ತುಹಿನಂ ಯಥಾ ।
ತಥೈಷ ರಸ ಆಧಾರಶ್ಚಿತ್ತಸ್ಯಾಭಿನ್ನತಾಂ ಗತಃ ॥ ೧೨ ॥

ಅಂತಃ ಪ್ರಾಣಪರಿಸ್ಪಂದಾತ್ಸಂಕಲ್ಪಕಲನೋನ್ಮುಖೀ ।
ಸಂವಿತ್ಸಂಜಾಯತೇ ಯೈಷಾ ತಚ್ಚಿತ್ತಂ ವಿದ್ಧಿ ರಾಘವ ॥ ೧೩ ॥

ಪ್ರಾಣಸ್ಪಂದಾಚ್ಚಿತಃ ಸ್ಪಂದಸ್ತತ್ಸ್ಪಂದಾದೇವ ಸಂವಿದಃ ।
ಚಕ್ರಾವರ್ತವಿಧಾಯಿನ್ಯೋ ಜಲಸ್ಪಂದಾದಿವೋರ್ಮಯಃ ॥ ೧೪ ॥

ವಾಯು ಭೇದಗಳು ಪ್ರಾಣ ವಾಯುವಿನ ವೃತ್ತಿ ಭೇದಗಳೇ ಹೊರತು ವಿಭಿನ್ನವಾದವುಗಳಲ್ಲ.) [ಪಂಚದಶೀ, ಪಂಚಭೂತ, ವಿವೇಕ ಶ್ಲೋಕ ೧೩ ರ ವ್ಯಾಖ್ಯೆನೋಡಿ.]

೧೨. ಗಂಧಕ್ಕೆ ಪುಷ್ಪವೂ, ಬಿಳುಪಿಗೆ ಮಂಜುಗಡ್ಡೆಯೂ ಆಧಾರವಾಗಿರುವಂತೆ ಈ ಪ್ರಾಣವು (ರಸವು) ಚಿತ್ತಕ್ಕೆ ಆಧಾರವಾಗಿ ಅದರೊಡನೆ ಅಭೇದವನ್ನು ಹೊಂದಿರುವುದು. (ಪ್ರಾಣವಾಯು ಚಿತ್ತದ ಕೋಶದಂತೆ ಸರ್ವತಃ ಸಂಶ್ಲಿಷ್ಟವಾಗಿರುತ್ತಾ ಅಭೇದವನ್ನು ಹೊಂದಿರುವಂತೆ ಆಧಾರವಾಗಿರುವುದು ಎಂದರ್ಥ.) ಆಪೋಮಯಃ ಪ್ರಾಣಃ. ಛಾಂದೋಗ್ಯ. ೬. ಏತಮೇವಾಂಗಿರಸಂ ಮನ್ಯಂತೇ ಪ್ರಾಣೋವಾ ಅಂಗಾನಾಂ ರಸಃ. ಬೃಹ. ಇತ್ಯಾದಿ ಶ್ರುತಿಗಳಿಂದ ಪ್ರಾಣವು ಆಪೋಮಯವೆಂದು ಸ್ಪಷ್ಟಪಡುವ ಕಾರಣ ಪ್ರಾಣಃ ಎಂಬುದಕ್ಕೆ ರಸಃ ಎಂಬ ವಿಶೇಷಣವನ್ನು ಮೂಲದಲ್ಲಿ ಕೊಟ್ಟಿದೆ ಮತ್ತು ಪ್ರಾಣ ಬಂಧನಂ ಹಿ ಸೋಮ್ಯ ಮನಃ. ಛಾಂ. ೬. ತಸ್ಯ ಪುರುಷ ವಿಧತಾಂ ಅನ್ವಯಂ ಪುರುಷ ವಿಧಃ ತೈತ್ತಿರೀಯ ಇತ್ಯಾದಿ ಶ್ರುತಿಗಳು ಮನಸ್ಸು ಪ್ರಾಣ ಬಂಧನವೆಂದು ಹೇಳುವುವು.)

೧೩. ಅಯ್ಯ ರಾಘವ, ದೇಹದೊಳಗೆ ಪ್ರಾಣ ವಾಯುವಿನ ಚಲನೆಯುಂಟಾಗುವುದರಿಂದ ಚಿತ್ತು (ಚಿತ್ ಅಥವಾ ಸಂವಿತ್) ನಾನಾ ವೃತ್ತಿಗಳ ಕಲ್ಪನೆಗಳಲ್ಲಿ ಅಭಿಮುಖವಾಗುವುದು ಯಾವುದೋ ಅದನ್ನೇ ನೀನು ಚಿತ್ತವೆಂದು ತಿಳಿಯುವವನಾಗು.

೧೪. ವಾಯುವಿನ ಚಲನೆಯ ಮೂಲಕ ನೀರಿನೊಳಗೆ ಚಲನೆಯುಂಟಾಗುವುದು. ಆದರಿಂದ ಚಕ್ರಾಕಾರವಾಗಿ ದುಂಡಗಿರುವ ಆವರ್ತಗಳನ್ನುಂಟುಮಾಡುವ ತರಂಗಗಳು ಉದ್ಭವಿಸುವಂತೆ ಪ್ರಾಣ ವಾಯುವಿನ ಸ್ಪಂದದಿಂದ ಚಿತ್ತಿನ ಸ್ಪಂದ

ಚಿತ್ತಂ ಪ್ರಾಣಪರಿಸ್ಪಂದಮಾಹುರಾಗಮಭೂಷಣಾಃ ।
ತಸ್ಮಿನ್ ಸಂರೋಧಿತೇ ನೂನಮುಪಶಾಂತಂ ಭವೇನ್ಮನಃ ॥ ೧೫ ॥

ಮನಃಸ್ಪಂದೋಪಶಾಂತ್ಯಾಯಂ ಸಂಸಾರಃ ಪ್ರವಿಲೀಯತೇ ।
ಸೂರ್ಯಾಲೋಕಪರಿಸ್ಪಂದಶಾಂತೌ ವ್ಯವಹೃತಿರ್ಯಥಾ ॥ ೧೬ ॥

ಶ್ರೀ ರಾಮ ಉವಾಚ :—
ಅನಿಶಂ ಚರತಾಂ ದೇಹಗೇಹೇ ಗಗನಗಾಮಿನಾಂ ।
ಪ್ರಾಣಾದೀನಾಂ ಪರಿಸ್ಪಂದೋ ವಾಯೂನಾಂ ರೋಧ್ಯತೇ ಕಥಂ ॥ ೧೭ ॥

ವುಂಟಾಗುವುದು. ಆ ಸ್ಪಂದದ ದೆಸೆಯಿಂದಲೇ ಸಂವಿತ್ತುಗಳುಂಟಾಗುವುವು. [ಚಿತ್ತಿನ ಸ್ಪಂದ= ಎಂದರೆ ಚಿದಾಭಾಸದಿಂದ ವ್ಯಾಪ್ತವಾದ ವೃತ್ತಿ ಭೇದ ವೆಂದರ್ಥ. ಸಂವಿದಃ= ಸಂವಿತ್ತುಗಳು ಎಂದರೆ ಆಯಾ ವಿಷಯಾಕಾರವಾದ ಪ್ರಕಾಶಾತ್ಮಕ ಜ್ಞಾನಗಳು.]

೧೫. ಶ್ರುತ್ಯಾದಿ ಶಾಸ್ತ್ರಗಳ ರಹಸ್ಯಜ್ಞರಾದ ಮಹಾ ಜ್ಞಾನಿಗಳು ಚಿತ್ತ ವೆಂಬುದು ಪ್ರಾಣ ವಾಯುವಿಗೆ ಅಧೀನವಾದ ಸ್ಪಂದವುಳ್ಳದ್ದು (ಚಿತ್ತದ ಸ್ಪಂದವು ಪ್ರಾಣ ವಾಯುವಿನ ಸ್ಪಂದಕ್ಕೆ ಅಧೀನವಾದುದು) ಎಂದು ಹೇಳುವರು. ಅದು ಕಾರಣ, ಪ್ರಾಣವಾಯುವಿನ ಸ್ಪಂದವನ್ನು ನಿರೋಧ ಮಾಡಿಬಿಟ್ಟರೆ ಆಗ ಆ ಪ್ರಯತ್ನ ದಿಂದಲೇ ಮನಸ್ಸಿನ ಸ್ಪಂದವೂ ತಾನಾಗಿ ನಿಂತುಹೋಗಿ, ಮನಸ್ಸು ನಿಸ್ಸಂದೇಹ ವಾಗಿ ಉಪಶಾಂತವಾಗಿಬಿಡುವುದು.

೧೬. ಸೂರ್ಯನ ಪ್ರಕಾಶದ ಪ್ರಸಾರವು ಸಮಗ್ರವಾಗಿ ಶಾಂತವಾಗಿ ಬಿಟ್ಟರೆ, ಬಳಿಕ ಲೋಕದಲ್ಲಿ ಜನಗಳ ವ್ಯವಹಾರವೂ ಹೇಗೆ ನಿಂತುಹೋಗಿಬಿಡು ವುದೋ, ಹಾಗೆಯೇ ಮನಸ್ಸಿನ ಚಲನವು ಸಂಪೂರ್ಣವಾಗಿ ಶಾಂತವಾಗಿ ಬಿಡುವುದ ರಿಂದ ಈ ಸಂಸಾರವೂ ನಿಃಶೇಷವಾಗಿ ಲಯಹೊಂದಿ ಅದೃಶ್ಯವಾಗಿ ಬಿಡುವುದು.

ಶ್ರೀ ರಾಮನು ಕೇಳಿದನು:—

೧೭. ಗುರುಗಳೇ, ಪ್ರಾಣಿಗಳ ದೇಹವೆಂಬ ತನ್ನ ಮನೆಯೊಳಗೆ ಹೃದಯಾದಿ ಸ್ಥಾನಗಳಲ್ಲಿಯೂ ಎಪ್ಪತ್ತೆರಡು ಸಾವಿರ ನಾಡೀ ಭೇದಗಳಲ್ಲಿ ಯೂ ಕೂಡ ಸಂತತವೂ ಸಂಚಾರಮಾಡುತ್ತಿರುವಂತಹ, ಮತ್ತು ಮುಖನಾಸಿಕಾದ್ಯವಯವಗಳ ರಂಧ್ರಗಳ

ಶ್ರೀ ವಸಿಷ್ಠ ಉವಾಚ :—

ಶಾಸ್ತ್ರಸಜ್ಜನಸಂಪರ್ಕವೈರಾಗ್ಯಾಭ್ಯಾಸಯೋಗತಃ ।
ಅನಾಸ್ಥಾಯಾಂ ಹೃದಿಸ್ಥಾಯಾಂ ಪೂರ್ವಂ ಸಂಸಾರವೃತ್ತಿಷು ॥ ೧೮ ॥

ಯಥಾಭಿವಾಂಛಿತಧ್ಯಾನಾಚ್ಚಿರಮೇಕತಯೋದಿತಾತ್ ।
ಏಕತತ್ವಘನಾಭ್ಯಾಸಾತ್ಪ್ರಾಣಸ್ಪಂದೋ ನಿರುಧ್ಯತೇ ॥ ೧೯ ॥

ಪೂರಕಾದಿನಿಜಾಯಾಮಾತ್ ದೃಢಾಭ್ಯಾಸಾದಖೇದಜಾತ್ ।
ಏಕಾಂತಧ್ಯಾನಸಂಯೋಗಾ ತ್ಪ್ರಾಣಸ್ಪಂದೋ ನಿರುಧ್ಯತೇ ॥ ೨೦ ॥

ಲ್ಲಿಯೂ ಮತ್ತು ಬಾಹ್ಯಾಕಾಶದಲ್ಲಿಯೂ ಸಂಚರಿಸುವ ಸ್ವಭಾವವುಳ್ಳ ಈ ಪ್ರಾಣಾದಿ ವಾಯುಗಳ ಚಲನವನ್ನು ನಿರೋಧಮಾಡುವ ಪ್ರಕಾರವು ಯಾವುದು ?

ಶ್ರೀ ವಸಿಷ್ಠರು ಹೇಳಿದರು:—

೧೮-೧೯. ಅಯ್ಯ ರಾಮ, ಸಂತತವಾದ ಸಚ್ಛಾಸ್ತ್ರಾರ್ಥವಿಚಾರ, ಸಾಧು ಸಜ್ಜನ ಸಹವಾಸ, ವೈರಾಗ್ಯಾಭ್ಯಾಸ, ಇತ್ಯಾದಿ ಸಾಧನಗಳ ದಾರ್ಢ್ಯದಿಂದ ಪೂರ್ವದಿಂದಲೂ ಅಭ್ಯಸ್ತವಾಗಿರುವ ಈ ಸಾಂಸಾರಿಕ ವ್ಯವಹಾರಗಳಲ್ಲಿ, ಆತ್ಯಂತಿಕ ಪರಿತ್ಯಾಗದಿಂದಲೂ, ಸಾಂಸಾರಿಕ ವ್ಯವಹಾರ ವಿರೋಧಿಗಳಾದ ಯಮನಿಯಮ ಶಮದಮಾದಿಗಳನ್ನು ಅಭ್ಯಾಸಮಾಡುವುದರಿಂದಲೂ ಕೂಡ, ಅತಿಶಯವಾದ ಅನಾಸ್ಥೆಯು, ಹೃದಯದಲ್ಲಿ ಪ್ರತಿಷ್ಠಿತವಾಗುವುದು. ಅನಂತರಸಾಧಕನು ತನ್ನ ಮನಸ್ಸಿಗೆ ಅಭಿಲಷಿತವಾದ ಕ್ರಮದಲ್ಲಿ ಮೊದಮೊದಲು ಸ್ಥೂಲವಾದ ಸೂರ್ಯಮಂಡಲ, ಸ್ಫಟಿಕ ದೇವತಾಪ್ರತಿಮೆ ಇತ್ಯಾದಿ ಮೂರ್ತಿಗಳಲ್ಲಿಬಹುದೀರ್ಘಕಾಲ ಧ್ಯಾನಮಾಡುವುದನ್ನು ಕಲಿಯಬೇಕು. ಈ ಧ್ಯಾನವು ಅವಿಚ್ಛಿನ್ನವಾಗಿ ನಡೆದು ಸ್ಥಿರವಾಗಿ ಏಕಾಗ್ರತೆಯಿಂದ ಮನಸ್ಸು ಪರಿಣಾಮವನ್ನು ಹೊಂದಬೇಕು. ಅದೂ ಆದ ಬಳಿಕ ಅಂದರೆ ಸಾಲಂಬನವಾದ ಮೂರ್ತಿ ಧ್ಯಾನ ಮಾಡುವ ಅಭ್ಯಾಸವು ದೃಢವಾಗಿ ಅದರ ಬಲದಿಂದ ಚಿತ್ತೈಕಾಗ್ರತೆಯು ಸಂತತವಾಗಿ ಅಭ್ಯಸ್ತವಾದ ಅನಂತರ ನಿರಾಲಂಬನವಾದ, ನಿರಾಕಾರ ಅದ್ವಿತೀಯಾತ್ಮತತ್ತ್ವ ಚಿಂತನೆಯ ಅಭ್ಯಾಸವು ಸಿದ್ಧಿಸುವುದು. ಈ ಆತ್ಮತತ್ವಾನುಸಂಧಾನವನ್ನು ದೃಢವಾಗಿ ಸಂತತವೂ ಅಭ್ಯಾಸಮಾಡುವುದರಿಂದ ಪ್ರಾಣವಾಯುವಿನ ಚಲನವು (ಸ್ಪಂದವು) ನಿರೋಧಿಸಲ್ಪಡುವುದು.

೨೦. ಪೂರಕ, ಕುಂಭಕ, ರೇಚಕಗಳೆಂದು ಯೋಗ ಶಾಸ್ತ್ರದಲ್ಲಿ ಪ್ರಸಿದ್ಧ

ಓಂಕಾರೋಚ್ಚಾರಣಪ್ರಾಂತಶಬ್ದತತ್ತ್ವಾನುಭಾವನಾತ್ ।
ಸುಷುಪ್ತೇ ಸಂವಿದೋ ಜಾತೇ ಪ್ರಾಣಸ್ಪಂದೋ ನಿರುಧ್ಯತೇ ॥ ೨೧ ॥

ರೇಚಕೇ ನೂನಮಭ್ಯಸ್ತೇ ಪ್ರಾಣೇ ಸ್ಫಾರೇ ಖಮಾಗತೇ ।
ನ ಸ್ಪೃಶತ್ಯಂಗರಂಧ್ರಾಣಿ ಪ್ರಾಣಸ್ಪಂದೋ ನಿರುಧ್ಯತೇ ॥ ೨೨ ॥

ಗಳಾದ ಕ್ರಮಗಳಿಂದ (ತನ್ನ ಪ್ರಾಣಗಳ ಸಂಚಾರವನ್ನು ಬಿಗಿ ಹಿಡಿದು ತನ್ನ ವಶದಲ್ಲಿಟ್ಟುಕೊಳ್ಳುವುದರಿಂದಲೂ) ಪ್ರಾಣಾಯಾಮ ಮಾಡುವುದರಿಂದಲೂ, ಮನಸ್ಸಿನಲ್ಲಿ ಸ್ವಲ್ಪವೂ ಖೇದಗೊಳ್ಳದೆ ಚಿರಕಾಲ ಪೂರಕಾದಿ ಕ್ರಮಗಳನ್ನು ದೃಢವಾಗುವ ರೀತಿಯಲ್ಲಿ ಅಭ್ಯಾಸ ಮಾಡುವುದರಿಂದಲೂ, ಮನಸ್ಸನ್ನು ಏಕಾಂತ ಧ್ಯಾನದೊಂದಿಗೆ ಸೇರಿಸುವುದರಿಂದಲೂ ಪ್ರಾಣ ವಾಯುವಿನ ಸ್ಪಂದವು ನಿರೋಧಿಸಲ್ಪಡುವುದು.

೨೧. ಅತಿ ದೀರ್ಘವಾಗಿ ಉಚ್ಚರಿಸಲ್ಪಟ್ಟ ಓಂಕಾರದ ಅಕಾರ ಉಕಾರ ಮಕಾರಗಳೆಂಬ ಆದ್ಯವಾದ ತ್ರಯಗಳನ್ನು ಬಿಟ್ಟು ಕೊನೆಯದಾದ ಅಮಾತ್ರಕ ತುರ್ಯಪಾದಾಲಂಬನಯೋಗದಿಂದಲಾದರೂ ನಿಷ್ಪ್ರಪಂಚಾದ್ವೈತ ತತ್ತ್ವಾನುಸಂಧಾನ ಮಾಡುವುದರಿಂದ ಬಾಹ್ಯಾರ್ಥ ಜ್ಞಾನವು ಆತ್ಯಂತಿಕವಾಗಿ (ಸುಷುಪ್ತ ಸ್ಥಿತಿಯಲ್ಲಿನ ಹಾಗೆ) ಉಪಶಾಂತವಾಗಿ ಇಲ್ಲದೆ ಹೋಗಿಬಿಡಲು, ಪ್ರಾಣ ಸ್ಪಂದವು ನಿರೋಧಿಸಲ್ಪಡುವುದು.

[ಓಂಕಾರ ಸ್ವರೂಪ ವಿಚಾರವು ಮಾಂಡೂಕ್ಯೋಪನಿಷತ್ತಿನಲ್ಲಿಯೂ, ಶ್ರೀ ಗೌಡ ಪಾದಾಚಾರ್ಯ ವಿರಚಿತ ಮಾಂಡೂಕ್ಯಕಾರಿಕೆಗಳಲ್ಲಿಯೂ ಸುಸ್ಪಷ್ಟವಾಗಿ ವರ್ಣಿತವಾಗಿರುವುದು. ಈ ಉಪನಿಷತ್ತು ಆತ್ಮ ತತ್ತ್ವವನ್ನು ನೇರವಾಗಿ ಅನುಭವಕ್ಕೆ ಬರುವಂತೆ ಉಪದೇಶಿಸುವುದು. ಜಿಜ್ಞಾಸುವು ಅತ್ಯವಶ್ಯವಾಗಿ ಓದಿ ಗ್ರಹಿಸಿ ತತ್ತ್ವವನ್ನು ತಿಳಿಯಬೇಕು. ಅನುಭವಕ್ಕೆ ತಂದುಕೊಳ್ಳಬೇಕು.]

೨೨. ರೇಚಕವು ಚೆನ್ನಾಗಿ ಅಭ್ಯಾಸ ಮಾಡಲ್ಪಡಲಾಗಿ ವಿಶಾಲವಾದ ಪ್ರಾಣವಾಯುವು ಕ್ರಮೇಣ ಶೂನ್ಯಭಾವವನ್ನೋ ಅಥವಾ ಬಾಹ್ಯಾಕಾಶವನ್ನೋ ಹೊಂದಿ ಅದು ಪುನಃ ನಾಸಿಕಾದಿ ಅಂಗಗಳ ರಂಧ್ರಗಳನ್ನು ಮುಟ್ಟದೆ ಇರುವಂತಾಗಿ, ಕೊನೆಗೆ

ಪೂರಕೇ ನೂನಮಭ್ಯಸ್ತೇ ಪೂರಾದ್ಗಿರಿ ಘನಸ್ಥಿತೇ ।
ಪ್ರಾಣೇ ಪ್ರಶಾಂತಸಂಚಾರೇ ಪ್ರಾಣಸ್ಪಂದೋ ನಿರುಧ್ಯತೇ ॥ ೨೩ ॥

ಕುಂಭಕೇ ಕುಂಭವತ್ಕಾಲ ಮನಂತಂ ಪರಿತಿಷ್ಠತಿ ।
ಅಭ್ಯಾಸಾತ್ಸ್ತಂಭಿತೇ ಪ್ರಾಣೇ ಪ್ರಾಣಸ್ಪಂದೋ ನಿರುಧ್ಯತೇ ॥ ೨೪ ॥

ರೇಚಕ ಕ್ರಮದ ಕಾಲದೈರ್ಘ್ಯವನ್ನು ಹೆಚ್ಚಿಸುತ್ತಾ ಹೆಚ್ಚಿಸುತ್ತಾ ಧ್ಯಾನವನ್ನು ಅಭ್ಯಾಸಮಾಡುವುದರಿಂದಲೂ ಪ್ರಾಣಸ್ಪಂದವು ನಿರೋಧಿಸಲ್ಪಡುವುದು.

೨೩. ಹೀಗೆಯೇ ಪೂರಕವು ದೃಢವಾಗಿ ಅಭ್ಯಾಸ ಮಾಡಲ್ಪಡಲಾಗಿ ಪ್ರಾಣ ವಾಯುವು ದೇಹದೊಳಗೆ ಪೂರ್ಣವಾಗಿ ತುಂಬಿಕೊಳ್ಳುವುದರಿಂದ, ಪರ್ವತದಮೇಲೆ ಮೇಘಗಳಹಾಗೆ, ಹೃದಯಾಕಾಶವು ಪೂರ್ಣವಾಗುವವರೆಗೆ ಮೆಲ್ಲಮೆಲ್ಲಗೆ ವೃದ್ಧಿ ಹೊಂದುತ್ತಾ ಸಂಚಾರಮಾಡುವುದನ್ನು ನಿಲ್ಲಿಸಿ ನಿಶ್ಚಲವಾಗಿದ್ದುಕೊಂಡಿರಲು, ಪೂರಕಕರ್ಮದಕಾಲ ದೈರ್ಘ್ಯವನ್ನು ಹೆಚ್ಚಿಸಿಕೊಳ್ಳುತ್ತಾ ಧ್ಯಾನನಿರತನಾಗುವುದ ರಿಂದಲೂ ಪ್ರಾಣಸ್ಪಂದವು ನಿರೋಧಿಸಲ್ಪಡುವುದು.

೨೪. ಹೀಗೆ ಪೂರಕಕರ್ಮದಿಂದ ವಾಯುವು ಹೃದಯಾಕಾಶದೊಳಗೆ ಪೂರ್ತಿ ಯಾಗಿ ತುಂಬಿಕೊಂಡ ತರುವಾಯ ಕುಂಭಕವೆಂಬ ಪ್ರಾಣಾಯಾಮಕ್ರಮವು ಚೆನ್ನಾಗಿ ಅಭ್ಯಾಸಮಾಡಲ್ಪಟ್ಟು ಪೂರ್ಣಕುಂಭದಂತೆ ಅಪರಿಮಿತ ದೀರ್ಘಕಾಲ ಪರ್ಯಂತ ಅದೇ ಅಭ್ಯಾಸಬಲದಿಂದ ಪ್ರಾಣವಾಯು ಸ್ತಂಭಿಸಲ್ಪಟ್ಟು ನಿಶ್ಚಲವಾಗಿ ರಲು, ಆ ಪೂರಕದ ಕಾಲದೈರ್ಘ್ಯವನ್ನು ವೃದ್ಧಿಪಡಿಸಿಕೊಂಡು ಧ್ಯಾನಾಭ್ಯಾಸನಿರತ ನಾಗುವುದರಿಂದಲೂ ಪ್ರಾಣಸ್ಪಂದವು ನಿರುದ್ಧವಾಗುವುದು.

[(ತಸ್ಮಿನ್ ಸತಿ) "ಶ್ವಾಸ ಪ್ರಶ್ವಾಸಯೋಃ ಗತಿ ವಿಚ್ಛೇದಃ ಪ್ರಾಣಾಯಾಮಃ" "ಬಾಹ್ಯಾಭ್ಯಂತರಸ್ತಂಭವೃತ್ತಿಃ ದೇಶಕಾಲ ಸಂಖ್ಯಾಭಿಃ ಪರಿದೃಷ್ಟೋ ದೀರ್ಘ ಸೂಕ್ಷ್ಮಃ" "ಬಾಹ್ಯಾಭ್ಯಂತರ ವಿಷಯಾಂಕ್ಷೇಪೀ ಚತುರ್ಥಃ. ಪಾತಂಜಲಯೋಗ ಸೂತ್ರಗಳು. ಎರಡನೆಯ ಸಾಧನಪಾದ, ಸೂತ್ರಸಂಖ್ಯೆ ೪೯, ೫೦, ೫೧. ಇವುಗಳನ್ನು ಓದಿ ಮೇಲಣ ವಿವರವನ್ನು ತಿಳಿಯಿರಿ.]

ತಾಲು ಮೂಲಗತಾಂ ಯತ್ನಾಜ್ಜಿಹ್ವಯಾಕ್ರಮ್ಯ ಘಂಟಿಕಾಂ ।
ಊರ್ಧ್ವರಂಧ್ರಗತೇ ಪ್ರಾಣೇ ಪ್ರಾಣಸ್ಪಂದೋ ನಿರುಧ್ಯತೇ ॥ ೨೫ ॥

ಸಮಸ್ತ ಕಲನೋನ್ಮುಕ್ತೇ ನ ಕಿಂಚಿನ್ನಾಮ ಸೂಕ್ಷ್ಮಕೇ ।
ಧ್ಯಾನಾತ್ಸಂವಿದಿ ಲೀನಾಯಾಂ ಪ್ರಾಣಸ್ಪಂದೋ ನಿರುಧ್ಯತೇ ॥ ೨೬ ॥

ದ್ವಾದಶಾಂಗುಲಪರ್ಯಂತೇ ನಾಸಾಗ್ರೇ ವಿಮಲಾಂಬರೇ ।
ಸಂವಿದ್ದೃಶಿ ಪ್ರಶಾಮ್ಯಂತ್ಯಾಂ ಪ್ರಾಣಸ್ಪಂದೋ ನಿರುಧ್ಯತೇ ॥ ೨೭ ॥

ಅಲ್ಲಿಯೇ (ಬಾಹ್ಯಸ್ಯವಾಯೋಃ ಆಚಮನಂ ಶ್ವಾಸಃ), ಹೊರಗಣವಾಯು ವನ್ನು ನಾಸಿಕಾದಿ ಅಂಗಗಳ ರಂಧ್ರಗಳಮೂಲಕ ಒಳಕ್ಕೆ ಎಳೆದುಕೊಂಡು ಅಂತಃ ನಿಶ್ಚಲವಾಗಿರುವಂತೆ ಧರಿಸುವುದು. (ಇದು ಪೂರಕ) (ಕೌಷ್ಠ್ಯಸ್ಯವಾಯೋಃ ನಿಃಸಾರಣಂ ಪ್ರಶ್ವಾಸಃ) ಒಳಗಿರುವ ವಾಯುವನ್ನು ಅಂಗರಂಧ್ರಗಳಮೂಲಕ ಹೊರಗೆ ತಳ್ಳಿ ಪುನಃ ಅದು ಒಳಕ್ಕೆಪ್ರವೇಶಿಸದಂತೆ ಹೊರಗಡೆಯೇ ಧರಿಸುವುದು. ಇದು ಬಾಹ್ಯಗತ್ಯಭಾವ (ಇದು ರೇಚಕ) ತಯೋಃ ಗತಿವಿಚ್ಛೇದಃ ಉಭಯಾಭಾವಃ ಪ್ರಾಣಾಯಾಮಃ ಮತ್ತು ತೃತೀಯಃ ಸ್ತಂಭವೃತ್ತಿಃ ಯತ್ರಉಭಯಾಭಾವಃ ಸಕೃತ್ ಪ್ರಯತ್ನಾತ್ ಭವತಿ. ಮೇಲೆ ವಿವರಿಸಿದ ಶ್ವಾಸ ಪ್ರಶ್ವಾಸಗಳೆರಡೂ ಇಲ್ಲದಿರುವ ಪ್ರಾಣವಾಯುವಿನ ಗತಿವಿಚ್ಛೇದವೇ ಮೂರನೆಯ ಪೂರಕವೆಂದು ತಿಳಿಯಿರಿ. ವಿಸ್ತರ ಭಯದಿಂದ ಸಂಗ್ರಹಿಸಿದೆ. (ಮತ್ತು ಭಗವದ್ಗೀತಾ ಅಧ್ಯಾಯ ೬ ಶ್ಲೋಕ ೧೦ ರಿಂದ ೨೮. ನೋಡಿ ವಿಚಾರಮಾಡಿರಿ.)

೨೫. ಜಿಹ್ವಾಮೂಲದಲ್ಲಿ ಸ್ತನದಂತೆ ನೇತಾಡುತ್ತಾ ಕಾಣುವ ಇಂದ್ರ ಯೋನಿ (ಘಂಟಿಕಾ) ಯೆಂಬ ಭಾಗವನ್ನು ಪ್ರಯತ್ನ ಪೂರ್ವಕವಾಗಿ ನಾಲಗೆಯಿಂದ ಮೆಟ್ಟಿ ಅದುಮಿಕೊಂಡು ಪ್ರಾಣವಾಯುವನ್ನು ಬ್ರಹ್ಮರಂಧ್ರದೊಳಗೆ ಪ್ರವೇಶ ಮಾಡಿಸಿ ನಿಶ್ಚಲವಾಗಿರುವಂತೆ ಧರಿಸಿಕೊಂಡು ಚಿರಕಾಲ ಧ್ಯಾನಾರೂಢನಾಗಿರುವುದ ರಿಂದಲೂ ಪ್ರಾಣಸ್ಪಂದವು ನಿರೋಧಿಸಲ್ಪಡುವುದು. (ಇದಕ್ಕೆ ಲಂಬಿಕಾಯೋಗ ದಿಂದ ಕೂಡಿದ ನಭೋಧಾರಣಾ ಎಂದು ಶಾಸ್ತ್ರದಲ್ಲಿ ಸಂಜ್ಞೆ.)

೨೬. ಸಮಸ್ತ ವಿಕಲ್ಪ ವಿಕಾರಗಳಿಂದ ವಿವರ್ಜಿತವಾಗಿ, ಆದುಕಾರಣವೇ ಯಾವುದೆದೆಂದು ಹೆಸರೂ ಇಲ್ಲದೆ ಶೂನ್ಯವಾಗಿರುವ, ಅತಿಸೂಕ್ಷ್ಮವಾದ ಹೃದಯಾ

ಅಭ್ಯಾಸಾದೂರ್ಧ್ವರಂಧ್ರೇಣ ತಾಲೂರ್ಧ್ವಂ ದ್ವಾದಶಾಂತಗೇ ।
ಪ್ರಾಣೇ ಗಲಿತ ಸಂವೃತ್ತೇ ಪ್ರಾಣಸ್ಪಂದೋ ನಿರುಧ್ಯತೇ ॥ ೨೮ ॥

ಭ್ರೂಮಧ್ಯೇ ತಾರಕಾಲೋಕ ಶಾಂತಾವಂತ ಮುಪಾಗತೇ ।
ಚೇತನೇ ಕೇತನೇ ಬುದ್ಧೇ ಪ್ರಾಣಸ್ಪಂದೋ ನಿರುಧ್ಯತೇ ॥ ೨೯ ॥

ಝಟಿತ್ಯೇವ ಯದುದ್ಭೂತಂ ಜ್ಞಾತಂ ತಸ್ಮಿನ್ ದೃಢಾಶ್ರಿತೇ ।
ಅಸಂಶ್ಲಿಷ್ಟ ವಿಕಲ್ಪಾಂಶೇ ಪ್ರಾಣಸ್ಪಂದೋ ನಿರುಧ್ಯತೇ ॥ ೩೦ ॥

ಕಾಶದಲ್ಲಿ, ಧ್ಯಾನಾಭ್ಯಾಸಬಲದಿಂದ, ಬಾಹ್ಯಾಭ್ಯಂತರಗಳಾದ ಸಮಸ್ತ ಅರ್ಥಜ್ಞಾನ ರೂಪ ಚಿತ್ತವೃತ್ತಿಗಳೂ ಲಯಹೊಂದಿಬಿಡಲಾಗಿ, ಆಗ ನಿರ್ವಿಕಲ್ಪ ಸಮಾಧಿಯಿಂದ ಪ್ರಾಣಸ್ಪಂದವು ನಿರುದ್ಧವಾಗುವುದು.

೨೭. ನಾಸಿಕಾಗ್ರದ ಸಮೀಪಗತವಾದ ಹನ್ನೆರಡು ಅಂಗುಲಗಳ ಪರಿಮಿತಿಯುಳ್ಳ ನಿರ್ಮಲವಾದ ಬಾಹ್ಯಾಕಾಶದಲ್ಲಿ ಅರ್ಥಜ್ಞಾನವನ್ನುಂಟುಮಾಡುವ ಮನಸ್ಸೂ, ಚಕ್ಷುರಿಂದ್ರಿಯವೂ ಅಡಗಿಹೋಗಿ ಅಲ್ಲಿಯೇ ನಿಶ್ಚಲವಾಗಿ ನಿಂತಿರಲು ಆಗ ಧ್ಯಾನಯೋಗದಿಂದ ಪ್ರಾಣಸ್ಪಂದವು ನಿರೋಧಿಸಲ್ಪಡುವುದು.

೨೮. ಅಥವಾ ಪೂರ್ವೋಕ್ತವಾದ ಲಂಬಿಕಾಯೋಗದಿಂದ ಅಸಹಕೃತವಾದ, ಉಪಾಯಾಂತರಗಳಿಂದ ಅಭ್ಯಸ್ತವಾದ ನಭೋಧಾರಣದಿಂದಲಾದರೂ, ಅಂದರೆ ಬಾಯಿಯೊಳಗೆ ಊರ್ಧ್ವಮುಖವಾಗಿರುವ ರಂಧ್ರದ ಮೂಲಕ. ಜಿಹ್ವಾಮೂಲದ ಮೇಲಕ್ಕೆ ಇರುವ ಬ್ರಹ್ಮರಂಧ್ರದೊಳಕ್ಕೆ ಪ್ರಾಣವಾಯುವನ್ನು ಪ್ರವೇಶಮಾಡಿಸಿ, ಅದು ಅಲ್ಲಿಯೇ ಜೀರ್ಣವಾಗಿ ಕುಗ್ಗಿಹೋಗಿಬಿಟ್ಟರೆ ಆಗ ಪ್ರಾಣಸ್ಪಂದವು ನಿರುದ್ಧವಾಗುವುದು.

೨೯. ಎರಡು ಹುಬ್ಬುಗಳ ಮಧ್ಯಭಾಗದಲ್ಲಿ ಚಕ್ಷುರಿಂದ್ರಿಯವನ್ನು ಚಿರಕಾಲ ನಿರೋಧಮಾಡಿ ಶಾಂತಿಗೊಳಿಸಿ ಬಿಡಲಾಗಿ, ಮತ್ತು ಜಿಹ್ವಾಗ್ರವೂ ಪ್ರಾಣವೂ ಪೂರ್ವೋಕ್ತ ರೀತಿಯಿಂದ ಕಪಾಲರಂಧ್ರವನ್ನು ಪ್ರವೇಶಮಾಡಿ ಬ್ರಹ್ಮರಂಧ್ರವನ್ನು ಸೇರಿರಲಾಗಿ, ಮತ್ತು ಅವಿಮುಕ್ತಸ್ಥಾನವೆಂಬ ಭ್ರೂಮಧ್ಯದಲ್ಲಿ ಚಿನ್ಮಾತ್ರ ಸ್ವರೂಪ

ಚಿರಂ ಕಾಲಂ ಹೃತೇ ಕಾಂತವ್ಯೋಮ ಸಂವೇದನಾನ್ಮನೇ ।
ಅವಸಾನಾನ್ಮನೋಧ್ಯಾನಾತ್ಪ್ರಾಣ ಸ್ಪಂದೋ ನಿರುಧ್ಯತೇ ॥ ೩೧ ॥

ಶ್ರೀರಾಮ ಉವಾಚ:—
ಬ್ರಹ್ಮನ್ಜಗತಿ ಭೂತಾನಾಂ ಹೃದಯಂ ತತ್ ಕಿಮುಚ್ಯತೇ ।
ಇದಂ ಸರ್ವಂ ಮಹಾದರ್ಶಂ ಯಸ್ಮಿಂಸ್ತತ್ಪ್ರತಿ ಬಿಂಬತಿ ॥ ೩೨ ॥

ನಾದ ಪರಮೇಶ್ವರನು ಆತ್ಮಭಾವದಿಂದ ಸಾಕ್ಷಾತ್ಕರಿಸಲ್ಪಟ್ಟರೆ, ಆಗ ಪ್ರಾಣಸ್ಪಂದವು ನಿರೋಧಿಸಲ್ಪಡುವುದು (ಇದಕ್ಕೆ ಖೇಚರೀಮುದ್ರಾ ಎಂದು ಸಂಜ್ಞೆ)

೩೦. ಗುರುವಿನ ಅಥವಾ ಪರಮೇಶ್ವರನ ಅನುಗ್ರಹದಿಂದಲಾಗಲಿ ಅಥವಾ ಜನ್ಮಾಂತರೀಯ ಸುಕೃತ ವಿಶೇಷದಿಂದಲಾಗಲೀ ಕಾಕತಾಳೀಯ ನ್ಯಾಯಕ್ರಮದಿಂದ ಆಕಸ್ಮಿಕವಾಗಿ ತಟ್ಟನೆ ಉದ್ಭವಿಸಿದ ಜ್ಞಾನವನ್ನು ದೃಢವಾಗಿ ಆಶ್ರಯಿಸಿಕೊಂಡು ಅದರಲ್ಲಿ ತಟ್ಟನೆ ಆಗಲೇ ಚಿತ್ತವಿಕಲ್ಪಗಳು ಸಂಪರ್ಕವನ್ನು ಪಡೆಯದೆ ಇರುವಂತೆ, ಆ ವಿಕಲ್ಪಗಳನ್ನು ಪೂರ್ತಿಯಾಗಿ ಶಮನಗೊಳಿಸಿ ಬಿಡುವುದರಿಂದಲೂ ಪ್ರಾಣಸ್ಪಂದವು ನಿರೋಧಿಸಲ್ಪಡುವುದು.

೩೧. ಅಥವಾ, ದಹರಾಕಾಶದಲ್ಲಿ ಚಿರಕಾಲ ಮನಸ್ಸನ್ನು ನಿಲ್ಲಿಸಿ ಮನಸ್ಸನ್ನು ನಿರ್ವಾಸನವನ್ನಾಗಿ ಮಾಡಿಕೊಂಡು, ಸ್ಥಿರವಾಗಿ ಧ್ಯಾನಮಾಡುವುದರಿಂದ, ಬ್ರಹ್ಮಪುರವೆಂದು ಪ್ರಸಿದ್ಧವಾಗಿರುವ ಕಾರಣ ಅತ್ಯಂತ ಪ್ರಿಯತಮವಾದ ದಹರಾಕಾಶದ ಸಾಕ್ಷಾತ್ಕಾರವಾಗುವುದು. ಇದರಮೂಲಕ, ಅಯ್ಯ ಮನನ ಶೀಲನಾದರಾಮ, ಮನಸ್ಸು (ಅಪಹೃತವಾಗಿ) ನಾಶಹೊಂದಲು, ಆಗಲೂ ಪ್ರಾಣಸ್ಪಂದವು ನಿರೋಧಿಸಲ್ಪಡುವುದು.

ಶ್ರೀ ರಾಮನು ಕೇಳಿದನು:—
ಸ್ವಾಮಿ ಬ್ರಹ್ಮರ್ಷಿಗಳೇ, ಲೋಕದಲ್ಲಿ ಹೃದಯವೆಂಬ ಶಬ್ದವು ಪುಂಡರೀಕಾಕಾರವಾದ ಮಾಂಸ ವಿಶೇಷ, ಮನಸ್ಸು ಮತ್ತು ಪರಮಾತ್ಮ ಎಂಬ ಅರ್ಥಗಳಲ್ಲಿ ರೂಢವಾಗಿರುವುದು. ಭೂತಗಳ ಹೃದಯವೆಂಬುದು ಇವುಗಳೊಳಗೆ ಯಾವುದು ಎಂದು ತಮಗೆ ಅಭಿಮತವು? ತಾವು ಈಗಲೇ ಉಪದೇಶಮಾಡಿದಂತೆ, ಈ ಸಮಸ್ತವೂ ದೊಡ್ಡ ಕನ್ನಡಿಯಲ್ಲಿ ಹೇಗೋ ಹಾಗೆ, ಯಾವ ಹೃದಯದಲ್ಲಿ ಪ್ರತಿಬಿಂಬಿಸಿದಂತೆ ಸ್ಫುರಿಸುವುದೋ ಅಂತಹ ಹೃದಯವೆಂಬುದು ಯಾವುದು ?

ಶ್ರೀ ವಸಿಷ್ಠ ಉವಾಚ:—
ಸಾಧೋ ಜಗತಿ ಭೂತಾನಾಂ ಹೃದಯಂ ದ್ವಿವಿಧಂ ಸ್ಮೃತಂ ।
ಉಪಾದೇಯಂ ಚ ಹೇಯಂ ಚ ವಿಭಾಗೋಽಯಂ ತಯೋಃ ಶೃಣು ॥ ೩೩ ॥

ಇಯತ್ತಯಾ ಪರಿಚ್ಛಿನ್ನೇ ದೇಹೇ ಯದ್ವಕ್ಷಸೋಽಂತರಂ ।
ಹೇಯಂ ತದ್ಧೃದಯಂ ವಿದ್ಧಿ ತನಾವೇಕತಟೇ ಸ್ಥಿತಂ ॥ ೩೪ ॥

ಸಂವಿನ್ಮಾತ್ರಂ ತು ಹೃದಯ ಮುಪಾದೇಯಂ ಸ್ಥಿತಂ ಸ್ಮೃತಂ ।
ತದಂತರೇ ಚ ಬಾಹ್ಯೇ ಚ ನ ಚ ಬಾಹ್ಯೇ ನ ಚಾಂತರೇ ॥ ೩೫ ॥

ತತ್ತು ಪ್ರಧಾನಂ ಹೃದಯಂ ತತ್ರೇದಂ ಸಮವಸ್ಥಿತಂ ।
ತದಾದರ್ಶಃ ಪದಾರ್ಥಾನಾಂ ತತ್ಕೋಶಃ ಸರ್ವ ಸಂಪದಾಂ ॥ ೩೬ ॥

ಶ್ರೀ ವಸಿಷ್ಠರು ಹೇಳಿದರು:—

೩೩. ಅಯ್ಯ ಸಾಧುವೇ, ಈ ಜಗತ್ತಿನಲ್ಲಿ ಪ್ರಾಣಿಗಳಿಗೆ ಹೃದಯವೆಂಬುದು ಉಪಾದೇಯವೆಂದೂ ಹೇಯವೆಂದೂ ಎರಡು ಪ್ರಕಾರವಾಗಿರುವುದು. ಅವೆರಡರ ವಿಬಾಗ ಸ್ವರೂಪವನ್ನು ಹೇಳುವೆನು ಕೇಳು.

೩೪. "ಇದು ಇಷ್ಟು ಪರಿಮಾಣವುಳ್ಳದ್ದು" ಎಂಬುದಾಗಿ ಒಂದು ಕ್ಲುಪ್ತವಾದ ಪರಿಮಿತಿಗೆ ಒಳಪಟ್ಟು ಪರಿಚ್ಛಿನ್ನವಾಗಿರುವ ಈ ದೇದೊಳಗೆ ವಕ್ಷಸ್ಥಲದ ಮಧ್ಯಭಾಗವಿರುವುದಲ್ಲವೇ, ಅದನ್ನು ಹೇಯವಾದ ಹೃದಯವೆಂದು ತಿಳಿ, ಏಕೆಂದರೆ, ಅದು ಅಲ್ಪಶರೀರದ ಯಾವುದೋ ಒಂದು ಕಡೆಯಲ್ಲಿ ಬಿದ್ದುಕೊಂಡಿರುವುದು!

೩೫. ಕೇವಲ ಜ್ಞಾನರೂಪವಾಗಿ ತ್ರಿಕಾಲಾಬಾಧ್ಯವಾಗಿರತಕ್ಕ ಹೃದಯವೆಂದು ವ್ಯವಹೃತವಾಗಿರುವುದು ಯಾವುದೋ ಅದನ್ನು ಉಪಾದೇಯವೆಂದು ಪ್ರಾಜ್ಞರು ಹೇಳುವರು. ಇದು ಒಳಗೂ ಇರುವುದು. ಹೊರಗೂ ಇರುವುದು. ಅಥವಾ ಒಳಗೂ ಇಲ್ಲವು ಮತ್ತು ಹೊರಗೂ ಇಲ್ಲವು.

೩೬. ಇದೇ ಪ್ರಧಾನವಾದ ಹೃದಯವು. ಇದರಲ್ಲಿಯೇ ಈ ಸಮಸ್ತ ಜಗತ್ತೂ ಪ್ರತಿಷ್ಠಿತವಾಗಿರುವುದು. ಈ ಪ್ರಾಪಂಚಿಕ ಸಮಸ್ತ ಪದಾರ್ಥಗಳಿಗೆ

ಸರ್ವೇಷಾಮೇವ ಜಂತೂನಾಂ ಸಂವಿದ್ಧೃದಯ ಮುಚ್ಯತೇ ।
ನ ದೇಹಾವಯವೈಕಾಂಶೋ ಜಡಜೀರ್ಣೋಪಲೋಪಮಃ ॥ ೩೭ ॥

ತಸ್ಮಾತ್ಸಂವಿನ್ಮಯೇ ಶುದ್ಧೇ ಹೃದಯೇ ಹೃತವಾಸನಃ ।
ಬಲಾನ್ನಿಯೋಜಿತೇ ಚಿತ್ತೇ ಪ್ರಾಣಸ್ಪಂದೋ ನಿರುಧ್ಯತೇ ॥ ೩೮ ॥

ಏಭಿಃ ಕ್ರಮೈಸ್ತಥಾನ್ಯೈಶ್ಚ ನಾನಾ ಸಂಕಲ್ಪ ಕಲ್ಪಿತೈಃ ।
ನಾನಾ ದೇಶಿಕ ವಕ್ತ್ರಸ್ಥೈಃ ಪ್ರಾಣಸ್ಪಂದೋ ನಿರುಧ್ಯತೇ ॥ ೩೯ ॥

ಇದು ದರ್ಪಣ ಪ್ರಾಯವಾಗಿರುವುದು. ಇದೇ ಸಮಸ್ತ ಸಂಪತ್ತುಗಳಿಗೂ ಭಂಡಾರವಾಗಿರುವುದು.

೩೭. ಸಮಸ್ತ ಪ್ರಾಣಿಗಳಿಗೂ ಕೂಡ ಈ ಜ್ಞಾನವೇ (ಸಂವಿತ್) ಹೃದಯವೆಂದು ಹೇಳುವುದು ಸಮಂಜಸವು ಕೇವಲ ಜಡವಾಗಿಯೂ, ಜೀರ್ಣವಾಗಿಯೂ ಮತ್ತುಕಲ್ಲಿಗೆ ಸಮನಾಗಿಯೂ, ಈ ದೇಹದ ಒಂದು ಅಂಗವಾದ ವಕ್ಷಸ್ಥಲದ ಏಕದೇಶವೆನ್ನಿಸಿಕೊಂಡು ಅತ್ಯಲ್ಪವಾಗಿರುವ ಅಂಗವನ್ನು ಹೃದಯವೆಂದು ಹೇಳುವುದು ಅಷ್ಟು ಯುಕ್ತವಲ್ಲ.

೩೮. ಈ ಕಾರಣದಿಂದ, ಜ್ಞಾನಮಾತ್ರ ಸ್ವರೂಪವಾಗಿಯೂ, ಶುದ್ಧವಾಗಿಯೂ ಇರತಕ್ಕ ಹೃದಯದಲ್ಲಿ, ಚಿತ್ತವನ್ನು ಪ್ರಯತ್ನ ಪಟ್ಟು ಬಲಾತ್ಕಾರವಾಗಿ, ಸೇರುವಂತೆ (ಕೂಡಿಕೊಳ್ಳುವಂತೆ) ಮಾಡಿದರೆ, ಆಗ ಪ್ರಾಣಸ್ಪಂದವು ವಾಸನಾಶೂನ್ಯವಾಗಿ ಬಿಡುವುದು ಮತ್ತು ನಿರುದ್ಧವಾಗುವುದು.

೩೯. ನಾನು ಇದುವರೆಗೆ ಉಪದೇಶಮಾಡಿದ ಉಪಾಯಗಳಿಂದಲೂ, ಹಾಗೆಯೇ ಮತ್ತೂ ನಾನಾ ಸಂಕಲ್ಪಕಲ್ಪಿತಗಳಾಗಿ, ಅನೇಕಾನೇಕ ಸಾಂಪ್ರದಾಯಕ ಗುರುಗಳ ಮುಖಸ್ಥವಾಗಿ ಉಪದಿಷ್ಟವಾಗುವ ಇನ್ನೂ ಇತರ ವಿಧ ಉಪಾಯಗಳಿಂದಲೂ, ಪ್ರಾಣಸ್ಪಂದವು ನಿರೋಧಿಸಲ್ಪಡುವುದು. [ಅವುಗಳನ್ನು ಗುರುಗಳಿಂದಲೇ ಅವರ ಮುಖದಿಂದಲೇ ತಿಳಿಯಬೇಕು. ಎಂದು ತಾತ್ಪರ್ಯ.]

ಅಭ್ಯಾಸೇನ ನಿರಾಬಾಧಮೇತಾಸ್ತಾ ಯೋಗಯುಕ್ತಯಃ ।
ಉಪಾಯತಾ ಮುಪಾಯಾಂತಿ ಭವ್ಯಸ್ಯ ಭವಭೇದನೇ ॥ ೪೦ ॥

ಅಭ್ಯಾಸಾದ್ದೃಢತಾಂ ಯಾತೋ ವೈರಾಗ್ಯ ಪರಿಲಾಂಛಿತಃ ।
ಯಥಾವಾಸನ ಮಾಯಾಮಃ ಪ್ರಾಣಾನಾಂ ಸಫಲಃ ಸ್ಮೃತಃ ॥ ೪೧ ॥

ಭ್ರೂನಾಸಾತಾಲು ಸಂಸ್ಥಾಸು ದ್ವಾದಶಾಂಗುಲಿ ಕೋಟಿಷು ।
ಅಭ್ಯಾಸಾಚ್ಛಾಮ್ಯತಿ ಪ್ರಾಣೋ ದೂರೇ ಗಿರಿನದೀ ಯಥಾ ॥ ೪೨ ॥

---

೪೦. ಅತಿಯಾಗಿ ಸಾಹಸದಿಂದ ಹಠಯೋಗದಲ್ಲಿ ಪ್ರವರ್ತಿಸಿ, ಪ್ರಾಣ ನಿರೋಧ ಮಾಡಿದರೆ ರೋಗಾದಿ ಬಾಧೆಗಳು ಸಂಭವಿಸುವುದೂ ಉಂಟು. ಅದು ಕಾರಣ, ನಾನು ಈಗಲೇ ನಿನಗೆ ಉಪದೇಶ ಮಾಡಿರುವ ಯೋಗ ಯುಕ್ತಿಗಳನ್ನು ಬಿಡದೆ ನಿರಂತರವೂ ಸರಿಯಾಗಿ ಅಭ್ಯಾಸ ಮಾಡಿದರೆ ಅವು ನಿರಾತಂಕವಾಗಿ ಮುಮುಕ್ಷುವಾದ ಮಹಾತ್ಮನಿಗೆ ಸಂಸಾರ ಬಂಧವನ್ನು ಕತ್ತರಿಸಿ ಬಿಡುವ ವಿಷಯದಲ್ಲಿ ಸಾಕಷ್ಟು ಸಾಮರ್ಥ್ಯವುಳ್ಳ ಉಪಾಯಗಳಾಗಿ ಪರಿಣಮಿಸುವುವು.

೪೧. ಅಭ್ಯಾಸಾತಿಶಯದಿಂದ ದಾರ್ಢ್ಯವನ್ನು ಪಡೆದು ಐಹಿಕಾಮುಷ್ಮಿಕ ಫಲೋಪಭೋಗಗಳಲ್ಲಿ ತೀವ್ರವಾದ ವೈರಾಗ್ಯದಿಂದ ಸಂಮಿಳಿತವಾಗಿರುವ ಪ್ರಾಣಾಯಾಮವು ಅವರವರ ವಾಸನಾನುಸಾರವಾಗಿ ಅಂದರೆ ಮುಮುಕ್ಷಾ ವಾಸನೆಯು ಇದ್ದರೆ ಮೋಕ್ಷಪ್ರದವಾಗಿಯೂ ಅಥವಾ ಭೋಗ ವಾಸನೆಯಿಂದ ಕೂಡಿರುವಾಗ ಆಯಾ ಭೋಗ ಸಿದ್ಧಿ ವೈಚಿತ್ರ್ಯಪ್ರದವಾಗಿಯೂ ಸಫಲವಾಗುವುದೆಂದು ಶಾಸ್ತ್ರಜ್ಞರು ಅಭಿಪ್ರಾಯ ಪಡುವರು.

೪೨. ಪರ್ವತದಲ್ಲಿ ಹುಟ್ಟಿ ಹರಿದು ಬರುವ ನದಿಯು ಬಹು ದೂರ ಹರಿದು ಹೋಗಿ ಅಲ್ಲಿಯೇ ಹೇಗೆ ಲಯವಾಗಿಬಿಡುವುದೋ ಹಾಗೆಯೇ ಆಯಾ ಪುರುಷರ ವಾಸನಾನುಗುಣವಗಿ ಭ್ರೂಮಧ್ಯ, ನಾಸಿಕಾಗ್ರ ದಹರಾಕಾಶಾದಿ ಸ್ಥಾನಗಳಲ್ಲಿಯೂ ಮತ್ತುಕಂಠಾಗ್ರದಿಂದ ಮೊದಲ್ಗೊಂಡು ದ್ವಾದಶಾಂಗುಲಿ ಪರಿಮಿತವಾದ ಪ್ರದೇಶದ ಕೊನೆಯಲ್ಲಿಯೂ ಅಭ್ಯಾಸ ಬಲದಿಂದ ಪ್ರಾಣವಾಯುವು ಹರಿದು ಹೋಗಿ ಅಲ್ಲಿಯೇ ಶಾಂತವಾಗಿ ನಿಲ್ಲುವುದು.

ಭೂಯೋ ಭೂಯಶ್ಚಿರಾಭ್ಯಾಸಾಜ್ಜಿಹ್ವಾ ಪ್ರಾಂತೇನ ತಾಲುನಿ ।
ಘಂಟಿಕಾ ಸ್ಪೃಶ್ಯತೇ ಪ್ರಾಣೋ ಯೇನೋಚ್ಚೈರ್ನಿವಹತ್ಯಲಂ ॥ ೪೩ ॥

ವಿಕಲ್ಪಬಹುಲಾಸ್ತ್ವೇತೇ ಸ್ವಾಭ್ಯಾಸೇನ ಸಮಾಧಯಃ ।
ಪರಮೋಪಶಮಾಯಾಶು ಸಂಪ್ರಯಾಂತ್ಯವಿಕಲ್ಪತಾಂ ॥ ೪೪ ॥

ಆತ್ಮಾರಾಮೋ ವೀತಶೋಕೋ ಭವತ್ಯಂತಃ ಸುಖಃ ಪುಮಾನ್ ।
ಅಭ್ಯಾಸಾದೇವ ನಾನ್ಯಸ್ಮಾತ್ ತಸ್ಮಾದಭ್ಯಾಸವಾನ್ಭವ ॥ ೪೫ ॥

[ಆಯಾ ಸ್ಥಾನ ಭೇದಾನುಸಾರವಾಗಿ ಫಲಗಳಲ್ಲಿ ಭೇದವೂ ಯೋಗ ಶಾಸ್ತ್ರದಲ್ಲಿ ಉಕ್ತವಾಗಿರುವುದು. “ ನಾಭಿ ಚಕ್ರೇ ಕಾಯವ್ಯೂಹ ಜ್ಞಾನಂ ಕಂಠಕೂಪೇ ಕ್ಷುತ್ಪಿಪಾಸಾ ನಿವೃತ್ತಿಃ ಇತ್ಯಾದಿ. ಪಾತಂಜಲ ಯೋಗ ಸೂತ್ರಗಳು ವಿಭೂತಿ ಪಾದ ಸೂತ್ರ ೨೯ ರಿಂದ ೩೫. ನೋಡಿ.]

೪೩. ಪುನಃ ಪುನಃ ಬಹು ದೀರ್ಘಕಾಲ ಪ್ರಯತ್ನ ಮಾಡಿ ಅಭ್ಯಾಸ ಮಾಡುವುದರಿಂದ ನಾಲಗೆಯ ತುದಿಯಿಂದ ತಾಲು ಸ್ಥಾನದಲ್ಲಿ (ಪೂರ್ವದಲ್ಲಿ ಇದೇ ಸರ್ಗದ ೨೫ನೆಯ ಶ್ಲೋಕದಲ್ಲಿ ವಿವೃತವಾಗಿರುವ) ಇಂದ್ರ ಯೋನಿಯೆಂಬ ಅಂಗವನ್ನು (ಘಂಟಿಕಾ) ಕೆಳಕ್ಕೆ ತುಳಿದು ನಿರೋಧ ಮಾಡಬೇಕು. ಹೀಗೆ ಮಾಡುವುದರಿಂದ ಪ್ರಾಣ ವಾಯುವು ಕ್ರಮೇಣ ಊರ್ಧ್ವಮುಖವಾಗಿ ಪ್ರವಹಿಸುವುದು. (ಈ ಲಂಬಿಕಾ ಯೋಗವೆಂಬ ಹಠಯೋಗವನ್ನು ಹೀಗೆ ಉಪಾಯದಿಂದ ಕಷ್ಟಪಟ್ಟು ಸಾಧಿಸಬೇಕು.)

೪೪. ಈ ಸಮಾಧಿ ಭೇದಗಳೆಲ್ಲವೂ ಆಯಾ ಸಿದ್ಧಿ ಫಲಗಳಲ್ಲಿ ಅನೇಕಾನೇಕ ವಿಕಲ್ಪಗಳಿಂದ ಕೂಡಿರುವುವಾದರೂ ನಿಷ್ಕಾಮನಿಗೆ ಅವೆಲ್ಲವೂ ಚೆನ್ನಾಗಿ ಅಭ್ಯಾಸ ಮಾಡಲ್ಪಟ್ಟರೆ ಬಹು ಬೇಗನೆ ಅತ್ಯುತ್ತಮವಾದ ಉಪಶಮ ರೂಪ ಫಲವನ್ನು ಕೊಡುವುವು. ಮತ್ತು ಆ ವಿಷಯವಲ್ಲಿ ಎಲ್ಲ ಯೋಗಗಳೂ ವಿಕಲ್ಪರಹಿತವಾಗಿರುವುವು.

೪೫. ಅಯ್ಯ ರಾಮ, ಮನುಷ್ಯನು ಈ ಲೋಕದಲ್ಲಿ ನಿರಂತರವಾದ ಯೋಗಾಭ್ಯಾಸ ಬಲದಿಂದಲೇ ಆತ್ಮಾ ರಾಮನೂ, ಸಕಲ ಶೋಕ ವಿನಿರ್ಮುಕ್ತನೂ, ಅಂತಃ

ಅಭ್ಯಾಸೇನ ಪರಿಸ್ಪಂದೇ ಪ್ರಾಣಾನಾಂ ಕ್ಷಯಮಾಗತೇ ।
ಮನಃ ಪ್ರಶಮ-ಮಾಯಾತಿ ನಿರ್ವಾಣ ಮವಶಿಷ್ಯತೇ || ೪೬ ||

ವಾಸನಾವಲಿತಂ ಜನ್ಮ ಮೋಕ್ಷಂ ನಿರ್ವಾಸನಂ ಮನಃ ।
ಪ್ರಾಣಂ ಚ ರಾಮ ಗೃಹ್ಣಾತಿ ಯಥೇಚ್ಛಸಿ ತಥಾ ಕುರು || ೪೭ ||

ಪ್ರಾಣಸ್ಪಂದೋ ಮನೋರೂಪಂ ತಸ್ಮಾತ್ಸಂಸೃತಿ ವಿಭ್ರಮಃ ।
ತಸ್ಮಿನ್ನೇವ ಶಮಂ ಯಾತೇ ಕ್ಷೀಯತೇ ಸಂಸೃತಿ ಜ್ವರಃ || ೪೮ ||

ಸುಖನೂ ಆಗುವನಲ್ಲದೆ ಮತ್ತ್ಯಾವ ಉಪಾಯದಿಂದಲೂ ಆಗುವುದಿಲ್ಲ. ಆದು ಕಾರಣ ನೀನು ದೃಢತಮವಾದ ಅಭ್ಯಾಸವುಳ್ಳವನಾಗಿರು.

೪೬. ಹೀಗೆ ಸತತವಾದ ದೃಢತರಾಭ್ಯಾಸ ವಶದಿಂದ ಪ್ರಾಣವಾಯುಗಳ ಸ್ಪಂದವು ಕ್ಷಯವನ್ನು ಹೊಂದಿ ಪೂರ್ತಿಯಾಗಿ ನಿಂತುಹೋಗಿಬಿಟ್ಟರೆ ಮನಸ್ಸು ಸ್ವತಃ ವಿಶೇಷವಾಗಿ ಪ್ರಶಮನವನ್ನು ಹೊಂದುವುದು. ಬಳಿಕ ನಿರ್ವಾಣವು ಮಾತ್ರ ಅವಶಿಷ್ಟವಾಗುವುದು.

೪೭. ಅಯ್ಯ ರಾಮ, ಮನಸ್ಸು ವಾಸನೆಯಿಂದ ಆಕ್ರಾಂತವಾಗಿದ್ದರೆ, ಅದು ಶರೀರವನ್ನೂ ಮತ್ತು ಅದರಲ್ಲಿ ಅಭಿಮಾನವನ್ನಿಟ್ಟುಕೊಂಡು ಪ್ರಾಣವನ್ನೂ ಸ್ವೀಕರಿಸುವುದು. ಅದೇ ಮನಸ್ಸು ವಾಸನಾ ತ್ಯಾಗವನ್ನು ಮಾಡಿದರೋ ಬಹು ಬೇಗ ಮೋಕ್ಷವನ್ನೇ ಪಡೆಯುವುದು. ನಿನಗೆ ಹೇಗೆ ಇಚ್ಛೆಯಿರುವುದೋ ಹಾಗೆ ಮಾಡುವವನಾಗು. (ಮೋಕ್ಷದಲ್ಲಿ ಇಚ್ಛೆಯಿದ್ದರೆ ಮನಸ್ಸನ್ನು ನಿರ್ವಾಸನವನ್ನಾಗಿ ಮಾಡಿಕೊ. ಸಂಸಾರ ಬೇಕಾಗಿದ್ದರೆ ಸವಾಸನವನ್ನಾಗಿ ಮಾಡಿಕೊ ಎಂದರ್ಥ.)

೪೮. ಪ್ರಾಣ ವಾಯುವಿನ ಚಲನವೇ ಮನಸ್ಸಿನ ರೂಪವು. ಅದರ ದೆಸೆಯಿಂದ ಸಮಸ್ತ ಸಾಂಸಾರಿಕ ಭ್ರಾಂತಿಗಳೂ ಉದ್ಭವಿಸುವುವು. ಇಂತಹ ಮನಸ್ಸೇ ಶಾಂತವಾಗಿಬಿಟ್ಟರೆ ಬಳಿಕ ಸಾಂಸಾರಿಕವಾದ ಸಕಲ ಸಂತಾಪಗಳೂ ಸ್ವತಏವ ತುಂಡುತುಂಡಾಗಿ ನಾಶಹೊಂದುವುವು.

ವಿಕಲ್ಪಾಂಶ ಕ್ಷಯಾಜ್ಜಂತೋಃ ಪದಂ ತದವಶಿಷ್ಯತೇ ।
ಯತೋ ವಾಚೋ ನಿವರ್ತಂತೇ ಸಮಸ್ತ ಕಲನಾನ್ವಿತಾಃ ॥ ೪೯ ॥

ಯತ್ರ ಸರ್ವಂ ಯತಃ ಸರ್ವಂ ಯತ್ಸರ್ವಂ ಸರ್ವತಶ್ಚ ಯತ್ ।
ಯತ್ರ ನೇದಂ ಯತೋ ನೇದಂ ಯನ್ನೇದಂ ನೇದ್ರಶಂ ಜಗತ್ ॥ ೫೦ ॥

ವಿನಾಶಿತ್ವಾದ್ವಿಕಲ್ಪತ್ವಾದ್ಗುಣಿತ್ವಾನ್ನಿರ್ಗುಣಾತ್ಮನಃ ।
ಯಸ್ಯ ನೋ ಸದೃಶೋ ದೃಷ್ಟೋ ದೃಷ್ಟಾಂತಃ ಕಶ್ಚಿದೇವ ಹಿ ॥ ೫೧ ॥

---

೪೯. ಹೀಗೆ ಅಭ್ಯಾಸ ದಾರ್ಢ್ಯದಿಂದ ಮನಸ್ಸಿನ ಸಕಲ ವಿಕಲ್ಪ ಭಾಗಗಳು ಕ್ಷಯ ಹೊಂದುವುದರಿಂದ ಮನುಷ್ಯನಿಗೆ ಸಕಲ ವಿಕಲ್ಪ ಕಲ್ಪನೆಗಳಿಂದ ಕೂಡಿಕೊಂಡಿರುವ ವಾಕ್ಕುಗಳು ಯಾವ ಪರಮ ಪದವನ್ನು ಪಡೆಯದೆ ಹಿಂದಿರುಗುವವೋ ಅಂತಹ ವಾಚಾಮಗೋಚರವಾದ ಪರಮ ಪದವು ಒಂದೇ ಅವಶಿಷ್ಟವಾಗುವುದು.

೫೦. ಆ ಪರಮ ಪದದಲ್ಲಿಯೇ ಸರ್ವವೂ ಇರುವುದು. ಅದರ ದೆಸೆಯಿಂದಲೇ ಸರ್ವವೂ ಆವಿರ್ಭವಿಸುವುದು. ಆ ಪರಮ ಪದವೇ ಸರ್ವವೂ ಆಗಿರುವುದು ಮತ್ತು ಸರ್ವ ಪ್ರಕಾರಗಳಿಂದಲೂ ಆ ಪರಮಪದವೇ ಪ್ರಾಪ್ಯವಾಗಿರುವುದು. (ಅಥವಾ ಅತ್ಯವಶ್ಯ ಜ್ಞಾತವ್ಯವಾಗಿರುವುದು) ಈ ದೃಶ್ಯ ಜಗತ್ತು ಅದರಲ್ಲಿ ಇಲ್ಲವು. ಅಂದರೆ ದೃಶ್ಯ ಜಗತ್ತಿಗೆ ಆ ಪರಮ ಪದವು ಆಧಾರವೂ ಆಗಿಲ್ಲ. ಆ ಪರಮ ಪದದಲ್ಲಿ ಈ ದೃಶ್ಯವು ಆಧೇಯವಾಗಿಯೂ ಇಲ್ಲ. ಈ ದೃಶ್ಯವು ಅದರಿಂದ ಉದಯಿಸುವುದೂ ಇಲ್ಲ. ಈ ದೃಶ್ಯವು ತದಾತ್ಮಕವಾಗಿಯೂ ಇಲ್ಲ. ಹೀಗೆ (ಆಧೇಯತ್ವ, ಉಪಾದೇಯತ್ವ ಮತ್ತು ತಾದಾತ್ಮ್ಯ ವೊದಲಾದ ಧರ್ಮಗಳಿಂದ) ಯಾವುದೊಂದು ವಿಧದಿಂದಲೂ ಈ ಜಗತ್ತು ಪರಮಪದ (ಬ್ರಹ್ಮ) ಸದೃಶವಾಗಿಲ್ಲವು.

೫೧. ಈ ಜಗತ್ತು ಸರ್ವದಾ ವಿನಾಶಿಯಾದುದು. ನಾನಾ ವಿಕಲ್ಪಗಳಿಂದ ವಿಭಿನ್ನವಾಗಿರುವುದು. ನಾನಾ ವಿಭಿನ್ನ ಧರ್ಮಗಳಿಂದಲೂ, ಗುಣಗಳಿಂದಲೂ ವಿಶಿಷ್ಟವಾಗಿರುವುದು. ಇಂತಹ ಜಗತ್ತಿನೊಳಗೆ ತದ್ವಿಲಕ್ಷಣವಾದ ಅವಿನಾಶಿಯೂ, ನಿರ್ವಿಕಲ್ಪನೂ, ನಿರ್ಗುಣನೂ, ಸರ್ವ ಧರ್ಮ ವಿವರ್ಜಿತನೂ ಆದ ಪರಮಾತ್ಮನಿಗೆ (ಪರಬ್ರಹ್ಮನಿಗೆ) ಸದೃಶವಾದುದು ಯಾವುದೊಂದೂ ಇಲ್ಲವು. ಅದು ಕಾರಣವೇ ಯಾವುದೊಂದು ದೃಷ್ಟಾಂತವೂ ಕಾಣಬರುವುದೇ ಇಲ್ಲ.

ಸ್ವಾದನೀ ಸರ್ವಶಾಲೀನಾಂ ದೀಪಿಕಾ ಸರ್ವ ತೇಜಸಾಂ ।
ಕಲನಾ ಸರ್ವ ಕಾಮಾನಾಮಂತಶ್ಚಿಚ್ಚಂದ್ರಿಕೋದಿತಾ ॥ ೫೨ ॥

ಯಸ್ಮಾತ್ಕಲ್ಪತರೋರ್ಬಹ್ವ್ಯಃ ಸಂಸಾರ ಫಲ ಪಂಕ್ತಯಃ ।
ಅನಾರತಂ ಬಹುರಸಾ ಜಾಯಂತೇ ಚ ಪತಂತಿ ಚ ॥ ೫೩ ॥

ತತ್ಪದಂ ಸರ್ವಸೀಮಾಂತಮವಲಂಬ್ಯ ಮಹಾಮತಿಃ ।
ಯಃ ಸ್ಥಿತಃ ಸ್ಥಿರಧೀಸ್ತಜ್ಜ್ಞಃ ಸ ಜೀವನ್ಮುಕ್ತ ಉಚ್ಯತೇ ॥ ೫೪ ॥

---

೫೨. ತನ್ನಲ್ಲಿಯೇ ಅಂತರ್ಭೂತಗಳಾಗಿರುವ, ರಸ ರೂಪಾದಿ ಸಕಲ ವೈಷಯಿಕಾನಂದಗಳನ್ನು ಆಸ್ವಾದನೆ ಮಾಡತಕ್ಕುದಾಗಿಯೂ, ರಸರೂಪಾದಿ ವಿಷಯ ಗೋಚರಗಳಾದ ಬಾಹ್ಯ ವೃತ್ತಿ ತ್ರಿಪುಟಿಗಳನ್ನು ಪ್ರಕಾಶಪಡಿಸತಕ್ಕುದಾಗಿಯೂ ಮತ್ತು ಕಾಮ ಸಂಕಲ್ಪಾದಿ ಸಕಲ ಅಂತಃಕರಣ ವೃತ್ತಿ ತ್ರಿಪುಟಿಗಳನ್ನು ಕಲ್ಪಿಸಿ ಕಾಣುವುದಾಗಿಯೂ ಇರುವ ಕೇವಲ ಚಿದ್ರೂಪನಾದ ಆತ್ಮನೆಂಬ ಪೂರ್ಣ ಚಂದ್ರನ ನಿರ್ಮಲವಾದ ಚಂದ್ರಿಕೆಯು ಸರ್ವದಾ ಉದಿತವಾಗಿ ಕ್ಷಯಾಸ್ತಗಳೊಂದೂ ಇಲ್ಲದೆ ನಿರಾತಂಕವಾಗಿ ಸ್ವತಃ ಪ್ರಕಾಶಿಸುತ್ತಿರುವುದು. ಇದು ಸರ್ವರಿಗೂ ಅನುಭವಗೋಚರವಾಗಿಯೇ ಇರುವುದು.

(ಯೇನರೂಪಂ ರಸಂಗಂಧಂ ಶಬ್ದಾನ್ ಸ್ಪರ್ಶಾಂಶ್ಚ ಮೈಥುನಾನ್ । ಏತೇನೈವ ವಿಜಾನಾತಿ ಕಿಮತ್ರ ಪರಿಶಿಷ್ಯತೇ ॥ ಏತದ್ವೈತತ್ ॥. ಕಠೋಪನಿಷತ್ ಅಧ್ಯಾಯ ೨. ಮಂತ್ರ ೩.

೫೩. ಈ ಪರಬ್ರಹ್ಮವೆಂಬ ಕಲ್ಪವೃಕ್ಷದ ದೆಸೆಯಿಂದಲೇ ನಾನಾ ರಸವಿಶೇಷಗಳಿಂದ ಪೂರ್ಣವಾಗಿರುವ ವಿವಿಧ ಸಂಸಾರಗಳೆಂಬ ಫಲಸಮೂಹಗಳು ನಿರಂತರವೂ ಅನೇಕಾಕಾರಗಳಾಗಿ ಹುಟ್ಟುತ್ತಲಿರುವುವು. [ಪರಬ್ರಹ್ಮವೇ ಸಂಸಾರದಲ್ಲಿ ಪ್ರಾಣಿಗಳಿಗೆ ಕರ್ಮಫಲ ಪ್ರದವೆಂಬ ವಿಚಾರವು ಶಾರೀರಕಮೀಮಾಂಸಾಶಾಸ್ತ್ರದ“ ಫಲಮತ ಉಪಪತ್ತೇಃ” ಇತ್ಯಾದಿ ಫಲೋಪಪತ್ತ್ಯಧಿಕರಣದಲ್ಲಿ ಪ್ರತಿಪಾದಿತವಾಗಿರುವುದು]

೫೪. ಸಮಸ್ತ ಪ್ರಪಂಚಕ್ಕೂ ಪರಮಾವಧಿಭೂತವಾಗಿ, ಅತ್ಯಂತವಿಲಕ್ಷಣವಾಗಿ ನಿಷ್ಪ್ರಪಂಚವಾಗಿರುವ ಆ ಪರಮಪದವನ್ನು ಸರ್ವದಾ ಅವಲಂಬಿಸಿಕೊಂಡು,

ವಿಗತ ಸರ್ವಸಮೀಹಿತ ಕೌತುಕಃ |
ಸಮುಪಶಾಂತ ಹಿತಾಹಿತ ಕಲ್ಪನಃ |
ಸಕಲ ಸಂವ್ಯವಹಾರ ಸಮಾಶಯೋ |
ಭವತಿ ಮುಕ್ತಮನಾಃ ಪುರುಷೋತ್ತಮಃ ॥ ೫೫ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷೂಪಶಮಪ್ರಕರಣೇ "ಯೋಗವರ್ಣನಂ" ನಾಮ ಅಷ್ಟಸಪ್ತತಿತಮಃ ಸರ್ಗಃ

ಯಾವ ಮಹಾಪ್ರಾಜ್ಞನಾದ ತತ್ತ್ವಜ್ಞನು ಜ್ಞಾನನಿಷ್ಠನಾಗಿ ಅಚಲನಾಗಿರುವನೋ ಅವನೇ ಜೀವನ್ಮುಕ್ತನೆನ್ನಿಸುವನು. ["ಪುರುಷಾನ್ನ ಪರಂ ಕಿಂಚಿತ್ ಸಾಕಾಷ್ಠಾ ಸಾಪರಾಗತಿಃ ಕಠೋಪನಿಷತ್ ಅಧ್ಯಾಯ ೧ ವಲ್ಲಿ ೩, ಮಂತ್ರ ೧೧]

೫೫. ಸಂಸಾರದಲ್ಲಿ ಅನಾಸಕ್ತನಾಗಿ ಬಂಧವಿಮುಕ್ತವಾದ ಮನಸ್ಸುಳ್ಳ, ಜೀವನ್ಮುಕ್ತನಾದ ಪುರುಷಸಿಂಹನು, ಸಮಸ್ತ ಕಾಮೋಪಭೋಗೋತ್ಕಂಠೆಗಳನ್ನು ಸಂಪೂರ್ಣವಾಗಿ ಪರಿತ್ಯಾಗ ಮಾಡಿದವನಾಗಿಯೂ, ಅದುಕಾರಣ ತನಗೆ ಅನುಕೂಲ ಪ್ರತಿಕೂಲಗಳೆಂಬುದೇ ಇಲ್ಲದೆ, "ಇದು ಹಿತ ಅದು ಅಹಿತ" ಎಂಬ ಭೇದ ವಾಸನಾ ಕಲ್ಪನೆಯು ಸುತರಾಂ ಇಲ್ಲದವನಾಗಿಯೂ ಅದುಕಾರಣವೇ, ಸಕಲ ಸಂವ್ಯವಹಾರ ಗಳಲ್ಲಿಯೂ ಹರ್ಷವಿಷಾದಾದಿ ಶೂನ್ಯವಾದ ಏಕರೀತಿಯಾದ ಚಿತ್ತವೃತ್ತಿಯುಳ್ಳವ ನಾಗಿಯೂ ಸರ್ವದಾ ಸರ್ವೋಪಪ್ಲವರಹಿತವಾಗಿಯೂ ಸ್ವಸ್ಥನಾಗಿರುವನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಯೋಗವರ್ಣನವೆಂಬ" ವೆಂಬ ಎಪ್ಪತ್ತೆಂಟನೆಯ ಸರ್ಗವು

ಏಕೋನಾಶೀತಿತಮಃ ಸರ್ಗಃ

ಶ್ರೀರಾಮ ಉವಾಚ :—

ಯೋಗ ಯುಕ್ತಸ್ಯ ಚಿತ್ತಸ್ಯ ಶಮ ಏವ ನಿರೂಪಿತಃ ।
ಸಮ್ಯಕ್ ಜ್ಞಾನಮಿದಾನೀಂ ಮೇ ಕಥಯಾನು ಗ್ರಹಾತ್ಪ್ರಭೋ ॥ ೧ ॥

ಶ್ರೀ ವಸಿಷ್ಠ ಉವಾಚ:—

ಅನಾದ್ಯಂತಾವಭಾಸಾತ್ಮಾ ಪರಮಾತ್ಮೇಹ ವಿದ್ಯತೇ ।
ಇತ್ಯೇಕೋ ನಿಶ್ಚಯಃ ಸ್ಫಾರಃ ಸಮ್ಯಕ್ ಜ್ಞಾನಂ ವಿದುರ್ಬುಧಾಃ ॥ ೨ ॥

ಎಪ್ಪತ್ತೊಂಭತ್ತನೆಯ ಸರ್ಗವು

ಶ್ರೀರಾಮನು ಹೇಳಿದನು :—

೧. ಮಹಾ ಪ್ರಭೋ, ಸದ್ಗುರುವೇ, (ಪೂರ್ವ ಸರ್ಗದ ೮ನೆಯ ಶ್ಲೋಕದಲ್ಲಿ) ಈಗಲೇ ತಾವು ಚಿತ್ತ ನಾಶಕ್ಕೆ ಯೋಗವೂ, ಜ್ಞಾನವೂ ಕೂಡ ಉಪಾಯಗಳೆಂದು ಹೇಳಿ ಅದರಲ್ಲಿ ಮೊದಲನೆಯದಾದ ಯೋಗದಿಂದ ಚಿತ್ತನಾಶವಾಗುವ ಪ್ರಕಾರವನ್ನು ಇದುವರೆವಿಗೂ ನಿರೂಪಣೆ ಮಾಡಿರುವಿರಿ. ಈಗ ದಯೆಮಾಡಿ ನನ್ನಲ್ಲಿ ಅನುಗ್ರಹವಿಟ್ಟು ಎರಡನೆಯ ಉಪಾಯವಾದ ಯಥಾರ್ಥವಾದ ಆತ್ಮತತ್ತ್ವ ಜ್ಞಾನ ಸ್ವರೂಪವನ್ನು ನನಗೆ ಉಪದೇಶ ಮಾಡೋಣವಾಗಲಿ.

ಶ್ರೀ ವಸಿಷ್ಠರು ಹೇಳಿದರು:—

೨. ಅಯ್ಯ ರಾಮ, "ಆದ್ಯಂತರಹಿತನಾಗಿಯೂ, ಸರ್ವದಾ ಕೇವಲ ಸ್ವಪ್ರಕಾಶ ರೂಪನಾಗಿಯೂ ಇರುವ ಪರಮಾತ್ಮನೊಬ್ಬನೇ ನಿತ್ಯ ನಿರ್ವಿಕಾರನಾಗಿರುವನು." ಹೀಗೆಂದು ದೃಢವಾದ ಅಪರಿಚ್ಛಿನ್ನಾಕಾರವಾದ ಅಸಾಧಾರಣವಾದ ನಿಶ್ಚಯ ಜ್ಞಾನವು ಯಾವುದೋ ಅದನ್ನೇ ಜ್ಞಾನಿಗಳು ಪಾರಮಾರ್ಥಿಕವಾದ ಸಮ್ಯಕ್ ಜ್ಞಾನವೆಂದು (ತತ್ತ್ವಜ್ಞಾನ) ಹೇಳುವರು.

ಇಮಾ ಘಟ ಪಟಾಕಾರಾಃ ಪದಾರ್ಥ ಶತಪಂಕ್ತಯಃ ।
ಆತ್ಮೈವ ನಾನ್ಯದಸ್ತೀತಿ ನಿಶ್ಚಯಃ ಸಮ್ಯಗೀಕ್ಷಣಂ ॥ ೩ ॥

ಅಸಮ್ಯಗ್ವೇದನಾಜ್ಜನ್ಮ ಸರ್ಪೋ೭ ಸೋ೭ ಸಮ್ಯಗೀಕ್ಷಣಾತ್ ।
ಅಸಮ್ಯಗ್ವೇದನಾದ್ರಜ್ಜುಃ ಸರ್ಪೋ೭ ಸೋ೭ ಸಮ್ಯಗೀಕ್ಷಣಾತ್ ॥ ೪ ॥

(ಏಕೋ ದೇವಃ ಸರ್ವ ಭೂತೇಷು ಗೂಢಃ ಸರ್ವವ್ಯಾಪೀ ಸರ್ವ ಭೂತಾಂತರಾತ್ಮಾ । ಕರ್ಮಾಧ್ಯಕ್ಷಃ ಸರ್ವ ಭೂತಾಧಿ ವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥ ಶ್ವೇತಾಶ್ವತರ. ೬-೧೧. ಏಕಮೇವಾ ದ್ವಿತೀಯಂ ಬ್ರಹ್ಮ ಅತೋ೭ನ್ಯ ದಾರ್ತಂ. ನೇಹನಾನಾ೭ಸ್ತಿ ಕಿಂ ಚ. ನ. ಬೃಹ. ಇತ್ಯಾದಿ ಪ್ರಮಾಣಗಳನ್ನು ಗಮನಿಸಿ.)

೩. "ಘಟ ಪಟಾದ್ಯಾಕಾರಗಳಾದ ಈ ನಾನಾ ಪದಾರ್ಥ ಸಮುದಾಯಗಳೆಲ್ಲವೂ ಕೇವಲ ಆತ್ಮವೇ. ಬೇರೆ ಯಾವುದೊಂದೂ ಇಲ್ಲ." (ಬೇರೆಯಾಗಿ ತೋರುವುದೆಲ್ಲವೂ ಬರಿಯ ಭ್ರಾಂತಿಯಿಂದ ಅಜ್ಞಾನಕಲ್ಪಿತವಾದ ಅತ್ಯಂತಾಸದ್ರೂಪವೇ ಸರಿ) ಎಂಬ ನಿಶ್ಚಯವೇ ಸಮ್ಯಕ್ ದೃಷ್ಟಿಯು. (ತತ್ತ್ವಜ್ಞಾನವು) ("ಆತ್ಮೈವೇದಗ್ಂ ಸರ್ವಂ.") ಕ್ಷೇತ್ರಕ್ಷೇತ್ರಜ್ಞ ಜ್ಞಾನವೇ ಜ್ಞಾನವು. ಗೀತಾ. ೧೩ನೆಯ ಅಧ್ಯಾಯ.

೪. ಆತ್ಮತತ್ತ್ವವನ್ನು ಯಥಾವಸ್ಥಿತವಾಗಿ ತಿಳಿಯದೆ ಇರುವುದರಿಂದ ಸಂಸಾರವು ಉತ್ಪನ್ನವಾಗುವುದು. ಯಥಾರ್ಥವಾದ ತತ್ತ್ವಜ್ಞಾನದಿಂದ ಅವಿಧ್ಯಾಕಲ್ಪಿತವಾದ ಸಂಸಾರವು ನಿವೃತ್ತಿಯಾಗಿ ಸ್ವತಃ ಸಿದ್ಧವಾದ ಮೋಕ್ಷವು ಪ್ರಕಟವಾಗುವುದು. "ಇದು ರಜ್ಜುವು" ಎಂಬ ಯಥಾರ್ಥಜ್ಞಾನವು ಇಲ್ಲದಾಗ, ರಜ್ಜುವಿನಲ್ಲಿ "ಇದು ಸರ್ಪವು" ಎಂಬ ಭ್ರಾಂತಿಯು ಉದಯಿಸುವುದು. "ಇದು ರಜ್ಜುವೇ ಸರಿ. ಸರ್ಪವಲ್ಲವು" ಎಂಬುದಾಗಿ ಅನ್ವಯ ವ್ಯತಿರೇಕಕ್ರಮದಿಂದ ರಜ್ಜುವಿನ ವಾಸ್ತವವಾದ ತತ್ತ್ವಜ್ಞಾನವುಂಟಾಗಿ ಬಿಟ್ಟರೆ ಆಗ, ರಜ್ಜುವಿನಲ್ಲಿ ಕಲ್ಪಿತವಾಗಿದ್ದ ಸರ್ಪವೂಇಲ್ಲ. ಸರ್ಪಭ್ರಾಂತಿಯೂ ಇರುವುದೇ ಇಲ್ಲ. (ಅ ಸರ್ಪಭಾವದಿಂದ ಮೋಕ್ಷವಾಗುವುದು.)

ಸಂಕಲ್ಪಾಂಶ ವಿನಿರ್ಮುಕ್ತಾ ಸಂವಿತ್ಸಂವೇದ್ಯವರ್ಜಿತಾ ।
ಸಂವಿತ್ಯಾಭಿ ಸಮಾಖ್ಯಾತಾ ಮುಕ್ತಾವಸ್ತೀಹ ನೇತರತ್ ॥ ೫ ॥

ಸಾ ಶುದ್ಧರೂಪಾ ವಿಜ್ಞಾತಾ ಪರಮಾತ್ಮೇತಿ ಕಥ್ಯತೇ ।
ಶುದ್ಧಾ ತ್ವಶುದ್ಧ ರೂಪಾಂತರವಿದ್ಯೇತ್ಯುಚ್ಯತೇ ಬುಧೈಃ ॥ ೬ ॥

ಸಂವಿತ್ತಿರೇವ ಸಂವೇದ್ಯಂ ನಾನಯೋರ್ದ್ವಿತ್ವಕಲ್ಪನಾ ।
ಚಿನೋತ್ಯಾತ್ಮಾನಮಾತ್ಮೈವ ರಾಮೈವಂ ನಾನ್ಯದಸ್ತಿ ಹಿ ॥ ೭ ॥

---

೫. ಮುಕ್ತಿಯಲ್ಲಿ, ಸಕಲ ಸಂಕಲ್ಪ ಕಲ್ಪನೆಗಳಿಂದ ಸರ್ವಥಾ ಅಸಂಸ್ಪೃಷ್ಟವಾಗಿಯೂ ಜ್ಞೇಯ ಜ್ಞಾತ್ರಾದಿ ಸಕಲ ಭೇದ ವಿವರ್ಜಿತವಾಗಿಯೂ, ಇರುವ ಶುದ್ಧ ಚಿದ್ರೂಪನಾದ ಆತ್ಮನು ಮಾತ್ರವೇ, ಸ್ವಪ್ರಕಾಶ ಸ್ವಭಾವದಿಂದಲೇ ಸರ್ವತ್ರ ಸ್ಪಷ್ಟವಾಗಿ (ಆವಿದ್ಯಕ ಆವರಣ ಶೂನ್ಯವಾಗಿ) ಪ್ರಥಿತವಾಗಿರುವುದು. ಈ ಮುಕ್ತಿಯಲ್ಲಿ ಬೇರೆ ಯಾವುದೊಂದೂ ಸುತರಾಂ ಇಲ್ಲವೇ ಇಲ್ಲ.

೬. ಈ ಚಿತ್ತು ಸ್ವಭಾವತಃ ನಿತ್ಯಶುದ್ಧವಾಗಿರುವುದು. ಅದನ್ನು ಸ್ವಭಾವಾನುಸಾರ ಶುದ್ಧರೂಪವಾಗಿಯೇ ತಿಳಿದುಕೊಂಡರೆ, ಆಗ ಅದು ಪರಮಾತ್ಮನೆನ್ನಿಸಲ್ಪಡುವುದು. ಅದು ನಿತ್ಯಶುದ್ಧವಾಗಿದ್ದರೂ ಕೂಡ ಅವಿವೇಕದಿಂದ ಅದನ್ನು ಅಶುದ್ಧವಾಗಿ ತಿಳಿಯುವುದನ್ನು ಪಂಡಿತರು ಅವಿದ್ಯೆಯೆಂದು ಕರೆಯುವರು.

೭. ಅಯ್ಯ ರಾಮ, ಸಂವೇದ್ಯವೆಂಬುದೂ (ಜ್ಞೇಯ) ಈ ಸಂವಿತ್ತಿಯೇ ಹೊರತು ಬೇರೆಯಲ್ಲವು. ಇವೆರಡಕ್ಕೂ ಭೇದಕಲ್ಪನೆಯೆಂಬುದು ವಾಸ್ತವವಾಗಿ ಇಲ್ಲವೇ ಇಲ್ಲವು. (ಇದು ಸಂವಿತ್ ಅದು ಸಂವೇದ್ಯವೆಂಬ ಭೇದಕಲ್ಪನೆಯು ಅಜ್ಞಾನಕಲ್ಪಿತವು ಮಿಥ್ಯೆಯು ಎಂದರ್ಥ.) ಅಜ್ಞಾನದಿಂದ ತನ್ನನ್ನು ಸಂವೇದ್ಯ (ಜಗತ್) ರೂಪನನ್ನಾಗಿಯೂ, ಜ್ಞಾನದಿಂದ ಕೇವಲ ಚಿದ್ರೂಪ (ಸಂವಿತ್) ನನ್ನಾಗಿಯೂ ಅರಿಯುವನು. ಹೀಗೆ ಆತ್ಮಭಿನ್ನವಾದುದೊಂದೂ ವಾಸ್ತವವಾಗಿ ಯಾವಾಗಲೂ ಇಲ್ಲವೇ ಇಲ್ಲ.

ಯಥಾ ಭೂತಾತ್ಮದರ್ಶಿತ್ವಮೇತಾವದ್ಭುವನತ್ರಯೇ ।
ಯದಾತ್ಮೈವ ಜಗತ್ಸರ್ವಮಿತಿ ನಿಶ್ಚಿತ್ಯ ಪೂರ್ಣತಾ ॥ ೮ ॥

ಸರ್ವಾತ್ಮಾತ್ಮೈವ ಕೌ ದಿಷ್ಟೌ ಭಾವಾಭಾವೌ ಕ್ವ ಚ ಸ್ಥಿತೌ ।
ಕ್ವ ಬಂಧಮೋಕ್ಷಕಲನೇ ಕಿಮನ್ಯದ್ರಾಮ ಶೋಚ್ಯತೇ ॥ ೯ ॥

ನ ಚೇತ್ಯಮನ್ಯನ್ನೋ ಚಿತ್ತಂ ಬ್ರಹ್ಮೈವೇದಂ ವಿಜೃಂಭತೇ ।
ಸರ್ವಮೇಕಂ ಪರಂ ವ್ಯೋಮ ಕೋ ಮೋಕ್ಷಃ ಕಸ್ಯ ಬಂಧತಾ ? ॥ ೧೦ ॥

---

೮. ಈ ದೃಶ್ಯವಾದ ಜಗತ್ತೆಲ್ಲವೂ ಆತ್ಮವೇ (ಬೇರೆಯಲ್ಲ) ಎಂಬುದಾಗಿ ದೃಢವಾದ ನಿಶ್ಚಯಜ್ಞಾನದಿಂದ ಪರಿಪೂರ್ಣನಾಗಿರುವಿಕೆಯು ಯಾವುದುಂಟೋ. ಅದಷ್ಟು ಮಾತ್ರವೇ ಯಥಾರ್ಥವಾದ ಆತ್ಮತತ್ತ್ವ ಜ್ಞಾನವೆಂದು ಲೋಕತ್ರಯದಲ್ಲೆಲ್ಲಾ ವ್ಯವಹರಿಸಲ್ಪಡುವುದು.

೯. ಅಯ್ಯ ರಾಮ, ಹೀಗೆ ದೃಶ್ಯವೆಲ್ಲವೂ ವಸ್ತುತಃ ಆತ್ಮವೇ ಆಗಿದ್ದು ಕೊಂಡಿರಲು "ಇದು ಭಾವ, ಅದು ಅಭಾವ" ಎಂಬ ಎರಡು ವಿಕಲ್ಪಗಳು ಏನೆಂಬುದಾಗಿ ನಿಷ್ಕರ್ಷೆಯಾಗಿ ನಿರೂಪಿಸಲ್ಪಟ್ಟಿರುವುವು? ಮತ್ತು ಅವು ಎಲ್ಲಿರುವುವು ? ಬಂಧಮೋಕ್ಷಗಳೆಂಬ ಕಲ್ಪನೆಗಳು ತಾನೇ ಎಲ್ಲಿರುವುವು ? ಇವು ಯಾವುವೂ ಒಂದೂ ವಾಸ್ತವವಾಗಿ ಇಲ್ಲದಿರಲು ಲೋಕದಲ್ಲಿ ಮೂಢ ಜನರು ಬೇರೆ ಇನ್ಯಾವುದನ್ನು ಕುರಿತು ಶೋಕಪಡಬೇಕಾಗಿರುವುದು?

[ಆತ್ಮಾನಂ ಚೇತ್ ವಿಜಾನೀಯಾತ್ ಅಯಮಸ್ಮೀತಿ ಪೂರುಷಃ । ಕಿಮಿಚ್ಛನ್ಕಸ್ಯ ಕಾಮಾಯ ಶರೀರ ಮನುಸಂಜ್ವರೇತ್॥ ಬೃಹದಾರಣ್ಯಕ ೪-೪-೧೨ ತತ್ರಕೋ ಮೋಹಃ ಕಃ ಶೋಕಃ ಏಕತ್ವಮನು ಪಶ್ಯತಃ ಈಶಾವಾಸ್ಯಮಂತ್ರ ೭.]

೧೦. ಆತ್ಮ ವ್ಯತಿರಿಕ್ತವಾದ ಚೇತ್ಯವೆಂಬುದೂ ಇಲ್ಲ. ಚಿತ್ತವೆಂಬುದೂ ಇಲ್ಲ. ಪರಬ್ರಹ್ಮವೇ ಈ ಸರ್ವ ರೂಪವಾಗಿ ವಿಜೃಂಭಿಸುತ್ತಿರುವುದು. ಈ ಸರ್ವವೂ ಆ ಅದ್ವಿತೀಯವಾದ ಪರಮಾಕಾಶವೇ. ಇನ್ನು ಮೋಕ್ಷವೆಂಬುದು ಯಾವುದು ? ಅಥವಾ ಬಂಧವೆಂಬುದು ಯಾರಿಗೆ ? (ಮಾಂಡೂಕ್ಯ ಕಾರಿಕೆ. ವೈತಥ್ಯ ಪ್ರಕರಣ. ಶ್ಲೋಕ ೩೦ ರಿಂದ ೩೪. ನೋಡಿ.)

ಬ್ರಹ್ಮೇದಂ ಬೃಂಹಿತಾಕಾರಂ ಬೃಹತ್ ಬೃಹದವಸ್ಥಿತಂ ।
ಜ್ಞಾನಾದಸ್ತವಿತದ್ವಿತ್ವಂ ಭವಾತ್ಮೈವ ತ್ವಮಾತ್ಮನಾ ॥ ೧೧ ॥

ಸಮ್ಯಗಾಲೋಕಿತೇ ರೂಪೇ ಕಾಷ್ಠ ಪಾಷಾಣ ವಾಸಸಾಂ ।
ಮನಾಗಪಿ ನ ಭೇದೋಽಸ್ತಿ ಕ್ವಾಸಿ ಸಂಕಲ್ಪನೋನ್ಮುಖಃ ॥ ೧೨ ॥

ಆದಾವಂತೇ ಚ ಸಂಶಾಂತಂ ಸ್ವರೂಪಮವಿನಾಶಿ ಯತ್ ।
ವಸ್ತು ನಾಮಾತ್ಮನಶ್ಚೈವ ತನ್ಮಯೋ ಭವ ರಾಘವ ॥ ೧೩ ॥

---

೧೧ ಮಹತ್ ಆದ ವಸ್ತುವಿಗಿಂತಲೂ ಹೆಚ್ಚು ಮಹತ್ ಆಗಿರುವ (ಮಹೀಯಾನ್) ಬ್ರಹ್ಮವೇ ಸ್ವಾತ್ಮನಲ್ಲಿಯೇ ಮಾಯೆಯಿಂದ ನಾನಾ ಜಗದಾಕಾರವಾಗಿ ವಿಜೃಂಭಿಸಿ ಈ ದೃಶ್ಯರೂಪವಾಗಿ ವ್ಯವಸ್ಥಿತನಾಗಿರುವನು. ತಾತ್ತ್ವಿಕವಾದ ಆತ್ಮ ಯಾಥಾತ್ಮ್ಯ ಜ್ಞಾನದಿಂದ, ಅಜ್ಞಾನ ವಿಜೃಂಭಿತವಾದ ಭೇದ ಭ್ರಾಂತಿಗಳೆಲ್ಲವೂ ಅಸ್ತಂಗತವಾಗುವುವು. ಹೀಗಿರುವ ಕಾರಣ, ಅಯ್ಯ ರಾಮ, ನೀನು ಈಗ ಆತ್ಮ ತತ್ತ್ವ ಜ್ಞಾನದಿಂದ ಭೇದ ಭ್ರಾಂತಿಯನ್ನು ನಿಶ್ಶೇಷವಾಗಿ ತೊಲಗಿಸಿಕೊಂಡು ಆತ್ಮನಾಗಿಯೇ ಇರುವವನಾಗು.

೧೨. ಕಾಷ್ಠ (ಮರ) ಕಲ್ಲು, ವಸ್ತ್ರ ಮುಂತಾದ ಪ್ರಾಪಂಚಿಕ ವಸ್ತುಗಳ ಸ್ವರೂಪವು ಚೆನ್ನಾಗಿ ಅಧಿಷ್ಠಾನ ಸನ್ಮಾತ್ರ ಸ್ವರೂಪದಿಂದ ಕಾಣಲ್ಪಟ್ಟದ್ದೇ ಆದರೆ ಈ ದೃಶ್ಯ ವಸ್ತುಗಳಿಗೆ ಪರಸ್ಪರ ಸ್ವಲ್ಪವಾದರೂ ಭೇದವೆಂಬುದೇ ಇರುವುದಿಲ್ಲ. ವಸ್ತು ಸ್ಥಿತಿಯು ಹೀಗಿರುವಾಗ ನೀನು ಯಾವ ವಸ್ತುವಿನಲ್ಲಿ ಸಂಕಲ್ಪವನ್ನು ಮಾಡಲು ಕಾತರನಾಗಿರುವೆ? ಹೇಯೋಪಾದೇಯಗಳೆರಡೂ ಏಕರೂಪವಾಗಿರಲು ಯಾವೊಂದರಲ್ಲಿಯೂ ಸಂಕಲ್ಪ ವಿಕಲ್ಪಗಳ ಕಲ್ಪನೆಯು ಸರ್ವಥಾ ಸಂಭವಿಸುವುದಿಲ್ಲವೆಂದರ್ಥ.

[ಕಲ್ಪಯತ್ಯಾತ್ಮನಾ ಆತ್ಮಾನಂ ಆತ್ಮಾ ದೇವಃ ಸ್ವಮಾಯಯಾ । ಸ ಏವ ಬುಧ್ಯತೇ ಭೇದಾನ್ ಇತಿ ವೇದಾಂತ ನಿಶ್ಚಯಃ ॥ ಮಾಂಡೂಕ್ಯ ಕಾರಿಕೆ. ವೈತಥ್ಯ. ೧೨. ಮತ್ತು ನ ಆತ್ಮ ಭೇದೇನ ನಾನಾ ಇದಂ ನ ಸ್ವೇನಾಪಿ ಕಥಂಚನ । ವೈತಥ್ಯ. ೩೪]

೧೩. ಅಯ್ಯ ರಾಘವ, ಯಾವ ಸ್ವರೂಪವು ಆದಿಯಲ್ಲಿಯೂ, ಅಂತದಲ್ಲಿಯೂ, ಅವಿಕ್ರಿಯವಾಗಿಯೂ ಸರ್ವದಾ ಪ್ರಶಾಂತವಾಗಿಯೂ, ಕಾಲತ್ರಯಗಳಲ್ಲಿ ಅವಿನಾಶಿ

ಪರಂ ವ್ಯೋಮೇದಮಖಿಲಂ ಜಗತ್ಸ್ಥಾವರ ಜಂಗಮಂ ।
ಸುಖ ದುಃಖ ಕ್ರಮಃ ಕುತ್ರ ವಿಜ್ವರೋ ಭವ ರಾಘವ ॥ ೧೪ ॥

ದ್ವೈತಾದ್ವೈತ ಸಮುದ್ಭೂತೈರ್ಜರಾಮರಣ ವಿಭ್ರಮೈಃ ।
ಸ್ಫುರತ್ಯಾತ್ಮಭಿರಾತ್ಮೈವ ಚಿತ್ರೈರಂಬ್ವಿವ ವೀಚಿಭಿಃ ॥ ೧೫ ॥

ಶುದ್ಧಮಾತ್ಮಾನ ಮಾಲಿಂಗ್ಯ ನಿತ್ಯಮಂತಸ್ಥಯಾ ಧಿಯಾ ।
ಯಃಸ್ಥಿತಸ್ತಂ ಕ ಆತ್ಮೇಹಂ ಭೋಗಾ ಬಂಧಯಿತುಂ ಕ್ಷಮಾಃ ॥ ೧೬ ॥

ಯಾಗಿಯೂ ಇರುವುದೋ ಅದೇ ಪರಮಾರ್ಥ ಸದ್ವಸ್ತುವೆಂದು ಲೋಕದಲ್ಲಿ ಪ್ರಸಿದ್ಧವಾದುದು. ಆತ್ಮ ಸ್ವರೂಪವೊಂದು ಮಾತ್ರವೇ ಇಂತಹುದು. ಅದು ಕಾರಣ, ನೀನು ಅಂತಹ ಆತ್ಮರೂಪನಾಗಿ ಸರ್ವದಾ ಪ್ರಶಾಂತನಾಗಿರು.

೧೪. ರಾಘವ, ಚರಾಚರಾತ್ಮಕವಾದ ಈ ಸಮಸ್ತ ಜಗತ್ತು ವಸ್ತುತಃ ಪರಮಾಕಾಶವೇ (ನಿರತಿಶಯಾನಂದರೂಪ ಪರಬ್ರಹ್ಮವೇ) ಆಗಿರುವುದು. ಇಂತಹುದರಲ್ಲಿ ಸುಖ ದುಃಖಗಳ ಪ್ರಸಕ್ತಿಯು ಯಾವುದಿರುವುದು? ಅದು ಕಾರಣ, ನೀನು ಸರ್ವದಾ ಸಂತಾಪರಹಿತನಾಗಿ ಆನಂದರೂಪನಾಗಿರು.

೧೫. ವಸ್ತುತಃ ಯಾವುದೊಂದು ವಿಕಾರವೂ ಇಲ್ಲದೆ ಪ್ರಶಾಂತವಾಗಿರುವ ಒಂದೇ ಜಲವು ನಾನಾ ವಿಚಿತ್ರಗಳಾದ ಅಲೆ, ನೊರೆ ಮುಂತಾದ ವಿಕಾರಗಳಿಂದ ವಿಭಿನ್ನವಾಗಿ ಅಜ್ಞನಿಗೆ ಸ್ಫುರಿಸುವಂತೆ ಪರಮಾರ್ಥತಃ ಸರ್ವದಾ ಅವಿಕ್ರಿಯನಾಗಿ ಏಕರಸನಾದ ಅದ್ವೈತಾತ್ಮನಲ್ಲಿ ದ್ವೈತ ಕಲ್ಪನೆಯಿಂದ ನಾನಾ ರೂಪಗಳಾಗಿ ಉದ್ಭವಿಸಿದಂಥ ಅತಿ ವಿಚಿತ್ರಗಳಾದ ಜರಾಮರಣಾದಿ ಭ್ರಾಂತಿ ವಿಲಾಸಮಯ ಬುದ್ಧಿಗಳಿಂದ ಆತ್ಮನೇ ಅಜ್ಞನಿಗೆ ಸ್ಫುರಿಸುತ್ತಿರುವನು.

೧೬. ಯಾವ ಮಹಾತ್ಮನು ನಿತ್ಯನೂ, ಶುದ್ಧನೂ ಆಗಿರುವ ಸ್ವಾತ್ಮಸ್ವರೂಪವನ್ನು ಬಾಹ್ಯ ವಿಷಯಗಳ ಕಡೆಯಿಂದ ಪರಾಙ್ಮುಖವಾಗಿ ಸರ್ವದಾ ಆತ್ಮತತ್ತ್ವೈಕನಿಷ್ಠವಾದ ಬುದ್ಧಿಯಿಂದ ತನ್ನೊಳಗೆ ಆಲಿಂಗನೆ ಮಾಡಿಕೊಂಡು ಬಿಡದೆ ಇರುವನೋ ಅಂತಹ ಆತ್ಮ ತೃಪ್ತನಾದ ತತ್ತ್ವಜ್ಞನನ್ನು ಯಾವ ಭೋಗಗಳು ತಾನೇ ಬಂಧಿಸಲು ಸಮರ್ಥಗಳಾಗಿರುವುವು?

ಕೃತಸ್ಫಾರವಿಚಾರಸ್ಯ ಮನೋ ಭೋಗಾದಯೋಽರಯಃ ।
ಮನಾಗಪಿ ನ ಭಿಂದಂತಿ ಶೈಲಂ ಮಂದಾನಿಲಾ ಇವ ॥ ೧೭ ॥

ಅವಿಚಾರಿಣಮಜ್ಞಾನಂ ಮೂಢಮಾಶಾಪರಾಯಣಂ ।
ನಿಗಿರಂತೀಹ ದುಃಖಾನಿ ಬಕಾ ಮತ್ಸ್ಯಮಿವಾಜಲೇ ॥ ೧೮ ॥

ಜಗದಾತ್ಮೈವ ಸಕಲಮವಿದ್ಯಾ ನಾಸ್ತಿ ಕುತ್ರಚಿತ್ ।
ಇತಿ ದೃಷ್ಟಿಮವಷ್ಟಭ್ಯ ಸಮ್ಯಗ್ರೂಪಃ ಸ್ಥಿರೋ ಭವ ॥ ೧೯ ॥

---

೧೭. ಮಂದ ಮಾರುತಗಳು ಒಂದು ಪರ್ವತವನ್ನು ಭೇದಿಸುವುದಕ್ಕೆ ಸರ್ವಥಾ ಸ್ವಲ್ಪವೂ ಶಕ್ತಿಯಿಲ್ಲದವುಗಳಾಗಿರುವಂತೆ ಸಮಗ್ರವಾಗಿ ಸಂಶಯಾದಿಗಳು ಪುನಃ ತಲೆದೋರದಂತೆ ನಿಷ್ಕೃಷ್ಟವಾಗಿ ಆತ್ಮತತ್ತ್ವವನ್ನು ಚೆನ್ನಾಗಿ ವಿಚಾರ ಮಾಡಿ ದೃಢ ನಿಶ್ಚಿತವಾದ ಸ್ವಾತ್ಮತತ್ತ್ವ ಜ್ಞಾನವನ್ನು ಪಡೆದಿರುವ ಮಹಾತ್ಮನ ಉದಾರ ವಾದ ಮನಸ್ಸನ್ನು ಕಾಮವೇ ಮೊದಲಾದ ಅರಿಷಡ್ವರ್ಗಗಳು ಎಂದಿಗೂ ಸ್ವಲ್ಪ ಮಾತ್ರವೂ ಭೇದಿಸಲಾರದವುಗಳಾಗಿರುವುವು, (ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳು ಅರಿ ಷಡ್ವರ್ಗಗಳು,)

೧೮. ನೀರೆಲ್ಲಾ ಬತ್ತಿಹೋಗಿರುವ, ಹೊಂಡದೊಳಗಿರುವ ಮೀನುಗಳನ್ನು ಬಕಪಕ್ಷಿಗಳು ನುಂಗಿಬಿಡುವಂತೆಯೇ, ಆತ್ಮತತ್ತ್ವ ವಿಚಾರರಹಿತನಾಗಿಯೂ, ಅವಿವೇಕಿಯಾಗಿಯೂ, ವಿಷಯಭೋಗಾಪೇಕ್ಷೆಯಿಂದ ಲಂಪಟನಾಗಿಯೂ ಇರುವ ಮಹಾಭ್ರಾಂತಚಿತ್ತನಾದ ಅನಾತ್ಮಜ್ಞನನ್ನು ಈ ಪ್ರಪಂಚದಲ್ಲಿ ದುಃಖಗಳು ನುಂಗಿಬಿಡುವುವು.

೧೯. ಅದುಕಾರಣ, ಅಯ್ಯ ರಾಘವ, "ಈ ಸಕಲವಾದ ಜಗತ್ತು ಆತ್ಮ ವೇಯೆ. ಅವಿದ್ಯೆಯೆಂಬುದು ಎಲ್ಲಿಯೂ ಇಲ್ಲ." ಎಂಬ ತಾತ್ತ್ವಿಕವಾದ ಸಮ್ಯಗ್ಜ್ಞಾನವನ್ನು ನಿರಂತರವೂ ಬಿಡದೆ ಆಶ್ರಯಿಸಿ ನೀನು ಯಥಾರ್ಥವಾದ ಸ್ವರೂಪ ದಿಂದ ಪ್ರಚ್ಯುತನಾಗದೆ ಸರ್ವದಾ ಸುಸ್ಥಿರನಾಗಿರು.

ನಾನಾತ್ವಮಸ್ತಿ ಕಲನಾಸು ನ ವಸ್ತುತೋಽಂತ ।
ರ್ನಾನಾವಿಧಾಸು ಸರಸೀಷು ಜಲಾದಿ ನಾನ್ಯತ್ ।
ಇತ್ಯೇಕ ನಿಶ್ಚಯಮಯಃ ಪುರುಷೋ ವಿಮುಕ್ತ ।
ಇತ್ಯುಚ್ಯತೇ ಸಮವಲೋಕಿತ ಸಮ್ಯಗರ್ಥಃ ॥ ೨೦ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷು ಉಪಶಮಪ್ರಕರಣೇ "ಸಮ್ಯಗ್‌ಜ್ಞಾನ ನಿರೂಪ ವರ್ಣನಂ" ನಾಮ ಏಕೋನಾಶೀತಿತಮಃ ಸರ್ಗಃ

---

೨೦. ಸರೋವರಗಳು ನಾನಾವಿಧಗಳಾಗಿದ್ದರೂ, ಅವುಗಳೊಳಗೆ ಜಲ, ತರಂಗ, ನೊರೆ, ಮುಂತಾದವುಗಳು ಎಲ್ಲವೂ ಹೇಗೆ ಕೇವಲ ಜಲವೇ ಆಗಿವೆಯೋ ಜಲಕ್ಕಿಂತ ಪೃಥಕ್ಕಾಗಿ ಬೇರೆಯಾವುದೊಂದೂ ವಸ್ತುತಃ ಇಲ್ಲವೇ ಇಲ್ಲವೋ ಅದರಂತೆಯೇ ಪ್ರಪಂಚದಲ್ಲಿ ಭ್ರಾಂತಿಯಿಂದ ಕಲ್ಪಿತವಾದ ವಸ್ತುಗಳು ನಾನಾಪ್ರಕಾರ ಗಳಾಗಿದ್ದರೂ ವಸ್ತುತಃ ಅವುಗಳೊಳಗೆ ನಾನಾತ್ವವು (ಭೇದವು) ಸರ್ವಥಾ ಇಲ್ಲವೇ ಇಲ್ಲವೆಂದು ಒಂದೇ ದೃಢವಾದ ನಿಶ್ಚಯ ಜ್ಞಾನನಿಷ್ಠನಾಗಿಯೂ ವಿವೇಕದಿಂದ ಪಾರಮಾರ್ಥಿಕವಾದ ಸ್ವಾತ್ಮತತ್ತ್ವೈಕ್ಯವನ್ನು (ಅದ್ವಿತೀಯಾತ್ಮ ತತ್ತ್ವವನ್ನು) ಯಥಾರ್ಥವಾಗಿ ತತ್ತ್ವತಃ ಚೆನ್ನಾಗಿ ಸಾಕ್ಷಾತ್ಕಾರಮಾಡಿಕೊಂಡಿರುವವನಾಗಿಯೂ, ಇರುವ ಪುರುಷ ಧೌರೇಯನು ವಿಮುಕ್ತನೆಂದು ಹೇಳಲ್ಪಡುವನು.

("ನಾನಾತ್ವ ವೈವಿಧ್ಯಗಳು ಇರುವುದು ಕ್ಷೇತ್ರದಲ್ಲಿಯೇ ಹೊರತು ಕ್ಷೇತ್ರ ಜ್ಞನಲ್ಲಿಲ್ಲ. ಕ್ಷೇತ್ರಜ್ಞನು ನಿರ್ವಿಕಾರಿ, ಅದರಿಂದ ವಿಕಾರಿಯಾದುವೆಲ್ಲವೂ ಕ್ಷೇತ್ರವು ಕ್ಷೇತ್ರಜ್ಞನಿಂದ ಭಿನ್ನವಾದುದು" ಎಂಬ ಜ್ಞಾನವೇ ಜ್ಞಾನ. ಗೀತಾ ೧೩ ನೆಯ ಅಧ್ಯಾಯದ ಅರ್ಥವನ್ನು ಪರಿಭಾವಿಸಿನೋಡಿ)

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಸಮ್ಯಗ್ ಜ್ಞಾನಲಕ್ಷಣನಿರೂಪಣ" ವೆಂಬ ಎಪ್ಪತ್ತೊಂಭತ್ತನೆಯ ಸರ್ಗವು

ಅಶೀತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಇದಮಂತಃ ಕಲಯತೋ ಭೋಗಾನ್ಪ್ರತಿ ವಿವೇಕಿನಃ ।
ಪುರಃಸ್ಥಿತಾನಪಿ ಸದಾ ಸ್ಪೃಹೈವಾಂಗ ನ ಜಾಯತೇ ॥ ೧ ॥

ಚಕ್ಷುರಾಲೋಕನಾಯೈವ ಜೀವಸ್ತು ಸುಖದುಃಖಯೋಃ ।
ಭಾರಾಯೈವ ಬಲೀವರ್ದೋ ಭೋಕ್ತಾ ದ್ರವ್ಯಸ್ಯ ನಾಯಕಃ ॥ ೨ ॥

ಎಂಭತ್ತನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು :—

೧. ಅಯ್ಯ ರಾಮ, ಈಗಲೇ ಈ ಸರ್ಗದಲ್ಲಿ ನಾನು ನಿನಗೆ ಉಪದೇಶ ಮಾಡಲಿರುವ ವಿಮರ್ಶೋಪದರ್ಶನವನ್ನು ಚೆನ್ನಾಗಿ ಮನಸ್ಸಿನೊಳಗೆ ವಿಚಾರಮಾಡಿ ತಿಳಿದುಕೊಳ್ಳತಕ್ಕಂತಹ ವಿವೇಕಿಯಾದ ಧೀರನಿಗೆ, ಪ್ರಾಪಂಚಿಕಗಳಾದ ಸಕಲ ಭೋಗಗಳೂ ತನ್ನ ಎದುರುನಲ್ಲಿಯೇ ಇದ್ದಾಗ್ಯೂಕೂಡ ಅವುಗಳ ವಿಷಯದಲ್ಲಿ ಆಶೆಯೆಂಬುದೇ ಎಂದಿಗೂ ಸರ್ವಥಾ ಹುಟ್ಟುವುದಿಲ್ಲ.

೨. ಈ ಚಕ್ಷುರಿಂದ್ರಿಯವು (ಕಣ್ಣು) ಕೇವಲ ರೂಪಗ್ರಹಣವೆಂಬ ದರ್ಶನ ಕ್ರಿಯೆಗೆ ಮಾತ್ರವೇ ಕರಣವಾಗಿರುವುದು. ಅಂತಹ ದರ್ಶನಕ್ರಿಯೆಯಿಂದುಂಟಾಗುವ ಸುಖದುಃಖಗಳಿಗಾದರೋ ಜೀವನು ನಾಯಕನಾಗಿರುವನು. (ಚಕ್ಷುರಿಂದ್ರಿಯವಲ್ಲವು.) ಪ್ರಪಂಚದಲ್ಲಿ ಎತ್ತು ತನ್ನ ಬೆನ್ನಿನಮೇಲೆ ಹೇರಿದ ಪದಾರ್ಥಗಳ ಭಾರವನ್ನು ಹೊರುವುದಕ್ಕೆ ಮಾತ್ರವೇ ಸಾಧಕವಾಗಿರುವುದು. ಅಷ್ಟೇ ಹೊರತು ತಾನು ಹೊರುವ ಪದಾರ್ಥಗಳಿಗೆ ನಾಯಕನಾಗಿಯೂ ಇಲ್ಲ. ಅವುಗಳನ್ನು ಅನುಭವಿಸತಕ್ಕ ಭೋಕ್ತೃವಾಗಿಯೂ ಇಲ್ಲ. ಎತ್ತು ಹೊರುವ ಭಾರದಲ್ಲಿನ ವಸ್ತುಗಳನ್ನು ಅನುಭವಿಸುವವನು ಆ ಎತ್ತಿನ ಯಜಮಾನನು. ವಸ್ತುತಃ ಅದರಲ್ಲಿಯೂ ಚಕ್ಷುರಾದೀಂದ್ರಿಯಗಳಿಗೂ ದೇಹಕ್ಕೂ ಆತ್ಮನು ಕೇವಲ ಸ್ವಾಮಿಯಾಗಿದ್ದಾನೆಯೇ ಹೊರತು। ಇಂದ್ರಿಯ ದೇಹಗಳೇ ಆತ್ಮನಲ್ಲ. ಅದುಕಾರಣ ದುಃಖ ಪ್ರಸಕ್ತಿಯೇ ಇಲ್ಲ.

[ಹೀಗೆ ಚಕ್ಷುರಿಂದ್ರಿಯವು ಇಷ್ಟವೂ ಅನಿಷ್ಟವೂ ಆದ ಎರಡು ವಿಧರೂಪಗಳನ್ನೂ ಗ್ರಹಿಸುವುದು. ಇಷ್ಟವಾದ ರೂಪವನ್ನು ಕಂಡಾಗ ಸುಖವಾಗುವುದು. ಅನಿಷ್ಟರೂಪವನ್ನು ಕಂಡಾಗ ದುಃಖವಾಗುವುದು. ಈ ವಿಷಯದಲ್ಲಿ ರೂಪಗ್ರಹಣವನ್ನು ಮಾಡತಕ್ಕ ಕರ್ತೃವು ಯಾರು ? ಅದರಿಂದುಂಟಾಗುವ ಸುಖದುಃಖಗಳನ್ನು ಅನುಭವಿಸುವ ಭೋಕ್ತೃವು ಯಾರು ? ಎಂಬುದನ್ನು ಚೆನ್ನಾಗಿ ವಿಮರ್ಶೆಮಾಡಿ ತಿಳಿಯಬೇಕಾಗಿರುವುದು. ಏಕೆಂದರೆ ಇದು ಶಾಸ್ತ್ರದ ಪರಮಸಾರಭೂತವಾದ ಅತಿರಹಸ್ಯವಾದ ತತ್ತ್ವವು. ಹೇಗೆಂದರೆ ? ನಾವು ಚಕ್ಷುರಿಂದ್ರಿಯ ದಿಂದಲೇ ರೂಪವನ್ನು ಗ್ರಹಿಸುವೆವು. ಕಣ್ಣುಗಳಿಲ್ಲದ ಕುರುಡನು ರೂಪವನ್ನು ನೋಡಲಾರನು. ಅದುಕಾರಣ ಕಣ್ಣು ರೂಪಗ್ರಹಣ ಕರ್ತೃವು ಎಂಬ ಅಂಶವು ನಿರ್ವಿವಾದವು. ಆದರಲ್ಲಿ ಸಂಶಯವಿಲ್ಲನೆಂದು ಎಲ್ಲರೂ ಹೇಳಬಹುದಲ್ಲವೆ, ಆದರೂ ಅದು ಸಂಗತವಲ್ಲ. ಏಕೆಂದರೆ ಚಕ್ಷುರಾದೀಂದ್ರಿಯಗಳು ಕೇವಲಾತ್ಯಂತ ಜಡವಸ್ತುಗಳು. ಜಡವಸ್ತುಗಳು ಸ್ವತಂತ್ರವಾಗಿ ಯಾವುದೊಂದು ವ್ಯವಹಾರವನ್ನೂ ನಿರ್ವಹಿಸಲಾರದವುಗಳಾಗಿರುವ ಕಾರಣ, ಅವುಗಳಿಗೆ ಕರ್ತೃತ್ವಯೋಗ್ಯತೆಯು ಕೂಡ ಸುತರಾಂ ಇಲ್ಲ. ಅಂತೆಯೇ ಭೋಕ್ತೃತ್ವವೂ ಇಲ್ಲ. ಆದುದರಿಂದ ರೂಪಗ್ರಹಣದಲ್ಲಿ ಚಕ್ಷುರಿಂದ್ರಿಯವು ಕರ್ತೃವಾಗುವುದಿಲ್ಲ. ಅಥವಾ "ನಾನು ಇದನ್ನು ನೋಡುವೆನು" ಎಂಬುದಾಗಿ ಲೋಕದಲ್ಲಿ ಸರ್ವರೂ ವ್ಯವಹರಿಸುವ ಕಾರಣ, ಆತ್ಮನು ಅಸಂಗನು, ಅವಿಕ್ರಿಯನು ಸಚ್ಚಿದಾನಂದರೂಪನು. ಸರ್ವಸಾಕ್ಷಿಭೂತನು. ಕೇವಲನು. ನಿರ್ಗುಣನು. ಇಂತಹ ಆತ್ಮನು ಕರ್ತೃವೆನ್ನಿಸುವುದಾಗಲಿ ಭೋಕ್ತೃವೆನ್ನಿಸುವುದಾಗಲಿ ಸರ್ವಥಾ ಅಸಂಭವವು. ಹೀಗೆ ಇಂದ್ರಿಯಗಳಿಗೂ (ಜಡವಾದ ಪ್ರಯುಕ್ತ) ಕರ್ತೃತ್ವ ಬೋಕ್ತೃತ್ವಗಳು ಇಲ್ಲವಾದವು. ಮತ್ತು ಅಸಂಗನೂ, ಅವಿಕ್ರಿಯನೂ, ಶುದ್ಧನೂ, ಬುದ್ಧನೂ, ಆಗಿರುವ ಕಾರಣ ಆತ್ಮನಿಗೂ ಇಲ್ಲವಾದವು. ಹಾಗಾದರೆ ಇನ್ಯಾರಿಗೆ ಎಂದರೆ ? ವಸ್ತುತಃ ಯಾರಿಗೂ ಇಲ್ಲವೆಂದೇ ಹೇಳಬೇಕು. ಹೇಗೆಂದರೆ ಅವಿದ್ಯೆಯೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಆತ್ಮಾನಾತ್ಮಗಳ ಅವಿವೇಕದಿಂದುಂಟಾದ ಇತರೇತರಾಧ್ಯಾಸವನ್ನು ಪುರಸ್ಕರಿಸಿಯೇ ಲೌಕಿಕಗಳೂ ಮತ್ತು ವೈದಿಕಗಳೂ ಆದ ಸಕಲ ಪ್ರಮಾಣ ಪ್ರಮೇಯ ವ್ಯವಹಾರಗಳೂ ಮತ್ತು ವಿಧಿ ಪ್ರತಿಷೇಧ ಮೋಕ್ಷಪರಗಳಾದ ಸರ್ವ ಶಾಸ್ತ್ರಗಳೂ ಪ್ರವರ್ತಿಸುವುವು. ದೇಹೇಂದ್ರಿಯಾದಿಗಳಲ್ಲಿ "ಅಹಂ-ಮಮ" ಎಂಬ ಅಭಿಮಾನರಹಿತನಾದವನಿಗೆ ಪ್ರಮಾತೃತ್ವವು ಸಿದ್ಧಿಸುವುದಿಲ್ಲವಾದ ಕಾರಣ ಪ್ರಮಾಣಗಳಲ್ಲಿ ಪ್ರವೃತ್ತಿಯೂ ಉಪಪನ್ನವಾಗುವುದಿಲ್ಲ ಚಕ್ಷುರಾದಿ ಇಂದ್ರಿಯಗಳ ಸಹಾಯವಿಲ್ಲದಿದ್ದರೆ ಪ್ರತ್ಯಕ್ಷಾದಿ ವ್ಯವಹಾರವು ಸಂಭವಿಸುವುದಿಲ್ಲ. ಇಂದ್ರಿಯಗಳಿಗೆ ಅಧಿಷ್ಠಾನ

(ಆಶ್ರಯ)ವಾದ ಶರೀರವನ್ನು ಬಿಟ್ಟರೆ (ಶರೀರವಿದ್ದ' ಹೊರತು) ಇಂದ್ರಿಯಗಳ ವ್ಯವಹಾರವು ಸಂಭವಿಸುವುದಿಲ್ಲ ದೇಹದಲ್ಲಿ ಅಹಂ-ಮಮತಾರೂಪ ಆತ್ಮಭಾವ ವನ್ನು ಅಧ್ಯಾಸಮಾಡದೆ ಹೋದರೆ ಬರಿಯ ಜಡ ದೇಹದಿಂದ ಯಾವನೂ ಯಾವ ವ್ಯವಹಾರದಲ್ಲಿಯೂ, ಎಂದಿಗೂ ವ್ಯಾಪೃತನಾಗುವುದಿಲ್ಲ. ಮತ್ತು ಇವೆಲ್ಲವೂ ಇಲ್ಲವೆ ಇದ್ದರೆ ಅಸಂಗನಾದ ಆತ್ಮನಿಗೆ ಪ್ರಮಾತೃತ್ವವು ಹೇಗೂ ಉಪಪನ್ನವಾಗುವುದಿಲ್ಲ. ಪ್ರಮಾತೃತ್ವವೇ ಇಲ್ಲದೆ ಹೋದರೆ ಪ್ರಮಾಣ ಪ್ರವೃತ್ತಿಯೂ ಇಲ್ಲವು. ಅದು ಕಾರಣ ಪಂಡಿತರಿಗೂ, ಪಾಮರರಿಗೂ, ಪಶ್ವಾದಿಗಳಿಗೂ ಒಂದೇಸಮನಾಗಿ ಸಮಸ್ತ ವಾದ ಲೌಕಿಕ, ವೈದಿಕ, ಮತ್ತು ಶಾಸ್ತ್ರೀಯಗಳೆಂಬ ಪ್ರಮಾಣ ಪ್ರಮೇಯಾದಿ ವ್ಯವಹಾರಗಳೂ ಅವಿದ್ಯಾವದ್ವಿಷಯಗಳೇ; ಇದರಲ್ಲಿ ಸಂದೇಹವಿಲ್ಲ. ಹೀಗೆ ರೂಪಾದಿ ಗಳನ್ನು ಗ್ರಹಿಸುವ ವಿಷಯದಲ್ಲಿ ಚಕ್ಷುರಾದೀಂದ್ರಿಯಗಳು ಜಡವಾಗಿರುವ ಕಾರಣ ಸ್ವತಃ ಪ್ರವರ್ತಿಸಲಾರವು. ಅತ್ಯಂತ ವಿಲಕ್ಷಣಗಳಾದ ಅನಾತ್ಮ ದೇಹೇಂದ್ರಿಯ ಗಳಲ್ಲಿ ಅವಿವೇಕದಿಂದ "ಅಹಂ" ಭಾವವನ್ನು (ಆತ್ಮತಾದಾತ್ಮ್ಯವನ್ನು) ಅಧ್ಯಾಸ ಮಾಡುವುದರಿಂದ ಆತ್ಮನು ಅವಿದ್ಯಾಕಲ್ಪಿತವಾದ ಜೀವಭಾವವನ್ನು ಹೊಂದಿ ತಾನು ಜೀವನೆಂದೂ, ಪ್ರಮಾತೃವೆಂದೂ ದೇಹಾದಿಗಳು ತನಗೆ ಸಂಬಂಧಪಟ್ಟವುಗಳೆಂದೂ ತನಗಾಗಿ ಅವುಗಳನ್ನು ನಾನಾ ವ್ಯಾಪಾರಗಳಲ್ಲಿ ವ್ಯವಹರಿಸುವಂತೆ ಮಾಡಿ ತಾನು ಕರ್ತೃವೆಂದೂ ಆ ವ್ಯವಹಾರಗಳಿಂದ ಲಭ್ಯವಾಗುವ ಫಲಗಳನ್ನು ತಾನೇ ಅನುಭವಿ ಸುವ ಭೋಕ್ತೃವೆಂದೂ ತಪ್ಪಾಗಿಯೇ ಭ್ರಾಂತಿಯಿಂದ ತಿಳಿದುಕೊಂಡು ವ್ಯವ ಹರಿಸುವನು ಅಷ್ಟೇ. ಜೀವತ್ವ, ಪ್ರಮಾತೃತ್ವ, ಕರ್ತೃತ್ವ, ಭೋಕ್ತೃತ್ವಾದಿ ಧರ್ಮ ಗಳೆಲ್ಲವೂ ಆಧ್ಯಾಸಿಕವು. ಅವಿವೇಕ ಪುರಸ್ಸರವಾದ ಅವಿದ್ಯೆಯಿಂದ ಕಲ್ಪಿತವು ವಾಸ್ತವವಾದವುಗಳಲ್ಲ. ವಸ್ತುತಃ ನಿತ್ಯನೂ, ಶುದ್ಧನೂ, ಮುಕ್ತನೂ, ಅಸಂಗನೂ ನಿಷ್ಕ್ರಿಯನೂ, ನಿರ್ಗುಣನೂ, ನಿಷ್ಪ್ರಪಂಚನೂ ಆಗಿರುವ ಆತ್ಮನು ಸ್ವಭಾವ ವಿರುದ್ಧವಾದ ಧರ್ಮಗಳನ್ನು ಹೇಗೂ, ಎಂದಿಗೂ ಪಡೆಯುವುದಿಲ್ಲ. ಯಾವೊಂದು ವಸ್ತುವಿನ ಸ್ವಭಾವವು ಎಂದಿಗೂ ಬದಲಾಯಿಸುವುದಿಲ್ಲ. (ಪ್ರಕೃತೇರನ್ಯಥಾಭಾವೋ ನ ಕಥಂಚಿತ್ ಭವಿಷ್ಯತಿ) ಈ ಕಾರಣದಿಂದ ಜೀವತ್ವ, ಕರ್ತೃತ್ವ, ಭೋಕ್ತೃತ್ವ ಮೊದಲಾದ ಪ್ರಾಪಂಚಿಕ ವ್ಯವಹಾರವೆಲ್ಲವೂ ಕೇವಲ ಭ್ರಾಂತಿ ಮಯವೇ (ಅವಿದ್ಯಾ ಕಲ್ಪಿತವೇ, ಆಧ್ಯಾಸಿಕವೇ) ಎಂಬುದು ನಿರ್ವಿವಾದ ವಿಷಯ. ಪ್ರಪಂಚದಲ್ಲಿ ನಾನಾ ವ್ಯವಹಾರಗಳನ್ನು ಮಾಡುತ್ತಲೂ ಸುಖದುಃಖಾನುಭವ ಮಾಡುತ್ತಲೂ ಇದ್ದರೂ, ವಾಸ್ತವವಾಗಿ ತತ್ತ್ವ ವಿಚಾರ ವಿಮರ್ಶೆ ಮಾಡಿದರೆ ಜಡ ದೇಹೇಂದ್ರಿಯಗಳಿಗೂ, ನಿತ್ಯಶುದ್ಧ ಚಿದ್ರೂಪಾತ್ಮನಿಗೂ ಯಾವ ಸಂಬಂಧವೂ ಇಲ್ಲ. ದೇಹೇಂದ್ರಿಯಗಳಿ ಗಾಗಲೀ, ಆತ್ಮನಿಗಾಗಲೀ ಕರ್ತೃತ್ವ, ಭೋಕ್ತೃತ್ವಗಳೂ ಇಲ್ಲ. ಅದು ಕಾರಣವೇ

ನಯನೇ ರೂಪನಿರ್ಮಗ್ನೇ ಕ್ಷೋಭಃ ಕ ಇವ ದೇಹಿನಃ ।
ಗರ್ಭೇ ಪಲ್ವಲೇ ಮಗ್ನೇ ಕ್ವೈವ ಸೇನಾಪತೇಃ ಕ್ಷತಿಃ ॥ ೩ ॥

ಸುಖದುಃಖಾನುಭವವೂ ಇಲ್ಲ. ಆತ್ಮನು ನಿತ್ಯಮುಕ್ತನಾದ ಕಾರಣ ಬಂಧವೂ ಇಲ್ಲ, ಮೋಕ್ಷವೂ ಇಲ್ಲ. ಪ್ರಪಂಚದಲ್ಲಿ ಸ್ವಾಭಾವಿಕವಾಗಿ, ದೃಢವಾಗಿರುವ ಅಜ್ಞಾನದಿಂದ ಆತ್ಮನಲ್ಲಿ ಕಲ್ಪಿತವಾಗಿ ಹೊರಿಸಲ್ಪಟ್ಟಿರುವ ಸುಖಿತ್ವ, ದುಃಖಿತ್ವಾದಿ ಸಕಲ ಧರ್ಮಗಳನ್ನೂ, ವಿವೇಕಪೂರ್ಣವಾದ ಯಥಾರ್ಥ ಜ್ಞಾನವನ್ನುಂಟುಮಾಡಿ ಪರಿಹರಿಸಿಕೊಡುವುದೇ ಶಾಸ್ತ್ರದ ಮುಖ್ಯೋದ್ದೇಶವು. ಈ ಅಭಿಪ್ರಾಯವನ್ನು ಶ್ರೀಮಚ್ಛಂಕರ ಭಗವತ್ಪೂಜ್ಯಪಾದಾಚಾರ್ಯರವರು ತಮ್ಮ ಶಾರೀರಕ ಮೀಮಾಂಸಾ ಭಾಷ್ಯದ ಗುಹಾಪ್ರವಿಷ್ಟಾಧಿಕರಣದಲ್ಲಿ "ಇದಂ ಹಿ ಕರ್ತೃತ್ವಂ. ಭೋಕ್ತೃತ್ವಂ ಚ ಸತ್ತ್ವಕ್ಷೇತ್ರಜ್ಞಯೋಃ ಇತರೇತರ ಸ್ವಭಾವಾವಿವೇಕಕೃತಂ ಕಲ್ಪ್ಯತೇ. ಪರಮಾರ್ಥತಸ್ತು ನ ಅನ್ಯತರಸ್ಯಾಪಿ ಸಂಭವತಿ; ಅಚೇತನತ್ವಾತ್ ಸತ್ತ್ವಸ್ಯ; (ಸತ್ವ= ಬುದ್ಧಿ) ಅವಿಕ್ರಿಯತ್ವಾಚ್ಚ ಕ್ಷೇತ್ರಜ್ಞಸ್ಯ; ಅವಿದ್ಯಾ ಪ್ರತ್ಯುಪ ಸ್ಥಾಪಿತ ಸ್ವಭಾವತ್ವಾಚ್ಚ ಸತ್ತ್ವಸ್ಯ ಸುತರಾಂ ನ ಸಂಭವತಿ; ತಥಾ ಚ ಶ್ರುತಿಃ "ಯತ್ರವಾ ಅನ್ಯದಿವ ಸ್ಯಾತ್ ತತ್ರ ಅನ್ಯಃ ಅನ್ಯತ್ ಪಶ್ಯೇತ್ ಇತ್ಯಾದಿನಾ ಸ್ವಪ್ನದೃಷ್ಟ ಹಸ್ತ್ಯಾದಿ ವ್ಯವಹಾರವತ್ ಅವಿದ್ಯಾ ವಿಷಯೇ ಏವ ಕರ್ತೃತ್ವಾದಿ ವ್ಯವಹಾರಂ ದರ್ಶಯತಿ । ಯತ್ರ ತ್ವಸ್ಯ ಸರ್ವಂ ಆತ್ಮೈವಾ ಭೂತ್ ತತ್ ಕೇನಕಂ ಪಶ್ಯೇತ್ (ಬೃಹ ೪-೫-೧೫) ಇತ್ಯಾದಿನಾ ಚ ವಿವೇಕಿನಃ ಕರ್ತೃತ್ವಾದಿ ವ್ಯವಹಾರಾಭಾವಂ ದರ್ಶಯತಿ" ಎಂದು ಸ್ಪಷ್ಟವಾಗಿ ಘಂಟಾಘೋಷದಿಂದ ಸಾರಿರುವರು. ಇದಕ್ಕಿಂತ ಇಲ್ಲಿ ಹೆಚ್ಚಾಗಿ ವಿವರಿಸಲು ಸಾಧ್ಯವಿಲ್ಲ. ಈ ವಿಚಾರವು ಶಾಸ್ತ್ರದ ಮೂಲ ಸ್ತಂಭ. ಪರಮ ರಹಸ್ಯವಾದ ಸಿದ್ಧಾಂತ. ಹೆಚ್ಚು ವಿವರಗಳನ್ನು ಪ್ರಾಜ್ಞರಿಂದ ವಾಚಕರು ಕೇಳಿ ಅರಿಯಬೇಕು]

ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ । ಅಹಂಕಾರ ವಿಮೂಢಾತ್ಮಾ ಕರ್ತಾ ಅಹಮಿತಿ ಮನ್ಯತೇ ॥ ತತ್ತ್ವವಿತ್ ತು ಮಹಾ ಬಾಹೋ ಗುಣ ಕರ್ಮ ವಿಭಾಗಯೋಃ । ಗುಣಾಃ ಗುಣೇಷು ವರ್ತಂತೇ ಇತಿಮತ್ವಾನ ಸಜ್ಜತೇ. ಗೀತಾ. ಅಧ್ಯಾಯ. ೩-೨೭-೨೮.

೩. ಚಕ್ಷುರಿಂದ್ರಿಯವು ಹೋಗಿ ರೂಪವೆಂಬ ಕೊಚ್ಚೆಯಲ್ಲಿ ಮುಳುಗಿ ಬಿಟ್ಟರೆ, ಆ ಇಂದ್ರಿಯಕ್ಕೆ ಸ್ವಾಮಿಯಾದ ದೇಹಿಗೆ ಕ್ಷೋಭವುಂಟಾಗುವುದೆಂದು

ರೂಪಕರ್ದಮಮೇತನ್ಮಾ ನಯನಾಸ್ವಾದಯಾಧಮ ।
ನಶ್ಯತ್ಯೇತನ್ನಿಮೇಷೇಣ ಭವಂತಮಪಿ ಹಿಂಸತಿ ॥ ೪ ॥

ಯೇನೈವ ಸಂಖ್ಯಾ ಕ್ರಿಯತೇ ಯೇನೈವಾಽಸ್ಯೋಽನುಗಮ್ಯತೇ ।
ತದೀಯೈಃ ಕರ್ಮಭಿಃ ಕ್ಷಿಪ್ರಂ ಪ್ರಾಜ್ಞಃ ಕ್ರೂರೋ ನಿಬಧ್ಯತೇ ॥ ೫ ॥

ಹೇಳುವುದಕ್ಕೆ ಅವಕಾಶವು ಯಾವುದಿರುವುದು ? ಯಾವುದೋ ಒಂದು ಅಗಸನ ಕತ್ತೆಯು ಸೇನೆಯೊಂದಿಗೆ ಸೇರಿಕೊಂಡು ದಾರಿಯಲ್ಲಿ ಹೋಗುತ್ತಾ, ಎಲ್ಲಿಯೋ ಒಂದು ಹೊಂಡದಲ್ಲಿ ಮುಳುಗಿಕೊಂಡರೆ, ಆದರಿಂದ ಸೇನಾಪತಿಗೆ ಯಾವ ಹಾನಿ ಯುಂಟಾಗುವುದು? ದೇಹಿಯು ಚಕ್ಷುರಿಂದ್ರಿಯಕ್ಕೆ ಮಾತ್ರವೇ ಸ್ವಾಮಿಯಾಗಿಯೂ ಇಲ್ಲ. ಆದರೆ ಅನಂತಗಳಾದ ಕಾರ್ಯಕರಣ ಸಂಘಾತಗಳಿಗೂ ಅವಿದ್ಯಾ ಕಾಮ ಕರ್ಮವಾಸನೆಗಳಿಗೂ ಅವುಗಳ ಫಲಭೇದಗಳಿಗೂ ಅಭಿಮಾನದಿಂದ ಸ್ವಾಮಿಯೆನ್ನಿಸಿರುವನು. ಅವುಗಳೊಳಗೆ, ಅಹಂಕಾರ ಬುದ್ಧಿ ಮನಸ್ಸು, ಪ್ರಾಣಿಗಳ ಪರಂಪರೆಯಿಂದ, ಹೇಗೋ ಒಂದು ಬಗೆಯಲ್ಲಿ ತನಗೆ ಸಂಬಂಧ ಪಟ್ಟದ್ದರಂತೆ ಇರುವ ಯಾವುದೋ ಒಂದು ಇಂದ್ರಿಯವು ಒಂದುವೇಳೆ ಅನಿಷ್ಟವಾದ ರೂಪದೊಡನೆ ಸೇರಿಕೊಂಡರೆ ದೇಹಿಯು ಅದನ್ನು ಎಷ್ಟುಮಾತ್ರವೂ ಪರಿಗಣಿಸುವುದಿಲ್ಲ. ಆದರಿಂದ ದುಃಖ ಪ್ರಸಕ್ತಿಗೆ ಸುತರಾಂ ಅವಕಾಶವಿಲ್ಲವೆಂದರ್ಥ.]

೪. ಎಲೈ ನೀಚವಾದ (ಅಧಮ) (ಮೂಢತಮ) ನಯನವೇ, ಈ ರೂಪವೆಂಬ ಕೊಚ್ಚೆಯನ್ನು ಆಸ್ವಾದನೆಮಾಡದೆ, ಜುಗುಪ್ಸೆ ಪಟ್ಟುಕೊಂಡು ದೂರವಾಗಿರು. ಏಕೆನ್ನುವಿಯೋ ? ಈ ರೂಪವು, ಒಂದು ನಿಮಿಷದೊಳಗಾಗಿ ತಾನುಹಾಳಾಗಿ ನಾಶ ಹೊಂದುವುದು. ಅಷ್ಟೇ ಅಲ್ಲದೆ ನಿನ್ನನ್ನೂ ಬಹುವಾಗಿ ಹಿಂಸಿಸುವುದು.

೫. ತೀಕ್ಷ್ಣಬುದ್ಧಿಯುಳ್ಳ ಪ್ರಾಜ್ಞನಾದರೋ, ಸ್ವಾಂತರ್ಗತನಾದ ಯಾವ ಚಿದಾತ್ಮನಿಂದಲೇ, ಯದೃಚ್ಛಾಪ್ರಾಪ್ತವಾದ ಬಾಹ್ಯಾಭ್ಯಂತರಾರ್ಥಗಳ ಪ್ರಕಾಶವುಂಟಾಗುವುದೋ, ಮತ್ತು ಯಾವ ಚಿದಾತ್ಮನೇ ಅನಾತ್ಮಭೂತಗಳಾದ ಅನ್ನಮಯಾದಿ ಪಂಚಕೋಶಗಳನ್ನು ಆತ್ಮತಾದಾತ್ಮ್ಯಾಧ್ಯಾಸದಿಂದ ಅನುಸರಿಸಿಕೊಂಡಿರುವನೋ, ಅಂತಹ ಚಿದಾತ್ಮನು ಉದಾಸೀನನಾಗಿದ್ದರೂ, ಕೇವಲ ಸಾನ್ನಿಧ್ಯದಿಂದ ಉಂಟಾಗುವ ಅರ್ಥಪ್ರಕಾಶನರೂಪ ಕರ್ಮಗಳೊಡನೆ (ಅಭ್ಯಾಸಬಲದಿಂದ) ಸಂಬಂಧ

ಉತ್ಪನ್ನಧ್ವಂಸಿ ಚಾಪಾತಮಾತ್ರಹೃದ್ಯಮಸನ್ಮಯಂ ।
ರೂಪಮಾಶ್ರಯ ಮಾ ನೇತ್ರ ವಿನಾಶಾಯವಿನಾಶಿನೇ ॥ ೬ ॥

ಸಾಕ್ಷಿತತ್ತ್ವಂ ಸ್ಥಿತಂ ನೇತ್ರ ರೂಪಮಾತ್ಮನಿ ತಿಷ್ಠತಿ ।
ಆಲೋಕಂ ಕಾಲವಶತಸ್ತ್ವಮೇಕಂ ಕಿಂ ಪ್ರತಪ್ಯಸೇ ॥ ೭ ॥

ಸಲಿಲಸ್ಪಂದವದ್ದೃಷ್ಟಿಃ ಪಿಂಛಿಕೇವಾಂಬರೋತ್ಥಿತಾ ।
ಸಂಜಾತಿಬಂಧಾ ಸ್ಫುರತಿ ತವ ಚಿತ್ತ ಕಿಮಾಗತಂ ॥ ೮ ॥

ಪಡೆಯುವನು ಮೂಢಜನರಂತೆ ರೂಪಾದಿಗಳನ್ನು ಆಸ್ವಾದನೆಮಾಡುವುದಿಲ್ಲ. ಆದುಕಾರಣ ಎಲೈನಯನವೇ, ನೀನೂ ಉದಾಸೀನವಾಗಿದ್ದುಕೊಂಡು ರೂಪವನ್ನು ಪ್ರಕಾಶಗೊಳ್ಳಿಸಲು ಸಹಾಯಕನಾಗಿರು. ರೂಪವನ್ನು ಆಸ್ವಾದನೆಮಾಡಲು ಹೋಗಿ ನಾಶಹೊಂದದಿರು.

೬. ಎಲೈ ನೇತ್ರವೇ, ಹುಟ್ಟಿದಕ್ಷಣದಲ್ಲಿಯೇ (ಒಡನೆಯೇ) ಧ್ವಂಸವನ್ನು ಹೊಂದಿ ಅದೃಶ್ಯವಾಗಿಬಿಡುವ, ಮತ್ತು ಆಪಾತಮಾತ್ರ ರಮಣೀಯವಾದ ಆದುದ ರಿಂದಲೇ ಅತ್ಯಂತಾಸತ್ಕಲ್ಪವಾಗಿರುವ ಸೌಂದರ್ಯವನ್ನು ಎಂದಿಗೂ ಆಶ್ರಯಿಸ ಬೇಡ. ರೂಪವನ್ನು ಆಶ್ರಯಿಸಿದರೆ, ಅನಿವಾರ್ಯವಾದ ಮೃತ್ಯುಮುಖಪ್ರವೇಶವು ನಿನಗೆ ಎಂದಿಗೂ ತಪ್ಪುವುದಿಲ್ಲ.

೭. ಎಲೈ ನೇತ್ರವೇ, ಸರ್ವದೇಶಕಾಲಗಳಲ್ಲಿ ಸಮಸ್ತ ಬಾಹಾಭ್ಯಂತರ ಪದಾರ್ಥಗಳನ್ನು ಪ್ರಕಾಶಪಡಿಸತಕ್ಕ ವಿಷಯದಲ್ಲಿ, ಮತ್ತೊಂದರ ಸಾಹಾಯ್ಯವನ್ನು ಅಪೇಕ್ಷಿಸದೆಯೇ ಸ್ವತಃ ಸರ್ವಶಕ್ತನಾಗಿರುವ ಚಿದ್ರೂಪ ಆತ್ಮನೇ, ರೂಪದ ವಿಷಯ ದಲ್ಲಿ ಅತ್ಯಂತ ಉದಾಸೀನನಾಗಿರುವಾಗ, ಯಾವಾಗಲೋ ಒಂದೊಂದು ಸಮಯ ದಲ್ಲಿ ಮಾತ್ರ ಸೂರ್ಯ ಚಂದ್ರ ದೀಪ ಮುಂತಾದುವುಗಳ ಮೂಲಕ ಸಾಹಾಯ್ಯ ವನ್ನು ಪಡೆದು, ರೂಪವನ್ನು ಪ್ರಕಾಶಪಡಿಸತಕ್ಕ ನೀನು ಮಾತ್ರವೇ ಹೀಗೆ ಏತಕ್ಕೋಸ್ಕರ ವಿಶೇಷವಾಗಿ ಪರಿತಪಿಸುತ್ತಲಿರುವೆ? ಅದುಕಾರಣ, ನೀನೂಕೂಡ ಆತ್ಮನಂತೆಯೇ ಕೇವಲ ಸಾಕ್ಷಿಯಾಗಿದ್ದುಕೊಂಡು ರೂಪವನ್ನು ಕಾಣು. (ನೋಡು)

೮. ಎಲೈ ಚಿತ್ತವೇ, ಈ ನೇತ್ರವು ಮೌಢ್ಯದಿಂದ ರೂಪವನ್ನು ನೋಡಿ ಭ್ರಾಂತಿಗೊಂಡರೂ ಕೂಡ, ನೀನೇಕೆ ಸುಮ್ಮನೆ ವ್ಯರ್ಥವಾಗಿ ಅದರಲ್ಲಿ ಅನುರಾಗ

ಕಲ್ಪಾಂಭಸೀವ ಶಫರೀ ಚಿತ್ತೇ ಸ್ಫುರಣಧರ್ಮಿಣಿ ।
ಸ್ವಯಂ ಸ್ಫುರತ್ವಹಂಕಾರತ್ವಮಯಂ ಪ್ರೋತ್ಥಿತಃ ಕುತಃ ॥ ೯ ॥

ಆಲೋಕರೂಪಯೋರ್ನಿತ್ಯಂ ಜಡಯೋಃ ಸ್ಫುರತೋರ್ಮಿಥಃ ।
ಆಧಾರಾಧೇಯಯೋಶ್ಚಿತ್ತ ವ್ಯರ್ಥಮಾಕುಲತಾ ತವ ॥ ೧೦ ॥

ವನ್ನಿಟ್ಟುಕೊಂಡು ಪರಿತಪಿಸುವೆ? ಈ ವಿಚಿತ್ರವಾದ ರೂಪದೃಷ್ಟಿಯೆಲ್ಲವೂ ನೀರಿನಲ್ಲಿ ಅನೇಕ ವಿಧವಾಗಿ ಅನಿಯತವಾಗಿ ಉದಯಿಸುವ ತರಂಗ ಫೇನಾದಿರೂಪ ಚಲನ ವೈಚಿತ್ರ್ಯಗಳಂತೆ ಅನಿಯತವಾದುದು. ಮತ್ತು ಸೂರ್ಯನ ಎದುರಿಗೆ ನಿಂತುಕೊಂಡು, ಕಣ್ಣೀರುತುಂಬಿದ ದೃಷ್ಟಿಯಿಂದ ನಿರೀಕ್ಷಿಸುವವನಿಗೆ, ನಿರ್ಮಲವಾದ ಆಕಾಶದಲ್ಲಿ ನವಿಲುಗರಿಯ ಆಕಾರವಾಗಿ ಅಸತ್ಯವಾಗಿಯೇ ತೋರುವ ರೂಪದಂತೆ ಕೇವಲ ಭ್ರಾಂತಿಮೂಲವಾದ ಮಿಥ್ಯಾಭೂತವಾದುದು. ಇದು ಗೋವು, ಕುದುರೆ, ಸ್ತ್ರೀವ್ಯಕ್ತಿ ಇತ್ಯಾದಿ ನಾನಾವಿಧ ಸುಜಾತಿ ದುರ್ಜಾತಿ ರೂಪ ವಿಕಲ್ಪಗಳ ಸಂಬಂಧವುಳ್ಳದ್ದಾಗಿರುವುದು. ಇಂತಹ ರೂಪವು ಕಣ್ಣಿನ ದೆಸೆಯಿಂದ ಸ್ಫುರಿಸಿದರೆ, ಅದರಿಂದ ನಿನಗೇನು ಲಾಭವಾದಂತೆ ಆಗುವುದು ?

೯. ಪ್ರಳಯಕಾಲದ ನೀರಿನೊಳಗೆ ಒಂದು ಹೆಣ್ಣುಮೀನು ಸ್ಫುರಿಸುವಂತೆ ಸ್ವಭಾವತಃ ಸದಾ ಸ್ಫುರಣ ಧರ್ಮವುಳ್ಳ ಈ ಚಿತ್ತದಲ್ಲಿ ಕಣ್ಣಿನಿಂದ ನೋಡಲ್ಪಟ್ಟ ರೂಪಾದ್ಯಾಕಾರವೃತ್ತಿಯು ಒಂದುವೇಳೆ ಸ್ಫುರಿಸಿದರೂ ಸ್ಫುರಿಸಲಿ. ಆದರೆ ಎಲೈ ಅಹಂಕಾರವೇ, ಯಾವಕಾರಣದ ದೆಸೆಯಿಂದ ನೀನು ಏತಕ್ಕಾಗಿ ಉದ್ಭವಿಸಿ ಅದರಲ್ಲಿ ಅಭಿಮಾನವನ್ನು ಮಾಡುತ್ತಿರುವೆ ?

೧೦. ಸೂರ್ಯ, ದೀಪ ಮುಂತಾದುವುಗಳ ಪ್ರಕಾಶವೂ ಸ್ತ್ರೀ ಪುತ್ರಾದಿವ್ಯಕ್ತಿಗತವಾದ ರೂಪವೂ ಇವೆರಡೂ ಸರ್ವದಾ ಸ್ವಭಾವತಃ ಜಡವಸ್ತುಗಳೇ. ಅವೆರಡೂ ಅನ್ಯೋನ್ಯಾಶ್ರಯದಿಂದ ಮಾತ್ರವೇ ಸ್ಫುರಿಸತಕ್ಕವುಗಳು. ಇವೆರಡೂ ಆಧಾರಾಧೇಯ ರೂಪಸಂಬಂಧವನ್ನು ಪಡೆದಿರುವುವು. ಇವೆರಡರ ಪರಸ್ಪರ ಸಂಯೋಗದಿಂದ ಸೌಂದರ್ಯಭ್ರಾಂತಿಯುದಯಿಸುವುದು. ಆ ಭ್ರಾಂತಿಯಿಂದ ಕಾಮಾದಿಗಳೂ, ಅವುಗಳ ಮೂಲಕ ಚಿತ್ತದ ವ್ಯಾಕುಲತೆಯೂ ಉಂಟಾಗುವುವು. ಆದರೆ ಅವು ಹೇಗಾದರೂ ಇರಲಿ ಎಲೈಚಿತ್ತವೇ, ನಿನಗೂ ಆಲೋಕರೂಪಗಳಿಗೂ

ರೂಪಾಲೋಕಮನಸ್ಕಾರಾಃ ಪರಸ್ಪರಮಸಂಗಿನಃ ।
ಸಂಪನ್ನಾ ಇವ ಲಕ್ಷ್ಯಂತೇ ವದನಾದರ್ಶಬಿಂಬವತ್ ॥ ೧೧ ॥

ಅಜ್ಞಾನಜತುನಾ ಹ್ಯೇತೇ ಶ್ಲಿಷ್ಟಾ ಜಾತಾ ನಿರಂತರಾಃ ।
ಅಜ್ಞಾನೇ ಜ್ಞಾನಗಲಿತೇ ಪೃಥಕ್ತಿಷ್ಠಂತ್ಯ ಸನ್ಮಯಾಃ ॥ ೧೨ ॥

ಮನಃಕಲ್ಪನಯಾ ಹ್ಯೇತೇ ಸುಸಂಬದ್ಧಾಃ ಪರಸ್ಪರಂ ।
ರೂಪಾಲೋಕಮನಸ್ಕಾರಾ ದಾರುಣೀ ಜತುನಾ ಯಥಾ ॥ ೧೩ ॥

ಸ್ವಲ್ಪವೂ ಸಂಬಂಧ ಇಲ್ಲದಿರುವಾಗ, ನೀನು ಆ ರೂಪದ ವಿಷಯದಲ್ಲಿ ವ್ಯಾಕುಲ ಪಡುವಿಕೆಯು ವ್ಯರ್ಥವೇ ಸರಿ.

೧೧. ಚಕ್ಷುರಿಂದ್ರಿಯವು ಹೊರಗಡೆ ಇರುವ ರೂಪವನ್ನು ಕಾಣುವುದು. ಸಂಕಲ್ಪಾದಿ ಮನಸ್ಕಾರಗಳು ಮನಸ್ಸಿನಿಂದ ದೇಹದೊಳಗೆ ಕಲ್ಪಿಸಲ್ಪಡುವುವು. ಇವೆರಡೂ ವಿಭಿನ್ನದೇಶಗಳಲ್ಲಿರುವುದರಿಂದಲೇ ಪರಸ್ಪರ ಸಂಸರ್ಗ (ಸಂಬಂಧ) ವಿಲ್ಲದವುಗಳಾಗಿವೆ. ಆದರೂ ದೇಹದಲ್ಲಿರುವ ಬಿಂಬವಾದ ಮುಖವೂ ಕನ್ನಡಿಯಲ್ಲಿ ತೋರುವ ಅದರ ಪ್ರತಿಬಿಂಬವೂ ಪರಸ್ಪರ ಸಂಬದ್ಧಗಳಾಗಿರುವಂತೆ ಹೇಗೆ ಭ್ರಾಂತಿಯಿಂದ ತೋರುವುದೋ ಹಾಗೆ ಅವೆರಡೂ (ರೂಪಚಿತ್ರಗಳೂ) ಒಂದಕ್ಕೊಂದು ಸಂಬಂಧ ಪಡೆದುಕೊಂಡಿರುವಂತೆ ಕಾಣುವುದು ಕೇವಲ ಭ್ರಾಂತಿಮಯವಾದ ಆಭಾಸವೇ.

೧೨. ಈ ರೂಪಾಲೋಕ ಮನಸ್ಕಾರಗಳು ಅಜ್ಞಾನವೆಂಬ ಅರಗಿನಿಂದ ಅವಿಚ್ಛಿನ್ನವಾಗಿ (ಸಂದಿಲ್ಲದಂತೆ) ಸರ್ವದಾ ಒಟ್ಟಿಗೆ ಕೂಡಿಸಲ್ಪಟ್ಟವುಗಳಂತೆ ಇರುವುವು. ಆತ್ಮಯಾಥಾರ್ಥ್ಯ ಜ್ಞಾನವೆಂಬ ದೀಪಜ್ವಾಲೆಯಿಂದ ಅಜ್ಞಾನವೆಂಬ ಅಂಟು ಹಾಕಿರುವ ಅರಗು ಕರಗಿ ನಾಶಹೊಂದಿಬಿಡಲು ಆ ರೂಪಾಲೋಕ ಮನಸ್ಕಾರಗಳು ಪರಸ್ಪರ ಪ್ರತ್ಯೇಕಿಸಲ್ಪಟ್ಟವುಗಳಾಗಿಯೂ ಜ್ಞಾನಬಾಧಿತಗಳಾದ ಕಾರಣ ಅಸದ್ರೂಪಗಳಾಗಿಯೂ ಅಧಿಷ್ಠಾನ ಸನ್ಮಾತ್ರ ರೂಪದಿಂದ ಅವಶಿಷ್ಟವಾಗಿರುವುವು.

೧೩. ಎರಡು ಮರದ ತುಂಡುಗಳು ಅರಗಿನಿಂದ ಒಟ್ಟಿಗೆ ಅಂಟಿಸಲ್ಪಡುವಂತೆ ಈ ರೂಪಾಲೋಕ ಮನಸ್ಕಾರಗಳು ಮನಸ್ಸಿನ ಕಲ್ಪನೆಯಿಂದ ಮಾತ್ರವೇ ಒಂದಕ್ಕೊಂದು ಚೆನ್ನಾಗಿ ಸಂಬಂಧ ಪಡೆದವುಗಳಾಗಿವೆ.

ಸ್ವಮನೋ ಮನನಂ ತಂತುರ್ಮನೋಭ್ಯಾಸೇನ ಯತ್ನತಃ ।
ವಿಚಾರಾಚ್ಛೇದ ಮಾಯಾತಿ ಛಿನ್ನೈವಾಜ್ಞಾನಭಾವನಾ ॥ ೧೪ ॥

ಅಜ್ಞಾನಸಂಕ್ಷಯಾತ್ ಕ್ಷೀಣೇ ಮನಸೀಮೇ ಪುನರ್ಮಿಥಃ ।
ರೂಪಾಲೋಕಮನಸ್ಕಾರಾಃ ಸಂಘಟ್ಟಂತೇ ನ ಕೇಚನ ॥ ೧೫ ॥

ಸರ್ವೇಷಾಂ ಚಿತ್ತಮೇವಾಂ ತರಿಂದ್ರಿಯಾಣಾಂ ಪ್ರಬೋಧಕಂ ।
ತದೇವ ತಸ್ಮಾದುಚ್ಛೇದ್ಯಂ ಪಿಶಾಚ ಇವ ಮಂದಿರಾತ್ ॥ ೧೬ ॥

---

೧೪. ತಮ್ಮ ಮನಸ್ಸಿನ ಮನನವೆಂಬುದೇ ಒಂದು ತಂತುಮಯವಾದ ಬಲೆಯು. ರೇಷಿಮೆಯಗೂಡು ರೇಷಿಮೆಯ ಹುಳುವನ್ನು ಒಳಗೆಬಂಧಿಸುವಂತೆ ತಮ್ಮಮನೋಮನನವೆಂಬ ಬಲೆಯೇ ಪ್ರಾಣಿಗಳನ್ನು ಬಂಧಿಸಿಬಿಡುವುದು. ಈ ಮನೋಮನನರೂಪವಾದ ಬಂಧನಬಲೆಯು, ಮಂದ ಮಧ್ಯಮಾಧಿಕಾರಿಗಳ ವೈರಾಗ್ಯ, ಶಮ, ದಮ, ಚಿತ್ತನಿರೋಧ, ಮುಂತಾದ ಮನಸ್ಸಿನ ಅಭ್ಯಾಸದಿಂದ ಸಹಕೃತವಾದ ಪ್ರಯತ್ನಪೂರ್ವಕವಾಗಿ ನಿರಂತರವೂ ಆತ್ಮತತ್ತ್ವ ವಿಚಾರವನ್ನು ಮಾಡುವುದರ ದೆಸೆಯಿಂದ ಕತ್ತರಿಸಲ್ಪಡುವುದು. ಉತ್ತಮಾಧಿಕಾರಿಗಳಿಗಾದರೋ ಮೊದಲೇ ಅನುಷ್ಠಿತವಾದ ವಿವೇಕ ವೈರಾಗ್ಯ ವಿಚಾರಾದಿಗಳ ಸಂಸ್ಕಾರದಿಂದ ಆಗಲೇ ಉತ್ಪನ್ನವಾದ ಸ್ವಾತ್ಮ ತತ್ತ್ವ ಜ್ಞಾನದಿಂದ ಮನೋಮನನರೂಪ ತಂತುವು ಕತ್ತರಿಸಲ್ಪಡಲಾಗಿ ಸ್ವಭಾವದಿಂದಲೇ ಅಜ್ಞಾನಭಾವನೆಯೂ ಕತ್ತರಿಸಲ್ಪಟ್ಟಿದೇ ಸರಿ, ಅದು ಪುನಃ ಎಂದಿಗೂ ಪ್ರವರ್ತಿಸುವುದೇಇಲ್ಲ.

೧೫. ಸ್ವಾತ್ಮತತ್ತ್ವ ಜ್ಞಾನದಿಂದ ಅಜ್ಞಾನವು ನಾಶ ಹೊಂದುವುದು. ಅಜ್ಞಾನವೇ ನಾಶಹೊಂದಿಬಿಡಲಾಗಿ, ತನ್ಮೂಲಕವಾದ ಮನಸ್ಸೂ ನಾಶಹೊಂದು ವುದು. ಮನಸ್ಸು ನಾಶ ಹೊಂದಿಬಿಟ್ಟ ಬಳಿಕ, ಈ ರೂಪಾಲೋಕ ಮನಸ್ಕಾರ ಗಳು ಯಾವುವೂ ಇರುವುದಿಲ್ಲ. ಮತ್ತು ಪುನಃ ಅವುಗಳು ಪರಸ್ಪರ ಒಟ್ಟುಗೂಡುವ ಸಂಭವವೇ ಸರ್ವಥಾ ಇಲ್ಲವು.

೧೬. ಈ ಚಿತ್ತವೇ ಸಮಸ್ತ ಇಂದ್ರಿಯಗಳಿಗೂ ಒಳಗೆ ಎಚ್ಚರಗೊಳಿಸಿ ಉತ್ತೇಜನ ಕೊಡತಕ್ಕದು ಆದುಕಾರಣ ಮನೆಯೊಳಗೆ ಸೇರಿಕೊಂಡಿರುವ ಪಿಶಾಚವನ್ನು ಮಣಿಮಂತ್ರಾದಿ ನಾನಾ ಉಪಾಯಗಳಿಂದ ಬಹು ಕಷ್ಟಪಟ್ಟು ಮನೆಯಿಂದ ಹೊರಗೆ ಅಟ್ಟಿಬಿಡುವಂತೆ ಈ ಚಿತ್ತವನ್ನೇ ಬಹು ಪ್ರಯತ್ನ

ಚಿತ್ತ ವಲ್ಗಸಿ ಮಿಥ್ಯೈವ ದೃಷ್ಟೋಽತೋ ಭವತೋ ಮಯಾ ।
ಆದ್ಯಂತಯೋಃ ಸುತುಚ್ಛಂ ತ್ವಂ ವರ್ತಮಾನೇ ವಿನಶ್ಯಸಿ ॥ ೧೭ ॥

ಮುಧಾ ಪಂಚಭಿರಾಕಾರೈಃ ಕಿಮಂತಃ ಪರಿವಲ್ಗಸಿ ।
ಯಸ್ತ್ವಾಂ ಸ್ವಮಿತಿ ಜಾನಾತಿ ತಸ್ಯೈವ ಪರಿವಲ್ಗಸಿ ॥ ೧೮ ॥

ತ್ವದ್ವಲ್ಗನಂ ಮೇ ಕುಮನೋ ನ ಮನಾಗಪಿ ತುಷ್ಟಯೇ ।
ಮಾಯಾ ಮನಃ ಸ್ಪಂದ ಇವ ವ್ಯರ್ಥಂ ವೃತ್ತಿಷು ದಹ್ಯಸೇ ॥ ೧೯ ॥

ಮಾಡಿ ವಿವೇಕ ವೈರಾಗ್ಯಾಭ್ಯಾಸಾದಿಗಳಿಂದ ಮೊದಲು ಕತ್ತರಿಸಿ ಬಿಡಬೇಕಾಗಿರುವುದು.

೧೭. ಎಲೈ ಚಿತ್ತವೇ, ನೀನು ಮಿಥ್ಯೆಯೇ ಆಗಿದ್ದರೂ (ವಂಧ್ಯಾ ಪುತ್ರನಂತೆ ಅತ್ಯಂತ ಅಸತ್ಯವೇ ಆಗಿದ್ದರೂ) ಹೀಗೆ ವಿಶೇಷವಾಗಿ ಕುಣಿದಾಡುತ್ತಿರುವೆ. ನಿನ್ನ ಬಾಧೋಪಾಯವನ್ನು ಈಗ ನಾನು ಚೆನ್ನಾಗಿ ಕಂಡುಕೊಂಡೆನು. ನೀನು ಆದ್ಯಂತಗಳಲ್ಲಿ ಅತ್ಯಂತ ತುಚ್ಛ (ಅಸತ್) ಆಗಿರುವೆ. ಅದು ಕಾರಣ, ವರ್ತಮಾನ ಕಾಲದಲ್ಲಿಯೂ ಕೂಡ ಅಸತ್ ಆಗಿರುವೆ (ನಾಶ ಹೊಂದಿರುವೆ.) ("ಆದಾವಂತೇ ಚ ಯನ್ನಾಸ್ತಿ ವರ್ತಮಾನೇಽಪಿ ತತ್ ತಥಾ" ವಿತಥೈಃ ಸದೃಶಾಸ್ಸಂತಃ ಅವಿತಥಾ ಇವಲಕ್ಷಿತಾಃ ॥ ಮಾಂಡೂಕ್ಯಕಾರಿಕಾ. ವೈತಥ್ಯ ಪ್ರಕರಣ. ೬.)

೧೮. ಎಲೈ ಚಿತ್ತವೇ, ಚಕ್ಷುರಾದಿ ಪಂಚ ಜ್ಞಾನೇಂದ್ರಿಯಗಳ ಮೂಲಕ ಪ್ರಾಪ್ತವಾದ ರೂಪಾದ್ಯಾಕಾರಗಳನ್ನು ಧರಿಸಿಕೊಂಡು ನೀನೇಕೆ ಒಳಗೆ ಹೀಗೆ ವ್ಯರ್ಥವಾಗಿ ಕುಣಿದಾಡುತ್ತಿರುವೆ? ಯಾವನು ನಿನ್ನಲ್ಲಿ ಅಹಂಕಾರ, ಮಮಕಾರ ರೂಪ ಅಭಿಮಾನವನ್ನು ಇಟ್ಟುಕೊಂಡು ಪ್ರಮಾತೃವೆನ್ನಿಸಿ ನಿನ್ನನ್ನು ತನ್ನವನೆಂದು ಭ್ರಾಂತಿಯಿಂದ ತಿಳಿಯುವನೋ ಅಂತಹ ಭ್ರಾಂತನಿಗೇನೆ ನೀನು ಉಪಕರಣವಾಗಿದ್ದುಕೊಂಡು ಹೀಗೆಲ್ಲಾ ಕುಣಿದಾಡುವೆ. (ಅಸಂಗನೂ, ಉದಾಸೀನನೂ, ಚಿದೇಕರಸನೂ ಆದ ನನಗೆ ನಿನ್ನ ಕುಣಿತದಿಂದ ಏನೂ ವಿಕಾರ ವುಂಟಾಗುವುದಿಲ್ಲ)

೧೯. ಎಲೈ ದುಷ್ಟ ಚಿತ್ತವೇ ಐಂದ್ರ ಜಾಲಿಕನು ತನ್ನ ಮಾಯೆಯಿಂದ ನಾನಾ ವಿಷಯ ವೈಚಿತ್ರ್ಯಗಳನ್ನು ತೋರಿಸಿದಾಗ ಅವುಗಳ ನೋಟ

ತಿಷ್ಠ ವಾ ಗಚ್ಛ ವಾ ಚಿತ್ತ ನಾಸಿ ಮೇ ನ ಚ ಜೀವಸಿ ।
ಪ್ರಕೃತ್ಯಾಸಿ ಮೃತಂ ನಿತ್ಯಂ ವಿಚಾರಾತ್ಸಮೃತಂ ಸ್ಮೃತಂ ॥ ೨೦ ॥

ನಿಸ್ತತ್ತ್ವಂ ತ್ವಂ ಜಡಂ ಭ್ರಾಂತಂ ಶಠಂ ನಿತ್ಯಮೃತಾಕೃತೇ ।
ಮೂಢ ಏವ ತ್ವಯಾಜ್ಞೇನ ಬಾಧ್ಯೋ ನ ಪ್ರವಿಚಾರವಾನ್ ॥ ೨೧ ॥

ದಿಂದ ಮೂಢ ಜನರ ಮನಸ್ಸಿನಲ್ಲಿ ಹರ್ಷವಿಷಾದಾಶ್ಚರ್ಯ ಮುಂತಾದ ವಿಕಾರಗಳೆಂಬ ಚಲನವುಂಟಾಗುವುದೇ ಹೊರತು "ಅವುಗಳು ಕೇವಲ ಮಾಯಿಕಗಳು. ವಾಸ್ತವವಲ್ಲ" ಎಂದು ಚೆನ್ನಾಗಿ ತಿಳಿದುಕೊಂಡಿರುವ ವಿವೇಕಿಯಾದ ಮನುಷ್ಯನ ಮನಸ್ಸಿನಲ್ಲಿ ಹರ್ಷ ವಿಷಾದಾದಿ ವಿಕಾರಗಳೊಂದೂ ಉಂಟಾಗುವುದಿಲ್ಲ. ಇದರಂತೆಯೇ ನಿನ್ನ ಮಾಯಿಕವಾದ ಅಸದ್ರೂಪವನ್ನು ಚೆನ್ನಾಗಿ ತಿಳಿದುಕೊಂಡಿರುವ ವಿವೇಕಿಯಾದ ನನಗೆ ನಿನ್ನ ಕುಣಿತದಿಂದ ಸ್ವಲ್ಪವಾದರೂ ಸುಖವಾಗಲಿ, ದುಃಖವಾಗಲಿ ಉಂಟಾಗುವುದಿಲ್ಲ. ನೀನು ಮಾತ್ರ ವ್ಯರ್ಥವಾಗಿ ನಾನಾ ವೃತ್ತಿಗಳಲ್ಲಿ ಸಂತಾಪ ಪಡುತ್ತಿರುವೆ.

೨೦. ಎಲೈ ಚಿತ್ತವೇ, ನೀನು ಬೇಕಾದರೆ ನಿನ್ನ ಇಷ್ಟದಂತೆ ಇರು. ಬೇಡವಾದರೆ ಹೊರಟು ಹೋಗು. ನಿನಗೂ, ನನಗೂ ಯಾವ ಸಂಬಂಧವೂ ಇಲ್ಲ. (ನೀನು ನನ್ನದು ಅಲ್ಲ.) ಮತ್ತು ನೀನು ನನ್ನ ದೃಷ್ಟಿಯಲ್ಲಿ ಬದುಕಿರತಕ್ಕದೂ ಆಗಿಲ್ಲ. ನಿನ್ನ ಸ್ವಭಾವದಿಂದ (ಮಿಥ್ಯಾಭೂತನಾದ ಕಾರಣ) ಸರ್ವದಾ ಮೃತವೇ (ಸತ್ತುಹೋದುದೇ) ಆಗಿದ್ದೀ. ವಿಚಾರ ಮಾಡಿದ ಮೇಲಂತೂ ಸಂಪೂರ್ಣವಾಗಿ ಸರ್ವಥಾ ಸತ್ತುಹೋದುದೆಂದೇ (ಅತ್ಯಂತಾಸತ್) ಸ್ಪಷ್ಟವಾಗಿ ಬಿಟ್ಟಿರುವುದು.

೨೧. ಎಲೈ ನಿತ್ಯ ನಿರ್ಜೀವ ಆಕಾರವುಳ್ಳ ಚಿತ್ತವೇ, ನೀನು ವಸ್ತುತಃ ನಿಸ್ಸಾರವಾದ ಅಸದ್ರೂಪವಾಗಿರುವೆ, ಜಡನಾಗಿರುವೆ, ಭ್ರಾಂತಿಯುತನಾಗಿರುವೆ, ಶಠವಾಗಿರುವೆ. ಅತ್ಯಂತ ಮಹಾ ಮೂಢನಾದ ಮನುಷ್ಯನು ಮಾತ್ರವೇ ಅಜ್ಞನಾದ ನಿನ್ನಿಂದ ಬಾಧಿತನಾಗುವನೇ ಹೊರತು ಚೆನ್ನಾಗಿ ವಿಚಾರಮಾಡಿ ನಿಸ್ಸಂದೇಹವಾಗಿ ತತ್ತ್ವವನ್ನು ಅರಿತಿರುವ ವಿವೇಕಿಯು ಎಂದಿಗೂ ನಿನ್ನ ತೊಂದರೆಗೆ ಸಿಕ್ಕಿ ನರಳುವುದಿಲ್ಲ.

ವಯಮಜ್ಞಾತವಂತಸ್ತ್ವಂ ಮೌರ್ಖ್ಯೇಣಾಶು ಮೃತಂ ಭವತ್ ।
ಮೃತಮಸ್ಮಾಕ ಮದ್ಯಾಸಿ ದೀಪಾನಾಂ ತಿಮಿರಂ ಯಥಾ ॥ ೨೨ ॥

ಶಠೇನ ಭವತಾ ದೀರ್ಘಕಾಲಂ ದೇಹಗೃಹಂ ಮಮ ।
ಉಪರುದ್ಧಮಭೂತ್ಸರ್ವಂ ಸಾಧುಸಂಸರ್ಗವರ್ಜಿತಂ ॥ ೨೩ ॥

ಜಡೇ ಪ್ರೇತಸಮಾಕಾರೇ ಗತೇ ತ್ವಯಿ ಮನಃಶಠೇ ।
ಸರ್ವಸಜ್ಜನಸಂಸೇವ್ಯಮಿದಂ ದೇಹಗೃಹಂ ಮಮ ॥ ೨೪ ॥

ಪೂರ್ವಮೇವಾಪಿ ನಾಸೀಸ್ತ್ವಂ ಸಂಪ್ರತ್ಯೇವ ಶಠಂ ಜಗತ್ ।
ನ ಭವಿಷ್ಯಸಿ ಚೇದಾನೀಂ ವೇತಾಲ ಕಿಂ ನ ಲಜ್ಜಸೇ ॥ ೨೫ ॥

---

೨೨. ಇಷ್ಟು ಕಾಲದವರೆವಿಗೂ, ನೀನು ವಸ್ತುತಃ ಸರ್ವದಾ ನಿರಾತ್ಮ ಸ್ವರೂಪವು (ನಿರ್ಜೀವವು= ಮೃತವು) ಎಂದು ನಾವು ನಮ್ಮ ದಡ್ಡತನದಿಂದ ತಿಳಿದಿರಲಿಲ್ಲ. ಈಗ ನಿನ್ನ ನೈರಾತ್ಮ್ಯವು ನಮಗೆ ಸ್ಪಷ್ಟವಾಗಿ ಗೊತ್ತಾಗಿರುವುದು. ಅದು ಕಾರಣ, ದೀಪಗಳೆದುರಿನಲ್ಲಿ ಕತ್ತಲೆಯು ನಾಶಹೊಂದುವಂತೆ, ಈಗ ಚಿದ್ರೂಪಾತ್ಮರಾದ ನಮ್ಮೆದುರಿಗೆ ನೀನು ಮೃತವಾಗಿರುವೆ.

೨೩. ಎಲೈ ಚಿತ್ತವೇ, ಅತ್ಯಂತ ವಂಚಕ ಸ್ವಭಾವವುಳ್ಳ ನೀನು ಇಷ್ಟು ದೀರ್ಘಕಾಲ ಪರ್ಯಂತವೂ, ನನ್ನ ದೇಹವೆಂಬ ಮನೆಯನ್ನು ಶಮ, ದಮ, ವಿವೇಕ, ವೈರಾಗ್ಯ, ವಿಚಾರ ಮೊದಲಾದ ಸಾಧನಗಳೆಂಬ ಸಮಸ್ತ ಸಾಧುಗಳ ಸಮಾಗಮ ವಿರಹಿತವನ್ನಾಗಿ ಮಾಡಿ ಪೂರ್ವೋಕ್ತ ಸಾಧುಗಳೊಬ್ಬರಿಗೂ ಪ್ರವೇಶಕ್ಕೆ ಕೂಡ ಅವಕಾಶವನ್ನೇ ಕೊಡದೆ ತಡೆದು ಬಿಟ್ಟಿರುವೆ.

೨೪. ಎಲೈ ಮನಸ್ಸೇ, ಶಠವಾಗಿಯೂ ಜಡವಾಗಿಯೂ ಪ್ರೇತ ಸದೃಶವಾದ ಆಕಾರವುಳ್ಳದಾಗಿಯೂ ಇರುವ ನೀನು ನನ್ನ ದೇಹವನ್ನು ಬಿಟ್ಟು ಹೊರಟು ಹೋಗಲಾಗಿ, ಈಗ ಈ ನನ್ನ ದೇಹವೆಂಬ ಮನೆಯು ಶಮದಮಾದಿ ಸಜ್ಜನರಿಗೆ ಬಂದು ಸುಖವಾಗಿ ವಾಸಮಾಡಿಕೊಂಡಿರುವುದಕ್ಕೆ ಯೋಗ್ಯವಾಗಿರುವುದು.

೨೫. ಎಲೈ ಜಗತ್‌ರೂಪ, ಚಿತ್ತಭೇತಾಳವೇ, ಅತ್ಯಂತ ಶಠಸ್ವಭಾವವುಳ್ಳ ನೀನು, ಹಿಂದಿನಕಾಲದಲ್ಲಿಯೂ (ಪೂರ್ವದಲ್ಲಿಯೂ) ಇರಲೇ ಇರಲಿಲ್ಲ. ಈಗಲೂ

ಸಹ ತೃಷ್ಣಾಪಿಶಾಚೀಭಿಃ ಸಹ ಕೋಪಾದಿಗುಹ್ಯಕೈಃ ।
ನಿರ್ಗಚ್ಛ ಚಿತ್ತವೇತಾಲ ಶರೀರಸದನಾನ್ಮಮ ॥ ೨೬ ॥

ದಿಷ್ಟ್ಯಾ ವಿವೇಕಮಾತ್ರೇಣ ನಿರ್ಗತೋ ದೇಹಮಂದಿರಾತ್ ।
ಪ್ರಮತ್ತಚಿತ್ತವೇತಾಲಃ ಕುವೃಕಃ ಕಂದರಾದಿವ ॥ ೨೭ ॥

ಅಹೋ ನು ಚಿತ್ರಂ ಸುಮಹಜ್ಜಡೇನ ಕ್ಷಣಭಂಗಿನಾ ।
ಮನಃ ಶಠೇನ ಸರ್ವೋಽಯಂ ನೀತೋ ವಿವಶತಾಂ ಜನಃ ॥ ೨೮ ॥

ಕೂಡ ಇಲ್ಲವೇ ಇಲ್ಲ. ಇನ್ನು ಮುಂದೆಯೂ ಇರುವುದಿಲ್ಲ. ಹೀಗೆ ನಾನು ನಿನ್ನನ್ನು ಭೂತ ವರ್ತಮಾನ ಭವಿಷ್ಯತ್ಕಾಲಗಳಲ್ಲಿ ಸರ್ವದಾ ನಿಷೇಧಮಾಡುತ್ತಿದ್ದರೂ ಕೂಡ, ಈಗ ಇಲ್ಲಿ ನನ್ನೆದುರಿಗೆ ನಿಲ್ಲುವುದಕ್ಕೆ ನಿನಗೆ ನಾಚಿಕೆಯಿಲ್ಲವೇನು ?

೨೬. ಎಲವೋ ಚಿತ್ತವೆಂಬ ಭೇತಾಳನೇ, ನಾನಾ ವಿಷಯ ತೃಷ್ಣೆಗಳೆಂಬ ಹೆಣ್ಣು ಪಿಶಾಚಿಗಳೊಡನೆಯೂ, ಕಾಮ ಕ್ರೋಧಾದಿಗಳೆಂಬ ಗುಹ್ಯಕರೊಡನೆಯೂ, (ಬೇತಾಳನ ಪರಿವಾರ ಕ್ಷುದ್ರ ದೇವಯೋನಿಗಳು) ಈಕ್ಷಣ ತಡಮಾಡದೆ ನನ್ನ ಶರೀರವೆಂಬ ಮನೆಯನ್ನು ಬಿಟ್ಟು ಹೊರಕ್ಕೆ ಹೊರಟು ಹೋಗು.

೨೭. ಒಂದು ದುಷ್ಟ ತೋಳವು ಬಹುಕಾಲದ ಮೇಲೆ ಪರ್ವತದ ಗುಹೆಯನ್ನು ಬಿಟ್ಟು ಹೊರಟುಹೋದ ಬಳಿಕ, ಆ ಗುಹೆಯು ನಿರ್ಭಯವಾಗಿ ಸಾಧುಗಳಿಗೆ ವಾಸಯೋಗ್ಯವಾಗುವಂತೆ ನನ್ನ ಪೂರ್ವ ಜನ್ಮ ಸುಕೃತ ವಿಶೇಷಗಳ ಪರಿಪಾಕದಿಂದ (ಅದೃಷ್ಟದಿಂದ) ಲಭ್ಯವಾದ ವಿವೇಕವೆಂಬ ಮಂತ್ರ ಪ್ರಭಾವದಿಂದ ಎಷ್ಟೋ ಹಿಂದಿನ ಕಾಲದಿಂದಲೂ ವಾಸಮಾಡಿಕೊಂಡಿದ್ದ ಪ್ರಮತ್ತನಾದ ಚಿತ್ತವೆಂಬ ಬೇತಾಳನು ಈಗ ನನ್ನ ಈ ದೇಹವೆಂಬ ಮನೆಯನ್ನು ಬಿಟ್ಟು ಓಡಿ ಹೋಗಿಬಿಟ್ಟನು. ಅದು ಕಾರಣ, ಅದು ಈಗ ಶಮದಮಾದಿ ಸಾಧನಗಳು ನೆಲೆಸುವುದಕ್ಕೆ ಯೋಗ್ಯವಾಗಿರುವುದು.

೨೮. ಅಹಾ ! ಇದೀಗ ಮಹಾ ಆಶ್ಚರ್ಯವು !! ಈ ಶಠ ಸ್ವಭಾವವುಳ್ಳ ಮನಸ್ಸು ಅತ್ಯಂತ ಜಡ ಪ್ರಕೃತಿಯು ಮತ್ತು ಒಂದು ಕ್ಷಣದೊಳಗಾಗಿ ಧ್ವಂಸವನ್ನು ಹೊಂದುವ ನಶ್ವರವು. ಆದರೂ ಕೂಡ ಇದು ಸಮಸ್ತ ಜನಗಳನ್ನೂ ತನ್ನ ಸ್ವಾಧೀನಪಡಿಸಿಕೊಂಡುಬಿಟ್ಟು ಪರವಶರನ್ನಾಗಿ ಮಾಡಿರುವುದು !!!

ಕಸ್ತೇ ಪರಾಕ್ರಮಃ ಕಿಂ ತೇ ಬಲಂ ಕಸ್ತೇ ಸಮಾಶ್ರಯಃ ।
ಯದಿ ವಲ್ಗಸಿ ಮಾಮೇಕಂ ಜನಾನಾಂ ಬಾಧಸೇ ಮೃತಂ ॥ ೨೯ ॥

ಸರ್ವಥೈವಾಸಿ ನ ಮಯಾ ದೀನ ಚಿತ್ತಕ ಮಾರ್ಯಸೇ ।
ಮೃತಮಿತ್ಯವಬುದ್ಧಂ ತ್ವಮದ್ಯ ಕೇವಲಮಜ್ಞಹೇ ॥ ೩೦ ॥

ಏತಾವಂತಮಹಂ ಕಾಲಂ ತ್ವಾಂ ಜ್ಞಾತ್ವಾ ಜೀವದಾಸ್ಥಿತಿ ।
ಶ್ಲಿಷ್ಟಃ ಪ್ರಭೂತಸಂಗಾಸು ಚಿರಂ ಸಂಸೃತಿರಾತ್ರಿಷು ॥ ೩೧ ॥

---

೨೯. ಎಲೈ ಚಿತ್ತವೇ, ಮೃತಸ್ವರೂಪಿಯಾದ ನೀನು, ಈ ಪ್ರಾಪಂಚಿಕ ಜನಗಳೊಳಗೆ, ಮೃತಪ್ರಾಯನಾದ ಅಂದರೆ ಮರಣಧರ್ಮಿಗಳಾದ ದೇಹಾದಿಗಳಲ್ಲಿ ಆತ್ಮಬುದ್ಧಿಯನ್ನಿಟ್ಟಿರುವ ಕಾರಣ, ತಾನಾಗಿಯೇ ಮೃತನಾಗಿರುವ ಅಜ್ಞನನ್ನು ಮಾತ್ರವೇ ಹಿಂಸಿಸಲು ಶಕ್ತನಾಗಿದ್ದೀ; ಇಷ್ಟೇ ಅಲ್ಲವೆ ನಿನ್ನ ಪರಾಕ್ರಮ ? ಈ ನಿನ್ನ ಪರಾಕ್ರಮವು ಯಾವುದು ? ಅಥವಾ ನಿನ್ನ ಆಶ್ರಯವೆಂತಹುದು ? ಅದ್ವಿತೀಯಾತ್ಮ ಭೂತನಾದ ನನ್ನ ಎದುರಿನಲ್ಲಿ ಬಂದು ನಿಂತು ಕುಣಿದಾಡುವುದಕ್ಕೆ ನಿನಗೆ ಶಕ್ತಿ ಯಿರುವುದಾದರೆ, ಆಗ ನೀನು ಪರಾಕ್ರಮಶಾಲಿಯೆಂದು ಹೇಳಬಹುದು.

೩೦. ಎಲೈ ಅತ್ಯಂತ ಅಜ್ಞನಾದ (ಜ್ಞಾನಶೂನ್ಯ) ಮತ್ತು ಅತಿ ದೀನವಾದ ಹಾಳು ಚಿತ್ತವೇ, ಈಗ ನಾನು ನಿನ್ನನ್ನು ಕೊಲ್ಲಲು ಸರ್ವಥಾ ಮನಸ್ಸು ಮಾಡುವುದೂ ಇಲ್ಲ. ಏಕೆಂದರೆ ಸರ್ವ ವಿಧದಲ್ಲಿಯೂ ಕೂಡ ಸರ್ವದಾ ನೀನು ಮೃತವಾಗಿರುವೆ (ಯಾವಾಗಲೂ ನೀನು ಬದುಕಿರತಕ್ಕದ್ದು ಅಲ್ಲ) ಎಂದು ನಾನು ಮೊದಲೇ ತಿಳಿದುಕೊಂಡಿರುವೆನು. ಮೊದಲಿಂದಲೂ ಸತ್ತಿರುವ ನಿನ್ನನ್ನು ಈಗ ಪುನಃ ಸಾಯಿಸುವ ಪ್ರಯತ್ನವು ಏಕೆ ?

೩೧. ಬದುಕಿರುವ ಪ್ರಾಣಿಗೆ ಇರುವಂತೆಯೇ ನಿನಗೂ ಸ್ವರೂಪವಿರುವುದೆಂದೂ, ನೀನು ಮೃತವಲ್ಲವೆಂದೂ, ನಾನು ಇದುವರೆವಿಗೂ ತಪ್ಪಾಗಿ ತಿಳಿದುಕೊಂಡು ಭ್ರಾಂತನಾಗಿ ನಿನ್ನೊಡನೆ ತಾದಾತ್ಮ್ಯ ಸಂಬಂಧವನ್ನು ಪಡೆದು ನಿನ್ನನ್ನು ಎಡಬಿಡದೆ ಸದಾ ಕೂಡಿಕೊಂಡು ಜೊತೆಯಲ್ಲಿರುತ್ತಾ ನಾನಾ ದುಸ್ಸಂಗಯುಕ್ತಗಳಾದ ಜನನ ಮರಣಾದಿ ಸಾಂಸಾರಿಕ ಧರ್ಮಗಳೆಂಬ ಕಗ್ಗತ್ತಲೆಯ ರಾತ್ರಿಗಳಲ್ಲಿ ಬಹು ದೀರ್ಘಕಾಲ ತೊಳಲುತ್ತಾ ನರಳುತಲಿದ್ದೆನು.

ಚಿತ್ತಂ ಮೃತಂ ಹಿ ನಾಸ್ತ್ಯೇವಮಿತ್ಯದ್ಯಾಧಿಗತಂ ಮಯಾ ।
ತೇನ ತ್ವದಾಶಾಂ ಸಂತ್ಯಜ್ಯ ತಿಷ್ಠಾಮ್ಯಾತ್ಮನಿ ಕೇವಲಂ ॥ ೩೨ ॥

ದಿಷ್ಟ್ಯಾ ಚಿತ್ತಂ ಮೃತಮಿತಿ ಜ್ಞಾತಮದ್ಯ ಮಯಾ ಸ್ವಯಂ ।
ನ ಶಠೇನ ಸಮಂ ನೇಯಂ ಸಮಗ್ರಂ ಜೀವಿತಂ ನಿಜಂ ॥ ೩೩ ॥

ಉತ್ಸಾರ್ಯ ದೇಹಸದನಾನ್ಮನಃ ಶಠಮಹಂ ಕ್ಷಣಾತ್ ।
ಅಹಂ ಸ್ವಸ್ಥಃ ಸ್ಥಿತೋಽಸ್ಮ್ಯಂತರ್ವೇತಾಲಪರಿವರ್ಜಿತಃ ॥ ೩೪ ॥

---

೩೨. "ಚಿತ್ತವೆಂಬುದು ವಾಸ್ತವವಾಗಿ ಯಾವಾಗಲೂ ಮೃತವಾದುದೇ. ಇದು ಯಾವ ಕಾಲದಲ್ಲೂ ವಸ್ತುತಃ ಇಲ್ಲವೇ ಇಲ್ಲ. ಎಂದು ಈಗ ನಾನು ಯಥಾವಸ್ಥಿತವಾಗಿ ನಿಶ್ಚಯವಾಗಿ ತಿಳಿದುಕೊಂಡಿರುವೆನು. ಅದು ಕಾರಣ ಎಲೈ ಚಿತ್ತವೇ, ನಿನ್ನ ಮೇಲಣ ಆಶೆಯನ್ನು ಸಂಪೂರ್ಣವಾಗಿ ಪರಿತ್ಯಜಿಸಿ, ಅದ್ವಿತೀಯನಾದ ಸಚ್ಚಿದಾನಂದ ರೂಪ ಸ್ವಾತ್ಮ ಸ್ವರೂಪದಲ್ಲಿ ಪರಿನಿಷ್ಠಿತನಾಗಿರುವೆನು.

೩೩. ಆಹಾ! ನನ್ನ ಅದೃಷ್ಟ ವಿಶೇಷದಿಂದ "ಈ ಚಿತ್ತವು ಸರ್ವದಾ ಮೃತವೇ" ಎಂಬುದು ಈಗ ತಾನಾಗಿಯೇ ನನಗೆ ಸ್ಪಷ್ಟವಾಗಿ ನಿಶ್ಚಿತವಾಯಿತು. ಇನ್ನು ಈ ಶಠ ಸ್ವಭಾವವುಳ್ಳ ಚಿತ್ತದೊಡನೆ ಸಮಗ್ರವಾಗಿ ನನ್ನ ಆಯುಷ್ಯವನ್ನು ಕಳೆಯಬೇಕಾದ ಸಂಭವವು ಇಲ್ಲವಾಯಿತು.

೩೪. ಶಠ ಪ್ರಕೃತಿಗಳಾದ ಕಾಮಕ್ರೋಧಾದ್ಯರಿಷಡ್ವರ್ಗಗಳ ಮಹಾ ಉತ್ಸವ ಭೂತವಾದ ಮನಸ್ಸನ್ನು ಈಗ ಒಂದು ಕ್ಷಣದೊಳಗಾಗಿ ನನ್ನ ದೇಹವೆಂಬ ಮನೆಯಿಂದ ಬಿಟ್ಟು ತೊಲಗಿಸಿ, ನಾನು ಈಗ ಮನಸ್ಸೆಂಬ ಭೇತಾಳನ ಭಯದಿಂದ ತಪ್ಪಿಸಿಕೊಂಡವನಾಗಿ ನನ್ನ ಮನೆಯೊಳಗೆ ಸ್ವಸ್ಥನಾಗಿರುವೆನು.

ಚಿತ್ತವೇತಾಲಲಬ್ಧೇನ ಚಿರಂ ಕಾಲಂ ಮಯಾತ್ಮನಾ ।
ಕೃತಾ ವಿಕಾರಾ ವಿವಿಧಾಃ ಸ್ವಯಂ ಸ್ಮೃತ್ವಾ ಹಸಾಮ್ಯಹಂ ॥ ೩೫ ॥

ಚಿರಾನ್ನಿಪಾತಿತೋ ದಿಷ್ಟ್ಯಾ ವಿಚಾರಾಸಿಪರಾರ್ದಿತಃ ।
ಹೃದ್ಗೇಹಾಚ್ಚಿತ್ತವೇತಾಲಸ್ತಾಲೋತ್ತಾಲಸಮುನ್ನತಿಃ ॥ ೩೬ ॥

ಪ್ರಶಾಂತೇ ಚಿತ್ತವೇತಾಲೇ ಪವಿತ್ರಾಂ ಪದವೀಂ ಗತೇ ।
ದಿಷ್ಟ್ಯಾ ಶರೀರನಗರೇ ಸುಖಂ ತಿಷ್ಠಾಮಿ ಕೇವಲಂ ॥ ೩೭ ॥

---

೩೫. ಚಿತ್ತವೆಂಬ ಬೇತಾಳನಿಂದ ವಂಚಿತನಾಗಿ ಅದರ ಆತ್ಮವಾಗಿದ್ದು ಕೊಂಡು ಪೂರ್ವ ಕಾಲದಲ್ಲಿ ಬಹುಕಾಲ ಪರ್ಯಂತವೂ ನಾನಾವಿಧ ದುರ್ವಿಕಾರ ಗಳಿಂದ ದುರ್ವ್ಯಾಪಾರಗಳನ್ನು ಮಾಡಿದೆನು. ಈಗ ಸ್ವಯಂ ಪರಮಾರ್ಥತಃ ಆತ್ಮ ರೂಪನಾಗಿರುವ ನಾನು ಆ ದುರ್ವಿಕಾರಗಳನ್ನೆಲ್ಲ ಸ್ಮರಿಸಿಕೊಂಡರೆ ನನಗೇ ನಗು ಬರುವುದು.

೩೬. ತಾಳ ವೃಕ್ಷಕ್ಕಿಂತಲೂ ಹೆಚ್ಚು ಅತ್ಯುನ್ನತವಾಗಿ ಬೆಳೆದಿರುವ ಬೃಹ ದಾಕಾರವುಳ್ಳ ಈ ಚಿತ್ತವೆಂಬ ಬೇತಾಳನನ್ನು ಈಗ ನಾನು ನನ್ನ ಹೃದಯವೆಂಬ ಮನೆಯಿಂದ ಹೊರಕ್ಕೆ ಅಟ್ಟಿಬಿಟ್ಟು ಸ್ವಾತ್ಮತತ್ತ್ವ ವಿಚಾರವೆಂಬ ಕತ್ತಿಯಿಂದ ಚೆನ್ನಾಗಿ ತಿವಿದು ಹಿಂಸಿಸಿ ಕೆಳಕ್ಕೆ ಕೆಡವಿಕೊಂಡು ಕೊಂದುಬಿಟ್ಟೆನು. ಇದು ನನ್ನ ಪುಣ್ಯ ವಿಶೇಷವೇ ಸರಿ.

೩೭. ಚಿತ್ತವೆಂಬ ಬೇತಾಳನು ನಾಶಹೊಂದಿದ ಕಾರಣ (ಅದೃಶ್ಯನಾಗಿಬಿಟ್ಟ ಕಾರಣ) ಕಾಮ ಕ್ರೋಧಾದಿ ಮಲರಾಹಿತ್ಯದಿಂದ ಅತಿ ಪವಿತ್ರಗಳಾದ ಇಂದ್ರಿಯ ದ್ವಾರಗಳೆಂಬ ರಾಜ ವೀಧಿಗಳಿಂದ ರಮಣೀಯವಾದ ಶರೀರವೆಂಬ ಮಹಾ ನಗರದಲ್ಲಿ ನಾನು ಈಗ ನನ್ನ ಅದೃಷ್ಟ ವಶದಿಂದ ಕೇವಲ ಸುಖದಿಂದ ಸ್ವಸ್ಥ ನಾಗಿರುವೆನು.

ಮೃತಂ ಮನೋ ಮೃತಾ ಚಿಂತಾ ಮೃತೋಽಹಂಕಾರರಾಕ್ಷಸಃ |
ವಿಚಾರಮಂತ್ರೇಣ ಸಮಃ ಸ್ವಸ್ಥಸ್ತಿಷ್ಠಾಮಿ ಕೇವಲಂ || ೩೮ ||

ಕಿಂ ಮನೋ ಮೇ ಮಮಾಶಾ ಕಾ ಕೋ ಮೇಽಹಂಕಾರಕೋ ಭವೇತ್ |
ದಿಷ್ಟ್ಯಾ ವ್ಯರ್ಥಂ ಕಲತ್ರಂ ಮೇ ನಷ್ಟಮೇತದಶೇಷತಃ || ೩೯ ||

ಏಕಸ್ಮೈ ಕೃತಕೃತ್ಯಾಯ ನಿತ್ಯಾಯ ವಿಮಲಾತ್ಮನೇ |
ನಿರ್ವಿಕಲ್ಪ ಚಿದಾಖ್ಯಾಯ ಮಹ್ಯಮೇವ ನಮೋನಮಃ || ೪೦ ||

---

೩೮. ಈಗ ತತ್ತ್ವ ವಿಚಾರವೆಂಬ ಮಂತ್ರದ ಶಕ್ತಿಯಿಂದ ನನ್ನ ಮನಸ್ಸು ಮೃತವಾಯಿತು. ಚಿಂತೆಯೂ ಮೃತವಾಯಿತು. ಮತ್ತು ಅಹಂಕಾರವೆಂಬ ರಾಕ್ಷಸನೂ ಮೃತವಾದನು. ಅದು ಕಾರಣ, ನಾನು ಸರ್ವತ್ರ ಸಮನಾಗಿ ವೈಷಮ್ಯಶೂನ್ಯನಾಗಿ ಕೇವಲ ಸ್ವಸ್ಥನಾಗಿರುವೆನು.

೩೯. ಈಗ ನನಗೆ ಮನಸ್ಸೆಂಬುದು ಯಾವುದು? ಆಶೆಯಾವುದು? ಈ ತುಚ್ಛವಾದ ಅಹಂಕಾರ ತಾನೇ ಯಾವುದಿರುವುದು? ನನಗೆ ಕಲತ್ರವೂ (ಹೆಂಡತಿ ಮೊದಲಾದ ಪೋಷ್ಯ ವರ್ಗ) ವ್ಯರ್ಥವೇ ಆಗಿರುವುದು. ನನ್ನ ಅನೇಕ ಜನ್ಮಾರ್ಜಿತವಾದ ಸುಕೃತ ಪರಿಪಾಕದಿಂದ ಇವೆಲ್ಲವೂ ನಿಶ್ಶೇಷವಾಗಿ ನಾಶ ಹೊಂದಿರುವುದು.

೪೦. ಅದ್ವಿತೀಯನಾಗಿಯೂ, ಕೃತಕೃತ್ಯನಾಗಿಯೂ, ನಿತ್ಯನಾಗಿಯೂ, ನಿಷ್ಕಳಂಕ (ನಿರ್ಮಲ) ಸ್ವರೂಪನಾಗಿಯೂ, ನಿರ್ವಿಕಲ್ಪನಾಗಿಯೂ, ಚಿದ್ರೂಪನಾಗಿಯೂ ಇರುವ "ನಾನು" ವಿಗೇ ಅನಂತ ನಮಸ್ಕಾರಗಳು.

ನ ಶೋಕೋಽಸ್ತಿ ನ ಮೋಹೋಽಸ್ತಿ ನ ಚೈವಾಹ ಮಹಂ ಸ್ವಯಂ ।
ನಚ ನಾಹಂ ನಚಾನ್ಯೋಽಹಂ ಮಹ್ಯಮೇವ ನಮೋನಮಃ ॥ ೪೧ ॥

ನ ಮಮಾಶಾ ನ ಕರ್ಮಾಣಿ ನ ಸಂಸಾರೋ ನ ಕರ್ತೃತಾ ।
ನ ಭೋಕ್ತೃತಾ ನ ದೇಹೋ ಮೇ ಮಹ್ಯಮೇವ ನಮೋನಮಃ ॥ ೪೨ ॥

ನಾಹಮಾತ್ಮಾ ನವಾ ಕೋಽನ್ಯೋ ನಾಹಮಸ್ಮಿ ನ ಚೇತರಃ ।
ಸರ್ವಮೇವಾಹ ಮೇತಸ್ಮೈ ಮಹ್ಯಮೇವ ನಮೋನಮಃ ॥ ೪೩ ॥

ಅಹಮಾದಿರಹಂ ಧಾತಾ ಚಿದಹಂ ಭುವನಾನ್ಯಹಂ ।
ಮಮ ನಾಸ್ತಿ ವ್ಯವಚ್ಛೇದೋ ಮಹ್ಯಮೇವ ನಮೋನಮಃ ॥ ೪೪ ॥

---

೪೧. ನನಗೆ ಈಗ ಶೋಕವೂ ಇಲ್ಲ. ಮೋಹವೂ ಇಲ್ಲ. ಮತ್ತು ನಾನು ಸ್ವತಃ ಅಹಂ ಎಂಬ ಅಭಿಮಾನ ಪ್ರಧಾನವಾದ ಜಡಾಂಶವೂ ಅಲ್ಲವು. ಅಹಂ ಪ್ರತ್ಯಯಗೋಚರನಾದ ಚಿದಾತ್ಮನಲ್ಲವೆಂಬುದೂ ಅಲ್ಲವೇ ಅಲ್ಲ. (ಅಂದರೆ ಚಿದಾತ್ಮನೇ ಆಗಿರುವೆನು.) ಮತ್ತು ನಾನು ಚಿದಾತ್ಮನಿಗಿಂತ ಅನ್ಯನೂ ಅಲ್ಲವೇ ಅಲ್ಲ. ಇಂತಹ "ನಾನು" ವಿಗೇ ಅನಂತ ನಮಸ್ಕಾರಗಳು.

೪೨. ನನಗೆ ಆಶೆಯು ಇಲ್ಲ. ಕರ್ಮಗಳೂ ಇಲ್ಲ. ಸಂಸಾರವೂ ಇಲ್ಲ. ಕರ್ತೃತ್ವವೂ ಇಲ್ಲ. ಭೋಕ್ತೃತ್ವವೂ ಇಲ್ಲ. ದೇಹವೂ ಇಲ್ಲ. ಇಂತಹ "ನಾನು" ವಿಗೇ ಅನೇಕ ನಮಸ್ಕಾರಗಳು.

೪೩. ನಾನು ಆತ್ಮಶಬ್ದ ಪ್ರತ್ಯಯ ವಿಷಯನು ಅಲ್ಲ. ನಾನು ಅನಾತ್ಮನೂ ಅಲ್ಲ. ಅಹಂ ಶಬ್ದ ವಾಚ್ಯನೂ ಅಲ್ಲ. ತದ್ಭಿನ್ನನೂ ಅಲ್ಲ. ತತ್ತ್ವ ದೃಷ್ಟಿಯಿಂದ ನಾನು ಯಾವುದಾಗಿರುವೆನೋ, ಅದು ನನಗಿಂತಲೂ ಬೇರೆ ಯಾವುದೂ ಅಲ್ಲ. ಎಲ್ಲವೂ ನಾನೇ ಆಗಿರುವೆನು. "ನಾನು" ವಿಗೇ ಅನೇಕ ನಮಸ್ಕಾರಗಳು.

೪೪. ನಾನು ಸಕಲ ಭುವನಗಳಿಗೂ ಆದಿಯಾದ (ಕಾರಣವು) ಸಮಸ್ತ ಭುವನಗಳನ್ನು ಧರಿಸಿರತಕ್ಕ (ಧಾತೃವೂ) ನಾನೇ. ಚಿದ್ರೂಪನೂ ನಾನೇ. ಈ ಸಕಲ ಭುವನಗಳೂ ನಾನೇ. ನನಗೆ ದೇಶ, ಕಾಲ, ವಸ್ತುಗಳಿಂದ ತ್ರಿವಿಧವಾದ ಪರಿಚ್ಛೇದವು ಸರ್ವಥಾ ಸುತರಾಂ ಇಲ್ಲವೇ ಇಲ್ಲ. ಇಂತಹ "ನಾನು" ವಿಗೇ ನಮಸ್ಕಾರಗಳು.

ನಿರ್ವಿಕಾರಾಯ ನಿತ್ಯಾಯ ನಿರಂಶಾಯ ಮಹಾತ್ಮನೇ ।
ಸರ್ವಸ್ಮೈ ಸರ್ವ ಕಾಲಾಯ ಮಹ್ಯಮೇವ ನಮೋನಮಃ ॥ ೪೫ ॥

ನೀರೂಪಾಯ ನಿರಾಖ್ಯಾಯ ಪ್ರಕಾಶಾಯ ಮಹಾತ್ಮನೇ ।
ಸ್ವಯಮಾತ್ಮೈಕ ಸಂಸ್ಥಾಯ ಮಹ್ಯಮೇವ ನಮೋನಮಃ ॥ ೪೬ ॥

ಸಮಾಂ ಸರ್ವಗತಾಂ ಸೂಕ್ಷ್ಮಾಂ ಜಗದೇಕ ಪ್ರಕಾಶಿನೀಂ ।
ಸತ್ತಾಮುಪಗತೋಽಸ್ಮ್ಯಂತರ್ಮಹ್ಯಮೇವ ನಮೋನಮಃ ॥ ೪೭ ॥

ಸಾದ್ರ್ಯಬ್ಧ್ಯುರ್ವೀ ನದೀ ಸೇಯಂ ನಾಹಮೇವಾಹಮೇವ ವಾ ।
ಜಗತ್ಸರ್ವಂ ಪದಾರ್ಥಾಢ್ಯಂ ಮಹ್ಯಮೇವ ನಮೋನಮಃ ॥ ೪೮ ॥

---

೪೫. ನಿರ್ವಿಕಾರನೂ, ನಿತ್ಯನೂ, ನಿರವಯವನೂ (ನಿರಂಶ) ಸರ್ವವೂ, ಸರ್ವರೂಪನೂ, ಸನಾತನನೂ, ಮಹಾತ್ಮನೂ ಆಗಿರುವ "ನಾನು" ವಿಗೇ ಅನಂತ ವಂದನೆಗಳು.

೪೬. ನಿರಾಕಾರನೂ, ರೂಪರಹಿತನೂ, ನಾಮರಹಿತನೂ, ಪ್ರಕಾಶ ರೂಪನೂ, ಮಹಾತ್ಮನೂ, ಸ್ವಯಂ ಸ್ವಾತ್ಮ ರೂಪೈಕ ನಿಷ್ಠನೂ ಆಗಿರುವ "ನಾನು" ವಿಗೇ ವಂದನೆಗಳು,

೪೭. ನಾನು ಈಗ ಸಮವಾಗಿಯೂ, ಸರ್ವಗತವಾಗಿಯೂ, ಸೂಕ್ಷ್ಮ ವಾಗಿಯೂ ಜಗತ್ತುಗಳಿಗೆಲ್ಲಾ ಮುಖ್ಯ ಪ್ರಕಾಶಕವಾಗಿಯೂ ಇರುವ ಸದ್ರೂಪ ವನ್ನು ಪಡೆದು ದೇಹದೊಳಗೆ ಸ್ವಸ್ಥನಾಗಿರುವೆನು. ಇಂತಹ "ನಾನು" ವಿಗೇ ವಂದನೆಗಳು.

೪೮. ಪರ್ವತಗಳಿಂದಲೂ, ಸಮುದ್ರಗಳಿಂದಲೂ, ಭೂಮಿಯಿಂದಲೂ, ನದಿಗಳಿಂದಲೂ ಕೂಡಿಕೊಂಡು ಸುಪ್ರಸಿದ್ಧವಾಗಿರುವ ವರ್ತಮಾನವಾದ ದೃಶ್ಯ ಸಮೃದ್ಧಿಯು ನಾನು ಅಲ್ಲ. ಹೀಗೆಯೇ ಭೂತ ಭವಿಷ್ಯತ್ ಕಾಲಿಕಗಳಾದ ಸಕಲ ಪದಾರ್ಥಗಳಿಂದ ಪರಿಪೂರ್ಣವಾದ ಜಗತ್ತೆಲ್ಲವೂ ಕೂಡ ನಾನಲ್ಲ. ಅಥವಾ ನಾನೇ ಆಗಿರುವೆನು. ಇಂತಹ "ನಾನು" ವಿಗೇ ಅನಂತಾಪರಿಮಿತ ವಂದನೆಗಳು.

ವ್ಯಪಗತಮನನಂ ಸಮಾಭಿರಾಮಂ ।
ಪ್ರಕಟಿತ ವಿಶ್ವಮ ವಿಶ್ವಮ ಪ್ಯನಂತಂ ।
ಸ್ವಯಮಜಮಜರಂ ಗುಣಾದತೀತಂ ।
ವಪುರಹಮಚ್ಯುತಮೀಶ್ವರಂ ನಮಾಮಿ ॥ ೪೯ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷೂಪಶಮಪ್ರಕರಣೇ "ದೃಶ್ಯ ದರ್ಶನ ಸಂಬಂಧೋ" ನಾಮ ಅಶೀತಿತಮಃ ಸರ್ಗಃ

---

೪೯. ಸಕಲ ಮನೋ ವಿಕಲ್ಪಗಳನ್ನು ಕಳೆದುಕೊಂಡದ್ದಾಗಿಯೂ, ಅದು ಕಾರಣವೇ ವೈಷಮ್ಯ ಶೂನ್ಯವಾಗಿ ಸರ್ವ ಸಮವಾಗಿಯೂ, ಸುಂದರವಾಗಿಯೂ ನಿಷ್ಪ್ರಪಂಚವಾದುದಾದರೂ ವಿಶ್ವವನ್ನು ಪ್ರಕಟಪಡಿಸತಕ್ಕುದಾಗಿಯೂ, ಅನಂತ ವಾಗಿಯೂ, ಸ್ವಯಂಭುವಾಗಿಯೂ, ಜನನ ಜರಾದಿ ವಿಕಾರಗಳಿಂದ ರಹಿತ ವಾಗಿಯೂ, ಗುಣಾತೀತವಾಗಿಯೂ, ಅಚ್ಯುತವಾಗಿಯೂ (ಸ್ವರೂಪದಿಂದ ತಪ್ಪದೆ ಇರುವುದಾಗಿಯೂ) ಅವಿದ್ಯೆಯನ್ನೂ, ಅವಿದ್ಯಾ ಕಾರ್ಯಗಳನ್ನೂ, ಧ್ವಂಸಮಾಡುವ ವಿಷಯದಲ್ಲಿ ಸಮರ್ಥವಾಗಿಯೂ (ಈಶ್ವರಂ) ಇರುವ ಸ್ವರೂಪವನ್ನು (ನನ್ನ ರೂಪವನ್ನು) ನಾನೇ ನಮಸ್ಕರಿಸುವೆನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ದೃಶ್ಯದರ್ಶನ ಸಂಬಂಧ" ವೆಂಬ ಎಂಭತ್ತನೆಯ ಸರ್ಗವು

ಏಕಾಶೀತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚಃ—

ಏವಂ ವಿಚಾರ್ಯ ಬುಧ್ವಾಂತಃ ಪುನರಿತ್ಥಂ ವಿಚಾರ್ಯತೇ ।
ತತ್ವವಿದ್ಭಿರ್ಮಹಾಬಾಹೋ ಜ್ಞೇಯ ಆತ್ಮಾ ಮಹಾತ್ಮಭಿಃ ॥ ೧ ॥

ಆತ್ಮೈವೇದಂ ಜಗದಿತಿ ಸತ್ಯಂ ಚಿತ್ತೇನ ಮಾರ್ಜಿತಂ ।
ಉತ್ಥಿತಂ ಸ್ಯಾತ್ಕತಶ್ಚಿತ್ತಮಹೋ ಚಿತ್ತಮವಸ್ತು ಯತ್ ॥ ೨ ॥

ಎಂಭತ್ತೊಂದನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು :—

೧. ಅಯ್ಯ ಮಹಾ ಬಾಹುವಾದ ರಾಮ, "ಆತ್ಮನನ್ನು ಅತ್ಯವಶ್ಯವಾಗಿ ತಿಳಿಯಲೇಬೇಕು" ಎಂಬುದಾಗಿ ವಿಚಾರಪರರಾಗಿ ತತ್ತ್ವಬುಭುತ್ಸುಗಳಾದ ಮಹಾತ್ಮರು ನಿನಗೆ ನಾನು ಪೂರ್ವ ಸರ್ಗದಲ್ಲಿ ಇದುವರೆವಿಗೆ ಉಪದೇಶ ಮಾಡಿದ ರೀತಿಯಲ್ಲಿ ಚಿತ್ತದ ಸ್ವರೂಪವನ್ನು ವಿಚಾರ ಮಾಡಿ ತಿಳಿದುಕೊಂಡು ಪುನಃ ಈಗ ನಾನು ಮುಂದೆ ಈ ಸರ್ಗದಲ್ಲಿ ಹೇಳುವ ಪ್ರಕಾರವಾಗಿ ತಮ್ಮೊಳಗೇ ಚಿತ್ತವನ್ನು ಕುರಿತು ವಿಚಾರ ಮಾಡಬೇಕಾಗಿರುವುದು.

೨. "ಈ ದೃಶ್ಯವಾದ ಜಗತ್ತೆಲ್ಲವೂ ಆತ್ಮವೇ" ಎಂಬ ಯಥಾರ್ಥವಾದ ಪಾರಮಾರ್ಥಿಕ ಜ್ಞಾನದಿಂದ ಯಾವ ಚಿತ್ತವು ಈ ದೃಶ್ಯ ಅನಾತ್ಮ ಜಗತ್ತನ್ನು ಕೇವಲ ಮಿಥ್ಯಾಭೂತವಾದ ಅಸತ್ ಎಂದು ದೃಢವಾಗಿ ತಿಳಿದು ತೊಡೆದು ಹಾಕಿರುವುದೋ ಆ ಚಿತ್ತವೂ ಅಸತ್ತಾದ ಜಗತ್ತಿನೊಳಗೇ ಒಂದಾಗಿ ಸೇರಿಕೊಂಡಿರುವ ಕಾರಣ, ತಾನೂ ಕೂಡ ಅಸತ್ತೇ ಆಗಿಬಿಟ್ಟಿರುವುದು. ಹೀಗೆ ಅತ್ಯಂತಾಸತ್ ಆಗಿದ್ದರೂ ಕೂಡ ಈ ಚಿತ್ತವು ಸತ್ಯ ವಸ್ತುವಿನಂತೆ ಈಗ ಯಾವ ಕಾರಣದ ದೆಸೆಯಿಂದ ಉದಯಿಸಿರಬಹುದು ? ಅಹಾ ! ಇದೆಂತಹ ಆಶ್ಚರ್ಯ !!!

ಅವಿದ್ಯತ್ವಾದ ಚಿತ್ತತ್ವಾನ್ಮಾಯಾತ್ವಾಚ್ಚಾಸದೇವ ಹಿ ।
ಧ್ರುವಂ ನಾಸ್ತ್ಯೇವ ವಾ ಚಿತ್ತಂ ಭ್ರಮಾದನ್ಯತ್ ಖವೃಕ್ಷವತ್ ॥ ೩ ॥

ಸಿದ್ಧಃ ಸ್ಥಾಣುಪರಿಸ್ಪಂದೋ ನೌಗತಸ್ಯ ಯಥಾ ಶಿಶೋಃ ।
ಅಬುದ್ಧಸ್ಯ ನ ಬುದ್ಧಸ್ಯ ತಥಾ ಚಿತ್ತಮಸನ್ಮಯಂ ॥ ೪ ॥

ಮೌರ್ಖ್ಯಮೋಹಭ್ರಮೇ ಶಾಂತೇ ಚಿತ್ತಂ ನೋಪಲಭಾಮಹೇ ।
ಚಕ್ರಾರೋಹಭ್ರಮಸ್ಯಾಂತೇ ಪರ್ವತಸ್ಪಂದನಂ ಯಥಾ ॥ ೫ ॥

---

೩. ಕೇವಲ ಜಡವಾಗಿ ಅವಿದ್ಯಾಮಯವಾಗಿರುವುದರಿಂದಲೂ, ಇದಕ್ಕೆ ಬೇರೊಂದು ಚಿತ್ತವಿಲ್ಲದಿರುವುದರಿಂದಲೂ. ಚೈತನ್ಯಾಂಶ ರಹಿತ ಮಾಯಾ ಕಾರ್ಯವಾಗಿರುವುದರಿಂದಲೂ ಕೂಡ ಈ ಚಿತ್ತವೆಂಬುದು ನಿಶ್ಚಯವಾಗಿಯೂ, ಸರ್ವ ಕಾಲಗಳಲ್ಲಿಯೂ ಇಲ್ಲವೇ ಇಲ್ಲ. ಅದು ಕಾರಣ ಅದು ಅತ್ಯಂತ ಅಸತ್ ಆದುದೇ ಸರಿ. ಅಥವಾ ಆಕಾಶದಲ್ಲಿರುವ ಮರದಂತೆ ಚಿತ್ತವು ಭ್ರಾಂತಿಯಿಂದ ಮಾತ್ರವೇ ಬೇರೆ ವಸ್ತುವಿನಂತೆ ತೋರುವುದು. ವಸ್ತುತಃ ಶುದ್ಧವಾದ ಆಕಾಶದಂತೆ ಆ ಚಿತ್ತವೆಂಬುದು ನಿತ್ಯ ಶುದ್ಧವಾದ ಆತ್ಮವೇ ಹೊರತು ಬೇರೆಯಲ್ಲವು.

೪. ಒಂದು ನಾವೆಯಲ್ಲಿ ಕುಳಿತುಕೊಂಡು ವೇಗವಾಗಿ ಪ್ರಯಾಣ ಮಾಡುತ್ತಿರುವಾಗ ಅವಿವೇಕಿಗಳಾದ ಮಕ್ಕಳಿಗೆ ಮಾತ್ರವೇ ವಸ್ತುತಃ ಅಚಲಗಳಾದ ಬೆಟ್ಟ, ಮರ ಮುಂತಾದವುಗಳ ಚಲನವು ಹೇಗೆ ಬರಿಯ ಭ್ರಾಂತಿಯಿಂದಲೇ ಸಿದ್ಧವಾದುದೋ ಹಾಗೆಯೇ ಅಪ್ರಬುದ್ಧನಾದ ಅಜ್ಞನಿಗೇ ಮಾತ್ರವೇ ಚಿತ್ತವೆಂಬುದು ಭ್ರಾಂತಿಕಲ್ಪಿತವಾಗಿದ್ದರೂ ಕೂಡ ಪ್ರಬುದ್ಧನಾದ ತತ್ತ್ವಜ್ಞನಿಗೆ ಅದು ಎಂದಿಗೂ ಸಿದ್ಧವಾಗಿಲ್ಲವು. ಅದು ಅಸನ್ಮಯವಾದುದೇ ಸರಿ.

೫. ಚಕ್ರದಂತೆ ವೇಗವಾಗಿ ಸುತ್ತುತ್ತಲೇ ಇರುವ ಗಾಣದ ಮೇಲೆ ಕುಳಿತುಕೊಂಡಿರುವವರಿಗೆ ಆದರ ಹತ್ತಿರವಿರುವ ಅಚಲವಾದ ಪರ್ವತವೂ ಸುತ್ತುತ್ತಿರುವಂತೆಯೇ ತೋರುವುದು. ಆ ಗಾಣಗಳ ಸುತ್ತುವಿಕೆಯು ನಿಂತ ಒಡನೆಯೇ ಪರ್ವತದ ಸುತ್ತುವಿಕೆಯೂ ತಾನಾಗಿಯೇ ನಿಂತುಹೋಗುವುದು. ಇದರಂತೆಯೇ ನಮ್ಮ ಮೂರ್ಖತನದಿಂದಲೂ, ಮೂಢತನದಿಂದಲೂ ಉಂಟಾಗಿರುವ ಭ್ರಾಂತಿಯು ಎದುವರೆವಿಗೆ ಇರುವುದೋ, ಅದುವರೆವಿಗೆ ಮಾತ್ರವೇ ನಮಗೆ ಈ ಚಿತ್ತವು

ಏವಂ ಹಿ ಚಿತ್ತಂ ನಾಸ್ತ್ಯೇವ ಬ್ರಹ್ಮೈವಾಸ್ತಿ ತಥಾತ್ಮಕಂ ।
ಪದಾರ್ಥ ಭಾವನಾಶ್ಚಿತ್ತಾತ್ ತೇನಾಸತ್ಯಾ ಮಯೋಜ್ಝಿತಾಃ ॥ ೬ ॥

ಜಾತೋಽಸ್ಮಿ ಶಾಂತಸಂದೇಹಃ ಸ್ಥಿತೋಽಸ್ಮಿ ವಿಗತಜ್ವರಃ ।
ಯಥಾ ಸ್ಥಿತಃ ಸ್ಥಾಸ್ಯಾಮಿ ತಥೈವ ವಿಗತೈಷಣಂ ॥ ೭ ॥

ಚಿತ್ತಾಭಾವೇ ಪರಿಕ್ಷೀಣಾ ಬಾಲ್ಯತೃಷ್ಣಾದಯೋ ಗುಣಾಃ ।
ಆಲೋಕೋಪರಮೇ ಚಿತ್ರಾ ವರ್ಣಾಖ್ಯಾ ಇವ ಸಂವಿದಃ ॥ ೮ ॥

ಗೋಚರಿಸುವುದು. ಭ್ರಾಂತಿಯು ಸಂಪೂರ್ಣವಾಗಿ ನಾಶ ಹೊಂದಿಬಿಟ್ಟರೆ, ಆಗಲೇ ಈ ಚಿತ್ತವೂ ನನಗೆ ಸರ್ವಥಾ ಗೋಚರಿಸುವುದೇ ಇಲ್ಲ.

೬. ಹೀಗೆ ಚಿತ್ತವೆಂಬುದು ವಾಸ್ತವವಾಗಿ ಹೇಗೂ, ಯಾವಾಗಲೂ ಇಲ್ಲವೇ ಇಲ್ಲ. ಇಂತಹ ಅಸತ್ತಾದ ಚಿತ್ತದ ದೆಸೆಯಿಂದಲೇ ಪ್ರಾಪಂಚಿಕ ಬಾಹ್ಯಾಭ್ಯಂತರ ಪದಾರ್ಥ ಭಾವನೆಗಳೆಲ್ಲವೂ ಪ್ರಸರಿಸಿರುವುವು. ಅದು ಕಾರಣ ಅವುಗಳೆಲ್ಲಾ ಅಸತ್ಯಗಳೇ ಆಗಿರುವುವರಿಂದ ನಾನು ಈಗ ಅವುಗಳನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟಿರುವೆನು.

೭. ಹಿಂದೆ ಇದ್ದ ನನ್ನ ಸಂದೇಹಗಳೆಲ್ಲವೂ, ಈಗ ನಿಶ್ಶೇಷವಾಗಿ ನಾಶ ಹೊಂದಿಬಿಟ್ಟಿರುವುವು. ನಾನು ಈಗ ಸಕಲ ಸಂತಾಪರಹಿತನಾಗಿ ನಿರುಪದ್ರವನಾಗಿರುವೆನು. ನಾನು ಯಾವ ಪಾರಮಾರ್ಥಿಕ ಸ್ವಭಾವದಿಂದ ಹೇಗೆ ಇದ್ದೇನೆಯೋ ಹಾಗೆಯೇ ಅದೇ ಪಾರಮಾರ್ಥಿಕ ಸ್ವರೂಪನಾಗಿ ಸ್ವಾನುಭವದಿಂದಲೂ ಈಗ ನಿಷ್ಕಾಮನಾಗಿರುವೆನು.

೮. ಪ್ರಕಾಶವು ಇಲ್ಲದೆ ಹೋದಾಗ ಕತ್ತಲೆಯಲ್ಲಿ ನಾನಾ ವಿಧಗಳಾದ ರೂಪಭೇದಗಳನ್ನು ಪ್ರಕಟಪಡಿಸುವ ಅತಿ ವಿಚಿತ್ರಗಳಾದ ಚಾಕ್ಷುಷ ಜ್ಞಾನಗಳು ತಾವಾಗಿಯೇ ಕ್ಷೀಣವಾಗುವಂತೆ ಈಗ ಚಿತ್ತವೆಂಬುದು ಇಲ್ಲದೆ ಹೋಗಿಬಿಡಲು ನನಗೆ ಚಾಪಲ್ಯ ತೃಷ್ಣೆ ಮುಂತಾದ ಅನರ್ಥಕಾರಿಗಳಾದ ದುರ್ಗುಣಗಳೆಲ್ಲವೂ ತಾವಾಗಿಯೇ ಕ್ಷೀಣವಾಗಿಬಿಟ್ಟವು.

ಮೃತಂ ಚಿತ್ತಂ ಗತಾ ತೃಷ್ಣಾ ಪ್ರಕ್ಷೀಣೋ ಮೋಹ ಪಂಜರಃ ।
ನಿರಹಂಕಾರತಾ ಜಾತಾ ಜಾಗ್ರತ್ಯಸ್ಮಿನ್ಪ್ರಬುದ್ಧವಾನ್ ॥ ೯ ॥

ಏಕಮೇವ ಜಗಚ್ಛಾಂತಂ ನಾನಾತ್ವಂ ನ ಸದಿತ್ಯಪಿ ।
ಕಿಮನ್ಯದ್ವಿಮೃಶಾಮ್ಯಂತಃ ಕಥಯೈವಾಲಮೇತಯಾ ॥ ೧೦ ॥

ನಿರಾಭಾಸಮನಾದ್ಯಂತಂ ಪದಂ ಪಾವನ ಮಾಗತಃ ।
ಸೌಮ್ಯಃ ಸರ್ವಗತಃ ಸೂಕ್ಷ್ಮಃ ಸ್ಥಿತ ಆತ್ಮಾಸ್ಮಿ ಶಾಶ್ವತಃ ॥ ೧೧ ॥

---

೯. ಈಗ ನನ್ನ ಚಿತ್ತವೆಂಬುದು ಮೃತವಾಯಿತು. ತೃಷ್ಣೆಯು ನನ್ನನ್ನು ಬಿಟ್ಟು ಹೊರಟು ಹೋಯಿತು. ನನ್ನನ್ನು ಬಂಧಿಸಿದ್ದ ಮೋಹವೆಂಬ ಪಂಜರವು ಕತ್ತರಿಸಿ ತುಂಡು ತುಂಡಾಗಿ ಕಳೆದುಹೋಯಿತು. ಅಹಂಕಾರ ಶೂನ್ಯತೆಯು ಉಂಟಾಯಿತು. ಈ ಅಹಮಾಕಾರ (ನಾನು ಎಂಬ) ಆತ್ಮ ಸ್ವರೂಪವೆಂಬ ಜಾಗ್ರತ್ತಿನಲ್ಲಿ ಉಂಟಾಗಿದ್ದ ಅಜ್ಞಾನವೆಂಬ ನಿದ್ರೆಯು ತೊಲಗಿ ಹೋಗಲಾಗಿ ನಾನು ಈಗ ಪ್ರಬುದ್ಧನಾಗಿ ಸ್ವಾಭಾವಿಕವಾದ ಪರಮಾರ್ಥ ಸ್ವರೂಪವನ್ನು ಸಾಕ್ಷಾತ್ಕರಿಸಿದೆನು.

೧೦. ಈ ಜಗತ್ತು ಶಾಂತವೂ, ಸದ್ರೂಪವೂ ಆಗಿರುವ ಅದ್ವಿತೀಯ ಬ್ರಹ್ಮವೇ! ಇದರಲ್ಲಿ ಭ್ರಾಂತಿಕಲ್ಪಿತವಾಗಿ ತೋರುವ ನಾನಾತ್ವವು ಕೇವಲ ಅಸತ್ಯವಾದುದು. ಹೀಗಿರುವಾಗ ಬೇರೆ ಯಾವುದನ್ನು ನಾನು ಈಗ ಅಂತರಂಗದಲ್ಲಿ ವಿಮರ್ಶಿಸಬೇಕಾಗಿರುವುದು. ಇನ್ನು ಅಸದ್ವಿಷಯಕವಾದ ಈ ವಿಚಾರವು ಸಾಕು. ಇದರಿಂದ ಯಾವ ಪ್ರಯೋಜನವೂ ಇರುವುದಿಲ್ಲ.

೧೧. ಅವಿದ್ಯಾಕೃತವಾದ ಚಿದಾಭಾಸವೆಂಬ ಪರಿಚ್ಛಿನ್ನವಾದ ನನ್ನ ಜೀವತ್ವವು ಈಗ ನಿರ್ನಾಮವಾಯಿತು. ಅದು ಕಾರಣ, ನಾನು ಆದ್ಯಂತರಹಿತವಾಗಿಯೂ, ಅತ್ಯಂತ ಪವಿತ್ರವಾಗಿಯೂ ಇರುವ ಅಪರಿಚ್ಛಿನ್ನವಾದ ಪರಮ ಪದವನ್ನು ಪಡೆದವನಾಗಿ ಸೌಮ್ಯನೂ, ಸರ್ವಗತನೂ, ಸೂಕ್ಷ್ಮನೂ, ಶಾಶ್ವತನೂ ಆದ ಆತ್ಮನಾಗಿಯೇ ಇರುವೆನು.

ಯದಸ್ತಿ ಯಚ್ಚ ನಾಸ್ತೀಹ ಚಿತ್ತಾದ್ಯಾತ್ಮಾದ್ಯವಸ್ತು ಚ ।
ತತ್ ಖಾದಚ್ಛತರಂ ಶಾಂತಮನಂತಾ ಗ್ರಾಹ್ಯಮಾತತಂ ॥ ೧೨ ॥

ಚಿತ್ತಂ ಭವತು ಮಾ ವಾಂತರ್ವ್ರಿಯತಾಂ ಸ್ಥಿತಿಮೇತು ವಾ ।
ಕೋ ವಿಚಾರಣಯಾರ್ಥೋ ಮೇ ಚಿರಂ ಸಾಮ್ಯೋದಿತಾತ್ಮನಃ ॥ ೧೩ ॥

ವಿಚಾರಕಾರಕೋ ಮೌರ್ಖ್ಯಾದಹಮಾಸಂ ಮಿತಸ್ಥಿತಿಃ ।
ವಿಚಾರೇಣಾಮಿತಾಕಾರಃ ಕ್ವ ನಾಮಾಹಂ ವಿಚಾರಕಃ ॥ ೧೪ ॥

---

೧೨. ಲೋಕದಲ್ಲಿ 'ವ್ಯವಹಾರ ದೃಷ್ಟಿಯಿಂದ ಚಿತ್ತ ಮೊದಲಾದ ಯಾವ ಯಾವ ವಸ್ತುವು ಇದೆಯೆಂದು ಪ್ರಸಿದ್ಧವಾಗಿರುವುದೋ ಮತ್ತು ಶ್ರುತಿ ದೃಷ್ಟಿಯಿಂದ ಯಾವ ಯಾವ ಆತ್ಮ ಬ್ರಹ್ಮ ಚೈತನ್ಯಾದಿ ವಸ್ತುವು ಇದೆಯೆಂದು ಪ್ರಸಿದ್ಧವಾಗಿರುವುದೋ ಮತ್ತು ಯಾವ ಯಾವ ರಜ್ಜು ಸರ್ಪಾದಿಯೂ, ವಂಧ್ಯಾಪುತ್ರಾದಿಯೂ ಎಂದಿಗೂ ಇಲ್ಲವೇ ಇಲ್ಲವೆಂದು ಪ್ರಸಿದ್ಧವಾಗಿರುವುದೋ, ಸದಸದ್ರೂಪವಾದ ಅವುಗಳೆಲ್ಲವೂ ಆಕಾಶಕ್ಕಿಂತ ಹೆಚ್ಚು ನಿರ್ಮಲವಾದ, ಶಾಂತವಾದ, ಅನಂತವಾದ, ಅಗ್ರಾಹ್ಯವಾದ (ಸ್ವಪ್ರಕಾಶವಾದ) ಮತ್ತು ಸರ್ವವ್ಯಾಪಿಯಾದ ಪರಬ್ರಹ್ಮವೇ.

೧೩. ಚಿತ್ತವು ಒಳಗೆ ಬೇಕಾದರೆ ಇದ್ದುಕೊಂಡಿರಲಿ. ಅಥವಾ ಇಲ್ಲದೆ ಹೋಗಲಿ. ಸತ್ತರೂ ಸಾಯಲಿ ಅಥವಾ ನೆಲೆಯಾಗಿ ನೆಲೆಸಲಿ. ಚಿರಕಾಲಾನಂತರ ಈಗ ಸರ್ವತ್ರ ವೈಷಮ್ಯರಹಿತನಾಗಿ (ಸಮನಾಗಿ) ಸ್ವಾತ್ಮ ಸ್ವರೂಪ ಸಂಪನ್ನನಾಗಿ ಆವಿರ್ಭವಿಸಿರುವ ನನಗೆ ಇದರ ವಿಚಾರದಿಂದ ಪ್ರಯೋಜನವೇನಿರುವುದು ?

೧೪. ಇಷ್ಟು ದೀರ್ಘಕಾಲ ಪರ್ಯಂತವೂ ನಾನು ಮೂರ್ಖತನದಿಂದ ವಿಚಾರಮಾಡಿದವನಾಗಿಯೇ ಪರಿಚ್ಛಿನ್ನವಾದ ದೇಹಾದಿಗಳಲ್ಲಿ ಆತ್ಮಬುದ್ಧಿಯುಳ್ಳವನಾಗಿದ್ದ ಕಾರಣ, ಸಂಕುಚಿತವಾದ ಸ್ಥಿತಿಯುಳ್ಳವನಾಗಿದ್ದೆನು. ಆದರೆ ಈಗ ಸ್ವರೂಪ ವಿಚಾರದಿಂದ ಅಪರಿಮಿತವಾದ ಆಕಾರವುಳ್ಳವನಾಗಿ ಪರಬ್ರಹ್ಮವೇ ಆಗಿಬಿಟ್ಟೆನು. ವಿಚಾರಕನಾದ ನಾನು ಎಲ್ಲಿಗೆ ಹೋದೆನೆಂಬುದನ್ನು ನಿರೂಪಣೆ ಮಾಡುವುದಕ್ಕೆ ಸಾಧ್ಯವಿಲ್ಲವು.

ಮೃತೇಽಪಿ ಮನಸೀಯಂ ಮೇ ವಿಕಲ್ಪಶ್ರೀ ನಿರರ್ಥಿಕಾ ।
ಮನೋವೇತಾಲ ವೃತ್ತ್ಯರ್ಥಂ ಕಿಮರ್ಥಮುಪಜಾಯತೇ ॥ ೧೫ ॥

ತಾಮಿಮಾಂ ಪ್ರಜಹಾಮ್ಯಂತಃ ಸಂಕಲ್ಪಕಲನಾಮಿತಿ ।
ನಿರ್ಣೀಯೋಮಿತಿ ಶಾಂತಾತ್ಮಾ ತಿಷ್ಠಾಮ್ಯಾತ್ಮನಿ ಮೌನವತ್ ॥ ೧೬ ॥

ಅಶ್ನನ್ಗಚ್ಛನ್ಸ್ವಪಂಸ್ತಿಷ್ಠನ್ನಿತಿ ರಾಘವ ಚೇತಸಾ ।
ಸರ್ವತ್ರ ಪ್ರಜ್ಞಯಾ ತಜ್ಞಃ ಪ್ರತ್ಯಹಂ ಪ್ರವಿಚಾರಯೇತ್ ॥ ೧೭ ॥

ಪ್ರವಿಚಾರ್ಯ ಸ್ವಸಂಸ್ಥೇನ ಶಾಂತೇನ ಸ್ವೇನ ಚೇತಸಾ ।
ತಿಷ್ಠಂತಿ ವಿಗತೋದ್ವೇಗಂ ಸಂತಃ ಪ್ರಕೃತ ಕರ್ಮಸು ॥ ೧೮ ॥

೧೫-೧೬. ಮನಸ್ಸು ಸತ್ತು ಹೋದ ಬಳಿಕ, ವಿಚಾರ ಮಾಡುವವನು ಇರುವನೇ ಅಥವಾ ಇಲ್ಲವೇ ಎಂಬೀ ನಿರಂತರವಾದ ವಿಕಲ್ಪವೂ ಕೂಡ ನಿರರ್ಥಕವಾಗಿಬಿಡುವುದು. ಹೀಗಿರುವಾಗ, ಪುನಃ ಮನಸ್ಸೆಂಬ ಬೇತಾಳನನ್ನು ಬದುಕಿಸುವುದಕ್ಕೋಸ್ಕರವಾಗಿಯೇ ಈ ವಿಕಲ್ಪವು ಏತಕ್ಕಾಗಿ ಹುಟ್ಟಬೇಕು.? ಅದು ಕಾರಣ, ಇನ್ನು ನಾನು ನನ್ನ ಹೃದಯದೊಳಗೆ ಈ ವಿಧವಾದ ಸಂಕಲ್ಪ ಕಲ್ಪನೆಯನ್ನು ಎಂದಿಗೂ ಮಾಡದೆ ಬಿಟ್ಟುಬಿಡುವೆನು. ಎಂದು ನಿರ್ಣಯಿಸಿ ಮೌನದಿಂದಿರುತ್ತಾ, ಪ್ರಶಾಂತಾತ್ಮನಾಗಿ ಪ್ರಣವವನ್ನು ಅನುಸಂಧಾನ ಮಾಡಿಕೊಂಡು, ಓಂಕಾರೋಪಲಕ್ಷಿತವಾದ ನಿಷ್ಪ್ರಪಂಚ ತುರಿಯಾತ್ಮ ಸ್ವರೂಪದಲ್ಲಿ ಪ್ರತಿಷ್ಠಿತನಾಗಿರುವೆನು.

೧೭. ಅಯ್ಯ ರಾಘವ, ನಾನು ಇದುವರೆಗೆ ಉಪದೇಶ ಮಾಡಿದ ಕ್ರಮದಲ್ಲಿ ಊಟ ಮಾಡುವಾಗಲೂ, ನಡೆದು ಹೋಗುತ್ತಿರುವಾಗಲೂ, ಮಲಗಿ ನಿದ್ರಿಸುವಾಗಲೂ, ನಿಂತಿರುವಾಗಲೂ, ಸದಾ ಸರ್ವತ್ರ ಪ್ರತಿ ದಿವಸವೂ ಬಿಡದೆ ಮನಸ್ಸಿನಿಂದ ವಿಚಾರ ಮಾಡುತ್ತಿರಬೇಕು. ಹೀಗೆ ವಿಚಾರ ಮಾಡುತ್ತಿದ್ದರೆ ನೀನು ವಿವೇಕವನ್ನು ಪಡೆದು ಸ್ವಾತ್ಮತತ್ತ್ವಜ್ಞನಾಗಿ ಕೃತಕೃತ್ಯತೆಯನ್ನು ಹೊಂದುವೆ.

[ಗಚ್ಛತಃ ತಿಷ್ಠತೋವಾಪಿ ಜಾಗ್ರತಃ ಸ್ವಪತೋಽಪಿವಾ । ನ ವಿಚಾರಪರಂ ಚೇತಃ ಯಸ್ಯ ಅಸೌಮೃತ ಉಚ್ಯತೇ ॥ ಎಂದು ಪ್ರಾಜ್ಞರು ಹೇಳಿರುವರು.]

೧೮. ಹೀಗೆ ಸ್ವಾತ್ಮಸ್ಥಿತಿಯಲ್ಲಿ ಪರಿನಿಷ್ಠಿತವಾದ, ಪ್ರಶಾಂತವಾದ, ಸ್ವಕೀಯ ಮನಸ್ಸಿನಿಂದ ಚೆನ್ನಾಗಿ ವಿಚಾರ ಮಾಡಿ ತತ್ತ್ವಜ್ಞರಾದ ಮಹಾತ್ಮರು ಸ್ವಲ್ಪವೂ

ವಿಗತಮಾನಮದಾ ಮುದಿತಾಶಯಾಃ ।
ಶರದುಪೋಢ ಶಶಾಂಕ ಸಮತ್ವಿಷಃ ।
ಪ್ರಕೃತ ಸಂವ್ಯವಹಾರ ವಿಹಾರಿಣ ।
ಸ್ತ್ವಿಹ ಸುಖಂ ವಿಹರಂತಿ ಮಹಾಧಿಯಃ ॥ ೧೯ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ
ಮೋಕ್ಷೋಪಾಯೇಷು ಉಪಶಮಪ್ರಕರಣೇ "ಚಿತ್ತಾಸತ್ತಾ ಪ್ರತಿಪಾದನಂ"
ನಾಮೈಕಾಶೀತಿತಮಃ ಸರ್ಗಃ

ಯಾವೊಂದು ಕಳವಳವೂ ಇಲ್ಲದೆ, ತಮ್ಮ ತಮ್ಮ ವರ್ಣಾಶ್ರಮೋಚಿತಗಳಾದ ಆಚಾರಗಳನ್ನು ಅನುಷ್ಠಾನ ಮಾಡುತ್ತಾ ಪ್ರಶಾಂತರಾಗಿಯೇ ಇರುವರು.

೧೯. ಅಯ್ಯ ರಾಮ, ಮಹಾ ಜ್ಞಾನಿಗಳಾದ ಆತ್ಮನಿಷ್ಠರು ಮಾನ ಮದ ಗಳನ್ನು ಕಳೆದುಕೊಂಡವರಾಗಿಯೂ, ಸದಾ ಸಂತುಷ್ಟಚಿತ್ತರಾಗಿಯೂ, ಶರತ್ಕಾಲದ ಪೂರ್ಣ ಚಂದ್ರನಂತೆ ಪ್ರಕಾಶಮಾನವೂ, ಸೌಮ್ಯವೂ ಆದ ಮುಖ ಕಾಂತಿಯುಳ್ಳವ ರಾಗಿಯೂ, ಅತ್ಯವಶ್ಯ ಕರ್ತವ್ಯಗಳಾಗಿ ಯಾದೃಚ್ಛಿಕವಾಗಿ ಸಂಪ್ರಾಪ್ತವಾದ ವ್ಯವ ಹಾರಗಳಲ್ಲಿ ಅನಿರ್ವಿಣ್ಣರಾಗಿಯೇ ವಿಹರಿಸಿಕೊಂಡಿರುವವರಾಗಿಯೂ ಈ ಲೋಕದಲ್ಲಿ ನಿತ್ಯ ಸುಖಿಗಳಾಗಿ ವಿನೋದದಿಂದ ಕಾಲವನ್ನು ತಳ್ಳುತಿರುವರು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ "ಚಿತ್ತಾಸತ್ತಾ ಪ್ರತಿಪಾದನ" ವೆಂಬ
ಎಂಭತ್ತೊಂದನೆಯ ಸರ್ಗವು

ದ್ವ್ಯಶೀತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ವಿಚಾರ ಏವಂ ವಿದುಷಾ ಸಂವರ್ತೇನ ಕೃತಃ ಪುರಾ ।
ಕಥಿತೋ ಮಮ ವಿಂಧ್ಯಾದ್ರೌ ತೇನೈವ ವಿದಿತಾತ್ಮನಾ ॥ ೧ ॥

ಏತಾಂ ದೃಷ್ಟಿಮವಷ್ಟಭ್ಯ ವಿಚಾರಪರಯಾ ಧಿಯಾ ।
ಸಂಸಾರಸಾಗರಾದಸ್ಮಾತ್ತ್ವಾರತನ್ಯೇನ ಸಂತರ ॥ ೨ ॥

ಅಥೇಮಾಮಪರಾಂ ರಾಮ ಶೃಣು ದೃಷ್ಟಿಂ ಪದಪ್ರದಾಂ ।
ಮುನಿನಾ ವೀಹಹವ್ಯೇನ ಯಯಾ ಸ್ಥಿತಮಶಂಕಿತಂ ॥ ೩ ॥

ಎಂಭತ್ತೆರಡನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು :—

೧. ಅಯ್ಯ ರಾಮ, ಈಗ ನಾನು ನಿನಗೆ ಹೇಳಿದಂತೆಯೇ ಪೂರ್ವಕಾಲದಲ್ಲಿ ವಿಂಧ್ಯ ಪರ್ವತದಲ್ಲಿದ್ದ ಮಹಾ ವಿದ್ವಾಂಸನಾದ ಸಂವರ್ತನೂ ವಿಚಾರ ಮಾಡಿ ಆತ್ಮತತ್ತ್ವ ಜ್ಞಾನವನ್ನು ಸಾಕ್ಷಾತ್ಕರಿಸಿದನು. ಆತನೇ ನನಗೆ ಈ ವಿಚಾರವನ್ನು ಹೇಳಿದನು.

೨. ಆದು ಕಾರಣ, ನೀನೂ ಕೂಡ ಸರ್ವದಾ ಆತ್ಮ ವಿಚಾರಪರವಾದ ಬುದ್ಧಿಯಿಂದ ಈ ಉತ್ತಮೋತ್ತಮವಾದ ಆತ್ಮೈಕತ್ವ ಜ್ಞಾನವನ್ನು ಆಶ್ರಯಿಸಿ ಕ್ರಮೇಣ ಚಿತ್ತ ವಿಶ್ರಾಂತಿಯನ್ನು ಹೆಚ್ಚಿಸಿಕೊಳ್ಳುತ್ತಾ ಅದರ ಮೂಲಕ ಉತ್ತರೋತ್ತರ ಭೂಮಿಕೆಗಳನ್ನು ಹತ್ತಿ ಈ ಸಂಸಾರ ಸಾಗರದ ದೆಸೆಯಿಂದ ಉತ್ತೀರ್ಣನಾಗು.

೩. ಅಯ್ಯ ರಾಮ, ಈಗ ನಿನಗೆ ಇಂದ್ರಿಯ ಮನಸ್ಸುಗಳ ಪ್ರಬೋಧನ ರೂಪವಾದ ಮತ್ತೊಂದು ದಿವ್ಯ ದೃಷ್ಟಿಯನ್ನು ಉಪದೇಶಿಸುವೆನು. ಅದು ಸರ್ವರಿಗೂ ಪರಮಪದಪ್ರದವಾದುದು. ವೀತಹವ್ಯನೆಂಬ ಮುನೀಶ್ವರನು ಈ ದೃಷ್ಟಿಯ

ವೀತಹವ್ಯೋ ಮಹಾತೇಜಾ ವಿಬಭ್ರಾಮ ವನೇ ಪುರಾ ।
ವಿಂಧ್ಯಶೈಲದರೀದೀರ್ಘಾ ರವಿರ್ಮೇರುದರೀರಿವ ॥ ೪ ॥

ಅಸ್ಮಾತ್ಕ್ರಿಯಾ ಕ್ರಮಾದ್ಘೋರಾತ್ಸಂಸಾರ ಭ್ರಮದಾಯಿನಃ ।
ಆಧಿವ್ಯಾಧಿ ಮಯಾಕಾರಾತ್ಕಾಲೇನೋದ್ವೇಗಮಾಯಯೌ ॥ ೫ ॥

ನಿರ್ವಿಕಲ್ಪ ಸಮಾಧ್ಯಂಶ ಲಭ್ಯೋದಾರ ಪರೇಚ್ಛಯಾ ।
ಸ ಜಹಾರ ಜಗಜ್ಜೀರ್ಣಾಂ ಸ್ವವ್ಯಾಪಾರ ಪರಂಪರಾಂ ॥ ೬ ॥

ಆಲಂಬನದಿಂದಲೇ ನಿಶ್ಶಂಕನಾಗಿ ಪರಮ ಪದವನ್ನು ಆರೂಢನಾಗಿ ಸ್ವಸ್ಥನಾಗಿದ್ದನು.

೪. ಪೂರ್ವಕಾಲದಲ್ಲಿ ಮಹಾ ತೇಜಸ್ವಿಯಾದ ವೀತಹವ್ಯನೆಂಬ ಋಷಿ ಶ್ರೇಷ್ಠನು, ಸೂರ್ಯನು ಮೇರು ಪರ್ವತದ ಗುಹೆಗಳಲ್ಲಿ ಸಂಚರಿಸುವಂತೆ ವಿಂಧ್ಯ ಪರ್ವತದ ಅರಣ್ಯದಲ್ಲಿ ಅತಿ ದೀರ್ಘಗಳಾದ ಗುಹೆಗಳೊಳಗೆ ಸಮಾಧ್ಯನುಕೂಲವಾದ ಪ್ರದೇಶವನ್ನು ಹುಡುಕುತ್ತಾ ಸಂಚರಿಸುತ್ತಿದ್ದನು.

೫. ಆತನು ಸ್ವಲ್ಪ ಕಾಲಾನಂತರ ಅತಿ ಘೋರವಾಗಿಯೂ, ಸಾಂಸಾರಿಕ ಸಕಲ ಭ್ರಾಂತಿಗಳನ್ನು ಕೊಡತಕ್ಕುದಾಗಿಯೂ ಆಧಿ (ಮನೋರೋಗ) ವ್ಯಾಧಿಗಳ ಬಾಹುಳ್ಯದಿಂದ ಅಸಹ್ಯಾಕಾರವುಳ್ಳದ್ದಾಗಿಯೂ ಇರುವ ಈ ಪ್ರಾಪಂಚಿಕ ವ್ಯವಹಾರಗಳ ಪ್ರವರ್ತನೆಯಿಂದ ಉದ್ವೇಗಗೊಂಡವನಾಗಿ ಸಮಾಧಿನಿಷ್ಠೆಗೋಸ್ಕರ ಅನುಕೂಲವಾದ ಏಕಾಂತ ವಾಸವನ್ನು ಬಯಸಿದನು.

೬. ಬಳಿಕ, ಆತನು ನಿರ್ವಿಕಲ್ಪ ಸಮಾಧಿಯನ್ನು ಅಭ್ಯಾಸ ಮಾಡಿ ಅದರಿಂದ ಲಭ್ಯವಾಗುವ ಅತ್ಯುತ್ತಮವಾದ ಪರಮ ಪದವನ್ನು ಪಡೆಯಬೇಕೆಂಬ ಇಚ್ಛೆಯಿಂದ ಜಗತ್ತಿನಲ್ಲಿ ಚಿರಕಾಲಾಭ್ಯಸ್ತವಾದ ತನ್ನ ಕಾರ್ಯಕಲಾಪಗಳನ್ನೆಲ್ಲಾ ನಿಶ್ಶೇಷವಾಗಿ ಉಪಸಂಹಾರ ಮಾಡಿ ಸಂನ್ಯಸ್ತನಾದನು.

ವಿವೇಶ ರಂಭಾರಚಿತಂ ನಿಜಂ ಪರ್ಣೋಟಜಾಂತರಂ ।
ಕೃತಗೌರಂ ಸುಸೌಗಂಧ್ಯ ಮಲಿರ್ನೀಲ ಮಿವೋತ್ಪಲಂ ॥ ೭ ॥

ತತ್ರಾಸನೇ ಸಮೇ ಶುದ್ಧೇ ಸ್ವಾಸ್ತೀರ್ಣ ಹರಿಣಾಜಿನೇ ।
ವಿಶಶ್ರಾಮಾಚಲೇ ಶಾಂತೇ ವೀತವರ್ಷ ಇವಾಂಬುದಃ ॥ ೮ ॥

ಬದ್ಧ ಪದ್ಮಾಸನಸ್ತಸ್ಥೌ ಪಾರ್ಷ್ಣ್ಯೋರಧಿಕರಾಂಗುಲಿಃ ।
ಶೃಗವಚ್ಚಾಂತಚಲನಮುತ್ತಿಷ್ಠತ್ಸ್ಪಷ್ಟಕಂಧರಂ ॥ ೯ ॥

---

೭. ತರುವಾಯ ಆತನು ಭ್ರಮರವು ಕನ್ನೈದಿಲೆಯನ್ನು ಪ್ರವೇಶಿಸುವಂತೆ ಕರ್ಪೂರಗಳಿಂದಲೂ, ಪರಾಗಗಳಿಂದಲೂ. ಬೆಳ್ಳಗೂ, ಹಳದಿಯಾಗಿಯೂ ಇರುವ ಸುಗಂಧ ಮಯವಾದ ಬಾಳೆ ಎಲೆಗಳಿಂದ ನಿರ್ಮಿತವಾದ ತನ್ನ ಪರ್ಣಶಾಲೆಯೊಳಗೆ ಪ್ರವೇಶ ಮಾಡಿದನು.

೮. ತನ್ನಲ್ಲಿರುವ ನೀರನ್ನೆಲ್ಲ ಪೂರ್ತಿಯಾಗಿ ಮಳೆಗರೆದು ನಿರ್ಜಲವಾದ ಮೇಘವು ಸೂರ್ಯನ ತಾಪವಿಲ್ಲದಿರುವ ಪರ್ವತ ರಾಜನಾದ ಹಿಮಾಲಯದ ಕೊನೆಯ ಶಿಖರದಲ್ಲಿ ಕುಳಿತು ವಿಶ್ರಮಿಸಿಕೊಳ್ಳುವಂತೆ, ಆ ವೀತಹವ್ಯ ಮುನಿಯು ಆ ಪರ್ಣಶಾಲೆಯಲ್ಲಿ ಹಳ್ಳತಿಟ್ಟುಗಳು ಇಲ್ಲದಂತೆ ಒಂದೇ ಸಮನಾಗಿ ವಿರಚಿತವಾಗಿ, ಶುದ್ಧವಾಗಿರುವ ಚೆನ್ನಾಗಿ 'ಸುತ್ತಲೂ ಕೃಷ್ಣಾಜಿನವನ್ನು ಹಾಸಿರುವ, ತಾಪರಹಿತವಾದ ಸ್ಥಿರವಾದ ಆಸನದ ಮೇಲೆ ಕುಳಿತು ವಿಶ್ರಮಿಸಿಕೊಂಡನು.

[ಅಚಲೇ ಶಾಂತೇ ಎಂಬ ಎರಡು ವಿಶೇಷಣಗಳನ್ನು ಆಸನೇ ಎಂಬ ವಿಶೇಷ್ಯದೊಡನೆ ಸಮನ್ವಯ ಮಾಡಬೇಕು. ಮೇಘದ ಪರವಾಗಿ ಶಾಂತವಾದ ಅಚಲದಲ್ಲಿ ಎಂದರ್ಥ ಮಾಡುವುದಕ್ಕೆ ಬದಲಾಗಿ, ತಾತ್ಪರ್ಯ ಪ್ರಕಾಶಟೀಕಾರರು ಅಚಲೇಶಾಂತೇ ಎಂದು ಒಂದೇ ಸಮಸ್ತಪದವನ್ನು ಇಟ್ಟುಕೊಂಡು, ಅಚಲೇಶಸ್ಯ (ಪರ್ವತರಾಜಸ್ಯ) ಹಿಮವತಃ ಅಂತೇ ಪ್ರಾಂತೇವಾ ಎಂದರ್ಥ ಹೇಳಿರುವರು.]

೯. ತರುವಾಯ ದೃಢವಾಗಿ ಪದ್ಮಾಸನವನ್ನು ಹಾಕಿಕೊಂಡವನಾಗಿ, ಅಂಗಾಲುಗಳ ಮೂಲಭಾಗಗಳಮೇಲೆ ತನ್ನ ಕೈಬೆರಳುಗಳನ್ನಿಟ್ಟುಕೊಂಡು ಮತ್ತು ಕುತ್ತಿಗೆಯನ್ನು ಮೇಲಕ್ಕೆತ್ತಿಕೊಂಡು ಪರ್ವತಶಿಖರದಂತೆ ನಿಶ್ಚಲನಾಗಿದ್ದನು.

ಸ ಜಹಾರಾಲಮಾಲೋಕಾದ್ದಿಗ್ವಿಕೀರ್ಣಂ ಮನಃ ಶನೈಃ ।
ವಿಶನ್ಮೇರುದರೀಂ ಸಾಯಂ ಭಾನುರ್ಭಾಸ ಇವೋತ್ಕರಂ ॥ ೧೦ ॥

ಬಾಹ್ಯಾನಾಭ್ಯಂತರಾಂಶ್ಚೈವ ಸ್ಪರ್ಶಾನ್ಪರಿ ಜಹತ್ಕ್ರಮಾತ್ ।
ಇದಮಾ ಕಲಯಾಮಾಸ ಮನಸಾ ವಿಗತೈನಸಾ ॥ ೧೧ ॥

ಅಹೋ ನು ಚಂಚಲಮಿದಂ ಪ್ರತ್ಯಾಹೃತಮಪಿ ಕ್ಷಣಾತ್ ।
ನ ಮನಃ ಸ್ಥೈರ್ಯಮಾಯಾತಿ ತರಂಗ ಪ್ರೌಢಪರ್ಣವತ್ ॥ ೧೨ ॥

---

೧೦. ಸಾಯಂಕಾಲದಲ್ಲಿ ಮೇರು ಪರ್ವತದ ಗುಹೆಯನ್ನು ಪ್ರವೇಶಿಸುವ ಸೂರ್ಯನು, ದಿಗಂತಗಳಲ್ಲೆಲ್ಲಾ ವ್ಯಾಪಿಸಿಕೊಂಡಿರುವ ತನ್ನ ತೇಜಸ್ಸಿನ ರಾಶಿಯನ್ನು ಹಿಂದಕ್ಕೆ ಸೆಳೆದುಕೊಂಡು ತನ್ನಲ್ಲಿಯೇ ಅಡಗಿಸಿಕೊಳ್ಳುವಂತೆ, ಆ ವೀತಹವ್ಯ ಮುನಿಯು ತನ್ನ ಇಂದ್ರಿಯಗಳ ಆಲೋಕದಿಂದ ಸಮಸ್ತ ದಿಗಂತಗಳಲ್ಲಿಯೂ ವ್ಯಾಪಿಸಿಕೊಂಡಿದ್ದ ಮನಸ್ಸನ್ನು ಮೆಲ್ಲಮೆಲ್ಲನೆ ನಿಗ್ರಹೋಪಾಯದಿಂದ ಹಿಂದಕ್ಕೆ ಎಳೆದುಕೊಂಡು ತನ್ನೊಳಗೆ ಅಡಗಿಸಿಬಿಟ್ಟನು.

೧೧. ಆತನು ಕ್ರಮವಾಗಿ ಬಾಹ್ಯಗಳೂ ಮತ್ತು ಆಭ್ಯಂತರಗಳೂ ಆದ ಸಮಸ್ತ ವಿಷಯಗಳನ್ನು ಪರಿತ್ಯಾಗಮಾಡಿದವನಾಗಿ, (ಪಾಪರಹಿತವಾದ) ನಿಷ್ಕಲ್ಮಷವಾದ ತನ್ನ ಮನಸ್ಸಿನಿಂದಲೇ ಮುಂದೆ ಹೇಳುವ ರೀತಿಯಲ್ಲಿ ವಿಚಾರಮಾಡಿದನು. (ಬಾಹ್ಯಸ್ಪರ್ಶಗಳು ಇಂದ್ರಿಯ ಗ್ರಾಹ್ಯವಾದ ಶಬ್ದ ಸ್ಪರ್ಶರೂಪರಸ ಗಂಧಗಳು. ಆಂತರಸ್ಪರ್ಶಗಳು ಮಾನಸಿಕ ಕಾಮ ಸಂಕಲ್ಪಾದಿಗಳು.)

೧೨. ಅಹಾ!! ಈ ಮನಸ್ಸು ಅತ್ಯಂತ ಚಂಚಲವಾದುದೇ ಸರಿ. ಎಷ್ಟೋ ಕಷ್ಟಪಟ್ಟು ಅನೇಕ ಸಲ ಇದನ್ನು ವಿಷಯಗಳ ಕಡೆಯಿಂದ ತಪ್ಪಿಸಿ, ಹಿಂದಕ್ಕೆ ಎಳೆದುಕೊಂಡು ಬಂದು, ದೂರದಲ್ಲಿರಿಸಿ, ಜಾಗರೂಕತೆಯಿಂದ ಕಾದುಕೊಂಡಿದ್ದರೂ ಹೇಗೋ ಒಂದು ಕ್ಷಣದೊಳಗಾಗಿ ತಪ್ಪಿಸಿಕೊಂಡು ಓಡಿಹೋಗಿ ತರಂಗಗಳ ಪ್ರವಾಹದ ಮಧ್ಯದಲ್ಲಿ ಸಿಕ್ಕಿಬಿದ್ದಿರುವ ತರುಗೆಲೆಯಂತೆ, ಒಂದು ನಿಮಿಷವಾದರೂ ಎಲ್ಲಿಯೂ ಸ್ವಲ್ಪವೂ ಸ್ಥೈರ್ಯದಿಂದ ನಿಲ್ಲುವುದಿಲ್ಲ. ಹೋಲಿಸಿ. ಚಂಚಲಂ ಹಿ ಮನಃ ಕೃಷ್ಣ, ಪ್ರಮಾಥಿಬಲವದ್ ದೃಢಂ । ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಂ ಅಧ್ಯಾಯ ೬-೩೪.

ಚಕ್ಷುರಾದಿಭಿರುದ್ದಾಮೈ ರೂಪೈರಾಹಿತ ಸಂಭ್ರಮೈಃ ।
ಅಜಸ್ರಮುತ್ಪತತ್ಯೇವ ವೀಟೀವ ತಲತಾಡಿತಾ ॥ ೧೩ ॥

ತ್ಯಜದೇವಾನು ಗೃಹ್ಣಾತಿ ವೃತ್ತೀರಿಂದ್ರಿಯವರ್ಧಿತಾಃ ।
ಯಸ್ಮಾನ್ನಿವಾರ್ಯತೇ ತಸ್ಮಿನ್ ಪ್ರೋನ್ಮತ್ತ ಇವ ಧಾವತಿ ॥ ೧೪ ॥

ಘಟಾತ್ಪಟಮುಪಾಯಾತಿ ಪಟಾಚ್ಛಕಟ ಮುತ್ಕಟಂ ।
ಚಿತ್ತಮರ್ಥೇಷು ಚರತಿ ಪಾದಪೇಷ್ವಿವ ಮರ್ಕಟಃ ॥ ೧೫ ॥

ಪಂಚದ್ವಾರಾಣಿ ಮನಸಶ್ಚಕ್ಷುರಾದೀನ್ಯಮೂನ್ಯಲಂ ।
ದಗ್ಧೇಂದ್ರಿಯಾಭಿಧಾನಾನಿ ತಾವದಾಲೋಕಯಾಮ್ಯಹಂ ॥ ೧೬ ॥

---

೧೩. ಈ ಮನಸ್ಸು, ಅತ್ಯಂತ ಸಂಭ್ರಮ ಪ್ರದಗಳಾಗಿ ಬಹು ಭಯಂಕರವಾಗಿರುವ ಚಕ್ಷುರಾದಿ ನಾನಾ ವಿಷಯಾಕಾರ ನಿಮಿತ್ತಗಳಿಂದ, ನೆಲದ ಮೇಲೆ ಬಲವಾಗಿ ಹೊಡೆಯಲ್ಪಟ್ಟ ಚೆಂಡಿನಂತೆ, ಸರ್ವದಾ ಮೇಲಕ್ಕೆ ಹಾರುತ್ತಲೇ ಇರುವುದು.

೧೪. ಈ ಮನಸ್ಸು ಪೂರ್ವ ಪೂರ್ವ ವೃತ್ತಿಗಳನ್ನು ಬಿಡುತ್ತಿರುವ ಹಾಗೆಯೇ, ಆಗಲೇ ಆಯಾವೃತ್ತಿಗಳಿಗೆ ಅನುಸಾರಗಳಾಗಿ ಚಕ್ಷುರಾದೀಂದ್ರಿಯಗಳಿಂದ ವೃದ್ಧಿಗೊಳಿಸಲ್ಪಟ್ಟ ಉತ್ತರೋತ್ತರ ವೃತ್ತಿಗಳನ್ನು ಸ್ವೀಕರಿಸುವುದು. ಮತ್ತು ಯಾವ ವಿಷಯದಿಂದ ತಪ್ಪಿಸಿ ಇದನ್ನು ಹಿಂದಕ್ಕೆ ಸೆಳೆದುಕೊಳ್ಳುವೆವೋ, ಅದೇ ವಿಷಯದಕಡೆಗೆ. ಇದು ಹುಚ್ಚನಂತೆ, ಬಲುಬೇಗ ಒಂದು ನಿಮಿಷದಲ್ಲಿ ಓಡಿ ಹೋಗಿ ಬಿಡುವುದು.

೧೫. ಅತ್ಯಂತ ಚಪಲಸ್ವಭಾವವುಳ್ಳ ಕಪಿಯು ಎಲ್ಲಿಯೂ ಸ್ವಲ್ಪಹೊತ್ತೂ ಸ್ಥಿರವಾಗಿ ನಿಲ್ಲದೆ ಕಾಡಿನಲ್ಲಿ ಮರದಿಂದ ಮರಕ್ಕೆ ಸಂಚರಿಸುವಂತೆ, ಈ ಮನಸ್ಸು ಒಂದು ಕ್ಷಣವೂ ಒಂದು ವಿಷಯದಲ್ಲಿ ಸ್ಥಿರವಾಗಿ ನಿಲ್ಲದೆ, ಘಟವನ್ನು ಬಿಟ್ಟು ಪಟವನ್ನು ಸೇರುವುದು. ಹಾಗೆಯೇ ಆ ಪಟವನ್ನು ಬಟ್ಟು ಅಲ್ಲಿಂದ ವಿಸ್ತಾರವಾದ ಶಕಟಕ್ಕೆ ಹಾರುವುದು. ಹೀಗೆ ಇದು ಸರ್ವದಾ ಅರ್ಥಗಳಲ್ಲಿ ಸಂಚರಿಸುವುದು.

೧೬. ಈ ಮನಸ್ಸು, ಶರೀರದ ಹೊರಗೆ ಹೋಗುವುದಕ್ಕೆ, ಕಣ್ಣು ಮೊದಲಾದ ಈ ಐದುದ್ವಾರಗಳು ಇರುವುವು. ಇವುಗಳು ಇಂದ್ರಿಯಗಳೆಂಬ ಅತಿನಿಂದ್ಯ

ಹೇಹೇ ಹತೇಂದ್ರಿಯಗಣಾಃ ಕಿಂ ಮೋ ಬೋಧಾಯ ನೇಹ ವಃ ।
ವೇಲಾ ವಿಲುಲಿ ತಾಂಬೂನಾಮಬ್ಧೀನಾಮಿವ ಚಂಚಲಾಃ　　॥ ೧೭ ॥

ಮಾ ಕುರುಧ್ವಮನರ್ಥಾಯ ಚಾಪಲಂ ಚಪಲಾಶಯಾಃ ।
ಸ್ಮರತಾತೀತ ವೃತ್ತೀನಿ ದುಃಖಜಾಲಾನಿ ಭೂರಿಶಃ　　॥ ೧೮ ॥

ರೂಪಾಣಿ ಮನಸೋ ಯೂಯಂ ಜಡಾ ಏವ ಕಿಲಾಧಮಾಃ ।
ಜಡೇ ತೂಕ್ತಿಕ್ತತಾ ವ್ಯರ್ಥಂ ಮೃಗ ತೃಷ್ಣೇವ ವಲ್ಗತಿ　　॥ ೧೯ ॥

ವಾದ ಹೆಸರುಗಳಿಂದ ಪ್ರಸಿದ್ಧವಾಗಿವೆ. ಈ ಹಾಳುಇಂದ್ರಿಯಗಳು ಈಗ ನನಗೆ ಸ್ಪಷ್ಟವಾಗಿ ಗೋಚರಿಸುತ್ತಿರುವುವು.

೧೭. ಎಲೈ ಎಲೈ ಅತ್ಯಂತ ಚಂಚಲಗಳಾದ ಹಾಳು ಇಂದ್ರಿಯ ಸಮುದಾಯಗಳೇ, ವಿಕ್ಷುಬ್ಧವಾದ ಜಲರಾಶಿಯುಳ್ಳ ಸಮುದ್ರಗಳಿಗೆ ದಡವೇ ಇಲ್ಲದಿರುವಂತೆ, ನನಗೆ ಸಮಾಧಿಯ ಮೂಲಕ ನಿರಂತರವೂ ಸ್ವಾತ್ಮ ದರ್ಶನವಾಗುವಂತೆ ಮಾಡಲು ನಿಮಗೆ ಇಲ್ಲಿ ಈಗ ಅವಕಾಶವೇ ಇಲ್ಲವೇನು ?

(ವೇಲಾ= ದಡ ಮತ್ತು ಅವಸರ= ಸಮಯ)

೧೮. ಸ್ವಭಾವತಃ ಚಪಲವಾದ ಆಶಯವುಳ್ಳ ಇಂದ್ರಿಯಗಳೇ, ಸುಮ್ಮನೆ ನೀವು ಚಪಲತೆಯನ್ನು ತೋರದಿರಿ. ನಿಮ್ಮ ಚಪಲತೆಯು ಮಹಾ ಅನರ್ಥ ಪರಂಪರೆಗೆ ಹೇತುವಾದುದು. ನಿಮ್ಮ ಚಪಲತೆಯಿಂದಲೇ ಹಿಂದೆ ಸಂಪ್ರಾಪ್ತವಾಗಿ, ಅನುಭವಿಸಿ ಕಳೆದುಹೋದ ಅನೇಕಾನೇಕ ದುಃಖ ಪರಂಪರೆಗಳನ್ನು ಈಗ ಸ್ಮರಿಸಿಕೊಳ್ಳಿ.

೧೯. ಎಲೈ ಅಧಮವಾದ ಇಂದ್ರಿಯಗಳೇ, ಜಡವಾದ ಮನಸ್ಸಿನ ದ್ವಾರ ಭೇದದಿಂದ ಕಲ್ಪಿತವಾದ ಸ್ವರೂಪಗಳೇ ಆಗಿರುವ ನೀವುಗಳೂ ಕೇವಲ ಜಡವಸ್ತುಗಳೆ ಆಗಿರುವಿರಿ. ಜಡವಸ್ತುವಿನಲ್ಲಿ ಗರ್ವವು ಜಲದಲ್ಲಿ ತರಂಗಗಳ ಉಬ್ಬರದಂತೆ ವ್ಯರ್ಥವಾಗಿಯೇ ಉದಯಿಸುವುದು. ಮತ್ತು ಮರುಭೂಮಿಯಲ್ಲಿ ಮರೀಚಿಕಾ ಭ್ರಾಂತಿಯಂತೆ ಅತ್ಯಂತಾ ಸತ್ಯವಾದರೂ ಮಹಾಮೋಹ ಜನಕವಾಗುವುದು. (ಜಡೇ= ಎಂಬಲ್ಲಿ ಲಡಗಳಿಗೆ ಅಭೇದದಿಂದ ಜಲೇ ಎಂಬರ್ಥವನ್ನೂ ಹೇಳಿದೆ.)

ಅಸಾರಾತ್ಮ ಸ್ವರೂಪಾಣಾ ಮನಾಲೋಕವತೀ ಸದಾ ।
ಅಂಧಾನಾ ಮುದ್ಧತಿರ್ಯೇಯಂ ಸಾದೃಶ್ಯಾಯೈವ ಜಾಯತೇ ॥ ೨೦ ॥

ಚಿದಾತ್ಮಾ ಭಗವಾನ್ಸರ್ವಂ ಸಾಕ್ಷಿತ್ವೇನ ಕರೋಮ್ಯಹಂ ।
ಹತೇಂದ್ರಿಯ ಗಣಾ ಯೂಯಂ ಕಿಂ ನಿರರ್ಥಕ ಮಾಕುಲಾಃ ॥ ೨೧ ॥

ಮಿಥ್ಯೈವ ಮೇ ವಿಮಾಂತಿ ನೀರೂಪಾ ನಯನಾದಯಃ ।
ಅಲಾತ ಚಕ್ರಪ್ರತಿಮಾಃ ಸರ್ಪರಜ್ಜು ಭ್ರಮೋಪಮಾಃ ॥ ೨೨ ॥

ತೇನಾತ್ಮನಾ ಬಹುಜ್ಞೇನ ನಿಜ್ಞಾತಾಶ್ಚಕ್ಷುರಾದಯಃ ।
ಮನಾಗಪಿ ನ ಸಂಬಂಧೋ ದ್ಯುಪಾತಾಲತಲಾದ್ರಿವತ್ ॥ ೨೩ ॥

---

೨೦. ಎಲೈ ಅವಿವೇಕಿ ಇಂದ್ರಿಯಗಳೇ, ನಿಸ್ಸಾರವಾದ ಮಿಥ್ಯಾಸ್ವರೂಪವುಳ್ಳ ನೀವು ಆತ್ಮಜ್ಞಾನಶೂನ್ಯರಾಗಿ ದುರಹಂಕಾರದಿಂದ ದುರ್ಮಾರ್ಗದಲ್ಲಿ ಸದಾ ಪ್ರವರ್ತಿಸುವುದು ಲೋಕದಲ್ಲಿ ಜನ್ಮಾಂಧರಾದ ನೂರಾರುಮಂದಿ ಕುರುಡರು ದುರ್ಮಾರ್ಗದಲ್ಲಿ ಓಡುತ್ತಾ ಬಾವಿಯಲ್ಲಿ ಬೀಳುವಿಕೆಗೆ ಸದೃಶವಾಗಿಯೇ ಪರಿಣಮಿಸುವುದು. (ಶತಂ ಅಂಧಾಃ ಕೂಪಂ ಪ್ರವಿಶಂತಿ ಎಂಬ ನ್ಯಾಯಕ್ಕೆ ಅನುಸಾರವಾಗಿರುವುದು.)

೨೧. ನಾನು ಚಿದ್ರೂಪನಾದ ಪರಮಾತ್ಮನು ಭಗವಂತನು. ನಾನು ಕೇವಲ ಸಾಕ್ಷಿಭಾವದಿಂದ ಅನಾಸಕ್ತನಾಗಿ ಸರ್ವವ್ಯವಹಾರವನ್ನೂ ಮಾಡುತ್ತಿರುವೆನು. ಎಲೈ ಹಾಳಾದ ಇಂದ್ರಿಯಗಣಗಳೇ, ನೀವು ಏಕೆ ಹೀಗೆ ವ್ಯರ್ಥವಾಗಿ ವ್ಯಾಕುಲರಾಗಿರುವಿರಿ ?

೨೨. ನನ್ನ ಚಕ್ಷುರಾದೀಂದ್ರಿಯ ಗಣಗಳು ವಸ್ತುತಃ ಸತ್ಯಸ್ವರೂಪಶೂನ್ಯವಾದವುಗಳು. ರಜ್ಜುವಿನಲ್ಲಿ ಭ್ರಾಂತಿಯಿಂದ ಕಲ್ಪಿತವಾದ ಸರ್ಪದಂತೆ ಕೇವಲ ಮಿಥ್ಯಾಭೂತವಾದವುಗಳು. ಮತ್ತು ಅಲಾತ ಚಕ್ರದಂತೆ ನಿರರ್ಥಕವಾದ ಭ್ರಮಣವುಳ್ಳವುಗಳೂ ಭಯಭ್ರಾಂತಿ ಜನಕಗಳೂ ಆಗಿವೆ. ಇವು ಮಿಥ್ಯೆಯಾಗಿಯೇ ಸುಮ್ಮನೆ ನಿರರ್ಥವಾಗಿ ಎಲ್ಲೆಲ್ಲಿಯೋ ಸರ್ವದಾ ಸುತ್ತುತ್ತಿರುವುವು.

೨೩. ಸರ್ವಾರ್ಥ ಪ್ರಕಾಶಕನಾಗಿರುವ (ಬಹುಜ್ಞನಾಗಿ) ಸರ್ವಸಾಕ್ಷಿಯಾದ ಯಾವ ಆತ್ಮನು ಈ ಚಕ್ಷುರಾದೀಂದ್ರಿಯಗಳನ್ನು ಸ್ಪಷ್ಟವಾಗಿ ತಿಳಿಯುವನೋ,

ಭೀತಃ ಪಾಂಥ ಇವಾಹಿಭ್ಯಃ ಪುಲ್ಕಸೇಭ್ಯ ಇವ ದ್ವಿಜಃ ।
ದೂರೇ ತಿಷ್ಠತಿ ಚಿನ್ಮಾತ್ರ ಮಿಂದ್ರಿಯೇಭ್ಯಸ್ತ್ವನಾಮಯಂ ॥ ೨೪ ॥

ಚಿತ್ಸತ್ತಾಮಾತ್ರಕೇಣಾಲಂ ಸಂಕ್ಷೋಭೋ ಭವತಾಂ ಮಿಥಃ ।
ತಿಷ್ಠತಿ ಸ್ವೈರಮಾದಿತ್ಯೇ ದಿನಕಾರ್ಯವತಾ ಮಿವ ॥ ೨೫ ॥

ಚಿತ್ತ ಚಾರಣ ಚಾರ್ವಾಕ ಚತುರ್ದಿಕ್ಕುಕ್ಷಿ ಭಿಕ್ಷುಕ ।
ಶ್ವೇವ ವ್ಯರ್ಥಮನರ್ಥಾಯ ವೈವಂ ವಿಹರ ಹೇ ಜಗತ್ ॥ ೨೬ ॥

ಅಂತಹ ಆತ್ಮನಿಗೂ ಈ ಚಕ್ಷುರಾದೀಂದ್ರಿಯಗಳಿಗೂ, ಆಕಾಶಕ್ಕೂ ಪಾತಾಳಲೋಕದೊಳಗಿರುವ ಪರ್ವತಕ್ಕೂ ಸ್ವಲ್ಪವೂ ಸಂಬಂಧವು ಇಲ್ಲವೇ ಇಲ್ಲ. [ಕೇನೋಪನಿಷತ್ತಿನ ಪ್ರಥಮ ಖಂಡದಲ್ಲಿ, ಆತ್ಮನು ಸರ್ವಾವಭಾಸಕನು ಎಂಬ ಅಂಶವು ಸ್ಪಷ್ಟವಾಗಿ ವರ್ಣಿತವಾಗಿರುವುದು.]

೨೪. ಪ್ರಯಾಣಿಕನು ಹಾವುಗಳನ್ನು ಕಂಡು ಹೆದರಿ ಬಹುದೂರ ಓಡಿಹೋಗಿ ನಿಲ್ಲುವಂತೆಯೂ, ಬ್ರಾಹ್ಮಣನು ಚಂಡಾಲರನ್ನು ಕಂಡು ಹೆದರಿ ಓಡಿಹೋಗಿ ದೂರದಲ್ಲಿ ನಿಲ್ಲುವಂತೆಯೂ, ಕೇವಲ ಚಿದ್ರೂಪನಾದ ಆತ್ಮನು ಇಂದ್ರಿಯಗಳಿಗೆ ಸಿಕ್ಕದೆ ಬಹಳದೂರದಲ್ಲಿ ಇರುವನು. ಆತ್ಮನು ಸ್ವಭಾವತಃ ನಿರತಿಶಯಾನಂದಸ್ವರೂಪನು. ಅದು ಕಾರಣವೇ ಸರ್ವದಾ ಪ್ರಾಪಂಚಿಕಗಳಾದ ಸಕಲೋಪದ್ರವಗಳಿಂದಲೂ ಅಸಂಸ್ಪೃಷ್ಟನಾಗಿಯೇ ಇರುವನು.

೨೫. ಸೂರ್ಯನು ತಾನೇ ತಾನಾಗಿ ಯಥೇಚ್ಛವಾಗಿ ಗಗನಮಂಡಲದಲ್ಲಿ ಪ್ರಕಾಶಿಸುತ್ತಿರಲು, ಲೋಕದಲ್ಲಿ ಜನಗಳು ಹಗಲು ಹೊತ್ತಿನಲ್ಲಿ ಮಾಡಬೇಕಾದ ಶ್ರಾದ್ಧಕೃಷ್ಯಾದಿ ವ್ಯಾಪಾರಗಳಲ್ಲಿ ಬಹುಸಂಭ್ರಮದಿಂದ ಹೇಗೆ ತೊಡಗುವರೋ, ಹಾಗೆಯೇ ಎಲೈ ಅಸದಿಂದ್ರಿಯಗಳೇ, ಚಿದೇಕರಸನಾದ ಆತ್ಮನು ಸರ್ವದಾ ಸರ್ವಾವಭಾಸಕನಾಗಿದ್ದು ಕೊಂಡಿರುವುದರಿಂದ ಮಾತ್ರವೇ ಜಡಭೂತಗಳಾದ ನಿಮಗೂ ಹೀಗೆ ಪರಸ್ಪರ ಸಂಕ್ಷೋಭವು ವಿಶೇಷವಾಗಿರುವುದು.

೨೬. ಎಲೈ ಚಿತ್ತವೇ, ಇಂದ್ರಿಯಗಳೆಲ್ಲಾ ಬಹಿರ್ಮುಖವಾಗಿ ಪ್ರಚಾರಗೊಳ್ಳುವುದಕ್ಕೆ ಕಾರಣವಾಗಿರುವ ಚಾರಣವೇ, ದೇಹಾತ್ಮಾಭಿಮಾನಿಯಾಗಿರುವ

ಅಹಂ ಚಿದ್ವದಿತಿ ವ್ಯರ್ಥಮಸತ್ಯಾ ತವ ವಾಸನಾ ।
ಅತ್ಯಂತ ಭಿನ್ನಯೋರೈಕ್ಯಂ ನಾಸ್ತಿ ಚಿನ್ಮನಸೋಃ ಶಠ ॥ ೨೭ ॥

ಜೀವಾಮ್ಯೇವಾಹ ಮಿತ್ಯೇಷಾ ತವಾಹಂಕಾರ ದುರ್ಮತಿಃ ।
ಮಿಥ್ಯೈವ ಜಾತಾ ದುಃಖಾಯ ನ ಸತ್ಯಾ ಸತ್ಯವರ್ಜಿತಾ ॥ ೨೮ ॥

ಚಾರ್ವಾಕವೇ. ನಾಲ್ಕು ದಿಕ್ಕುಗಳಲ್ಲಿಯೂ ಹೊಟ್ಟೆತುಂಬಿಸಿಕೊಳ್ಳುವ ಸಲುವಾಗಿ ಭಿಕ್ಷೆಬೇಡತಕ್ಕ ಯಾಚಕನೇ, ನೀನು ಹೀಗೆ ಇನ್ನು ಮೇಲೆಯಾದರೂ ಜಗತ್ತಿನಲ್ಲೆಲ್ಲಾ ನಾಯಿಯಂತೆ ವ್ಯರ್ಥವಾಗಿ ಅಲೆಯದೆ ಇರು. ಹೀಗೆ ಅಲೆಯುತ್ತಲೇ ಇದ್ದರೆ ನಿನಗೆ ಎಂದಿಗೂ ಅನರ್ಥವು ತಪ್ಪುವುದಿಲ್ಲ.

೨೭. ಎಲೈ ಮನಸ್ಸೇ, “ನಾನು ಚಿದೇಕರಸನಾದ ಆತ್ಮನಂತೆಯೇ ಚೇತನವು.” ಎಂಬೀ ನಿನ್ನ ಭ್ರಾಂತಿಯು (ವಾಸನೆಯು) ಕೇವಲ ವ್ಯರ್ಥವಾದುದು. ಅದು ಅತ್ಯಂತಾಸತ್ಯವಾದುದು, ಎಲೈಶಠವಾದ ಮನಸ್ಸೇ, ತಮಃ ಪ್ರಕಾಶ ಗಳಂತೆ ಅತ್ಯಂತ ವಿರುದ್ಧ ಸ್ವಭಾವವುಳ್ಳವುಗಳಾಗಿ ವಿಭಿನ್ನವಾಗಿರುವ, ಜಡವಾದ ನಿನಗೂ ಚಿದೇಕರಸನಾದ ನನಗೂ ಐಕ್ಯವೆಂಬುದು ಸರ್ವಥಾ ಅಸಂಭವವು. ಇಲ್ಲವೇ ಇಲ್ಲ.

೨೮. ಎಲೈ ಮನಸ್ಸೇ, “ಅಹಂಜೀವಾಮಿ ಏವ” (ನಾನು ಬದುಕಿಯೇ ಇರುವೆನು) ಹೀಗೆಂಬ ನಿನ್ನ ಅಹಂಕಾರರೂಪ ದುರ್ಬುದ್ಧಿಯೂ ಕೂಡ ಕೇವಲ ಮಿಥ್ಯಾರೂಪವಾಗಿಯೇ ಉದಯಿಸಿರುವುದು. ಇದು ನಿನ್ನ ಸಾರ್ವಕಾಲಿಕವಾದ ದುಃಖಕ್ಕೆ ಮಾತ್ರವೇ ಕಾರಣವಾಗಿರುವುದು. ಸುಷುಪ್ತಿಯಲ್ಲಿ ಅಹಂಕಾರವಿಲ್ಲ ದಿದ್ದರೂ ಕೂಡ ಜೀವನವು ಕಾಣುವುದರಿಂದ, ಅಹಂಕಾರಾಧೀನವಾದ ಜೀವನವು ಎಂದಿಗೂ ಸತ್ಯವಲ್ಲವು. ಮತ್ತು ನಿನ್ನ ಜೀವನವು ಸತ್ಯ (ಪರಮಾತ್ಮ)- ವರ್ಜಿತ ವಾಗಿರುವ ಕಾರಣವೂ ಅದು ಮಿಥ್ಯೆಯೇ, ಸಂದೇಹವಿಲ್ಲ.

[ನ ಪ್ರಾಣೇನ ನ ಅಪಾನೇನ ಮರ್ತ್ಯೋ ಜೀವತಿ ಕಶ್ಚನ, ಇತರೇಣತು ಜೀವಂತಿ ಯಸ್ಮಿನ್ನೇತಾವುಪಾಶ್ರಿತೌ]

ಅಹಂಕಾರೋದಯೇ ಸೋಽಸ್ಮೀತ್ಯೇತಾಂ ಸಂರಬ್ಧತಾಂ ತ್ಯಜ।
ನ ಕಿಂಚಿದಪಿ ಮೂರ್ಖ ತ್ವಂ ಕಿಂ ವ್ಯರ್ಥಂ ತರಲಾಯಸೇ ॥ ೨೯ ॥

ಸಂವಿಚ್ಚ ಚಿದನಾದ್ಯಂತಾ ಸಂವಿದೋಽನ್ಯನ್ನ ವಿದ್ಯತೇ ।
ದೇಹೇಽಸ್ಮಿಂಸ್ತನ್ಮಹಾಮೂರ್ಖ ಕಿಂ ತ್ವಂ ಸ್ಯಾಚ್ಚಿತ್ತನಾಮಕಂ ॥ ೩೦ ॥

ವಿಷಪರ್ಯವಸಾನೇಯಂ ರಸಾಯನ ವದುತ್ಥಿತಾ ।
ಭೋಕ್ತೃತಾ ಕರ್ತೃತಾಶಂಕಾ ಬತ ಚಿತ್ತ ಮುಧೈವ ಹಿ ॥ ೩೧ ॥

ಮೋಪಹಾಸಪದಂ ಗಚ್ಛ ಮೂರ್ಖೇಂದ್ರಿಯ ಗಣಾಶ್ರಯಂ ।
ನ ಕರ್ತಾ ತ್ವಂ ನ ಭೋಕ್ತಾ ತ್ವಂ ಜಡೋಽಸ್ಯನ್ಯೇನ ಬೋಧ್ಯಸೇ ॥ ೩೨ ॥

---

೨೯. ಎಲೈ ಮೂರ್ಖಮನಸ್ಸೇ, ನಿನಗೆ ಅಹಂಕಾರವು ಉದಯಿಸಲಾಗಿ, "ನಾನು ಕಾರ್ಯ ಕಾರಣ ಸಂಘಾತಾತ್ಮನಾಗಿರುವೆನು" ಎಂಬ ಸಂರಂಭವನ್ನು (ಅಭಿಮಾನವನ್ನು) ನೀನು ಬಿಟ್ಟುಬಿಡು. ಏಕೆಂದರೆ, ನೀನು ಯಾವುದೊಂದು ವಾಸ್ತವವಾದ ವಸ್ತುವೂ ಆಗಿಲ್ಲ, ಏತಕ್ಕೋಸ್ಕರ ಹೀಗೆ ವ್ಯರ್ಥವಾಗಿ ಚಪಲನಾಗಿ, ಒದ್ದಾಡುತ್ತಿರುವೆ.

೩೦. ಎಲೈ ಮಹಾಮೂರ್ಖ ಮನಸ್ಸೇ, ಸಂವಿತ್ ಎಂಬುದೇ ಚೈತನ್ಯವು. ಅದು (ಅನಾದ್ಯಂತವು.) ಆದ್ಯಂತರಹಿತವಾದುದು. ಸಂವಿತ್ತು (ಚೈತನ್ಯ) ಗಿಂತ ಬೇರೆಯಾದುದು ಯಾವುದೊಂದೂ ಈ ಪ್ರಪಂಚದಲ್ಲಿ ವಸ್ತುತಃ ಇಲ್ಲವೇ ಇಲ್ಲ. ಅದುಕಾರಣ, ಚಿತ್ತವೆಂಬ ಹೆಸರುಳ್ಳ ನೀನು ಈ ದೇಹದೊಳಗೆ ಯಾವುದಾಗಿರುವೆ?

೩೧. ಎಲೈ ಚಿತ್ತವೇ, ಈ ಭೋಕ್ತೃತ್ವ ಕರ್ತೃತ್ವರೂಪ ಮಿಥ್ಯಾಭ್ರಾಂತಿಯು ಭೋಗಕಾಲದಲ್ಲಿ ರಸಾಯನದಂತೆ ಸುಖಕರವಾಗಿಯೂ, ಪರಿಣಾಮದಲ್ಲಿ ವಿಷದಂತೆ ಅಪಾಯಕರವಾಗಿ ಪರ್ಯವಸಾನವಾಗುವುದಾಗಿಯೂ ಇರುವುದು. ಇಂತಹ ಅಭಿಮಾನವು. ಅಯ್ಯೋ ನಿನಗೇಕೆ ಕೇವಲ ವ್ಯರ್ಥವಾಗಿ ಉದಯಿಸಿರುವುದು ?

೩೨. ಎಲೈ ಮೂರ್ಖಚಿತ್ತವೇ, ನೀನು ಈ ಹಾಳು ಇಂದ್ರಿಯಗಳನ್ನು ಸುಮ್ಮನೆ ಆಶ್ರಯಿಸಿಕೊಂಡು, ಪರಿಹಾಸಕ್ಕೆ ಪಾತ್ರನಾಗಬೇಡ. ನೀನು ಅತ್ಯಂತ ಜಡವಾದುದಾಗಿರುವೆ. ಅದುಕಾರಣ ನೀನು ಕರ್ತೃವೂ ಅಲ್ಲ, ಭೋಕ್ತೃವೂ ಅಲ್ಲ. ಸಾಕ್ಷಿಯಾದ ಚಿತ್ತು ಜಡವಾದ ನಿನಗೆ ಚೈತನ್ಯವನ್ನುಂಟುಮಾಡಬೇಕಾಗಿರುವುದು.

ಕಸ್ತ್ವಂ ಭವಸಿ ಭೋಗಾನಾಂ ಕೇ ವಾ ಭೋಗಾ ಭವಂತಿ ತೇ ।
ಜಡಸ್ಯಾತ್ಮೈವ ತೇ ನಾಸ್ತಿ ಬಂಧು ಮಿತ್ರಾದಿ ತತ್ಕುತಃ ॥ ೩೩ ॥

ಯಜ್ಜಡಂ ತದ್ಧಿ ನಾಸ್ತ್ಯೇವ ಸದೇವಾಸತ್ತಯಾನ್ವಿತಂ ।
ಜ್ಞತ್ವ ಕರ್ತೃತ್ವ ಭೋಕ್ತೃತ್ವ ಮನ್ಯತ್ವಾನಾಮಸಂಭವಾತ್ ॥ ೩೪ ॥

ಪ್ರತ್ಯಕ್ಚೇತನರೂಪಶ್ಚೇತ್ತ್ವಂ ತದಾತ್ಮೈವ ತೇ ವಪುಃ ।
ಭಾವಾಭಾವಮಯೀ ಚಿತ್ತಸತ್ತಾ ತೇ ಕೇವ ದುಃಖದಾ ॥ ೩೫ ॥

---

೩೩. ಎಲೈ ಚಿತ್ತವೇ, ಅತ್ಯಂತ ಜಡವಾದ ನಿನಗೆ ಆತ್ಮವೇ ಇಲ್ಲ (ವಸ್ತುತಃ ಚೈತನ್ಯವೇ ಇಲ್ಲ) ಇನ್ನು ನಿನಗೆ ಬಂಧು ಮಿತ್ರಾದಿಗಳು ಎಲ್ಲಿಂದ ಹೇಗೆ ಬರುವರು? ಅದುಕಾರಣ, ನೀನು ಭೋಗಗಳಿಗೆ ಯಾವುದು ಆಗಿದ್ದಿ? ಅಂದರೆ ನಿನಗೂ ಭೋಗಗಳಿಗೂ ಯಾವವಿಧವಾದ ಬಂಧುತ್ವವಿರುವುದು? ಅಥವಾ ಭೋಗಗಳು ನಿನಗೆ ಯಾವರೀತಿಯಲ್ಲಿ ಸಂಬಂಧವನ್ನು ಪಡೆದಿರುವುವು ? (ಜಡವಾದ ಚಿತ್ತಕ್ಕೆ ಭೋಗಾನುಭವ ಶಕ್ತಿಯೇ ಇಲ್ಲ. ಮತ್ತು ಚಿತ್ತವು ಮಿಥ್ಯೆಯು, ಹೀಗಿರುವಾಗ ಅದರ ಭೋಗಾಶೆಯು ಅತ್ಯಂತ ವ್ಯರ್ಥವೇ ಎಂದರ್ಥ.)

೩೪. ಪ್ರಪಂಚದಲ್ಲಿ ಯಾವುದು ಜಡವೆನ್ನಿಸಿರುವುದೋ, ಅದು ಸರ್ವಥಾ ಇಲ್ಲವೇ ಇಲ್ಲ. ಅಂದರೆ ಸುತರಾಂ ಸತ್ತಾಶೂನ್ಯವಾದುದು. ಅತ್ಯಂತಾಸತ್ತಾದ ಈ ಚಿತ್ತವು. ಸದ್ರೂಪನಾದ ಆತ್ಮನಿಂದ ಸತ್ತೆಯನ್ನುಪಡೆದು, ಅದರ ವಶದಿಂದ ಸತ್ಯವಸ್ತುವಿನಂತೆ ಇರುವುದಾಗಿ ಭಾಸಿಸುವುದೇ. ಸ್ಫಟಿಕಮಣಿಯಲ್ಲಿ ಅದರ ಹತ್ತಿರ ದಲ್ಲಿರುವ ಕೆಂಪುದಾಸವಾಳ ಮುಂತಾದ ಕೆಂಪುವಸ್ತುಗಳ ಸಂಪರ್ಕದಿಂದ ತೋರುವ ಕೆಂಪುಬಣ್ಣದಂತೆ. ಸ್ವತಃ ಅಸತ್ತೆಯಿಂದ ಕೂಡಿದುದೇ ಆಗಿದೆ ಏಕೆಂದರೆ ಜ್ಞತ್ವ, ಕರ್ತೃತ್ವ, ಭೋಕ್ತೃತ್ವ, ಪೂರ್ವಾಪರಾನು ಸಂಧಾನ ಮುಂತಾದವುಗಳು ಚೈತನ್ಯ ವಿಲ್ಲದಿದ್ದರೆ ಸಂಭವಿಸುವುದಿಲ್ಲ.

(ಮನ್ಯತ್ವ= ಪೂರ್ವಾಪರಾನುಸಂಧಾನ)

೩೫. ಎಲೈ ಚಿತ್ತವೇ, ಹಾಗಲ್ಲದೆ ನೀನು "ನಾನು ಪ್ರತ್ಯಕ್ ಚೈತನ್ಯ ರೂಪನೇ" ಎಂದು ತಿಳಿದುಕೊಳ್ಳುವ ಪಕ್ಷದಲ್ಲಿ ಆಗ ಆತ್ಮವೇ ನಿನ್ನ ಶರೀರ ವಾದಂತಾಯಿತು. ಹೀಗೆ ನಿನಗೆ ಸರ್ವದಾ ನಿರ್ವಿಕಲ್ಪವಾದ ಆತ್ಮಸ್ಥಿತಿಯು ಯುಕ್ತವಾದುದೇ ಹೊರತು, ಅತ್ಯಂತ ದುಃಖಪ್ರದವಾದ ಪ್ರಾಪಂಚಿಕ ಭಾವಾ

ಯಥಾ ಕರ್ತೃತ್ವಭೋಕ್ತೃತ್ವೇ ಮಿಥ್ಯೈವಾಧಿಗತೇ ತ್ವಯಾ ।
ಮಯಾ ತೇ ಹಿ ಪ್ರಮಾಜ್ಯೇತೇ ಶೃಣು ಯುಕ್ತ್ಯಾ ಕಥಂ ಶನೈಃ ॥ ೩೬ ॥

ಸ್ವಯಂ ತಾವ್ದವಾನೇಷ ಜಡೋ ನಾಸ್ತ್ಯತ್ರ ಸಂಶಯಃ ।
ಜಡಸ್ಯ ಕೀದೃಕ್ಕರ್ತೃತ್ವಂ ನೃತ್ಯಂತೀಹ ಕಥಂ ಶಿಲಾಃ ॥ ೩೭ ॥

ಉಪಜೀವ ಚಿರಂ ತಸ್ಮಾಚ್ಛುದ್ಧಂ ತದ್ಭಾಗವೈಶ್ವರಂ ।
ಜೀವಸೀಚ್ಛಸಿ ಹಂಸಿ ತ್ವಂ ವೃಥಾ ಯಾಸಿ ವಿವಲ್ಗಸಿ ॥ ೩೮ ॥

ಭಾವ ವಿಕಲ್ಪಮಯವಾದ ಕರ್ತೃತ್ವ ಭೋಕ್ತೃತ್ವ ಸ್ಥಿತಿಯು ಎಂದಿಗೂ ಯುಕ್ತವಾದುದಲ್ಲ. ಮತ್ತು ಎಲೈ ಚಿತ್ತವೇ. ನೀನು ಸರ್ವವಿಕಲ್ಪಗಳನ್ನೂ ಪರಿತ್ಯಾಗ ಮಾಡಿಬಿಟ್ಟರೆ, ಆಗ ನಿನ್ನ ಚಿತ್ತತ್ವವೇ (ಸ್ವರೂಪವೇ) ಇಲ್ಲದೆ ಹೋಗಿ ನೀನೇ ನಾಶಹೊಂದಿಬಿಡುವೆ.

೩೬. ಎಲೈ ಚಿತ್ತವೇ, ನೀನು ಮಿಥ್ಯೆಯಾಗಿಯೇ, ಭ್ರಾಂತಿಯಿಂದ ಕರ್ತೃತ್ವ ಭೋಕ್ತೃತ್ವಗಳನ್ನು ಹೇಗೆ ಕಲ್ಪಿಸಿಕೊಂಡು ಆರೋಪಿಸಿ ಕೊಂಡಿರುವೆಯೋ, ಹಾಗೆಯೇ ನಾನು ಅವುಗಳನ್ನು ಮೆಲ್ಲಗೆ ಯುಕ್ತಿಯಿಂದ ತಪ್ಪಿಸಿ ಪರಿಹಾರಮಾಡಿ ಬಿಡುವೆನು. ಈಗ, ಆ ಪ್ರಕಾರವನ್ನು ನೀನು ಕೇಳು.

೩೭. ಎಲೈ ಚಿತ್ತವೇ, ಈ ನೀನಾದರೋ ವಾಸ್ತವವಾಗಿಯೇ ಸ್ವಭಾವತಃ ಅತ್ಯಂತ ಜಡವು. ಈ ವಿಷಯದಲ್ಲಿ ಸಂಶಯವೇ ಇಲ್ಲ, ಜಡವಾಗಿರುವ ವಸ್ತುವಿಗೆ ಕರ್ತೃತ್ವವೆಂತಹುದು ? ಲೋಕದಲ್ಲಿ ಜಡವಾದ ಕಲ್ಲುಬೊಂಬೆಗಳು ಹೇಗ ಕುಣಿಯ ಬಲ್ಲವು ?

೩೮ ಪ್ರಪಂಚದಲ್ಲಿ ಅಚೇತನಗಳಾದ ಮರಗೊಂಬೆಗಳು, ಶಿಲಾವಿಗ್ರಹಗಳು ಮುಂತಾದ ಜಡವಸ್ತುಗಳಿಗೆ ಸ್ವತಃ ನರ್ತನಾದಿ ವ್ಯವಹಾರವು ಇಲ್ಲವೇ ಇಲ್ಲ. ಒಂದುವೇಳೆ ಕಂಡರೂ, ಆ ವ್ಯವಹಾರವು ಒಂದು ಚೇತನದ ಶಕ್ತಿಯನ್ನು ಉಪಜೀವಿಸಿಕೊಂಡು ನಡೆಯುವುದೇ ಹೊರತು, ಸ್ವತಂತ್ರವಾಗಿ ಜಡವಸ್ತುಗಳಿಗೆ ವ್ಯವಹರಿಸುವ ಶಕ್ತಿಯು ಇಲ್ಲ ಹೀಗೆ ಎಲೈ ಚಿತ್ತವೇ, ನೀನೂಕೂಡ; ಅವುಗಳಂತೆ ಶುದ್ಧವಾದ ಆ ಪರಮೇಶ್ವರನ ಚಿದಾಭಾಸರೂಪ ಅಂಶವನ್ನು (ಭಾಗವನ್ನು) ಆಶ್ರಯಿಸಿಕೊಂಡು ವ್ಯವಹರಿಸುವೆಯಾದರೆ, ಚಿರಕಾಲ ಅದನ್ನು ಉಪಜೀವಿಸಿಕೊಂಡಿರು.

ಕ್ರಿಯತೇ ಯಸ್ತು ಯಚ್ಛಕ್ತ್ಯಾ ತತ್ತೇನೈವ ಕೃತಂ ಭವೇತ್ ।
ಲುನಾತಿ ದಾತ್ರಂ ಪುಂಶಕ್ತ್ಯಾ ಲಾವಕಃ ಪ್ರೋಚ್ಯತೇ ಪುಮಾನ್ ॥ ೩೯ ॥

ಹನ್ಯತೇ ಯಸ್ತು ಯಚ್ಛಕ್ತ್ಯಾ ಸ ತೇನೈವ ಹತೋ ಭವೇತ್ ।
ನಹಂತಿ ಖಡ್ಗಃ ಪುಂಶಕ್ತ್ಯಾ ಹಂತೈವ ಪ್ರೋಚ್ಯತೇ ಪುಮಾನ್ ॥ ೪೦ ॥

ಅಂತು ಜಡವಾದ ಪ್ರತಿಮೆಯು ಮಾಡುವ ನರ್ತನಾದಿ ವ್ಯವಹಾರಗಳ ಫಲವನ್ನು ಅನುಭವಿಸುವವನು ಬೇರೊಬ್ಬ ಚೇತನನೇ ಹೊರತು ಪ್ರತಿಮೆಯು ಅಲ್ಲ. ಹಾಗೆಯೇ ಜಡವಾಗಿರುವ ನಿನ್ನ ಜೀವನಾದಿ ವ್ಯವಹಾರಫಲಭೋಕ್ತೃವೂ ಚಿದಾತ್ಮನೇ ಹೊರತು ಸರ್ವಥಾ ನೀನಲ್ಲವೇ ಅಲ್ಲವೆಂದು ಸ್ಪಷ್ಟವಾಯಿತು. ಹೀಗಿದ್ದರೂ ಕೂಡ ನೀನು ಏಕೆ ಹೀಗೆ ವ್ಯರ್ಥವಾಗಿಯೇ ಜೀವಿಸಿರುವೆ ? ಫಲಗಳನ್ನು ಅಪೇಕ್ಷಿಸುವೆ ? ಇತರರನ್ನು ಹಿಂಸಿಸುವೆ ? ಎಲ್ಲೆಲ್ಲಿಯೋ ಹೋಗಿ ತಿರುಗಾಡುವೆ ? ಮತ್ತು ನರ್ತನವಮಾಡುವೆ ?

೩೯. ಪ್ರಪಂಚದಲ್ಲಿ ಯಾವಕೆಲಸವಾದರೂ ಆಗಲಿ, ಅದು ಯಾವುದರ ಶಕ್ತಿಯಿಂದ ನೆರವೇರಿಸಲ್ಪಡುವುದೋ, ಅದು ಆ ಶಕ್ತಿಯುಳ್ಳ ಚೇತನದಿಂದಲೇ ಮಾಡಲ್ಪಡತಕ್ಕದಾಗುವುದು. ಒಂದು ಕೊಡಲಿಯು ಮರವನ್ನು ಕತ್ತರಿಸುವುದಾದರೂ, ಅದು ಅಚೇತನವಾದ ಕಾರಣ ಸ್ವತಃ ಮರವನ್ನು ಕತ್ತರಿಸುವ ಶಕ್ತಿಯುಳ್ಳದ್ದಾಗಿಲ್ಲ. ಅದು ಮರವನ್ನು ಕತ್ತರಿಸುವ ವ್ಯವಹಾರದಲ್ಲಿ, ಚೇತನನಾದ ಒಬ್ಬ ಪುರುಷನ ಸಾಹಾಯ್ಯವನ್ನು ಅಪೇಕ್ಷಿಸುವುದು, ಪುರುಷನ ಶಕ್ತಿಯಿಂದಲೇ ಕೊಡಲಿಯು ಮರವನ್ನು ಛೇದಿಸುವಕಾರಣ, ಛೇದನ ಕರ್ತೃವು ಚೇತನನಾದ ಪುರುಷನೇ ಹೊರತು ಕೊಡಲಿಯು ಅಲ್ಲವೇ ಅಲ್ಲ. ಕೊಡಲಿಯು ಒಂದು ಕರಣವು ಅಷ್ಟೇ ಕರ್ತೃವಲ್ಲ.

೪೦. ಹೀಗೆಯೇ ಯಾವನಾದರೂ ಒಬ್ಬ ಮನುಷ್ಯನು ಕೊಲ್ಲಲ್ಪಟ್ಟರೆ ಅವನು ಯಾರ ಶಕ್ತಿಯಿಂದ ಅಥವಾ ಇಚ್ಛೆಯಿಂದ ಕೊಲ್ಲಲ್ಪಡುವನೋ ಅವನಿಂದಲೇ ಆ ಮನುಷ್ಯನು ಕೊಲ್ಲಲ್ಪಟ್ಟವನಾಗುವನು. ದೇವದತ್ತನ ಶಕ್ತಿಯಿಂದ ಒಂದು ಖಡ್ಗವು ಯಜ್ಞದತ್ತನನ್ನು ಕೊಲ್ಲುವುದು ಎಂದು ಭಾವಿಸಿದರೆ ಯಜ್ಞದತ್ತನನ್ನು ಕೊಲ್ಲುವ ವ್ಯಾಪಾರದಲ್ಲಿ ದೇವದತ್ತನು ಕರ್ತೃವಾಗುವನೇ ಹೊರತು ಜಡವಾದ ಖಡ್ಗವು ಎಂದಿಗೂ ಕರ್ತೃವಾಗುವುದಿಲ್ಲ. ಮತ್ತು ಲೋಕದಲ್ಲಿ ಧರ್ಮ

ಪೀಯತೇ ಯಸ್ತು ಯಚ್ಛಕ್ತ್ಯಾ ಪೀತಂ ತೇನೈವ ತದ್ಭವೇತ್ ।
ಪಾತ್ರೇಣ ಪೀಯತೇ ಪಾನಂ ಪಾತಾ ಯಸ್ತೂಚ್ಯತೇ ನರಃ　　|| ೮೧ ||

ಪ್ರಕೃತ್ಯೈವಾಸಿ ಸುಜಡಃ ಸಮಸ್ತಜ್ಞೇನ ಬೋಧ್ಯಸೇ ।
ತೇನಾತ್ಮೈವಾತ್ಮನಾತ್ಮಾನಂ ಚಿನೋತೀದಂ ಹಿ ನೋ ಭವತ್　　|| ೮೨ ||

ಪ್ರವರ್ತಕರು ಹನನ ಕ್ರಿಯಾಕರ್ತೃವಾಗಿರುವ ದೇವದತ್ತನನ್ನು ಅವನ ಅಪರಾಧಕ್ಕೆ ತಕ್ಕಂತೇ ಶಿಕ್ಷಿಸುವರೇ ಹೊರತು ಖಡ್ಗವನ್ನು ಶಿಕ್ಷಿಸುವುದಿಲ್ಲವಷ್ಟೇ,

೮೧. ಇದರಂತೆಯೇ ಹಾಲು, ನೀರು ಮುಂತಾದ ಪೇಯವಸ್ತುವು ಯಾವ ಚೇತನನಾದ ದೇಹಿಯ ಶಕ್ತಿಯಿಂದ ಪಾನ ಮಾಡಲ್ಪಡುವುದೋ, ಅದು ಆ ದೇಹಿಯಿಂದ ಪಾನಮಾಡಲ್ಪಡುವುದೇ ಹೊರತು, ಬೇರೆ ಯಾವುದೂ ಪಾನಕ್ರಿಯಾ ಕರ್ತೃವೂ ಆಗುವುದಿಲ್ಲ. ಪಾನಕ್ರಿಯಾಜನ್ಯವಾದ ಪಿಪಾಸಾ ಶಮನಾದಿ ಫಲ ಭೋಕ್ತೃವೂ ಆಗುವುದಿಲ್ಲ. ಜಲಾದಿ ಪೇಯ ವಸ್ತುವನ್ನು ಒಂದು ಪಾತ್ರೆಯನ್ನು ಉಪಕರಣವಾಗಿಟ್ಟುಕೊಂಡು, ಆ ಪಾತ್ರೆಯಿಂದ ಪಾನಮಾಡಿದರೂ ಕೂಡ ಪಾನ ಕ್ರಿಯಾ ಶಕ್ತಿವಂತನಾದ ಒಬ್ಬ ದೇಹಿಯು (ಚೇತನನು) ಪಾತೃ (ಪಾನಮಾಡುವವನು) ವೆಂದೆನ್ನಿಸುವನೇ ಹೊರತು ಆ ಪಾತ್ರೆಯು ಪಾನಕರ್ತೃವೆಂದು ಎಂದಿಗೂ ವ್ಯವಹರಿಸಲ್ಪಡುವುದಿಲ್ಲ.

೮೨. ಎಲೈ ಚಿತ್ತವೇ, ನೀನು ಸ್ವಭಾವದಿಂದಲೇ ಸರ್ವಥಾ ಮಹಾ ಜಡವಾಗಿರುವೆ. ಸರ್ವಜ್ಞನಾದ ಚಿದಾತ್ಮನಿಂದಲೇ ನೀನು ಬೋಧಿಸಲ್ಪಡುವದಾಗಿರುವೆ. ಹೀಗಿರುವ ಕಾರಣ, ಆತ್ಮನೇ ಸ್ವಯಂ ತನ್ನನ್ನು ತನ್ನಿಂದಲೇ ಸ್ವಪ್ನದಲ್ಲಿ ಹೇಗೋ ಹಾಗೆ ಈ ಜಾಗ್ರತ್ತಿನಲ್ಲಿಯೂ, ಭೋಕ್ತೃ ಭೋಗ್ಯ ಕರಣಾದಿ ಭಾವದಿಂದ ಈ ವ್ಯವಹಾರವನ್ನೆಲ್ಲ ಕಲ್ಪಿಸಿಕೊಳ್ಳುವನು. ನೀನು ಯಾವುದೊಂದನ್ನೂ ಮಾಡತಕ್ಕ ಶಕ್ತಿಯುಳ್ಳದ್ದಾಗಿಲ್ಲ.

[ಕಲ್ಪಯತ್ಯಾತ್ಮನಾ ತ್ಮಾನಂ (ಕಲ್ಪಯತಿ ಆತ್ಮನಾ ಆತ್ಮಾನಂ) ಆತ್ಮಾದೇವಃ ಸ್ವಮಾಯಯಾ । ಸಏವ ಬುಧ್ಯತೇ ಭೇದಾನ್ ಇತಿ ವೇದಾಂತ ನಿಶ್ಚಯಃ ॥ ಮಾಂಡೂಕ್ಯಕಾರಿಕಾ. ವೈತಥ್ಯ. ೧೨.]

ಅನಾರತಂ ಬೋಧಯತಿ ತ್ವಾಮಾತ್ಮಾ ಪರಮೇಶ್ವರಃ ।
ಬೋಧನೀಯಾ ಬುಧೈರ್ಮೂರ್ಢಾಃ ಕಿಲವೃತ್ತಿ ಶತೈರಪಿ ॥ ೪೬ ॥

ಆತ್ಮಸತ್ತೈವ ಬೋಧೈಕರೂಪಿಣೀ ಸ್ಫುರತೀಹ ಹಿ ।
ತಯೈವ ಚಿತ್ತ ಶಬ್ದಾರ್ಥಾವಂಗೀಕೃತ್ಯ ತ್ವಯಾ ಸ್ಥಿತಂ ॥ ೪೪ ॥

ಏವಂ ಚಿತ್ತ ತ್ವಮಜ್ಞಾನಾದಾತ್ಮ ಶಕ್ತೇರುಪಾಗತಂ ।
ಜ್ಞಾನೇ ತ್ವಯಾ ವಿಗಲಿತಂ ತೀವ್ರೇ ಹಿಮಮಿವಾರ್ಥತಃ ॥ ೪೫ ॥

---

೪೩. ಪರಮೇಶ್ವರನಾದ ಆತ್ಮನೇ (ಜಡವಾದ) ನಿನ್ನನ್ನು ನಿರಂತರವೂ ಬೋಧಗೊಳಿಸುತ್ತಿರುವನು. ಇದು ಯುಕ್ತವೇ ಸರಿ. ಪ್ರಾಜ್ಞರು ಲೋಕದಲ್ಲಿ ಮೂಢ ಜಂತುಗಳನ್ನು ಹೇಗಾದರೂ ಕಷ್ಟಪಟ್ಟು ನೂರಾರು ಸಲವಾದರೂ ಬೋಧೆ ಮಾಡುತ್ತಲೇ (ಜ್ಞಾನೋದಯವಾಗುವ ವರೆಗೂ) ಇರಬೇಕು.

೪೪. ಎಲೈ ಚಿತ್ತವೇ, ಈ ಪ್ರಪಂಚದಲ್ಲಿ ಜ್ಞಾನ ಮಾತ್ರ ಸ್ವರೂಪವಾಗಿರುವ ಆತ್ಮಸತ್ತೆಯೊಂದೇ ಸರ್ವದಾ ಅಬಾಧಿತವಾಗಿ ಸ್ಫುರಿಸತಕ್ಕುದು. ನೀನು ಆ ಆತ್ಮ ಸತ್ತೆಯ ಪ್ರಭಾವದಿಂದಲೇ ತದಧೀನವಾಗಿ, ನಾಮ ರೂಪಗಳನ್ನು ಸ್ವೀಕರಿಸಿ ಸ್ಥಿತಿ ಯನ್ನು ಹೊಂದಿರುವೆ.

೪೫. ಎಲೈ ಚಿತ್ತವೇ, ಹೀಗೆ, ನೀನು ಆತ್ಮಸತ್ತಾ ರೂಪವಾದ ಚೈತನ್ಯ ಶಕ್ತಿಯಿಂದಲೇ ಸ್ಫುರಿಸುತ್ತಾ ಅಜ್ಞಾನದಿಂದ ಮಿಥ್ಯೆಯಾಗಿ ಕಲ್ಪಿತವಾಗಿರುವೆ. (ಆತ್ಮನೇ ಸ್ವಾಜ್ಞಾನದಿಂದ ಚಿತ್ತವೆಂಬ ಕಲ್ಪಿತವಾದ ನಾಮರೂಪಗಳಿಂದ ವ್ಯವಹರಿ ಸಲ್ಪಡುವನು ಎಂದರ್ಥ. ಶೈತ್ಯಾತಿಶಯದಿಂದ ಘನೀಭೂತವಾಗಿರುವ ಜಲವೇ ಹಿಮದ ಗಡ್ಡೆಯಾಗಿದ್ದುಕೊಂಡಿರುವುದು. ಅದು ತೀವ್ರವಾದ ಸೂರ್ಯಾತಪ ದಿಂದ ಕರಗಿ ಪುನಃ ಜಲವಾಗಿಯೇ ಪರಿಣಮಿಸುವಂತೆ ಸ್ವಾತ್ಮ ಜ್ಞಾನವುಂಟಾದ ಕೂಡಲೇ, ಅಜ್ಞಾನ ಕಲ್ಪಿತವಾಗಿರುವ (ನಿನ್ನ ಭಾವವು) ಚಿತ್ತ ಭಾವವು ಬಾಧಿತವಾಗಿಬಿಡುವುದು. ಆಗ ಆತ್ಮನು ನಿತ್ಯ ಶುದ್ಧನೂ, ಅವಿಕಾರಿಯೂ, ಚಿದ್ರೂ ಪನೂ ಆಗಿಯೇ ಇರುವನು.

ತಸ್ಮಾನ್ಮೃತಂ ತ್ವಂ ಮೂಢಂ ತ್ವಂ ನಾಸಿ ತ್ವಂ ಪರಮಾರ್ಥತಃ ।
ತದೇವಾಹ ಮಿತಿ ವ್ಯರ್ಥಮತೋ ಮಾಸ್ತ್ವ ಸುಖಾಯ ತೇ ॥ ೮೬ ॥

ಅಸತ್ಯಾಃ ಚಿತ್ತಕಲನಾಃ ಇಂದ್ರಜಾಲಲತಾ ಇವ ।
ವಿಜ್ಞಾನಮಾತ್ರಮೇವೇಹ ಬ್ರಾಹ್ಮಮಂಗ ವಿಜೃಂಭಿತಂ ॥ ೮೭ ॥

ನರಾಮರ ಜಗದ್ರೂಪೈ ರ್ಬ್ರಾಹ್ಮೀ ಶಕ್ತಿರುದೇತ್ಯಲಂ ।
ಸಾಮುದ್ರಕಣ ಕಲ್ಲೋಲಜಾಲೈರ್ವೇಲೇವ ವಲ್ಗತಿ ॥ ೮೮ ॥

ಚಿನ್ಮಯಶ್ಚೇದ್ಭವೇರ್ಮೂಢ ತತ್ತಸ್ಮಾತ್ಪರಮಾತ್ಪದಾತ್ ।
ನಿತ್ಯಮವ್ಯತಿರಿಕ್ತಂ ತ್ವಂ ಕಿಮನ್ಯತ್ಪರಿಶೋಚಸಿ ॥ ೮೯ ॥

---

೮೬. ಹೀಗಿರುವ ಕಾರಣದಿಂದ ಎಲೈ ಚಿತ್ತವೇ, ನೀನು ಸರ್ವದಾ ಮೃತವಾಗಿರುವೆ. ನೀನು ಸರ್ವದಾ ಜಡವೇ, ಪರಮಾರ್ಥತಃ ನೀನು ವಾಸ್ತವವಾಗಿ ಇಲ್ಲವೇ ಇಲ್ಲ. ಆದುದರಿಂದ ನೀನು ವ್ಯರ್ಥವಾಗಿ "ಆ ಆತ್ಮನೇ ,ನಾನು" ಎಂಬುದಾಗಿ ಆತ್ಮತಾದಾತ್ಮ್ಯವನ್ನು ನಿನ್ನಲ್ಲಿ ಅಧ್ಯಾಸಮಾಡಿಕೊಳ್ಳದಿರು. ಹಾಗೆ ಅಧ್ಯಾಸ ಮಾಡಿಕೊಳ್ಳುವುದರಿಂದ ನಿನಗೆ ಎಂದಿಗೂ ಜನನ ಮರಣಾದಿ ದುಃಖ ಪರಂಪರೆಯು ತಪ್ಪುವುದೇ ಇಲ್ಲ.

೮೭. ಎಲೈ ಚಿತ್ತವೇ, ಪ್ರಾಪಂಚಿಕಗಳಾದ ಈ ಕಲ್ಪನೆಗಳೆಲ್ಲವೂ ಐಂದ್ರಜಾಲಿಕನ ಮಾಯಾ ಶಕ್ತಿಯಿಂದ ತೋರುವ ಲತೆಗಳಂತೆ ಅತ್ಯಂತಾ ಸತ್ಯಗಳೇ. ಪರಬ್ರಹ್ಮ ಸ್ವರೂಪವಾದ ವಿಜ್ಞಾನವೊಂದು ಮಾತ್ರವೇ ಈ ಜಗತ್ತಿನಲ್ಲಿ ನಾನಾಕಾರವಾಗಿ ವಿಜೃಂಭಿಸುತ್ತಲಿರುವುದು. ("ವಿಜ್ಞಾನಮಾನಂದಂ ಬ್ರಹ್ಮ." "ಬ್ರಹ್ಮೈವೇದಗ್ಂ ಸರ್ವಂ" ಶ್ರುತಿ.)

೮೮. ಅದ್ವಿತೀಯ ಪರಬ್ರಹ್ಮದ ಚಿಚ್ಛಕ್ತಿಸಂವಲಿತವಾದ ಮಾಯೆಯೇ ಸಮಗ್ರವಾಗಿ ದೇವ, ಮನುಷ್ಯ, ಸರ್ಪ ಮುಂತಾದ ನಾನಾ ಜಗದಾಕಾರಗಳಿಂದ ಪ್ರತಿಭಾಸಮಾನವಾಗಿರುವುದು. (ಆವಿರ್ಭವಿಸುವುದು.) ಸಮುದ್ರದ ತೀರವು ಜಲ ಬಿಂದುಗಳಿಂದಲೂ, ತರಂಗ ಮಾಲೆಗಳಿಂದಲೂ, ಕ್ಷೋಭಿಸುವಂತೆಯೇ ಈ ಮಾಯಾ ಶಕ್ತಿಯೂ ವಿಕ್ಷುಬ್ಧವಾಗಿರುವುದು.

೮೯. ಎಲೈ ಮೂಢ ಚಿತ್ತವೇ, ನೀನು ಆತ್ಮತತ್ತ್ವಜ್ಞಾನ ಲಾಭದಿಂದ

ಸರ್ವಗಂ ಸರ್ವಭಾವಸ್ಥಂ ಸರ್ವ ರೂಪಂ ಹಿ ತತ್ಪದಂ ।
ತತ್ಪ್ರಾಪ್ತೌ ಸರ್ವಮೇವಾಜ್ಞ ಪ್ರಾಪ್ತಂ ಭವತಿ ಸರ್ವದಾ ॥ ೫೦ ॥

ನ ತ್ವಮಸ್ತಿ ನ ದೇಹೋಽಸ್ತಿ ಬ್ರಹ್ಮಾಸ್ತೀಹ ಮಹತ್ಸ್ಫುರತ್ ।
ಅಹಂ ತ್ವಮಿತಿ ನಿಸ್ಪಂದೇ ಸ್ಫುರತ್ಯಾರ್ತಿರ್ಹಿ ಕಸ್ಯ ಕಾ ॥ ೫೧ ॥

ಆತ್ಮಾ ಚೇತ್ ತ್ವಂ ತದಾತ್ಮೈವ ಸರ್ವಗೋಽಸ್ತೀಹ ನೇತರಃ ।
ಆತ್ಮನೋಽನ್ಯಜ್ಜಡತ್ವಂ ಚೇತ್ ತತ್ ತ್ವಂ ನಾಸ್ಯಸ್ತಿ ತದ್ವಪುಃ ॥ ೫೨ ॥

ಚಿನ್ಮಯನಾಗಿರುವೆಯಾದರೆ, ಆಗ ಚಿತ್ತಿನಲ್ಲಿ ಭೇದಕಾರಣವೇ ಇಲ್ಲದುದರಿಂದ ನೀನು ಪರಮಪದವಾದ ಚಿತ್ತಿಗಿಂತ ಸರ್ವದಾ ಅವ್ಯತಿರಿಕ್ತವಾಗಿಯೇ ಇರುವೆ. ಹೀಗೆ ಆತ್ಮ ವ್ಯತಿರಿಕ್ತ ದ್ವೈತವಸ್ತುವೇ ಅಂತ್ಯತ ಅಸತ್ಯವಾಗಿರುವಾಗ ಚಿನ್ಮಯಾತ್ಮನಾದ ನೀನು ಬೇರೆಯಾವುದನ್ನು ಕುರಿತು ಶೋಕಿಸಬೇಕಾಗಿರುವುದು ? (ದ್ವೈತವಿದ್ದರಲ್ಲವೆ, ಆಗ ನೀನು ಅದನ್ನು ಕುರಿತು ಶೋಕಿಸಬಹುದು. ದ್ವೈತವೂ ಇಲ್ಲ ನಿನಗೆ ಶೋಕ ಪ್ರಸಕ್ತಿಯೂ ಇಲ್ಲ. ಈ ಕಾರಣದಿಂದಲೂ ನೀನು ಶೋಕಿಸಬೇಕಾಗಿಲ್ಲವೆಂದರ್ಥ.)

೫೦: ಎಲೈ ಅಜ್ಞ ಚಿತ್ತವೇ, ಆ ಪರಮಪದವು ಸರ್ವಗತವು. (ಸರ್ವ ವ್ಯಾಪಿಯು) ಅತೀತಾನಾಗತ ಸರ್ವ ಪದಾರ್ಥಗಳಲ್ಲಿಯೂ ಕೂಡ ಸ್ವರೂಪದಿಂದಿರು ವುದು. (ಕಾಲಕೃತಪರಿಚ್ಛೇದ ಶೂನ್ಯವು.) ಸರ್ವಸ್ವರೂಪವು (ಸರ್ವಾತ್ಮಕವು) ಅದುಕಾರಣವೇ, ಅಂತಹ ಪರಮಪದವೊಂದು ಪ್ರಾಪ್ತವಾದರೆ, ಸರ್ವವೂ ಸರ್ವದಾ ಪ್ರಾಪ್ತವೇ ಆಗಿಬಿಡುವುದು. (ನಿತ್ಯಾಪ್ತ ಸರ್ವಕಾಮನಾಗುವನು.)

೫೧. ಪರಮಪದವು ಪ್ರಾಪ್ತವಾದಾಗ, ಎಲೈ ಚಿತ್ತವೇ ತ್ವಂ ಎಂಬುದು ಆತ್ಮನಿ ಗಿಂತ ಪೃಥಕ್ಕಾಗಿ ಇಲ್ಲ. ದೇಹವೂ ಇಲ್ಲ. ಈ ಜಗತ್ತಿನಲ್ಲೆಲ್ಲಾ ಸ್ಫುರಿಸುತ್ತಿರುವ, ಅತ್ಯಂತ ಮಹತ್ತಾದ ಪರಬ್ರಹ್ಮವು ಮಾತ್ರವೇ ಸತ್ಯವಾಗಿರುವುದು. ನಾನು ನೀನು ಎಂಬೀಮೊದಲಾದ ಭೇದಾಭಾಸವು ನಿಶ್ಚಲನಾದ ಆತ್ಮನಲ್ಲಿಯೇ ಮಾಯೆಯಿಂದ ಸ್ಫುರಿಸುವುದು. ಅದುಕಾರಣ ಯಾವನಿಗೆ ಯಾವ ಯಾವ ದುಃಖವು ತಾನೇ ಇರು ವುದು? ಯಾವನಿಗೂ ಯಾವದೊಂದು ದುಃಖವೂ ಎಂದಿಗೂ ಇಲ್ಲವೇ ಇಲ್ಲ.

೫೨. ಎಲೈ ಜಡಚಿತ್ತವೇ, ನೀನು ಆತ್ಮನೇ ಆಗಿರುವೆಯಾದರೆ, ಆಗ ಸರ್ವ ಗತನಾದ ಆತ್ಮನೇ ಈ ಜಗತ್ತಿನಲ್ಲಿ ಎಲ್ಲೆಲ್ಲಿಯೂ ಇರುವನು. ಆತ್ಮನಿಗಿಂತ ಬೇರೆ

ಆತ್ಮೈವ ಸರ್ವಂ ತ್ರಿಜಗತ್ತದನ್ಯತ್ತು ನ ಕಿಂಚನ ।
ತತ್ವಂ ಕಿಂಚಿತ್ವಮಾತ್ಮಾನ್ಯದ್ಯದಿ ತತ್ವಂ ನ ಕಿಂಚನ ॥ ೫೩ ॥

ಅಹಂ ತ್ವಿದಮಿದಂ ತನ್ಮ ಇತಿ ವ್ಯರ್ಥಂ ಕಿಮೀಹಸೇ ।
ಅಸದ್ವಪುಃ ಕಿಂ ಸ್ಫುರತಿ ಶಶಶೃಂಗೇಣ ಕೋ ಹತಃ ॥ ೫೪ ॥

ತೃತೀಯಾ ಕಲನಾ ನಾಸ್ತಿ ಚಿಜ್ಜಡಾಂಶೇತರಾ ಶಠ ।
ಛಾಯಾತಪನಯೋರ್ಮಧ್ಯೇ ತೃತಿಯೇವಾನುರಂಜನಾ ॥ ೫೫ ॥

ಯಾದುದು ಯಾವುದೊಂದೂ ಇಲ್ಲ. ಹಾಗಲ್ಲದೆ, ನೀನೇ ಆತ್ಮನಿಗಿಂತ ಅನ್ಯವಾಗಿದ್ದರೆ, ಆಗ ನೀನು ಯಾವುದೊಂದೂ ಪರಮಾರ್ಥರೂಪ ವಸ್ತುವಾಗಿಯೂ ಇಲ್ಲ. ಏಕೆಂದರೆ ಈ ಜಗತ್ತೆಲ್ಲವೂ ಬ್ರಹ್ಮಾಕಾರವಾಗಿಯೇ ಇರುವುದು. (ಹೇಗೂ ನಿನಗೆ ಯಾವ ಭಾಧೆಯೂ ಇಲ್ಲ.)

೫೩. ಸಮಸ್ತವಾದ ಈ ಜಗತ್ತ್ರಯವು ಆತ್ಮವೇ. ಆತ್ಮವ್ಯತಿರಿಕ್ತವಾದುದು ಯಾವುದೊಂದೂ ವಸ್ತುತಃ ಇಲ್ಲವೇ ಇಲ್ಲ. ಅದುಕಾರಣ ಎಲೈ ಚಿತ್ತವೇ, ನೀನು ಆತ್ಮನಿಗಿಂತ ಭಿನ್ನವಾದ ಯಾವುದೋ ಒಂದು ವಸ್ತುವಾಗಿರುವೆಯಾದರೆ, ಆಗ ನೀನು ಯಾವೊಂದೂ ಪರಮಾರ್ಥರೂಪವೂ ಆಗಿಲ್ಲ.

೫೪. ಎಲೈ ಚಿತ್ತವೇ, " ಈ ಬಾಲ ಶರೀರವು ನಾನು " " ಆ ವೃದ್ಧಶರೀರವು ನಾನು " " ಬಾಲ ಶರೀರದ ಸಂಬಂಧಿಗಳಾದ ಆಟದ ಸಾಮಾನುಗಳೂ ಮತ್ತು ವೃದ್ಧಶರೀರ ಸಂಬಂಧಿಗಳಾದ ಪುತ್ರಪೌತ್ರಾದಿ ಬಂಧುಗಳೂ ನನ್ನವರು " ಎಂದು ವ್ಯರ್ಥವಾಗಿ ಏಕೆ ಆಶೆಪಡುವೆ ? ಅತ್ಯಂತಾ ಸತ್ತಾದ ವಂಧ್ಯಾಪುತ್ರಾದಿಗಳ ಆಕಾರವು ಲೋಕದಲ್ಲಿ ಎಲ್ಲಿಯಾದರೂ ಸ್ಫುರಿಸುವುದೇನು ? ಯಾವನು ಯಾವಾಗ ಮೊಲದ ಕೊಂಬಿನಿಂದ ಯಾರನ್ನು ಹೊಡೆದು ಕೊಂದಿರುವನು ?

(ಆತ್ಮನು ಅಶರೀರನು, ಆತ್ಮನಿಗೆ ಸಶರೀರತ್ವ ಕಲ್ಪನೆಯು ವಾಸ್ತವವಲ್ಲ ಅಸತ್ ಆದುದು)

೫೫. ಎಲೈ ಶಠವಾದಚಿತ್ತವೇ, ಪ್ರಪಂಚದಲ್ಲಿ ಛಾಯಾ ಆತಪ ಇವೆರಡರೊಳಗೆ ಯಾವುದಾದರೊಂದರ ಸಂಬಂಧವು ಸಕಲ ವಸ್ತುಗಳಿಗೂ ಇದ್ದೇ ಇರುವುದು.

ಸತ್ಯಾವಲೋಕನಾಜ್ಜಾತೇ ಚಿತ್ತಜಾಡ್ಯದೃಶೋಃ ಕ್ಷಯೇ ।
ಸಂಪದ್ಯತೇ ಯತ್ತು ತಜ್ಞಂ ಸ್ವಸಂವೇದನ ಮಾತ್ರಕಂ ॥ ೫೬ ॥

ತೇನ ಮೂಢ ನ ಕರ್ತೃತ್ವಂ ನ ಭೋಕ್ತೃತ್ವಂ ತವಾಪಿ ಹಿ ।
ತದೇವಾಸಿ ಪರಂ ಬ್ರಹ್ಮ ತ್ಯಜ ಮೌರ್ಖ್ಯಂ ಭವಾತ್ಮವಾನ್ ॥ ೫೭ ॥

ಕೇವಲಂ ಜ್ಞತ್ವವಿಷಯಮುಪದೇಶಾರ್ಥ ಸಿದ್ಧಯೇ ।
ತ್ವಯಾ ಕರಣ ಭೂತೇನ ಕರೋತ್ಯಾತ್ಮೇತಿ ಕಥ್ಯತೇ ॥ ೫೮ ॥

ಮೂರನೆಯ ಬಗೆಯು ಇಲ್ಲವು. ಇದರಂತೆಯೇ ಚಿತ್ ಮತ್ತು ಜಡಾಂಶ ಇವೆರಡಕ್ಕಿಂತ ಅನ್ಯವಾದ ಮೂರನೆಯ ಕಲ್ಪನೆಯು ಇಲ್ಲವೇ ಇಲ್ಲ.

೫೬. ಪರಮಾರ್ಥ ಸತ್ಯಭೂತವಾದ ಸ್ವಾತ್ಮತತ್ತ್ವ ಸಾಕ್ಷಾತ್ಕಾರದಿಂದ, ಎಲೈ ಚಿತ್ತವೇ, ನಿನ್ನ ಜಡತ್ವವೂ, ನಿನ್ನೊಳಗಿರುವ ಚಿದಾಭಾಸವೂ ಕೂಡ ಅವಿದ್ಯಾ ಸಹಿತವಾಗಿ, ನಿಃಶೇಷವಾಗಿ ನಾಶಹೊಂದಲಾಗಿ ಆತ್ಮಸಾಕ್ಷಾತ್ಕಾರ ವೃತ್ತಿಯಿಂದ ಆವಿರ್ಭವಿಸಿದ ಯಾವ ಸ್ವಾತ್ಮಜ್ಞಾನ ಮಾತ್ರಕವಾದ ಸ್ವಪ್ರಕಾಶ ಪೂರ್ಣಾನಂದ ರೂಪವು ಅನುಭೂತವಾಗುವುದೋ ಅದೇ ನಿನ್ನ ತಾತ್ವಿಕ ಸ್ವರೂಪವು.

೫೭. ಆದುದರಿಂದ, ಎಲೈ ಮೂಢಚಿತ್ತವೇ. ನಿನಗೂ ಕೂಡ ವಾಸ್ತವವಾಗಿ ಕರ್ತೃತ್ವವೂ ಇಲ್ಲ. ಭೋಕ್ತೃತ್ವವೂ ಇಲ್ಲ ನೀನು ಆ ಪರಬ್ರಹ್ಮವೇ ಆಗಿರುವೆ. ಇನ್ನಾದರೂ ಈ ಮೂರ್ಖತನವನ್ನು ಬಿಟ್ಟು ಸ್ವಾತ್ಮಜ್ಞಾನ ಪ್ರಾಪ್ತಿಯ ಸಲುವಾಗಿ ವಿವೇಕದಿಂದ ವಿಚಾರಪರವಾಗಿ ಪ್ರಯತ್ನಪಡು.

೫೮. ಅಜ್ಞಾನ ದಸೆಯಲ್ಲಿ ಮಾತ್ರವೇ ಆಧ್ಯಾತ್ಮಿಕ ಶಾಸ್ತ್ರಗಳಿಂದಲೂ ಆಚಾರ್ಯರಿಂದಲೂ ಮಾಡಲ್ಪಡುವ ತತ್ತ್ವಮಸ್ಯಾದಿ ಮಹಾವಾಕ್ಯೋಪದೇಶಗಳ ಪ್ರಯೋಜನ ಸಿದ್ಧಿಗೋಸ್ಕರವಾಗಿ, ಎಲೈ ಚಿತ್ತವೇ, ಆತ್ಮನು ನಿನ್ನನ್ನು ಒಂದು ಕರಣವನ್ನಾಗಿ ಕಲ್ಪಿಸಿಕೊಂಡು ನಿತ್ಯಶುದ್ಧವಾದ ಸ್ವರೂಪ ತತ್ತ್ವವನ್ನು ಸಾಕ್ಷಾತ್ಕಾರ ವಿಷಯವನ್ನಾಗಿ ಮಾಡಿಕೊಳ್ಳುವನು. ಈ ವಿಷಯವನ್ನೇ "ಮನಸೈವಾನು ದ್ರಷ್ಟವ್ಯಂ" "ಮನಸೈವೇದಂ ಆಪ್ತವ್ಯಂ ನೇಹನಾನಾಸ್ತಿ ಕಿಂಚನ" ಇತ್ಯಾದಿ ಶ್ರುತಿಗಳು ಭೋಧಿಸುವುವು.

ಅಸತ್ಸ್ವರೂಪಂ ಕರಣಂ ಜಡಂ ನಿರವಲಂಬನಂ ।
ನಿಃ ಸ್ಪಂದನಂ ನ ಸ್ಪಂದೇತ ಕರ್ತೃಸಂಬೋಧನಂ ವಿನಾ ॥ ೫೯ ॥

ಅಕರ್ತುಃ ಕರಣಸ್ಯಾಸ್ಯ ಶಕ್ತಿಃ ಕಾಚಿನ್ನ ವಿದ್ಯತೇ ।
ದಾತ್ರಸ್ಯ ಲಾವಕಾಭಾವೇ ಕರ್ತುಂ ಕಿಮಿವ ಶಕ್ತತಾ ॥ ೬೦ ॥

ಖಡ್ಗ ಪ್ರಹಾರವಿಚ್ಛೇದ ಕ್ರಿಯಾಯಾಃ ಪುಂಸಿ ಶಕ್ತತಾ ।
ನ ಖಡ್ಗೇ ಸುಜಡೇ ಚಿತ್ತ ಸರ್ವಾಂಗೇಷ್ವಪಿ ಶಕ್ತತಾ ॥ ೬೧ ॥

---

೫೯. ವಂಧ್ಯಾ ಪುತ್ರಾದಿಗಳಂತೆ ಕೇವಲ ಅಸದ್ರೂಪವಾಗಿಯೂ, ಜಡವಾಗಿಯೂ, ನಿರಾಶ್ರಯವಾಗಿಯೂ, ಸ್ವತಃ ಚಲನ ಶಕ್ತಿರಹಿತವಾಗಿಯೂ ಇರುವ ಕರಣವು ಕರ್ತೃವಾದ ಚೈತನ್ಯದ ಅರ್ಥ ಪ್ರಕಾಶರೂಪ ಸಾಮರ್ಥ್ಯವನ್ನು ಹೊಂದದೆಯೇ ಎಂದಿಗೂ, ಸ್ವಲ್ಪವೂ ಚಲಿಸಲಾರದು. ಅದು ಕಾರಣ, ನೀನು ನಿನ್ನನ್ನು ಕರಣ ಸ್ವಭಾವವೆಂದೇ ಭಾವಿಸಿದರೂ, ನಿನಗೆ ಸ್ವತಃ ಚಲಿಸುವ ಶಕ್ತಿಯೂ ಇಲ್ಲದಿರುವುದರಿಂದ, ನಿನಗೆ ಕರ್ತೃತ್ವಾಭಿಮಾನವು ವ್ಯರ್ಥವೇ ಸರಿ.

೬೦. ಹೀಗೆ ಚೇತನವಾದ ಕರ್ತೃವಿನಿಂದ ಅಧಿಷ್ಠಿತವಾಗದಿರುವ ಈ ಕರಣಕ್ಕೆ ಯಾವುದೊಂದು ಶಕ್ತಿಯೂ ಸುತರಾಂ ಇಲ್ಲ. ಛೇದನ ಕ್ರಿಯಾಶಕ್ತನಾದ ಚೇತನನಾದ ಒಬ್ಬ ಕರ್ತೃವು ಇಲ್ಲದಿರಲು ಮರವನ್ನು ಕತ್ತರಿಸುವುದಕ್ಕೆ ಕೊಡಲಿಗೆ ಏನು ತಾನೇ ಶಕ್ತಿಯಿರುವುದು ?

೬೧. ಎಲೈ ಚಿತ್ತವೇ, ಕತ್ತಿಯನ್ನು ಎತ್ತಿಕೊಂಡು ಹೊಡೆಯುವುದರಲ್ಲಿಯೂ, ಒಂದು ವಸ್ತುವನ್ನೋ ಒಂದು ಪ್ರಾಣಿಯ ದೇಹವನ್ನೋ ಬೇರೆ ಬೇರೆ ತುಂಡುಗಳಾಗಿ ಕತ್ತರಿಸುವ ವ್ಯಾಪಾರದಲ್ಲಿಯೂ ಚೇತನನಾದ ಮನುಷ್ಯನಿಗೆ ಸಾಮರ್ಥ್ಯವಿರುವುದೇ ಹೊರತು, ಆಮೂಲಾಗ್ರವಾಗಿ ಸರ್ವಾಂಗಗಳೂ ಉಪಕರಣವಾಗಿದ್ದರೂ ಕೂಡ, ಕೇವಲ ಜಡವಾದ ಕತ್ತಿಗೆ ಸ್ವಲ್ಪವೂ ಯಾವ ಶಕ್ತಿಯೂ ಇಲ್ಲವು.

ತಸ್ಮಾನ್ನಾಪಿ ಸಖೇ ಕರ್ತೃ ಮಾ ವ್ಯರ್ಥಂ ದುಃಖಭಾಗ್ಭವ ।
ಪರಾರ್ಥಂ ಕ್ಲೇಶಿತಾ ಮೂರ್ಖ ಪ್ರಾಕೃತೇಷು ನ ಶೋಭತೇ ॥ ೬೨ ॥

ಈಶ್ವರೋ ನೇದೃಶಃ ಶೋಚ್ಯೋ ಯಸ್ತ್ವಯಾ ಸದೃಶೋ ಭವೇತ್ ।
ನಚ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ ॥ ೬೩ ॥

ಗರ್ವಾತ್ತ್ವೂಪಕರೋಮ್ಯೇನಮಿತಿ ಕೇವಲಮಲ್ಪಧೀಃ ।
ಕ್ಲಿಶ್ಯಸ್ಯೇವ ಸತಾಂ ತ್ವರ್ಥೋ ನ ಕಿಂಚಿದುಪಯುಜ್ಯತೇ ॥ ೬೪ ॥

---

೬೨ ಅದುಕಾರಣ, ಎಲೈ ಮಿತ್ರಚಿತ್ತವೇ, ಜಡವಾದ ನೀನು ಎಂದಿಗೂ ಯಾವ ಕ್ರಿಯೆಗೂ ಸರ್ವಥಾ ಕರ್ತೃವೆನ್ನಿಸಿಕೊಳ್ಳುವ ಯೋಗ್ಯತೆಯೂ ಇಲ್ಲದವನಾಗಿರುವೆ. ಸುಮ್ಮನೆ ವ್ಯರ್ಥವಾಗಿ "ನಾನು ಕರ್ತೃ" ವೆಂದು ಭಾವಿಸಿಕೊಂಡು ಅವಿವೇಕಿಯಾಗಿ ಹೀಗೆ ದುಃಖಕ್ಕೆ ಗುರಿಯಾಗದಿರು. ಎಲೈ ಮೂರ್ಖ ಚಿತ್ತವೇ, ಪಾಮರತುಲ್ಯಗಳಾದ ಪ್ರಕೃತಿಕಾರ್ಯಗಳಲ್ಲಿ ಪರಾರ್ಥವಾಗಿ ಕ್ಲೇಶಪಡುವುದು ನಿನಗೆ ಸರ್ವಥಾ ಶೋಭಿಸುವುದಿಲ್ಲ.

೬೩. ಎಲೈ ಚಿತ್ತವೇ, ಯಾವನು ಸರ್ವವಿಧಗಳಲ್ಲಿಯೂ ನಿನಗೆ ಸದೃಶನಾಗಿರುವನೋ ಅವನನ್ನು ಮಾತ್ರ ಕುರಿತು ನೀನು ಶೋಕಿಸಬಹುದು. ಈಶ್ವರನಾದರೋ (ಆತ್ಮನು) ಸರ್ವಥಾ ನಿನಗೆ ಸದೃಶನೂ ಅಲ್ಲ. ನೀನು ಆತ್ಮನನ್ನು ಕುರಿತು ಶೋಕಿಸಬೇಕಾದ ಪ್ರಕೃತವೂ ಸುತರಾಂ ಇಲ್ಲವು ಏಕೆಂದರೆ ಆ ಸರ್ವೇಶ್ವರನು ನಿತ್ಯತೃಪ್ತನು. ಅದುಕಾರಣ ನಿರತಿಶಯಾನಂದ ರೂಪನಾದ ಪರಮಾತ್ಮನಿಗೆ ಈ ಪ್ರಪಂಚದಲ್ಲಿ ಯಾವ ಕೆಲಸದಿಂದಲೂ ಯಾವ ಒಂದು ಅರ್ಥವೂ (ಪ್ರಯೋಜನವೂ) ಇರುವುದಿಲ್ಲ. ಅಥವಾ ಯಾವಕೆಲಸವನ್ನೂ ಮಾಡದೆ ಹೋದರೂ ಅದರಿಂದ ಅನರ್ಥವೂ ಯಾವುದೂ ಸರ್ವಥಾ ಇಲ್ಲವೇ ಇಲ್ಲ. (ಅದುಕಾರಣ "ಪರಮೇಶ್ವರನೇ ಮೋಹದಿಂದ ಜೀವಭಾವಾಪನ್ನನಾಗಿ, ಹಸಿವು ಬಾಯಾರಿಕೆಗಳಿಂದ ನರಳುತ್ತಿರುವನು. ಅವನಿಗೋಸ್ಕರವಾಗಿ ನಾನು ಪಶ್ಚಾತ್ತಾಪದಿಂದ ಸರ್ವಪ್ರಯತ್ನಗಳಿಂದ ಕೂಡಿ ಸಹಾಯಮಾಡುವೆನು" ಎಂದು ನೀನು ಭ್ರಾಂತಿಯಿಂದ ತಿಳಿದುಕೊಂಡಿದ್ದರೆ, ಅದೂ ಯುಕ್ತವಲ್ಲ ಎಂಬರ್ಥವು ಸೂಚಿತವಾಗುವುದು.)

೬೪. ಎಲೈ ಅವಿವೇಕಿ ಚಿತ್ತವೇ, ನೀನು ಕಾರ್ಯಕಾರಣ ಸಂಘಾತಗಳಲ್ಲಿ ಅಭಿಮಾನವನ್ನಿಟ್ಟುಕೊಂಡು, ಗರ್ವದಿಂದ "ನಾನು ಈ ಆತ್ಮನಿಗೆ ಉಪಕಾರಮಾಡುವೆನು"

ಕರ್ತುರ್ಭೋಗೇಶ್ವರಸ್ಯೈವಮರ್ಥೇ ಚೇದನುವರ್ತಸೇ ।
ತದಸ್ಯ ಕಾಚಿನ್ನೇಚ್ಛೇಹ ತೃಪ್ತತ್ವಾತ್ಸರ್ವದೈವ ಹಿ ॥ ೬೫ ॥

ಅಕೃತ್ರಿಮಾವಭಾಸೇನ ಸರ್ವಗೇನ ಚಿದಾತ್ಮನಾ ।
ಏಕೇನೈವೇದಮಾಪೂರ್ಣಂ ಕಲ್ಪನೈವಾಸ್ತಿ ನೇತರಾ ॥ ೬೬ ॥

ಎಂಬ ಭ್ರಾಂತಿಯಿಂದ ನಿನ್ನ ಕೇವಲ ಸಂಕುಚಿತವಾದ ಬುದ್ಧಿಯನ್ನು ಮಾತ್ರವೇ ವ್ಯರ್ಥವಾಗಿ ಹೀಗೆ ಕ್ಲೇಶಪಡಿಸುತ್ತಾ ಇರುವೆ. ಈ ದೇಹದಲ್ಲಿ ಒಂದು ಗುಂಪಾಗಿ ಒಟ್ಟಿಗೆ ವಾಸಮಾಡಿಕೊಂಡಿರುವ, ಪ್ರಾಣಪಂಚಕ, ಮನಸ್ಸು, ಬುದ್ಧಿ ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ಇವುಗಳೆಲ್ಲವೂ ಅಚೇತನವಾಗಿರುವ ಕಾರಣವೇ ಅವುಗಳಿಗೆ ಭೋಗಗಳಿಂದ ಯಾವ ಪ್ರಯೋಜನವೂ ಇಲ್ಲ. ಆದುದರಿಂದ. ಯಾವದರಿಂದಲೂ ಯಾವುದಕ್ಕೂ ಯಾವ ಉಪಯೋಗವೂ ಆಗುವುದಿಲ್ಲ.

೬೫. ಎಲೈ ಚಿತ್ತವೇ ಮೊದಲೇ ಹೇಳಿರುವಂತೆ, ಕರ್ತೃವಾಗಿಯೂ ಚೇತನನಾಗಿಯೂ ಇರುವ ಈಶ್ವರನ ಭೋಗಾರ್ಥವಾಗಿಯೇ, ನೀನು ಹೀಗೆ ಕಾರ್ಯಗಳಲ್ಲಿ ವ್ಯಾಪೃತನಾಗಿರುವೆಯಾದರೆ, ಅದೂ ಸರ್ವಥಾ ಅಸಂಗತವೇ. ಹೇಗೆಂದರೆ, ಈಶ್ವರನು ಸರ್ವದಾ ಆತ್ತಸರ್ವಕಾಮನಾಗಿ, ಪರಿಪೂರ್ಣನಾಗಿ ನಿತ್ಯತೃಪ್ತನೇ ಆಗಿರುವುದರಿಂದ, ಆ ಈಶ್ವರನಿಗೆ ಈ ಪ್ರಪಂಚದಲ್ಲಿ ಯಾವೊಂದರಲ್ಲಿಯೂ ಯಾವ ಆಶೆಯೂ ಎಂದೆಂದಿಗೂ ಸರ್ವಥಾ ಇಲ್ಲವೇ ಇಲ್ಲವು.

೬೬. ಸ್ವಭಾವತಃ ಸ್ವಯಂಪ್ರಕಾಶನಾಗಿ, ಸರ್ವವ್ಯಾಪಿಯಾಗಿ ಚಿದೇಕರಸರೂಪನಾಗಿ ಮತ್ತು ಅದ್ವಿತೀಯನಾಗಿರುವ ಆತ್ಮನಿಂದಲೇ ಈ ದೃಶ್ಯಜಗತ್ತೆಲ್ಲವೂ ಸರ್ವತ್ರ ಪರಿಪೂರ್ಣವಾಗಿರುವುದು. ಇತರವಾದ ದ್ವೈತಕಲ್ಪನೆಯೇ ಸರ್ವಥಾ ಇಲ್ಲವೇ ಇಲ್ಲ. ಹೀಗೆ ಆತ್ಮನು ಪರಿಪೂರ್ಣನೂ ಅದ್ವಿತೀಯನೂ ಆಗಿರುವುದರಿಂದಲೂ ತದ್ಭಿನ್ನವಾದ ಎರಡನೆಯ ವಸ್ತುವೇ ಇಲ್ಲದಿರುವುದರಿಂದಲೂ ಅವನಿಗೆ ಇಚ್ಛೆಯೆಂಬುದು ಎಂದಿಗೂ ಇಲ್ಲ.

[ಆತ್ಮಾನಂ ಚೇತ್ ವಿಜಾನೀಯಾತ್ ಅಯಮಸ್ಮೀತಿ ಪೂರುಷಃ । ಕಿಮಿಚ್ಛನ್ ಕಸ್ಯ ಕಾಮಾಯ ಶರೀರಮನುಸಂಜ್ವರೇತ್ ॥ ಬೃಹದಾರಣ್ಯಕ ೪-೪-೧೨ ತತ್ರಕೋ ಮೋಹಃ ಕಃ ಶೋಕಃ ಏಕತ್ವಮನು ಪಶ್ಯತಃ ಈಶಾವಾಸ್ಯ ೭. ಇತ್ಯಾದಿ]

ಏಕಾನೇಕಾವಭಾಸೇನ ಸಮಸ್ತೇನ ತದಾತ್ಮನಾ ।
ಆತ್ಮನ್ಯೇವಾಂತರಾತ್ಮಾಂತಃ ಕ್ರಿಯತೇ ಕಿಂ ಕಿಮಿಷ್ಯತೇ ॥ ೬೭ ॥

ತ್ವಾದೃಶಸ್ಯ ತು ದೃಷ್ಟ್ವೈವ ಕ್ಷುಬ್ಧತಾ ಜಾಯತೇ ಮುಧಾ ।
ಆಲೋಕ್ಯ ರಾಜಮಹಿಷೀಂ ಯೂನೋ ಮದಮಯೀಂ ಯಥಾ ॥ ೬೮ ॥

ಆತ್ಮನಾ ಸಹ ಸಂಬದ್ಧಂ ಚೇತಃ ಕರ್ತ್ರಸಿ ಸುಂದರ ।
ಕಿಂತು ನಾಸ್ಯಾಸ್ತಿ ಸಂಬಂಧಿ ಕುಸುಮಸ್ಯ ಯಥಾ ಫಲಂ ॥ ೬೯ ॥

೬೭. ಪರಮಾರ್ಥಸ್ವರೂಪದಿಂದ ಅದ್ವಿತೀಯನಾದ ಆತ್ಮನೇ ತನ್ನಲ್ಲಿಯೇ ತನ್ನನ್ನೇ ಅನೇಕಾಕಾರವಾಗಿ ಪ್ರತಿಭಾಸಮಾನವಾದ ಸಮಸ್ತ ಅವಿದ್ಯಕ ಜಗದ್ರೂಪನನ್ನಾಗಿ ಕಲ್ಪಿಸಿಕೊಳ್ಳುವನು. ಹೀಗೆ ಸರ್ವಜಗತ್ತಿಗೂ ಅಂತರಾತ್ಮನಾಗಿರುವ ಪರಮೇಶ್ವರನಿಗೆ ಜಗತ್ತಿನಲ್ಲಿ ಅಲಭ್ಯವಾಗಿರುವುದು ಯಾವುದಿರುವುದು. ? ಅವನು ಏನನ್ನು ತಾನೇ ಆಶಿಸಬೇಕಾಗಿರುವುದು.

೬೮. ಹೀಗೆ ಈ ಜಗತ್ತೆಲ್ಲವೂ ಈಶ್ವರನ ಸ್ವತ್ತಾಗಿರುವಾಗ, ಮದಶಾಲಿನಿಯಾಗಿ ಮನೋನಯನಹಾರಿಣಿಯಾದ ರಾಜಮಹಿಷಿಯನ್ನು ಕಂಡು, ಯಾವನೋಬ್ಬ ಪ್ರಾಕೃತನಾದ ತರುಣನ ಮನಸ್ಸಿನಲ್ಲಿ ಕಾಮವು (ಕ್ಷೋಭವು) ಉದಯಿಸುವಂತೆ, ನಿನ್ನಂತಹ ಮೂರ್ಖನಿಗೆ ಮಾತ್ರವೇ ಈ ದೃಶ್ಯವಸ್ತುಗಳನ್ನು ನೋಡಿದಾಗ ವ್ಯರ್ಥವಾಗಿ ಚಿತ್ತ ಕ್ಷೋಭವುಂಟಾಗುವುದು.

೬೯. ಎಲೈ ಸುಂದರ! ಚಿತ್ತವೇ ನೀನು ಆತ್ಮನೊಡನೆ ಆಧ್ಯಾಸಿಕವಾದ ಸಂಬಂಧವನ್ನು ಪಡೆದಾಗಲೇ ಕರ್ತೃವೆನ್ನಿಸಿಕೊಳ್ಳುವೆ. ಪುಷ್ಪದ ದೆಸೆಯಿಂದಲೇ ಉತ್ಪನ್ನವಾದುದಾಗಿದ್ದರೂ ಫಲವು ವೃದ್ಧಿ ಹೊಂದಿದರೆ ಪುಷ್ಪವೇ ಅದೃಶ್ಯವಾಗಿ ಬಿಡುವುದು. ಫಲವು ಪುಷ್ಪಕ್ಕಿಂತ ಬಹಿರ್ಮುಖವಾಗಿರುವ ಕಾರಣ, ಪುಷ್ಪದ ಪರಿಮಳವನ್ನು ಉಪಭೋಗಿಸುವಿಕೆಯೇ ಮೊದಲಾದ ಸಂಬಂಧಕ್ಕೆ ಅದು ಹೇಗೆ ಯೋಗ್ಯವಾಗಿಲ್ಲವೋ, ಹಾಗೆ ನೀನೂ ಆತ್ಮನೊಡನೆ ಸಂಬಂಧವನ್ನು ಪಡೆಯಲು ಅರ್ಹವಾಗಿಲ್ಲ. (ಆದುದರಿಂದ ನಿನಗೆ ಈಶ್ವರನ ಸಂಬಂಧದಿಂದಲೂ ಭೋಕ್ತೃತ್ವವು ಉಂಟಾಗುವದಾಗಿಲ್ಲವೆಂದರ್ಥ)

ದ್ವಿತೀಯೇನ ಸಮಂ ಯೈಷಾ ತತ್ತ್ವಾವದ್ಭವನ್ನೈಕತಾ ।
ಸಾ ಸಂಬಂಧಗತಿಃ ಪ್ರೋಕ್ತಾ ಪ್ರಾಗ್ದ್ವಿತ್ವಾದಧುನೈಕತಾ ॥ ೭೦ ॥

ನಾನಾ ಪ್ರಕಾರರಚನಾ ನಾನಾ ರೂಪ ಕ್ರಿಯೋನ್ಮುಖೀ ।
ಸುಖದುಃಖ ದಶಾಹೇತುರ್ಭವಾನ್ನೈಕವಿಧಾ ಸ್ಮೃತಾ ॥ ೭೧ ॥

ಸಂಬಂಧಃ ಸಮಯೋರ್ದೃಷ್ಟಸ್ತಥಾರ್ಧಸಮಯೋರಪಿ ।
ನ ವಿಲಕ್ಷಣಯೋಶ್ಚಾನ್ಯಸ್ತಸ್ಮಿನ್ಸತಿ ಜಗತ್ರಯೇ ॥ ೭೨ ॥

---

೭೦. ಒಂದು ವಸ್ತುವು ಇನ್ನೊಂದು ಎರಡನೆಯ ವಸ್ತುವಿನೊಡನೆ, ಯಾವುದಾದರೊಂದು ವಸ್ತುವಿನ ಕ್ರಿಯೆಯಿಂದಾಗಲಿ ಅಥವಾ ಎರಡೂ ವಸ್ತುವಿನ ಕ್ರಿಯೆಯಿಂದಾಗಲೀ ಒಟ್ಟಿಗೆ ಕೂಡಿಕೊಳ್ಳುವುದರ ಮೂಲಕ, ಮೊದಲನೆಯದು ಎರಡನೆಯದರಲ್ಲಿ ಅಂತರ್ಭಾವವನ್ನು ಹೊಂದಿ ಬಿಡುವುದಾಗಲೀ ಅಥವಾ ಐಕ್ಯವನ್ನು ಹೊಂದುವುದಾಗಲೀ ಯಾವುದುಂಟೋ ಅದೇ ಮುಖ್ಯಸಂಬಂಧಲಕ್ಷಣವೆಂದು ಶಾಸ್ತ್ರಜ್ಞರು ಹೇಳುವರು ಪೂರ್ವದಲ್ಲಿ ಎರಡಾಗಿ ಬೇರೆಯಾಗಿದ್ದ ವಸ್ತುಗಳು, ಸಂಬಂಧವನ್ನು ಪಡೆದ ಬಳಿಕ, ಈಗ ಒಟ್ಟಿಗೆ ಒಂದೇ ಆಗಿಬಿಡುವುವು.

೭೧. ಇಂತಹಮುಖ್ಯ ಸಂಬಂಧಪಡೆಯುವ ವಿಷಯದಲ್ಲಿ ನೀನು ಆಹೇತುವಾಗಿರುವೆ (ಹೇತುವಾಗಿಲ್ಲ) ಏಕೆಂದರೆ, ಸ್ವತಃ ಅನೇಕ ವಿಧವಾಗಿಯೂ ಮತ್ತು ಕಾರ್ಯತಃ ಅನೇಕ ಪ್ರಕಾರವಾದ ರಚನೆಯುಳ್ಳದ್ದಾಗಿ ವಿವಿಧಗಳಾದ ವಿಹಿತ ನಿಷಿದ್ಧರೂಪಕರ್ಮಗಳಲ್ಲಿ ಸದ ಅಭಿಮುಖವಾಗಿರುವ ನಿನ್ನ ಸುಖದುಃಖದಶೆಯು ಸರ್ವತ್ರ ಪ್ರಸಿದ್ಧವಾಗಿರುವುದು.

೭೨. ಮೂರು ಲೋಕಗಳಲ್ಲಿಯೂ ಕೂಡ, ಸರ್ವತ್ರ ಯಾವಾಗಲೂ ಸಮಾನಧರ್ಮಿಗಳಾದ ಎರಡು ಪದಾರ್ಥಗಳಿಗೂ (ಎರಡು ಹಾಲುಗಳು) ಅಥವಾ (ದ್ರವಭಾವದಿಂದ) ಅರ್ಧಸಮನಾದ ನೀರು ಹಾಲು ಮುಂತಾದ ವಸ್ತುಗಳಿಗಾಗಲಿ ಸಂಬಂಧವು ಕೂಡುವುದು. ಆದರೆ ಜಲ ಅಗ್ನಿಗಳಂತೆ ವಿರುದ್ಧಗಳಾದ ಎರಡು ವಿಲಕ್ಷಣ ವಸ್ತುವಿಗೆ ಸಂಬಂಧವು ಕೂಡುವುದೇ ಇಲ್ಲ, ಏಕೆಂದರೆ ವಿರುದ್ಧವಸ್ತುಗಳೆರಡು ಒಟ್ಟುಗೂಡಿದರೆ, ಅವುಗಳಲ್ಲಿ ಒಂದು ನಾಶಹೊಂದಿಬಿಡುವುದು. ಆದುದರಿಂದ ಅವು ಒಟ್ಟಿಗೆ ಕೂಡಿಕೊಂಡಿರುವುದೇ ಇಲ್ಲ.

ದ್ರವ್ಯಾಂತರಗುಣಾ ದ್ರವ್ಯಾಣ್ಯಾಶ್ರಯಂತಿ ಬಹೂನ್ಯಲಂ ।
ಸಂವಿದಶ್ಚ್ಯವನಂ ದುಃಖಂ ಸಂವಿದೋ ಮಾ ಚ್ಯುತೋ ಭವ ॥ ೭೩ ॥

ಏತಾವತ್ಯೈಕಧ್ಯಾನೇನ ನಿತ್ಯಧ್ಯಾನೋಽಥವಾತ್ಮದೃಕ್ ।
ಅಭಾವೇ ದುಃಖದಸ್ಯಾಂತರ್ದೃಶಾ ದೃಶ್ಯಸ್ಯ ವಸ್ತುನಃ ॥ ೭೪ ॥

---

೭೩. ಶಬ್ದ ಸ್ಪರ್ಶ ರೂಪ ರಸ ಗಂಧಗಳೆಂಬ ವಿರುದ್ಧ ಗುಣಗಳುಳ್ಳವುಗಳಾದರೂ ಸೂಕ್ಷ್ಮಭೂತಗಳು ಪಂಚೀಕರಣದಿಂದ ಒಟ್ಟಿಗೆ ಕೂಡುವುವು. ಏಕೆಂದರೆ, ಅವುಗಳಿಗೆ ಪರಸ್ಪರ ವಿರೋಧವು ಇರುವುದಿಲ್ಲ. ಆದುದರಿಂದ ಆಕಾಶಾದಿ ದ್ರವ್ಯಾಂತರಗಳ ಗುಣಗಳು ಪರಸ್ಪರ ಸಮ್ಮೇಳನದಿಂದ ಪಂಚೀಕೃತ ದ್ರವ್ಯಗಳನ್ನು ಆಶ್ರಯಿಸುವುವು. ಆದರೆ ಇಲ್ಲಿ ಎಲೈ ಚಿತ್ತವೇ, ಜಡವಾದ ನಿನಗೂ ಚಿದ್ರೂಪನಾದ ಆತ್ಮನಿಗೂ ಅತ್ಯಂತ ವೈಲಕ್ಷಣ್ಯ (ವಿರೋಧ) ವಿರುವುದು. ಅದು ಕಾರಣ ನಿಮ್ಮಿಬ್ಬರಿಗೂ ಸಂಬಂಧವು ಸಂಗತವಾಗುವುದಿಲ್ಲ. ಹೇಗೆಂದರ ಜಡವಾದ ನಿನ್ನಿಂದ, ಚಿದ್ರೂಪನಾದ ಆತ್ಮನು ತಪ್ಪಿಸಿಕೊಂಡರೆ, ಸಾಧಕವೇ ಇಲ್ಲದೆಹೋಗಿ ಜಡಾಂಶವು ಸಿದ್ಧಿಸುವುದೇ ಇಲ್ಲ. ಹೀಗೆ ಜಡವಾದ ನಿನ್ನ ಅಸಿದ್ಧಿಯು ಪ್ರಸಕ್ತವಾಗುವುದು. ಆದರಿಂದ ನಿನಗೆ ದುಃಖವು ತಪ್ಪುವುದಿಲ್ಲ. ಅಥವಾ ಚಿದ್ರೂಪನಾದ ಆತ್ಮನ ದೆಸೆಯಿಂದ ನೀನು ಜಾರಿಕೊಂಡರೆ ನೀನು ನಿನ್ನ ನಾಶಕ್ಕೋಸ್ಕರವೇ ಆತ್ಮಸಂಬಂಧವನ್ನು ಬಯಸಿದಹಾಗಾಗುವುದು ಅದುಕಾರಣ, ಆತ್ಮಸಂಬಂಧವನ್ನು ಅಪೇಕ್ಷಿಸುವುದಾಗಿ ನೀನು ಉಭಯಪ್ರಕಾರದಿಂದಲೂ. ಆತ್ಮಚೈತನ್ಯದ ದೆಸೆಯಿಂದ ಎಂದಿಗೂ ಚ್ಯುತನಾಗದೆ ಇರು.

(ಪಂಚೀಕರಣಾನಂತರ ಆಕಾಶದಲ್ಲಿ ಶಬ್ದವೆಂಬ ಒಂದೇ ಗುಣವೂ, ವಾಯುವಿನಲ್ಲಿ ಶಬ್ದ ಸ್ಪರ್ಶಗಳೆರಡು. ಅಗ್ನಿಯಲ್ಲಿ ಶಬ್ದಸ್ಪರ್ಶ ರೂಪಗಳು ಮೂರು. ಜಲದಲ್ಲಿ ಶಬ್ದ ಸ್ಪರ್ಶ ರೂಪ ರಸಗಳು ನಾಲ್ಕು. ಭೂಮಿಯಲ್ಲಿ ಮೇಲಣ ನಾಲ್ಕರ ಜೊತೆಗೆ ಗಂಧವೂ ಸೇರಿ ಐದು ಗುಣಗಳು ಇರುವುವು.)

೭೪. ಅಥವಾ ಎಲೈ ಚಿತ್ತವೇ, ಸರ್ವ ವಸ್ತುಗಳೊಳಗೂ ದೃಗ್ರೂಪವಾಗಿರುವ ಚಿದಾತ್ಮನಿಂದ ಸರ್ವದಾ ದುಃಖಪ್ರದವಾದ ಸಕಲ ದೃಶ್ಯ ವಸ್ತುಗಳೂ (ನೀನೂ ಸೇರಿ= ಅಂದರೆ ಚಿತ್ತವೂ ಸೇರಿಕೊಂಡು) ಬಾಧಿತಗಳಾಗಿ ನಾಶ ಹೊಂದಲಾಗಿ ನಿರ್ದುಃಖ, ನಿರತಿಶಯಾನಂದ ರೂಪ ಆತ್ಮವು ಮಾತ್ರವೇ ಅವಶಿಷ್ಟವಾಗು

ಸಂಕಲ್ಪೋನ್ಮುಖತಾಂ ವಿದ್ಧಿ ದುಃಖದಾಂ ಸಂವಿದಶ್ಚ್ಯುತಿಂ ।
ಜಡೇಷೂಪಲ ಭೂತೇಷು ಮನೋ ದೇಹೇಂದ್ರಿಯಾದಿಷು ॥ ೭೫ ॥

ಕೀದೃಶೀ ಕರ್ತೃತಾ ಚಿತ್ತ ಪುಷ್ಪಂ ವ್ಯೋಮ್ನಿ ಕಥಂ ಭವೇತ್ ।
ನಿರಸ್ತ ಕಲನಾ ಪಂಕೇ ಮನನಧ್ವಂಸ ರೂಪಿಣಿ ।
ನ ಚೈವಾತ್ಮನಿ ಕರ್ತೃತ್ವಂ ಸಂಭವತ್ಯಂಬರಾಂಗವತ್ । ॥ ೭೬ ॥

ವುದು. ಇಷ್ಟರಿಂದ ನೀನು ಸಂತೋಷಿಸುವೆಯಾದರೆ, ಆಗ ನೀನು ಏಕಾಗ್ರ ಧ್ಯಾನದಿಂದ ಚಿರಕಾಲ ಅವಿಚ್ಛಿನ್ನ ಸಮಾಧಿನಿಷ್ಠನಾಗಿ ಆತ್ಮದರ್ಶಿಯಾಗಿ ಇದ್ದು ಕೊಂಡಿರು.

೭೫. ಎಲೈ ಮನವೇ, ಪರ್ವತದ ಮೇಲಿಂದ ಕೆಳಕ್ಕೆ ಕಲ್ಲು ಬಂಡೆಗಳ ಮೇಲೆ ಜಾರಿ ಬೀಳುವ ನೀರಿನಂತೆ ಸಂವಿತ್ತು (ಚೈತನ್ಯವು) ಕಲ್ಲು ಬಂಡೆಗಳಿಗೆ ಸದೃಶಗಳಾಗಿ ಅತ್ಯಂತ ಜಡಗಳಾದ ದೇಹೇಂದ್ರಿಯಾದಿಗಳಲ್ಲಿ ಸ್ವರೂಪದಿಂದ ಚ್ಯುತವಾಗಿ ಸಂಕಲ್ಪೋನ್ಮುಖವಾಗುವುದು ಯಾವುದೋ ಅದು ನಿನಗೆ ಅತ್ಯಂತ ದುಃಖಪ್ರದವಾದುದೆಂದು ತಿಳಿ. (ನಿನಗೆ ಸಮಾಧಿ ಸ್ಥಿತಿಯಲ್ಲಿಯೇ ಸುಖವು. ಸಂಕಲ್ಪ ಕಲ್ಪನೆಯಲ್ಲಿ ಸುಖವಿಲ್ಲವೇ ಇಲ್ಲ. ಕೇವಲ ದುಃಖವೇ ಉಂಟಾಗು ವುದು. ಎಂದರ್ಥ.)

೭೬. ಎಲೈ ಚಿತ್ತವೇ, ಸಮಸ್ತ ಸಂಕಲ್ಪ ಕಲ್ಪನೆಗಳೆಂಬ ಕಶ್ಮಲಗಳಿಂದ ವಿವರ್ಜಿತವಾಗಿ, ನಿತ್ಯಶುದ್ಧನೂ, ಮನನಾದಿ ಸಕಲ ವಿಕ್ರಿಯೆಗಳನ್ನು ಧ್ವಂಸ ಮಾಡಿದವನಾಗಿ ನಿಷ್ಕ್ರಿಯನೂ ಆಗಿರುವ ಕೇವಲಾತ್ಮನಲ್ಲಿ ಕರ್ತೃತ್ವವೆಂಬುದು ಎಂತಹುದು? (ಹೇಗೆ ಸಂಭವಿಸುವುದು? ಎಂದರ್ಥ.) ನಿರಾಲಂಬನವಾದ ಆಕಾಶದಲ್ಲಿ ಪುಷ್ಪವು ಹೇಗೆತಾನೆ ಉದ್ಭವಿಸುವುದು? (ಗಗನ ಕುಸುಮದಂತೆಯೇ ಆತ್ಮನಲ್ಲಿ ಕರ್ತೃತ್ವವು ಸರ್ವಥಾ ಅಸಂಭವವು.) ನಿರಾಕಾರವಾದ ಆಕಾಶದಲ್ಲಿ ಅವಯವ ಕಲ್ಪನೆಯು ಅಸಂಭವವಾಗಿರುವಂತೆ ಅವಿಕ್ರಿಯನಾದ ಆತ್ಮನಲ್ಲಿ ಕರ್ತೃತ್ವ ಕಲ್ಪನೆಯು ಸಂಭವಿಸುವುದೇ ಇಲ್ಲ.

ಅಯಂ ಕೇವಲಮಾತ್ಮೈವ ನಾನಾ ನಾನಾತಯಾತ್ಮನಿ ।
ಸ್ಫುರತ್ಯಬ್ಧಿರಿವಾಂಭೋಭಿಃ ಫೇನಬುದ್ಬುದವೀಚಿಭಿಃ ॥ ೭೭ ॥

ಆಭಾಸಮಾತ್ರೇ ಸರ್ವಸ್ಮಿನ್ಸ್ಫುರತ್ಯಸ್ಮಿಂಶ್ಚಿದಾತ್ಮನಿ ।
ದ್ವಿತೀಯಾ ನಾಸ್ತಿ ಕಲನಾ ತಪ್ತಾಂಗಾರ ಇವಾಂಬುಧೌ ॥ ೭೮ ॥

ಕಲ್ಪನಾರಹಿತೇ ದೇವೇ ದೇಹೇ ಮನಸಿ ವಾ ಜಡೇ ।
ಸಂವಿತ್ಸಂವೇದ್ಯನಿರ್ಮುಕ್ತಾ ಸಾರಂ ಸುಂದರ ನೇತರತ್ ॥ ೭೯ ॥

---

೭೭. ಸಮುದ್ರವು ನೊರೆ, ನೀರಿನ ಬುಡ್ಡೆ ಅಲೆ ಮುಂತಾದ ನಾನಾ ರೂಪಗಳಿಂದ ತೋರುವ ನೀರುಗಳಿಂದ ಸ್ಫುರಿಸುವಂತೆ ಈ ಆತ್ಮನೇ ಎಲೈ ಚಿತ್ತವೇ, ನಿನ್ನಿಂದ ಕಲ್ಪಿತವಾದ ನಾನಾ ಪ್ರಕಾರಗಳಾದ ಭೇದಗಳಿಂದ ಅವಿಕ್ರಿಯನಾಗಿಯೇ (ಕೇವಲವಾಗಿ) ಆತ್ಮನಲ್ಲಿಯೇ (ತನ್ನಲ್ಲಿ ತಾನೇ) ಸ್ಫುರಿಸುತ್ತಿರುವನೇ ಹೊರತು ಆತ್ಮನು ತಾನಾಗಿ ಭೇದಗಳನ್ನು ಕಲ್ಪಿಸುವುದಿಲ್ಲ.

೭೮. ಕೇವಲ ಆಭಾಸ ರೂಪವಾದ (ಶುಕ್ತಿ ರಜತಾದಿಗಳಂತೆ ಮಾತ್ರವೇ ಪ್ರತಿಭಾಸಮಾನವಾದ) ಈ ದೃಶ್ಯವೆಲ್ಲವೂ ಚಿದಾತ್ಮನಲ್ಲಿ ಮಿಥ್ಯೆಯಾಗಿಯೇ ಸ್ಫುರಿಸುತ್ತಿರಲು ಸಮುದ್ರದಲ್ಲಿ ಬೆಂಕಿಯ ಕೆಂಡವು ಇಲ್ಲದಂತೆಯೇ ಅದ್ವಿತೀಯನಾದ ಆತ್ಮನಲ್ಲಿ ವಸ್ತುತಃ ಆತ್ಮಭಿನ್ನವಾದ ಎರಡನೆಯ ವಸ್ತುವಿನ ಕಲ್ಪನೆಯೇ (ದ್ವೈತ ಕಲ್ಪನೆಯೇ,) ಸುತರಾಂ ಇಲ್ಲವು.

೭೯. ಎಲೈ ಸುಂದರ, ಚಿತ್ತವೇ, ಹೀಗೆ ಸ್ವಯಂ ಪ್ರಕಾಶನಾದ ಚಿದ್ರೂಪಾತ್ಮನು ನಿರ್ವಿಕಲ್ಪನಾಗಿಯೂ, ದೇಹವೂ, ಮನಸ್ಸೂ ಅತ್ಯಂತ ಜಡಗಳಾಗಿಯೂ ಇರುತ್ತಿರಲಾಗಿ ಜ್ಞೇಯ ವಿವರ್ಜಿತನಾದ ಕೇವಲ ಜ್ಞಾನರೂಪನಾದ ಪರಮಾತ್ಮನೇ ಸಾರಭೂತನಾದವನು, (ಕಾಲತ್ರಯಾಬಾಧಿತನಾಗಿಯೂ, ಅಪರಿಚ್ಛಿನ್ನನಾಗಿಯೂ ಇರುವವನು) ಅವನ್ನು ಬಿಟ್ಟರೆ ಬೇರೆಯಾವುದೊಂದೂ ಪರಮಾರ್ಥಸತ್ಯವಾಗಿಯೂ, ಸಾರವಾಗಿಯೂ ಇಲ್ಲವು.

ಇದಮನ್ಯದಿದಂ ನಾನ್ಯಚ್ಛುಭಂ ವಾಶುಭಮೇವ ಚ ।
ಇತ್ಯಸತ್ಕಲ್ಪನಾ ನಾಸ್ತಿ ಯಥಾ ನಭಸಿ ಕಾನನಂ ॥ ೮೦ ॥

ಸಂವೇದ್ಯ ರಹಿತಂ ಸಂವಿನ್ಮಾತ್ರಮೇವೇದಮಾತತಂ ।
ತತ್ರಾಯಮಹಮನ್ಯೋಽಯಮಿತ್ಯಸತ್ಕಲನಾ ಕಥಂ ॥ ೮೧ ॥

ಅನಾದಿಮತಿ ನೀರೂಪೇ ಸರ್ವಗೇ ವಿತತಾತ್ಮನಿ ।
ಆರೋಪಯೇತ್ಕಃ ಕಲನಾಮೃಗ್ವೇದಂ ವ್ಯೋಮ್ನಿ ಕೋ ಲಿಖೇತ್ ॥ ೮೨ ॥

[ವೇದ್ಯ= ಜ್ಞೇಯ= ಸಂವೇದ್ಯ ಪರ್ಯಾಯ ಪದಗಳು.]

೮೦. "ಇದು ಬೇರೆ" (ನನ್ನದಲ್ಲ) "ಅದು ಬೇರೆಯಲ್ಲ." "ಇದು ಶುಭ." "ಅದು ಅಶುಭ" ಇವೇ ಮೊದಲಾದ ಮಿಥ್ಯಾ ರೂಪ ಭ್ರಾಂತಿ ಕಲ್ಪನೆಗಳು, ಆಕಾಶದಲ್ಲಿ ಕಾನನವಿಲ್ಲದಿರುವಂತೆ, ಇಲ್ಲವೇ ಇಲ್ಲ.

೮೧. ಸಂವೇದ್ಯ (ಜ್ಞೇಯ) ರಹಿತವಾದ ಕೇವಲ ಸಂವಿತ್ತು (ಜ್ಞಾನ) ಮಾತ್ರವೇ ಈರೀತಿಯಾಗಿ ಸರ್ವತ್ರ ವ್ಯಾಪಿಸಿಕೊಂಡಿರುವುದು. ಇದರಲ್ಲಿ (ಹೀಗಿರುವಾಗ) ಇವನು, ನಾನು, ಅವನು, ಬೇರೆಯವನು, ಎಂಬೀ ಮೊದಲಾದ ಅಸತ್ತಾದ ಭ್ರಾಂತಿ ಕಲ್ಪನೆಯು ಹೇಗೆ ಉದಯಿಸುವುದು ?

೮೨. ಆದ್ಯಂತರಹಿತನೂ, ರೂಪರಹಿತನೂ, ಸರ್ವಗತನೂ, ಸರ್ವಸ್ವರೂಪಿಯಾಗಿ ಸರ್ವತ್ರ ವ್ಯಾಪಿಸಿರುವವನೂ, ನಿತ್ಯಶುದ್ಧನೂ ಆದ ಪರಮಾತ್ಮನಲ್ಲಿ ಅಸತ್ಕಲ್ಪನೆಯನ್ನು ಆರೋಪಿಸಲು ಯಾವನುತಾನೇ ಶಕ್ತನಾಗಿರುವನು? ಅಂತರಿಕ್ಷದಲ್ಲಿ ಚಿತ್ರವನ್ನು (ಋಗ್ವೇದ) ಬರೆಯಬಲ್ಲವನು ಯಾವನಿರುವನು ?

ನಿತ್ಯೋದಿತೇ ಸಕಲ ವಸ್ತು ಪದಾರ್ಥಸಾರೇ ।
ಸಂವಿತ್ಸ್ಥಿತೇ ಭರಿತ ನಿರ್ಭರ ಭೂರಿದಿಕ್ಕೇ ।
ಆತ್ಮನ್ಯಸತ್ಯಮಿವ ಸಾಧುಗತೇ ಮಲತ್ವಾತ್ ।
ಕ್ಷೀಣೌ ಸುಖಾ ಸುಖಲವೌ ಮಮ ವೈ ಸ ಮೋಹಃ ॥ ೮೩ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇಷೂಪಶಮಪ್ರಕರಣೇ "ಇಂದ್ರಿಯಾನುಶಾಸನ ಯೋಗೋಪದೇಶೋ" ನಾಮ ದ್ವ್ಯಶೀತಿತಮಃ ಸರ್ಗಃ

---

೮೩. ಎಲೈ ಚಿತ್ತವೇ, ನೀನು ನಿನ್ನ (ಚಿತ್ತದ) ನೈರ್ಮಲ್ಯವನ್ನು ಸಂಪಾದಿಸಿಕೊಂಡು ನಿತ್ಯೋದಿತನಾಗಿಯೂ, (ಉದಯಾಸ್ತಮಯಗಳೆಂಬ ಜನನ ಮರಣ ರೂಪ ವಿಕಾರರಹಿತನಾಗಿ ಶಾಶ್ವತನೂ, ಸ್ವತಃಸಿದ್ಧನೂ ಆಗಿಯೂ) ವಸ್ತುಗಳೆಂದು ಪ್ರಸಿದ್ಧವಾಗಿರುವ ಸಮಸ್ತ ನಾಮರೂಪ (ಪದ ಮತ್ತು ಅರ್ಥ) ಮಯವಾದ ಪ್ರಪಂಚದಲ್ಲೆಲ್ಲಾ ಸಾರತಮವಾಗಿಯೂ, ಚಿನ್ಮಾತ್ರ ಸ್ವಭಾವನಾಗಿಯೂ ಇರುವ ಆತ್ಮನನ್ನು ಸಮಸ್ತ ದಿಗಂತರಗಳಲ್ಲಿಯೂ, ನಿರಂತರ ಪರಿಪೂರ್ಣವಾಗಿ ಸರ್ವತ್ರ ವ್ಯಾಪಿಸಿಕೊಂಡಿರುವನೆಂದು ನಿಸ್ಸಂದೇಹವಾಗಿ ಅಪರೋಕ್ಷ ಜ್ಞಾನದಿಂದ ತಿಳಿದುಕೊಂಡುಬಿಟ್ಟರೆ ಆಗಲೇ ನನ್ನ ಸುಖದುಃಖ ಲೇಶಗಳು ಅತ್ಯಂತಾಸತ್ಯಗಳಾದ ವಂಧ್ಯಾಪುತ್ರ ಶುಕ್ತಿರಜತಾದಿಗಳಂತೆ ಸಂಪೂರ್ಣವಾಗಿ ನಾಶ ಹೊಂದಿಬಿಡುವುವು. ಏಕೆಂದರೆ ಆ ಸುಖದುಃಖ ಜ್ಞಾನವು ನಿಶ್ಚಯವಾಗಿಯೂ ಕೇವಲ ಭ್ರಾಂತಿ ಮಾತ್ರದಿಂದ ಕಲ್ಪಿತವಾದುದಾಗಿರುವುದು. ಯಥಾರ್ಥವಾದುದಲ್ಲ. (ಭ್ರಾಂತಿ ಕಲ್ಪಿತವಾದ ಶುಕ್ತಿರಜತ ರೂಪ ಅಜ್ಞಾನವು ಶುಕ್ತಿ ತತ್ತ್ವ ಜ್ಞಾನದ ದೆಸೆಯಿಂದ ನಿವೃತ್ತಿಯಾಗುವಂತೆ ಭ್ರಾಂತಿ ಕಲ್ಪಿತವಾದ ಸುಖದುಃಖಾದಿ ಮತ್ತ್ವರೂಪ ಅಜ್ಞಾನವು ಆತ್ಮ ಯಾಥಾರ್ಥ್ಯ ಜ್ಞಾನದಿಂದ ಕೂಡಲೆ ನಿವೃತ್ತಿಯಾಗುವುದೆಂದರ್ಥ.)

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಇಂದ್ರಿಯಾನುಶಾಸನ ಯೋಗೋಪದೇಶ" ವೆಂಬ ಎಂಭತ್ತೆರಡನೆಯ ಸರ್ಗವು

ತ್ರ್ಯಶೀತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಭೂಯೋ ಮುನಿವರೋ ಧೀರೋ ಧಿಯಾ ಧವಲಮೇಧಯಾ ।
ಸ್ವಮಿಂದ್ರಿಯಗಣಂ ಗುಪ್ತೋ ಬೋಧಯಾಮಾಸ ಸಾಧ್ವಿದಂ ॥ ೧ ॥

ತಚ್ಛೇಂದ್ರಿಯಗಣಸ್ಯಾರ್ಥೇ ಶೃಣು ವಕ್ಷ್ಯಾಮಿ ತೇ ಸ್ಫುಟಂ ।
ಶ್ರುತ್ವಾ ತದ್ಭಾವನಾಮೇತ್ಯ ಪರಾಂ ನಿರ್ದುಃಖತಾಂ ವ್ರಜ ॥ ೨ ॥

ಭವತಾಮಾತ್ಮಸತ್ತೈಷಾ ದುಃಖಾಯೈವಾಂತದಾಯಿನೀ ।
ಅಸತ್ಯಾಮಾತ್ಮನಃ ಸತ್ತಾಂ ತದ್ಭವಂತಸ್ತ್ಯಜನ್ತ್ವಿತಿ ॥ ೩ ॥

ಎಂಭತ್ತಮೂರನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು:—

೧. ಅಯ್ಯ ರಾಮ, ಅವಿಕೃತ ಚಿತ್ತ (ಸ್ಥಿರಚಿತ್ತ) ನಾದ ಆ ವೀತಹವ್ಯ ಮುನೀಶ್ವರನು ವಿಜನವಾದ ಏಕಾಂತ ಸ್ಥಾನದಲ್ಲಿದ್ದುಕೊಂಡು, ಶುದ್ಧವಾದ ಧಾರಣಾ ಶಕ್ತಿಯುಳ್ಳ ತನ್ನ ಬುದ್ಧಿಯಿಂದ, ತನ್ನ ಇಂದ್ರಿಯ ಸಮುದಾಯವನ್ನು ಕುರಿತು ಪುನಃ ಮುಂದೆ ಈ ಸರ್ಗದಲ್ಲಿ ಹೇಳುವ ರೀತಿಯಲ್ಲಿ, ಚೆನ್ನಾಗಿ ಬೋಧಿಸಿದನು.

೨. ಆ ಋಷೀಶ್ವರನು, ತನ್ನ ಇಂದ್ರಿಯ ಸಮೂಹಕ್ಕೋಸ್ಕರವಾಗಿ, ಉಪದೇಶಮಾಡಿದ ಆ ವಿಚಾರವನ್ನು ನಾನು ನಿನಗಾಗಿ ಈಗ ಸ್ಪಷ್ಟವಾಗಿ ವಿವರಿಸುವೆನು ಕೇಳು. ನೀನು ಆ ವಿಚಾರವನ್ನು ನನ್ನಿಂದ ಕೇಳಿ ತಿಳಿದು, ಬಳಿಕ ನೀನೂ ಮನಸ್ಸಿನಲ್ಲಿ ಅದೇ ಭಾವನೆಯನ್ನು ಕ್ರಮೇಣ ಸ್ಥಿರಪಡಿಸಿಕೊಂಡು, ಕೊನೆಗೆ ಸ್ವಾತ್ಮತತ್ತ್ವ ಜ್ಞಾನಪ್ರಾಪ್ತಿಯಿಂದ ಸಮಸ್ತ ಪ್ರಾಪಂಚಿಕ ದುಃಖಗಳನ್ನು ಧ್ವಂಸಮಾಡಿಕೊಂಡು, ನಿತ್ಯನಿರತಿಶಯಾನಂದೈಕರೂಪನಾಗಿರುವವನಾಗು.

೩. (ಆತನ ಉಪದೇಶಕ್ರಮವು ಹೇಗೆಂದರೆ,) ವೀತಹವ್ಯನು ಹೇಳಿದನು.

ಮದೀಯೇನೋಪದೇಶೇನ ಸತ್ತೈಷಾ ಭವತಾಂ ಕ್ಷಯಂ ।
ಗತೈವೇತಿ ಸ್ಫುಟಂ ಮನ್ಯೇ ಯೂಯಂ ಹ್ಯಜ್ಞಾನ ಸಂಭವಾಃ ॥ ೪ ॥

ಸ್ವಸತ್ತಾ ಸ್ಫುಟತಾಂ ಯಾತಿ ದುಃಖಾಯ ತವ ಚಿತ್ತಕ ।
ತಪ್ತಕಾಂಚನರುಲ್ಲಾಸೋ ದಾಹಾಯೈವ ಸ್ವಪಾರ್ಶ್ವಯೋಃ ॥ ೫ ॥

(ಇಂದ್ರಿಯಗಳಿಗೆ) ಎಲೈ ಇಂದ್ರಿಯಗಣಗಳೇ, ಅವಿಚಾರ ಪೂರ್ವಕವಾದ ಅಜ್ಞಾನ ದೃಷ್ಟಿಯಿಂದ ಮಾತ್ರವೇ ನೀವುಗಳು ಈ ರೀತಿಯಾಗಿ ಸ್ವಕೀಯವಾದ ಸತ್ತೆಯನ್ನು (ಇರುವಿಕೆಯನ್ನು) ಪಡೆದಿರುವ ಸ್ಥಿತಿಯು, ಬದುಕಿರುವಕಾಲದಲ್ಲಿ ಅನೇಕಾನೇಕ ಅನರ್ಥಪರಂಪರೆಗಳಿಗೂ ದುಃಖಗಳಿಗೂ ಮಾತ್ರವೇ ಹೇತುವಾಗಿರುವುದು. ಮತ್ತು ಜೀವಿತ ಕಾಲಾನಂತರದಲ್ಲಿ, ಪುನಃ ಪುನಃ ಜನನ ಮರಣ, ನರಕಾದಿ ನಾನಾ ದೋಷ ಗಳನ್ನು ಪ್ರಸವಿಸುವುದು. ಅದುಕಾರಣ, ಪೂರ್ವದಲ್ಲಿ ನಿಮಗೆ ನಾನು ಉಪ ದೇಶಮಾಡಿದ ವಿಚಾರಕ್ರಮದಿಂದ ನೀವುಗಳು ನಿಮ್ಮ ಅಸತ್ಯವಾದ ಸತ್ತೆಯನ್ನು (ಇರುವಿಕೆಯನ್ನು) ಬಿಟ್ಟು ಬಿಡಿ.

೪. ನಾನು ನಿಮಗೋಸ್ಕರ ಹಿಂದಿನ ಸರ್ಗಗಳಲ್ಲಿ ಮಾಡಿದ ಆತ್ಮತತ್ತ್ವೋಪ ದೇಶದಿಂದ, ನಿಮಗೆ ತತ್ತ್ವಜ್ಞಾನವು ನಿಸ್ಸಂದೇಹವಾಗಿ ಲಭಿಸಿರುವುದೆಂದೂ, ಆದರಿಂದ ನಿಮ್ಮೆಲ್ಲರ ಈ ಸದ್ಭಾವವು ನಿಶ್ಚಯವಾಗಿಯೇ ನಾಶಹೊಂದಿಯೇ ಬಿಟ್ಟರು ವುದೆಂದೂ ನಾನು ಸ್ಪಷ್ಟವಾಗಿಯೂ ದೃಢವಾಗಿಯೂ ಭಾವಿಸಿರುವೆನು. ಏಕೆಂದರೆ ನೀವುಗಳೆಲ್ಲರೂ ಅಜ್ಞಾನದಿಂದ ಮಾತ್ರವೇ ಶುಕ್ತಿರಜತಾದಿಗಳಂತೆ ಕೇವಲ ಮಿಥ್ಯೆ ಯಾಗಿಯೇ ಉದ್ಭವಿಸಿರತಕ್ಕವುಗಳು. (ತತ್ತ್ವಜ್ಞಾನದಿಂದ ಅಜ್ಞಾನವು ನಾಶ ಹೊಂದಲಾಗಿ, ಅಜ್ಞಾನದಿಂದಲೇ ಉದ್ಭವಿಸಿ ಬದುಕಿರುವ ನೀವುಗಳೂ ನಾಶಹೊಂದಿ ಬಿಡುವಿರಿ.

೫. ಅಯ್ಯೋ ಹಾಳು ಚಿತ್ತವೇ, ನಿನ್ನ ಸತ್ತೆಯು (ಇರುವಿಕೆಯು) ಕೇವಲ ಅಪರಿಮಿತವಾದ ದುಃಖಕ್ಕಾಗಿಯೇ ಪ್ರಕಟವಾಗುವುದು. ಪುಟಹಾಕಿ ಪರಿಷ್ಕರಿಸಿದ ಚಿನ್ನದಂತೆ ಪ್ರಕಾಶಿಸುವ ಅಗ್ನಿಯು ಭುಗಭುಗನೆ ಧ್ವನಿಮಾಡುತ್ತಾ ತಾನೇತಾನಾಗಿ (ನಿರಾತಂಕವಾಗಿ) ಪ್ರಜ್ವಲಿಸುತ್ತಾ ಇರಲು, ಅದರ ಉಭಯಪಾರ್ಶ್ವಗಳಲ್ಲಿಯೂ ನಿಂತು, ಆ ಅಗ್ನಿಯೊಡನೆ ಸರಸವಾಗಿ ಕ್ರೀಡಿಸುವಿಕೆಯು ಆಯಾಪ್ರಾಣಿಗಳ ಶರೀರ ಗಳನ್ನೂ ದಹಿಸಿಬಿಡುವುದಕ್ಕೆ ಕಾರಣವಾಗುವುದಲ್ಲವೇ ?

ಪಶ್ಯ ತ್ವಯಿ ಸತಿ ಭ್ರಾಂತಜಲಕಲ್ಲೋಲಸಂಕುಲಾಃ ।
ವಿಶಂತಿ ಕಾಲಜಲಧಿಂ ಸಂಸಾರ ಸರಿತಾಂ ಗಣಾಃ ॥ ೬ ॥

ಪತಂತ್ಯಹಮಹಮಿಕಾ ವಿಹಿತಾನ್ಯೋನ್ಯ ಚಿಂತಿತಾಃ ।
ಕುತೋಽಪಿ ದುಃಖಾವಲಯೋ ಧಾರಾ ಆಸಾರಗಾ ಇವ ॥ ೭ ॥

ಪರಿಸ್ಫುರತ್ಯಪರ್ಯಂತಾ ಹೃದಯೋನ್ಮೂಲನೋದ್ಯತಾ ।
ಆಕ್ರಂದಕಾರಿಣೀ ಕ್ರೂರಾ ಭಾವಾಭಾವ ವಿಸೂಚಿಕಾ ॥ ೮ ॥

---

೬. ಎಲೈ ಭ್ರಾಂತವಾದ ಚಿತ್ತವೇ, ನಿನ್ನ ಸದ್ಭಾವದಿಂದ ಮಾತ್ರ (ಅಂದರೆ ನೀನು ಪ್ರಕಟವಾಗಿ ಇದ್ದರೆ ಮಾತ್ರವೇ) ಜಡರಾದ (ಮೂಢ) ಜನರ ರಾಗದ್ವೇಷಾದಿ ಕ್ಷೋಭೆಗಳೆಂಬ, ಜಲಕಲ್ಲೋಲ (ದೊಡ್ಡ ಅಲೆ) ಗಳಿಂದ ಬಹುಭಯಂಕರವಾಗಿರುವ ಬಹುವಿಧ ಸಂಸಾರಗಳೆಂಬ ನಾನಾ ನದಿಗಳ ಸಮುದಾಯಗಳು ಕಾಲವೆಂಬ ಸಮುದ್ರವನ್ನು ಅವಿಚ್ಛಿನ್ನವಾಗಿ ಪ್ರವೇಶಮಾಡುವುವು ನೋಡು.

(ಕಾಲ=ಮೃತ್ಯುವೆಂದೂ ಅರ್ಥಮಾಡಬಹುದು).

೭. ಪರಸ್ಪರ ದುರಹಂಕಾರದಿಂದ ಕೂಡಿಕೊಂಡು, ಅನ್ಯೋನ್ಯವಾಗಿ, ಹಿಂಸಿಸುವಿಕೆ, ಕೊಲ್ಲುವಿಕೆ ಮುಂತಾದ ಬಹುವಿಧ ಚಿಂತನಗಳಿಂದ ಆಕ್ರಾಂತವಾದ ನಾನಾ ದುಃಖಪರಂಪರೆಗಳು, ಸಂತತವಾಗಿ ಸುರಿಯುವ ಮಳೆಯಲ್ಲಿನ ಜಲಧಾರೆಗಳಂತೆ, ಎಲ್ಲಿಂದಲೋ ಅವಿಚ್ಛಿನ್ನವಾಗಿ ಬಂದು ಒದಗುವುವು.

೮. ಸಂಪತ್ತು, ವಿಪತ್ತುಗಳೆಂಬುದೇ ಲೋಕದಲ್ಲಿ ಸರ್ವಾನರ್ಥಕಾರಿಯಾದ ವಿಸೂಚಿಕಾವ್ಯಾಧಿಯಾಗಿರುವುದು. ಇದು ಕೊನೆಯೇ ಇಲ್ಲದೆ ನಿರಂತರವೂ ಅತಿ ಕ್ರೂರವಾಗಿ ಸ್ಫುರಿಸುತ್ತಿರುವುದು. ಇದರ ಬಾಧೆಯನ್ನು ಸಹಿಸಲಾರದೆ, ಸರ್ವರೂ ಗೋಳಿಡುವಂತೆ ಮಾಡುವುದು, (ಇದು ಎಲ್ಲರನ್ನೂ ಗೋಳುಗುಟ್ಟಿಸುವುದು.) ಎಲ್ಲರ ಹೃದಯಗಳನ್ನು ಭೇದಿಸಿ ನಿರ್ಮೂಲವಾಗಿ ಹಾಳುಮಾಡುವ ದುಷ್ಕಾರ್ಯದಲ್ಲಿ ಇದು ಸರ್ವದಾ ಪ್ರವರ್ತಿಸುವುದು.

ಕಾಸಶ್ವಾಸರಣ ದ್ಭೃಂಗಾ ಕಲೇವರಜರದ್ರುಮೇ ।
ವಿಕಸತ್ಯ ಮಲೋದ್ಯೋತಾ ಜರಾಮರಣ ಮಂಜರೀ ॥ ೯ ॥

ಕಲ್ಲೋಲವ್ಯಾಲವಲಿತೇ ಶರೀರಶ್ವ ಭ್ರಕೋಟರೇ ।
ಘನನೀಹಾರಕೇ ಸ್ವಾಂತಶ್ಚಿಂತಾ ಚಪಲಮರ್ಕಟೀ ॥ ೧೦ ॥

ಲೋಭನಾಥ್ನ್ಯಾ ರಟತ್ಪಕ್ಷೀ ತೀಕ್ಷ್ಣಯಾ ದ್ವಂದ್ವತುಂಡಯಾ ।
ಕಾಯಜೀರ್ಣ ದ್ರುಮಾದಸ್ಮಾದ್ಗುಣಖಂಡಂ ನಿಕೃಂತತಿ ॥ ೧೧ ॥

---

೯. ಈ ದೇಹವೆಂಬುದು ಒಂದು ಜೀರ್ಣವೃಕ್ಷದಂತೆ ಇರುವುದು. ಜರಾಮರಣವೆಂಬ ಒಂದು ಬಳ್ಳಿಯು ನಿರ್ಮಲವಾಗಿ ಥಳಥಳನೆ ಹೊಳೆಯುತ್ತಾ ಆ ದೇಹವೃಕ್ಷದಲ್ಲಿ ಹಬ್ಬಿಕೊಂಡು ವಿಕಾಸಹೊಂದುವುದು. ಆ ಬಳ್ಳಿಯಲ್ಲಿರುವ ಹೂಗಳಲ್ಲಿ ಕೆಮ್ಮು (ಕಾಸ) ಶ್ವಾಸಗಳೆಂಬ ಭ್ರಮರಗಳು ಸರ್ವದಾ ಧ್ವನಿ ಮಾಡುತ್ತಿರುವುವು.

೧೦. ಮತ್ತು ಈ ಶರೀರವೆಂಬುದು ಒಂದು ಆಳವಾದ ಭೂಛಿದ್ರವು (ಗುಂಡಿ) ಇದರೊಳಗಿರುವ ಒಂದುರಂಧ್ರ (ಬಿಲ) ದಲ್ಲಿ (ಅಂದರೆ ಹೃದಯದಲ್ಲಿ) ಮನೋರಥ ತರಂಗ (ಅಲೆ) ಗಳೆಂಬ (ತರಂಗಗಳಂತೆ ಮೇಲಿಂದ ಮೇಲೆ ಪರಂಪರೆಯಾಗಿ ಉದ್ಭವಿಸತಕ್ಕ) ದುಷ್ಟಸರ್ಪಗಳು ವ್ಯಾಪಿಸಿಕೊಂಡಿರುವುವು. ಇಂದ್ರಿಯ ಛಿದ್ರದ್ವಾರಗಳೆಂಬ ಮಂಜಿನಿಂದ ಕವಿದಿರುವುದು. ಮತ್ತು ಇದರೊಳಗೆ ಚಿಂತೆಯೆಂಬ ಜೇಡರ ಹುಳುವು ಬಲೆಯನ್ನು ರಚಿಸುವ ಕಾರ್ಯದಲ್ಲಿ ನಿರತವಾಗಿ ಚಲಿಸುತ್ತಿರುವುದು

(ಚಿಂತಾಚಪಲಮರ್ಕಟೀ= ಚಿಂತೆಯೆಂಬ ಚಪಲಾ= ಜಾಲರಚನವ್ಯಗ್ರವಾದ ಮರ್ಕಟೀ= ಊರ್ಣನಾಭಿಕೀಟಿಕಾ ಎಂದು ತಾತ್ಪರ್ಯ ಪ್ರಕಾಶಟೀಕಾ. ಒಂದು ಆಳವಾದ ಭೂಛಿದ್ರದಲ್ಲಿ ಮರ್ಕಟಿ (ವಾನರ= ಕಪಿ) ಗಳು ವಾಸಮಾಡುವುದು ಅಸಂಭವ. ಅದು ಕಾರಣ ಟೀಕಾಕಾರರ ಅಭಿಪ್ರಾಯವೇ ಸಮಂಜಸವಾಗಿ ತೋರುವುದು. ಮರ್ಕಟ ಶಬ್ದಕ್ಕೆ ಕೋಶದಲ್ಲಿ ಊರ್ಣನಾಭಿ spider ಎಂಬ ಅರ್ಥವನ್ನೂ ಹೇಳಿದೆ.)

೧೧. ಲೋಭವೆಂಬ ಒಂದು ಪಕ್ಷಿಯು ಈ ದೇಹವೆಂಬ ಜೀರ್ಣ ವೃಕ್ಷದಲ್ಲಿ

ಹೃದಯಾವಕರಂ ಕೀರ್ಣಮಿತಶ್ಚೇತಶ್ಚ ಕರ್ಕಶಃ ।
ಅಪವಿತ್ರೋ ದುರಾಚಾರಃ ಕುರುತೇ ಕಾಮುಕುಕ್ಕುಟಃ ॥ ೧೨ ॥

ಮಹತ್ಯಾಂ ಮೋಹಯಾಮಿನ್ಯಾ ಮುಲ್ಬಣೋ ಜ್ಞಾನಕೌಶಿಕಃ ।
ಶ್ಮಶಾನ ಇವ ವೇತಾಲಃ ಪರಿವಲ್ಗತಿ ಹೃದ್ದ್ರುಮೇ ॥ ೧೩ ॥

ಏತಾಶ್ಚಾನ್ಯಾಶ್ಚ ಬಹ್ವ್ಯೋಽಪಿ ತ್ವಯೀಂದ್ರಿಯಗಣೇ ಸತಿ ।
ಪಿಶಾಚ್ಯ ಇವ ಶರ್ವರ್ಯಾಂ ಪ್ರವಲ್ಗಂತ್ಯಶುಭಶ್ರಿಯಃ ॥ ೧೪ ॥

ವಾಸಮಾಡಿಕೊಂಡಿರುತ್ತಾ ತನ್ನ ವಿಲಾಸಗಳಿಂದ ವಿಶೇಷವಾಗಿ ಕೂಗುತ್ತಾ, ಅತಿ ತೀಕ್ಷ್ಣವಾದ ಸುಖದುಃಖಾದಿ ದ್ವಂದ್ವ ಭ್ರಾಂತಿಯೆಂಬ ತನ್ನ ಕೊಕ್ಕಿನಿಂದ ಶಾಂತಿ, ದಾಂತಿ, ಧರ್ಮ ಮೊದಲಾದ ಗುಣ ಸಮೂಹಗಳೆಂಬ ಫಲ ಪುಷ್ಪಗಳನ್ನು ಸರ್ವದಾ ಕಡಿದು ಚೂರು ಚೂರು ಮಾಡುತ್ತಿರುವುದು.

೧೨. ಅಪವಿತ್ರವಾಗಿಯೂ, ದುರಾಚಾರ ಮಯವಾಗಿಯೂ, ಅತ್ಯಂತ ಕಠೋರವಾಗಿಯೂ ಇರುವ ಕಾಮವೆಂಬ ಕುಕ್ಕುಟವು ರಾಗಾದಿ ವಾಸನಾ ಕ್ರಾಂತ ವಾದ ಮನಸ್ಸೆಂಬ ಕಸದ ಕುಪ್ಪೆಯನ್ನು ಪದೇ ಪದೇ ತನ್ನ ಪಾದಗಳಿಂದ ಅತ್ತಿತ್ತ ಕೆದಕಿ ಚೆಲ್ಲಾಡುತ್ತಾ ಇರುವುದು.

೧೩. ಮಹಾ ಮೋಹವೆಂಬ ಘೋರವಾದ ರಾತ್ರಿಯಲ್ಲಿ ಅತಿ ಘನವಾದ ಭ್ರಾಂತಿಯೆಂಬ ಗೂಬೆಯು ಶ್ಮಶಾನದಲ್ಲಿ ಬೇತಾಳನಂತೆ ಹೃದಯವೆಂಬ ಮರದಲ್ಲಿ ವಿಶೇಷವಾಗಿ ನಲಿದಾಡುತ್ತಿರುವುದು.

೧೪. ಎಲೈ ಚಿತ್ತವೇ, ನೀನೂ ನಿನ್ನ ಜೊತೆಗೆ ಈ ಇಂದ್ರಿಯ ಗಣಗಳೂ ಇರುವುದರಿಂದಲೇ, ಇದುವರೆವಿಗೂ ಹೇಳಿದಂಥ ಮತ್ತು ಇನ್ನೂ ಇತರ ಅನೇ ಕಾನೇಕ ಅಮಂಗಳಗಳು ಹೇರಳವಾಗಿ ರಾತ್ರಿ ವೇಳೆಗಳಲ್ಲಿ ಪಿಶಾಚಿಗಳಂತೆ, ಸರ್ವದಾ ಕುಣಿಯುತ್ತಾ ಭಯಂಕರಗಳಾಗಿರುವುವು.

ತ್ವಯಿ ತ್ವಸತಿ ಹೇ ಸಾಧೋ ಸರ್ವಾ ಏವ ಶುಭಾಶ್ರಿಯಃ ।
ಪ್ರಭಾತ ಇವ ಪದ್ಮಿನ್ಯಃ ಸಾಲೋಕಂ ವಿಲಸಂತ್ಯಲಂ ॥ ೧೫ ॥

ಪ್ರಶಾಂತ ಮೋಹ ಮಿಹಿಕಂ ರಾಜತೇ ಹೃದಯಾಂಬರಂ ।
ನಿರ್ಮಲಾಲೋಕ ವಲಿತಂ ನೀರಜಸ್ಕತರಾಂತರಂ ॥ ೧೬ ॥

ಅಶಂಕಿತನಭಃಕೋಷ ಪತಿತಾಕುಲ ಪೂರವತ್ ।
ನಾಪತಂತಿ ವಿಕಲ್ಪೌಘಾಶ್ಚಿರಂ ಕೈವಲ್ಯಕಾರಿಣಃ ॥ ೧೭ ॥

ಸರ್ವಸ್ಯಾಹ್ಲಾದಿನೀ ಶಾಂತಾ ಮೈತ್ರೀ ಪರಮ ಪಾವನೀ ।
ಅಭ್ಯುದೇತಿ ಹೃದೋ ಹೃದ್ಯಾ ಸುತರೋರಿವ ಮಂಜರೀ ॥ ೧೮ ॥

---

೧೫. ಎಲೈ ಸಾಧುವಾದ ಚಿತ್ತವೇ, ನೀನು ಇಲ್ಲದಿದ್ದರೋ ಪ್ರಾತಃಕಾಲದಲ್ಲಿ ಕಮಲ ಲತೆಗಳಂತೆ ಸಮಸ್ತವಾದ ಮಂಗಳಗಳೂ ಸಮೃದ್ಧವಾಗಿ, ವಿಕಾಸ ಹೊಂದಿ ಉಲ್ಲಾಸದಿಂದ ಕಳಕಳನೆ ಚೆನ್ನಾಗಿ ವಿರಾಜಿಸುವುವು.

೧೬. ಮತ್ತು ಹೃದಯವೆಂಬ ಆಕಾಶವನ್ನು ಕವಿದುಕೊಂಡಿರುವ ಮೋಹ ವೆಂಬ ಮಂಜು ಅದೃಶ್ಯವಾಗುವುದು. ಆಗ ಹೃದಯಾಕಾಶವು ನಿರ್ಮಲವಾದ ವಿವೇಕವೆಂಬ ಪ್ರಕಾಶದಿಂದ ವ್ಯಾಪ್ತವಾಗಿಯೂ, ರಜೋಗುಣವೆಂಬ ಧೂಳನ್ನು ಆತ್ಯಂತಿಕವಾಗಿ ಕಳೆದುಕೊಂಡು ಪರಮ ಪವಿತ್ರವಾದ ಮಧ್ಯಭಾಗವುಳ್ಳದಾಗಿಯೂ ಪ್ರಶಸ್ತವಾಗಿ ವಿರಾಜಿಸುವುದು.

೧೭. ನಿಃಶಂಕವಾಗಿಯೇ, ಅಂತರಿಕ್ಷದ ಮಧ್ಯಭಾಗದಿಂದ ಸುರಿಯುತ್ತಲೂ ಜಂಝೂವಾತದಿಂದ ವ್ಯಾಕುಲವಾಗಿಯೂ ಇರುವ ನಿರಂತರವಾದ ಮಳೆಯ ಧಾರೆ ಗಳಹಾಗೆ ಚಿರಕಾಲ ವಿಕ್ಷೇಪಕಾರಿಗಳಾದ ವಿಕಲ್ಪ ಪರಂಪರೆಗಳು ಪುನಃ ಎಂದಿಗೂ ತಲೆಹಾಕುವುದೇಇಲ್ಲ.

೧೮. ಉತ್ತಮವಾದ ಪುಷ್ಪವೃಕ್ಷದ ದೆಸೆಯಿಂದ ಪುಷ್ಪಸ್ತಬಕವು (ಮಂಜ ರಿಯು) ಆವಿರ್ಭವಿಸುವಂತೆ, ಸರ್ವಜನಾಹ್ಲಾದಕರವಾಗಿಯೂ, ಪರಮ ಪ್ರಶಾಂತ ನಾಗಿಯೂ, ಪವಿತ್ರತಮವಾಗಿಯೂ ಮನೋಹಾರಿಣಿಯಾಗಿಯೂ ಇರುವ

ಅಂತಶ್ಛಿದ್ರವತೀ ಜಾಡ್ಯಯುಕ್ತಾಯುಕ್ತ ಗುಣಾ ಸ್ವಯಂ ।
ಚಿಂತಾ ಶೋಷ ಮುಪಾಯಾತಿ ಹಿಮದಗ್ಧೇವ ಪದ್ಮಿನೀ ॥ ೧೯ ॥

ಆಲೋಕಃ ಸ್ಫುಟತಾಮಂತರಾಯಾತ್ಯಜ್ಞಾನ ಸಂಕ್ಷಯೇ ।
ಪ್ರಶಾಮ್ಯತ್ಯಂಬುದೇ ವ್ಯೋಮ್ನಿ ಶರದೀವಾರ್ಕ ಮಂಡಲಂ ॥ ೨೦ ॥

" ಮೈತ್ರೀ " ಎಂಬ ಭಾವನೆಯು (ಚಿತ್ತಪ್ರಸಾದನೋಪಾಯವು ಯೋಗ ಶಾಸ್ತ್ರ ಪ್ರಸಿದ್ಧವಾದುದು.) ಹೃದಯದಲ್ಲಿ ಆವಿರ್ಭವಿಸುವುದು.

[ಮೈತ್ರೀ ಕರುಣಾ ಮುದಿತೋಪೇಕ್ಷಾಣಾಂ ಸುಖದುಃಖ ಪುಣ್ಯಾಪುಣ್ಯ ವಿಷಯಾಣಾಂ ಭಾವನಾತಃ ಚಿತ್ತ ಪ್ರಸಾದನಂ ಪಾತಂಜಲ ಯೋಗಸೂತ್ರ ಸಮಾಧಿಪಾದ ೩೩. ಸುಖಸಂಭೋಗಾಪನ್ನರಾದ ಪ್ರಾಣಿಗಳ ವಿಷಯದಲ್ಲಿ ಮೈತ್ರೀ ಭಾವನಾ. ದುಃಖಿತರಲ್ಲಿ ಕರುಣಾ, ಪುಣ್ಯಾತ್ಮರಲ್ಲಿ ಮುದಿತಾ, ಅಪುಣ್ಯಶೀಲರಲ್ಲಿ ಉಪೇಕ್ಷಾ, ಎಂದರ್ಥ.]

೧೯. ಒಳಗೆ ಛಿದ್ರಗಳುಳ್ಳದ್ದಾಗಿಯೂ (ಅಪೂರ್ಣವಾಗಿ, ಇದು ನನ್ನಲ್ಲಿ ಇಲ್ಲ. ಇದನ್ನು ಸಂಪಾದಿಸಬೇಕು. ಇತ್ಯಾದಿ ನಾನಾ ವಿಧವಾದ ಮನೋವ್ಯಾಪಾರಗಳಿಂದ ಕೂಡಿದುದು.) ಜಡತ್ವದಿಂದ ಕೂಡಿದ ಮೂರ್ಖರ ವಿಷಯದಲ್ಲಿ ಮಾತ್ರವೇ ಭ್ರಾಂತಿ ಮೊದಲಾದ ತನ್ನ ಕೌಶಲವನ್ನು ಉಪಯೋಗಿಸತಕ್ಕುದಾಗಿಯೂ ಇರುವ ಚಿಂತೆಯು, ಮೇಲಿಂದ ಮೇಲೆ ಸಂತತವಾಗಿ ಚಿರಕಾಲ ಮಂಜು ಸುರಿದುದರಿಂದ ರಂಧ್ರಗಳುಂಟಾಗಿ, ಆ ರಂಧ್ರಗಳೊಳಗೆ ನೀರು ತುಂಬಿಕೊಂಡಿರುವ ಕಮಲಲತೆಯು ಕಂಗೆಟ್ಟು ಕೊನೆಗೆ ಶೋಷಿಸಿಹೋಗುವಂತೆ, ತಾನಾಗಿಯೇ ಬಹುಬೇಗ ಶೋಷಿಸಿ ಹೋಗುವುದು.

೨೦. ಮೇಘಗಳ ಆವರಣವು ಸಂಪೂರ್ಣವಾಗಿಲ್ಲದಿರುವ ಶರತ್ಕಾಲದ ನಿರ್ಮಲಾಕಾಶದಲ್ಲಿ ಸೂರ್ಯಮಂಡಲವು ಪ್ರಕಾಶಮಾನವಾಗಿ ಅಭಿವ್ಯಕ್ತವಾಗುವಂತೆ, ಅಜ್ಞಾನಾವರಣವು ಸಂಪೂರ್ಣವಾಗಿ ನಾಶಹೊಂದಲಾಗಿ ನಿರ್ಮಲವಾದ ಅಂತಃಕರಣದಲ್ಲಿ, ಸ್ವಾತ್ಮಜ್ಞಾನ ಪ್ರಕಾಶವು ನಿರಾತಂಕವಾಗಿ ಪ್ರಕಟವಾಗುವುದು.

ಪ್ರಸನ್ನಂ ಸ್ಫಾರಗಾಂಭೀರ್ಯಮಕ್ಷುಬ್ಧಮಪರಾಹತಂ ।
ಹೃದಯಂ ಸಮತಾಮೇತಿ ಶಾಂತವಾತ ಇವಾರ್ಣವಃ ॥ ೨೧ ॥

ಅಮೃತಾಪೂರಪೂರ್ಣೇನ ನಿತ್ಯಾನಂದಮಯೇನ ಚ ।
ಸ್ಥೀಯತೇ ಪುರುಷೇಣಾಂತಃ ಶೀತೇನ ಶಶಿನಾ ಯಥಾ ॥ ೨೨ ॥

ಸಂವಿಧಃ ಸ್ಫುಟತಾಮಂತರಾಯಾಂತ್ಯಜ್ಞಾನ ಸಂಕ್ಷಯೇ ।
ಸಂವಿಂದಂಶ್ಚೈಕ ವಿಶ್ರಾಂತಂ ಸಮಗ್ರಂ ಸಚರಾಚರಂ ।
ಭಾವ್ಯತೇ ಭರಿತಾಕಾರಂ ವಪುರಾನಂದ ಮಂಥರಂ ॥ ೨೩ ॥

---

೨೧. ಮತ್ತು, ವಾಯುವು ಸ್ವಲ್ಪವೂ ಚಲಿಸದೆ ಪ್ರಶಾಂತವಾಗಿರುವ ಕಾಲದಲ್ಲಿ ಸಮುದ್ರವು ಹೇಗೆ ಸುತರಾಂ ವಿಕ್ಷೋಭರಹಿತವಾಗಿ ಸೌಮ್ಯದಿಂದಿರುವುದೋ ಹಾಗೆ ಹೃದಯವು ಪ್ರಸನ್ನವಾಗಿಯೂ (ನಿರ್ಮಲ) ವಿಶೇಷವಾದ ಗಾಂಭೀರ್ಯ ಯುಕ್ತವಾಗಿಯೂ ಕ್ಷೋಭರಹಿತ (ನಿಶ್ಚಲ) ವಾಗಿಯೂ, ವೈಷಮ್ಯ ಹೇತುಗಳಿಂದ ಪರಾಭವವನ್ನು ಹೊಂದದೆಯೂ (ಪರಾಭವ= ಅಪಜಯ) ಒಂದೇ ವಿಧವಾದ ಸಮಸ್ಥಿತಿಯನ್ನು (ನಿರ್ವಿಕಾರ) ಪಡೆದು ಸ್ವಸ್ಥವಾಗಿರುವುದು.

೨೨. ಅಮೃತ ಮಯುಗಳಾದ ಕಿರಣಧಾರೆಗಳಿಂದ ಪೂರ್ಣನಾಗಿಯೂ ಅತ್ಯಂತ ಶೀತಲನಾಗಿಯೂ. ಜಗತ್ತಿಗೆಲ್ಲಾ ಸಂತಾಪವನ್ನು ಪರಿಹರಿಸಿ ಆನಂದವನ್ನುಂಟುಮಾಡುವವನಾಗಿಯೂ ಇರುವ ಪೂರ್ಣಿಮಾ ಚಂದ್ರನಂತೆ, ಮನುಷ್ಯನು ನಿಶ್ಚಿತವಾಗಿ ದೃಢವಾದ ಸ್ವಾತ್ಮತತ್ತ್ವಜ್ಞಾನವೆಂಬ ಅಮೃತಪ್ರವಾಹದಿಂದ ಪರಿಪೂರ್ಣನಾಗಿಯೂ, ಸಕಲ ವಿಧಸಂತಾಪರಹಿತನಾಗಿರುವಕಾರಣ ಅಂತಃಶೀತಲನಾಗಿಯೂ, ನಿತ್ಯಾನಂದ ಸ್ವರೂಪನಾಗಿಯೂ ಸರ್ವದಾ ಪ್ರತಿಷ್ಠಿತನಾಗಿರುವನು.

೨೩. ಅಜ್ಞಾನವು ಸಂಪೂರ್ಣವಾಗಿ ನಾಶಹೊಂದಿಬಿಡಲು, ಅಂತರಂಗದಲ್ಲಿ ಆತ್ಮಾಕಾರವೃತ್ತಿಗಳು ಪೂರ್ಣತ್ವಾಪಾದಕವಾದ ವಿಕಾಸವನ್ನು ಹೊಂದುವುವು. ಮತ್ತು ಸ್ಥಾವರ ಜಂಗಮಗಳಿಂದ ಸಹಿತವಾದ ಸಮಗ್ರವಾದ ಜಗತ್ತೆಲ್ಲವೂ ಆತ್ಮಜ್ಞಾನ ಬಾಧಿತವಾಗಿ ಚಿದ್ರೂಪನಾದ ಆತ್ಮನಲ್ಲಿಯೇ ಆತ್ಯಂತಿಕವಾಗಿ ಲಯಹೊಂದಿಬಿಡುವುದು. ಮತ್ತು ಆತ್ಮಸ್ವರೂಪವು ಸರ್ವತ್ರ ಪೂರ್ಣವಾದ (ಅಪರಿಚ್ಛಿನ್ನ) ಅಖಂಡಾಕಾರವಾಗಿಯೂ ನಿತ್ಯನಿರತಿಶಯಾನಂದರೂಪವಾಗಿಯೂ ಅನುಭವಗೋಚರವಾಗುವುದು.

ನಭವತ್ಯ ಸುಸಂಗಾನಾಮಾಶಾಪಾಶವಿಧಾಯಿನಾಂ ।
ದಗ್ಧಾನಾಮಿವ ಪರ್ಣಾನಾಂ ರಸಾನಾಂ ಪುನರಾಗತಿಃ । ॥ ೨೪ ॥

ಪುಂಸಾಂ ಕ್ಷಪಿತ ಸಂಸಾರ ಜರಾಜನ್ಮ ಮಹಾಧ್ವನಾಂ ।
ಅಪುನರ್ಭ್ರಮಣಾಯಾತ್ಮದ್ರುಮೇ ವಿಶ್ರಮ್ಯತೇ ಚಿರಂ ॥ ೨೫ ॥

ಏವಂ ಪ್ರಾಯಾಸ್ತಥಾನ್ಯಾಶ್ಚ ಭವಂತಿ ಗುಣಸಂಪದಃ ।
ಅಸತಿ ತ್ವಯಿ ಸರ್ವಾಶಿನ್ ಸರ್ವಾಶಾಕ್ಷಯ ಸಂಕ್ಷಯೇ । ॥ ೨೬ ॥

೨೪-೨೫. ಕೇವಲ ತಮ್ಮ ಪ್ರಾಣಗಳೊಡನೆಯೇ ಸಂಬಂಧವನ್ನು ಬೆಳೆಯಿಸಿಕೊಂಡು' ಅವುಗಳ ಸಂರಕ್ಷಣೆಗಾಗಿಯೇ ಬಂಧಹೇತುಗಳಾದ ಬಗೆಬಗೆಯ ಅನೇಕ (ಅನ್ನಪಾನಾದಿಗಳ) ಆಶೆಗಳನ್ನು ಕಲ್ಪಿಸಿಕೊಳ್ಳುವ ಮೂಢರಿಗೆ ಮಾತ್ರವೇ ಅನ್ನಪಾನಾದಿಗಳ ಲಾಭದಿಂದ ತುಷ್ಟಿ ಪುಷ್ಟಿ ಮುಂತಾದ ಗುಣಗಳು ಸ್ವಾಭಾವಿಕವಾಗಿ ಉದಯಿಸುವುವು. ಆದರೆ ಕಾಡುಗಿಚ್ಚಿನಿಂದ ಸುಟ್ಟುಹೋದ ಎಲೆಗಳಿಗೆ ಪುನಃ ರಸಗಳು ಹೇಗೆ ಉಂಟಾಗುವುದಿಲ್ಲವೋ, ಹಾಗೆಯೇ ಸ್ವಾತ್ಮತತ್ತ್ವಜ್ಞಾನವೆಂಬ ಅಗ್ನಿಯಿಂದ ಅಜ್ಞಾನವನ್ನೂ ತನ್ಮೂಲಕವಾದ ಜರಾಮರಣ, ಜನ್ಮಾದಿಗಳೆಂಬ ದುರವಗಾಹವಾದ ಸಂಸಾರಮಾರ್ಗಗಳನ್ನೂ ನಾಶಪಡಿಸಿಕೊಂಡಿರತಕ್ಕ ಮಹಾತ್ಮರಿಗೆ ಅಜ್ಞಜನೋಚಿತವಾದ ತುಷ್ಟಿ ಪುಷ್ಟಿ ಮುಂತಾದ ಗುಣಗಳು ಎಂದಿಗೂ ಉಂಟಾಗುವುದೇ ಇಲ್ಲ. ಆತ್ಮಜ್ಞಾನಿಗಳಾದರೋ ಪುನಃ ಎಂದಿಗೂ ಸಂಸಾರದಲ್ಲಿ ಭ್ರಮಣವನ್ನು ಪಡೆಯದೆ ಇರುವುದಕೋಸ್ಕರ ಆತ್ಮಜ್ಞಾನನಿಷ್ಠೆಯನ್ನು ಬಿಡದವರಾಗಿ, ಸರ್ವದಾ ಆತ್ಮವೆಂಬ ಪುಷ್ಪಫಲಛಾಯಾ ಸಮನ್ವಿತವಾದ ಮಹಾವೃಕ್ಷವನ್ನು ಆಶ್ರಯಿಸಿ ನಿತ್ಯನಿರವಧಿಕವಾದ ವಿಶ್ರಾಂತಿಯನ್ನು ಅನುಭವಿಸುವರು.

೨೬. ಸರ್ವದಾ ತೃಪ್ತಿಯೇ ಇಲ್ಲದೆ ಸರ್ವಭಕ್ಷಕವಾಗಿರುವ ಚಿತ್ತವೆ, ನೀನು ಇಲ್ಲದೆ ಹೋಗಿಬಿಟ್ಟರೆ, ಆಗಲೇ ಸಕಲವಾದ ಆಶೆಗಳೂ ಕ್ಷಯಿಸಿ ಪುನಃ ಉದಯಿಸದಂತೆ ಸಮಗ್ರವಾಗಿ ನಾಶಹೊಂದಿಬಿಡುವುವು. ಮತ್ತು ಇದುವರೆವಿಗೂ ಈ ಸರ್ಗದಲ್ಲಿ ಹೇಳಿದಂಥ ಮತ್ತೂ ಇನ್ನೂ ಅನೇಕ ವಿಧಗಳಾದ ಇತರ ಗುಣ ಸಮೃದ್ಧಿಗಳೂ ಅನಂತವಾಗಿ ಸಂಭವಿಸುವುವು,

ಪಕ್ಷಯೋರೇತಯೋಶ್ಚಿತ್ತ ಸತ್ತಾಸತ್ತಾ ಸ್ವರೂಪಯೋಃ ।
ಯೇನೈವ ಪಶ್ಯಸಿ ಶ್ರೇಯಸ್ತಮೇವಾಂಗೀಕುರು ಕ್ಷಣಂ । ॥ ೨೭ ॥

ಸ್ವಾತ್ಮ ಭಾವಸ್ತವ ಸುಖಂ ಮನ್ಯೇ ಮಾನವತಾಂ ವರ
ತಮೇವ ಭಾವಯಾಭಾವಂ ಸುಖತ್ಯಾಗೋ ಹಿ ಮೂಢತಾ ॥ ೨೮ ॥

ಯದಿ ತ್ವಸ್ತಿ ಭವೇತ್ಸತ್ಯ ಮಂತರ್ಭಾವಿತ ಚೇತನಂ ।
ಜೀವತಸ್ತವಾತ್ಯಂತ ಮಭಾವಂ ಕ ಇವೇಚ್ಛತಿ । ॥ ೨೯ ॥

ಕಿಂತು ನಾಸ್ತ್ಯಸಿ ಸತ್ಯೇನ ವದಾಮಿ ತವ ಸುಂದರ ।
ತೇನ ಮಿಥ್ಯೈವ ಜೀವಾಮೀತ್ಯಾಶಯಾ ಮಾ ಸುಖೀ ಭವ ॥ ೩೦ ॥

---

೨೭. ಎಲೈ ಚಿತ್ತವೇ, ಇದುವರೆವಿಗೂ ನಿನ್ನ. ಸದ್ಭಾವ (ಸತ್ತೆ= ಇರುವಿಕೆ)ಮತ್ತು ಅಸದ್ಭಾವ (ಇಲ್ಲದಿರುವಿಕೆ) ಗಳೆಂಬ ಎರಡು ಪ್ರಕಾರಗಳಲ್ಲಿರುವ ದೋಷಗಳನ್ನೂ ಗುಣಗಳನ್ನೂ ವರ್ಣಿಸಿದುದಾಯಿತು. ಈ ಎರಡು ವಿಧಗಳಲ್ಲಿ ಯಾವೊಂದನ್ನು ಆಶ್ರಯಿಸಿದರೆ ನಿನಗೆ ಶ್ರೇಯಸ್ಕರವೆಂದು ತೋರುವುದೋ ಅದನ್ನೇ ತಡಮಾಡದೆ ಆಶ್ರಯಿಸುವುದು ಉತ್ತಮ.

೨೮. ಎಲೈ ಉತ್ತಮ ಅಭಿಮಾನಿಶಾಲಿಯಾದ ಚಿತ್ತವೇ, ನಿರತಿಶಯಾನಂದ ಸ್ವರೂಪವಾದ ಸ್ವಾತ್ಮ ಭಾವಸ್ಥಿತಿಯೇ ನಿನಗೆ ಪರಮ ಶ್ರೇಯಸ್ಕರವೆಂದು ನಾನು ತಿಳಿದಿರುವೆನು. ಅದುಕಾರಣ, ನೀನು ಇತರ ವಿಧವಾದ (ಅನಾತ್ಮ) ಭಾವವನ್ನು ಸಂಪೂರ್ಣವಾಗಿ ಪರಿತ್ಯಜಿಸಿ ಆ ಸ್ವಾತ್ಮಭಾವವನ್ನು ಮಾತ್ರವೇ ಸರ್ವದಾ ಭಾವನೆ ಮಾಡು. ಸುಖವನ್ನು ಪರಿತ್ಯಜಿಸಿ ದುಃಖವನ್ನು ಆಶ್ರಯಿಸುವುದು ಮಹಾ ಮೂಢ ತನವೇ ಸರಿ.

೨೯. ಎಲೈ ಚಿತ್ತವೇ, ಚೈತನ್ಯದ ಅಂತರ್ಭಾವವುಳ್ಳ ನಿನ್ನ ಪ್ರಸಿದ್ಧವಾದ ಈ ರೂಪವು ಸತ್ಯವಾಗಿದ್ದಿದ್ದೇ ಆದರೆ, ನೀನು ಅದೇ ರೂಪದಿಂದ ಜೀವಿಸಿರುವಾಗಲೇ ನಿನಗೆ ಅಭಾವವನ್ನು ಯಾವನು ತಾನೇ ಇಚ್ಛಿಸುವನು ?

೩೦. ಆದರೆ ಎಲೈ ಚಿತ್ತವೇ, ನೀನು ಆ ನಿನ್ನರೂಪದಿಂದ ಇರತಕ್ಕುದಲ್ಲ. ಅತ್ಯಂತ ಅಸತ್ ಆಗಿರುವೆ ಇದನ್ನು ನಾನು ಚೆನ್ನಾಗಿ ಶ್ರುತಿಶಾಸ್ತ್ರಾನುಭವ

ಪೂರ್ವಮೇವಾಸ್ತಿ ನಾಸ್ತ್ಯೇವ ಯಾವದ್ಭ್ರಾಂತ್ಯಾ ತ್ವದಸ್ತಿತಾ ।
ಸೈವೇದಾನೀಂ ವಿಚಾರೇಣ ಭೃಶಂ ಕ್ಷಯ ಮುಪಾಗತಾ ॥ ೩೧ ॥

ಏತಾವದೇವ ತೇ ರೂಪಂ ಸಾಧೋ ಯದವಿಚಾರಣಂ ।
ವಿಚಾರೇ ವಿಹಿತೇ ಸಮ್ಯಕ್ಸಮರೂಪಂ ಸಮಂ ಸ್ಥಿತಂ ॥ ೩೨ ॥

ಅವಿಚಾರಾತ್ಪ್ರಜಾತಂ ತ್ವಮನಾಲೋಕಾತ್ತಮೋ ಯಥಾ ।
ವಿಚಾರೇಣೋಪಶಾಂತಂ ತ್ವಮಾಲೋಕೇನ ತಮೋ ಯಥಾ ॥ ೩೩ ॥

ಗಳಿಂದ ವಿಚಾರಮಾಡಿ ಯಥಾರ್ಥವಾದ ನಿಜವನ್ನು ನಿನಗೆ ಹೇಳುತ್ತಿರುವೆನು. ಏನೋ ಆಪಾತದರ್ಶನದಿಂದ ಹೇಳುತ್ತಿರುವೆನೆಂದು ತಿಳಿಯಬೇಡ. ಎಲೈ ಸುಂದರ ಚಿತ್ತವೇ, ಅದುಕಾರಣ ನೀನು ಮಿಥ್ಯೆಯಾಗಿಯೇ "ನಾನು ಬದುಕಿಕೊಂಡಿರುವೆನು" ಎಂಬ ಆಶೆಯಿಂದ ವ್ಯರ್ಥವಾಗಿ ಆನಂದಿಸಬೇಡ.

೩೧. ಎಲೈ ಚಿತ್ತವೇ, ನಿನ್ನ ಸದ್ಭಾವವೆಂಬುದು (ಅಸ್ತಿತ್ವ) ಕೇವಲ ಭ್ರಾಂತಿ ಕಲ್ಪಿತವಾದುದು ವಸ್ತುತಃ ಇಲ್ಲವೇ ಇಲ್ಲ. ಅದುಕಾರಣ ನೀನು ಪ್ರಥಮ ಕಲ್ಪಿತವಾದ ಅಭಾವರೂಪವಾಗಿಯೇ ಇರುವೆ. ಆ ಭ್ರಾಂತಿಯೇ ಈಗ ತತ್ತ್ವವಿಚಾರದಿಂದ ಸಮಗ್ರವಾಗಿ ಸ್ವಲ್ಪವೂ ಉಳಿಯದಂತೆ ಕ್ಷಯುವನ್ನು ಹೊಂದಿಬಿಟ್ಟಿತು.

೩೨. ಎಲೈ ಸಾಧು ಚಿತ್ತವೇ, ವಿಚಾರ ಶೂನ್ಯತೆಯೆಂಬುದು ಯಾವುದೋ ಆದಿಷ್ಟೇ ನಿನ್ನರೂಪವು. ಶ್ರುತಿಶಾಸ್ತ್ರಾಚಾರ್ಯೋಪದೇಶಗಳ ಮತ್ತು ಸ್ವಾನುಭವದ ಸಹಾಯದಿಂದ ತತ್ತ್ವಸ್ವರೂಪವಿಚಾರವು ಯಥಾರ್ಥವಾಗಿ ಪ್ರವರ್ತಿಸಿದ ಬಳಿಕ, ಸನ್ಮಾತ್ರ ಸ್ವರೂಪವೊಂದೇ ಸರ್ವವಿಕ್ಷೇಪ ವೈಷಮ್ಯ ಶೂನ್ಯವಾಗಿ ಪ್ರತಿಷ್ಠಿತವಾಗುವುದು.

೩೩. ಸೂರ್ಯಚಂದ್ರ ದೀಪಾದಿಗಳ ಪ್ರಕಾಶವಿಲ್ಲದಿರುವುದರಿಂದ ಕತ್ತಲೆಯು ಕಾಣಿಸಿಕೊಳ್ಳುವಂತೆ ವಿಚಾರವಿಲ್ಲದಿರುವಾಗ, ಎಲೈ ಚಿತ್ತವೇ, ನೀನು ಉದಯಿಸಿ ತೋರಿಸಿಕೊಳ್ಳುವೆ. ಪ್ರಕಾಶದಿಂದ ಕತ್ತಲೆಯು ನಾಶಹೊಂದಿ ಅದೃಶ್ಯವಾಗುವಂತೆ, ನೀನೂ ವಿಚಾರದಿಂದ ನಿನ್ನ ರೂಪವನ್ನು ಅಡಗಿಸಿಕೊಂಡು ನಾಶಹೊಂದಿ ಬಿಡುವೆ.

ಏತಾವಂತಂ ಸಖೇ ಕಾಲಂ ಬಭೂವಾಲ್ಪ ವಿವೇಕಿತಾ ।
ತವಾನೇನಾಭಿ ಪೀನತ್ವಮಭೂದ್ದುಃಖೈಕ ಕಾರಣಂ ॥ ೩೪ ॥

ಮೋಹ ಸಂಕಲ್ಪಮಾತ್ರೇಣ ಬಾಲವೇತಾಲವದ್ಭವೇತ್ ।
ದ್ವಂದ್ವಂ ಚಾದ್ಯಂತ ಸಂಕಲ್ಪ ಕ್ಷೀಣಂ ಕ್ಷಯಿ ಭವ ಸ್ಥಿತಂ ॥ ೩೫ ॥

ಇದಾನೀ ಮುದಿತಂ ನಿತ್ಯಂ ಸ್ವಪ್ರಾಗ್ರೂಪೇ ಕ್ಷಯಂ ಗತೇ ।
ವಿವೇಕಸ್ಯ ಪ್ರಸಾದೇನ ವಿವೇಕಾಯ ನಮೋನಮಃ ॥ ೩೬ ॥

ಬಹುಧಾಪಿ ಪ್ರಬುದ್ಧಸ್ತ್ವಂ ಚಿತ್ತಕಾಪ್ಯನುಬೋಧಿತಃ ।
ಚಿತ್ತತಾಯಾಂ ಪ್ರನಷ್ಟಾಯಾಂ ಸ್ಥಿತಂತ್ವಂ ಪರಮೇಶ್ವರಃ ॥ ೩೭ ॥

---

೩೪. ಎಲೈ ಮಿತ್ರ ಚಿತ್ತವೇ, ಇದುವರೆವಿಗೂ ನಿನಗೆ ಸ್ವಲ್ಪಮಾತ್ರವೇ ವಿವೇಕವಿತ್ತು. ಈ ಅಲ್ಪ ವಿವೇಕದಿಂದ ಸಕಲ ದುಃಖಮಾತ್ರ ಕಾರಣವಾದ ಅಭಿವೃದ್ಧಿಯು ನಿನಗೆ ಹೆಚ್ಚಿರುವುದು.

೩೫. ಮತ್ತು ಈ ನಿನ್ನ ಅಭಿವೃದ್ಧಿಯ ಜೊತೆಯಲ್ಲಿ ನಿನಗೆ, ಒಬ್ಬ ಅವಿವೇಕಿಯಾದ ಭ್ರಾಂತನಿಗೆ (ಬಾಲಕ) ಅಜ್ಞಾನದಿಂದ ಮಾತ್ರವೇ ಬೇತಾಳನು ಕಾಣಿಸಿಕೊಳ್ಳುವಂತೆ, ಮೋಹದ ಸಂಕಲ್ಪಮಾತ್ರದಿಂದಲೇ ಸುಖದುಃಖಾದಿ ದ್ವಂದ್ವವೂ ಉಂಟಾಗುವುದು. ಈ ದ್ವಂದ್ವವು ಸೃಷ್ಟಿಕರ್ತನ ಆದ್ಯಂತ ಸಂಕಲ್ಪಕಾಲದಲ್ಲಿಯೇ ಕ್ಷೀಣವಾಗುವುದು. ಅದುಕಾರಣವೇ ಈ ಸಾಂಸಾರಿಕವಾದ ದ್ವಂದ್ವವು ಎಂದಿಗೂ ಸ್ವಭಾವತಃ ಕ್ಷೀಣವಾಗತಕ್ಕುದು.

೩೬. ಚಿತ್ತವೇ, ಈಗ ವಿವೇಕದ ಅನುಗ್ರಹದಿಂದ ಸ್ವಾತ್ಮತತ್ತ್ವ ಜ್ಞಾನೋದಯವಾಗಿರುವುದು. ಅವಿದ್ಯಾಕಲ್ಪಿತವಾದ ನಿನ್ನ ಹಿಂದಿನ ಸ್ವರೂಪವು ಸಮಗ್ರವಾಗಿ ನಾಶಹೊಂದಿಬಿಟ್ಟಿರುವುದು. ಅನಂತರ ಈಗ ಆದ್ಯಂತರಹಿತವಾದ (ಶಾಶ್ವತವಾದ) ದಿವ್ಯವಾದ ಆತ್ಮರೂಪವು ಉದಯಿಸಿರುವುದು. ಇಷ್ಟೆಲ್ಲ ಕಲ್ಯಾಣಗಳಿಗೂ ಕಾರಣಭೂತವಾದ ವಿವೇಕಕ್ಕೆ ಅನಂತ ವಂದನೆಗಳು.

೩೭. ಎಲೈ ಚಿತ್ತವೇ, ನೀನು ಸ್ವತಏವ ಮೊದಲೇ ಅತ್ಯಂತ ಪ್ರಬುದ್ಧನಾಗಿದ್ದೀ. ಈಗ ನನ್ನಿಂದಲೂ ಅನೇಕ ಪ್ರಕಾರಗಳಿಂದ ವಿಶೇಷವಾಗಿ ಶಾಸ್ತ್ರೀಯ

ಪ್ರಾಕ್ಸ್ವರೂಪ ವಿಲಾಸಸ್ತೇ ಶ್ರೇಯಸೇ ಸ್ಥಿತಿಮಾಗತಃ ।
ಸಮಸ್ತ ವಾಸನೋನ್ಮುಕ್ತಃ ಸಂಪ್ರತ್ಯಸಿ ಮಹೇಶ್ವರಃ ॥ ೩೮ ॥

ಯಸ್ಯಾ ವಿವೇಕಾದುತ್ಪತ್ತಿಃ ಸ ವಿವೇಕಾದ್ವಿನಶ್ಯತಿ ।
ಪ್ರಕಾಶೇನ ಪ್ರಯಾತ್ಯಂತ ಮನಾಲೋಕೇಭವತ್ತಮಃ ॥ ೩೯ ॥

ಅನಿಚ್ಛತೋಽಪಿ ತೇ ಸಾಧೋ ವಿಚಾರೇ ಸ್ಥಿತಿಮಾಗತೇ ।
ಸರ್ವತೋಽಯ ಮುಪಾಯಾತೋ ವಿನಾಶಃ ಸುಖಸಿದ್ಧಯೇ । ॥ ೪೦ ॥

ವಿಚಾರದಿಂದ ಪ್ರಭೋಧಿತನಾದೆ. ನಿನ್ನ ಈ ಚಿತ್ತ ರೂಪವಾದ ಸ್ಥಿತಿಯು ನಿಶ್ಶೇಷ ವಾಗಿ, ಈ ಪ್ರಭೋಧದಾರ್ಢ್ಯದಿಂದ ನಾಶಹೊಂದಿ ಬಿಟ್ಟಬಳಿಕ, ನೀನು ಸಾಕ್ಷಾತ್ ಪರಮೇಶ್ವರನಾಗಿಯೇ ಇರುವೆ.

೩೮. ಇದಕ್ಕಿಂತ ಮೊದಲು ಕೂಡ, ನೀನು ಪರಮೇಶ್ವರನೇ ಆಗಿದ್ದೀಯೇ, ಪುತ್ತ ಈಗಲಂತೂ ಪ್ರಭೋಧದ ದೆಸೆಯಿಂದ ನಿನ್ನ ತಾತ್ತ್ವಿಕವಾದ ಸ್ವರೂಪ ವಿಲಾಸವು ನಿಶ್ಶ್ರೇಯಸಕರವಾಗಿ ಸ್ಥಿತಿಯನ್ನು ಪಡೆದು ನೆಲೆಸಿರುವುದು. ಅದು ಕಾರಣ, ನೀನು ಸಮಸ್ತವಾದ ಅವಿದ್ಯಾಕಾಮಾದಿ ವಾಸನೆಗಳಿಂದ ಮುಕ್ತನಾಗಿ ಪರಮೇಶ್ವರನಾಗಿಯೇ ಪ್ರತಿಷ್ಠಿತನಾಗಿದ್ದೀ.

೩೯. ಯಾವುದು ವಿವೇಕವಿಲ್ಲದುದರಿಂದ ಉತ್ಪತ್ತಿಯನ್ನು ಪಡೆಯುವುದೋ ಅದು ವಿವೇಕದಿಂದಲೇ ನಾಶಹೊಂದುವುದು. (ರಜ್ಜುವಿನ ವಿವೇಕವಿಲ್ಲದಿರುವದರಿಂದ ರಜ್ಜುವಿನಲ್ಲಿ ಸರ್ಪವು ಉದಯಿಸುವುದು. ಅವಿವೇಕ ಜನ್ಯವಾದ ಸರ್ಪವು, ರಜ್ಜುವಿನ ವಿವೇಕಜ್ಞಾನವಾದಕೂಡಲೇ ನಾಶಹೊಂಧಿ ಬಿಡುವುದು.) ಪ್ರಕಾಶವಿಲ್ಲ ದುದರಿಂದ ಉತ್ಪನ್ನವಾದ ಕತ್ತಲೆಯು, ಪ್ರಕಾಶವುಂಟಾದ ಕೂಡಲೆ ನಾಶಹೊಂದಿ ಬಿಡುವುದು.

೪೦. ಎಲೈ ಸಾಧುವಾದ ಚಿತ್ತವೇ, ನಿನಗೆ ವಿಚಾರದಿಂದ ವಿವೇಕವು ಸ್ಥಿರ ವಾಗಿ ನೆಲೆಸಿಬಿಟ್ಟರೆ, ಆಮೇಲೆ ನಿನಗೆ ಇಚ್ಛೆಯಿಲ್ಲದಿದ್ದರೂ, ನಿನ್ನ ಸುಖಸಿದ್ಧಿ ಗಾಗಿಯೇ ನಿನ್ನ ನಾಶವು ನಾನಾ ಮುಖವಾಗಿ ಉಪಸ್ಥಿತವಾಗುವುದು.

ತಸ್ಮಾನ್ನಾಸ್ತ್ಯಸಿ ನಿರ್ಣೀತಮಿತಿ ಸಿದ್ಧಾಂತ ಯುಕ್ತಿಭಿಃ ।
ಚಿತ್ತೇಂದ್ರಿಯೇಶ್ವರ ಸ್ವಸ್ತಿ ಭವತೇ ತ್ವಂತಮಾಗತಃ ॥ ೪೧ ॥

ನಿತ್ಯಂ ಪೂರ್ವಮಭೂತಾಯ ನಾಸ್ತಿ ರೂಪಾಯ ಸಂಪ್ರತಿ ।
ಭವಿಷ್ಯತೇ ಚ ನೋದರ್ಕಂ ಸ್ವಮನಃ ಸ್ವಸ್ತಿ ತೇಽಸ್ತ್ವತಿ ॥ ೪೨ ॥

ಪರಿನಿರ್ವಾಮಿ ಶಾಂತೋಽಸ್ಮಿ ದಿಷ್ಟ್ಯಾಸ್ಮಿ ವಿಗತಜ್ವರಃ ।
ಸ್ವಾತ್ಮನ್ಯೇವಾವತಿಷ್ಠೇಽಹಂ ತುರ್ಯರೂಪಪದೇ ಸ್ಥಿತಃ ॥ ೪೩ ॥

ಅತೋ ನಾಸ್ತ್ಯೇವ ನಾಸ್ತ್ಯೇವ ಸಂಸಾರೇ ಚಿತ್ತಮುಸ್ಥಿತಿ ।
ಆತ್ಮಾ ತ್ವಸ್ತ್ಯೇವ ಚಾಸ್ತ್ಯೇವ ಯಸ್ಮಾದನ್ಯನ್ನ ವಿದ್ಯತೇ ॥ ೪೪ ॥

---

೪೧. ಅದುಕಾರಣ, ನಾನು ಇದುವರೆವಿಗೆ ಭೋಧಿಸಿದ ಶಾಸ್ತ್ರೀಯ ಸಿದ್ಧಾಂತಗಳಿಂದಲೂ ಅನುಭವದ ಯುಕ್ತಿಗಳಿಂದಲೂ, ನೀನು ಸರ್ವಥಾ ಸತ್ತಾ ಶೂನ್ಯವಾದ ಅತ್ಯಂತಾಸತ್ ಎಂದು ಸುಸ್ಪಷ್ಟವಾಗಿ ನಿರ್ಣಯವಾಗಿರುವುದು. ಸರ್ವೇಂದ್ರಿಯಗಳಿಗೂ ಅಧೀಶ್ವರನಾದ ಚಿತ್ತವೇ, ನೀನು ಪೂರ್ವೋಕ್ತ ನಿರ್ಣಯವನ್ನು ಚೆನ್ನಾಗಿ ತಿಳಿದು, ನಿನ್ನ ಪಾರಮಾರ್ಥಿಕವಾದ ಸ್ವರೂಪವನ್ನು ಹೊಂದಿ ಸಂಸಾರ ಪಾರಂಗತನಾಗಿರು. ನಿನಗೆ ಮಂಗಳವಾಗಲಿ.

೪೨. ಎಲೈ ನನ್ನ ಮನಸ್ಸೇ, ಹಿಂದಿನಕಾಲದಲ್ಲಿಯೂ ಸರ್ವದಾ (ಎಂದಿಗೂ) ಉತ್ಪತ್ತಿಯನ್ನು ಹೊಂದಿ ಇಲ್ಲದೆ, ಈಗಲೂ ಅಭಾವರೂಪವಾಗಿ ಇನ್ನು ಮುಂದೆಯೂ ಜನಿಸದೆಯೇ ಇಲ್ಲದ, ಹೀಗೆ ಕಾಲತ್ರಯದಲ್ಲಿಯೂ ಸದಾ ಅತ್ಯಂತಾಸತ್ತಾದ ನಿನಗೆ ಮಂಗಳವಾಗಲಿ.

೪೩. ಈಗ ನಾನು ನನ್ನ ಅನೇಕ ಜನ್ಮಾಂತರಾರ್ಜಿತವಾದ ಪುಣ್ಯಪರಿಪಾಕದಿಂದ, ಸರ್ವತ್ರ ಸುಖಿತನಾದೆನು. ಶಾಂತನಾದೆನು. ಸಕಲ ಸಂತಾಪರಹಿತನಾದೆನು. ತುರ್ಯರೂಪ ಪರಮಪದದಲ್ಲಿ ಇದ್ದುಕೊಂಡು, ನಾನು ಸರ್ವದಾ ಸ್ವಾತ್ಮಸ್ವರೂಪದಲ್ಲಿ ಮಾತ್ರವೇ ನೆಲೆಸಿರುವೆನು.

೪೪. ಈ ಕಾರಣದಿಂದ, ಸುತರಾಂ ಸತ್ತಾಶೂನ್ಯವಾದ (ಅತ್ಯಂತಾಸತ್ತಾದ) ಚಿತ್ತವೆಂಬುದು ಈ ಸಂಸಾರ (ಜಗತ್ತು) ದಲ್ಲಿ ಇಲ್ಲವೇ ಇಲ್ಲ. ಯಾವ ಆತ್ಮನಿಗಿಂತ ಭಿನ್ನವಾದ ಇತರ ವಸ್ತುವು ಯಾವುದೊಂದೂ ಸರ್ವಥಾ ಇಲ್ಲವೇ ಇಲ್ಲವೋ,

ಅಯಮಾತ್ಮಾಹಮೇವಾಸೌ ನಾಸ್ತ್ಯನ್ಯನ್ಮದೃತೇ ಕ್ವಚಿತ್ ।
ಸ್ಫುರಚ್ಚಿದ್ದೇವ ಬೋಧಾತ್ಮಾ ಸರ್ವತ್ರಾಹಂ ಸ್ಥಿತಃ ಸದಾ ॥ ೪೫ ॥

ಅಯಮಾತ್ಮೇತಿ ಕಲನಾ ಮನ್ಯೇ ನೋ ನಿರ್ಮಲಾಂತರೇ ।
ಪ್ರತಿಯೋಗಿ ವ್ಯವಚ್ಛೇದ ಕಲನೈಕಸ್ಯ ವೈ ಕುತಃ ॥ ೪೬ ॥

ಅಂತಹ ಆತ್ಮನು ಮಾತ್ರವೇ ಪರಮಾರ್ಥ ಸತ್ಯವಾಗಿ ಎಂದೆಂದಿಗೂ ನಿಶ್ಚಿತವಾಗಿ ಇದ್ದೇ ಇರುವನು.

೪೫. ಆತ್ಮನೇ ನಾನು. ಈ ನಾನೇ ಆತ್ಮನು. ನನ್ನ ಹೊರತು ಇತರವಾದದು ಯಾವುದೂ ಎಲ್ಲಿಯೂ ಎಂದಿಗೂ ಇಲ್ಲವೇ ಇಲ್ಲ. ನಾನು ಸ್ವಪ್ರಕಾಶನಾದ ಆ ಕೇವಲ ಚಿದ್ರೂಪನೇ. ನಾನೇ ಜ್ಞಾನಸ್ವರೂಪನು. ಸರ್ವದೇಶಕಾಲಗಳಲ್ಲಿ ಅಪರಿಚ್ಛಿನ್ನನಾಗಿ ಶಾಶ್ವತವಾಗಿ ಇರತಕ್ಕವನು ನಾನೇ ಇದು ಸತ್ಯ.

೪೬. ನಿತ್ಯಶುದ್ಧ ಚಿದೇಕರಸನಾದ, ಸರ್ವಾಂತರನಾದ ಪರಮಾತ್ಮನಲ್ಲಿ "ಇವನು (ಅವನು) ಮತ್ತು ಆತ್ಮನು" ಎಂಬುದಾಗಿ ಭೇದಕಲ್ಪನೆಯೇ ಇಲ್ಲವೇ ಇಲ್ಲವೆಂದು ನಾನು ನಿಶ್ಚಿತವಾಗಿ ತಿಳಿದಿರುವೆನು. ಎರಡನೆಯ ವಸ್ತುವೇ ಆತ್ಯಂತಿಕವಾಗಿ ಇಲ್ಲದ ಅದ್ವಿತೀಯಾತ್ಮನಲ್ಲಿ (ಏಕಮೇವಾದ್ವಿತೀಯಂಬ್ರಹ್ಮ) ಪ್ರತಿಯೋಗಿ ಕಲ್ಪನೆಯೂ, ವ್ಯವಚ್ಛೇದಕಲ್ಪನೆಯೂ ಎಲ್ಲಿ, ಹೇಗೆ ಯಾವ ಕಾರಣದಿಂದ ಬರುವುವು ? ಸರ್ವಥಾ ಎಂದಿಗೂ ಸಂಭವಿಸುವುದಿಲ್ಲ.

(ಆತ್ಮನು ಸಜಾತೀಯ, ವಿಜಾತೀಯ ಸ್ವಗತಭೇದರಹಿತನು ಎಂಬುದು ಏಕಂ ಅದ್ವಿತೀಯಂ-ಏವ ಎಂಬ ಪದಗಳಿಂದ ಬೋಧಿತವಾಗುವುದು. ಇಂತಹ ಆತ್ಮನಲ್ಲಿ ಭೇದಕಲ್ಪನೆಗೆ ಅವಕಾಶವೆಲ್ಲಿ ?)

(ಪ್ರತಿಯೋಗಿನ್—ಯಸ್ಯಅಭಾವೋ ವಿವಕ್ಷ್ಯತೇ ಸಃ ಪ್ರತಿಯೋಗೀ.
ನೇರವಾಗಿ ವಿರುದ್ಧವಾದ ಧರ್ಮವುಳ್ಳ ವಸ್ತು.
ಉದಾಹರಣೆ:— ಘಟವು ಘಟಾಭಾವದ ಪ್ರತಿಯೋಗೀ.

ವ್ಯವಚ್ಛೇದ= ವಿಭಾಜಕ (ಭೇದಕ) ಧರ್ಮವುಳ್ಳದ್ದು. (ಘಟ ಪಟ ಮುಂತಾದವು)

ಅಹಂ ತೇನಾಯಮಾತ್ಮೇತಿ ಕಲನಾಮನುದಾಹರನ್ ।
ಮೌನೀ ಸ್ವಾತ್ಮನಿ ತಿಷ್ಠಾಮಿ ತರಂಗ ಇವ ವಾರಿಣಿ ॥ ೪೭ ॥

ಸಶಾಂತ ವಾಸನ ಮನಾಶ್ರಿತ ಚೇತನಾಂಶ ।
ಮಪ್ರಾಣ ಸಂಚರಣ ಮಸ್ತಮಿತಾಂಶ ದೋಷಂ ।
ಸಂವೇದ್ಯ ವರ್ಜಿತ ಮುಪೇತ್ಯ ಸುಸಂವಿದಂಶಂ ।
ಶಾಮ್ಯಾಮಿ ಮೌನ ಮಹಮೇವ ನಿರೀಹಮಂತಃ ॥ ೪೮ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ದೇವದೂತೋಕ್ತೇ
ಮೋಕ್ಷೋಪಾಯೇಷು ಉಪಶಮಪ್ರಕರಣೇ "ಚಿತ್ತಾಸತ್ತಾ ವಿಚಾರ
ಯೋಗೋಪದೇಶೋ" ನಾಮ ತ್ರ್ಯಶೀತಿತಮಃ ಸರ್ಗಃ

---

೪೭. ಅದು ಕಾರಣ, ನಾನು "ಅಯಂ= ಇವನು ಎಂದೂ" "ಆತ್ಮಾ= ಆತ್ಮನು" ಎಂದೂ ಆ ಕಲ್ಪಿತ ಭೇದವನ್ನು ಬಾಯಲ್ಲಿ ಉಚ್ಚಾರಣೆಯನ್ನೂ ಕೂಡ ಮಾಡದವನಾಗಿ, ವಾಯುವಿನ ಸಂಚಲನೆಯು ನಿಂತಿರುವಾಗ ಪ್ರಕಾಶವಾದ ಜಲ ದಲ್ಲಿ ತರಂಗದಂತೆ ಮೌನವನ್ನು ಧರಿಸಿ ಸ್ವಾತ್ಮ ನಿಷ್ಠನಾಗಿರುವೆನು.

೪೮. ನಾನು ಇನ್ನು ಈಗ ನನ್ನ ಹೃದಯದಲ್ಲಿ, ಜ್ಞೇಯವಾದ ಸಮಸ್ತ ಜಡಾಂಶಗಳಿಂದ ವಿವರ್ಜಿತವಾಗಿಯೂ, ಅವಿದ್ಯೆಯೂ ಬಾಧಿತವಾಗಿರುವ ಕಾರಣ, ಸಕಲ ಕಾಮ ಕರ್ಮಾದಿವಾಸನಾಶೂನ್ಯವಾಗಿಯೂ, ಚಿದಾಭಾಸವೂ ಕೂಡ ಪ್ರತ್ಯೇಕವಾಗಿಲ್ಲದಿರುವ ಕಾರಣ ಚೇತನಾಂಶವನ್ನು ಮಾತ್ರ ಆಶ್ರಯಿಸಿರುವುದಾ ಗಿಯೂ, ಚಿದಾಭಾಸಾಧೀನವಾದ ಕ್ರಿಯಾಶಕ್ತಿಯೂ ಇಲ್ಲದ ಕಾರಣ, ಪ್ರಾಣಾದಿ ವಾಯುಗಳ ಸಂಚಾರವೂ ಇಲ್ಲದುದಾಗಿಯೂ, ಭೇದಕ ಧರ್ಮವೇ ಇಲ್ಲದ ಕಾರಣ, ಅಂಶ ಅಂಶಿ ಮುಂತಾದ ಭೇದಶೂನ್ಯವಾಗಿಯೂ, ಏಕರಸವಾಗಿಯೂ ಇರುವ ಜಗತ್ತನ್ನೆಲ್ಲ ಜ್ಞಾನದಲ್ಲಿ ಲಯಗೊಳ್ಳಿಸಿದ ಬಳಿಕ ಅವಶಿಷ್ಟವಾದ ಶುದ್ಧ ಚಿನ್ಮಾತ್ರ ರೂಪನಾದ ಪರಮಾತ್ಮ ಭಾವವನ್ನು ಪಡೆದು ಮನೋ ವ್ಯಾಪಾರರಹಿತನಾಗಿ ವಾಗ್ವ್ಯಾಪಾರವನ್ನು ತೊರೆದು ಸ್ವಸ್ಥನಾಗಿ ವಿಶ್ರಾಂತನಾಗಿರುವೆನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ "ಚಿತ್ತಾಸತ್ತಾವಿಚಾರ ಯೋಗೋಪದೇಶವೆಂಬ
ಎಂಭತ್ತಮೂರನೆಯ ಸರ್ಗವು

ಚತುರಶೀತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚಃ—

ಇತಿ ನಿರ್ಣೀಯ ಸ ಮುನಿರ್ವೀತಹವ್ಯೋ ವಿವಾಸನಃ ।
ಆಸೀತ್ಸಮಾಧಾವಚಲೋ ವಿಂಧ್ಯ ಕಂದರಕೋಟರೇ ॥ ೧ ॥

ಅಪರಿಸ್ಪಂದಿತಾಶೇಷ ಸಂವಿದಾನಂದ ಸುಂದರಃ ।
ಬಭಾವಸ್ತಂಗತಮನಾಃ ಸ್ತಿಮಿತಾಂಭೋಧಿಶೋಭನಃ ॥ ೨ ॥

ಅಂತರೇವ ಶಶಾಮಾಸ್ಯ ಕ್ರಮೇಣ ಪ್ರಾಣ ಸಂತತಿಃ ।
ಜ್ವಾಲಾಜಾಲ ಪರಿಸ್ಪಂದೋ ದಗ್ಧೇಂಧನ ಇವಾನಲೇ ॥ ೩ ॥

ಎಂಭತ್ತನಾಲ್ಕನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು :—

೧. ಅಯ್ಯ ರಾಮ, ಆ ವೀತಹವ್ಯಮುನಿಯು, ಈ ರೀತಿಯಾಗಿ ನಿರ್ಣಯ ಮಾಡಿಕೊಂಡು, ಸಕಲ ವಾಸನಾ ಶೂನ್ಯನಾಗಿ, ವಿಂಧ್ಯಪರ್ವತದ ಗುಹೆಯೊಳಗೆ ಒಂದು ಮೂಲೆಯಲ್ಲಿ ಸಮಾಧಿಯಲ್ಲಿ ನಿಶ್ಚಲನಾಗಿ ನಿಷ್ಠೆಯನ್ನು ಪಡೆದನು.

೨. ಆಗ ಮನೋನಾಶವನ್ನು ಪಡೆದವನಾಗಿದ್ದ ಆ ಋಷಿಯು, ನಿಶ್ಚಲವೂ ಪರಿಪೂರ್ಣವೂ ಸ್ವಪ್ರಕಾಶಚಿದ್ರೂಪವೂ ಆಗಿರುವ ನಿರತಿಶಯಾನಂದ ಸ್ವರೂಪನಾಗಿದ್ದಕಾರಣ, ಸುಂದರನಾಗಿಯೂ ನಿಶ್ಚಲವಾದ ಮಹಾಸಾಗರದಂತೆ ಮನೋಹರನಾಗಿಯೂ ವಿರಾಜಿಸುತ್ತಿದ್ದನು.

೩. ಮೊದಮೊದಲು ಅನೇಕ ಜ್ವಾಲಾಜಾಲಗಳಿಂದ ಪ್ರಜ್ವಲಿಸುತ್ತಾ ಬಹು ವಿಸ್ತಾರವಾಗಿ ಹರಡಿಕೊಂಡಿದ್ದ ಅಗ್ನಿಯು, ಸೌದೆಗಳನ್ನು ಎಲ್ಲ ನಿಶ್ಶೇಷವಾಗಿ ದಹಿಸಿಬಿಟ್ಟಬಳಿಕ, ಆ ಕೆಂಡಗಳೊಳಗೆಯೇ ಅಡಗಿಕೊಂಡು ಕೊನೆಗೆ ಅಲ್ಲಿಯೇ ಕ್ರಮೇಣ ಶಾಂತವಾಗುವಂತೆ, ಈ ವೀತಹವ್ಯನ ಪ್ರಾಣವಾಯುಗಳ ಸಂಚಾರವು ಕ್ರಮೇಣ ಅವನ ದೇಹದೊಳಗಡೆಯೇ ಪ್ರಶಾಂತವಾಗಿ ಅಡಗಿಹೋಯಿತು.

ಅನಂತರ್ನಿಷ್ಠತಾಂ ಯಾತೇ ಬಾಹ್ಯಾರ್ಥೇ ಚಾಪ್ಯಸಂಸ್ಥಿತೇ ।
ಶೇಷೇಽತರ್ಲಬ್ಧ ಸಂಸ್ಥಾನೇ ತಸ್ಯಾಸ್ಫುರಿತ ಪಕ್ಷ್ಮಣೀ ॥ ೪ ॥

ಘ್ರಾಣ ಪ್ರಾಂತಗತಾಲ್ಪಾಲ್ಪ ಸಮಾಲೋಕೇ ಇವೇಕ್ಷಣೇ ।
ಅರ್ಧ ಕುಟ್ಮಲಿತೈಃ ಪದ್ಮೈಃ ಶ್ರಿಯಃಮಾಯಯತುಃ ಸಮಾಂ ॥ ೫ ॥

ಸಮಕಾಯ ಶಿರೋಗ್ರೀವ ಸ್ಥಾನಕಃ ಸ ಮಹಾಮತಿಃ ।
ಆಸೀಚ್ಛೈಲಾದಿವೋತ್ಕೀರ್ಣಃ ಶ್ಚಿತ್ರಾರ್ಪಿತ ಇವಾಥವಾ ॥ ೬ ॥

ತಥಾಭಿ ತಿಷ್ಠತಸ್ತಸ್ಯ ಸಂವತ್ಸರ ಶತತ್ರಯಂ ।
ಕೋಟರೇ ವಿಂಧ್ಯಕಚ್ಛಸ್ಯ ಯಯಾವರ್ಧ ಮುಹೂರ್ತವತ್ ॥ ೭ ॥

೪-೫. ಆಗ ಅವನ ಕಣ್ಣುಗಳೆರಡೂ ಅತ್ಯಂತ ಸಂಪೂರ್ಣವಾಗಿ ಮುಚ್ಚಲ್ಪಟ್ಟವುಗಳಾಗಿಯೂ ಇರಲಿಲ್ಲ. ಮತ್ತು ಹೊರಗಣ ವಿಷಯಗಳನ್ನು ನೋಡುತ್ತಲೂ ಇರಲಿಲ್ಲ. ಅರ್ಧಭಾಗ ಮುಚ್ಚಿಕೊಂಡವುಗಳಾಗಿಯೂ ಅರ್ಧಭಾಗ ತೆರೆದುಕೊಂಡಿರುವುಗಳಾಗಿಯೂ ಒಳಗಡೆಯೇ ನೆಲೆಯನ್ನು ಪಡೆದಿದ್ದುವು. ಅವುಗಳ ರೆಪ್ಪೆಗಳು ಸ್ವಲ್ಪವೂ ಸ್ಫುರಿಸುತ್ತಿರಲಿಲ್ಲ. ನಾಸಾಗ್ರದಲ್ಲಿ ಪ್ರಸರಿಸಿದ ಅತ್ಯಲ್ಪವೂ ಎರಡು ಕಡೆಗಳಿಂದಲೂ ಒಂದೇ ಸಮವೂ ಆದ ಪ್ರಕಾಶವನ್ನು ಪಡೆದಿರತಕ್ಕವುಗಳಂತೆ ತೋರುತ್ತಿದ್ಧವು, ಇಂತಹ ಅವನ ಕಣ್ಣುಗಳು, ಅರ್ಧ ಅರಳಿ ಅರ್ಧವೊಗ್ಗಾಗಿರುವ ಕಮಲ ಪುಷ್ಪಗಳಿಗೆ ಸದೃಶವಾದ ಕಾಂತಿಯನ್ನು ಪಡೆದಿದ್ದವು.

೬. ಆಗ ಆತನ ಶರೀರ ತಲೆ ಕುತ್ತಿಗೆಗಳ ಸ್ಥಾನಗಳು ಒಂದೇ ಸಮನಾಗಿ ನಿಶ್ಚಲವಾಗಿದ್ದ ಕಾರಣ, ಮಹಾ ಜ್ಞಾನಿಯಾದ ಆ ಮುನಿಯು ಆ ಪರ್ವತದ ಕಲ್ಲು ಗುಂಡಿನಲ್ಲಿ ಕೊರೆದು ಕೆತ್ತಲ್ಪಟ್ಟಿರುವ ಅಥವಾ ಚಿತ್ರದಲ್ಲಿ ಬರೆಯಲ್ಪಟ್ಟಿರುವ ಒಂದು ಮನುಷ್ಯಾಕೃತಿಯಂತೆ ಕಾಣುತ್ತಿದ್ದನು.

೭. ಇಂತಹ ಸಮಾಧಿ ನಿಷ್ಠೆಯಿಂದ ನಿಶ್ಚಲವಾದ ಸ್ಥಿತಿಯಲ್ಲಿ ಆ ವಿಂಧ್ಯ ಪರ್ವತ ಪ್ರಾಂತದ ಗುಹೆಯೊಳಗೆ ಇರುತಿರುವ ಆ ವೀತಹವ್ಯ ಮುನಿಗೆ ಮುನ್ನೂರು ವರ್ಷಗಳು ಅರ್ಧ ಮುಹೂರ್ತದಂತೆ ಕಳೆದು ಹೋದವು.

ಏತಾವಂತಮಸೌ ಕಾಲಂ ನಾಬುಧ್ಯತ ಕಿಲಾತ್ಮವಾನ್ ।
ಜೀವನ್ಮುಕ್ತತಯಾ ಧ್ಯಾನೀ ನ ಚ ತತ್ಯಾಜ ತಾಂ ತನುಂ ॥ ೮ ॥

ತಾವತ್ಕಾಲಂ ಸ ಸುಭಗೋ ನ ಪ್ರಾಬುಧ್ಯತ ಯೋಗವಿತ್ ।
ಉದಾರೈರಂಬುದಾರಾವೈ ರಾಸಾರ ಭರ ಘರ್ಘರೈಃ ॥ ೯ ॥

ಪರ್ಯಂತ ಮಂಡಲಾಧೀಶ ಮೃಗಯಾನತ ಬೃಂಹಿತೈಃ ।
ಪಕ್ಷಿವಾನರ ನಿರ್ಹ್ರಾದೈರ್ಮಾತಂಗಾಸ್ಫೋಟನಿಃಸ್ವನೈಃ ॥ ೧೦ ॥

ಸಿಂಹ ಸಂರಂಭರಟಿತೈಃ ನಿರ್ಝರಾರಾವಸೀತ್ಕೃತೈಃ ।
ವಿಷಮಾಶನಿಸಂಪಾತೈರ್ಜನ ಕೋಲಾಹಲೈರ್ಘನೈಃ ॥ ೧೧ ॥

ಪ್ರಮತ್ತ ಶರಭಾ ಸ್ಫೋಟೈ ರ್ಭೂಕಂಪತಟ ಘಟ್ಟನೈಃ ।
ವನದಾಹಧಮಧ್ವಾನೈರ್ಜಲೌಘಾಹತಿ ವಲ್ಗನೈಃ ॥ ೧೨ ॥

ಮಹೋಪಲತಟಾ ಘಾತೈ ರ್ಧರಣೀತಲಮೃಜ್ಜಲೈಃ ।
ಜಲೌಘಾನ್ದೋಲನಾಯಾತೈಸ್ತಾಪೈರನಲ ಕರ್ಕಶೈಃ ॥ ೧೩ ॥

---

೮. ಇಷ್ಟೊಂದು ದೀರ್ಘ ಕಾಲವೂ ಜೀವನ್ಮುಕ್ತ ಸ್ಥಿತಿಯಲ್ಲಿದ್ದುಕೊಂಡು ಆತ್ಮಧ್ಯಾನಪರನಾಗಿದ್ದ, ತತ್ತ್ವಜ್ಞನಾದ ಆ ಮಹಾನುಭಾವನು ಸಮಾಧಿಯನ್ನು ಬಿಟ್ಟು ಬಹಿರ್ಮುಖನಾಗಲೂ ಇಲ್ಲ. ಮತ್ತು ತನ್ನ ದೇಹವನ್ನು ತ್ಯಾಗ ಮಾಡಲೂ ಇಲ್ಲ.

೯-೧೩. ಅಷ್ಟುಕಾಲವೂ ಕೂಡ, ಆ ಪರ್ವತದಲ್ಲಿ ಮೇಘಗಳು ವಿಶೇಷವಾಗಿ ಗುಡುಗುತ್ತಾ ಧ್ವನಿ ಮಾಡುತ್ತಿದ್ದುವು. ಧಾರಾಕಾರವಾದ ಮಳೆಯು ಅತಿಶಯವಾದ ರಭಸದಿಂದ ಸುರಿಯುತ್ತಿದ್ದ ಕಾರಣ ಘರ್ಘರ ಶಬ್ದವು ಹೆಚ್ಚಾಗಿದ್ದಿತು. ಆ ಪರ್ವತದ ಸಮೀಪದಲ್ಲಿದ್ದ ರಾಜರುಗಳು ತಮ್ಮ ಚತುರಂಗ ಸೇನೆಗಳೊಡನೆ ಬೇಟೆಗಾಗಿ ಅಲ್ಲಿಗೆ ಬಂದಿರಲು ಅವರು ತಂದಿದ್ದ ಆನೆಗಳು ಹೆಚ್ಚಾಗಿ ಧ್ವನಿ ಮಾಡುತ್ತಿದ್ದವು. ಆ ಪರ್ವತದ ಕಾಡುಗಳಲ್ಲಿದ್ದ ಪಕ್ಷಿಗಳು ಚಿಲಿಪಿಲಿಗುಟ್ಟುತ್ತಿದ್ದವು. ಕಪಿಗಳು ಚೀತ್ಕಾರ ಮಾಡುತ್ತಿದ್ದವು. ಕಾಡಾನೆಗಳು ಸೊಂಡಿಲುಗಳಿಂದ ಅನ್ಯೋನ್ಯವಾಗಿ ಹೊಡೆದಾಡುತ್ತ ಅಪ್ಪಳಿಸುತ್ತಿದ್ದವು. ಸಿಂಹಗಳು ಮಹಾ ರೋಷದಿಂದ ಗರ್ಜಿಸುತ್ತಿದ್ದವು. ಗಿರಿ, ನದೀ ಪ್ರವಾಹಗಳು ವೇಗದಿಂದ ಹರಿಯುತ್ತಾ ಮೊರೆಯುತ್ತಿದ್ದವು. ಆಗಾಗ್ಗೆ ಅತ್ಯಂತ ವಿಷಮವಾದ ಸಿಡಿಲುಗಳು ಬೀಳುತ್ತಾ ಇದ್ದವು. ಜನಗಳೂ

ಕೇವಲಂ ವಹತಿ ಸ್ವೈರಂ ಕಾಲೇ ಗಲಿತ ಕಾರಣಂ ।
ಪರಿಯಾಂತೀಷು ವರ್ಷಾಸು ಲಹರೀಷ್ವಿವ ವಾರಿಣಿ ॥ ೧೪ ॥

ಸ್ವಲ್ಪೇನೈವ ಹಿ ಕಾಲೇನ ತಸ್ಮಿನ್ಪರ್ವತ ಕಂದರೇ ।
ಪ್ರಾವೃಡೋಘ ವಿಸುನ್ನೇನ ಪಂಕೇನೋರ್ವೀತಲೀ ಕೃತಃ ॥ ೧೫ ॥

ಬಲು ಹೆಚ್ಚಾಗಿ ಕಲ ಕಲ ಧ್ವನಿ ಮಾಡುತ್ತಿದ್ದರು. ವಿಶೇಷವಾಗಿ ಮದಿಸಿದ ಶರಭಗಳು ಅನ್ಯೋನ್ಯವಾಗಿ ಗುದ್ದಾಡುತ್ತಿದ್ದವು. ಭೂಕಂಪವುಂಟಾಗಿ ದಡಗಳು ಕುಸಿದು ಬೀಳುವುದರಿಂದ ಧಡಧಡಶಬ್ದವಾಗುತ್ತಿದ್ದಿತು. ಕಾಡುಗಿಚ್ಚು ಹೊತ್ತಿ ಕೊಂಡು ಎಲ್ಲೆಲ್ಲೂ ಹಬ್ಬುತ್ತಾ ಚಟಪಟ ಧ್ವನಿ ಮಾಡುತ್ತಿದ್ದಿತು. ಜಲ ಪ್ರವಾಹ ಗಳು ಒಂದಕ್ಕೊಂದು ವೇಗವಾಗಿ ಹರಿದು ಬಂದು ಅಪ್ಪಳಿಸುವುದರಿಂದಲೂ, ಕೂಡಿ ಹರಿಯುವುದರಿಂದಲೂ, ವಿಶೇಷವಾಗಿ ಘೋರ್ಗರೆಯುತ್ತಿದ್ದವು. ದೊಡ್ಡ ದೊಡ್ಡ ಕಲ್ಲುಬಂಡೆಗಳು ದಡದ ಮೇಲೆ ಉರುಳುತ್ತಾ ಒಂದಕ್ಕೊಂದು ಬಡಿದು ಧ್ವನಿ ಯಾಗುತ್ತಿದ್ದಿತು. ಭೂಮಿಯಿಂದ ನೀರು ಬುರುದೆಯಾಗಿ (ಕೆಸರಾಗಿ) ಬುಗಬುಗನೆ ಮೇಲಕ್ಕೆ ಉಕ್ಕುತ್ತಿದ್ದಿತು. ಹೀಗೆ ಈ ಒಗೆಯಾದ ನಾನಾ ಶಬ್ದಗಳು ಏಕ ಕಾಲದಲ್ಲಿ ಒಟ್ಟಿಗೆ ಸೇರಿ, ಎಷ್ಟೋ ಚಿತ್ತ ವಿಕ್ಷೇಪಕ್ಕೆ ಹೆಚ್ಚಾದ ಅವಕಾಶವಿದ್ದರೂ, ಸಮಾಧಿ ನಿಷ್ಠನಾದ ಆ ವೀತಹವ್ಯ ಮುನಿಯು ಬಹಿರ್ಮುಖನಾಗಲೇ ಇಲ್ಲ. ಮತ್ತು ನೀರಿನ ಪ್ರವಾಹಗಳು ಇವನ ಮೇಲೆಯೇ ಹರಿದು ಬಂದು ಅಲ್ಲಿಂದಿಲ್ಲಿಗೆ ಓಡುತ್ತಿದ್ದವು. ಬೆಂಕಿಯಂತೆ ಬಹು ಕಠೋರವಾಗಿ ಬೇಸಗೆ ಕಾಡು ಕಿಚ್ಚು ಮುಂತಾದವು ವಿಶೇಷ ವಾಗಿ ಸಂತಾಪಕಾರಿಗಳಾಗಿದ್ದವು. ಹೀಗೆ ಎಷ್ಟೇ ಚಳಿಯಾದರೂ, ತಾಪವಾದರೂ, ಆ ಮುನಿಯು ಯಾವುದರಿಂದಲೂ ನಿರ್ವಿಕಲ್ಪ ಸಮಾಧಿಯಿಂದ ಬಹಿರ್ಮುಖ ನಾಗಲೇ ಇಲ್ಲ.

೧೪-೧೫. ಹೀಗೆ ಅಪರಿಮಿತವಾದ ಕಾಲವು ಗೊತ್ತಿಲ್ಲದೆ ಕೇವಲ ನಿಷ್ಪ್ರಯೋ ಜನವಾಗಿ ಕಳೆದು ಹೋಗುತ್ತಿರಲಾಗಿ, ಪುನಃ ಪುನಃ ಅನೇಕ ವರ್ಷಾಕಾಲಗಳು ಪರ್ಯಾಯ ಕ್ರಮದಿಂದ ಬಂದು ಹೋಗುತ್ತಿರಲು ಮಳೆಯ ನೀರಿನ ಪ್ರವಾಹಗಳಲ್ಲಿ ಕೊಚ್ಚಿಕೊಂಡು ಮೇಲಿಂದಮೇಲೆ ಬಂದ ಕೆಸರು ಕಾಲಕ್ರಮದಲ್ಲಿ ಬಹು ಅಪರಿಮಿತ ವಾಗಿ ಹೋಯಿತು. ಕೊನೆಗೆ ಸ್ವಲ್ಪ ಕಾಲದಲ್ಲಿಯೇ ಆ ಪರ್ವತದ ಗುಹೆ ಯಲ್ಲಿಯೇ ಆ ವೀತಹವ್ಯ ಮುನಿಯು ಆ ಕೆಸರಿನಿಂದ ನೆಲದೊಳಗೆ ಮುಚ್ಚಿಕೊಂಡು ಹೂತುಹೋದನು.

ತತ್ರಾಸಾವವಸದ್ಭೂಮೌ ಕೋಟರೇ ಸಂಕಟೋದರೇ ।
ಪಂಕಸಂಪೀಡಿತ ಸ್ಕಂಧಃ ಪರ್ವತೇಷು ಶಿಲಾ ಯಥಾ || ೧೬ ||

ಶತತ್ರಯೋ ಸ ವರ್ಷಾಣಾಮಥ ಯಾತೇ ಸ್ವಯಂ ಪ್ರಭುಃ ।
ವ್ಯಬುಧ್ಯತಾತ್ಮರೂಪಾತ್ಮಾ ಧರಾಕೋಟರ ಪೀಡಿತಃ || ೧೭ ||

ಸಂವಿದೇವಾಸ್ಯ ತಂ ದೇಹಂ ಜಗ್ರಾಹೋರ್ವೀನಿಪೀಡಿತಂ ।
ತನುಃ ಪ್ರಾಣಮಯ ಸ್ಪಂದಃ ಪ್ರಾಣ ಸಂಸರಣಂ ವಿನಾ || ೧೮ ||

---

೧೬. ಅಲ್ಲಿ ಆ ಪರ್ವತದ ಗುಹೆಯೊಳಗಡೆಯೇ ಅವನು ಬಹಳ ಇಕ್ಕಟ್ಟಾದ ಭೂಗರ್ಭದೊಳಗೆ ಕೆಸರಿನಿಂದ ಮುಚ್ಚಿ ಸಂಪೀಡಿತವಾದ ಶರೀರವುಳ್ಳವನಾಗಿದ್ದರೂ ಪರ್ವತಗಳಲ್ಲಿನ ಕಲ್ಲು ಗುಂಡಿನಂತೆಯೇ ನಿಶ್ಚಲನಾಗಿ ಇದ್ದನು.

೧೭. ಬಳಿಕ, ಮುನ್ನೂರು ವರ್ಷಗಳು ಕಳೆದು ಹೋಗಲಾಗಿ ಭೂಗರ್ಭದೊಳಗೆ ಪೀಡಿತನಾಗಿದ್ದ ಆ ವೀತಹವ್ಯ ಮುನಿಯು ಆತ್ಮಭಾವಾಪನ್ನವಾದ ಸ್ವರೂಪವುಳ್ಳವನಾಗಿಯೂ, ಸರ್ವಶಕ್ತನಾಗಿಯೂ (ಸರ್ವೇಶ್ವರನಾಗಿಯೂ) ಒಂದು ಸಲ ಬಹಿರ್ಮುಖನಾದನು.

[ಸ್ವಯಂ ಪ್ರಭಃ= ಎಂಬ ಪಾಠಾಂತರವನ್ನು ಆಶ್ರಯಿಸಿದರೆ, ಸ್ವಪ್ರಕಾಶನಾಗಿ ಎಂದರ್ಥವಾಗುವುದು.]

೧೮. ಅಷ್ಟು ದೀರ್ಘಕಾಲ ಭೂಗರ್ಭದೊಳಗೆ ಪೀಡಿತವಾಗಿದ್ದ ಅವನ ಆ ದೇಹವನ್ನು ಲಿಂಗದೇಹ ಪ್ರತಿಬಿಂಬಿತವಾದ ಚೈತನ್ಯವು ಮಾತ್ರವೇ ಧರಿಸಿ ಪಾಲಿಸಿಕೊಂಡಿತ್ತು. ಪ್ರಾಣವೃತ್ತಿ ರೂಪ ವಾಯು ಚಲನೆಗೆ ಆ ದೇಹವನ್ನು ಧರಿಸಿಕೊಂಡಿರುವ ಸಾಮರ್ಥ್ಯವಿರಲಿಲ್ಲ. ಏಕೆಂದರೆ ಆ ದೇಹವು ಪ್ರಾಣ ವಾಯುಗಳ ಪ್ರಸಾರಕ್ಕೆ ಅವಕಾಶವಿಲ್ಲದಷ್ಟು ಅತಿ ಸೂಕ್ಷ್ಮವಾಗಿದ್ದಿತು.

ಉತ್ಪತ್ತಿ ಪ್ರೌಢಿಮಾಸಾದ್ಯ ಕಲನಾ ಹೃದಯಾಂತರೇ ।
ಸ್ವಮನೋ ರೂಪಿಣೀ ತಸ್ಯ ಹೃದ್ಯೇವಾನು ಬಭೂವ ಸಾ ॥ ೧೯ ॥

ಕೈಲಾಸ ಕಾನನೇ ಕಾಂತೇ ಕದಂಬಸ್ಯ ತರೋಸ್ತಲೇ ।
ಮುನಿತ್ವಂ ಶತಮಬ್ದಾನಾಂ ಜೀವನ್ಮುಕ್ತಾತ್ಮ ನಿರ್ಮಲಂ ॥ ೨೦ ॥

ವಿದ್ಯಾಧರತ್ವಂ ವರ್ಷಾಣಾಂ ಶತಮಾಧಿ ವಿವರ್ಜಿತಂ ।
ಯುಗ ಪಂಚಕ ಮಿಂದ್ರತ್ವಂ ಪ್ರಣತಂ ಸುರಚಾರಣೈಃ ॥ ೨೧ ॥

೧೯-೨೧. ಬಳಿಕ, ಆ ಮುನಿಯ ಜೀವ ಚೈತನ್ಯವು ಹೃದಯಾಕಾಶದಲ್ಲಿ ಆವಿರ್ಭವಿಸಿ (ಪ್ರಕಟವಾಗಿ) ಕ್ರಮವಾಗಿ ಸ್ಥೂಲ ಭಾವವನ್ನು ಹೊಂದಿ, ಅವನ ಮನೋರೂಪವಾಗಿ ಪರಿಣಮಿಸಿತು ಹಾಗೆ ಮನೋರೂಪದಿಂದಿದ್ದ ಆ ಚೈತನ್ಯವೇ ಅವನ ಹೃದಯದೊಳಗೆಯೇ ಕೈಲಾಸ ಪರ್ವತದ ಅತಿ ಮನೋಹರವಾದ ವನದಲ್ಲಿ, ಕದಂಬ ವೃಕ್ಷದ ಕೆಳಗಡೆ ಜೀವನ್ಮುಕ್ತಾತ್ಮನಾಗಿ ಅವಿದ್ಯಾದಿ ದೋಷರಹಿತವಾದ ಮಹರ್ಷಿ ದೆಸೆಯನ್ನು ಒಂದುನೂರು ವರ್ಷಕಾಲ ಅನುಭವಿಸಿತು. ಇನ್ನೊಂದು ನೂರು ವರ್ಷಗಳ ಕಾಲ ಸಕಲ ಸಂತಾಪರಹಿತನಾಗಿ ವಿದ್ಯಾಧರ ಪದವಿಯನ್ನು ಅನುಭವಿಸಿತು. ಮತ್ತೂ ಐದು ಯುಗಗಳ ಕಾಲ ಸಿದ್ಧ ಚಾರಣಾದಿ ಸಕಲ ದೇವ ಗಣಗಳಿಂದ ಸರ್ವದಾ ವಂದಿತನಾದ ದೇವೇಂದ್ರನ ದಿವ್ಯ ಪದವಿಯನ್ನೂ, (ದೇವ ರಾಜ ಪದವಿಯನ್ನು) ಅನುಭವಿಸಿತು.

[ಹಿಂದೆ, ಮುನ್ನೂರು ವರ್ಷಗಳಕಾಲ ಆ ಮುನಿಯು ಸಮಾಧಿನಿಷ್ಠನಾಗಿದ್ದು ಬಳಿಕ ಬಹಿರ್ಮುಖನಾದನೆಂದು ಹೇಳಿ ಇಲ್ಲಿ ಒಂದುನೂರು ವರ್ಷಕಾಲ ಮಹರ್ಷಿತ್ವ ವನ್ನೂ, ಇನ್ನೊಂದು ನೂರು ವರ್ಷ ವಿದ್ಯಾಧರತ್ವವನ್ನೂ, ಇನ್ನೊಂದು ನೂರು ವರ್ಷವೆಂದು ಹೇಳುವುದಕ್ಕೆ ಬದಲು ಐದು ಯುಗಗಳೆಂದು ಹೇಳಿದೆ. ಅದು ಹೇಗೆ? ಎಂದು ಭ್ರಮಿಸಬಾರದು. ಮುನ್ನೂರು ಎಂಬ ಸಂಖ್ಯೆಯು ವಿವಕ್ಷಿತವಲ್ಲ. ಲೆಕ್ಕಾ ಚಾರವಾಗಿ ಮುನ್ನೂರೇ ವರ್ಷ. ಒಂದು ದಿನವೂ ಹೆಚ್ಚೂ ಕಡಿಮೆಯೂ ಇಲ್ಲವೆಂಬ ಅರ್ಥದಲ್ಲಿ ಹೇಳಿಲ್ಲ. ಅಸಂಖ್ಯಾಕ ವರ್ಷಗಳ ಕಾಲ ಕೊನೆಯಲ್ಲಿ ಇಂದ್ರಪದವಿ ಯನ್ನು ಅನುಭವಿಸಿತು ಎಂದರ್ಥ.]

ಶ್ರೀ ರಾಮ ಉವಾಚ :—

ಶಕ್ರತ್ವಾದಿಷು ತೇಷ್ವಸ್ಯ ಪ್ರತಿಭಾಸೇಷು ಭೋ ಮುನೇ ।
ನಿಯಮೋಽನಿಯಮಶ್ಚೈವ ದಿಕ್ಕಾಲನಿಯತೇಃ ಕಥಂ　　॥ ೨೨ ॥

ಶ್ರೀ ವಸಿಷ್ಠ ಉವಾಚ :—

ಸರ್ವಾತ್ಮಿಕೈಷಾ ಚಿಚ್ಛಕ್ತಿಃ ಯತ್ರೋದೇತಿ ಯಥಾ ಯಥಾ ।
ತಥಾ ತತ್ರಾಶು ಭವತಿ ತಥಾತ್ಮೈಕ ಸ್ವಭಾವತಃ　　॥ ೨೩ ॥

ಯಥಾ ಯತ್ರ ಯದಾ ಬುದ್ಧೌ ನಿಯತಃ ಸ ತದಾ ಸ್ಥಿತಃ ।
ದೇಶಾ ಕಾಲಾದಿ ನಿಯಮ ಕ್ರಮಾಣಾಂ ತನ್ಮಯಾತ್ಮತಾ　　॥ ೨೪ ॥

ಶ್ರೀರಾಮನು ಕೇಳಿದನು :—

೨೨. ಸ್ವಾಮಿ ಬ್ರಹ್ಮರ್ಷಿಗಳೇ, ಆ ವೀತಹವ್ಯಮುನಿಗೆ ಇಂದ್ರತ್ವ ಮೊದಲಾದ ಆಯಾ ಪದವಿಗಳು ಪ್ರತಿಭಾಸಮಾನವಾಗಿದ್ದವು ಎಂದು ಹೇಳುವುದು ಹೇಗೆ ಉಪಪನ್ನವಾಗುವುದು ? ಆ ವೀತಹವ್ಯನು ಕೈಲಾಸದಲ್ಲಿದ್ದನು ಎಂದು ಮುಂತಾಗಿ ಹೇಳಿದುದರಿಂದ ದಿಕ್ಕುಗಳ ನಿಯಮವೂ ಯುಗಪಂಚಕ ಮುಂತಾಗಿ ಹೇಳಿದುದರಿಂದ ಕಾಲ ನಿಯಮವೂ ತೋರುವುದು. ಹಾಗೆಯೇ ಆ ವೀತಹವ್ಯನು ಅಲ್ಪ ಕಾಲದಲ್ಲಿಯೇ, ತನ್ನ ಹೃದಯದೊಳಗೆಯೇ ಅನುಭವಿಸಿದನು ಎಂದು ಹೇಳಿದುದರಿಂದ, ಅವನು ದಿಕ್ಕಾಲನಿಯಮವನ್ನು ಮೀರಿದ್ದನೆಂದು ಅನಿಯಮವೂ ಸೂಚಿತವಾಗುವುದು. ದಿಕ್ಕಾಲಾದಿಗಳ ನಿಯಮವನ್ನು ಉಲ್ಲಂಘಿಸಿ ಬೇರೆರೀತಿಯಾಗಿ ಮಾಡುವುದು ಸರ್ವರಿಗೂ ಸರ್ವಥಾ ಅಶಕ್ಯವಾಗಿರುವಾಗ ತಾವು ಹೇಳಿದುದು ಹೇಗೆ ಉಪಪನ್ನವಾಗುವುದು ?

ಶ್ರೀ ವಸಿಷ್ಠರು ಹೇಳಿದರು:—

೨೩. ಅಯ್ಯ ರಾಮ, ಸರ್ವಾತ್ಮಿಕವಾದ ಈಚಿಚ್ಛಕ್ತಿಯು ಎಲ್ಲೆಲ್ಲಿ ಹೇಗೆ ಹೇಗೆ ಆವಿರ್ಭವಿಸುವುದೋ ಅಲ್ಲಲ್ಲಿ ಎಲ್ಲಾ, ಆತ್ಮನು ಒಂದೇ ಒಂದು ವಿಧ ಸ್ವಭಾವವುಳ್ಳವನಾಗಿರುವ ಕಾರಣ, ಬಲು ಬೇಗನೆ ಹಾಗೆಹಾಗೆಯೇ ಆಗಿಬಿಡುವನು.

೨೪. ಯಾವಾಗ ಎಲ್ಲಿ ಯಾವರೀತಿಯಾಗಿ ಬುದ್ಧಿಯಲ್ಲಿ ಅನುಭವವುಂಟಾಗುವುದೋ, ಆಗ ಅಲ್ಲಿ ಆ ರೀತಿಯಾಗಿಯೇ ದೇಶಕಾಲನಿಯಮವು ಉಂಟಾಗುವುದು.

ತೇನ ನಾನಾವಿಧಾನ್ಯೇಷ ಜಗಂತಿ ಪರಿದೃಷ್ಟವಾನ್ ।
ಹೃದಿ ಸಂವೇದನಾಕಾಶೇ ವೀತಹವ್ಯೋ ವಿವಾಸನಃ ॥ ೨೫ ॥

ಸಮ್ಯಗ್ಬೋಧವತಾಮೇಷಾ ವಾಸನೈವ ನ ವಾಸನಾ ।
ಜ್ಞಾನಾಗ್ನಿದಗ್ಧಾ ದಗ್ಧಸ್ಯ ಕ್ವೈವ ಬೀಜಸ್ಯ ಬೀಜತಾ ॥ ೨೬ ॥

ಕಲ್ಪಮೇಕಂ ಗಣತ್ವಂ ಸ ಚಂದ್ರಮೌಲಿಶ್ಚಕಾರಹ ।
ಸಮಸ್ತ ವಿದ್ಯಾ ನಿಪುಣಂ ತ್ರಿಕಾಲಾಮಲದರ್ಶನಂ ॥ ೨೭ ॥

ಏಕೆಂದರೆ, ದೇಶ, ಕಾಲಾದಿಗಳ ನಿಯಮಕ್ರಮಗಳು ಬುದ್ಧಿಮಯನಾದ ಆತ್ಮನಲ್ಲಿ ಅಧ್ಯಸ್ತವಾಗಿ ಕಲ್ಪಿತವಾಗಿರುವುವು.

೨೫. ಅದು ಕಾರಣ, ವಾಸನಾಶೂನ್ಯನಾಗಿದ್ದ ಆ ವೀತಹವ್ಯನು, ಜ್ಞಾನಾಕಾಶರೂಪವಾದ ತನ್ನ ಹೃದಯದೊಳಗೆ ನಾನಾವಿಧಗಳಾದ ಜಗತ್ತುಗಳನ್ನು ನೋಡಿದನು.

೨೬. ಯಥಾರ್ಥವಾದ ಸುದೃಢಾತ್ಮಜ್ಞಾನ ಸಂಪನ್ನರಾದ ಮಹಾತ್ಮರಿಗೆ ಈ ದೇಶಕಾಲನಿಯಮಾದಿ ವಾಸನೆಯು ವಾಸನೆಯಾಗಿಯೇ ಇರುವುದಿಲ್ಲ. ಏಕೆಂದರೆ ಅವಿದ್ಯಕವಾದ ಸಕಲ ವಾಸನೆಗಳೂ ತತ್ತ್ವಜ್ಞಾನವೆಂಬ ಅಗ್ನಿಯಿಂದ ಸುಟ್ಟು ಬೂದಿಯಾಗಿ ಹೋಗಿರುವುವು. ಅಗ್ನಿದಗ್ಧವಾದ ಬೀಜಕ್ಕೆ ಬೀಜತ್ವವಿರುವುದೇನು? ಈ ಕಾರಣದಿಂದ ತತ್ತ್ವಜ್ಞನಾದ ಈ ವೀತಹವ್ಯನಿಗೆ ದೇಶಕಾಲಾದಿ ನಿಯಮವೇ ಇರಲಿಲ್ಲ. ಅದುಕಾರಣ, ನಿನ್ನ ಆಶಂಕೆಗೆ ಅವಕಾಶವೇ ಇಲ್ಲದಿರುವುದು.

೨೭. ಮತ್ತು, ಆ ವೀತಹವ್ಯನು, ಒಂದು ಕಲ್ಪಪರಿಮಿತವಾದ ದೀರ್ಘಕಾಲ ಸಾಕ್ಷಾತ್ ಪರಮೇಶ್ವರ (ಚಂದ್ರಶೇಖರ ಪ್ರಮಥಗಣಾಧಿಪತಿತ್ವರೂಪ) ಅಧಿಕಾರವನ್ನೂ (ತನ್ನ ಹೃದಯಾಕಾಶದೊಳಗೆಯೇ) ನಡೆಯಿಸಿದನು. ಆಗ ಅವನು ಸಮಸ್ತ ವಿದ್ಯಾ ನಿಪುಣನಾಗಿಯೂ ತ್ರೈಕಾಲಿಕ ಸರ್ವವಿಷಯಗಳನ್ನೂ ಚೆನ್ನಾಗಿ (ವಾಸ್ತವವಾಗಿ) ಕಂಡಂತೆ ಯಥಾರ್ಥಜ್ಞಾನಸಂಪನ್ನನಾಗಿಯೂ ಇದ್ದನು.

ಯೋ ಯಾದೃಗ್ದೃಢ ಸಂಸ್ಕಾರಃ ಸ ತಂ ಪಶ್ಯತಿ ತಾದೃಶಂ ।
ಜೀವನ್ಮುಕ್ತತಯೈವೈತದ್ವೀತಹವ್ಯೋಽನುಭೂತವಾನ್ ॥ ೨೮ ॥

ಶ್ರೀ ರಾಮ ಉವಾಚ :—
ಏವಂ ಸ್ಥಿತೇ ಮುನಿಶ್ರೇಷ್ಠ ಜೀವನ್ಮುಕ್ತ ಮತೇರಪಿ ।
ಬಂಧಮೋಕ್ಷ ದೃಶಃ ಸಂತಿ ವೀತಹವ್ಯಾತ್ಮನೋ ಯಥಾ ॥ ೨೯ ॥

ಶ್ರೀ ವಸಿಷ್ಠ ಉವಾಚ :—
ಯಥಾಸ್ಥಿತಮಿದಂ ವಿಶ್ವಂ ಶಾಂತಮಾಕಾಶ ನಿರ್ಮಲಂ ।
ಬ್ರಹ್ಮೈವ ಜೀವನ್ಮುಕ್ತಾನಾಂ ಬಂಧಮೋಕ್ಷದೃಶಃ ಕುತಃ ॥ ೩೦ ॥

---

೨೮. ಲೋಕದಲ್ಲಿ ಯಾವನಿಗೆ ಯಾವ ರೀತಿಯಾದ ಸಂಸ್ಕಾರವು ದೃಢವಾಗುವುದೋ, ಅವನು ಅದೇ ವಿಧವಾದ ಸಂಸ್ಕಾರವನ್ನು ಸರ್ವತ್ರ ಅನುಭವಿಸುವನು. ಅದುಕಾರಣ, ವೀತಹವ್ಯನು, ಜೀವನ್ಮುಕ್ತಾತ್ಮ ಸ್ಥಿತಿಯಿಂದಲೇ ಪೂರ್ವೋಕ್ತವಾದ ಪದವಿಗಳನ್ನೆಲ್ಲಾ ಅನುಭವಿಸಿದನು.

ಶ್ರೀ ರಾಮನು ಕೇಳಿದನು:—

೨೯. ಸ್ವಾಮೀ ಮುನಿಶ್ರೇಷ್ಠರೇ ತಾವು ಈಗ ಹೇಳಿದ ರೀತಿಯಲ್ಲಿ ಜೀವನ್ಮುಕ್ತರೂ ಕೂಡ ತಮ್ಮ ಸಂಸ್ಕಾರಾನುಸಾರವಾಗಿ ಅನುಭವವನ್ನು ಪಡೆಯುವರು ಎಂದು ಇಟ್ಟುಕೊಂಡರೆ, ಆಗ ಜೀವನ್ಮುಕ್ತರ ದೃಷ್ಟಿಯಲ್ಲಿಯೂ ವೀತಹವ್ಯನ ಆತ್ಮನಿಗಿದ್ದಂತೆಯೇ ಬಂಧಮೋಕ್ಷಗಳು ಉಂಟೆಂದು ಒಪ್ಪಿಕೊಂಡಂತಾಗುವುದು. ಇದು ಅಪಸಿದ್ಧಾಂತವಲ್ಲವೆ? ಇದಕ್ಕೆ ಸಮಾಧಾನವೇನು? ಅಪ್ಪಣೆಕೊಡಿ.

ಶ್ರೀ ವಸಿಷ್ಠರು ಹೇಳಿದರು :—

೩೦. ಅಯ್ಯ ರಾಮ, ವಾಸ್ತವವಾಗಿ ಈ ಜಗತ್ತೆಲ್ಲವೂ ಶಾಂತವಾದ ಮತ್ತು ಆಕಾಶದಂತೆ ನಿರ್ಮಲವಾದ ಪರಬ್ರಹ್ಮವೇ ಇದರಲ್ಲಿ ಸಂಶಯವಿಲ್ಲ. ಹೀಗಿರುವಾಗ ಪದಾರ್ಥಗಳ ಭೇದವು ಹೇಗೆ ಎಲ್ಲಿರುವುದು? ಪ್ರಪಂಚದಲ್ಲಿ ಭೇದವು ಅತ್ಯಂತ ಅಸತ್ಯವಾದುದೆಂದು ತಿಳಿ. ಜೀವನ್ಮುಕ್ತರಿಗೆ ಪ್ರಾರಬ್ಧಕರ್ಮವಶದಿಂದ ಉಂಟಾಗುವ ಪ್ರತಿಭಾಸವು ಅಂದರೆ, ಅಸತ್ಯವಾದ ವ್ಯವಹಾರಾನುಭವವು ಎಂದಿಗೂ ಬಂಧ ಹೇತುವಲ್ಲ. ಅದುಕಾರಣ ಜೀವನ್ಮುಕ್ತರಿಗೆ ಬಂಧ ಮೋಕ್ಷಗಳ ದೃಷ್ಟಿಯು ಎಲ್ಲಿಯದು? (ಸರ್ವಥಾ ಇಲ್ಲವೇ ಇಲ್ಲ)

ಏತತ್ಸಂವಿನ್ನಭೋ ಭಾತಿ ಯತ್ರ ಯತ್ರ ಯಥಾ ಯಥಾ ।
ತತ್ರ ತತ್ರ ತಥಾ ತಾವತ್ತಾವತ್ತದ್ವಿಂದತೇ ತತಂ ॥ ३೧ ॥

ತೇನಾನು ಭೂತಾನಿ ಬಹೂನ್ಯನು ಭೂಯಂತ ಏವ ಚ ।
ಜಗಂತಿ ಸರ್ವಾತ್ಮತಯಾ ಬ್ರಹ್ಮ ರೂಪೇಣ ರಾಘವ ॥ ३೨ ॥

ಧರಾಕೋಟರ ನಿರ್ಮಗ್ನ ವೀತಹವ್ಯ ಚಿದಾತ್ಮಸು ।
ಜಗತ್ಸು ತೇಷ್ವಸಂಖ್ಯೇಷು ನೀರೂಪೇಷು ಮಹಾತ್ಮಸು ॥ ३೩ ॥

ಯಃ ಶಕ್ರೋऽನವ ಬುದ್ಧಾತ್ಮಾ ಸೋऽದ್ಯ ದೀನೇಷು ಪಾರ್ಥಿವಃ ।
ಕರ್ತುಂ ಪ್ರವೃತ್ತೋ ಮೃಗಯಾಂ ಕ್ಷಣೇऽಸ್ಮಿನ್ನಪಿ ಕಾನನೇ ॥ ३೪ ॥

ಯೋऽಹಂಸೋ ನವ ಬುದ್ಧಾತ್ಮಾ ಪಾದ್ಮೇ ಪೈತಾಮಹೇऽಭವತ್ ।
ಸ್ಥಿತಃ ಸ ಏವ ದಾಶೇಂದ್ರಃ ಕೈಲಾಸವನ ಕುಂಜಕೇ ॥ ३೫ ॥

---

३೧. ಈ ಚಿದಾಕಾಶವು ಎಲ್ಲೆಲ್ಲಿ ಯಾವಯಾವ ರೀತಿಯಾಗಿ ಸ್ಫುರಿಸುವುದೋ ಅಲ್ಲಲ್ಲಿ ಆಯಾ ರೀತಿಯಾಗಿಯೇ ಆಯಾ ಸ್ವರೂಪವನ್ನು ಪಡೆದು ನಾನಾ ಪ್ರಕಾರವಾಗಿ ಹರಡಿಕೊಳ್ಳುವುದು.

३೨. ಅಯ್ಯ ರಾಘವ, ಹೀಗಿರುವ ಕಾರಣ, ಆ ವೀತಹವ್ಯನು ಪರಬ್ರಹ್ಮ ರೂಪದಿಂದ ಇದ್ದುಕೊಂಡು ಇರುವ ಕಾರಣ, ಸರ್ವಾತ್ಮಭಾವದಿಂದ ಅನೇಕ ಜಗತ್ತುಗಳನ್ನು ಈಗಾಗಲೇ ಅನುಭವಿಸಿರುವನು. ಮತ್ತು ಈಗಲೂ ಅನುಭವಿಸುತ್ತಲೇ ಇರುವನು

३೩-३೪. ವಿಂಧ್ಯಪರ್ವತದ ಗುಹೆಯಲ್ಲಿ ಭೂಗರ್ಭದೊಳಗೆ ಕೆಸರಿನಲ್ಲಿ ಮುಳುಗಿಹೋಗಿರುವ, ವೀತಹವ್ಯನ ಹೃದಯಾಕಾಶದಿಂದ ಉಪಲಕ್ಷಿತವಾದ ಚೈತನ್ಯರೂಪವಾಗಿ ಸ್ಫುರಿಸಿದ, ಸ್ವರೂಪ ಶೂನ್ಯಗಳಾದ ಆದರೂ ಪ್ರತಿಭಾಸವಶದಿಂದ, ಅತ್ಯಂತ ವಿಸ್ತಾರಗಳಾದ ಅನೇಕಾನೇಕ ಜಗತ್ತುಗಳ ಮಧ್ಯದಲ್ಲಿ, ಸ್ವಾತ್ಮಜ್ಞಾನಶೂನ್ಯನಾಗಿ ಯಾವ ಇಂದ್ರನು ಇದ್ದನೋ, ಆ ಇಂದ್ರನೇ ಈಗ ದೀನದೇಶದ ರಾಜನಾಗಿ ಈ ನಿಮಿಷದಲ್ಲಿಯೂ ಕೂಡ ಅರಣ್ಯದಲ್ಲಿ ಮೃಗಯಾ ವಿಹಾರಕ್ಕಾಗಿ ಉದ್ಯುಕ್ತನಾಗಿರುವನು.

३೫. ಆ ವೀತಹವ್ಯನು ಚತುರ್ಮುಖ ಬ್ರಹ್ಮನ ಪಾದ್ಮವೆಂಬ ಒಂದು

ಯೋ ರಾಜಾಽನವಬುದ್ಧಾತ್ಮಾ ಭೂಮೇಃ ಸೌರಾಷ್ಟ್ರ ಮಂಡಲೇ ।
ಸ ಏಷೋಽದ್ಯ ಸ್ಥಿತೋಽಂಧ್ರಾಣಾಂ ಗ್ರಾಮೇ ಬಹುಲ ಪಾದಪೇ ॥ ೩೬ ॥

ಶ್ರೀ ರಾಮ ಉವಾಚ :—

ಮಾನಸಃ ಕಿಲ ಸರ್ಗೋಽಸೌ ವೀತಹವ್ಯಸ್ಯ ತತ್ರ ಯೋ ।
ದೇಹಿನೋ ಭ್ರಾಂತಿ ಮಾತ್ರಂ ಚೇತ್ತದ್ದೇಹಾ ಕಾರಿಣಃ ಕಥಂ ॥ ೩೭ ॥

ಶ್ರೀ ವಸಿಷ್ಠ ಉವಾಚ :—

ಯದಿ ಭ್ರಾಂತ್ಯೇಕಮಾತ್ರಾತ್ಮ ವೀತಹವ್ಯಸ್ಯ ತಜ್ಜಗತ್. ।
ತದಿದಂ ನಾಮ ತೇ ರಾಮ ಕಿಂ ಭೂಯಃ ಪರಿಭಾಸತೇ ॥ ೩೮ ॥

ಕಲ್ಪದಷ್ಟು ದೀರ್ಘ ಕಾಲ, ಪ್ರಮಥ ಗಣಗಳ ಆಧಿಪತ್ಯವನ್ನು ಅನುಭವಿಸಿದ ಸಮಯದಲ್ಲಿ ಕೈಲಾಸಪರ್ವತದ ವನಮಧ್ಯದಲ್ಲಿ ವೀತಹವ್ಯನ ಕ್ರೀಡಾರ್ಥವಾಗಿದ್ದ ಒಂದು ಹಂಸೆವು ಆತ್ಮಜ್ಞಾನಶೂನ್ಯವಾಗಿರುವ ಕಾರಣ ಈಗ ಬೆಸ್ತರರಾಜನಾಗಿದ್ದು ಕೊಂಡಿರುವದು.

೩೬. ವೀತಹವ್ಯನು ಸಮಾಧಿಯಲ್ಲಿದ್ದಾಗ ಈ ಭೂಲೋಕದ ಸೌರಾಷ್ಟ್ರ ದೇಶದಲ್ಲಿ ಯಾವ ರಾಜನು ಇದ್ದನೋ, ಅವನು ಆತ್ಮಜ್ಞಾನರಹಿತನಾಗಿದ್ದ ಕಾರಣ ಈಗ ಆಂಧ್ರದೇಶದಲ್ಲಿ ಅನೇಕ ಮರಗಳಿಂದ ಕೂಡಿರುವ ಒಂದು ಸಣ್ಣ ಹಳ್ಳಿಯಲ್ಲಿ ವಾಸವಾಗಿರುವನು.

ಶ್ರೀ ರಾಮನು ಕೇಳಿದನು:—

೩೭. ಗುರುಗಳೇ, ತಾವು ಹೇಳುವುದು ಅತಿವಿಚಿತ್ರವಾಗಿರುವುದು. ಆಗ ವೀತಹವ್ಯನು ಅನುಭವಿಸಿದುದೆಲ್ಲಾ ಅವನ ಮನಸ್ಸು ಕಲ್ಪಿಸಿದ ಸೃಷ್ಟಿಯೇ ಅಲ್ಲವೆ. ಆಗ ಅಲ್ಲಿ ಭಾಸಮಾನರಾಗಿದ್ದ ದೇಹಿಗಳು (ಜೀವರುಗಳು) ಬರಿಯ ಭ್ರಾಂತಿಯಿಂದ ಕಲ್ಪಿತರಾಗಿದ್ದ ಪಕ್ಷದಲ್ಲಿ ಅವರು ಇಂದ್ರ, ಹಂಸ, ಮೊದಲಾದ ದೇಹಾಕಾರಗಳುಳ್ಳವರಾಗಿ ಸಚೇತನರಾದುದು ಹೇಗೆ ? ಅಪ್ಪಣೆ ಕೊಡಿಸಿ.

ಶ್ರೀ ವಸಿಷ್ಠರು ಹೇಳಿದರು:—

೩೮. ಅಯ್ಯ ರಾಮ, ಆಗ ವೀತಹವ್ಯನಿಗೆ ಪ್ರತಿಭಾಸಿಸಿದ ಸಮಸ್ತ ಜಗತ್ತೂ ಕೇವಲ ಭ್ರಾಂತಿಮಯವಾದುದೇ ಸರಿ. ಹೀಗಿರುವಾಗ ಆ ಜಗತ್ತು ನಿನಗೆ ಪ್ರತ್ಯೇಕ

ಇದಮಪ್ಯಂಗ ಚಿನ್ಮಾತ್ರಂ ಮನೋಮಾತ್ರಭ್ರಮೋಪಮಂ ।
ತದಪಿ ವ್ಯೋಮ ಚಿನ್ಮಾತ್ರಂ ಮನೋಮಾತ್ರಂ ಭ್ರಮೋಪಮಂ ॥ ೩೯ ॥

ವಸ್ತುತಸ್ತು ನ ತದ್ರಾಮ ಜಗನ್ನೈವಂ ನ ಚೇತರತ್ ।
ತಮಾಪಿ ನ ಜಗತ್ಸತ್ತಾ ಬ್ರಹ್ಮೇದಂ ಭಾತಿ ಕೇವಲಂ ॥ ೪೦ ॥

ಭಾವಿ ಭೂತಂ ಭವಿಷ್ಯಚ್ಚ ಯಥೇದಂ ಚ ತಥೇತರತ್ ।
ಜಗತ್ಸರ್ವಮಿದಂ ದೃಶ್ಯಂ ಸಂವಿನ್ಮಾತ್ರ ಮನೋಮಯಂ ॥ ೪೧ ॥

ಏವಂ ರೂಪಮಿದಂ ಯಾವನ್ನ ಪರಿಜ್ಞಾತ ಮೀದೃಶಂ ।
ವಜ್ರಸಾರ ದೃಢಂತಾವತ್ ಜ್ಞಾತಂ ಸತ್ಪರಮಾಂಬರಂ ॥ ೪೨ ॥

ವಾಗಿ ಸಚೇತನಗಳಿಂದ ಕೂಡಿ ಪ್ರತಿಭಾಸಿಸುವುದು ಹೇಗೆ? ಸಮಸ್ತ ಜಗತ್ತುಗಳೂ ಮನಸ್ಸಿನ ಕಾರ್ಯವೇ ಆಗಿರುವ ಕಾರಣ, ಕೇವಲ ಭ್ರಾಂತಿಮಯವೇ. ಇದರಲ್ಲಿ ಏಕೆ ಸಂಶಯ ಪಡುವೆ?

೩೯. ಅಯ್ಯಾ ರಾಮ, ಈಗ ಅನುಭವಿಸುತ್ತಿರುವ ಜಗತ್ತು ಮನೋಮಾತ್ರ ಕಲ್ಪಿತವೆ ಮತ್ತು ಭ್ರಾಂತಿಮಯವಾದುದೆ; ಹಿಂದೆ ಅನುಭವಿಸಿದ ಇಂದ್ರಾದಿ ಪದವಿಯೂ ಮನೋಮಾತ್ರ ಕಲ್ಪಿತವೇ. ಮತ್ತು ಭ್ರಾಂತಿಮಯವೇ; ಇದರಲ್ಲಿ ವ್ಯತ್ಯಾಸ ವೇನಿರುವುದು ? ಆದರೆ ಪರಮಾರ್ಥ ದೆಸೆಯಲ್ಲಿ ಹಿಂದೆ ಅನುಭವಿಸಿದ ಮತ್ತು ಈಗ ಅನುಭವಿಸುವ ಎರಡು ಜಗತ್ತುಗಳೂ ಪರಮಾಕಾಶರೂಪವಾದ ಚಿನ್ಮಾತ್ರವೆ.

೪೦. ರಾಮ, ತತ್ತ್ವದೃಷ್ಟಿಯಿಂದ ವಿಚಾರ ಮಾಡಿದರೋ ವಾಸ್ತವವಾಗಿ ಆ ಹಿಂದಿನ ಜಗತ್ತೂ ಇಲ್ಲ. ಈಗಿರುವ ಜಗತ್ತೂ ಇಲ್ಲ. ಮುಂದೆಯೂ ಯಾವದೂ ಇರುವುದಿಲ್ಲ. ನೀನು ಈ ಜಗತ್ತಿನಲ್ಲಿರುವುದೂ ಸತ್ಯವಲ್ಲ. ಕೇವಲ ಪರಬ್ರಹ್ಮವೇ ಈ ಜಗದ್ರೂಪವಾಗಿ ಭಾಸಿಸುತ್ತಿರುವುದು.

೪೧. ಭೂತ ಭವಿಷ್ಯತ್ ವರ್ತಮಾನ ಕಾಲಗಳಲ್ಲಿ ದೃಶ್ಯವಾದ ಈ ಜಗತ್ತು ಎಲ್ಲವೂ ಕೇವಲ ಚಿತ್ ಸ್ವರೂಪವೇ ಸರಿ. ಮನಸ್ಸಿನ ಭ್ರಾಂತಿಯಿಂದ ಕಲ್ಪಿತವಾಗಿ ಅನೇಕ ರೂಪಗಳಿಂದ ಭಾಸಮಾನವಾಗಿರುವುದು.

೪೨. ಹೀಗೆ ದೃಶ್ಯರೂಪವಾಗಿ ಇರುವ ಈ ಜಗತ್ತು ಎದುವರೆಗೆ ದೃಶ್ಯರೂಪ

ಅಜ್ಞಾನಾನ್ಮನ ಏವೇದ ಮಿತ್ಥಂ ಸಂಪ್ರವಿಜೃಂಭತೇ ।
ಪ್ರತ್ಯುಲ್ಲಾಸ ವಿಲಾಸಾಭ್ಯಾಂ ಜಲಮಂಬು ನಿಧಾವಿವ ॥ ೮೩ ॥

ಯಥಾ ಸ್ಥಿತೇನೈವ ಚಿದಂಬರೇಣ ।
ಸ್ವಚಿತ್ತಮೇವೈತಿ ಮನೋಽಭಿಧಾನಂ ।
ಸ್ಫಾರಂ ಕೃತಂ ತೇನ ಜಗಚ್ಚ ದೃಶ್ಯ ।
ಮೇವಂ ತತಂ ನೈವ ತತಂ ಚ ಕಿಂಚಿತ್ ॥ ೮೪ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷೂಪಶಮ ಪ್ರಕರಣೇ " ವೀತಹವ್ಯ ಮನೋಜಗದ್ವರ್ಣನಂ " ನಾಮ ಚತುರಶೀತಿತಮಃ ಸರ್ಗಃ

ವಾಗಿಯೇ ತಿಳಿದುಕೊಳ್ಳಲ್ಪಡುವುದಿಲ್ಲವೋ ಅದುವರೆಗೂ ವಜ್ರದ ಸಾರದಂತೆ ದೃಢವಾದ ಪರಮಾರ್ಥ ಸತ್ಯವಾದ ಬ್ರಹ್ಮಾಕಾಶವು ಅನುಭವಗೋಚರವಾಗುತ್ತಿರುವುದು.

೮೩. ಸಮುದ್ರದಲ್ಲಿ ಜಲವೇ ಉತ್ಪತ್ತಿಯಿಂದಲೂ ವೃದ್ಧಿ ಮೊದಲಾದ ಪರಿಣಾಮದಿಂದಲೂ, ತರಂಗಾದಿ ರೂಪವಾಗಿ ಭಾಸಿಸುವಂತೆ, ಅಜ್ಞಾನದಿಂದ ಈ ಮನಸ್ಸೇ ಈ ಜಗದ್ರೂಪವಾಗಿ ಹೀಗೆ ವಿಜೃಂಭಿಸುತ್ತಿರುವುದು.

೮೪. ಆ ಚಿದಾಕಾಶವು ಸ್ವಸ್ವರೂಪದಲ್ಲಿ ಯಥಾವಸ್ಥಿತವಾಗಿಯೇ (ಅವಿಕಾರಿಯಾಗಿಯೇ) ಇದ್ದುಕೊಂಡು, ಮಾಯೆಯಿಂದ ಸ್ವಲ್ಪಮಟ್ಟಿಗೆ ಪ್ರಚೋದಿತವಾಗಿ ತನ್ನನ್ನೇ ಚಿತ್ತವನ್ನಾಗಿ ಕಲ್ಪಿಸಿಕೊಳ್ಳುವುದು. ಅದನ್ನೇ ಪುನಃ ಪುನಃ ಮನನ ಮಾಡುವುದರಿಂದ ಮನಸ್ ಎಂಬ ಹೆಸರನ್ನು ಪಡೆಯುವುದು. ಈ ಮನಸ್ಸೇ ದೃಶ್ಯವಾದ ಜಗತ್ತೆಲ್ಲವನ್ನು ವಿಸ್ತಾರವಾಗಿ ಕಲ್ಪಿಸಿರುವುದು. ರಾಮ, ಈ ರೀತಿಯಾಗಿ ಈ ದೃಶ್ಯವೆಲ್ಲವೂ ಅನೇಕಾಕಾರವಾಗಿ ಹರಡಿಕೊಂಡಿರುವುದು. ತತ್ತ್ವದೃಷ್ಟಿಯಿಂದ ನೋಡಿದರೆ ವಸ್ತುತಃ ಯಾವುದೊಂದೂ ಹರಡಿಕೊಂಡು ಇಲ್ಲವೇ ಇಲ್ಲ. ಪರಬ್ರಹ್ಮ ಒಂದೇ ಪರಮಾರ್ಥ ಸತ್ಯವಾಗಿ ಇರುವುದು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ " ವೀತಹವ್ಯಮನೋ ಜಗದ್ವರ್ಣನ " ವೆಂಬ ಎಂಭತ್ತನಾಲ್ಕನೆಯ ಸರ್ಗವು

ಪಂಚಾಶೀತಿತಮಃ ಸರ್ಗಃ

ಶ್ರೀರಾಮ ಉವಾಚ :—

ಅಥ ಕಿಂ ವೀತಹವ್ಯಃ ಸ್ವಂ ಸ್ಥಿತಂ ತಸ್ಮಿನ್ಧರೋದರೇ ।
ಕಥಮುದ್ಧೃತ ವಾನ್ದೇಹಂ ಸಸಂಪನ್ನಶ್ಚ ಕಿಂ ಕಥಂ ॥ ೧ ॥

ಶ್ರೀ ವಸಿಷ್ಠ ಉವಾಚ :—

ಅನಂತರ ಮನಂತಾತ್ಮ ವೀತಹವ್ಯಾಭಿಧಂ ಮನಃ ।
ಸ್ವಮೇವಾತ್ಮ ಚಮತ್ಕಾರ ಮಾತ್ರಂ ಸಮವಬುದ್ಧವಾನ್ ॥ ೨ ॥

ಶಾರ್ವಸ್ಯಾಸ್ಯ ಗಣಸ್ಯಾಭೂತ್ಪ್ರಾಗ್ಜ್ಯೋತಿಃ ಸ್ಮರಣೇ ಸ್ವಯಂ ।
ಇಚ್ಛಾ ಕದಾಚಿತ್ಸಕಲ ಪ್ರಾಗ್ಜನ್ಮಾಲೋಕನೋನ್ಮುಖೀ ॥ ೩ ॥

ಎಂಭತ್ತೈದನೆಯ ಸರ್ಗವು

ಶ್ರೀ ರಾಮನು ಕೇಳಿದನು:—

೧. ಗುರುಗಳೇ, ಆಮೇಲೆ ಆ ವೀತಹವ್ಯನು ಆ ಭೂಗರ್ಭದೊಳಗೆ ಕೆಸರಿನಲ್ಲಿ ಮುಚ್ಚಿಹೋಗಿದ್ದ ತನ್ನ ದೇಹವನ್ನು ಉದ್ಧಾರಮಾಡಿಕೊಂಡನೇನು? ಅವನು ಅದನ್ನು ಮೇಲಕ್ಕೆತ್ತಿದುದು ಹೇಗೆ? ಅಲ್ಲಿಂದ ಮುಂದಕ್ಕೆ ಅವನು ಹೇಗೆ ಯಾವ ಪ್ರಕಾರದಿಂದ ಇದ್ದನು?

ಶ್ರೀ ವಸಿಷ್ಠರು ಹೇಳಿದರು :—

೨. ಅಯ್ಯ ರಾಮ, ಅನಂತರ ಆ ವೀತಹವ್ಯ ಮುನಿಯು ಅಪರಿಚ್ಛಿನ್ನ ಬ್ರಹ್ಮಾಕಾರವಾದ ತನ್ನ ಮನಸ್ಸೇ ವೀತಹವ್ಯನೆಂಬ ಹೆಸರನ್ನು ಪಡೆದಿರುವುದೆಂದೂ ಇದೆಲ್ಲಾ ಆತ್ಮನ ಚಮತ್ಕಾರ ಮಾತ್ರವೆಂದೂ (ಮಾಯಿಕವಾದ ವಿಜೃಂಭಣವೆಂದೂ) ಯಥಾರ್ಥವಾಗಿ ಸಮಾಧಿಯಲ್ಲಿ ತಿಳಿದುಕೊಂಡನು.

೩. ಅವನು ಒಂದಾನೊಂದು ಸಲ ತಾನು ಹಿಂದೆ ಅನುಭವಿಸಿದ ಈಶ್ವರನ ಪ್ರಮಥಗಣಾಧಿಪತ್ಯಾದಿಗಳ ಹಿಂದಣ ಚಿದಾತ್ಮ ಸ್ವರೂಪವನ್ನು ಧ್ಯಾನ ಮಾಡುವ

ಅಶೇಷಾನ್ಸ ದದರ್ಶಾಥ ನುಷ್ಟಾನಷ್ಟಾನ್ಸದೇಹಕಾನ್ ।
ಅನಷ್ಟಾನಾಂ ತತೋ ಮಧ್ಯಾತ್ತತ್ತತ್ಕೋಟರ ಸಂಸ್ಥಿತಂ ।
ಯದೃಚ್ಛಯೈವ ಪ್ರೋದ್ಧರ್ತುಂ ದೇಹಂ ತಸ್ಯಾಭವನ್ಮತಿಃ ॥ ೪ ॥

ಅಪಶ್ಯತ್ತತ್ತಥಾ ತತ್ರ ಪಂಕೇ ಕೀಟಮಿವ ಸ್ಥಿತಂ ।
ಶರೀರಂ ವೀತಹವ್ಯಾಖ್ಯಂ ಧರಾಕೋಟರ ಪೀಡಿತಂ ॥ ೫ ॥

ಪ್ರಾವೃಡೋಘೋಪನೀತಂ ತತ್ಪೃಷ್ಠಸ್ಥ ಪಂಕ ಮಂಡಲಂ ।
ತೃಣ ಜಾಲಾವಕೀರ್ಣತ್ವಗ್ದೇಹ ಪೃಷ್ಠ ಮೃದಂ ತಥಾ ॥ ೬ ॥

ಏತದ್ದೃಷ್ಟ್ವಾ ಮಹಾ ತೇಜಾ ಧರಾವಿವರ ಯಂತ್ರಿತಂ ।
ಭೂಯೋಪಿ ಚಿಂತಯಾಮಾಸ ಧಿಯಾ ಪರಮ ಬೋಧಯಾ । ॥ ೭ ॥

ಕಾಲದಲ್ಲಿ ಕೂಡಲೇ ಅವನ ಮನಸ್ಸಿನಲ್ಲಿ ತನ್ನ ಹಿಂದಣ ಸಕಲ ಜನ್ಮಾಂತರಗಳ ವೃತ್ತಾಂತವನ್ನು ತಿಳಿಯಬೇಕೆಂಬ ಆಸೆಯು (ಇಚ್ಛೆ) ತಾನಾಗಿಯೇ ಉದ್ಭವಿಸಿತು.

೪. ಅನಂತರ ಅವನು ನಾಶ ಹೊಂದಿರುವ ಮತ್ತು ನಾಶಹೊಂದದೆ ಇರುವ ತನ್ನ ಸಮಸ್ತ ದೇಹಗಳನ್ನು ಕಂಡನು. ತರುವಾಯ ನಷ್ಟವಾಗದೆ ಇರುವ ತನ್ನ ದೇಹಗಳ ಮಧ್ಯದಿಂದ ಆಯಾ ನಷ್ಟವಾಗದ ದೇಹಗಳ ಹೃದಯ ಮಧ್ಯದಲ್ಲಿ ತನ್ನ ಕಲ್ಪನೆಯಿಂದಲೇ ಇದ್ದಂಥ ವೀತಹವ್ಯ ದೇಹವನ್ನು ಮೇಲಕ್ಕೆ ಎತ್ತಬೇಕೆಂದು ಅವನಿಗೆ ಯಾದೃಚ್ಛಿಕವಾಗಿಯೇ ಬುದ್ಧಿ ಹುಟ್ಟಿತು.

೫-೬. ಬಳಿಕ, ಆ ವೀತಹವ್ಯನೆಂಬ ಹೆಸರನ್ನು ಹೊಂದಿದ್ದ ಆ ಶರೀರವು ಆ ವಿಂಧ್ಯ ಪರ್ವತದ ಗುಹೆಯಲ್ಲಿ ಹಿಂದಿನ ಸರ್ಗದಲ್ಲಿ ಹೇಳಿದ ಮೇರೆಗೆ ಭೂಗರ್ಭದಲ್ಲಿ ಸೇರಿಕೊಂಡು ಅತ್ಯಂತ ಪೀಡಿತವಾಗಿ ಕೆಸರಿನೊಳಗೆ ಹುಳದಂತೆ ಸಿಕ್ಕಿಕೊಂಡಿರುವುದನ್ನೂ, ವರ್ಷಾಕಾಲದ ಜಲ ಪ್ರವಾಹಗಳಿಂದ ಅದರ ಬೆನ್ನಿನ ಮೇಲೆ ತಂದು ಹಾಕಲ್ಪಟ್ಟಿರುವ ಕೆಸರಿನ ದೊಡ್ಡ ರಾಶಿಯನ್ನೂ, ಚರ್ಮ, ಕರ, ಚರಣಾದಿ ಅವಯವಗಳ ಮತ್ತು ಬೆನ್ನಿನ ಮೇಲಿರುವ ಮಣ್ಣು ಇವುಗಳ ಮೇಲೆಲ್ಲಾ ಒತ್ತಾಗಿ ಕಾಶೆ ಹುಲ್ಲುಗಳು ಬೆಳೆದುಕೊಂಡಿರುವುದನ್ನೂ ನೋಡಿದನು.

೭. ಹೀಗೆ ತನ್ನ ದೇಹವು ಭೂಗರ್ಭದೊಳಗೆ ಸಿಕ್ಕಿಕೊಂಡಿರುವುದನ್ನು

ಸರ್ವ ಸಂಪೀಡಿತಾಂಗತ್ವಾತ್ಕಾಯೋ ಮೇ ಪ್ರಾಣ ವಾಯುಭಿಃ
ಮುಕ್ತಶ್ಚಲಿತು ಮಾಕರ್ತುಂ ಶಕ್ನೋತಿ ನ ಮನಾಗಪಿ । ॥ ೮ ॥

ತದ್ ಜ್ಞಾತ್ವಾ ಪ್ರವಿಶಾಮ್ಯಾಶು ದೇಹ ಮೇವಂ ವಿವಸ್ವತಃ ।
ತದೀಯಃ ಪಿಂಗಲೋ ದೇಹಮುದ್ಧರಿಷ್ಯತಿ ಮೇ ತತಃ ॥ ೯ ॥

ಅಥವಾ ಕಿಂ ಮಮೈತೇನ ಶಾಮ್ಯಾಮ್ಯಹಮವಿಘ್ನತಃ ।
ನಿರ್ವಾಮಿ ಸ್ವಂಪದಂ ಯಾಮಿ ಕೋಽರ್ಥೋ ಮೇ ದೇಹಲೀಲಯಾ ॥ ೧೦ ॥

ಕಂಡು ಮಹಾ ತೇಜಸ್ವಿಯಾದ ಆ ವೀತಹವ್ಯನು ವಿಶೇಷವಾದ ಜ್ಞಾನವುಳ್ಳ ತನ್ನ ಬುದ್ಧಿಯಿಂದ ಪುನಃ ಮುಂದೆ ಹೇಳುವ ರೀತಿಯಲ್ಲಿ ಚಿಂತಿಸಿದನು.

೮. ಈಗ ನನ್ನ ದೇಹಾವಯವಗಳೆಲ್ಲವೂ ಸಂಪೂರ್ಣವಾಗಿ ಕೆಸರಿನಲ್ಲಿ ಹೂತು ಹೋಗಿ ಭೂಗರ್ಭದಲ್ಲಿ ಸಿಕ್ಕಿಕೊಂಡು ಹಾಳಾಗಿ ಹೋಗಿರುವ ಕಾರಣ, ಈ ನನ್ನ ದೇಹದಲ್ಲಿ ಪ್ರಾಣ ವಾಯುಗಳ ಚಲನವೇ ನಿಂತುಹೋಗಿರುವುದು. ಆದುದರಿಂದ ಈ ದೇಹವು ಈಗ ಸ್ವಲ್ಪವೂ ಕೂಡ ಚಲಿಸುವುದಕ್ಕೂ ಅಥವಾ ಇನ್ಯಾವ ಕೆಲಸ ಮಾಡುವುದಕ್ಕೂ ಸುತರಾಂ ಸಾಮರ್ಥ್ಯವಿಲ್ಲದುದಾಗಿರುವುದು.

೯. ಆದುದರಿಂದ ಈಗ ನಾನು ಹೂತುಹೋಗಿರುವ ಆ ದೇಹವನ್ನು ಮೇಲಕ್ಕೆತ್ತುವುದಕ್ಕೆ ತಕ್ಕ ಉಪಾಯವನ್ನು ಕಂಡು ಹಿಡಿದು ಪರಕಾಯ ಪ್ರವೇಶ ವೆಂಬ ಯೋಗ ಶಾಸ್ತ್ರೋಕ್ತ ಪ್ರಕಾರದಿಂದ ಈಗಲೇ ತಡಮಾಡದೆ ಸೂರ್ಯ ಮಂಡಲವನ್ನು (ದೇಹವನ್ನು) ಪ್ರವೇಶ ಮಾಡುವೆನು. ಆಮೇಲೆ ಸೂರ್ಯನ ಸೇವಕನಾದ ಪಿಂಗಳನೆಂಬುವನು ತನ್ನ ಸ್ವಾಮಿಯ ಆಜ್ಞಾನುಸಾರವಾಗಿ, ನನ್ನ ದೇಹವನ್ನು ಆ ಕೆಸರಿನಿಂದ ತಪ್ಪಿಸಿ ಭೂಗರ್ಭದಿಂದ ಮೇಲಕ್ಕೆತ್ತುವನು.

೧೦. ಅಥವಾ ಈ ಪ್ರಯಾಸದಿಂದ ನನಗೆ ಈಗ ಆಗುವ ಫಲವು ತಾನೇ ಏನಿರುವುದು? ನಾನು ಇನ್ನು ನಿರ್ವಿಘ್ನವಾಗಿ ಶಾಂತನಾಗುವೆನು. ಸ್ವೀಯವಾದ ಪರಮ ಪದವನ್ನು ಪಡೆಯುವೆನು. ಈ ದೇಹ ಸಂಬಂಧವಾದ ಲೀಲೆಯಿಂದ ನನಗೆ ಯಾವ ಪ್ರಯೋಜನವಿರುವುದು?

ಇತಿ ಸಂಚಿಂತ್ಯ ಮನಸಾ ವೀತಹವ್ಯೋ ಮಹಾಮತಿಃ ।
ತೂಷ್ಣೀಂ ಸ್ಥಿತ್ವಾ ಕ್ಷಣಂ ಭೂಯಶ್ಚಿಂತಯಾಮಾಸ ಭೂತಲೇ ॥ ೧೧ ॥

ಉಪಾದೇಯೋ ಹಿ ದೇಹಸ್ಯ ನ ಮೇ ತ್ಯಾಗೋ ನ ಸಂಶ್ರಯಃ ।
ಯಾದೃಶೋ ದೇಹಸಂತ್ಯಾಗ ಸ್ತಾದೃಶೋ ದೇಹ ಸಂಶ್ರಯಃ ॥ ೧೨ ॥

ತದ್ಯಾವದಸ್ತಿ ದೇಹೋಽಯಂ ನ ಯಾವದಣುತಾಂ ಗತಃ ।
ತಾವದೇನ ಮುಪಾರುಹ್ಯ ಕಿಂಚಿತ್ಪ್ರವಿಹರಾಮ್ಯಹಂ ॥ ೧೩ ॥

ಪಿಂಗಲೇನ ಶರೀರಂ ಸ್ವಮುದ್ಧರ್ತುಂ ತಾಪನಂ ವಪುಃ ।
ಪ್ರವಿಶಾಮಿ ನಭಃಸ್ಥಸ್ಥಂ ಮುಕುರಂ ಪ್ರತಿ ಬಿಂಬವತ್ ॥ ೧೪ ॥

---

೧೧. ಅಯ್ಯ ಮಹಾಮತಿಯಾದ ರಾಮ, ಆ ವೀತಹವ್ಯನು ಈರೀತಿಯಾಗಿ ಚೆನ್ನಾಗಿ ಮನಸ್ಸಿನಲ್ಲಿ ಯೋಚನೆ ಮಾಡಿ ಒಂದು ಕ್ಷಣಕಾಲ ಸುಮ್ಮನಿದ್ದು ಪುನಃ ಈರೀತಿಯಾಗಿ ಆಲೋಚಿಸಿದನು.

[ಈ ಶ್ಲೋಕದ ಕೊನೆಯಲ್ಲಿರುವ " ಭೂತಲೇ " ಎಂಬ ಪದವನ್ನು ಮುಂದಿನ ಶ್ಲೋಕದ ಅರ್ಥದೊಂದಿಗೆ ಅನ್ವಯಿಸಬೇಕು.]

೧೨. ಈ ಭೂಮಂಡಲದಲ್ಲಿ ಈಗ ನನಗೆ ಈ ದೇಹತ್ಯಾಗವೂ ಉಪಾದೇಯವಾಗಿಲ್ಲ ಮತ್ತು ದೇಹ ಧಾರಣೆಯೂ ಉಪಾದೇಯವಾಗಿಲ್ಲ. (ಯಾವುದೊಂದೂ ಉಪಾದೇಯವಾಗಿಯೂ ಇಲ್ಲ. ಹೇಯವಾಗಿಯೂ ಇಲ್ಲ. ಹೇಯೋಪಾದೇಯ ಜ್ಞಾನವೂ, ರಾಗ ದ್ವೇಷಗಳೂ ನಿಶ್ಶೇಷವಾಗಿ ಸ್ವಾತ್ಮ ಜ್ಞಾನದಿಂದ ನಷ್ಟವಾಗಿರುವುವು.) ದೇಹ ತ್ಯಾಗವು ನನಗೆ ಯಾವರೀತಿ ಇರುವುದೋ, ದೇಹ ಸಂಶ್ರಯವೂ ಅದೇ ರೀತಿ ಅನಪೇಕ್ಷಣೀಯವಾಗಿರುವುದು.

೧೩. ಅದುಕಾರಣ ಈ ದೇಹವು ಪೂರ್ತಿಯಾಗಿ ನಾಶಹೊಂದದೆ ಎದುವರೆವಿಗೆ ಇನ್ನೂ ಇದ್ದುಕೊಂಡಿರುವುದೋ, ಎದುವರೆವಿಗೆ ಇದು ಇನ್ನೂ ಧೂಳೀ ಭಾವವನ್ನು ಹೊಂದದೆ ಇರುವುದೋ, ಅಷ್ಟರೊಳಗಾಗಿ ನಾನು ಈ ಸೂರ್ಯಮಂಡಲಕ್ಕೆ ಹತ್ತಿ ಹೋಗಿ, ಅಲ್ಲಿದ್ದುಕೊಂಡು, ಸ್ವಲ್ಪ ವಿಹರಿಸಿಕೊಂಡಿರುವೆನು.

೧೪. ಪಿಂಗಳನ ಮೂಲಕ ನನ್ನ ದೇಹವನ್ನು ಉದ್ಧಾರ ಮಾಡಿಸು

ಇತ್ಯಸೌ ಮುನಿರಾದಿತ್ಯಂ ವಿವೇಶಾನಿಲ ರೂಪಧೃಕ್ ।
ಪುರ್ಯಷ್ಟಕ ವಪುರ್ಭೂತ್ವಾ ಭಸ್ತ್ರಾಕವಿುಪ ಚಾನಲಃ ॥ ೧೫ ॥

ಭಗವಾನ್ಮುನಿರಪ್ಯೇನಂ ಹೃದ್ಗತಂ ಮುನಿ ನಾಯಕಂ ।
ದೃಷ್ಟ್ವಾಸೌ ಚಿಂತಯನ್ಕಾರ್ಯಂ ಪೌರ್ವಾಪರ್ಯ ಮುದಾರಧೀಃ ॥ ೧೬ ॥

ವಿಂಧ್ಯಭೂಧರ ಭೂಕೋಶಮಂತ ರ್ಮುನಿಕಳೇವರಂ ।
ತೃಣೋಪಲ ಪರಿಚ್ಛನ್ನಂ ದದರ್ಶ ಗತ ಸಂವಿದಂ ॥ ೧೭ ॥

ವುದಕ್ಕೋಸ್ಕರ ಪ್ರತಿ ಬಿಂಬವು ಕನ್ನಡಿಯನ್ನು ಆಶ್ರಯಿಸಿಕೊಂಡಿರುವಂತೆ ನಾನು ಅಂತರಿಕ್ಷದಲ್ಲಿರುವ ಸೂರ್ಯನ ದೇಹವನ್ನು ಈಗಲೇ ಪ್ರವೇಶ ಮಾಡುವೆನು

೧೫. ಈರೀತಿಯಾಗಿ ಆಲೋಚಿಸಿ ಆ ವೀತಹವ್ಯ ಮುನಿಯು ವಾಯು ರೂಪವನ್ನು ಧರಿಸಿದವನಾಗಿ (ಸೂಕ್ಷ್ಮಾಕಾರನಾಗಿ) ಪುರ್ಯಷ್ಟಕ (ಲಿಂಗ) ಶರೀರ ಧಾರಿಯಾಗಿ, ಗಾಳಿಯು ಚರ್ಮದ ತಿದಿ (ಭಸ್ತ್ರಾ - ಕೊಲಿಮೆಯಲ್ಲಿ ಗಾಳಿಯನ್ನು ಒತ್ತುವುದಕ್ಕಾಗಿ ಇಟ್ಟುಕೊಂಡಿರುವ ಚರ್ಮದ ಚೀಲ) ಯೊಳಗಿರುವ ಆಕಾಶವನ್ನು ಪ್ರವೇಶಿಸುವಂತೆ ಸೂರ್ಯ ಮಂಡಲವನ್ನು ಪ್ರವೇಶಿಸಿದನು.

೧೬-೧೭ ಬಳಿಕ, ಮನನಶೀಲನೂ, ಉದಾರ ಹೃದಯನೂ, ಭಗವಂತನೂ ಆಗಿರುವ ಸೂರ್ಯದೇವನೂ ಕೂಡ ತನ್ನ ಹೃದಯದೊಳಗೆ ಪ್ರವಿಷ್ಟನಾದ ಆ ಮುನೀಶ್ವರನನ್ನು (ವೀತಹವ್ಯನನ್ನು) ನೋಡಿ ಅವನ ಕಾರ್ಯವನ್ನೂ ಅದರ ಪೌರ್ವಾಪರ್ಯವನ್ನೂ ಯೋಚಿಸುತ್ತಾ ಕೂಡಲೇ ವಿಂಧ್ಯ ಪರ್ವತದ ಭೂಗರ್ಭದಲ್ಲಿ ಒಳಗಡೆ ಕೆಸರಿನಲ್ಲಿ ಮುಳುಗಿ ಹೋಗಿರುವ ಹುಲ್ಲುಗಳಿಂದಲೂ, ಕಲ್ಲುಗಳಿಂದಲೂ ಮುಚ್ಚಿಕೊಂಡಿರುವ ಮೃತಪ್ರಾಯವಾದ ಆ ವೀತಹವ್ಯ ಮುನಿಯ ಕಳೇಬರವನ್ನು ನೋಡಿ ತಿಳಿದವನಾದನು.

ಋಷೇಶ್ಚಿಕೀರ್ಷಿತಂ ಜ್ಞಾತ್ವಾ ಭಾನುರ್ಗಗನ ಮಧ್ಯಗಃ ।
ಧರಾತೋ ಮುನಿಮುದ್ಧರ್ತು ಮಾದಿದೇಶಾಗ್ರಗಂ ಗಣಂ　　॥ ೧೮ ॥

ವೀತಹವ್ಯ ಮುನೇಃ ಸಂವಿತ್ಸಾ ಪುರ್ಯಷ್ಟಕ ರೂಪಿಣೀ ।
ರವಿಂ ವಾತಮಯೀ ಪೂಜ್ಯಂ ಪ್ರಣನಾಮಾಶು ಚೇತಸಾ　　॥ ೧೯ ॥

ಭಾನುನಾಪ್ಯಭ್ಯನುಜ್ಞಾತೋ ಮಾನ ಪೂರ್ವಕ ಮಗ್ರಗಂ ।
ವಿವೇಶ ಪಿಂಗಲಾಕಾರಂ ವಿಂಧ್ಯಕಂದರಗಾಮಿನಂ　　॥ ೨೦ ॥

ಪಿಂಗಲೋಽಸೌ ನಭಸ್ತ್ಯಕ್ತ್ವಾ ಕುಂಜಕುಂಜರ ಸುಂದರಂ ।
ಪ್ರಾಪ ವಿಂಧ್ಯವನಂ ಪ್ರಾವೃಣ್ಮತ್ತಾಭ್ರಾಂಬರ ಭಾಸುರಂ　　॥ ೨೧ ॥

---

೧೮. ತರುವಾಯ ಅಂತರಿಕ್ಷ ಮಧ್ಯದಲ್ಲಿದ್ದಂಥ ಸೂರ್ಯನು ಆ ಋಷಿಯ ಮನೋಽಭಿಪ್ರಾಯವನ್ನು ತಿಳಿದುಕೊಂಡು ಭೂಗರ್ಭದ ದೆಸೆಯಿಂದ ಅವನ ದೇಹವನ್ನು ಮೇಲಕ್ಕೆತ್ತುವಂತೆ ತನ್ನ ಸೇವಕರಲ್ಲಿ ಪ್ರಮುಖನಾದ ಪಿಂಗಳನನ್ನು ಕುರಿತು ಆಜ್ಞೆ ಮಾಡಿದನು,

೧೯. ಆಗಲೇ ವಾಯು ರೂಪವಾಗಿ ಲಿಂಗ ಶರೀರವನ್ನು ಧರಿಸಿಕೊಂಡು ಇರುವ ಆ ವೀತಹವ್ಯ ಮುನಿಯ ಚೈತನ್ಯವು ಜಗದ್ವಂದ್ಯನಾದ ಸೂರ್ಯದೇವನನ್ನು ಬೇಗನೆ ಮನಸ್ಸಿನಿಂದಲೇ ನಮಸ್ಕರಿಸಿತು.

೨೦. ತರುವಾಯ ಸೂರ್ಯದೇವನಿಂದ ಬಹುಮಾನ ಪುರಸ್ಸರವಾಗಿ ಅಭ್ಯನುಜ್ಞೆಯನ್ನು ಪಡೆದವನಾದ ಆ ವೀತಹವ್ಯನು ತನ್ನ ಮುಂದುಗಡೆ ವಿಂಧ್ಯ ಪರ್ವತವನ್ನು ಕುರಿತು ಪ್ರಯಾಣ ಮಾಡಲು ಸಿದ್ಧನಾಗಿರುವ ಪಿಂಗಳನ ಶರೀರವನ್ನು ಪ್ರವೇಶಿಸಿದನು.

೨೧. ಆಮೇಲೆ ಆ ಪಿಂಗಳನು ಗಗನ ಮಾರ್ಗವನ್ನು ಬಿಟ್ಟು ಲತಾಗೃಹಗಳಿಂದಲೂ, ಆನೆಗಳಿಂದಲೂ ಸುಂದರವಾದ ಮತ್ತು ವರ್ಷಾಕಾಲಿಕಗಳಾದ,

ಉದ್ದಧಾರ ಧರಾಕೋಶಾನ್ನ ಖನಿಷ್ಕೃಷ್ಟ ಭೂತಲಃ
ಕಲೇವರಂ ಮುನೇಃ ಪಂಕಾನ್ಮೃಣಾಲ ಮಿವ ಸಾರಸಃ ॥ ೨೨ ॥

ಮೌನಂ ಪುರ್ಯಷ್ಟಕಮಥ ಸ್ವಂ ವಿವೇಶ ಕಲೇವರಂ ।
ನಭಸ್ತಲ ಪರಿಭ್ರಾಂತೋ ವಿಹಂಗಮ ಇವಾಲಯಂ ॥ ೨೩ ॥

ಪ್ರಣೇಮತುರ್ಮಿಥೋ ಮೂರ್ತ ವೀತಹವ್ಯನಭಶ್ಚರೌ ।
ಬಭೂವತುಃ ಸ್ವಕಾರ್ಯೈಕ ತತ್ಪರೌ ತೇಜಸಾಂ ನಿಧೀ ॥ ೨೪ ॥

ಮಧಿಸಿದ ಮೇಘಗಳಿಂದ ಆವೃತವಾದ ಆಕಾಶದಿಂದ ಶೋಭಿಸುತ್ತಲಿದ್ದ ವಿಂಧ್ಯಗಿರಿಯ ಅರಣ್ಯವನ್ನು ಸೇರಿದನು.

೨೨. ಅಲ್ಲಿ ಪಿಂಗಳನು ತನ್ನ ಉಗುರುಗಳಿಂದಲೇ ಭೂಮಿಯನ್ನು (ನೆಲವನ್ನು) ತೋಡಿದವನಾಗಿ, ಸಾರಸ ಪಕ್ಷಿಯು ಕಮಲನಾಳವನ್ನು ಸರಸ್ಸಿನಿಂದ ಮೇಲಕ್ಕೆತ್ತಿಕೊಳ್ಳುವಂತೆ, ಭೂಗರ್ಭದೊಳಗಿನಿಂದ ವೀತಹವ್ಯಮುನಿಯ ದೇಹವನ್ನು ಕೆಸರಿನಿಂದ ತಪ್ಪಿಸಿ ಹೊರಕ್ಕೆ ತೆಗೆದವನಾದನು.

೨೩. ಅನಂತರ, ಆಕಾಶದಲ್ಲೆಲ್ಲಕಡೆಯಲ್ಲಿಯೂ ಸಂಚರಿಸುತ್ತಿದ್ದ ಹಕ್ಕಿಯು ತನ್ನ ಗೂಡನ್ನು ಸೇರಿಕೊಳ್ಳುವಂತೆ, ಸೂಕ್ಷ್ಮವಾಗಿ ಪಿಂಗಳನ ದೇಹದಲ್ಲಿದ್ದ ವೀತಹವ್ಯಮುನಿಯ ಲಿಂಗಶರೀರವು (ಪುರ್ಯಷ್ಟಕ) ತನ್ನ ಸ್ಥೂಲ ದೇಹವನ್ನು ಪ್ರವೇಶಮಾಡಿತು.

೨೪. ಆಗ ಸ್ಥೂಲದೇಹ ಸಂಪನ್ನನಾದ ವೀತಹವ್ಯಮುನಿಯೂ ಪಿಂಗಳನೂ ಒಬ್ಬರಿಗೊಬ್ಬರು ನಮಸ್ಕರಿಸಿದರು. ಬಳಿಕ ತೇಜೋನಿಧಿಗಳಾದ ಅವರಿಬ್ಬರೂ ತಮ್ಮ ತಮ್ಮ ಕಾರ್ಯಗಳಲ್ಲಿ ಮಾತ್ರವೇ ನಿರತರಾದರು.

ಜಗಾಮ ಪಿಂಗಲೋ ವ್ಯೋಮ ಮುನಿಶ್ಚ ವಿಮಲಂ ಸರಃ ।
ತಾರಕಾಕಾರಕುಮುದಂ ಸೂರ್ಯಾಂಶುಕವದಾಕೃತಿ ॥ ೨೫ ॥

ವೀತಹವ್ಯೋ ಮಮಜ್ಜಾಶು ಸರಸ್ಯುದ್ಭಿನ್ನ ಪಂಕಜೇ ।
ಪಂಕಪಲ್ವಲಲೀಲಾಂತೇ ವನೇ ಕಲಭಕೋ ಯಥಾ ॥ ೨೬ ॥

ತತ್ರ ಸ್ನಾತ್ವಾ ಜಪಂ ಕೃತ್ವಾ ಪೂಜಯಿತ್ವಾ ದಿವಾಕರಂ ।
ಮನೋ ಭೂಷಿತಯಾ ತನ್ವಾ ಪೂರ್ವವತ್ಪುನರಾಬಭೌ ॥ ೨೭ ॥

---

೨೫. ಪಿಂಗಲನು ಗಗನ ಮಂಡಲವನ್ನು ಹೋಗಿ ಸೇರಿದನು. ಮತ್ತು ವೀತಹವ್ಯಮುನಿಯು ಸ್ನಾನಾರ್ಥವಾಗಿ ನಿರ್ಮಲೋದಕವುಳ್ಳ ಸರಸ್ಸಿಗೆ ಹೋದನು. ಆ ಸರಸ್ಸಿನಲ್ಲಿ ಕುಮುದ ಪುಷ್ಪಗಳು ನಕ್ಷತ್ರ ಸದೃಶವಾಗಿ ವಿರಾಜಿಸುತ್ತಿದ್ದುದರಿಂದಲೂ ಅದರ ಮೇಲುಭಾಗವನ್ನೆಲ್ಲ ಸೂರ್ಯಾತಪವು ಪೀತಾಂಬರದಂತೆ ಮುಚ್ಚಿಕೊಂಡಿದ್ದುದರಿಂದಲೂ ಆ ಸರಸ್ಸಿಗೂ ಗಗನ ಮಂಡಲಕ್ಕೂ ಸಾದೃಶ್ಯವು ವಿಶೇಷವಾಗಿದ್ದಿತು.

೨೬. ಬುರುಡೆಯಿಂದ ಕೂಡಿದ ಸಣ್ಣ ಕೊಳಗಳಲ್ಲಿ ಯಥೇಚ್ಛವಾಗಿ ಕ್ರೀಡಾ ವಿಹಾರಗಳನ್ನು ಮಾಡಿದ ಬಳಿಕ, ಒಂದು ಆನೆಯು ಮರಿಯು ಕಾಡಿನ ಸರೋವರ್ರವನ್ನು ಪ್ರವೇಶಿಸುವಂತೆ, ಆ ವೀತಹವ್ಯಮುನಿಯು ಅರಳಿದ ಕಮಲಗಳುಳ ಆ ಸರಸ್ಸಿನಲ್ಲಿ ಬೇಗನೆ ಮುಳುಗಿ ಸ್ನಾನಮಾಡಿದನು.

೨೭. ಅಲ್ಲಿ ಸ್ನಾನಮಾಡಿ ಸಂಧ್ಯಾಜಪಾದಿ ನಿತ್ಯಕರ್ಮಗಳನ್ನು ಮುಗಿಯಿಸಿಕೊಂಡು. ಸಾಕ್ಷಾತ್ ಭಗವಂತನನ್ನು ಆರಾಧಿಸಿ, ಪುನಃ ಪೂರ್ವದಂತೆಯೇ, ಮನನಾದಿ ವ್ಯವಹಾರಗಳಿಂದ ಕೂಡಿದ ತನ್ನ ಸ್ಥೂಲದೇಹದಿಂದ ಮೆರೆದನು.

ಮೈತ್ರ್ಯಾ ತಥಾ ಸಮತಯಾ ಪರಯಾ ಚ ಶಾಂತ್ಯಾ ।
ಸತ್ಪ್ರಜ್ಞಯಾ ಮುದಿತಯಾ ಕೃಪಯಾ ಶ್ರಿಯಾ ಚ ।
ಯುಕ್ತೋ ಮುನಿಃ ಸಂಗವಿಮುಕ್ತಚೇತಾಃ ।
ವಿಂಧ್ಯೇ ಸರಿತ್ತಟಗತೋ ದಿನಮೇವ ರೇಮೇ ॥ ೨೮ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ದೇವದೂತೋಕ್ತೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ವೀತಹವ್ಯ ಸಮಾಧಿಯೋಗೋ" ನಾಮ ಪಂಚಾಶೀತಿತಮಃ ಸರ್ಗಃ

---

೨೮. ಅಯ್ಯ ರಾಮ, ಹೀಗೆ ಆ ವೀತಹವ್ಯಮುನಿಯು ಮೈತ್ರೀ ಭಾವನೆಯಿಂದಲೂ, ವೈಷಮ್ಯರಹಿತವಾದ ಸಮದರ್ಶಿತ್ವದಿಂದಲೂ. ಸಮೀಚೀನವಾದ ಪ್ರಜ್ಞೆಯಿಂದಲೂ, ಮುದಿತಾ ಎಂಬ ಭಾವನೆಯಿಂದಲೂ ಕರುಣಾಭಾವನೆಯಿಂದಲೂ ಮತ್ತು ಅದೇ ಪೂರ್ವದ ತೇಜಸ್ಸಿನಿಂದಲೂ ಯುಕ್ತನಾಗಿ ಸಮಸ್ತ ಸಂಗ ವಿನಿರ್ಮುಕ್ತವಾದ ಮನಸ್ಸುಳ್ಳವನಾಗಿ, ವಿಂಧ್ಯಪರ್ವತದ ಮೇಲೆ ಒಂದು ನದೀತೀರದಲ್ಲಿದ್ದುಕೊಂಡು ; ಒಂದು ಹಗಲು ಮಾತ್ರವೇ ಸಮಾಧಿಪ್ರಚ್ಯುತನಾಗಿ ವಿನೋದದಿಂದ ರಮಿಸಿದನು, ಬಹುದೀರ್ಘಕಾಲ ಪರ್ಯಂತ ರಮಿಸಲಿಲ್ಲ.

(ಮೈತ್ರೀ= ಸುಖಸಂಭೋಗಾಪನ್ನರಾದ ಸಮಸ್ತ ಪ್ರಾಣಿಗಳಲ್ಲಿ ಸದ್ಭಾವನೆ. ದುಃಖಿತರಾದ ಪ್ರಾಣಿಗಳ ವಿಷಯದಲ್ಲಿ ಇರುವ ಮರುಕವೇ ಕರುಣಾ ಭಾವನೆ. ಮುದಿತಾ= ಪುಣ್ಯಾತ್ಮರಾದವರ ವಿಷಯದಲ್ಲಿ ಸದ್ಭಾವನೆ (ಪೂಜ್ಯಬುದ್ಧಿ ಯುತವಾದ ಆದರ.) ಉಪೇಕ್ಷಾ= ಪಾಪಾತ್ಮರ ವಿಷಯದಲ್ಲಿ ಅನಾದರ ಔದಾಸೀನ್ಯ ಇವುಗಳಿಂದ ಚಿತ್ತಪ್ರಸಾದವಾಗುವುದು.)

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ವೀತಹವ್ಯ ಸಮಾಧಿಯೋಗೋಪದೇಶ" ವೆಂಬ ಎಂಭತ್ತೈದನೆಯ ಸರ್ಗವು

ಷಡಶೀತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ದಿನಾಂತೇ ಸ ಸಮಾಧಾತುಂ ಪುನರೇವ ಮನೋ ಮುನಿಃ ।
ವಿವೇಶ ಕಾಂಚಿದ್ವಿತತಾಂ ವಿಜ್ಞಾತಾಂ ವಿಂಧ್ಯ ಕಂದರಾಂ ॥ ೧ ॥

ತದೇವಾತ್ಮಾನುಸಂಧಾನಂ ಅತ್ಯಜನ್ಸಮಮಿಂದ್ರಿಯೈಃ ।
ಚೇತಸಾ ಕಲಯಾಮಾಸ ದೃಷ್ಟಲೋಕ ಪರಾವರಃ ॥ ೨ ॥

ಪೂರ್ವಮೇವೇಂದ್ರಿಯಗಣೋ ಮಯಾ ಪರಿಹೃತಃ ಸ್ಫುಟಂ ।
ಇದಾನೀಂ ಚಿಂತಯಾ ನಾರ್ಥಃ ಪುನರ್ವಿತತಯಾ ಮಮ ॥ ೩ ॥

ಎಂಭತ್ತಾರನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು:—

೧. ಅಯ್ಯ ರಾಮ, ಆ ವೀತಹವ್ಯ ಮುನಿಯು ಪೂರ್ವಸರ್ಗಾಂತದಲ್ಲಿ ಹೇಳಿದಂತೆ ಆ ಹಗಲನ್ನು ಕಳೆದಬಳಿಕ, ಸಾಯಂಕಾಲದಲ್ಲಿ, ಮತ್ತೆಯೂ ಕೂಡ ತನ್ನ ಮನಸ್ಸನ್ನು ಸಮಾಧಿ ನಿಷ್ಠವಾದುದನ್ನಾಗಿ ಮಾಡುವುದಕ್ಕೋಸ್ಕರ, ಆ ವಿಂಧ್ಯ ಪರ್ವತದ ಒಂದಾನೊಂದು ವಿಸ್ತಾರವಾದ ಪೂರ್ವಪರಿಚಿತವಾದ ಗುಹೆಯನ್ನು ಪ್ರವೇಶಮಾಡಿದನು.

೨. ಬಳಿಕ, ಪ್ರಪಂಚದ ಸಾರಾಸಾರ ವಿಚಾರವನ್ನು ಚೆನ್ನಾಗಿ ಬಲ್ಲವನಾದ ಆ ವೀತಹವ್ಯ ಮುನಿಯು, ಮೊದಲಿನಂತೆಯೇ ಆ ಆತ್ಮಾನುಸಂಧಾನವನ್ನು ಬಿಡದವನಾಗಿ, ಇಂದ್ರಿಯಗಳಿಂದ ಸಹಿತವಾದ ಮನಸ್ಸಿನ ಸ್ವಭಾವವನ್ನು ತನ್ನ ಮನಸ್ಸಿನಲ್ಲಿಯೇ ವಿವೇಚನೆ ಮಾಡಲು ಉಪಕ್ರಮಿಸಿದನು.

೩. ಬಹುಕಾಲದ ಹಿಂದೆ ಮೊದಲೇ ನಾನು ಇಂದ್ರಿಯಗಳ ಸಮುದಾಯವನ್ನೆಲ್ಲಾ ಚೆನ್ನಾಗಿ ವಿಚಾರಮಾಡಿ, ಅವು ಸರ್ವಾನರ್ಥಕಾರಿಗಳೆಂದೂ ನಿಸ್ಸಾರವಾದು

ಅಸ್ತಿ ನಾಸ್ತೀತಿ ಕಲನಾಂ ಭಂಕ್ತ್ವಾ ವೃದ್ವೀಂ ಲತಾಮಿವ ।
ಶೇಷಂ ತು ಬದ್ಧ ಸಂಸ್ಥಾನಸ್ತಿಷ್ಠಾಮ್ಯಚಲ ಶೃಂಗವತ್ ॥ ೪ ॥

ಉದಿತೋಽಸ್ತಂಗತ ಇವ ಸ್ವಸ್ತಂ ಗತ ಇವೋದಿತಃ ।
ಸಮಃ ಸಮರಸಾಭಾಸಸ್ತಿಷ್ಠಾಮಿ ಸ್ವಚ್ಛತಾಂ ಗತಃ ॥ ೫ ॥

ಪ್ರಬುದ್ಧೋಽಪಿ ಸುಷುಪ್ತಸ್ಥಃ ಸುಷುಪ್ತಸ್ಥಃ ಪ್ರಬುದ್ಧವತ್ ।
ತುರ್ಯಮಾಲಂಬ್ಯ ಕಾಯಾಂತಸ್ತಿಷ್ಠಾಮಿ ಸ್ತಂಭಿತೋಽಸ್ಥಿತಿಃ ॥ ೬ ॥

ವೆಂದೂ ಸ್ಪಷ್ಟವಾಗಿ ತಿಳಿದು ಪರಿಹರಿಸಿಕೊಂಡಿರುವೆನು. ಈಗಲೂ ಪುನಃ ಅದೇ ವಿಚಾರವನ್ನೇ ಇನ್ನೂ ವಿಸ್ತಾರವಾಗಿ ಚಿಂತೆಮಾಡುತ್ತಾ ಇದ್ದರೆ, ಅದರಿಂದ ನನಗೆ ಯಾವ ಪ್ರಯೋಜನವೂ ಇಲ್ಲ.

೪. ಆದು ಕಾರಣ, ಈಗ ನಾನು- "ಅಸ್ತಿ" (ಉಂಟು) ಮತ್ತು "ನಾಸ್ತಿ" (ಇಲ್ಲ) ಎಂಬೀ ಎರಡು ಬಗೆಯಾದ ದೃಶ್ಯ ವಿಕಲ್ಪವನ್ನು ಕೋಮಲವಾದ ಎಳೆಯ ಬಳ್ಳಿಯನ್ನು ಮುರಿಯುವಂತೆ, ಸುಲಭವಾಗಿ ಭಂಗಗೊಳಿಸಿ, ಪರಮಾರ್ಥ ಸತ್ಯವಾಗಿ ಅವಶಿಷ್ಟವಾದ ಸಾಕ್ಷಿ ಚಿನ್ಮಾತ್ರರೂಪ ಸ್ವಾತ್ಮವನ್ನು ಅವಲಂಬಿಸಿದವನಾಗಿ, ದೃಢವಾಗಿ ಪದ್ಮಾಸನವನ್ನು ಹಾಕಿಕೊಂಡು, ದೇಹವನ್ನೂ ಶಿರಸ್ಸನ್ನೂ ಕುತ್ತಿಗೆಯನ್ನೂ ಸಮವಾಗಿ ನಿಲ್ಲಿಸಿ, ಪರ್ವತದ ಶಿಖರದಂತೆ ಸಮಾಧಿಯಲ್ಲಿ ನಿಶ್ಚಲನಾಗಿರುವೆನು.

೫. ನಾನು ಈಗ ಜೀವಿಸಿರುವವನಾಗಿದ್ದರೂ ಅಜ್ಞದೃಷ್ಟಿಯಿಂದ ಮೃತಪ್ರಾಯನಾಗಿರುವೆನು, ತತ್ತ್ವಜ್ಞರ ದೃಷ್ಟಿಯಿಂದಲಾದರೋ, ಮೃತನಾದವನಂತಿದ್ದರೂ ಜೀವಿಸಿದ್ದಂತೆಯೇ ಇರುವೆನು. ಮತ್ತು ಸರ್ವತ್ರ ಸಮನಾಗಿಯೂ, ಚಿದೇಕರಸಮಾತ್ರ ಸ್ವರೂಪನಾಗಿಯೂ, ಅವಿದ್ಯಾದಿ ಮಲರಹಿತನಾಗಿ (ಸ್ವಚ್ಛ)ಯೂ ಇರುವೆನು.

೬. ನಾನು ಜಾಗ್ರದವಸ್ಥೆಯಲ್ಲಿದ್ದರೂ ಕೂಡ, ದ್ವೈತಜಾಲವನ್ನು ಕಾಣದಿರುವ ಕಾರಣ, ಸುಷುಪ್ತಾವಸ್ಥೆಯಲ್ಲಿರುವನಂತೆಯೇ ಸ್ವಾತ್ಮಸಂಪನ್ನನಾಗಿ

ಸ್ಥಿತಃ ಸ್ಥಾಣುರಿ ವೈಕಾಂತೇ ಸ್ವಾಂತಾಂತೇ ಸರ್ವತಃ ಸ್ಥಿತೇ ।
ಸತ್ವ ಸಾಮಾನ್ಯಸಾಮ್ಯೇ ಹಿ ತಿಷ್ಠಾಮ್ಯುಪ ಗತಾಮಯಃ ॥ ೭ ॥

ಇತಿ ಸಂಚಿಂತ್ಯ ಸ ಧ್ಯಾನೇ ಪುನಸ್ತಸ್ಥೌ ದಿನಾನಿ ಷಟ್ ।
ತತಃ ಪ್ರಬೋಧಮಾಪನ್ನಃ ಕ್ಷಣಸುಪ್ತ ಇವಾಧ್ವಗಃ ॥ ೮ ॥

ತತಃ ಸಿದ್ಧಃ ಸ ಭಗವಾನ್ವೀತಹವ್ಯೋ ಮಹಾತಪಾಃ ।
ವಿಜಹಾರ ಚಿರಂ ಕಾಲಂ ಜೀವನ್ಮುಕ್ತತಯಾ ತದಾ ॥ ೯ ॥

ಸ್ವಸ್ಥನಾಗಿರುವೆನು. ಸುಷುಪ್ತಾವಸ್ಥೆಯಲ್ಲಿರುವವನಾದರೂ, ಸ್ವಾತ್ಮಸ್ವರೂಪವನ್ನು ಸ್ಪಷ್ಟವಾಗಿ ಅನುಭವಿಸುತ್ತಿರುವೆನಾದ ಕಾರಣ ಪ್ರಬುದ್ಧನಾಗಿಯೇ ಇರುವೆನು. ಹೀಗೆ ನನ್ನ ದೇಹದೊಳಗೆ (ಅಂತಃಕರಣದಲ್ಲಿ) ಸ್ಥೂಲ ಸೂಕ್ಷ್ಮಕಾರಣರೂಪ ತ್ರಿವಿಧ ಶರೀರಗಳೆಂಬ ಅವಸ್ಥಾತ್ರಯ ವಿನಿರ್ಮುಕ್ತವಾದ ತುರ್ಯ ಪದವನ್ನು ಆಶ್ರಯಿಸಿ ಕೊಂಡು ನಿಶ್ಚಲವಾದ ಸ್ಥಿತಿಯುಳ್ಳವನಾಗಿರುವೆನು.

೭. ಮತ್ತು ಒಂದು ಸ್ಥಾಣು (ಮೋಟು ಮರ) ವಿನಂತೆ ಏಕಾಂತದಲ್ಲಿ ನಿಶ್ಚಲನಾಗಿದ್ದುಕೊಂಡಿರುವ ನಾನು ಮನಸ್ಸಿನ ಮನನ ಶಕ್ತಿಗೂ ಸಿಕ್ಕದೆ ಮನಸ್ಸಿಗೆ ಬಹು ದೂರದಲ್ಲಿ ಆಚೆಯಿರುವ ಸರ್ವತ್ರ ಪರಿಪೂರ್ಣವಾಗಿರುವ ಸತ್ತಾ ಸಾಮಾನ್ಯವೆಂಬ ಪರಮ ಸಾಮ್ಯದಲ್ಲಿ ನಿರುಪಾಧಿಕನಾಗಿ (ನಿರುಪದ್ರವನಾಗಿ) ಇದ್ದು ಕೊಂಡಿರುವೆನು.

೮. ಹೀಗೆಂದು ಯೋಚಿಸಿ ಆ ವೀತಹವ್ಯ ಮುನಿಯು ಪುನಃ ಆರು ದಿನಗಳು ನಿರಂತರ ಧ್ಯಾನನಿಷ್ಠನಾಗಿದ್ದನು. ಅನಂತರ ಪ್ರಯಾಣಿಕನು ಮಾರ್ಗ ಮಧ್ಯದಲ್ಲಿ ಮಲಗಿಕೊಂಡು ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ಹೊಂದಿ ಪುನಃ ಮಾರ್ಗಶೇಷವನ್ನು ನಡೆಯುವುದಕ್ಕಾಗಿ ಎದ್ದು ಹೊರಡುವಂತೆ ಆ ಮುನಿಯೂ ಸಮಾಧಿಯನ್ನು ಬಿಟ್ಟು ಬಹಿರ್ಮುಖನಾದನು.

೯. ಬಳಿಕ, ಮಹಾ ತಪಸ್ವಿಯಾದ ಆ ವೀತಹವ್ಯನು ಬಹಿರ್ಮುಖನಾಗಿರು ವಾಗಲೂ ಕೂಡ ಯೋಗ ಸಂಸಿದ್ಧಿ ವಶದಿಂದ ಸಮಾಹಿತ ಚಿತ್ತನಾಗಿಯೂ ಭಗ

ವಸ್ತು ನಾಭಿ ನನಂದಾಸೌ ನನಿಂದ ನ ಕದಾಚನ ।
ನ ಜಗಾಮ ತಥೋದ್ವೇಗಂ ನ ಚ ಹರ್ಷಮವಾಪ ಸಃ ॥ ೧೦ ॥

ಗಚ್ಛತಸ್ತಿಷ್ಠತಶ್ಚೈವ ತಸ್ಯೈವಮಭವದ್ಧೃದಿ ।
ವಿನೋದಾಯ ವಿಚಿತ್ರಸ್ಯ ಕಥಾ ಸ್ವಮನಸಾ ಸಹ ॥ ೧೧ ॥

ಅವ್ಯಯೇಂದ್ರಿಯವರ್ಗೇಶ ಮನಃ ಶಮವತಾ ತ್ವಯಾ ।
ಪಶ್ಯಾನಂದ ಸುಖಂ ಕೀದೃಗ್ವಿಧ ಮಾಸಾದಿತಂ ತತಂ ॥ ೧೨ ॥

ನಂತರವೇ ಆಗಿಯೂ, ಚಿರಕಾಲ ಜೀವನ್ಮುಕ್ತ ಭಾವದಿಂದ ಪ್ರಾರಬ್ಧಶೇಷ ಕ್ಷಯವನ್ನು ನಿರೀಕ್ಷಿಸುತ್ತಾ ವಿಹರಿಸಿಕೊಂಡಿದ್ದನು.

೧೦. ಆ ಸ್ಥಿತಿಯಲ್ಲಿ ಅವನು ಯಾವಾಗಲೂ ಯಾವ ವಸ್ತುವನ್ನೂ ಗುಣ ದೃಷ್ಟಿಯಿಂದ ಶ್ಲಾಘಿಸಲೂ ಇಲ್ಲ. ಯಾವುದನ್ನೂ ದೋಷ ದೃಷ್ಟಿಯಿಂದ ನಿಂದಿಸಲೂ ಇಲ್ಲ. ಮತ್ತು ಯಾವುದರಿಂದಲೂ ಅಪ್ರಿಯ ಬುದ್ಧಿಯಿಂದ ಸಂತಾಪಗೊಳ್ಳಲಿಲ್ಲ. ಹಾಗೆಯೇ ಯಾವುದರಿಂದಲೂ ಪ್ರಿಯ ಬುದ್ಧಿಯಿಂದ ಸಂತೋಷ ಪಡೆಯಲೂ ಇಲ್ಲ.

೧೧. ಆಗ ಅವನು ಸರ್ವದಾ ಶೂನ್ಯಚಿತ್ತನಾಗಿರುತ್ತಾ ತಿರುಗಾಡುವಾಗಲೂ, ನಿಂತಿರುವಾಗಲೂ, ಸರ್ವಾವಸ್ಥೆಗಳಲ್ಲಿಯೂ, ತನ್ನ ಹೃದಯದಲ್ಲಿ ತನ್ನ ಮನಸ್ಸಿನೊಡನೆ ವಿನೋದಾರ್ಥವಾಗಿ ಒಂದೊಂದು ಸಲ ಈರೀತಿಯಾಗಿ ತತ್ತ್ವ ವಿಚಾರ ಮಾಡುತ್ತಿದ್ದನು.

೧೨. ಕಾಮೋಪಭೋಗ ಲಾಲಸೆಯಿಂದ ಸ್ವಸಾಮರ್ಥ್ಯವನ್ನು ನಾಶ (ವ್ಯಯ) ಗೊಳ್ಳಿಸದೆ ಅವ್ಯಯವಾಗಿರುವ ಸಕಲೇಂದ್ರಿಯಗಳಿಗೂ ಅಧಿಪತಿಯಾಗಿರುವ ಎಲೈ ಮನಸ್ಸೇ, ಈಗ ನೀನು ಶಾಂತಿಯನ್ನು ಪಡೆದಿರುವ ಕಾರಣ ಎಂತಹ ಪ್ರಶಸ್ತವಾದ, ಸರ್ವ ಜನಾಹ್ಲಾದಕರವಾದ ಅಖಂಡವಾದ ನಿರತಿಶಯಾನಂದ ರೂಪ ಶಾಶ್ವತ ಸುಖವನ್ನು ಪಡೆದಿರುವೆ ನೀನೇ ನೋಡು.

ಏಷ್ಯೈವಾವಿರತಂ ತಸ್ಮಾನ್ನೀರಾಗೈವ ದಶಾ ತ್ವಯಾ ।
ಅವಲಂಬ್ಯಾ ಪರಿತ್ಯಾಜ್ಯಂ ಚಾಪಲಂ ಚಲತಾಂ ವರ ॥ ೧೩ ॥

ಭೋ ಭೋ ಇಂದ್ರಿಯ ಚೌರಾಹೇ ಹತಾಶಾ ಹತನಾಮಕಾಃ ।
ಯುಷ್ಮಾಕಂ ನಾಯ ಮಾತ್ಮಾಸ್ತಿ ನ ಭವಂತಸ್ತಥಾತ್ಮನಃ ॥ ೧೪ ॥

ವ್ರಜತಾಂ ವೋ ವಿನಾಶಾಂಶಮಾಶಾ ವೋ ವಿಫಲೀಕೃತಾಃ ।
ನ ಸಮರ್ಥಾಃ ಸಮಾಕ್ರಾಂತೌ ಭವಂತೋ ಭಂಗುರಾಶ್ರಯಾಃ ॥ ೧೫ ॥

ವಯಮಾತ್ಮೇತಿ ಯೈಷಾ ವೋ ಬಭೂವ ಕಿಲ ವಾಸನಾ ।
ತತ್ವವಿಸ್ಮೃತಿ ಜಾತಾ ಹಿ ದೃಷ್ಟರಜ್ಜು ಭುಜಂಗವತ್ ॥ ೧೬ ॥

---

೧೩. ಅದು ಕಾರಣ, ಚಪಲ ಸ್ವಭಾವವುಳ್ಳವುಗಳಲ್ಲೆಲ್ಲ ಶ್ರೇಷ್ಠವಾದ ಮನಸ್ಸೇ, ಇನ್ನು ಮುಂದೆಯೂ ಕೂಡ ನೀನು ಸಂತತವಾಗಿ ಈ ರಾಗ ಶೂನ್ಯವಾದ (ವಿರಕ್ತವಾದ) ದಶೆಯನ್ನೇ ಆಶ್ರಯಿಸಿಕೊಂಡಿರಬೇಕು. ಇನ್ನು ನಿನ್ನ ಸ್ವಾಭಾವಿಕ ವಾದ ಚಪಲತ್ವವನ್ನು ಸರ್ವಥಾ ಪರಿತ್ಯಾಗ ಮಾಡಬೇಕು.

೧೪. ಎಲೈ ಎಲೈ ಇಂದ್ರಿಯಗಳೆಂಬ ಚೋರರೇ ನಿಮ್ಮ ಆಶೆಗಳೆಲ್ಲವೂ ಈಗ ಮಣ್ಣು ಮುಕ್ಕಿದವು. ನಿಮ್ಮ ಹೆಸರುಗಳೂ ಅಳಿದು ಹೋದವು. ನಾನು ಅನು ಭವಿಸುತ್ತಿರುವ ಈ ಆತ್ಮನು ಈಗ ನಿಮ್ಮವನಾಗಿಲ್ಲ. ಹಾಗೆಯೇ ನೀವೂ ಆತ್ಮ ನೊಂದಿಗೆ ಯಾವ ಸಂಬಂಧವನ್ನೂ ಪಡೆದವರಲ್ಲ.

೧೫. ಹೀಗೆ ಸದ್ರೂಪನಾದ ಆತ್ಮನೊಡನೆ ಸಂಬಂಧವಿಲ್ಲದ ಕಾರಣ, ನಿಮ್ಮ ಸ್ವರೂಪವು ಶಶವಿಷಾಣಾದಿಗಳಂತೆ ಅಸತ್ಯಾಂಶವನ್ನು ಹೊಂದಲಿ. ಈಗ ನಿಮ್ಮ ಆಶೆಗಳೆಲ್ಲವೂ ವ್ಯರ್ಥಮಾಡಲ್ಪಟ್ಟವು. ನೀವು ಕ್ಷಣ ಭಂಗುರವಾದ ಆಶ್ರಯ ವನ್ನು ಪಡೆದಿರುವ ಕಾರಣ, ನೀವುಗಳೆಲ್ಲರೂ ನನ್ನನ್ನು ಆಕ್ರಮಿಸಿ ವಶಪಡಿಸಿ ಕೊಳ್ಳಲು ಏನೇನೂ ಸ್ವಲ್ಪವೂ ಸಾಮರ್ಥ್ಯವಿಲ್ಲದವರಾಗಿರುವಿರಿ.

೧೬. "ನಾನೇ ಆತ್ಮನು"-"ನಾನೇ ಆತ್ಮನು" ಎಂದು ನಿಮ್ಮಲ್ಲಿ ಒಬ್ಬೊಬ್ಬ ರಿಗೂ ಯಾವ ಅಭಿಮಾನವು (ವಾಸನೆಯು) ಉಂಟಾಗಿದ್ದಿತೋ ಆ ವಾಸನೆಯು

ಅನಾತ್ಮನ್ಯಾತ್ಮತಾ ಸೈಷಾ ಸೈಷಾ ವಸ್ತುನ್ಯವಸ್ತುತಾ ।
ಅವಿಚಾರೇಣ ಸೈ ಜಾತಾ ವಿಚಾರೇಣ ಕ್ಷಯಂ ಗತಾ ॥ ೧೭ ॥

ಭವಂತೋಽನ್ಯೇ ವಯಂ ಚಾನ್ಯೇ ಬ್ರಹ್ಮಾನ್ಯತ್ ಕರ್ತೃತಾ ಪರಾ ।
ಅನ್ಯೋ ಭೋಕ್ತಾನ್ಯ ಆದತ್ತೇ ಕೋ ದೋಷಃ ಕಸ್ಯ ಕೀದೃಶಃ ॥ ೧೮ ॥

ರಜ್ಜುವನ್ನು ನೋಡಿ ಅದು ರಜ್ಜುವೆಂಬ ಜ್ಞಾನವಿಲ್ಲದಿರುವ ಕಾರಣ ಉಂಟಾಗುವ ಸರ್ಪ ಜ್ಞಾನದಂತೆ ಸ್ವಾತ್ಮತತ್ತ್ವವನ್ನು ಮರೆತುಬಿಟ್ಟಿರುವ ಕಾರಣದಿಂದ ಉಂಟಾದ ಕೇವಲ ಮಿಥ್ಯಾ ರೂಪವಾದ ಭ್ರಾಂತಿಯೇ ಅಹುದು.

೧೭. ನಿಮಗೆ ಉಂಟಾಗಿದ್ದ ಆ ಆತ್ಮ ಭಾವನೆಯು ಆತ್ಮನಲ್ಲದುದರಲ್ಲಿ (ಅನಾತ್ಮ ವಸ್ತುವಿನಲ್ಲಿ) ಆತ್ಮನೆಂಬ ಬುದ್ಧಿಯ ಆರೋಪವು. ಇದಕ್ಕೇ ಅಧ್ಯಾಸ ವೆಂದು ಹೆಸರು. ಮತ್ತು ವಸ್ತುವಲ್ಲದುದರಲ್ಲಿ ವಸ್ತುತ್ವ ಬುದ್ಧಿಯು. (ಅಂದರೆ ಸತ್ತಾಶೂನ್ಯವಾದ ಅಸದ್ವಸ್ತುವಿನಲ್ಲಿ ಅದು ಸತ್ಯ ವಸ್ತುವೆಂದು ತಿಳಿಯುವ ಭ್ರಾಂತಿ ಜ್ಞಾನವು; ನಿಜವಾಗಿಯೂ ಆ ಅಧ್ಯಾಸಿಕವಾದ ಭ್ರಾಂತಿಯು ವಸ್ತು ತತ್ತ್ವಸ್ವರೂಪ ವಿಚಾರ ರಾಹಿತ್ಯದಿಂದ ಉಂಟಾಗಿದ್ದಿತು. ವಿಚಾರದಿಂದ ತತ್ತ್ವಜ್ಞಾನವುಂಟಾಗಿ ರುವ ಕಾರಣ, ನನ್ನ ಮೊದಲಿನ ಭ್ರಾಂತಿಯು ಈಗ ನಾಶಹೊಂದಿಬಿಟ್ಟಿರುವುದು.

೧೮. ಹೀಗೆ ವಿವೇಕದಿಂದ ನೋಡಿದರೆ, ಇಂದ್ರಿಯ ಸಂಬಂಧದಿಂದುಂಟಾ ಗುವ ದೋಷವು ಯಾವುದೂ, ಯಾರಿಗೂ, ಹೇಗೂ ಪ್ರಸಕ್ತವಾಗುವುದಿಲ್ಲ. ಹೇಗೆಂದರೆ ಇಂದ್ರಿಯುಗಳೇ, ನೀವು ಕರಣಭೂತಗಳಾಗಿ ಪ್ರತ್ಯೇಕವಾಗಿರುವಿರಿ. ಅಭಿಮಂತೃಗಳಾದ ನಾವೇ ಬೇರೆ. ಅದ್ವಿತೀಯವಾದ ಪರಬ್ರಹ್ಮವು ಯಾವುದರೊಡ ನೆಯೂ ಸಂಬಂಧವಿಲ್ಲದೆಯೇ ಪೃಥಕ್ಕಾಗಿರುವುದು. ಪ್ರಾಣ ಪ್ರಯುಕ್ತ ಕ್ರಿಯಾ ನಿಮಿತ್ತವಾದ ಕರ್ತೃತ್ವವು ಬೇರೆಯಾಗಿರುವುದು. ಭೋಕ್ತೃವಾದ ಚಿದಾಭಾಸವೋ ಪ್ರತ್ಯೇಕವು. ಇವೆಲ್ಲಕ್ಕಿಂತಲೂ ಬೇರೆಯಾದ ಮನಸ್ಸು ಎಲ್ಲವನ್ನೂ ಸ್ವೀಕರಿಸು ವುದು. ಹೀಗಿರುವಾಗ ಇನ್ನು ದೋಷವೆಂಬುದು ಯಾವುದು ? ಅದು ಯಾರಿಗೆ? ಮತ್ತು ಹೇಗೆ ಇರುವುದು ?

ವನೇಭ್ಯೋ ದಾರು ಸಂಜಾತಂ ರಜ್ಜವೋ ವೇಣು ಚರ್ಮಣಃ ।
ವಾಸೀ ಚಾಯಃ ಫಲಾನ್ಯೇವ ತಕ್ಷ್ಣಾ ಗ್ರಾಸಾರ್ಥ ಮುದ್ಯತಃ ॥ ೧೯ ॥

ಇತ್ಥಂ ಯಥೇಹ ಸಾವ-ಗ್ರ್ಯಾ ಸ್ವಶಕ್ತಿಸ್ಥ ಪದಾರ್ಥಯಾ ।
ಸಂಪನ್ನಾ ಕಾಕತಾಲೀಯಾತ್ ವೃಥಾ ವರಗೃಹಾಕೃತಿಃ ॥ ೨೦ ॥

ಸಂಪನ್ನಾಃ ಕಾಕತಾಲೀಯಾತ್ಸ್ವ ಶಕ್ತಿನಿಯತೇಂದ್ರಿಯಾಃ ।
ತಥೈವ ಕಲಿಕಾಲೋಽಲಂ ಕೇವ ಕಸ್ಯಾತ್ರ ಖಂಡನಾ ॥ ೨೧ ॥

೧೯-೨೧. ಹೀಗಿದ್ದರೂ ಕಾಕತಾಲೀಯ ನ್ಯಾಯದಿಂದ ಲೋಕದಲ್ಲಿ ಸಕಲ ವ್ಯವಹಾರ ಕಾರ್ಯಗಳೂ ನೆರವೇರುತ್ತಿರುವುವು. ಇದಕ್ಕೆ ದೃಷ್ಟಾಂತವೇನೆಂದರೆ, ಮನೆಯ ನಿರ್ಮಾಣಕ್ಕೆ ಅತ್ಯವಶ್ಯಕವಾಗಿ ಬೇಕಾದ ಸಾಮಗ್ರಿಗಳೊಳಗೆ ಮುಖ್ಯವಾದ ಮರವು ಕಾಡುಗಳಲ್ಲಿ ಹುಟ್ಟಿದುದು. ರಜ್ಜುಗಳು ಬಿದಿರಿನ ತೊಗಟೆ (ಸಿಪ್ಪೆ) ಯಿಂದ ಆಗಿರುವುವು. (ರಜ್ಜು= ಗಳುಗಳ ಹೊರೆಗಳನ್ನು ಬಿಗಿದು ಕಟ್ಟುವ ನಾರುಗಳು) ಉಳಿ, ಕೊಡಲಿ, ಮಚ್ಚು ಮುಂತಾದ ಕರಣಗಳು ಉಕ್ಕಿನಿಂದ ತಯಾರಿಸಲ್ಪಡುವುವು. (ಅಂದರೆ ಕಮ್ಮಾರನು ಹೊಟ್ಟೆಪಾಡಿಗೋಸ್ಕರ ಉಕ್ಕಿನಿಂದ ಆಯುಧವನ್ನು ತಯಾರಿಸುವನು.) ಬಡಗಿಯೋ ತನ್ನ ಜೀವನಕ್ಕೋಸ್ಕರ ಕೆಲಸ ಮಾಡುವನು. ಹೀಗೆ ಮೇಲೆ ಹೇಳಿದವುಗಳಲ್ಲಿ ಯಾವುದೊಂದೂ ಯಾವನೊಬ್ಬನೂ ಗೃಹವನ್ನು ನಿರ್ಮಿಸಬೇಕೆಂಬ ಮುಖ್ಯ ಗುರಿಯಿಂದ ಕೆಲಸ ಮಾಡದೆ ಹೋದರೂ ಅವೆಲ್ಲವೂ ಹೇಗೆ ಆಕಸ್ಮಿಕವಾಗಿ ಒಟ್ಟಿಗೆ ಕಲೆತು ಆಯಾ ದ್ರವ್ಯಗಳ ಅಥವಾ ವ್ಯಕ್ತಿಗಳ ಸ್ವಾಭಾವಿಕವಾದ ಶಕ್ತಿಯಿಂದ ಒಂದು ದಿವ್ಯ ಗೃಹದ ಆಕಾರವು ನಿರ್ಮಿತವಾಗುವಂತೆ ಕಾರ್ಯ ಕರಣ ಸಂಘಾತ ರೂಪವಾದ ದೇಹದಲ್ಲಿಯೂ ದರ್ಶನ, ಸ್ಪರ್ಶನ, ಶ್ರವಣ (ನೋಟ, ಮುಟ್ಟುವಿಕೆ, ಕೇಳುವಿಕೆ) ಮುಂತಾದ ಭಿನ್ನ ಭಿನ್ನ ಪ್ರಯೋಜನಗಳುಳ್ಳ ತಮ್ಮ ತಮ್ಮ ಆಯಾ ಶಕ್ತಿಗಳಿಂದ ನಿಯತಗಳಾದ ಇಂದ್ರಿಯಗಳೂ (ಜ್ಞಾನೇಂದ್ರಿಯಗಳು ಮತ್ತು ಕರ್ಮೇಂದ್ರಿಯಗಳು) ಕಾಕತಾಳೀಯ ನ್ಯಾಯದಿಂದ ಹೇಗೋ ಒಟ್ಟಿಗೆ ಬೆರೆತು ನಾನಾವಿಧವ್ಯವಹಾರ ಕಾರ್ಯಗಳು ನಿಷ್ಪನ್ನವಾಗುವುವು. ಆದರೆ ಈ ಸಮಸ್ತ ವ್ಯವಹಾರಗಳೂ ಅತ್ಯಂತ ಚಂಚಲಗಳು. ಹೀಗಿರುವಾಗ ಇವುಗಳಲ್ಲಿ ಯಾರಿಗೆ ಯಾವ ಬಗೆಯ ಕೇಡು ಇರುವುದು? (ಯಾರಿಗೂ ಯಾವುದೂ ಇಲ್ಲವೆಂದರ್ಥ.)

ವಿಸ್ಮೃತಿ ರ್ವಿಸ್ಮೃತಾ ದೂರಂ ಸ್ಮೃತಿಃ ಸ್ಫುಟಮನುಸ್ಮೃತಾ ।
ಸತ್ಸಜ್ಜಾತ ಮಸಚ್ಚಾಸತ್ ಕ್ಷತಂ ಕ್ಷೀಣಂ ಸ್ಥಿರಂ ಸ್ಥಿತಂ ॥ ೨೨ ॥

ಏವಂ ವಿಧೇನ ಭಗವಾನ್ವಿಚಾರೇಣ ಮಹಾತಪಾಃ ।
ಸೋಽತಿಷ್ಠನ್ಮ್ರಸಿ ಶಾರ್ದೂಲೋ ಬಹೂನ್ವರ್ಷ ಗಣಾನಿಹ ॥ ೨೩ ॥

ಅಪುನರ್ಭವನಾಯೈವ ಯತ್ರ ಚಿಂತಾಂತ ಮಾಗತಾ ।
ಮೂಢತಾ ಚ ಸುದೂರಸ್ಥಾ ತತ್ರಾಸಾವವಸತ್ಸದಾ ॥ ೨೪ ॥

ಯಥಾ ಭೂತ ಪದಾರ್ಥೌಘ ದರ್ಶನೋತ್ಥ ಮನರ್ಥಕಂ ।
ಧ್ಯಾನಾ ಶ್ವಾಸನ ಮಾಲಂಬ್ಯ ಸೋಽವಸತ್ಸುಖಗಃ ಸದಾ ॥ ೨೫ ॥

---

೨೨. ಈಗ ನಾನು ಅವಿದ್ಯೆಯನ್ನು ಸಂಪೂರ್ಣವಾಗಿ ಮರೆತು ಬಹು ದೂರಕ್ಕೆ ಓಡಿಸಿಬಿಟ್ಟೆನು. ಆತ್ಮಜ್ಞಾನವನ್ನು ಸ್ಪಷ್ಟವಾಗಿ ಸರ್ವದಾ ಅನುಸಂಧಾನ ದಿಂದ ಸಾಕ್ಷಾತ್ಕರಿಸುತ್ತಿರುವೆನು. ಈಗ ಸತ್ಯ ವಸ್ತುವು ಸತ್ಯವೇ ಆಗಿಯೂ, ಅಸತ್ಯವು ಅಸತ್ಯವಾಗಿಯೂ ಆದವು. (ಭ್ರಾಂತ ದಶೆಯಲ್ಲಿ ಸತ್ಯವು ಅಸತ್ತಾಗಿರು ವಂತೆಯೂ ಅಸತ್ತಾದುದು ಸತ್ಯ ವಸ್ತುವಿನಂತೆಯೂ ವಿರುದ್ಧ ಸ್ವಭಾವಗಳಾಗಿ ಭಾಸಮಾನವಾಗಿದ್ದುವು. ಈಗ ಜ್ಞಾನ ದಶೆಯಲ್ಲಿ ಆ ಬಗೆಯಾದ ವಿಪರೀತ ಭಾವನೆ ಮುಂತಾದ ಅವಿದ್ಯಕ ಕಲ್ಪನೆಗಳು ಇಲ್ಲವಾದವು.) ಮತ್ತು ಸ್ವಭಾವತಃ ಕ್ಷಯ ಹೊಂದತಕ್ಕುದು ಕ್ಷೀಣವಾಯಿತು. ಸ್ಥಿರವಾದುದು ಅಬಾಧಿತವಾಗಿ ಸ್ಥಿರ ವಾಗಿಯೇ ಉಳಿಯಿತು.

೨೩. ಈ ಪ್ರಕಾರವಾದ ವಿಚಾರವನ್ನು ಮಾಡುತ್ತಾ ಭಗವಂತನೂ ಮಹಾ ತಪಸ್ವಿಯೂ ಆದ ವೀತಹವ್ಯಮುನೀಶ್ವರನು ಅನೇಕಾನೇಕ ವರ್ಷಗಳ ಕಾಲ ಈ ಲೋಕದಲ್ಲಿ ವಾಸವಾಗಿದ್ದನು.

೨೪. ಯಾವ ಸ್ಥಿತಿಯಲ್ಲಿ ಸಮಸ್ತ ಚಿಂತೆಗಳೂ ಕೊನೆಗಾಣುವುವೋ ಮೋಹ ವೆಂಬುದು ನಿಲ್ಲದೆ ಬಹು ದೂರ ಓಡಿಹೋಗಿಬಿಡುವುದೋ ಅಂತಹ ಪೂರ್ಣಾ ನಂದವೂ ಸ್ವಪ್ರಕಾಶವೂ ಆದ ಪರಮಪದಸ್ಥಿತಿಯಲ್ಲಿ ಆ ವೀತಹವ್ಯ ಮುನಿಯು ಪುನರ್ಜನ್ಮವಿಲ್ಲದಿರುವುದಕ್ಕಾಗಿಯೇ ಸರ್ವದಾ ಬಿಡದೆ ವಾಸವಾಗಿದ್ದನು.

೨೫. ಯಥಾಸ್ಥಿತವಾದ (ಅಂದರೆ ವಸ್ತುತಃ ಅವಿಕಾರಿಯಾದ) ಅದ್ವಿತೀಯಾ ತ್ಮನಲ್ಲಿ ಭ್ರಾಂತಿಯಿಂದ ಅತಿ ವಿಚಿತ್ರಗಳಾದ ನಾನಾ ಪದಾರ್ಥಗಳ ಸಮುದಾಯಗಳ

ಹೇಯಾದೇಯ ಸಮಾಸಂಗ ತ್ಯಾಗಾದಾನದೃಶೋಃ ಕ್ಷಯೇ ।
ವೀತಹವ್ಯ ಮುನೇರಾಸೀದಿಚ್ಛಾನಿಚ್ಛಾತಿಗಂ ಮನಃ ॥ ೨೬ ॥

ವಿದೇಹ ಕೇವಲೀಭಾವೇ ಸೀಮಾಂತೇ ಜನ್ಮ ಕರ್ಮಣಾಂ ।
ಸಂಸಾರ ಸಂಗ ಸಂತ್ಯಾಗ ರಸಾಸವನವೇಚ್ಛಯಾ ।
ವಿವೇಶ ಸ ತಯೈವಾಂತೇ ಸಹ್ಯಾದ್ರೌ ಹೇಮಕಂದರಂ ॥ ೨೭ ॥

ಅಪುನಃ ಸಂಗಮಾಯಾಶು ಜಗಜ್ಜಾಲ ಮವೇಕ್ಷ್ಯ ಸಃ ।
ಬದ್ಧ ಪದ್ಮಾಸನಃ ಸ್ಥಿತ್ವಾ ತತ್ರೋವಾಚಾತ್ಮನಾತ್ಮನಿ ॥ ೨೮ ॥

ನ್ನೆಲ್ಲಾ ಕಾಣುವುದರ ಮೂಲಕ ವ್ಯರ್ಥವಾಗಿಯೇ ಉದ್ಭವಿಸುವ ಶೋಕಮೋಹಾಯಾಸವನ್ನು ನಿವಾರಣೆ ಮಾಡುವುದಕ್ಕೋಸ್ಕರ ಪುನಃ ಪುನಃ ಆತ್ಮಸ್ವರೂಪ ಧ್ಯಾನದಿಂದ ಸಮಾಧಾನವನ್ನು ಹೊಂದಿ-ಆ ವೀತಹವ್ಯನು ಸರ್ವದಾ ಸುಖವಾಗಿಯೇ ವಾಸವಾಗಿದ್ದನು.

೨೬. ಹೇಯವಾದ ವಿಷಯಗಳು ಪ್ರಾಪ್ತವಾದಾಗ ಅವುಗಳನ್ನು ಬಿಡಬೇಕೆಂಬ ಮತ್ತು ಉಪಾದೇಯವಾದ ವಿಷಯಗಳು ಪ್ರಾಪ್ತವಾದಾಗ ಅವುಗಳನ್ನು ಸ್ವೀಕರಿಸಬೇಕೆಂಬ ಜ್ಞಾನಗಳು ನಾಶಹೊಂದಲಾಗಿ-ಆ ವೀತಹವ್ಯಮುನಿಯ ಮನಸ್ಸು ರಾಗದ್ವೇಷಗಳೆರಡನ್ನೂ ಅತಿಕ್ರಮಿಸಿದುದಾಗಿ ಪ್ರಶಾಂತವಾಗಿದ್ದಿತು.

೨೭. ಪ್ರತಿಭಾಸ ಮಾತ್ರದಿಂದಲೇ ಇದ್ದಂಥ ದೇಹಾದಿ ಸಂಸಾರ ಸಂಗವನ್ನು ಸಮಗ್ರವಾಗಿ ತ್ಯಜಿಸಿಬಿಟ್ಟಬಳಿಕ ಪರಿಶಿಷ್ಟವಾಗುವ ನಿತ್ಯಶುದ್ಧಾತ್ಮಾನಂದರಸಮಕರಂದವನ್ನು ಆಸ್ವಾದನೆ ಮಾಡಬೇಕೆಂಬ ಉತ್ಕಂಠೆಯಿಂದ-ಜನ್ಮಗಳಿಗೂ ಕರ್ಮಗಳಿಗೂ ಪರಮಾವಧಿಯಾದ (ಎಲ್ಲೆಯ ಕೊನೆ) ವಿದೇಹ ಕೈವಲ್ಯದಲ್ಲಿ ಇಚ್ಛೆಯುಳ್ಳವನಾಗಿ-ಆ ವೀತಹವ್ಯನು ಸಹ್ಯಪರ್ವತದ ಸುವರ್ಣಮಯವಾದ ಒಂದು ಗುಹೆಯನ್ನು ಕೊನೆಯಲ್ಲಿ ಪ್ರವೇಶ ಮಾಡಿದನು.

೨೮. ಅಲ್ಲಿ ಅವನು ಸ್ಥಿರವಾಗಿ ಪದ್ಮಾಸನವನ್ನು ಹಾಕಿ ಕುಳಿತುಕೊಂಡು-ಪುನಃ ಜನನಮರಣಾದಿ ಸಂಸಾರ ಸಂಬಂಧವಿಲ್ಲದೆ ಹೋಗುವುದಕ್ಕೋಸ್ಕರ-ಈ

ರಾಗ ನೀರಾಗತಾಂ ಗಚ್ಛ ದ್ವೇಷ ನಿರ್ದ್ವೇಷತಾಂ ವ್ರಜ ।
ಭವದ್ಭ್ಯಾಂ ಸುಚಿರಂ ಕಾಲಮಿಹ ಪ್ರಕ್ರೀಡಿತಂ ಮಯಾ ॥ ೨೯ ॥

ಭೋಗಾ ನಮೋಸ್ತು ಯುಷ್ಮಭ್ಯಂ ಜನ್ಮ ಕೋಟಿಶತಾನ್ಯಹಂ ।
ಭವದ್ಭಿರ್ಲಾಲಿತೋ ಲೋಕೇ ಲಾಲಕೈರಿವ ಬಾಲಕಃ ॥ ೩೦ ॥

ಇಮಾಮಪಿ ಪರಾಂ ಪುಣ್ಯಾಂ ನಿರ್ವಾಣ ಪದವೀಮಹಂ ।
ಯೇನ ವಿಸ್ಮಾರಿತಸ್ತಸ್ಮೈ ಸುಖಾಯಾಸ್ತು ನಮೋನಮಃ ॥ ೩೧ ॥

ತ್ವದುತ್ತಪ್ತೇನ ಹೇ ದುಃಖ ಮಯಾತ್ಮಾನ್ವಿಷ್ಟ ಆದರಾತ್ ।
ತಸ್ಮಾತ್ತ್ವದು ಪದಿಷ್ಟೋಽಯಂ ಮಾರ್ಗೋ ಮಮ ನಮೋಸ್ತುತೇ ॥ ೩೨ ॥

ಪ್ರಪಂಚದ ಸಮುದಾಯವನ್ನೆಲ್ಲ ಅತ್ಯಂತಾಸತ್ಯವನ್ನಾಗಿ ಕಾಣುತ್ತಾ ತನ್ನಲ್ಲಿ ತಾನೆ, ಕೂಡಲೆ ಮುಂದೆ ಹೇಳುವಂತೆ ಹೇಳಿದನು.

೨೯. ಎಲೈ ರಾಗವೇ, ಇನ್ನು ನೀನು (ಜನರ ಮನಸ್ಸನ್ನು ವಿಕಾರಗೊಳಿಸುವ) ನಿನ್ನ ರಾಗ ಸ್ವಭಾವವನ್ನು ಬಿಡು. ಎಲೈ ದ್ವೇಷವೇ, ನೀನೂ ನಿನ್ನ ದ್ವೇಷ ಸ್ವಭಾವವನ್ನು ಬಿಡು. ನಾನು ಇದುವರೆವಿಗೂ ಈ ಸಂಸಾರದಲ್ಲಿ ಬಹು ದೀರ್ಘ ಕಾಲ ನಿಮ್ಮಿಬ್ಬರೊಡನೆಯೂ, ವಿಶೇಷವಾಗಿ ಕ್ರೀಡಿಸಿಕೊಂಡಿದ್ದೆನು.

೩೦. ಎಲೈ ವಿಷಯೋಪಭೋಗಗಳೇ, ನಿಮಗೆ ನಮಸ್ಕಾರ. ಲೋಕದಲ್ಲಿ ಮಾತಾಪಿತ್ರಾದಿ ಪೋಷಕರು ಮಕ್ಕಳನ್ನು ಲಾಲಿಸುವಂತೆ ನೀವೂ ನನ್ನನ್ನು ನೂರಾರು ಕೋಟಿ ಜನ್ಮಾಂತರಗಳಿಂದಲೂ ಬಿಡದೆ ಒಂದೇ ಸಮನಾಗಿ ಲಾಲಿಸಿಕೊಂಡಿರುವಿರಿ.

೩೧. ಎಲೈ ಸುಖವೇ, ಈಗ ನಾನು ಅನುಭವಿಸುತ್ತಿರುವ ಪರಮಪವಿತ್ರವಾದ ಈ ಮೋಕ್ಷ ಪದವಿಯನ್ನೂ ಕೂಡ ನೀನು ನನಗೆ ಮರೆಯಿಸಿಬಿಟ್ಟಿದ್ದೆ. ಅಂತಹ ವಿಷಯ ಸುಖವಾದ ನಿನಗೆ ಅನಂತ ವಂದನೆಗಳು.

೩೨. ಎಲೈ ದುಃಖವೇ, ನೀನು ನನ್ನನ್ನು ಸಂಸಾರದಲ್ಲಿ ಬಹು ವಿಶೇಷವಾಗಿ ಸಂತಾಪಗೊಳ್ಳಿಸಿದೆ. ಅದು ಕಾರಣವೆ, ನಾನು ಅತ್ಯಾದರದಿಂದ, ಆತ್ಮ

ತ್ವತ್ಪ್ರಸಾದೇನ ಲಬ್ಧೇಯಂ ಶೀತಲಾ ಪದವೀ ಮಯಾ ।
ದುಃಖನಾಮ್ನೇ ದುಃಖತತ್ವ ಸುಖದಾತ್ಮನ್ನಮೋಽಸ್ತು ತೇ || ೩೩ ||

ಕಲ್ಯಾಣಮಸ್ತು ತೇ ಮಿತ್ರ ಸಂಸಾರಾಸಾರಜೀವಿತ ।
ದೇಹಸ್ಥಿತಿರಿಯಂ ಯಾಮೋ ವಯಮಾತ್ಮೀಯ ಮಾಸ್ಪದಂ || ೩೪ ||

ಪ್ರಯೋಜನಾನಾಂ ಜಂತೂನಾಮಹೋ ನು ವಿಷಮಾ ಗತಿಃ ।
ದೇಹೇನಾಪಿ ವಿಯುಜ್ಯೇಽಹಂ ಭೂತ್ವಾ ಜನ್ಮಶತಾನ್ಯಪಿ || ೩೫ ||

ಸಾಕ್ಷಾತ್ಕಾರಕ್ಕಾಗಿ ಪ್ರಯತ್ನಪಟ್ಟು, ಕೊನೆಗೆ ಆತ್ಮಲಾಭದಿಂದ ಕೃತಕೃತ್ಯನಾದೆನು. ಅದು ಕಾರಣ, ನೀನೇ ನನಗೆ ಈ ವಿವೇಕ ಮಾರ್ಗವನ್ನು ಉಪದೇಶ ಮಾಡಿದ ಗುರುವಿನಂತಿರುವೆ ಇಗೋ ನಿನಗೆ ಈ ವಂದನೆಯನ್ನು ಅರ್ಪಿಸುವೆನು.

೩೩. ಎಲೈ ದುಃಖವೇ, ನಿನ್ನ ಅನುಗ್ರಹದಿಂದಲೆ, ನಾನು ಸಕಲವಿಧ ಸಂತಾಪರಹಿತನಾಗಿ, ಅತ್ಯಂತ ಶೀತಲವಾದ ಈ ಕೈವಲ್ಯಪದವಿಯನ್ನು ಪಡೆದಿರುವೆನು. ನೀನು ದುಃಖವೆಂಬ ಹೆಸರುಳ್ಳದ್ದಾಗಿದ್ದರೂ, ತಾತ್ತ್ವಿಕವಾಗಿ ಸುಖವನ್ನೇ ಕೊಡತಕ್ಕ ಸ್ವಭಾವವುಳ್ಳದ್ದಾಗಿರುವೆ. ನಿನಗೆ ನಮಸ್ಕಾರ.

೩೪. ನಿಸ್ಸಾರವಾದ ಸಂಸಾರದ ಜೀವಿತವಾಗಿರುವ ಎಲೈ ದೇಹವೇ, ನೀನು ಅನಾದಿಕಾಲದಿಂದಲೂ ನನ್ನನ್ನು ಸರ್ವದಾ ಅನುವರ್ತಿಸಿಕೊಂಡು ಬಂದಿರುವ ಆಪ್ತ ಮಿತ್ರನಾಗಿದ್ದೀ ನಿನಗೆ ಕಲ್ಯಾಣವಾಗಲಿ. ಈಗಲೇ ನಾವು ನಮ್ಮ ಸ್ವಕೀಯವಾದ ಸ್ಥಾನವನ್ನು ಕುರಿತು ಹೊರಡುವೆವು ಈ ರೀತಿಯಾದ ನಮ್ಮಿಬ್ಬರ ಅಗಲಿಕೆಯು (ವಿಯೋಗ ಸ್ಥಿತಿಯು) ಅನಾದಿ ನಿಯತಿಯ ಸ್ವಭಾವವೇ.

೩೫. ಲೋಕದಲ್ಲಿ ಸಕಲ ಪ್ರಾಣಿಗಳಿಗೆ ತಮ್ಮ ತಮ್ಮ ಪ್ರಯೋಜನಗಳ ರೀತಿಯು ಹೀಗೆ ಅತ್ಯಂತ ವಿಷಮವಾದುದು, (ಸಕಲ ಪ್ರಾಣಿಗಳೂ ಸ್ವಾರ್ಥ ಸಾಧನೆಗಾಗಿ ಆಸೆಪಟ್ಟುಕೊಂಡು, ಆಪ್ತಮಿತ್ರರನ್ನೂ ಬಂಧುಗಳನ್ನೂ ಕೂಡ ಉಪೇಕ್ಷೆ ಮಾಡಿ ಬಿಟ್ಟು ಬಿಟ್ಟು, ಬಹು ದೂರ ಓಡಿಹೋಗುವರು.) ಈಗ ನಾನೂ ಕೂಡ ಅದೇ ಸ್ಥಿತಿಯಲ್ಲಿರುತ್ತಾ, ಹಿಂದಿನಿಂದಲೂ ನೂರಾರು ಜನ್ಮಗಳಲ್ಲಿ ಅನುಭವಿಸಿದ ದೇಹದಿಂದ ವಿಮುಕ್ತನಾಗಿ ಹೊರಡುವೆನು.

ಮಿತ್ರ ಕಾಯ ಮಯಾ ಯತ್ ತ್ವಂ ತ್ಯಜ್ಯಸೇ ಚಿರಬಾಂಧವಃ ।
ತ್ವಯೈವಾತ್ಮನ್ಯುಪಾನೀತಾ ಸಾತ್ಮಜ್ಞಾನ ವಶಾತ್ ಕ್ಷತಿಃ ॥ ೩೬ ॥

ಅಧಿಗಮ್ಯಾತ್ಮ ವಿಜ್ಞಾನ ಮಾತ್ಮನಾಶಃ ಕೃತಸ್ತ್ವಯಾ ।
ದೇಹ ನಾನ್ಯೇನ ಭಗ್ನೋಽಸಿ ತ್ವಯೈವೈತದುಪಾಸಿತಂ ॥ ೩೭ ॥

ಏಕಾಕಿನ್ಯಾಪಿ ಶುಷ್ಯಂತ್ಯಾ ಪ್ರಶಾಂತೇ ಮಯಿ ದೀನಯಾ ।
ತ್ವಯಾ ದುಃಖಂ ನ ಕರ್ತವ್ಯಂ ಮಾತಃತೃಷ್ಣೇ ಪ್ರಜಾಮ್ಯಹಂ ॥ ೩೮ ॥

ಕ್ಷಂತವ್ಯಾಃ ಕಾಮ ಭಗವನ್ವಿಪರೀತಾಪರಾಧಜಾಃ ।
ದೋಷಾ ಉಪಶಮ್ಯೈಕಾಂತಂ ಪ್ರಜಾಮ್ಯಾದಿಶ ಮಂಗಲಂ ॥ ೩೯ ॥

---

೩೬. ಎಲೈ ಮಿತ್ರನೆ, ದೇಹವೇ, ಅನಾದಿಕಾಲದಿಂದಲೂ ನನ್ನೊಡನೆ ಬಾಂಧವ್ಯವನ್ನು ಬಿಡದೆ ಬೆಳೆಯಿಸಿಕೊಂಡು ಬಂದಿರುವ ಆಪ್ತ ಬಂಧುವಾದ ನಿನ್ನನ್ನು ಈಗ ನಾನು ಬಿಟ್ಟುಹೋಗುವುದು ಯಾವುದುಂಟೋ ಅದು ನಿನ್ನ ದೋಷವೇ, ಏಕೆಂದರೆ, ನೀನೇ ನನಗೆ ಆತ್ಮಜ್ಞಾನವುಂಟಾಗುವುದಕ್ಕೆ ಪರಮಸಾಧನವಾಗಿ, ನಿನ್ನ ಕೇಡನ್ನು (ನಾಶವನ್ನು) ನೀನಾಗಿಯೇ ತಂದುಕೊಂಡೆ. (ನೀನು ನಿನ್ನ ನಾಶ ಕ್ಕೋಸ್ಕರವೇ ನನಗೆ ಉಪಕಾರ ಮಾಡಿದೆ. ಎಂದರ್ಥ)

೩೭. ಎಲೈ ದೇಹವೇ, ನೀನೇ ಆತ್ಮಜ್ಞಾನವನ್ನು ಪಡೆದು, ಹೀಗೆ ನಿನ್ನಿಂದಲೇ ನಿನಗೆ ನಾಶವನ್ನು ಉಂಟುಮಾಡಿಕೊಂಡಿರುವೆ. ನೀನು ಮತ್ತೆ ಬೇರೆಯಾರಿಂದಲೂ ಭಗ್ನನಾಗಲಿಲ್ಲ. ಈ ಬಗೆಯಾದ ನಿನ್ನ ಭಂಗವು (ನಾಶವು) ನೀನಾಗಿಯೇ ಮಾಡಿಕೊಂಡ ಕೆಲಸವು. (ನನ್ನ ಅಪರಾಧವು ಇಲ್ಲವು)

೩೮. ಎಲೌ ತಾಯಿಯೇ, ತೃಷ್ಣೆಯೇ, ನಾನುಈಗ ಪ್ರಶಾಂತನಾಗಿಬಿಡಲು, ಬಳಿಕ, ನೀನು ಅಸಹಾಯಳಾಗಿಬಿಡುವೆ. (ಏಕಾಕಿನಿಯಾಗುವೆ.) ನನ್ನ ವಿಯೋಗ ದುಃಖದಿಂದ ನೀನು ಕೊರಗಿ, ಅತಿ ದೀನಳಾಗಿ ಸೊರಗಿ ಹೋಗುವೆ. (ಶುಷ್ಕಳಾಗುವೆ.) ಇದೋ, ನಾನು ನಿನ್ನನ್ನು ಬಿಟ್ಟುಹೋಗುತ್ತಿರುವೆನು. ಆದರೂ ನೀನು ದುಃಖಿಸಬೇಡ.

೩೯. ಎಲೈ ಕಾಮವೇ, ಭಗವಂತನೇ, ನಿನ್ನನ್ನು ಗೆಲ್ಲುವುದಕ್ಕೋಸ್ಕರ, ನಿನಗೆ ವಿರುದ್ಧವಾದ ವೈರಾಗ್ಯಾಭ್ಯಾಸಾದಿಗಳನ್ನು ಅನುಷ್ಠಾನಮಾಡಿ, ನಿನ್ನ

ಚಿರಾಚ್ಚಿರಾಯ ಚೇದಾನೀಮಂಬ ತೃಷ್ಣೇ ಕಿಲಾವಯೋಃ ।
ವಿಯೋಗೋ ಯೋಗ ದೋಷೇಣ ಪ್ರಣಾಮೋಽಯಂ ಸ ಪಶ್ಚಿಮಃ ॥ ೪೦ ॥

ನಮಃ ಸುಕೃತದೇವಾಯ ಭವತೇಽಸ್ತು ತ್ವಯಾ ಪುರಾ ।
ನರಕೇಭ್ಯಃ ಸಮುತ್ತಾರ್ಯ ಸ್ವರ್ಗೇ ಽಹಮಭಿಯೋಜಿತಃ ॥ ೪೧ ॥

ಕುಕಾರ್ಯ ಕ್ಷೇತ್ರರೂಢಾಯ ನರಕಸ್ಕಂಧವಾಹಿನೇ ।
ಶಾಸನಾ ಪುಷ್ಪಭಾರಾಯ ನಮೋ ದುಷ್ಕೃತಶಾಖಿನೇ ॥ ೪೨ ॥

ವಿಷಯದಲ್ಲಿ ಅನೇಕ ವಿಧವಾಗಿ ಅಪರಾಧಗಳನ್ನು ಮಾಡಿರುವೆನು. ಆ ಅಪರಾದ ಜನ್ಯವಾದ ನನ್ನ ದೋಷಗಳನ್ನೆಲ್ಲಾ ನೀನು ದಯೆಮಾಡಿ ಮನ್ನಿಸಬೇಕು. ನಾನು ಈಗ ಆತ್ಯಂತಿಕೋಪಶಮ ರೂಪ ಪರಮಪದವನ್ನು ಕುರಿತು ಹೋಗುತ್ತಿರುವೆನು. ನನಗೆ ಮಂಗಳವನ್ನು ನೀನು ಕೋರುವವನಾಗು.

೪೦. ತಾಯಿ, ತೃಷ್ಣೆಯೇ, ನಾವಿಬ್ಬರೂ ಅನಾದಿಕಾಲದಿಂದಲೂ ಜತೆಯಲ್ಲಿದ್ದೆವು. ಆದರೂ ಈ ಕ್ಷಣದಿಂದ ಮೊದಲ್ಗೊಂಡು ನಮ್ಮಿಬ್ಬರಿಗೂ ಶಾಶ್ವತವಾದ ವಿಯೋಗವು (ಅಗಲಿಕೆ) ನಿಜವಾಗಿಯೇ ಜ್ಞಾನಯೋಗ ವಶದಿಂದ ಉಂಟಾಗಿರುವುದು. ಪುನಃ ನಾನು ನಿನ್ನನ್ನು ನೋಡುವ ಸಂಭವವೇ ಇಲ್ಲ. ಅದು ಕಾರಣ ನನ್ನ ಈ ಕೊನೆಯ ನಮಸ್ಕಾರವನ್ನು ಸ್ವೀಕರಿಸು.

೪೧. ನನ್ನ ಪುಣ್ಯವೆಂಬ ದೇವತೆಯೇ, ಪೂರ್ವದಲ್ಲಿ ನೀನು ನನ್ನನ್ನು ನರಕಯಾತನೆಗಳಿಂದ ತಪ್ಪಿಸಿ, ಸ್ವರ್ಗಲೋಕದಲ್ಲಿ ಸೇರಿಸಿ ಮಹದುಪಕಾರವನ್ನು ಮಾಡಿರುವೆ. ಅದು ಕಾರಣ, ನಿನಗೆ ಈ ನಮಸ್ಕಾರವು.

೪೨. ನಿಷಿದ್ಧ ಕರ್ಮಾಚರಣವೆಂಬ ಭೂಮಿಯಲ್ಲಿ ಅಂಕುರಿಸಿ-ನಾನಾ ನರಕಗಳೆಂಬ ದೊಡ್ಡ ದೊಡ್ಡ ಕೊಂಬೆಗಳನ್ನು ಧರಿಸಿ-ನರಕಯಾತನೆಗಳೆಂಬ ಪುಷ್ಪಸಮೃದ್ಧಿಗಳಿಂದ ಕೂಡಿರುವ ದುಷ್ಕೃತವೆಂಬ ವೃಕ್ಷಕ್ಕೆ ನಮಸ್ಕಾರವು.

ಯೇನ ಸಾರ್ಧಂ ಚಿರಂ ಬಹ್ವ್ಯೋ ಭುಕ್ತಾಃ ಪ್ರಾಕೃತಯೋನಯಃ ।
ಅದ್ಯ ಪ್ರಭೃತ್ಯದೃಶ್ಯಾಯ ತಸ್ಮೈ ಮೋಹಾತ್ಮನೇ ನಮಃ ॥ ೪೩ ॥

ಪ್ರಧ್ವನದ್ವಂಶ ಮಧುರ ವಚಸೇ ಪತ್ರವಾಸಸೇ ।
ನಮೋ ಗುಹಾತಪಸ್ವಿನ್ಯೈ ವಯಸ್ಯಾಯೈ ಸಮಾಧಿಷು ॥ ೪೪ ॥

ಸಂಸಾರಾಧ್ವನಿ ಖಿನ್ನಸ್ಯ ತ್ವಂ ಮಮಾಶ್ವಾಸಕಾರಣಂ ।
ಆಸೀರ್ವಯಸ್ಯಾ ಸುಸ್ನಿಗ್ಧಾ ಸರ್ವ ಲೋಭಾಪಹಾರಿಣೀ ॥ ೪೫ ॥

ಸರ್ವ ಸಂಕಟ ಖಿನ್ನೇನ ದೋಷೇಭ್ಯೋ ದ್ರವತಾ ಮಯಾ ।
ತ್ವಮೇಕಾ ಶೋಕನಾಶಾರ್ಥ ಮಾಶ್ರಿತಾ ಪರಮಾ ಸಖೀ ॥ ೪೬ ॥

---

೪೩. ನಾನು ಯಾವ ಮೋಹದೊಡನೆ ಕೂಡಿದವನಾಗಿ, ಬಹು ದೀರ್ಘ ಕಾಲದಿಂದಲೂ ಅನೇಕಾನೇಕ ಪ್ರಾಕೃತ ಯೋನಿಗಳನ್ನು ಅನುಭವಿಸಿದೆನೋ, ಅಂತಹ ಮೋಹವು ಇನ್ನು ಮೇಲೆ ನನಗೆ ಸರ್ವಥಾ ಅಗೋಚರವಾಗಿ ಬಿಟ್ಟಿರುವುದು. ಆ ಮೋಹಕ್ಕೆ ಈ ನಮಸ್ಕಾರವು.

೪೪. (ನಾನು ವಿಂಧ್ಯಪರ್ವತದ ಗುಹೆಯಲ್ಲಿ ತಪಸ್ಸು ಮಾಡುತ್ತಿದ್ದಾಗ) ನನ್ನ ಸಮಾಧ್ಯಭ್ಯಾಸಗಳ ವಿಷಯಗಳಲ್ಲಿ ಆ ಗುಹೆಯು ನನಗೆ ಸಖಿಯಂತೆ ಸಹಾಯ ಮಾಡುತ್ತಾ ತಾನೂ ತಪಸ್ಸು ಮಾಡುವಂತೆಯೇ ಇದ್ದಿತು. ಅಲ್ಲಿ ಬೆಳೆದಿರುವ ಕೀಚಕಗಳೆಂಬ ಬಿದಿರು ಮೆಳೆಗಳು ಧ್ವನಿ ಮಾಡುತ್ತಿರಲು, ಆ ಧ್ವನಿಯೇ ಅದು ನನ್ನ ವಿಷಯದಲ್ಲಿ ಆಡಿದ ಮೃದು ಮಧುರ ಭಾಷಣವಾಗಿದ್ದಿತು. ನೆಲದ ಮೇಲೆ ಉದುರಿದ ಎಲೆಗಳೇ ವಸ್ತ್ರಗಳಾಗಿದ್ದುವು. ಇಂತಹ ಗುಹೆಯೆಂಬ ತಪಸ್ವಿನಿಗೆ ನಮಸ್ಕಾರವು.

೪೫. ಎಲೈ ಗುಹೆಯೇ, ಸಂಸಾರ ಮಾರ್ಗದಲ್ಲಿ ನಡೆದು ನಡೆದು ಬಹಳವಾಗಿ ಆಯಾಸದಿಂದ ಕಂಗೆಟ್ಟಿದ್ದ ನನಗೆ ನೀನು ಪರಮ ವಿಶ್ರಾಂತಿಹೇತುವಾಗಿ ಪರಿಪೂರ್ಣಾತ್ಮ ವಿಶ್ರಾಂತಿ ದಾನದಿಂದ ಸಮಸ್ತ ಲೋಭಗಳನ್ನೂ ಅಪಹರಿಸತಕ್ಕ ಮತ್ತು ಅಕೃತ್ರಿಮ ಸ್ನೇಹಮಯಳಾದ ಉತ್ತಮ ಸಖಿಯಾಗಿದ್ದೆ.

೪೬. ವಿವಿಧಾಪರಿಮಿತ ಸಾಂಸಾರಿಕ ಸಂಕಟಗಳಿಂದ ಅತ್ಯಂತ ಖಿನ್ನನಾಗಿ, ಅನೇಕ ಸಮಾಧಿ ವಿಘ್ನಗಳ ದೆಸೆಯಿಂದ ಹೆದರಿಕೊಂಡು ಓಡಿಬಂದ ನಾನು ಸಕಲ

ಸಂಕಟಾವಟ ಕುಂಜೇಷು ಹಸ್ತಾಲಂಬನದಾಯಿನೇ ।
ವಾರ್ಧಕ್ಯೈಕಾಂತ ಸುಹೃದೇ ದಂಡಕಾಷ್ಠಾಯ ತೇ ನಮಃ　　॥ ೪೭ ॥

ಅಸ್ಥಿ ಪಂಜರ ಮಾತ್ಮೀಯಂ ತಥಾ ರಕ್ತಾಂತ್ರ ತಂತುಕಂ ।
ಏತಾವನ್ಮಾತ್ರಸಾರೈಕಂ ಗೃಹೀತ್ವಾ ಗಚ್ಛ ದೇಹಕ　　॥ ೪೮ ॥

ಪಯಃ ಕ್ಷೋಭ ಪ್ರಕಾರೇಭ್ಯಃ ಸ್ನಾನೇಭ್ಯೋಽಪಿ ನಮೋಽಸ್ತು ತೇ ।
ನಮೋಽಸ್ತು ವ್ಯವಹಾರೇಭ್ಯಃ ಸಂಸೃತಿಭ್ಯೋ ನಮೋಽಸ್ತು ತೇ　　॥ ೪೯ ॥

ಸಂತಾಪ ವಿನಾಶಾರ್ಥವಾಗಿ, ಪರಮ ಸಖಿಯಾದ ನಿನ್ನೊಬ್ಬಳನ್ನು ಮಾತ್ರವೇ ಆಶ್ರಯಿಸಿ ನಾನೂ ನಿರ್ಭೀತನಾಗಿದ್ದೆನು.

೪೭. ಎಲೈ ದಂಡಕಾಷ್ಠವೇ, (ಊರುಗೋಲೇ,) ಸಂಕಟಗಳಲ್ಲಿಯೂ (ನಾಯಿ ಹಾವು ಮೊದಲಾದ ಪ್ರಾಣಿಗಳಿಂದ ಭಯಕಾಲಗಳಲ್ಲಿಯೂ, ಮತ್ತು ವಿಷಮ ಪ್ರದೇಶಗಳಲ್ಲಿಯೂ) ಅವಟ (ಭೂಗರ್ತ)ಗಳಲ್ಲಿಯೂ, ಮತ್ತು ಲತಾ ಗೃಹಗಳಲ್ಲಿಯೂ (ಪೊದೆ) ನೀನು ನನ್ನ ಕೈಗೆ ಆಧಾರವಾಗಿ ಒತ್ತಾಸೆಯನ್ನು ನೀಡುತ್ತಿದ್ದೆ. ವಾರ್ಧಕದಲ್ಲಿ (ಮುಪ್ಪಿನಲ್ಲಿ) ಅತ್ಯಂತ ಪ್ರಿಯಮಿತ್ರನಾಗಿ ವರ್ತಿಸಿದೆ ಇಂತಹ ನಿನಗೆ ವಂದನೆಯು.

೪೮. ಎಲೈ ದೇಹವೇ, ಇದು ನಿನ್ನ ಅಸ್ಥಿಪಂಜರ. (ಎಲುಬುಗೂಡು.) ಮತ್ತು ಈ ರಕ್ತ, ಉದ್ದವಾದ ಕರುಳುಗಳು, ಮಾಂಸ, ಇವಿಷ್ಟು ಮಾತ್ರವೇ ನಿನ್ನ ಸಾರಭೂತವಾದ ಅಸಾಧಾರಣ ಭಾಗಗಳು. ಇವುಗಳನ್ನು ನೀನು ಹಿಂದಕ್ಕೆ ತೆಗೆದುಕೊಂಡು ಇನ್ನು ಹೊರಟುಹೋಗು.

೪೯. ಎಲೈ ದೇಹವೇ, ನೀನು ಇದುವರೆವಿಗೂ ಮಾಡುತ್ತಿದ್ದ ಸ್ನಾನಗಳಿಂದ ನಿನ್ನ ಕೊಳೆಯೂ, ಬೆವರಿನ ನಾತವೂ ನೀರಿನೊಂದಿಗೆ ಸೇರಿಕೊಂಡು, ಅದನ್ನು ಕೆಡಿಸುತ್ತಿದ್ದವು. ಅಂತಹ ನಿನ್ನ ನಾನಾ ಪ್ರಕಾರಗಳಾದ ಸ್ನಾನಗಳಿಗೂ ನಿನ್ನ ವ್ಯವಹಾರಗಳಿಗೂ, ಮತ್ತು ಸಂಸಾರಗಳಿಗೂ ಅನೇಕ ವಂದನೆಗಳು.

ಏತೇ ಭವಂತಃ ಸಹಜಾಃ ಪ್ರಾಕ್ತನಾಃ ಸುಹೃದೋ ಮಯಾ ।
ಕ್ರಮೇಣಾದ್ಯೋತ್ಕೃತಾಃ ಪ್ರಾಣಾಃ ಸ್ವಸ್ತಿ ವೋಽಸ್ತು ವ್ರಜಾಮ್ಯಹಂ ॥ ೫೦ ॥

ಭವದ್ಭಿಃ ಸಹ ಚಿತ್ರಾಸು ಮಯಾ ಬಹ್ವೀಷು ಯೋನಿಷು ।
ವಿಶ್ರಾಂತಂ ಗಿರಿಕುಂಜೇಷು ಶ್ರಾಂತಂ ಲೋಕಾಂತರೇಷು ಚ ॥ ೫೧ ॥

ಕ್ರೀಡಿತಂ ಪುರಪೀಠಾಂತರುಷಿತಂ ಪರ್ವತೇಷು ಚ ।
ಸ್ಥಿತಂ ಕಾರ್ಯ ವಿಲಾಸೇಷು ಪ್ರಸ್ಥಿತಂ ವಿವಿಧಾಧ್ವಸು ॥ ೫೨ ॥

ನ ತದಸ್ತಿ ಜಗತ್ಕೋಶೇ ಭವದ್ಭಿಃ ಸಹ ಯನ್ಮಯಾ ।
ನ ಕೃತಂ ನ ಹೃತಂ ಯಾತಂ ನ ದತ್ತಂ ನಾವಲಂಬಿತಂ ॥ ೫೩ ॥

ಇದಾನೀಂ ಸ್ವಾಂ ದಿಶಂ ಯಾಂತು ಭವಂತೋ ಯಾಮ್ಯಹಂ ಪ್ರಿಯಾಃ ।
ಸರ್ವೇ ಕ್ಷಯಾಂತಾ ನಿಚಯಾಃ ಪತನಾಂತಾಃ ಸಮುಚ್ಛ್ರಯಾಃ ॥ ೫೪ ॥

(ವ್ಯವಹಾರಗಳು, ಭೋಜನ, ಶಯನ, ಅಭ್ಯಂಜನ, ಅಲಂಕರಣ ಇತ್ಯಾದಿಗಳು. ಸಂಸಾರಗಳು= ಮೇಲ್ಕಂಡ ವ್ಯವಹಾರಗಳಿಗೆ ಬೇಕಾದ ಸಾಮಗ್ರಿಗಳನ್ನು ಸಂಪಾದಿಸುವುದಕ್ಕೋಸ್ಕರ ಇಲ್ಲಿಂದ ಅಲ್ಲಿಗೆ ಅಲ್ಲಿಂದ ಇಲ್ಲಿಗೆ ಓಡಾಡುವಿಕೆ.)

೫೦. ಎಲೈ ಪ್ರಾಣ ವಾಯುಗಳೇ, ನೀವು ನನ್ನ ಒಡಹುಟ್ಟಿದವರಾದ ಬಹಳ ಹಳೆಯ ಕಾಲದ ಆಪ್ತ ಮಿತ್ರರು. ಈಗ ನಾನು ಸ್ನೇಹಿತರಾದ ನಿಮಗೆ ಮಾಡಿದ ನಮಸ್ಕಾರ ಕ್ರಮದಿಂದ ಈ ನೀವುಗಳೂ ಕೂಡ ಉತ್ಕೃಷ್ಟರಾಗಿರುವಿರಿ. ಇದೋ ನಾನು ಹೊರಡುವೆನು. ನಿಮಗೆ ಮಂಗಳವಾಗಲಿ.

೫೧-೫೪. ನಾನು ನಿಮ್ಮಗಳೊಡನೆ ಅತಿ ವಿಚಿತ್ರಗಳಾದ ಅನೇಕ ಜನ್ಮಗಳಲ್ಲಿ ಪರ್ವತಗಳ ಲತಾ ಗೃಹಗಳಲ್ಲಿ ವಿಶ್ರಮಿಸಿಕೊಂಡೆನು ಮತ್ತು ಲೋಕಾಂತರಗಳಲ್ಲಿ ಅಲೆದಲೆದು ದಣಿದೆನು. ಪಟ್ಟಣಗಳ ಮತ್ತು ಸಿದ್ಧ ಕ್ಷೇತ್ರಗಳ ಒಳಗೆ ಕ್ರೀಡಿಸಿದೆನು. ಪರ್ವತಗಳ ಮೇಲೆ ವಾಸಮಾಡಿದೆನು. ನಾನಾ ಕಾರ್ಯ ವಿಲಾಸಗಳಲ್ಲಿ ವ್ಯವಹರಿಸಿದೆನು. ನಾನಾವಿಧ ಮಾರ್ಗಗಳಲ್ಲಿ ಪ್ರಯಾಣ ಮಾಡಿದೆನು. ನಾನು ನಿಮ್ಮೊಂದೊಡಗೂಡಿ ಯಾವುದನ್ನು ಮಾಡಲಿಲ್ಲವೋ, ಅದು ಈ ಪ್ರಪಂಚದೊಳಗೆ ಇಲ್ಲವು. ಹಾಗೆಯೇ ನಾನು ಯಾವುದನ್ನು ಅಪಹರಿಸಲಿಲ್ಲವೋ, ಕೈಗಳಿಂದ ಯಾವುದನ್ನು ಕೊಡಲಿಲ್ಲವೋ, ಕಾಲುಗಳಿಂದ ಎಲ್ಲಿಗೆ ಹೋಗಲಿಲ್ಲವೋ ಮತ್ತು

ಸಂಯೋಗಾ ವಿಪ್ರಯೋಗಾಂತಾಃ ಸರ್ವೇ ಸಂಸಾರ ವರ್ತ್ಮನಿ । ॥ ೫೫ ॥

ಅಯಂ ಚಾಕ್ಷುಷ ಆಲೋಕೋ ವಿಶತ್ವಾದಿತ್ಯ ಮಂಡಲಂ ।
ವಿಶಂತು ವನಪುಷ್ಪಾಣಿ ಸೌಗಂಧ್ಯಾನಂದ ಸಂವಿದಃ ॥ ೫೬ ॥

ಪ್ರಾಣಾನಿಲಸ್ತಥಾ ಸ್ಪಂದಂ ವಿಶತ್ವದ್ಯ ಪ್ರಭಂಜನಂ ।
ವಿಶಂತ್ವಾಕಾಶ ಕುಹರಂ ಶಬ್ದ ಶ್ರವಣ ಶಕ್ತಯಃ ।
ಇಂದು ಮಂಡಲಮಾಯಾಂತು ರಸನಾರಸ ಶಕ್ತಯಃ ॥ ೫೭ ॥

ನಿರ್ಮಂದರ ಇವಾಂಬೋಧಿರ್ಗತಾರ್ಕ ಇವ ವಾಸರಃ ।
ಶರದೀವ ಘನಃ ಸ್ವೈರಂ ಪ್ರಾಪ್ತಃ ಕಲ್ಪಾಂತ ಸರ್ಗವತ್ ॥ ೫೮ ॥

ಓಂಕಾರಾಂತೇ ಸ್ವಮನನಂ ಪ್ರಶಾಮ್ಯಾಮ್ಯಾತ್ಮನಾತ್ಮನಿ ।
ದಗ್ಧೇಂಧನ ಇವಾರ್ಚಿಷ್ಮಾನ್ನಿಃ ಸ್ನೇಹಃ ಇವ ದೀಪಕಃ ॥ ೫೯ ॥

ಮನಸ್ಸಿನಿಂದ ಯಾವುದನ್ನು ಆಶ್ರಯಿಸಲಿಲ್ಲವೋ ಅಂತಹುದೊಂದೂ ಈ ಬ್ರಹ್ಮಾಂಡದಲ್ಲಿ ಇಲ್ಲವೇ ಇಲ್ಲ. (ನಾನು ನಿಮ್ಮನ್ನು ಬಿಟ್ಟು ಯಾವುದೊಂದು ವ್ಯವಹಾರವನ್ನೂ ಮಾಡಿಲ್ಲವೆಂದರ್ಥ.) ಎಲೈ ಪ್ರಿಯತಮರಾದ ಪ್ರಾಣಗಳೇ, ಈಗ ನೀವು ನಿಮ್ಮ ಪ್ರಕೃತಿಯನ್ನು ಹೋಗಿ ಸೇರಿಕೊಳ್ಳಿರಿ, ನಾನೂ ಹೋಗಿ ಪರಬ್ರಹ್ಮನೊಡನೆ ಸೇರಿಕೊಳ್ಳುವೆನು.

೫೫. ಈ ಸಂಸಾರಮಾರ್ಗದಲ್ಲಿ ಸಕಲ ಅಬಿವೃದ್ಧಿಗಳೂ ಕೊನೆಯಲ್ಲಿ ಅತ್ಯವಶ್ಯವಾಗಿ ಕ್ಷಯವನ್ನು ಹೊಂದುವುವು. ಉನ್ನತವಾಗಿ ಬೆಳೆಯುವಿಕೆಗಳು (ಔನ್ನತ್ಯಗಳು) ಪತನದಲ್ಲಿ (ಮುರಿದುಕೊಂಡು ಬೀಳುವುದರಲ್ಲಿ) ಕೊನೆಗಾಣುವುವು. ಮತ್ತು ಸರ್ವಸಂಯೋಗಗಳೂ ಕೊನೆಗೆ ವಿಯೋಗವನ್ನು ಹೊಂದುವುವು. (ಇದು ಪ್ರಪಂಚದ ಸ್ವಭಾವವು.)

೫೬-೫೭. ಈ ನನ್ನ ಕಣ್ಣಿನ ದರ್ಶನ ಶಕ್ತಿರೂಪವಾದ ಪ್ರಕಾಶವು ತನ್ನ ಪ್ರಕೃತಿಯಾದ ಸೂರ್ಯಮಂಡಲವನ್ನು ಪ್ರವೇಶಿಸಲಿ, ಸುಗಂಧವನ್ನು ಮೂಸಿ ಆನಂದವನ್ನು ಅನುಭವಿಸುತ್ತಿದ್ದ ನನ್ನ ಘ್ರಾಣೇಂದ್ರಿಯದ ಸಂವಿತ್ತುಗಳು (ಮೂಗು) ವನಪುಷ್ಪಗಳನ್ನು ಪ್ರವೇಶಿಸಲಿ. ಅಂತೆಯೇ ಈಗ ಪ್ರಾಣವಾಯುವು ಸರ್ವತ್ರ ಚಲಿಸುತ್ತಲಿರುವ ವಾಯುವನ್ನು ಸೇರಿಕೊಳ್ಳಲಿ. ಶಬ್ದಗಳನ್ನು ಕೇಳುವಂಥ ಶ್ರೋತ್ರೇಂದ್ರಿಯ ಶಕ್ತಿಗಳು ಗಗನಮಂಡಲವನ್ನು ಹೊಗಲಿ, ನಾಲಗೆ

ವ್ಯಪಗತಾಖಿಲಕಾರ್ಯ ಪರಂಪರಃ ।
ಸಕಲ ದೃಶ್ಯದಶಾತಿ ಗತಸ್ಥಿತಿಃ ।
ಪ್ರಣವಶಾಂತ್ಯನು ಸಂಸೃತಿ ಶಾಂತಧೀ ।
ವಿಗತಮೋಹ ಮಲೋಽಯಮಹಂ ಸ್ಥಿತಃ ॥ ೬೦ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮಪ್ರಕರಣೇ "ಇಂದ್ರಿಯವರ್ಗ ನಿರಾಕರಣೋಪದೇಶೋ" ನಾಮ ಷಡಶೀತಿತಮಃ ಸರ್ಗಃ

ಯಲ್ಲಿರುವ ರಸಗ್ರಹಣ ಶಕ್ತಿಗಳು (ಚಂದ್ರಮಂಡಲದಲ್ಲಿ) ಜಲದಲ್ಲಿ ಹೋಗಿ ಸೇರಿಕೊಳ್ಳಲಿ.

೫೮-೫೯. ಮಂದರ ಪರ್ವತದಿಂದ ಕಡೆಯಲ್ಪಡದಿರುವ ಕ್ಷೀರಸಾಗರ ದಂತೆಯೂ, ಸೂರ್ಯನ ತೀವ್ರವಾದ ಬಿಸಿಲುಕಾಯದ ಹಗಲಿನಂತೆಯೂ, ಶರದೃತುವಿನ ಮೇಘದಂತೆಯೂ, ತನ್ನ ಉಪಾದಾನಕಾರಣದಲ್ಲಿ ಲಯಹೊಂದಿದ ಪ್ರಳಯಕಾಲದಲ್ಲಿನ ಪ್ರಪಂಚದಂತೆಯೂ, ಚಿದಾಭಾಸಾತ್ಮನಾಗಿ ಜೀವನೆನ್ನಿಸಿ ಕೊಂಡಿರುವ ನಾನೂ ಕೂಡ ಪ್ರಶಾಂತನಾಗಿ, ಓಂಕಾರವನ್ನು ದೀರ್ಘವಾಗಿ ಉಚ್ಚ ರಿಸಿ ಅದರ ಕೊನೆಯಾದ ತುರ್ಯಾತ್ಮ ಸ್ವರೂಪದಲ್ಲಿ, ಸೌದೆಯೆಲ್ಲವೂ ಸಂಪೂರ್ಣ ವಾಗಿ ಸುಟ್ಟು ಬೂದಿಯಾದ ಬಳಿಕ ಅಗ್ನಿಯಂತೆಯೂ, ಎಣ್ಣೆಯೆಲ್ಲ ಉರಿದುಹೋದ ದೀಪದಂತೆಯೂ ಆತ್ಯಂತಿಕ ಮನಶ್ಶಾಂತಿಯನ್ನು ಪಡೆದವನಾಗಿ ಸ್ವತಏವ ಶಾಂತಿ ಯನ್ನು ಹೊಂದುವೆನು. (ಪ್ರಶಾಂತನಾಗುವೆನು.)

೬೦. ಈಗ ನಾನು, ಸಮಸ್ತ ಪ್ರಾಪಂಚಿಕ ಕಾರ್ಯಪರಂಪರೆಯಿಂದ ವಿವರ್ಜಿತನಾಗಿಯೂ ಸಕಲ ದೃಶ್ಯಜಗತ್ತಿನ ಸ್ಥಿತಿಯನ್ನು ಅತಿಕ್ರಮಿಸಿದ ಸ್ಥಿತಿಯುಳ್ಳ ವನಾಗಿಯೂ ದೀರ್ಘೋಚ್ಚಾರಿತವಾದ ಪ್ರಣವವು (ಓಂಕಾರವು) ಬ್ರಹ್ಮರಂಧ್ರವಲ್ಲಿ ಲಯಹೊಂದುವಿಕೆಯನ್ನು ಅನುಸರಿಸಿ, ಬ್ರಹ್ಮಭಾವ ಪ್ರಾಪ್ತಿಯಿಂದ ಶಾಂತವಾದ ಬುದ್ಧಿಯುಳ್ಳವನಾಗಿಯೂ, ಪ್ರಾರಬ್ಧಕರ್ಮಫಲರೂಪವಾಗಿ ಅವಶಿಷ್ಟವಾಗಿದ್ದ ಅವಿದ್ಯಾಲೇಶವೆಂಬ ಮಲವನ್ನೂ ಕಳೆದುಕೊಂಡವನಾಗಿಯೂ, ನಿತ್ಯಶುದ್ಧ ಬುದ್ಧ ಮುಕ್ತಾತ್ಮನಾಗಿರುವೆನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ವೀತಹವ್ಯೋಪಾಖ್ಯಾನದೊಳಗೆ ಇಂದ್ರಿಯವರ್ಗ ನಿರಾಕರಣೋಪದೇಶ"ವೆಂಬ ಎಂಭತ್ತಾರನೆಯ ಸರ್ಗವು

ಸಪ್ತಾಶೀತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಏವಂ ಕಲಿತವಾನಂತಃ ಪ್ರಶಾಂತ ಮನನೈಷಣಃ ।
ಶನೈರುಚ್ಚಾರಯಂಸ್ತಾರಂ ಪ್ರಣವಂ ಪ್ರಾಪ್ತಭೂಮಿಕಃ ॥ ೧ ॥

ಮಾತ್ರಾದಿ ಪಾದಭೇದೇನ ಪ್ರಣವಂ ಸಂಸ್ಮರನ್ಯತಿಃ ।
ಅಧ್ಯಾರೋಪಾಪವಾದೇನ ಸ್ವರೂಪಂ ಶುದ್ಧಮವ್ಯಯಂ ॥ ೨ ॥

ಸಬಾಹ್ಯಾಭ್ಯಂತರಾನ್ಭಾಗಾನ್ಸ್ಥೂಲಾನ್ಸೂಕ್ಷ್ಮತರಾನಪಿ ।
ತ್ರೈಲೋಕ್ಯ ಸಂಭವಾಂಸ್ತ್ಯಕ್ತ್ವಾ ಸಂಕಲ್ಪಾಕಲ್ಪ ಕಲ್ಪಿತಾನ್ ॥ ೩ ॥

ಎಂಭತ್ತೇಳನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು:—

೧. ಅಯ್ಯರಾಮ, ಮುಂದೆ ಈ ಸರ್ಗದಲ್ಲಿ ವಿವರಿಸುವ ಕ್ರಮದಿಂದ ಆ ವೀತಹವ್ಯಮುನಿಯು, ಅತ್ಯುಚ್ಚ ಸ್ವರದಿಂದ ಪ್ರಣವವನ್ನು ಬಹು ದೀರ್ಘವಾಗಿ ಉಚ್ಚರಿಸುತ್ತಾ, ಸಮಸ್ತ ಮನನಗಳನ್ನೂ ಏಷಣೆಗಳನ್ನೂ ಪ್ರಶಮನಗೊಳಿಸಿದವನಾಗಿ, ಆರನೆಯ ಮತ್ತು ಏಳನೆಯ ಜ್ಞಾನಭೂಮಿಕೆಗಳಲ್ಲಿದ್ದುಕೊಂಡು, ತನ್ನ ಹೃದಯದೊಳಗೆ ಬ್ರಹ್ಮಸಾಕ್ಷಾತ್ಕಾರವನ್ನು ಪಡೆದನು.

೨-೩. ಸನ್ಯಾಸಿಯಾದ ವೀತಹವ್ಯನು, ಅಕಾರ ಉಕಾರ ಮಕಾರಗಳೆಂಬ ಮೂರು ಮಾತ್ರೆಗಳಿಂದಲೂ, ಕೊನೆಯಲ್ಲಿ ಅರ್ಧಮಾತ್ರೆಯಿಂದಲೂ, ಕಲ್ಪಿತವಾದ ಸ್ಥೂಲ, ಸೂಕ್ಷ್ಮ ಅವ್ಯಾಕೃತ ತುರೀಯಗಳೆಂಬ ಪಾದಭೇದಗಳಿಂದಲೂ ಪ್ರಣವವನ್ನು (ಸ್ಮರಣಪೂರ್ವಕವಾಗಿ) ಜಪಿಸುತ್ತಾ, (ಪಂಚೀಕರಣ ಪ್ರಕ್ರಿಯೋಕ್ತ ಕ್ರಮದಿಂದ) ವಿರಾಟ್ ಹಿರಣ್ಯಗರ್ಭ, ಅವ್ಯಾಕೃತಗಳೆಂಬ ಮೂರು ಪಾದಗಳನ್ನು ಮೊದಲು ತುರೀಯಾತ್ಮನಲ್ಲಿ ಅಧ್ಯಾರೋಪ ಮಾಡುವುದರಿಂದಲೂ ಬಳಿಕ ಅಪವಾದಗೊಳಿಸುವುದರಿಂದಲೂ ಕೂಡ, ಮಾನಸಿಕ ಸಂಕಲ್ಪಕಲ್ಪನೆಗಳಿಂದ ಕಲ್ಪಿತಗಳಾದ, ಲೋಕ

ತಿಷ್ಠನ್ನಕ್ಷುಭಿತಾಕಾರಶ್ಚಿಂತಾಮಣಿ ರಿವಾತ್ಮನಿ ।
ಸಂಪೂರ್ಣ ಇವ ಶೀತಾಂಶುರ್ವಿಶ್ರಾಂತ ಇವ ಮಂದರಃ ॥ ೪ ॥

ಕುಂಭಕಾರಗೃಹೇ ಚಕ್ರಂ ಸಂರೋಧಿತ ಇವ ಭ್ರಮಾತ್ ।
ಅಂಭೋಧಿರಿವ ಸಂಪೂರ್ಣಃಸ್ತಿಮಿತಸ್ಫಾರ ನಿರ್ಮಲಃ ॥ ೫ ॥

ತ್ರಯಗಳಲ್ಲಿ ಸಂಭೂತವಾಗಿರುವ ಬಾಹ್ಯಾಭ್ಯಂತರ ಸಹಿತವಾದ, ಸ್ಥೂಲ ಸೂಕ್ಷ್ಮ, ಕಾರಣ ರೂಪಭಾಗಗಳನ್ನೂ ಕೂಡ ಪರಿತ್ಯಜಿಸಿದವನಾಗಿ, ಶುದ್ಧವೂ ಅವ್ಯಯವೂ ಆದ ಸ್ವರೂಪವನ್ನು (ಬ್ರಹ್ಮವನ್ನು) ಸಾಕ್ಷಾತ್ಕರಿಸಿದನು.

["ಓಮಿತ್ಯೇತದಕ್ಷರಮಿದಂ ಎಂದು ಮೊದಲುಗೊಂಡು ಜಾಗರಿತಸ್ಥಾನಃ ಬಹಿಃಪ್ರಜ್ಞಃ ವೈಶ್ವಾನರಃ ಪ್ರಥಮಃಪಾದಃ ಸ್ವಪ್ನಸ್ಥಾನಃ ಅಂತಃಪ್ರಜ್ಞಃ ತೈಜಸಃ ದ್ವಿತೀಯಪಾದಃ ಸುಷುಪ್ತಸ್ಥಾನಃ ಏಕೀಭೂತಃ ಪ್ರಜ್ಞಾನ ಘನ ಏವ ಆನಂದಮಯ ಏವ ಆನಂದಭುಕ್ ಚೇತೋಮುಖಃ ಪ್ರಾಜ್ಞಃ ತೃತೀಯಃಪಾದಃ ಎಂದು ಕ್ರಮವಾಗಿ ಜಾಗ್ರತ್ಸ್ವಪ್ನ ಸುಷುಪ್ತಿಗಳನ್ನು ನಿರೂಪಿಸಿ ಕೊನೆಯಲ್ಲಿ "ನಾಂತಃ ಪ್ರಜ್ಞಂನಬಹಿಃ ಪ್ರಜ್ಞಂ ನೋಭಯತಃ ಪ್ರಜ್ಞಂ ನಪ್ರಜ್ಞಾನಘನಂ ನಪ್ರಜ್ಞಂ ನಾಪ್ರಜ್ಞಂ ಇತ್ಯಾದಿ ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೇಸ ಆತ್ಮಾಸವಿಜ್ಞೇಯಃ ಇತ್ಯಂತ ಗ್ರಂಥದಿಂದ ಮಾಂಡೂಕ್ಯೋಪನಿಷತ್ತಿನಲ್ಲಿ ಅಧ್ಯಾರೋಪಾಪವಾದ ಕ್ರಮದಿಂದ ಆತ್ಮಸ್ವರೂಪವು ಪ್ರತಿಪಾದಿತವಾಗಿರುವುದು. ಮೂಲದಿಂದ ವಿವರಗಳನ್ನು ತಿಳಿಯಬೇಕು.]

೪. ಆ ವೀತಹವ್ಯನು ಆಗ ಚಿಂತಾಮಣಿಯಂತೆ ಸ್ವಚ್ಛನಾಗಿಯೂ, ಸಂಪೂರ್ಣ ಚಂದ್ರನಂತೆ ಸುಪ್ರಸನ್ನನಾಗಿಯೂ, ಕ್ಷೀರಸಮುದ್ರ ಮಥನಾನಂತರದಲ್ಲಿ ವಿಶ್ರಾಂತಿ ಪಡೆದ ಮಂದರ ಪರ್ವತದಂತೆ ಸ್ವಲ್ಪವೂ ಕ್ಷೋಭೆಯಿಲ್ಲದ ಪ್ರಶಾಂತವಾದ ಆಕಾರವುಳ್ಳವನಾಗಿಯೂ, ಸ್ವಾತ್ಮಸ್ವರೂಪದಲ್ಲಿ ಪ್ರತಿಷ್ಠಿತನಾಗಿದ್ದನು.

೫. ಅವನು, ಕುಂಬಾರನ ಮನೆಯಲ್ಲಿನ, ಸುತ್ತಿಸಲ್ಪಡದೆ ಒಂದು ಕಡೆ ಬಿದ್ದುಕೊಂಡಿರುವ, ಚಕ್ರದಂತೆಯೂ, ಅಲೆಗಳು ಏಳದೆ ಇರುವ ಸಮುದ್ರದಂತೆಯೂ ಸ್ವಲ್ಪವೂ ಕ್ಷೋಭೆಯಿಲ್ಲದವನಾಗಿದ್ದನು. ಮತ್ತು ಸಂಪೂರ್ಣ (ಅಖಂಡ)ನಾಗಿಯೂ, ನಿಶ್ಚಲನಾಗಿಯೂ, ಅಪರಿಚ್ಛಿನ್ನನಾಗಿಯೂ, ನಿರ್ಮಲನಾಗಿಯೂ, ಇದ್ದನು.

ಶಾಂತತೇಜಸ್ತಮಃ ಪುಂಜಂ ವಿಗತಾರ್ಕೇಂದುತಾರಕಂ ।
ಅಧೂಮಾಭ್ರರಜಃ ಸ್ವಚ್ಛಮನಂತಂ ಶರದೀವ ಖಂ ॥ ೬ ॥

ಸಹ ಪ್ರಣವ ಪರ್ಯಂತದೀರ್ಘನಿಃಸ್ವನ ತಂತುನಾ ।
ಜಹಾವಿಂದ್ರಿಯ ತನ್ಮಾತ್ರಜಾಲಂ ಗಂಧಮಿವಾನಲಃ ॥ ೭ ॥

ತತೋ ಜಹೌ ತಮೋಮಾತ್ರಂ ಪ್ರತಿಭಾತ ಮಿವಾಂಬರೇ ।
ಉತ್ತಿಷ್ಠತ್ಪ್ರಸ್ಫುರದ್ರೂಪಂ ಪ್ರಾಜ್ಞಃ ಕೋಪಲವಂ ಯಥಾ ॥ ೮ ॥

ಪ್ರತಿಭಾತಂ ತತಸ್ತೇಜೋ ನಿಮೇಷಾರ್ಧಂ ವಿಚಾರ್ಯ ಸಃ ।
ಜಹೌ ಬಭೂವ ಚ ತದಾ ನ ತಮೋ ನ ಪ್ರಕಾಶಕಂ ॥ ೯ ॥

---

೬. ತೇಜಸ್ಸು, ತಮಸ್ಸು (ಕತ್ತಲೆ) ಇವುಗಳು ಸ್ವಲ್ಪವೂ ಇಲ್ಲದೆ ಶಾಂತವಾಗಿಯೂ, ಸೂರ್ಯಚಂದ್ರ, ನಕ್ಷತ್ರಗಳೆಲ್ಲವೂ ಅಸ್ತಂಗತವಾಗಿಯೂ, ಹೊಗೆ, ಮೇಘ, ಧೂಳಿ ಮೊದಲಾದುವುಗಳೊಂದೂ ಇಲ್ಲದೆಯೂ ಇರುವ ಶರತ್ಕಾಲದ ಆಕಾಶದಂತೆ ಸ್ವಚ್ಛನಾಗಿಯೂ, ಅನಂತನಾಗಿಯೂ ಶೋಭಿಸುತ್ತಿದ್ದನು.

೭. ಇಂತಹ ಆ ವೀತಹವ್ಯನು, ವಾಯುವು ಗಂಧವನ್ನು ಬಿಡುವಂತೆ, ಪ್ರಣವದ ಅಗ್ರಭಾಗವೆಂಬ ದೀರ್ಘವಾದ (ತಂತುವಿನಂತೆ) ಧ್ವನಿಯಿಂದ ಸಹಿತವಾದ, ಶಬ್ದಾದಿ ಇಂದ್ರಿಯತನ್ಮಾತ್ರಗಳ ಸಮುದಾಯವನ್ನು ಬಿಟ್ಟುಬಿಟ್ಟನು.

೮. ಅನಂತರ ಅವನು, ಸಾಕ್ಷಿಯಿಂದ ಸ್ಫುರಿಸುತ್ತಿರುವ ರೂಪವುಳ್ಳದ್ದಾಗಿ ಆಕಾಶದಲ್ಲಿ ಎದ್ದು ಪ್ರಕಾಶಿಸುವಂತಿದ್ದ, ತಮಸ್ಸನ್ನೆಲ್ಲಾ, ಪ್ರಾಜ್ಞನು ಕೋಪವನ್ನು ಬಿಡುವಂತೆ, ಬಿಟ್ಟುಬಿಟ್ಟನು.

೯. ಬಳಿಕ, ಅವನಿಗೆ ತೇಜಸ್ಸು ಸ್ಫುರಿಸಿತು. ಕೂಡಲೆ ಸ್ವಲ್ಪ ಹೊತ್ತು ಅವನು ತನ್ನೊಳಗೇ ವಿಚಾರ ಮಾಡಿ, ಆ ಮೇಲೆ ಆ ತೇಜಸ್ಸನ್ನೂ ಬಿಟ್ಟುಬಿಟ್ಟನು. ಆಗ ಅವನು ತಮಸ್ಸಾಗಿಯೂ ಇರಲಿಲ್ಲ, ಪ್ರಕಾಶವಾಗಿಯೂ ಇರಲಿಲ್ಲ.

ತಾಮವಸ್ಥಾಮಥಾಸಾದ್ಯ ಮನಸಾ ತನ್ಮನಸ್ತೃಣಂ ।
ಮನಾಗಪಿ ಪ್ರಸ್ಫುರಿತಂ ನಿಮೇಷಾರ್ಧಾದಶಾತಯತ್ ॥ ೧೦ ॥

ತತೋಽಂಗ ಸಂವಿದಂ ಸ್ವಸ್ಥಾಂ ಪ್ರತಿಭಾಸ ಮುಪಾಗತಾಂ ।
ಸದ್ಯೋ ಜಾತ ಶಿಶುಜ್ಞಾನ ಸಮಾನ ಕಲನಾ ಮಲಂ ॥ ೧೧ ॥

ನಿಮೇಷಾರ್ಧಾರ್ಧ ಭಾಗೇನ ಕಾಲೇನ ಕಲನಾಂ ಪ್ರಭುಃ ।
ಜಹೌ ಚಿತಶ್ಚೇತ್ಯದಶಾಂ ಸ್ಪಂದ ಶಕ್ತಿ ಮಿವಾನಿಲಃ ॥ ೧೨ ॥

ಪಶ್ಯಂತೀ ಪದಮಾಸಾದ್ಯ ಸತ್ತಾಮಾತ್ರಾತ್ಮಕಂ ತತಃ ।
ಪ್ರಸುಪ್ತ ಪದಮಾಲಂಬ್ಯ ತಸ್ಥೌ ಗಿರಿರಿವಾಚಲಃ ॥ ೧೩ ॥

---

೧೦. ತರುವಾಯ, ಅವನು ತನ್ನ ಮನಸ್ಸಿನಿಂದಲೇ ಅಂತಹ ತಮಃ ಪ್ರಕಾಶ ಶೂನ್ಯವಾದ ಅವಸ್ಥೆಯನ್ನು ಹೊಂದಿ ಬಳಿಕ, ಆ ಕಲ್ಪನೆಗೆ ಹೇತುವಾದ ಮನಸ್ಸು, ಸ್ವಲ್ಪ ಮಾತ್ರವೇ ಸ್ಫುರಿಸಿದರೂ ಕೂಡ, ಅದನ್ನು ಒಂದು ನಿಮಿಷಾರ್ಧ ದೊಳಗಾಗಿ ಹುಲ್ಲುಕಡ್ಡಿಯನ್ನು ಮುರಿಯುವಂತೆ ಅನಾಯಾಸವಾಗಿ ಕತ್ತರಿಸಿ ಹಾಕಿದನು.

೧೧-೧೨. ಅಯ್ಯರಾಮ, ಬಳಿಕ, ಆ ವೀತಹವ್ಯನು ಆಗತಾನೇ ಹುಟ್ಟಿದ ಮಗುವಿನ ಜ್ಞಾನಕ್ಕೆ ಸಮಾನವಾದ ಸ್ಥಿತಿಯುಳ್ಳ, ವಾಯುವು ಹೆಚ್ಚಾಗಿ ಬೀಸ ದಿರುವ ಸ್ಥಳದಲ್ಲಿ ನಿಶ್ಚಲವಾಗಿ ಉರಿಯುವ ದೀಪದಂತೆ ಸ್ಫುಟ ಪ್ರಕಾಶಮಾನವಾದ, ಸ್ವಸ್ಥವಾದ ಚೈತನ್ಯವನ್ನು (ಚಿತ್ತನ್ನು) ಆಶ್ರಯಿಸಿದನು. ಕೂಡಲೇ ಆ ಕಲ್ಪನೆಯನ್ನೂ ಕೂಡ, ಅದು ಪ್ರರೂಢವಾಗುವುದಕ್ಕಿಂತ ಮುಂಚೆಯೇ ಸರ್ವ ಸ್ವತಂತ್ರನಾಗಿದ್ದ ಆ ವೀತಹವ್ಯನು, ತನ್ನ ಸಹಜವಾದ ಸ್ಪಂದ ಶಕ್ತಿಯನ್ನು ವಾಯುವು ಬಿಡುವಂತೆ ಕಾಲಕ್ರಮದಲ್ಲಿ (ನಿಮಿಷಾರ್ಧದ ಅರ್ಧಕಾಲದೊಳಗಾಗಿ) ಬಹು ಬೇಗನೆ ಪೂರ್ತಿಯಾಗಿ ಪರಿತ್ಯಜಿಸಿದನು. (ಇದಕ್ಕೇ ಚಿತ್ತಿನ ಚೇತ್ಯದಶಾ ತ್ಯಾಗವೆಂದು ವ್ಯವಹಾರವು.)

೧೩. ಅನಂತರ ಆ ವೀತಹವ್ಯನು, ಈ ರೀತಿಯಿಂದ ಸಾಕ್ಷಿಮಾತ್ರ ಪರಿಶೇಷ ವೆಂಬ "ಪಶ್ಯಂತೀ" ಎಂಬ ಸ್ಥಿತಿಯನ್ನು ಪಡೆದು, ಅದೇ (ಆಕಾಶಾದಿ ಸಮಸ್ತ ದೃಶ್ಯ ಜಗತ್ತನ್ನೂ ಜ್ಞಾನದಿಂದ ಬಾಧೆಗೊಳಿಸಿ ನಿವೃತ್ತ ಮಾಡಿದ ಬಳಿಕ) ಪರಿಶಿಷ್ಟವಾದ ಕೇವಲ ಸತ್ತಾತ್ಮಕ ಕಾರಣತತ್ತ್ವವೆಂದು, ಆ ಕಾರಣತತ್ತ್ವಭಾವ ಸ್ಥಿತಿಯೆಂಬ ಪ್ರಸುಪ್ತ ಸ್ಥಿತಿಯನ್ನು ಆಶ್ರಯಿಸಿದವನಾಗಿ ಪರ್ವತದಂತೆ ನಿಶ್ಚಲನಾಗಿದ್ದನು.

ತತಃ ಸುಷುಪ್ತ ಸಂಸ್ಥಾನಂ ಸ್ಥಿತ್ವಾ ಸ್ಥಿತ್ವಾ ವಿಭುರ್ಮನಾಕ್ ।
ಸುಷುಪ್ತೇ ಸ್ಥೈರ್ಯಮಾಸಾದ್ಯ ತುರ್ಯರೂಪ ಮುಪಾಯಯೌ ॥ ೧೪ ॥

ನಿರಾನಂದೋಽಪಿ ಸಾನಂದಃ ಸಚ್ಚಾಸಚ್ಚಾಪಿ ತತ್ರ ಸಃ ।
ಆಸೀನ್ನ ಕಿಂಚಿತ್ಕಿಂಚಿತ್ತ ತ್ಪ್ರಕಾಶಸ್ತಿಮಿರಂ ಯಥಾ ॥ ೧೫ ॥

ಅಚಿನ್ಮಯಂ ಚಿನ್ಮಯಂ ಚ ನೇತಿ ನೇತಿ ಯದುಚ್ಯತೇ ।
ತತಸ್ತತ್ಸಂಬಭೂವಾಸೌ ಯದ್ಗಿರಾಮಪ್ಯಗೋಚರಃ ॥ ೧೬ ॥

[ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂಬೀ ಸ್ಥಿತಿಗಳ ವಿವರವನ್ನು ಮಂತ್ರ ಶಾಸ್ತ್ರದಿಂದ ಗುರುಮುಖೇನ ಅರಿಯಬೇಕು.]

೧೪. ಆ ಮೇಲೆ-ಸರ್ವವ್ಯಾಪಿಯಾದ ಆ ವೀತಹವ್ಯನು ಸುಷುಪ್ತ ಸ್ಥಿತಿಯನ್ನು ಪಡೆದು, ಅದರಲ್ಲಿ ಸ್ವಲ್ಪ ಸ್ವಲ್ಪವಾಗಿ ಪುನಃ ಪುನಃ ಇರುತ್ತಾ, ಕ್ರಮೇಣ ಅದರಲ್ಲಿ ಸ್ಥೈರ್ಯವನ್ನು ಹೊಂದಿ, ಕೊನೆಗೆ ತುರ್ಯರೂಪವನ್ನು ಹೊಂದಿದನು.

೧೫. ರಾತ್ರಿಯಲ್ಲಿ ಪದಾರ್ಥಗಳನ್ನು ನೋಡುವ ಶಕ್ತಿಯುಳ್ಳ ಪ್ರಾಣಿಗಳಿಗೆ ಕತ್ತಲೆಯೇ ಪ್ರಕಾಶವಾಗಿರುವಂತೆ, ಆ ತುರ್ಯರೂಪ ಸ್ಥಿತಿಯಲ್ಲಿ ಆ ವೀತಹವ್ಯನು ವೈಷಯಿಕಾನಂದ ಶೂನ್ಯನಾಗಿದ್ದರೂ ಕೂಡ ಸ್ವರೂಪದಿಂದಲೇ ಸಾನಂದನಾಗಿಯೂ ಆತ್ಮಸತ್ತಾತಿರಿಕ್ತವಾದ ಸತ್ತಾಶೂನ್ಯವಾಗಿದ್ದರೂ ಕೂಡ (ಅಸತ್) ಸದ್ರೂಪನಾಗಿಯೂ, ಯಾವುದೊಂದು ವಸ್ತುವೂ ಅಲ್ಲದವನಾಗಿದ್ದರೂ ಕೂಡ (ಅನಿರ್ವಚನೀಯ) ಸರ್ವವಸ್ತು ರೂಪನಾಗಿಯೂ ಇದ್ದನು.

೧೬. ಬಳಿಕ ಯಾವಬ್ರಹ್ಮವು ಚೇತ್ಯಾಭಾವದ ದೆಸೆಯಿಂದ ಅಚಿನ್ಮಯವಾಗಿಯೂ ಸ್ವತಃ ಕೇವಲಚಿದ್ರೂಪವೇ ಆಗಿಯೂ ಇದೆಯೋ "ಸಏಷನೇತಿ ನೇತೀತ್ಯಾತ್ಮಾ" ಇತ್ಯಾದಿ ಬೃಹದಾರಣ್ಯ ಶ್ರುತಿಯಲ್ಲಿ (ಬೃಹ ಅಧ್ಯಾಯ ೫. ಬ್ರಾಹ್ಮಣ ೯ ಮಂತ್ರ ೩೬) "ಇದು ಬ್ರಹ್ಮವಲ್ಲ" "ಇದು ಬ್ರಹ್ಮವಲ್ಲ." ಎಂಬುದಾಗಿ ಸಕಲದೃಶ್ಯ ನಿಷೇಧಪೂರ್ವಕವಾಗಿ ಉಪದಿಷ್ಟವಾಗಿರುವುದೋ ಮತ್ತು ಶ್ರುತ್ಯಾದಿ ವಾಕ್ಯಗಳಿಗೂ ಕೂಡ ಅಗೋಚರವಾದುದೋ ಅಂತಹ ಪರಬ್ರಹ್ಮವೇ ಅವನು ಆದನು.

ತದಸೌ ಸುಸಮಂ ಸ್ಫಾರಂ ಪದಂ ಪರಮ ಪಾವನಂ ।
ಸರ್ವ ಭಾವಾಂತರಗತ ಮಭೂತ್ಸರ್ವ ವಿವರ್ಜಿತಂ ॥ ೧೭ ॥

ಯಚ್ಛೂನ್ಯವಾದಿನಾಂ ಶೂನ್ಯಂ ಬ್ರಹ್ಮ ಬ್ರಹ್ಮವಿದಾಂ ವರಂ ।
ವಿಜ್ಞಾನ ಮಾತ್ರಂ ವಿಜ್ಞಾನವಿದಾಂ ಯದಮಲಂ ಪದಂ ॥ ೧೮ ॥

ಪುರುಷಃ ಸಾಂಖ್ಯ ದೃಷ್ಟೀನಾಮೀಶ್ವರೋ ಯೋಗವಾದಿನಾಂ ।
ಶಿವಃ ಶತಿಕಲಾಂಕಾನಾಂ ಕಾಲಃ ಕಾಲೈಕವಾದಿನಾಂ ॥ ೧೯ ॥

ಆತ್ಮಾತ್ಮನಸ್ತ ದ್ವಿದುಷಾಂ ನೈರಾತ್ಮ್ಯಂ ತಾದೃಶಾತ್ಮನಾಂ ।
ಮಧ್ಯಂ ಮಾಧ್ಯಮಿಕಾನಾಂ ಚ ಸರ್ವಂ ಸುಸಮ ಚೇತಸಾಂ ॥ ೨೦ ॥

ಯತ್ಸರ್ವ ಶಾಸ್ತ್ರಸಿದ್ಧಾಂತೋ ಯತ್ಸರ್ವ ಹೃದಯಾ ನುಗಂ ।
ಯತ್ಸರ್ವಂ ಸರ್ವಗಂ ಸಾರ್ವಂ ಯತ್ತತ್ತತ್ಸದಸೌ ಸ್ಥಿತಃ ॥ ೨೧ ॥

---

೧೭. ಆಗ ಆ ವೀತಹವ್ಯನು, ಅತ್ಯಂತ ಸಮವೂ ಮಹತ್ತಮವೂ ಪರಮಪಾವನವೂ, ಸಮಸ್ತ ಭೂತಗಳ ಅಂತರ್ಗತವೂ, ಸರ್ವವಿವರ್ಜಿತವೂ, ಆದ ಆ ಪರಮಪದವೇ ಆಗಿಬಿಟ್ಟನು.

೧೮-೨೧. ಯಾವ ನಿಷ್ಕಳಂಕವಾದ ಪರಮಪದವು ಶೂನ್ಯವಾದಿಗಳ ಮತದಲ್ಲಿ ಶೂನ್ಯವೆನ್ನಿಸಿರುವುದೋ, ಬ್ರಹ್ಮಜ್ಞಾನಿಗಳಾದ ವೇದಾಂತಿಗಳ ಸಿದ್ಧಾಂತದಲ್ಲಿ ಸರ್ವೋತ್ಕೃಷ್ಟವಾದ ಪರಬ್ರಹ್ಮವೆನ್ನಿಸಿರುವುದೋ ವಿಜ್ಞಾನವಾದಿಗಳಿಗೆ ಕೇವಲ ವಿಜ್ಞಾನವೆನ್ನಿಸಿರುವುದೋ ಸಾಂಖ್ಯದೃಷ್ಟಿಯುಳ್ಳವರ ಮತದಲ್ಲಿ ಪುರುಷನೆನ್ನಿಸಿರುವುದೋ, ಯೋಗಶಾಸ್ತ್ರಜ್ಞರ ದೃಷ್ಟಿಯಲ್ಲಿ ಈಶ್ವರನೆನ್ನಿಸಿಕೊಂಡಿರುವುದೋ, ಮತ್ತು ಶಿವಮತಸ್ಥರಾದ ಶೈವರಿಗೆ ಶಿವನೆಂದೂ ಕಾಲಾತ್ಮವಾದಿಗಳಿಗೆ ಕಾಲವೆಂದೂ, ಆತ್ಮಜ್ಞಾನಿಗಳಿಗೆ ಆತ್ಮವೆಂದೂ, ಕ್ಷಣಿಕವಿಜ್ಞಾನ ಸಂತಾನವೇ ಆತ್ಮವೆಂದು ವಾದಿಸುವ ಸೌತ್ರಾಂತಿಕ ವೈಭಾಷಿಕರ ಸಿದ್ಧಾಂತದಲ್ಲಿ ನೈರಾತ್ಮ್ಯವೆಂದೂ (ಕ್ಷಣಿಕ ವಿಜ್ಞಾನ ಸಂತಾನವೆಂದೂ) ಮಾಧ್ಯಮಿಕರಿಗೆ ಚಿದಚಿನ್ಮಧ್ಯ ತತ್ತ್ವವಾಗಿಯೂ, ಸರ್ವತ್ರ ಸಮಬುದ್ಧಿಯುಳ್ಳ ಜೀವನ್ಮುಕ್ತರಿಗೆ ನಿರವಶೇಷ ಪೂರ್ಣವಾದ ಸರ್ವರೂಪವಾಗಿಯೂ ಇರುವುದೋ ಮತ್ತು ಯಾವುದು ಸಕಲ ಶಾಸ್ತ್ರಗಳ ಪರಮ ಸಿದ್ಧಾಂತವಾದುದೋ, ಯಾವುದು ಸಮಸ್ತ ಭೂತಗಳ ಹೃದಯಾಕಾಶದಲ್ಲಿ ಅನುಗತವಾಗಿರುವುದೋ, ಯಾವುದು ಸರ್ವವೂ ಸರ್ವಗತವೂ ಸರ್ವತತ್ತ್ವವೂ ಆಗಿರುವ ಪರಮಾರ್ಥ ಸತ್ಯವೆನ್ನಿಸಿರುವುದೊ, ಅಂತಹ ಪರಪದವೇ ಅವನು ಆದನು.

ಯದನುತ್ತಮ ನಿಃಸ್ಪಂದಂ ದೀಯತೇ ತೇಜಸಾಮಪಿ ।
ಸ್ವಾನುಭೂತ್ಯೈಕ ಮಾತ್ರಂ ಯದ್ಯತ್ತತ್ತತ್ಸದಸೌ ಸ್ಥಿತಃ ॥ ೨೨ ॥

ಯದೇಕಂ ಚಾಪ್ಯನೇಕಂ ಚ ಸಾಂಜನಂ ಚ ನಿರಂಜನಂ ।
ಯತ್ಸರ್ವಂ ಚಾಪ್ಯಸರ್ವಂ ಚ ಯತ್ತತ್ತತ್ಸದಸೌ ಸ್ಥಿತಃ ॥ ೨೩ ॥

ಅಜಮಜರ ಮನಾದ್ಯನೇಕ ಮೇಕಂ ।
ಪದಮ ಮಲಂ ಸಕಲಂ ಚ ನಿಷ್ಕಲಂ ಚ ।
ಸ್ಥಿತ ಇತಿ ಸ ತದಾ ನಭಃ ಸ್ವರೂಪಾ ।
ದಪಿ ವಿಮಲಸ್ಥಿತಿರೀಶ್ವರಃ ಕ್ಷಣೇನ ॥ ೨೪ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ವೀತಹವ್ಯ ನಿರ್ವಾಣೋ" ನಾಮ ಸಪ್ತಾಶೀತಿತಮಃ ಸರ್ಗಃ

---

೨೨. ಯಾವದು ಅತ್ಯಂತ ನಿಷ್ಕ್ರಿಯವಾಗಿ ಕೂಟಸ್ಥವೆನಿಸಿಕೊಂಡಿರುವುದೋ ಯಾವುದು ಸೂರ್ಯಚಂದ್ರಾದಿ ತೇಜಸ್ಸುಗಳಿಗೂ ಪ್ರಕಾಶವನ್ನು ಕೊಡುವ ಸ್ವಯಂಪ್ರಕಾಶ ರೂಪವಾದುದೋ ಮತ್ತು ಯಾವುದು ಸ್ವಾನುಭವದಿಂದ ಮಾತ್ರವೇ ವೇದ್ಯವಾಗಿರುವುದೋ ಅಂತಹ ಪರಮಾರ್ಥ ಸತ್ಯರೂಪನೇ ಆ ವೀತಹವ್ಯನು ಆಗಿಬಿಟ್ಟನು.

೨೩. ಮತ್ತು ಯಾವ ಪರಮಾರ್ಥ ಸದ್ರೂಪ ಪರತತ್ತ್ವವು ಸ್ವರೂಪತಃ ಅದ್ವಿತೀಯವಾಗಿಯೂ ನಿರಂಜನವಾಗಿಯೂ ಸರ್ವವಾಗಿಯೂ ಇರುವುದೋ ಅಜ್ಞರ ದೃಷ್ಟಿಯಿಂದ ಅನೇಕವಾಗಿಯೂ ಸಕಳಂಕವಾಗಿಯೂ ಅಸರ್ವವಾಗಿಯೂ ಸರ್ವವಲ್ಲದುದು) ಇರುವುದೋ ಅಂತಹ ಪ್ರಸಿದ್ಧ ಸದ್ರೂಪ ಪರತತ್ತ್ವನೂ ಆದನು.

೨೪. ಅಯ್ಯ ರಾಮ, ಆಗ ಆ ವೀತಹವ್ಯನು ಪೂರ್ವೋಕ್ತ ಪ್ರಕಾರವಾಗಿ ಮುಕ್ತದೃಷ್ಟಿಯಿಂದ ಜನನಾದಿ ವಿಕಾರರಹಿತವೂ (ಅಜ) ಜರಾಶೂನ್ಯವೂ ಅನಾದಿಯೂ ಅದ್ವಿತೀಯವೂ, ನಿರ್ಮಲವೂ, ನಿಷ್ಕಲವೂ ಆದ ಪರಮಪದವಾಗಿರುತ್ತಾ ಆಕಾಶದ ಸ್ವರೂಪಕ್ಕಿಂತಲೂ ಹೆಚ್ಚು ನಿರ್ಮಲವಾದ ಸ್ಥಿತಿಯುಳ್ಳವನಾಗಿದ್ದನು. ಆದರೆ ಬದ್ಧದೃಷ್ಟಿಯಿಂದ ಕ್ಷಣದೊಳಗಾಗಿ ಈಶ್ವರನಾಗಿದ್ದುಕೊಂಡು ತನ್ನ ಕಾರ್ಯ ಭೇದಗಳಿಂದ ಅನೇಕವೂ ಸಕಲವೂ ಆದ ಪದವಾಗಿದ್ದನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ವೀತಹವ್ಯ ವಿಶ್ರಾಂತಿ"ಯೆಂಬ ಎಂಭತ್ತೇಳನೆಯ ಸರ್ಗವು

ಅಷ್ಟಾಶೀತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಪ್ರಾಪ್ಯ ಸಂಸೃತಿ ಸೀಮಾಂತಂ ದುಃಖಾಬ್ಧೇಃ ಪಾರಮಾಗತಃ ।
ವೀತಹವ್ಯಃ ಶಶಾಮೈವಮಪುನರ್ಜನನೇ ಮುನಿಃ ॥ ೧ ॥

ತಸ್ಮಿಂಸ್ತ ಥೋಪಶಾಂತೇ ಹಿ ಪರಾಂ ನಿರ್ವೃತಿಮಾಗತೇ ।
ಪಯಃಕಣ ಇವಾಂಭೋಧೌ ಸ್ವೇ ಪದೇ ಪರಿಣಾಮಿನಿ ॥ ೨ ॥

ತಥೈವ ತಿಷ್ಠನ್ ನಿಃ ಸ್ಪಂದಃ ಸ ಕಾಯೋ ಮ್ಲಾನಿಮಾಯಯೌ ।
ಅಂತರ್ವಿರಸತಾಂ ಪ್ರಾಪ್ಯ ಮಾರ್ಗಶೀರ್ಷಾಂತ ಪದ್ಮವತ್ ॥ ೩ ॥

ಎಂಭತ್ತೆಂಟನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು :—

೧. ರಾಮ, ಪೂರ್ವೋಕ್ತ ಪ್ರಕಾರವಾಗಿ ಆ ವೀತಹವ್ಯ ಮುನಿಯು, ಆತ್ಯಂತಿಕ ಮನೋನಾಶವನ್ನು ಪಡೆದವನಾಗಿ ಸಂಸಾರದ ಎಲ್ಲೆಯ ಕೊನೆಯನ್ನು ಮುಟ್ಟಿದನು ಮತ್ತು ಅಪಾರವಾದ ದುಃಖ ಸಾಗರದ ಆಚೆಯ ದಡವನ್ನು ಸೇರಿ ಪ್ರಶಾಂತನಾಗಿದ್ದನು.

೨-೩. ಸಮುದ್ರದಲ್ಲಿ ಒಂದು ಜಲಬಿಂದುವು ಲಯ ಹೊಂದಿ ಅದೃಶ್ಯವಾಗಿ ಬಿಡುವಂತೆ ಆ ವೀತಹವ್ಯನು, ಪರಿಣಾಮ ಶೂನ್ಯವಾದ (ಅವಿಕಾರಿಯಾದ) ಸ್ವರೂಪ ಪರಮಪದದಲ್ಲಿ ಹೀಗೆ ಉಪಶಾಂತನಾಗಿ ನಿರತಿಶಯವಾದ ಮೋಕ್ಷವನ್ನು ಪಡೆಯಲಾಗಿ, ಹೇಮಂತ ಋತುವಿನಲ್ಲಿ ಕಮಲವು ಒಳಗೆ ನೀರಸವಾಗಿ ಕಳೆಗುಂದುವಂತೆ ಆ ಮುನಿಯ ಪಾಂಚಭೌತಿಕ ಶರೀರವು ಹಾಗೆಯೇ ಒಂದು ಕಡೆ ನಿಶ್ಚಲವಾಗಿ ಇದ್ದುಕೊಂಡು, ಕ್ರಮೇಣ ಒಳಗೆ ರಸವಿಹೀನವಾಗಿ ಬಾಡಿಹೋಯಿತು.

ತಸ್ಯ ದೇಹದ್ರುಮಾಂತಃಸ್ಥಂ ತ್ಯಕ್ತ್ವಾ ಹೃನ್ನೀಡಮಾಯಯುಃ ।
ಪ್ರೋಡ್ಡೀಯ ವಿಹಗಾ ಯಂತೋ ಯಂತ್ರೋನ್ಮುಕ್ತಾ ಇವಾಸವಃ ॥ ೪ ॥

ಭೂತೇಷ್ವೇವ ಪ್ರತಿಷ್ಠಾನಿ ಭೂತಾನಿ ಸಕಲಾನ್ಯಲಂ ।
ಮಾಂಸಾಸ್ಥಿಯನ್ತ್ರ ದೇಹಸ್ತು ವನಾವನಿತಲೇಽವಸತ್ ॥ ೫ ॥

---

೪. ಅನಂತರ ಅವನ ಪ್ರಾಣವಾಯುವುಗಳು ಪಕ್ಷಿಗಳ ತೆರದಲ್ಲಿ ದೇಹವೆಂಬ ವೃಕ್ಷದ ಒಳಗಡೆಯಲ್ಲಿರುವ ಆಯಾ ನಾಡೀ ಸ್ಥಾನಗಳನ್ನು ಬಿಟ್ಟು, ಯಂತ್ರದಿಂದ ಎಸೆಯಲ್ಪಟ್ಟ ಸಣ್ಣ ಕಲ್ಲುಗಳಂತೆ ಮೇಲಕ್ಕೆ ಹಾರಿ, ಹೃದಯವೆಂಬ ತಮ್ಮ ಗೂಡಿಗೆ ಬಂದು ಸೇರಿಕೊಂಡವು.

[ನತಸ್ಯಪ್ರಾಣಾಃ ಉತ್ಕ್ರಾಮಂತಿ ಅತ್ರೈವ ಸಮವನೀಯಂತೇ, ಬ್ರಹ್ಮೈವಸರ್ ಬ್ರಹ್ಮಾಪ್ಯೇತಿ, ಜೀವನ್ಮುಕ್ತನ ಪ್ರಾಣಗಳು, ಇತರ ಜನಗಳ ಪ್ರಾಣಗಳಂತೆ ಉತ್ಕ್ರಮಿಸುವುದಿಲ್ಲ. ದೇಹದೊಳಗೆಯೇ ಲಯ ಹೊಂದಿಬಿಡುವುವು. ಜೀವನ್ಮುಕ್ತನು ಸ್ವಯಂಬ್ರಹ್ಮವೇ ಆಗಿದ್ದುಕೊಂಡು ಬ್ರಹ್ಮನಲ್ಲಿಯೇ ಲೀನನಾಗಿಬಿಡುವನು. (ಐಕ್ಯವನ್ನು ಹೊಂದುವನು.) ಎಂಬೀ ಮೊದಲಾದ ಶ್ರುತಿಗಳಿಗೆ ವಿರೋಧವುಂಟಾಗುವ ಕಾರಣ, ಈ ಶ್ಲೋಕಕ್ಕೆ ಆಪಾತತಃ ತೋರುವಂತೆ ದೇಹವೆಂಬ ವೃಕ್ಷದೊಳಗಿರುವ ಹೃದಯವೆಂಬ ಗೂಡನ್ನು ಬಿಟ್ಟು ಬಿಟ್ಟು ಅವನ ಪ್ರಾಣವಾಯುವುಗಳು ಹಾರಿ ಹೊರಕ್ಕೆ ಬಂದವು ಎಂಬರ್ಥವನ್ನು ಸರ್ವಥಾ ಮಾಡಕೂಡದೆಂದು, ತಾತ್ಪರ್ಯ ಪ್ರಕಾಶ ಟೀಕಾಕಾರರು ಸ್ಪಷ್ಟವಾಗಿ ಹೇಳಿರುವರು. ಮತ್ತು ಜೀವನ್ಮುಕ್ತನ, ಸರ್ವ ಕರ್ಮ ವಾಸನೆಗಳೂ ನಾಶಹೊಂದಿಬಿಟ್ಟಿರುವ ಕಾರಣ, ಅವನ ಪ್ರಾಣೋತ್ಕ್ರಮಣಕ್ಕೆ ಕಾರಣವೇ ಇರುವುದಿಲ್ಲ, ಪ್ರಯೋಜನವೂ ಇರುವುದಿಲ್ಲ. ಎಂದು ಅವರು ಅಭಿಪ್ರಾಯ ಪಟ್ಟಿದಾರೆ)

೫. ಪ್ರಾಣಾದಿ ನಾಮಾಂತ ಷೋಡಶ ಕಲಾ ಸಹಿತಗಳಾದ ಸಕಲ ಭೂತ ಮಾತ್ರೆಗಳೂ ಸಮಗ್ರವಾಗಿ ಆಕಾಶಾದಿ ಮಹಾಭೂತಗಳಲ್ಲಿಯೇ ನೆಲೆಸಿದುವು. ಮಾಂಸ, ಮೂಳೆ ಮುಂತಾದುವುಗಳಿಂದ ಕೂಡಿದ ಸ್ಥೂಲದೇಹವಾದರೋ ಆ ಕಾಡಿನ ನೆಲದ ಮೇಲೆಯೇ ಬಿದ್ದುಕೊಂಡಿತ್ತು.

ಚಿದರ್ಣವ ಪ್ರತಿಷ್ಠಾ ಚಿತ್ ದಾತವೋ ಧಾತುಷು ಸ್ಥಿತಾಃ ।
ಸ್ವೇ ಸ್ವರೂಪೇ ಸ್ಥಿತಂ ಸರ್ವಂ ಮುನಾವುಪಶಮಂ ಗತೇ ॥ ೬ ॥

ಏಷಾ ತೇ ಕಥಿತಾ ರಾಮ ವಿಚಾರ ಶತಶಾಲಿನೀ ।
ವಿಶ್ರಾಂತಿರ್ವೀತಹವ್ಯಸ್ಯ ಪ್ರಜ್ಞಯೈನಾಂ ವಿವೇಚಯ ॥ ೭ ॥

ಏವಂ ಪ್ರಕಾರಯಾ ಚಾರ್ವ್ಯಾ ಸ್ವವಿಚಾರಣಯೇದ್ಧಯಾ ।
ತತ್ವಮಾಲೋಕ್ಯ ತತ್ಸಾರಮಾತಿಷ್ಠೋತ್ತಿಷ್ಠ ರಾಘವ ॥ ೮ ॥

ಯದೇತದಖಿಲಂ ರಾಮ ಭವತೇ ವರ್ಣಿತಂ ಮಯಾ ।
ಯದಿದಂ ವರ್ಣಯಾಮ್ಯದ್ಯ ವರ್ಣಯಿಷ್ಯಾಮಿ ಯಚ್ಚ ವಾ ॥ ೯ ॥

ತ್ರಿಕಾಲ ದರ್ಶಿನಾ ನಿತ್ಯಂ ಚಿರಂ ಚ ಕಿಲ ಜೀವತಾ ।
ವಿಚಾರಿತಂ ಚ ದೃಷ್ಟಂ ಚ ಮಯಾ ತದಖಿಲಂ ಸ್ವಯಂ ॥ ೧೦ ॥

ಲಿಂಗದೇಹದಲ್ಲಿ ಬಿಂಬಿತವಾದ ಜೀವ ಚೈತನ್ಯವು ತನ್ನ ಬಿಂಬಭೂತವಾದ, ಸಮುದ್ರದಂತೆ ಅಪಾರವಾದ ಮಹಾ ಚೈತನ್ಯದೊಂದಿಗೆ ಐಕ್ಯವನ್ನು ಹೊಂದಿ ನೆಲೆಸಿತು. ಚರ್ಮ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜೆ, ರೇತಸ್ಸುಗಳೆಂಬ ಧಾತುಗಳು ತಮ್ಮ ಉಪಾದಾನ ಕಾರಣಗಳಾದ ಧಾತುಗಳಲ್ಲಿ ಸೇರಿಕೊಂಡವು. ಹೀಗೆ ಆ ವೀತಹವ್ಯಮುನಿಯು ಉಪಶಮವನ್ನು ಹೊಂದಲಾಗಿ, ಸಮಸ್ತವೂ ತಮ್ಮ ತಮ್ಮ ಸ್ವರೂಪದಲ್ಲಿ (ಕಾರಣದಲ್ಲಿ) ನೆಲೆಸಿದ್ದಿತು.

೭. ಅಯ್ಯ ರಾಮ, ಅನೇಕ ನೂರಾರು ವಿಚಾರಗಳಿಂದ ಹೃದಯಂಗಮ-ವಾದ- ವೀತಹವ್ಯಮುನಿಯು ವಿಶ್ರಾಂತಿ ಹೊಂದಿದ ಪ್ರಕಾರವನ್ನು ಇದುವರೆವಿಗೂ ನಾನು ನಿನಗೆ ಈ ಬಗೆಯಾಗಿ ನಿರೂಪಿಸಿರುವೆನು. ಇನ್ನು ಮೇಲೆ ನೀನು ನಿನ್ನ ಪ್ರಜ್ಞಾ ವೈಶದ್ಯದಿಂದ ಇದನ್ನು ಚೆನ್ನಾಗಿ ವಿವೇಚನೆ ಮಾಡುವವನಾಗು.

೮. ಅಯ್ಯ ರಾಘವ, ಈ ಪ್ರಕಾರದಿಂದ, ರಮಣೀಯವಾದ, ಮತ್ತು ಅತ್ಯಂತ ಸ್ಫುಟವಾದ ನಿನ್ನ (ಸ್ವಂತ) ವಿಚಾರದಿಂದ, ಆತ್ಮ ತತ್ತ್ವವನ್ನು ಸಾಕ್ಷಾತ್ಕರಿಸಿ, ಸಾರಭೂತವಾದ ಆ ತತ್ವವನ್ನು ಆಶ್ರಯಿಸುವವನಾಗು. ನಿನ್ನ ಈ ಅವಿಚಾರ ಪರತೆಯನ್ನು ಬಿಟ್ಟು ಈಗಲಾದರೂ ಎದ್ದು ವಿಚಾರದಲ್ಲಿ ತೊಡಗು.

೯-೧೦. ಅಯ್ಯ ರಾಮ, ನಾನು ಇದುವರೆವಿಗೂ ನಿನಗೆ ಯಾವ ಯಾವ ಈ

ತದೇತಾಮಮಲಾಂ ದೃಷ್ಟಿಮವಲಂಬ್ಯ ಮಹಾಮತೇ ।
ಜ್ಞಾನಮಾಸಾದಯ ಪರಂ ಜ್ಞಾನಾನ್ಮುಕ್ತಿರ್ಹಿ ಲಭ್ಯತೇ ॥ ೧೧ ॥

ಜ್ಞಾನಾನ್ನಿರ್ದುಃಖತಾಮೇತಿ ಜ್ಞಾನಾದಜ್ಞಾನ ಸಂಕ್ಷಯಃ ।
ಜ್ಞಾನಾದೇವ ಪರಾ ಸಿದ್ಧಿಃ ನಾನ್ಯಸ್ಮಾದ್ರಾಮ ವಸ್ತುತಃ ॥ ೧೨ ॥

ಸಮಸ್ತ ತತ್ವವನ್ನು ವರ್ಣಿಸಿರುವೆನೋ, ಯಾವುದನ್ನು ಈಗ ವರ್ಣಿಸುತ್ತಿರುವೆನೋ ಮತ್ತು ಇನ್ನು ಮುಂದೆ ಯಾವುದನ್ನು ವರ್ಣಿಸಸಲಿರುವನೋ, ಅದದೆಲ್ಲವನ್ನೂ ಸರ್ವದಾ ಕಾಲತ್ರಯ ಜ್ಞಾನಸಂಪನ್ನನಾಗಿಯೂ, ಮತ್ತು ಚಿರಂಜೀವಿಯಾಗಿಯೂ ಇರುವ ನಾನೇ ಸ್ವತಃ ನಾನಾ ಪ್ರಕಾರಗಳಿಂದ ಅನೇಕ ಸಲ ತತ್ತ್ವ ವಿಚಾರಗಳನ್ನು ಮಾಡಿ ಲೋಕಾನುಭವದಿಂದಲೂ, ಶಾಸ್ತ್ರೀಯ ಸಂಪ್ರದಾಯಗಳಿಂದಲೂ, ಶ್ರುತಿ ಪ್ರಾಮಾಣ್ಯದಿಂದಲೂ, ಅನ್ವಯ ವ್ಯತಿರೇಕ ಪೂರ್ವಕವಾಗಿ ಚೆನ್ನಾಗಿ ಪರೀಕ್ಷಿಸಿ, ಪುನಃ ಪುನಃ ದೃಢ ನಿಶ್ಚಿತವಾಗಿ ತಿಳಿದುಕೊಂಡಿರುವೆನು (ಕಂಡುಕೊಂಡಿರುವೆನು.)

೧೧. ಆದುದರಿಂದ, ಅಯ್ಯ ಮಹಾಮತಿಯಾದ ರಾಮ, ನೀನು ಈ ಪರಮ ಪವಿತ್ರವಾದ ಆತ್ಮೈಕತ್ವ ದೃಷ್ಟಿಯನ್ನು ಅವಲಂಬಿಸಿ, ಪ್ರಶಸ್ತತಮವಾದ ಸ್ವಾತ್ಮತತ್ತ್ವ ಜ್ಞಾನವನ್ನು ಪಡೆದು ಅದರಲ್ಲಿ ಪ್ರತಿಷ್ಠಿತನಾಗಿರು. ಆ ಜ್ಞಾನದಿಂದಲೇ ಪರಮಪುರುಷಾರ್ಥವಾದ ಮೋಕ್ಷವು ಲಭ್ಯವಾಗುವುದು.

೧೨. ಅಯ್ಯ ರಾಮ, ತತ್ತ್ವಜ್ಞಾನದಿಂದಲೇ ಮನುಷ್ಯನು ಸಕಲ ದುಃಖವಿನಿರ್ಮುಕ್ತನಾಗುವನು. ತತ್ತ್ವ ಜ್ಞಾನದಿಂದ ಮಾತ್ರವೇ ಅಜ್ಞಾನವು (ಸಕಲಾನರ್ಥಮೂಲಕಾರಣ) ನಿಶ್ಶೇಷವಾಗಿ ನಾಶಹೊಂದಿಬಿಡುವುದು. ಮತ್ತು ತತ್ತ್ವಜ್ಞಾನದಿಂದಲೇ ಉತ್ತಮೋತ್ತಮವಾದ ನಿಃಶ್ರೇಯಸವು ಸಿದ್ಧಿಸುವುದು. ಬೇರೆ ಇನ್ಯಾವ ಕಾರಣದಿಂದಲೂ ಈ ಫಲಗಳು ಎಂದಿಗೂ ಪ್ರಾಪ್ಯವಾಗುವುದೇ ಇಲ್ಲ. ಇದು ವಾಸ್ತವ. ಸಂದೇಹಪಡಬೇಡ.

ಜ್ಞಾನೇನ ಸಕಲಾಮಾಶಾಂ ವಿನಿಕೃತ್ಯ ಸಮಂತತಃ ।
ಶಾತಿತಾಶೇಷ ಚಿತ್ತಾದ್ರಿಃ ವೀತಹವ್ಯೋ ಮುನೀಶ್ವರಃ ॥ ೧೩ ॥

ವೀತಹವ್ಯಾತ್ಮಿಕಾ ಸಂವಿತ್ಸಂಕಲ್ಪ ಜಗತೀತಿ ಸಾ ।
ಅನುಭೂತವತೀ ದೃಶ್ಯಮಿದಮೇವ ಚ ತಜ್ಜಗತ್ ॥ ೧೪ ॥

ವೀತಹವ್ಯೋ ಮನೋ ಮಾತ್ರಂ ಮನೋಽಹಂ ತ್ವಮಿವೈಂದ್ರಿಯಃ ।
ಮನೋ ಜಗದಿದಂ ಕೃತ್ಸ್ನಮನ್ಯತಾನನ್ಯತೇ ತು ಕೇ ॥ ೧೫ ॥

---

೧೩. ಈ ತತ್ತ್ವಜ್ಞಾನದಿಂದಲೇ, ಆ ವೀತಹವ್ಯ ಮುನೀಶ್ವರನು ಕೂಡ, ಸತಲ ವಿಧಗಳಾದ ಆಶೆಗಳನ್ನೂ ಸಮಗ್ರವಾಗಿ ಕತ್ತರಿಸಿ ನಿರ್ಮೂಲಗೊಳಿಸಿ, ತನ್ನ ಚಿತ್ತವೆಂಬ ಪರ್ವತವನ್ನು ಸಂಸಾರ ಸಹಿತವಾಗಿ ನಿಶ್ಶೇಷವಾಗುವಂತೆ ಚೆನ್ನಾಗಿ ತುಂಡುತುಂಡು ಮಾಡಿಬಿಟ್ಟನು.

೧೪. ಆ ವೀತಹವ್ಯಾತ್ಮಕವಾದ ಚೈತನ್ಯವು ತನ್ನ ಹೃದಯಾಕಾಶೋಪ ಲಕ್ಷಿತವಾದ ಬ್ರಹ್ಮನಲ್ಲಿ, ಅಸ್ಮದಾದಿಗಳಿಗೆ (ನಮ್ಮಂತಹ ಸಮಸ್ತ ಜನಗಳಿಗೂ) ಸಾಧಾರಣವಾಗಿ ಗೋಚರವಾಗುತ್ತಿರುವ ಈ ದೃಶ್ಯ ಜಗತ್ತನ್ನೇ ಸಂಕಲ್ಪಮಯವಾದ ಜಗತ್ತೆಂದು ಅನುಭವಿಸಿತು. ಆದುದರಿಂದ, ಅವನು ಅನುಭವಿಸಿದ ಆ ಜಗತ್ತೂ ನಾವು ಅನುಭವಿಸುವ ಈ ಜಗತ್ತೇ ಹೊರತು, ಅಪೂರ್ವವಾದುದಲ್ಲವು. (ಇದರಿಂದ ಆ ವೀತಹವ್ಯನು ತನ್ನ ಹೃದಯದೊಳಗೆ ಸಂಕಲ್ಪಮಯವಾದ ಜಗತ್ತನ್ನೂ ಅದ ರಲ್ಲಿ ಪ್ರಥಮ ಗಣಾಧಿಪತ್ಯವನ್ನೂ ಅನುಭವಿಸಿದನೆಂದೂ, ಆಮೇಲೆ ಅಂತಹ ಸಂಕಲ್ಪಮಯ ಜಗತ್ತಿನೊಳಗಿರುವ ಸೂರ್ಯಮಂಡಲವನ್ನು ಪ್ರವೇಶಿಸಿ, ಅಲ್ಲಿದ್ದ ಪಿಂಗಳನ ಮೂಲಕ, ಈ ಜಾಗ್ರತ್ಕಾಲಿಕವಾದ ಜಗತ್ತಿನಲ್ಲಿ ನಿಜವಾಗಿಯೇ ಭೂಗರ್ಭದೊಳಗೆ ಸಿಕ್ಕಿ ಬಿದ್ದಿದ್ದ ತನ್ನ ದೇಹವನ್ನು ಉದ್ಧರಿಸಿದನೆಂದೂ ಹಿಂದೆ ಶ್ರೀ ವಶಿಷ್ಠರು ಶ್ರೀರಾಮನಿಗೆ ಹೇಳಿದ ಮಾತಿನಲ್ಲಿ ಶ್ರೀರಾಮನಿಗಿದ್ದ ಆಶಂಕೆಯು ಪರಿಹೃತವಾಯಿತು ಎಂದು ತಿಳಿಯಬೇಕು.)

೧೫ ಅಸ್ಮದಾದಿಗಳ ಚಕ್ಷುರಾದೀಂದ್ರಿಯಗಳಿಗೆ ದೃಶ್ಯನಾಗಿರುವ (ಐಂದ್ರಿಯನು) ಆ ವೀತಹವ್ಯನು ನಮ್ಮ ಮನೋಮಾತ್ರವೇ ಏಕೆಂದರೆ, ನಮ್ಮ ಮನಸ್ಸೇ ನನ್ನಂತೆಯೂ ನಿನ್ನಂತೆಯೂ ಭಾಸಿಸುವುದು. ಈ ಸಮಸ್ತ ಜಗತ್ತೂ ಮನಸ್ಸೇ.

ಅಧಿಗತ ಪರಮಾರ್ಥಃ ಕ್ಷೀಣ ರಾಗಾದಿ ದೋಷಃ ।
ಸಕಲ ಮಲ ವಿಕಾರೋಪಾಧಿ ಸಂಗಾದ್ಯಪೇತಃ ।
ಚಿರಮನುಸೃತಮಂತಃ ಸ್ವಂ ಸ್ವಭಾವಂ ವಿವೇಕೀ ।
ಪದಮಲಮನಂತಂ ಪ್ರಾಪ್ತವಾನ್ ಶಾಂತ ಶೋಕಃ ॥ ೧೬ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮಪ್ರಕರಣೇ "ವೀತಹವ್ಯ ವಿಶ್ರಾಂತಿ" ರ್ನಾಮಾಷ್ಟಾಶೀತಿ ತಮಃ ಸರ್ಗಃ

(ಬೇರೆ ಯಾವುದೂ ಅಲ್ಲ.) ಹೀಗಿರುವಾಗ ಈ ಜಗತ್ತಿನಲ್ಲಿ ಇನ್ನು ಇದು ಬೇರೆ (ಅನ್ಯ) ಇದು ಅನನ್ಯ (ಬೇರೆಯಲ್ಲ-ಸ್ವೀಯ) ಎಂಬ ಭೇದವು ಯಾವುದಿರುವುದು ?

೧೬. ಅಯ್ಯ ರಾಮ, ಪರಮಾರ್ಥ ತತ್ತ್ವವನ್ನು ಯಥಾರ್ಥವಾಗಿ ಸಾಕ್ಷಾತ್ಕರಿಸಿ, ರಾಗದ್ವೇಷಾದಿ ಸಕಲ ದೋಷಗಳನ್ನು ನಾಶಪಡಿಸಿಕೊಂಡು, ಅವಿದ್ಯಾಕಾಮ ಕರ್ಮಾದಿ ಸಕಲ ಮಲಗಳಿಂದಲೂ, ಅವುಗಳ ಮೂಲಕವಾದ ಇಂದ್ರಿಯ ವಿಕಾರಗಳಿಂದಲೂ, ದೇಹತ್ರಯೋಪಾಧಿಗಳಿಂದಲೂ ಪ್ರಿಯಸಂಗಾದಿ ಗಳಿಂದಲೂ ವಿನಿರ್ಮುಕ್ತನಾಗಿ, ಉತ್ತಮ ವಿವೇಕಿಯಾಗಿದ್ದ ಆ ವೀತಹವ್ಯನು, ಸಮಸ್ತ ಸಂತಾಪಶೂನ್ಯನಾಗಿ, ಬಹು ದೀರ್ಘಕಾಲ ಚಿತ್ತಶುದ್ಧ್ಯುಪಾಯಗಳನ್ನು ಅನುಷ್ಠಾನ ಮಾಡುವುದರಿಂದಲೂ, ಶ್ರವಣಾದಿಗಳಿಂದಲೂ, ತತ್ತ್ವಸಾಕ್ಷಾತ್ಕಾರ ಸಮಾಧ್ಯಭ್ಯಾಸಾದಿ ಸಾಧನಗಳಿಂದಲೂ ತನ್ನ ಹೃದಯದೊಳಗೆ, ಅನುಭವಿಸಿದ ತನ್ನ ಸ್ವಭಾವಭೂತವಾದ, ನಿರ್ಮಲವೂ ಅನಂತವೂ ಆದ ಮೋಕ್ಷಪದವನ್ನು ಪಡೆದು ನಿರ್ವೃತನಾದನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ "ವೀತಹವ್ಯ ವಿಶ್ರಾಂತಿ"ಯೆಂಬ
ಎಂಭತ್ತೆಂಟನೆಯ ಸರ್ಗವು

ಏಕೋನ ನವತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ವೀತಹವ್ಯವದಾತ್ಮಾನಂ ನೀತ್ವಾ ವಿದಿತ ವೇದ್ಯತಾಂ ।
ವೀತರಾಗ ಭಯೋದ್ವೇಗಃತಿಷ್ಠ ರಾಘವ ಸರ್ವದಾ ॥ ೧ ॥

ತ್ರಿಂಶದ್ವರ್ಷ ಸಹಸ್ರಾಣಿ ವಿಜಹಾರ ಯಥಾ ಸುಖಂ ।
ವೀತಹವ್ಯೋ ವೀತಶೋಕಸ್ತಥಾ ವಿಹರ ರಾಘವ ॥ ೨ ॥

ಅನ್ಯೇ ಚ ರಾಜಮುನಯೋ ಜ್ಞಾತಜ್ಞೇಯಾ ಮಹಾಧಿಯಃ ।
ಯಥಾ ವಸನ್ ಸ್ವರಾಷ್ಟ್ರೇ ತ್ವಂ ತಥೈವಾಸ್ವ ಮಹಾಮತೇ ॥ ೩ ॥

ಎಂಭತ್ತೊಂಭತ್ತನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು :—

೧. ಅಯ್ಯ ರಾಘವ, ನೀನೂ ಕೂಡ ಆ ವೀತಹವ್ಯಮುನಿಯಂತೆ, ಅತ್ಯವಶ್ಯವಾಗಿ ತಿಳಿಯಬೇಕಾಗಿರುವ ಸ್ವಾತ್ಮ ತತ್ತ್ವವನ್ನು ದೃಢನಿಶ್ಚಿತವಾಗಿ ತಿಳಿದುಕೊಂಡು, ಸರ್ವದಾ ರಾಗಭಯ ಸಂತಾಪಗಳಿಂದ ವಿವರ್ಜಿತನಾಗಿರು.

೨. ಅಯ್ಯ ರಾಘವ, ಆ ವೀತಹವ್ಯನು ಸಮಸ್ತ ಶೋಕವಿನಿರ್ಮುಕ್ತನಾಗಿ ಹೇಗೆ ಮೂವತ್ತು ಸಾವಿರ ವರ್ಷಗಳ ಕಾಲ ಸ್ವೇಚ್ಛೆಯಿಂದ ಸುಖವಾಗಿ ವಿಹರಿಸಿಕೊಂಡಿದ್ದನೋ, ಹಾಗೆಯೇ ನೀನೂ ಕೂಡ ವಿಹರಿಸಿಕೊಂಡಿರುವವನಾಗು.

೩. ಅಯ್ಯಾ ಮಹಾ ಬುದ್ಧಿಶಾಲಿಯೇ, ಈ ವೀತಹವ್ಯನಂತೆಯೇ ಇನ್ನೂ ಇತರರಾದ ಅನೇಕ ಮಹಾ ವೇಧಾವಿಗಳಾದ ರಾಜರ್ಷಿಗಳು ತತ್ತ್ವಜ್ಞಾನನಿಷ್ಠರಾಗಿ ಹೇಗೆ ತಮ್ಮ ತಮ್ಮ ರಾಷ್ಟ್ರಗಳಲ್ಲಿ ವಾಸ ಮಾಡಿಕೊಂಡಿದ್ದರೋ, ಹಾಗೆಯೇ ನೀನೂ ಕೂಡ ತತ್ತ್ವಜ್ಞಾನ ಸಂಪನ್ನನಾಗಿ ನಿನ್ನ ರಾಷ್ಟ್ರದಲ್ಲಿ ಸುಖದಿಂದಿರು

ಸುಖದುಃಖ ಕ್ರಮೈರಾತ್ಮಾ ನ ಕದಾಚನ ಗೃಹ್ಯತೇ ।
ಸರ್ವಗೋಽಪಿ ಮಹಾಬಾಹೋ ಕಿಂ ಮುಧಾ ಪರಿಶೋಚಸಿ ॥ ೪ ॥

ಬಹವೋ ವಿದಿತಾತ್ಮಾನೋ ವಿಹರಂತೀಹ ಭೂತಲೇ ।
ನ ಕೇಚನ ವಶಂ ಯಾಂತಿ ದುಃಖಸ್ಯಾಂಗ ಭವಾನಿವ ॥ ೫ ॥

ಸ್ವಸ್ಥೋ ಭವ ಭವೋದಾರಃ ಸಮೋ ಭವ ಸುಖೀ ಭವ ।
ಸರ್ವಗಸ್ತ್ವಂ ತ್ವಮಾತ್ಮೈವ ತವ ನಾಸ್ತಿ ಪುನರ್ಭವಃ ॥ ೬ ॥

ಹರ್ಷಾಮರ್ಷ ವಿಕಾರಾಣಾಂ ಜೀವನ್ಮುಕ್ತಾ ಭವಾದೃಶಾಃ ।
ನ ಕೇಚನ ವಶಂ ಯಾಂತಿ ಮೃಗೇಂದ್ರಾಃ ಶಿಖಿನಾಮಿವ ॥ ೭ ॥

---

೪. ಅಯ್ಯ ಮಹಾ ಬಾಹುವೇ, ಆತ್ಮನು ಸರ್ವಗತನಾಗಿದ್ದರೂ ಕೂಡ, ಪ್ರಾಪಂಚಿಕ ಸುಖದುಃಖ ಕ್ರಮಗಳು ಆತ್ಮನನ್ನು ಎಂದೆಂದಿಗೂ ಸ್ವಲ್ಪಮಾತ್ರವೂ ಸ್ಪರ್ಶಿಸುವುದು ಕೂಡ ಇಲ್ಲ. ಹೀಗಿರುವಾಗ, ನೀನೇಕೆ ಹೀಗೆ ವ್ಯರ್ಥವಾಗಿ ಪರಿತಪಿಸುತ್ತಿರುವೆ ?

೫. ಅಪ್ಪಾ ರಾಮಚಂದ್ರ, ಆತ್ಮಜ್ಞರಾದ ಅನೇಕ ಮಹಾತ್ಮರು ಈ ಪ್ರಪಂಚದಲ್ಲಿ ಆತ್ಮಾರಾಮರಾಗಿ ವಿಹರಿಸಿಕೊಂಡಿರುವರು. ಆದರೆ ಅವರಲ್ಲಿ ಯಾರೂ ಕೂಡ ನಿನ್ನಂತೆ ದುಃಖಪರವಶರಾಗಿಲ್ಲವು.

೬. ಅದು ಕಾರಣ, ಇನ್ನಾದರೂ ನೀನು ಸ್ವಸ್ಥನಾಗಿರು. ಮನಸ್ಸಿನೊಳಗೆ ಸರ್ವವನ್ನೂ ಪರಿತ್ಯಾಗ ಮಾಡಿದವನಾಗಿ ಉದಾರನಾಗಿರು. ನೀನು ನಿಸ್ಸಂದೇಹ ವಾಗಿಯೇ ಸರ್ವಗತನಾದ ಅಪರಿಚ್ಛಿನ್ನಾತ್ಮನು. ನೀನು ಆತ್ಮವೇ ಆದುದರಿಂದ ನಿನಗೆ ಪುನರ್ಜನ್ಮವೆಂಬುದು ಇಲ್ಲವೆ ಇಲ್ಲ.

೭. ಸಿಂಹಗಳು ನವಿಲುಗಳನ್ನು ಕಂಡು ಹೆದರಿ ಅವುಗಳ ವಶವರ್ತಿಗಳಾಗ ದಿರುವಂತೆಯೇ ನಿನ್ನಂತಹ ತತ್ತ್ವಜ್ಞಾನಿಗಳಾದ ಜೀವನ್ಮುಕ್ತರು ಯಾರೂ ಕೂಡ ಹರ್ಷಕ್ರೋಧಾದಿ ಮನೋವಿಕಾರಗಳಿಗೆ ಎಂದಿಗೂ ಸ್ವಲ್ಪ ಮಾತ್ರವೂ ಒಳ ಪಡುವುದಿಲ್ಲ.

ಶ್ರೀರಾಮ ಉವಾಚ:—

ಅನೇನೈವ ಪ್ರಸಂಗೇನ ಸಂಶಯೋಽಯಂ ಮಮೋದಿತಃ ।
ಶರತ್ಕಾಲ ಇವಾಂಭೋದಂ ತಂ ಮೇ ತ್ವಂ ತನುತಾಂ ನಯ ॥ ೮ ॥

ಜೀವನ್ಮುಕ್ತ ಶರೀರಾಣಾಂ ಕಥಮಾತ್ಮವಿದಾಂ ವರ !
ಶಕ್ತಯೋ ನೇಹ ದೃಶ್ಯಂತೇ ಆಕಾಶ ಗಮನಾದಿಕಾಃ ॥ ೯ ॥

ಶ್ರೀ ವಸಿಷ್ಠ ಉವಾಚ:—

ಆಕಾಶ ಗಮನಾದೀನಿ ಯಾನ್ಯೇತಾನಿ ರಘೂದ್ವಹ ।
ಪ್ರಮಾಣಿತಾಃ ಪದಾರ್ಥಾನಾಂ ಸಹಜಾಃ ಖಲು ಶಕ್ತಯಃ ॥ ೧೦ ॥

ಶ್ರೀ ರಾಮನು ಕೇಳಿದನು:—

೮-೯. ಆತ್ಮತತ್ತ್ವ ಜ್ಞಾನಿಗಳಲ್ಲಿ ಅಗ್ರಗಣ್ಯರಾದ ಸದ್ಗುರುಗಳೇ, ತಾವು ಈಗಲೇ ಉಪಹರಿಸಿದ ಈ ಪ್ರಸಂಗವನ್ನು ಕೇಳಿದುದರಿಂದಲೇ ನನ್ನ ಮನಸ್ಸಿನಲ್ಲಿ ಈಗ ಮತ್ತೊಂದು ಸಂಶಯವು ಉದಯಿಸಿರುವುದು. ಶರತ್ಕಾಲವು ಮೇಘಗಳ ಆಡಂಬರವನ್ನು ನಿವಾರಣೆ ಮಾಡುವಂತೆ ತಾವು ಅನುಗ್ರಹಿಸಿ ಆ ಸಂಶಯವನ್ನು ಪರಿಹರಿಸಬೇಕೆಂದು ಪ್ರಾರ್ಥಿಸುವೆನು. ಹಿಂದೆ ತಾವು ಜೀವನ್ಮುಕ್ತನಾದ ವೀತಹವ್ಯನಿಗೆ ಸಕಲ ಸಿದ್ಧಿಗಳೂ ಉಂಟಾದುವೆಂದು ವರ್ಣಿಸಿದಿರಿ. ಹಾಗಾದರೆ ಈಗ ಅವನಂತೆಯೇ ಈ ಲೋಕದಲ್ಲಿ ಜೀವನ್ಮುಕ್ತರಾಗಿರತಕ್ಕವರ ಶರೀರಗಳಿಗೆ ಆಕಾಶ ಗಮನಾದಿ ಶಕ್ತಿಗಳು ಯಾವುವೂ ಏಕೆ ಕಾಣುವುದಿಲ್ಲ? (ಈ ವೈಲಕ್ಷಣ್ಯವನ್ನು ಹೇಗೆ ತಾವು ಸಮರ್ಥಿಸುವಿರಿ?)

೧೦. ಅಯ್ಯ ರಘೂದ್ವಹನಾದ ರಾಮ, ಈಗ ನೀನು ಯಾವ ಗಗನ ಸಂಚಾರಾದಿ ಕ್ರಿಯಾಜಾಲಗಳನ್ನು ಉದಹರಿಸಿದೆಯೋ ಅವುಗಳೆಲ್ಲವೂ ಆಯಾ ಪದಾರ್ಥಗಳ ಮತ್ತು ಆಯಾ ಯೋನಿ ದೇಹಗಳ ಸ್ವಭಾವ ಸಿದ್ಧವಾದ ಶಕ್ತಿಗಳೇ ಎಂದು ಪ್ರತ್ಯಕ್ಷಾದಿ ಪ್ರಮಾಣಗಳಿಂದ ನಿರ್ಣೀತವಾಗಿ ಗೊತ್ತಾಗಿದೆ. ಊರ್ಧ್ವ ಮುಖವಾಗಿ ಜ್ವಲಿಸುವಿಕೆಯು ಅಗ್ನಿಯ ಸ್ವಾಭಾವಿಕವಾದ ಶಕ್ತಿಯಾಗಿರುವಂತೆ ಆಕಾಶ ಗಮನಾದಿ ಕ್ರಿಯೆಗಳು ದೇವಯೋನಿಗಳಿಗೆ ಸ್ವಭಾವಸಿದ್ಧವಾದುವುಗಳೆಂದು ತಿಳಿ.

ಯದ್ವಿಚಿತ್ರಂ ಕ್ರಿಯಾಜಾಲಂ ದೃಶ್ಯತೇ ಗಮ್ಯತೇ ಪುನಃ ।
ರಾಮ ವಸ್ತು ಸ್ವಭಾವೋಽಸೌ ನ ತದಾತ್ಮವಿದಾಂ ಮತಂ ॥ ೧೧ ॥

ಅನಾತ್ಮವಿದ ಮುಕ್ತೋಽಪಿ ನಭೋ ವಿಹರಣಾದಿಕಂ ।
ದ್ರವ್ಯ ಮಂತ್ರ ಕ್ರಿಯಾ ಕಾಲಶಕ್ತ್ಯಾ ಪ್ರಾಪ್ನೋತಿ ರಾಘವ ॥ ೧೨ ॥

ನಾತ್ಮಜ್ಞಸ್ಯೈಷ ವಿಷಯಃ ಆತ್ಮಜ್ಞೋ ಹ್ಯಾತ್ಮವಾನ್ಸ್ವಯಂ ।
ಆತ್ಮನಾತ್ಮನಿ ಸಂತೃಪ್ತೋ ನಾವಿದ್ಯಾಮನುಧಾವತಿ ॥ ೧೩ ॥

---

೧೧. ಅಯ್ಯ ರಾಮ, ಆಕಾಶ ಗಮನವೇ ಮೊದಲಾದ ಯಾವ ಯಾವ ವಿಚಿತ್ರವಾದ (ಅದ್ಭುತವಾದ) ಮತ್ತು ಅಸಾಧಾರಣವಾದ ಕ್ರಿಯಾಜಾಲವನ್ನು ನಾವು ಪ್ರತ್ಯಕ್ಷವಾಗಿ ಕಾಣುವೆವೋ ಅಥವಾ ಪುರಾಣೇತಿಹಾಸಗಳಿಂದ ಅರಿಯುವೆವೋ ಅದೆಲ್ಲವೂ ಆಯಾ ಯೋನಿದೇಹ ಸ್ವಭಾವವೇ ಸರಿ, ಅದೊಂದೂ ಆತ್ಮಜ್ಞಾನಿಗಳಾದ ಜೀವನ್ಮುಕ್ತರಿಗೆ ವಾಂಛಿತವಾದುದಲ್ಲವು, (ಸ್ಪೃಹಣೀಯವಾದುದಲ್ಲ. ಅಭಿಮತವಲ್ಲ (ಹಕ್ಕಿಗಳೂ-ಮಶಕಗಳೂ ಮತ್ತು ಅಚೇತನಗಳಾದ ವಿಮಾನಾದಿಯಾನಗಳೂ ಆಕಾಶದಲ್ಲಿ ಸಂಚರಿಸುವ ಶಕ್ತಿಯನ್ನುಳ್ಳವುಗಳಾಗಿವೆ. ಇಂತಹ ತುಚ್ಛ ಕಾರ್ಯದಲ್ಲಿ ಆತ್ಮಜ್ಞಾನಿಯು ಹೇಗೆ ತಾನೇ ಇಚ್ಛೆಯನ್ನು ಮಾಡುವನು ?)

೧೨. ಅಯ್ಯ ರಾಘವ, ಲೋಕದಲ್ಲಿ ಸಾಮಾನ್ಯನಾದ ಮನುಷ್ಯನೂ ಆತ್ಮಜ್ಞಾನರಹಿತನಾಗಿದ್ದರೂ ಮತ್ತು ಮುಕ್ತನಲ್ಲದಿದ್ದರೂ ಕೂಡ ಮಣಿ ಔಷಧಿ ಮುಂತಾದ ದ್ರವ್ಯಶಕ್ತಿಯಿಂದಲೂ ಮಂತ್ರಶಕ್ತಿಯಿಂದಲೂ, ಯೋಗಾಭ್ಯಾಸಾದಿ ಕ್ರಿಯಾಶಕ್ತಿಯಿಂದಲೂ (ಗ್ರೀಷ್ಮರ್ತುವಿನ ಕೊನೆಯಲ್ಲಿ. ಇರುವೆಗಳಿಗೆ ರೆಕ್ಕೆಗಳು ಹುಟ್ಟಿ ಆಕಾಶದಲ್ಲಿ ಹಾರಾಡುವಂತೆ) ಕಾಲಶಕ್ತಿಯಿಂದಲೂ ಕೆಲವು ಸಮಯಗಳಲ್ಲಿ ಗಗನ ಮಾರ್ಗದಲ್ಲಿ ವಿಹರಿಸುವಿಕೆಯೇ ಮುಂತಾದ ಅದ್ಭುತವಾದ ಕೆಲಸವನ್ನು ಮಾಡಲು ಸಮರ್ಥನಾಗುವನು.

೧೩. ಇಂತಹ ಗಗನ ವಿಹಾರಾದಿ ಕ್ರಿಯೆಯು ಅತಿ ತುಚ್ಛವಾದುದಾದ ಕಾರಣ, ಅದು ಆತ್ಮ ತತ್ತ್ವಜ್ಞನಾದ ಜೀವನ್ಮುಕ್ತನ ಅಭಿಲಾಷ ಯೋಗ್ಯವಾದುದಲ್ಲ. ಏಕೆಂದರೆ ಆತ್ಮಜ್ಞನು ವಸ್ತುತಃ ಸ್ವಯಂ ನಿತ್ಯ ಶುದ್ಧ ಮುಕ್ತ

ಯೇ ಕೇಚನ ಜಗದ್ಭಾವಾಃ ತಾನವಿದ್ಯಾಮಯಾನ್ ವಿದುಃ ।
ಕಥಂ ತೇಷು ಕಿಲಾತ್ಮಜ್ಞಃ ತ್ಯಕ್ತಾವಿದ್ಯೋ ನಿಮಜ್ಜತಿ ॥ ೧೪ ॥

ಅವಿದ್ಯಾಮಪಿ ಯೇ ಯುಕ್ತ್ಯಾ ಸಾಧಯಂತಿ ಸುಖಾತ್ಮಿಕಾಂ ।
ತೇ ಹ್ಯವಿದ್ಯಾಮಯಾ ಏವ ನತ್ವಾತ್ಮಜ್ಞಾಸ್ತಥಾ ಕ್ರಮಾಃ ॥ ೧೫ ॥

ತತ್ವಜ್ಞೋಽಪ್ಯತತ್ವಜ್ಞೋ ಯಃ ಕಾಲದ್ರವ್ಯ ಕರ್ಮಭಿಃ ।
ಯಥಾಕ್ರಮಂ ಪ್ರಯತತೇ ತಸ್ಯೋರ್ಧ್ವತ್ವಾದಿ ಸಿಧ್ಯತಿ ॥ ೧೬ ॥

ಸ್ವಭಾವನಾದ ಆತ್ಮವನ್ನು ಪಡೆದುಕೊಂಡಿರುವನು. ಆತ್ಮನಿಂದಲೇ ಆತ್ಮನಲ್ಲಿ ಸಂತೃಪ್ತನಾಗಿ ಆಪ್ತ ಸರ್ವಕಾಮನಾಗಿರುವ ಆತ್ಮಜ್ಞನು ಅವಿದ್ಯಕಗಳಾದ ಇಂತಹ ತುಚ್ಛ ಫಲಗಳಲ್ಲಿ ಆಶೆಯನ್ನಿಟ್ಟುಕೊಂಡು ಎಂದಿಗೂ ಪರಿದಾಡುವುದಿಲ್ಲ. (ಅವುಗಳ ಕಡೆಗೆ ಓಡುವುದಿಲ್ಲ.)

೧೪. ಪ್ರಾಪಂಚಿಕಗಳಾದ ಸಮಸ್ತ ಪದಾರ್ಥಗಳೂ ವ್ಯವಹಾರಗಳೂ ಕೇವಲ ಅವಿದ್ಯಕಗಳೇ (ಅವಿದ್ಯಾ ಮೂಲಕವಾಗಿ ಭ್ರಾಂತಿ ಕಲ್ಪಿತವಾದುವುಗಳೇ) ಎಂದು ಆತ್ಮಜ್ಞರು ದೃಢವಾಗಿ ತಿಳಿದಿರುವರು ಹೀಗಿರುವಾಗ ಇಂತಹ ತುಚ್ಛವಾದ ಅವಿದ್ಯಾಮಯವಾದ ಈ ಲೌಕಿಕ ವ್ಯವಹಾರ ವಿಷಯಗಳಲ್ಲಿ, ಅವಿದ್ಯೆಯನ್ನು ನಿಃಶೇಷವಾಗಿ ನಾಶಪಡಿಸಿಕೊಂಡಿರುವ ಆತ್ಮಜ್ಞನು ಹೇಗೆತಾನೇ ಮಗ್ನನಾಗುವನು?

೧೫. ಯಾರಾದರೆ ತಮ್ಮ ಪ್ರಜ್ಞಾ ನೈಪುಣ್ಯದಿಂದಲೂ ಯೋಗಾಭ್ಯಾಸಾದಿ ಶ್ರಮ ಸಹಸ್ರಗಳಿಂದಲೂ ಕೇವಲ ಅವಿದ್ಯಾಮಯವಾದ ಈ ಲೌಕಿಕ ವ್ಯವಹಾರವನ್ನೂ ಕೂಡ ಸುಖಾತ್ಮಕವನ್ನಾಗಿಯೇ ಸಾಧಿಸಿಕೊಳ್ಳುವರೋ ಅವರು ನಿಜವಾಗಿಯೂ ಅವಿದ್ಯಾಮಯರೆಂಬುದರಲ್ಲಿ ಸಂದೇಹವಿಲ್ಲ. ಆದರೆ ಆತ್ಮ ತತ್ತ್ವಜ್ಞರು ಎಂದಿಗೂ ಅಂತಹವರಲ್ಲವು.

೧೬. ಮನುಷ್ಯನು ಆತ್ಮತತ್ತ್ವಜ್ಞನಾಗಿರಲಿ ಅಥವಾ ಅತತ್ತ್ವಜ್ಞನೇ ಆಗಿರಲಿ, ಎಂತಹವನಾಗಿದ್ದರೂ ಯಾವನು ಗಗನ ಸಂಚಾರಾದಿ ಸಿದ್ಧಿಗಳನ್ನು ಅಪೇಕ್ಷಿಸಿ ಚಿರಕಾಲ ಪ್ರಯತ್ನದಿಂದ ತನ್ನ ಮನೋರಥ ಸಾಧಕಗಳಾದ ದ್ರವ್ಯ

ಆತ್ಮವಾನಿಹ ಸರ್ವಸ್ಮಾತ್ ಅತೀತೋ ವಿಗತೈಷಣಃ ।
ಆತ್ಮನ್ಯೇವ ಹಿ ಸಂತುಷ್ಟೋ ನ ಕರೋತಿ ನ ಚೇಹತೇ ॥ ೧೭ ॥

ನ ತಸ್ಯಾರ್ಥೋ ನಭೋಗತ್ಯಾ ನ ಸಿದ್ಧ್ಯಾ ನ ಚ ಭೋಗಕೈಃ ।
ನ ಪ್ರಭಾವೇಣ ನೋ ಮಾನ್ಯೈಃನಾಶಾ ಮರಣ ಜೀವಿತೈಃ ॥ ೧೮ ॥

ಗಳನ್ನು ಸಂಪಾದಿಸಿಕೊಂಡು-ಶಾಸ್ತ್ರವಿಹಿತವಾದ ಕ್ರಮವನ್ನು ಅನುಸರಿಸಿ-ಉಚಿತವಾದ ಕ್ರಿಯಾಕಲಾಪಗಳಿಂದ ಸಂತತವೂ ಪ್ರಯತ್ನ ಪಡುವನೋ ಅವನಿಗೆ ಆಕಾಶಗಮನಾದಿ ಫಲಗಳು ಸಿದ್ಧಿಸುವುವು. (ಇದರಲ್ಲಿ ಆಶ್ಚರ್ಯವೇನು)?

೧೭. ಆತ್ಮಜ್ಞಾನ ನಿಷ್ಠನಾದ ಜೀವನ್ಮುಕ್ತನಾದರೋ ಸಮಸ್ತ ಜಗತ್ತಿಗಿಂತಲೂ ಅತೀತನಾಗಿರುವನು. ಆತ್ತ ಸರ್ವಕಾಮನಾಗಿ ನಿತ್ಯತೃಪ್ತನಾಗಿರುವ ಕಾರಣ-ಅವನು ಸಮಸ್ತ ಆಶೆಗಳನ್ನೂ ಪರಿತ್ಯಜಿಸಿ ಅತ್ಯಂತ ವಿರಕ್ತನಾಗಿರುವನು. ನಿತ್ಯನಿರತಿಶಯಾನಂದೈಕರಸ ಸ್ವರೂಪ ಲಾಭದಿಂದ ಸ್ವಾತ್ಮನಲ್ಲಿಯೇ ಸರ್ವದಾ ಸಂತುಷ್ಟನಾಗಿರುವನು. ಅದು ಕಾರಣವೇ ಅವನು ಪ್ರಪಂಚದಲ್ಲಿ ಯಾವುದೊಂದನ್ನೂ ಆಶಿಸುವುದೂ ಇಲ್ಲ. ಅದಕ್ಕಾಗಿ ಪ್ರಯತ್ನ ಪಡುವುದೂ ಇಲ್ಲ.

೧೮. ಇಂತಹ ಮಹಾತ್ಮನಾದ ಜೀವನ್ಮುಕ್ತನಿಗೆ ಆಕಾಶ ಗಮನಾದಿ ಕ್ರಿಯೆಗಳಿಂದ ಯಾವ ಪ್ರಯೋಜನವೂ ಆಗಬೇಕಾಗಿಲ್ಲ. ಪರಕಾಯ ಪ್ರವೇಶಾದಿ ಇತರ ಯೋಗಸಂಸಿದ್ಧಿಗಳಿಂದಲೂ ಪ್ರಯೋಜನವೂ ಇಲ್ಲ. ಮತ್ತು ಈ ಅತ್ಯಂತ ತುಚ್ಛಗಳಾದ ಭೋಗಗಳೂ ಬೇಕಿಲ್ಲ. ಲೋಕತ್ರಯಾಧಿಪತ್ಯ, ನಿಗ್ರಹ, ಅನುಗ್ರಹ ಮುಂತಾದುವುಗಳಲ್ಲಿ ಸಮರ್ಥವಾದ ಪ್ರಭಾವದಿಂದಲೂ ಪ್ರಯೋಜನವಿಲ್ಲ. ತನ್ನ ಉತ್ಕರ್ಷ (ಗೌರವ= ಶ್ರೇಷ್ಠತೆ)ವನ್ನು ಪ್ರದರ್ಶಿಸಿ ಗರ್ವಪಡಬೇಕಾದ ಪ್ರಸಂಗವೂ ಇಲ್ಲ. ಮತ್ತು ಅವನು ದೇಹವನ್ನು ಬಿಡಬೇಕೆಂದಾಗಲಿ, ಧರಿಸಿಕೊಂಡಿರಬೇಕೆಂದಾಗಲಿ ಇಚ್ಛಿಸುವುದೂ ಇಲ್ಲ. ಅಥವಾ ಮತ್ಯಾವ ಆಶೆಯನ್ನೂ ಮಾಡುವುದೂ ಇಲ್ಲ. ಅವುಗಳಿಂದ ಅವನಿಗೆ ಆಗಬೇಕಾದ ಪ್ರಯೋಜನವೂ ಯಾವುದೂ ಇಲ್ಲ. [ನೈವತಸ್ಯ ಕೃತೇನಾರ್ಥಃ ನಾಕೃತೇನೇಹ ಕಶ್ಚನ। ನಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯ ಪಾಶ್ರಯಃ ॥ ಗೀತಾ ೩-೧೮]

ನಿತ್ಯತೃಪ್ತಃ ಪ್ರಶಾಂತಾತ್ಮಾ ವೀತರಾಗೋ ವಿವಾಸನಃ ।
ಆಕಾಶ ಸದೃಶಾಕಾರಃತಜ್ಞ ಆತ್ಮನಿ ತಿಷ್ಠತಿ ॥ ೧೯ ॥

ಅಶಂಕಿತೋಪಯಾತೇನ ದುಃಖೇನ ಚ ಸುಖೇನ ಚ ।
ತೃಪ್ಯತ್ಯಪಗತಾಸಂಗೋ ಜೀವೇನ ಮರಣೇನ ಚ ॥ ೨೦ ॥

ಸಮುದ್ರಃ ಸರಿತೇವಾಂತಃ ಕ್ರಮ ಸಂಪ್ರಾಪ್ತ ವಸ್ತುನಾ ।
ಸಮೇನ ವಿಷಮೇಣಾಪಿ ತಿಷ್ಠತ್ಯಾತ್ಮಾನ ಮರ್ಚಯನ್ ॥ ೨೧ ॥

---

೧೯. ಆತ್ಮತತ್ತ್ವಜ್ಞನು ನಿತ್ಯತೃಪ್ತನಾಗಿಯೂ ಸರ್ವಸಂತಾಪ ವಿನಿರ್ಮುಕ್ತನಾದ ಪ್ರಶಾಂತ ಸ್ವಭಾವನಾಗಿಯೂ-ರಾಗದ್ವೇಷಾದಿ ಸಮಸ್ತ ವಿಕಾರರಹಿತನಾಗಿಯೂ-ಅವಿದ್ಯಾ ಕಾಮಕರ್ಮಾದಿ ಸಕಲ ವಾಸನಾಶೂನ್ಯನಾಗಿಯೂ ಆಕಾಶದಂತೆ ಸರ್ವಗತವಾದ ಅಪರಿಚ್ಛಿನ್ನಾಕಾರನಾಗಿಯೂ ಸ್ವಾತ್ಮಸ್ವರೂಪದಲ್ಲಿಯೇ ನಿಶ್ಚಲನಾಗಿ ಸರ್ವದಾ ಸ್ವಸ್ಥನಾಗಿರುವನು.

೨೦. ಸ್ವಪ್ರಯತ್ನವಿಲ್ಲದೆಯೇ ಯಾದೃಚ್ಛಿಕವಾಗಿ ತಾನಾಗಿ ಸಂಪ್ರಾಪ್ತವಾದ ಸುಖದಿಂದಲೂ ದುಃಖದಿಂದಲೂ ಅಥವಾ ಜೀವನದಿಂದ (ಬದುಕು)ಲೂ ಮರಣದಿಂದಲೂ–ಹೀಗೆ ಏನೇ ಬಂದರೂ-ಅವೊಂದರಿಂದಲೂ ಸ್ವಲ್ಪವೂ ವಿಕಾರಗೊಳ್ಳದೆಯೂ ಸರ್ವತ್ರ ಅನಾಸಕ್ತನಾಗಿ ಸ್ವಾಭಾವಿಕವಾದ ತೃಪ್ತಿಯನ್ನು ಬಿಡದೆಯೂ ಪ್ರಶಾಂತನಾಗಿರುವನು.

೨೧. ನದಿಯು ಪ್ರವಾಹವು ಕಸ, ಕಡ್ಡಿ ಮುಂತಾದ ಯಾವುದೋ ವಸ್ತುಗಳನ್ನು ಕೊಚ್ಚಿಕೊಂಡು ಬಂದು ತನ್ನೊಳಗೆ ತುಂಬಿಸಿದರೂ ಸಮುದ್ರವು ಹೇಗೆ ಸ್ವಲ್ಪವೂ ಕ್ಷೋಭೆಗೊಳ್ಳದೆ, ಏಕರೀತಿಯಾಗಿರುವುದೋ ಹಾಗೆ-ಆತ್ಮಜ್ಞನು ತನಗೆ ಅನುಕೂಲವಾದುದಾದರೂ ಅಥವಾ ಪ್ರತಿಕೂಲವಾದುದಾದರೂ ಪ್ರಾರಬ್ಧಕರ್ಮಾನುಗುಣವಾಗಿ ಕ್ರಮಪ್ರಾಪ್ತವಾದ ಭೋಗ್ಯವಸ್ತುಗಳಿಂದ ಹಿಗ್ಗದೆಯೂ ಕುಗ್ಗದೆಯೂ ಸರ್ವಕಾಲಗಳಲ್ಲಿಯೂ ಸಮವರ್ತಿಯಾಗಿ ಅಖಂಡಾಕಾರ ವೃತ್ತಿಗಳೆಂಬ ಪುಷ್ಪಗಳಿಂದ ಆತ್ಮಪೂಜಾಸಕ್ತನಾಗಿ ಸ್ಥೈರ್ಯದಿಂದಿರುವನು.

ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ ।
ನ ಚಾಸ್ಯ ಸರ್ವ ಭೂತೇಷು ಕಶ್ಚಿದರ್ಥವ್ಯಪಾಶ್ರಯಃ ॥ ೨೨ ॥

ಯಸ್ತು ವಾ ಭಾವಿತಾತ್ಮಾಪಿ ಸಿದ್ಧಿ ಜಾಲಾನಿ ವಾಂಛತಿ ।
ಸ ಸಿದ್ಧಿಸಾಧಕೈರ್ದ್ರವ್ಯೈಃ ತಾನಿ ಸಾಧಯತಿ ಕ್ರಮಾತ್ ॥ ೨೩ ॥

ಸಿದ್ಧ್ಯತೀತ್ಥಮಿದಂ ಯುಕ್ತ್ಯೈವೇತ್ಯಯಂ ನಿಯತೇಃ ಕ್ರಮಃ ।
ತ್ರ್ಯಕ್ಷಾದಿಭಿಃ ಸುರವರೈಃ ವ್ಯರ್ಥೀ ಕರ್ತುಂ ನ ಶಕ್ಯತೇ ॥ ೨೪ ॥

---

೨೨. ಆತ್ಮಜ್ಞನಿಗೆ ಕರಣೀಯವಾದ ಕರ್ತವ್ಯವೇ ಇಲ್ಲವು. ಹೀಗೆ ಆತ್ಮಾರಾಮನಾಗಿ ನಿತ್ಯತೃಪ್ತನಾದ ಜ್ಞಾನನಿಷ್ಠನಿಗೆ ಕರ್ಮವನ್ನು ಮಾಡಿದುದರಿಂದ ಯಾವ ಪ್ರಯೋಜನವೂ ಇಲ್ಲ. ಕರ್ಮವನ್ನು ಮಾಡದೆ ಇರುವುದರಿಂದಲೂ ಯಾವುದೊಂದು ಪ್ರತ್ಯವಾಯ ಪ್ರಾಪ್ತಿರೂಪವಾದ ಹಾನಿಯೂ ಇಲ್ಲವೇ ಇಲ್ಲ. ಮತ್ತು ಬ್ರಹ್ಮಾದಿ ಸ್ಥಾವರಪರ್ಯಂತವಾದ ಸರ್ವಭೂತಗಳೊಳಗೆ ಯಾವುದೊಂದು ಭೂತವಿಶೇಷವನ್ನೂ ಆಶ್ರಯಿಸಿ ಸಾಧಿಸಬೇಕಾಗಿರುವ ಯಾವ ಪ್ರಯೋಜನವೂ ಸುತರಾಂ ಇಲ್ಲವು: (ಅರ್ಥವ್ಯಪಾಶ್ರಯಃ= ಪ್ರಯೋಜನ ನಿಮಿತ್ತವಾದ ಉಪಜೀವನವೆಂದರ್ಥ.)

[ಈ ಶ್ಲೋಕವು ಸ್ವಲ್ಪವೂ ಹೆಚ್ಚುಕಡಿಮೆಯಿಲ್ಲದೆ ಇಲ್ಲಿರುವಂತೆಯೇ ಭಗವದ್ಗೀತೆಯ ಮೂರನೆಯ ಅಧ್ಯಾಯದಲ್ಲಿ ೧೮ನೆಯ ಶ್ಲೋಕವಾಗಿ ಭಗವಂತನಿಂದ ಉಪದಿಷ್ಟವಾಗಿದೆ ನೋಡಿ.]

೨೩. ಅಥವಾ-ಯಾವನಾದರೆ-ಆಕಾಶ ಗಮನಾದಿ ನಾನಾ ಯೋಗ ಸಂಸಿದ್ಧಿಗಳನ್ನು ಪಡೆಯಬೇಕೆಂದು ಅಪೇಕ್ಷಿಸುವನೋ-ಅವನು ಆತ್ಮಜ್ಞಾನಲೇಶ ಶೂನ್ಯನಾಗಿದ್ದರೂ ತನಗೆ ಅಭಿಮತಗಳಾದ ಯೋಗ ಸಿದ್ಧಿಗಳನ್ನು ಸಾಧಿಸಿಕೊಡತಕ್ಕುವುಗಳಾದ ಮಣಿಮಂತ್ರಾದಿ ಸಾಧನ ದ್ರವ್ಯಗಳ ಸಹಾಯದಿಂದ ಕ್ರಮೇಣ ಆ ಸಿದ್ಧಿಗಳನ್ನು ಸಾಧಿಸಿಕೊಳ್ಳುವನು.

೨೪. "ಮಣಿ ಮಂತ್ರಾದಿ ಯುಕ್ತಿಯ ಸಹಾಯದಿಂದಲೇ ಈ ಆಕಾಶ

ಸ್ವಭಾವ ಏಷ ವಸ್ತೂನಾಂ ಸ್ವತಃ ಸಿದ್ಧಿರ್ಹಿ ನಾನ್ಯತಃ ।
ನಿಯತಿಂ ನ ಜಹಾತ್ಯೇವ ಶಶಾಂಕ ಇವ ಶೀತತಾಂ ॥ ೨೫ ॥

ಸರ್ವಜ್ಞೋಽಪಿ ಬಹುಜ್ಞೋಽಪಿ ಮಾಧವೋಽಪಿ ಹರೋಽಪಿ ಚ ।
ಅನ್ಯಥಾ ನಿಯತಿಂ ಕರ್ತುಂ ನ ಶಕ್ತಃ ಕಶ್ಚಿದೇವ ಹಿ ॥ ೨೬ ॥

ಗಮನಾದಿ ಸಿದ್ಧಿಯು-ಈ ಪ್ರಕಾರವಾಗಿ ಸಿದ್ಧಿಸುವುದು." ಎಂಬುದಾಗಿ ಆಯಾ ಶಾಸ್ತ್ರ ಪ್ರಸಿದ್ಧವಾದ ನಿಯತಿಯು (ನಿಯಮದ) ಕ್ರಮವು ತಪ್ಪದೆ ಸಂಭವಿಸುತ್ತಲೇ ಇರುವುದು. ಇದನ್ನು ತಪ್ಪಿಸಿ ಅಥವಾ ಬದಲಾಯಿಸಿ ವ್ಯರ್ಥಮಾಡುವುದಕ್ಕೆ ಆಯಾ ನಿಯಮ ಕರ್ತೃಗಳಾದ ಮುಕ್ಕಣ್ಣನೇ ಮೊದಲಾದ ದೇವಾಧಿ ದೇವತೆಗಳಿಗೂ ಶಕ್ತಿಯಿಲ್ಲವು.

೨೫. ಗಗನಚಾರಿಗಳಾದ ದೇವಾದಿಗಳು ಆಕಾಶ ಗಮನಾದಿ ಕ್ರಿಯಾ ವೈಚಿತ್ರ್ಯವನ್ನು ಪಡೆದಿರುವುದು ಅವರ ಸ್ವಭಾವವು-ಅದು ಸ್ವತಃ ಸಿದ್ಧವು. ಬೇರೆ ಇನ್ನಾವ ವಸ್ತುವಿನಿಂದಲಾಗಲಿ ಕಾರಣದಿಂದಲಾಗಲಿ ಸಂಪಾದಿಸಿಕೊಂಡುದಲ್ಲ. ಆದುದರಿಂದಲೇ ಅದು ಯಾವಜ್ಜೀವವೂ ಅವರಿಗೆ ಚಿರಸ್ಥಾಯಿಯಾಗಿರುವುದು. ಹೀಗೆ ವಸ್ತುಗಳ ಈ ಸ್ವಭಾವವು ಅವುಗಳಿಗೆ ಜನ್ಮತಃ ತಾನಾಗಿಯೇ ಉಂಟಾಗಿರುವ ಸಿದ್ಧಿಯು. ಅದು ಬೇರ ಇನ್ನಾವುದರಿಂದಲೂ ಉಂಟಾದುದಲ್ಲ. ಚಂದ್ರನು ಸ್ವಭಾವವಾದ ಶೈತ್ಯವನ್ನು ಎಂದಿಗೂ ಬಿಡದಿರುವಂತೆಯೇ ಸಕಲ ವಸ್ತುಗಳೂ ಸ್ವಾಭಾವಿಕವಾದ ನಿಯತಿಯನ್ನು ಎಂದೆಂದಿಗೂ ಬಿಡುವುದೇ ಇಲ್ಲ.

೨೬. ಸಮಸ್ತ ವಿಷಯಗಳನ್ನೂ ಬಲ್ಲವನಾದ ಸರ್ವಜ್ಞನೇ ಆಗಿದ್ದರೂ-ಅನೇಕ ಶಾಸ್ತ್ರಗಳಲ್ಲಿ ಪಾರಂಗತನಾದ ಬಹುಶ್ರುತನಾಗಿದ್ದರೂ ಲಕ್ಷ್ಮೀಪತಿಯಾದ ನಾರಾಯಣನೇ ಆಗಿದ್ದರೂ ಅಥವಾ ಸಾಕ್ಷಾತ್ ಪರಶಿವನೇ ಆಗಿದ್ದರೂ-ನಿಯತಿಯನ್ನು (ವಸ್ತು ಸ್ವಭಾವವನ್ನು) ಬದಲಾಯಿಸುವುದಕ್ಕೆ ಯಾರೊಬ್ಬರಿಗೂ ಸರ್ವಥಾ ನಿಜವಾಗಿಯೂ ಶಕ್ತಿಯಿಲ್ಲವೇ ಇಲ್ಲವು.

ದ್ರವ್ಯಕಾಲ ಕ್ರಿಯಾ ಮಂತ್ರ ಪ್ರಯೋಗಾಣಾಂ ಸ್ವಭಾವಜಾಃ ।
ಏತಾಸ್ತಾಃ ಶಕ್ತಯೋ ರಾಮ ಯದ್ವ್ಯೋಮಗಮನಾದಿಕಂ ॥ ೨೭ ॥

ಯಥಾ ವಿಷಾಣಿ ನಿಘ್ನಂತಿ ಮದಯಂತಿ ಮಧೂನಿ ಚ ।
ವಮಯಂತಿ ಚ ಶುಕ್ತಾನಿ ಮದನಾನಿ ಫಲಾನಿ ಚ ॥ ೨೮ ॥

ತಥಾ ಸ್ವಭಾವವಶತೋ ದ್ರವ್ಯಕಾಲ ಕ್ರಿಯಾಕ್ರಮಾಃ ।
ನಿಯತಂ ಸಾಧಯಂತ್ಯಾಶು ಪ್ರಯೋಗಂ ಯುಕ್ತಿ ಯೋಜಿತಾಃ ॥ ೨೯ ॥

ಏತಸ್ಮಾತ್ಸಮತೀತಸ್ಯ ತ್ಯಕ್ತಾವಿದ್ಯಸ್ಯ ರಾಘವ ।
ಆತ್ಮಜ್ಞಾನಸ್ಯ ನಾಸ್ತ್ಯತ್ರ ಕರ್ತೃತಾಽಕರ್ತೃತಾನಘ ॥ ೩೦ ॥

---

೨೭. ಅಯ್ಯ ರಾಮ, ಆಕಾಶ ಗಮನವೇ ಮೊದಲಾದ ಕ್ರಿಯಾ ವೈಚಿತ್ರ್ಯವು ಯಾವುದು ಯಾವುದುಂಟೋ ಅದದೆಲ್ಲವೂ ಮಣ್ಯಾದಿ ದ್ರವ್ಯಗಳ, ಕಾಲಪರಿಪಾಕ ವಿಶೇಷದ, ಯೋಗಾಭ್ಯಾಸಾದಿ ಕ್ರಿಯೆಗಳ, ಅಥವಾ ಮಂತ್ರ ಪ್ರಯೋಗಗಳ ಸ್ವಭಾವ ಜನ್ಯವಾದ (ಸಹಜ) ಶಕ್ತಿಗಳೇ ಆಗಿವೆ.

೨೮-೨೯. ವಿಷಹಾರಿಗಳಾದ ಮಣಿ, ಔಷಧಿ ಮೂಲಿಕೆ ಮುಂತಾದ ದ್ರವ್ಯಗಳ ಮತ್ತು ಮಂತ್ರಗಳ ಶಕ್ತಿಗಳು ವಿಷಗಳನ್ನು ಪರಿಹಾರ ಮಾಡುವಂತೆಯೂ-ಮದ್ಯಗಳು ಮದ್ಯಪಾನ ಮಾಡಿದವರಿಗೆ ಮದವನ್ನು (ಬುದ್ಧಿ ಭ್ರಮಣೆಯನ್ನು) ಉಂಟುಮಾಡುವಂತೆಯೂ-ಗಂಧಕವೆಂಬ ಅಮ್ಲದ ರಸವಿಶೇಷಗಳೂ ಮತ್ತೂ ಮದನಗಳೆಂಬ ಫಲಗಳೂ ಅವುಗಳನ್ನು ಉಪಭೋಗಿಸಿದ ಪ್ರಾಣಿಗಳಿಗೆ ವಾಂತಿಯನ್ನುಂಟುಮಾಡುವಂತೆಯೂ-ಮಣ್ಯಾದಿ ದ್ರವ್ಯಗಳ, ಕಾಲ ವಿಶೇಷಗಳ, ಯೋಗಾಭ್ಯಾಸಾದಿ ಕ್ರಿಯೆಗಳ ಮತ್ತು ಮಂತ್ರ ಪ್ರಯೋಗಾದಿಗಳ ಕ್ರಮಗಳು ಪ್ರಯೋಗ ಕುಶಲರಾದ ಜನರಿಂದ ಯಥಾವಿಧಿಯಾಗಿ ಯುಕ್ತಿಯುಕ್ತವಾದ ರೀತಿಯಲ್ಲಿ ಪ್ರಯೋಗಿಸಲ್ಪಟ್ಟದ್ದೇ ಆದರೆ ಅವು ಸ್ವಾಭಾವಿಕವಾದ ನಿಯತಿ ವಶದಿಂದ ಅತ್ಯವಶ್ಯವಾಗಿ (ನಿಸ್ಸಂದೇಹವಾಗಿ) ಬೇಗನೆ ಆಯಾ ಸಿದ್ಧಿ ಸಮೂಹಗಳನ್ನು ಸಾಧಿಸಿಕೊಡುವುವು.

೩೦ ಅಯ್ಯ ದೋಷರಹಿತನಾದ ರಾಘವ, ಆತ್ಮಜ್ಞಾನವು ಪೂರ್ವೋಕ್ತಗಳಾದ ದ್ರವ್ಯಕಾಲ ಕ್ರಿಯಾಕರ್ಮಗಳೆಂಬ ಸಮಸ್ತ ಅವಿದ್ಯಾ ವಿಷಯಗಳನ್ನೂ

ದ್ರವ್ಯ ದೇಶಕ್ರಿಯಾಕಾಲ ಯುಕ್ತಯಃ ಸಾಧು ಸಂವಿದಃ ।
ಪರಮಾತ್ಮ ಪದಪ್ರಾಪ್ತೌ ನೋಪಕುರ್ವಂತಿ ಕಾಶ್ಚನ ॥ ೩೧ ॥

ಯಸ್ಯೇಚ್ಛಾ ವಿದ್ಯತೇ ಕಾಚಿತ್ಸ ಸಿದ್ಧಿಂ ಸಾಧಯತ್ಯಲಂ ।
ಆತ್ಮಜ್ಞಸ್ಯ ತು ಪೂರ್ಣಸ್ಯ ನೇಚ್ಛಾ ಸಂಭವತಿ ಕ್ವಚಿತ್ ॥ ೩೨ ॥

ಸರ್ವೇಚ್ಛಾಜಾಲ ಸಂಶಾಂತಾ ವಾತ್ಮಲಾಭೋದಯೋ ಹಿ ಯಃ ।
ತದ್ವಿರುದ್ಧಾ ಕಥಂ ಕಸ್ಮಾದಿಚ್ಛಾ ಸಂಜಾಯತೇಽನಘ ॥ ೩೩ ॥

ಸಂಪೂರ್ಣವಾಗಿ ಅತಿಕ್ರಮಿಸಿರುವುದು; ಮತ್ತು ಅವಿದ್ಯೆಯನ್ನು ನಿಃಶೇಷವಾಗಿ ಬಾಧೆಗೊಳ್ಳಿಸಿ ನಾಶಪಡಿಸಿಕೊಂಡಿರುವುದು. ಹೀಗೆ ಅವಿದ್ಯಾ ಸಂಪರ್ಕವೇ ಸುತರಾಂ ಇಲ್ಲದಿರುವ ಆತ್ಮಜ್ಞಾನವು ಅವಿದ್ಯಾ ವಿಷಯಗಳಾದ ಆಕಾಶ ಗಮನಾದಿ ಸಿದ್ಧಿಸಮು ದಾಯಗಳನ್ನು ಸಾಧಿಸಿಕೊಡುವ ವಿಷಯದಲ್ಲಿ ಎಂದಿಗೂ ಕಾರಣವಾಗುವುದೂ ಇಲ್ಲ ಅಥವಾ ವಿರೋಧಿಯಾಗುವುದೂ ಇಲ್ಲವೆಂದು ತಿಳಿ.

೩೧. ಹಾಗೆಯೇ-ತತ್ತ್ವಜ್ಞಾನದಿಂದ ಸ್ವಾತ್ಮಸ್ವರೂಪ ಸ್ಥಿತಿಯೆಂಬ ಪರಮ ಪದ ಪ್ರಾಪ್ತಿಯುಂಟಾಗುವ ವಿಷಯದಲ್ಲಿಯೂ-ಈ ಪೂರ್ವೋಕ್ತ ದ್ರವ್ಯ ಕಾಲದೇಶ ಕ್ರಿಯಾಶಕ್ತಿಗಳೂ ಯಾವುದೊಂದೂ ಹೇಗೂ ಸ್ವಲ್ಪವೂ ಉಪಕಾರಕವಾಗಿಲ್ಲವು.

೩೨. ಯಾವನಿಗೆ ಕೇವಲ ಅವಿದ್ಯಾ ವಿಷಯಗಳಾದ ಪ್ರಾಪಂಚಿಕ ಆಕಾಶ ಗಮನಾದಿ ಸಿದ್ಧಿಗಳೆಂಬ ಕ್ರಿಯಾವೈಚಿತ್ರ್ಯವನ್ನು ಸಂಪಾದಿಸಬೇಕೆಂಬ ಇಚ್ಛೆಯು ಮನಸ್ಸಿನಲ್ಲಿ ಉದಯಿಸುವುದೋ ಅವನು ತನಗೆ ಅಭಿಲಷಿತವಾದ ಸಿದ್ಧಿಯನ್ನು ಹೇಗೋ ಪ್ರಯತ್ನಪಟ್ಟು ಸಮಗ್ರವಾಗಿ ಸಾಧಿಸಿಕೊಳ್ಳುವನು. ಆತ್ಮಜ್ಞನಾದರೋ ಪರಿಪೂರ್ಣ ಸರ್ವಕಾಮನಾಗಿ ನಿತ್ಯತೃಪ್ತನಾಗಿರುವ ಕಾರಣ-ಅವನಿಗೆ ಯಾವೊಂದು ವಿಷಯದಲ್ಲಿಯೂ ಎಂದಿಗೂ ಇಚ್ಛೆಯೇ ಸಂಭವಿಸುವುದಿಲ್ಲ.

೩೩. ಅಯ್ಯ ಅನಘನಾದ ರಾಮ, ಸಮಸ್ತ ವಿಧಗಳಾದ ಐಹಿಕಾಮುಷ್ಮಿಕ ಫಲಭೋಗಾಪೇಕ್ಷೆಗಳು ಸಂಪೂರ್ಣವಾಗಿ ಶಾಂತವಾದ ಬಳಿಕಲೇ ಸರ್ವಕಾಮನಾ ರಹಿತನಾದ ವಿರಕ್ತನಿಗೆ ತತ್ತ್ವಜ್ಞಾನದಿಂದ ಸ್ವಾತ್ಮಲಾಭವು (ಮೋಕ್ಷವು) ಆವಿರ್ಭವಿ ಸುವುದು. ಹೀಗಿರುವಲ್ಲಿ ಇಂತಹ ಆತ್ಮಲಾಭವಾದ ಅನಂತರವೂ ಜ್ಞಾನನಿಷ್ಠನಿಗೆ ಅದಕ್ಕೆ ವಿರುದ್ಧವಾದ ಇಚ್ಛೆಯು ಹೇಗೆ ಯಾವ ಕಾರಣದಿಂದ ಹುಟ್ಟುವುದು ?

ಯಥೋದೇತಿ ಚ ಯಸ್ಯೇಚ್ಛಾ ಸ ತಯಾ ಯತತೇ ತಥಾ ।
ಯಥಾಕಾಲಂ ತದಾಪ್ನೋತಿ ಜ್ಞೋ ವಾಪ್ಯಜ್ಞತರೋಽಪಿ ವಾ ॥ ೩೪ ॥

ವೀತಹವ್ಯೇನ ಯತಿತಂ ನೋ ಜ್ಞಾನೇಚ್ಛೇನ ಕಿಂಚನ ।
ಜ್ಞಾನೇಚ್ಛೇನಾಶು ಯತಿತಂ ಪ್ರೋತ್ಥಿತೋಽಸೌ ಯಥಾ ವನೇ ॥ ೩೫ ॥

ಏವಂ ಕಾಲಕ್ರಿಯಾ ಕರ್ಮ ದ್ರವ್ಯ ಯುಕ್ತಿ ಸ್ವಭಾವಜಾಃ ।
ಯಥೇಚ್ಛಮೇವ ಸಿಧ್ಯಂತಿ ಸಿದ್ಧಯಃ ಸ್ವಾಃ ಕ್ರಮಾರ್ಜಿತಾಃ ॥ ೩೬ ॥

---

೩೪. ಈ ಪ್ರಪಂಚದಲ್ಲಿ ಯಾವ ಮನುಷ್ಯನಿಗೆ ಯಾವ ಪ್ರಕಾರವಾಗಿ ಯಾವ ಸಿದ್ಧಿ ಮುಂತಾದ ವಿಷಯದಲ್ಲಿ ಇಚ್ಛೆಯು ಉದಯಿಸುವುದೋ ಆ ಮನುಷ್ಯನು ಅದೇ ಪ್ರಕಾರವಾಗಿ ತನಗೆ ಅಭಿಮತವಾದ ಸಿದ್ಧಿ ಸಾಧನೆಯ ವಿಷಯದಲ್ಲಿ ತನ್ನ ಇಚ್ಛಾನುಗುಣವಾಗಿಯೇ ಪ್ರಯತ್ನ ಪಡುವನು. ಅನಂತರ ಕಾಲ ಪರಿಪಾಕ ವಶದಿಂದ ಸ್ವಪ್ರಯತ್ನಾನುರೂಪವಾದ ಫಲ ಸಿದ್ಧಿಯನ್ನೂ ಹೊಂದುವನು. ಅವನು ಆತ್ಮ ತತ್ತ್ವಜ್ಞನಾದರೂ ಆಗಿರಬಹುದು. ಅಥವಾ ಆತ್ಮ ಜ್ಞಾನ ಲೇಶವೂ ಇಲ್ಲದ ಅತ್ಯಂತ ಮೂಢನಾಗಿದ್ದರೂ ಇರಬಹುದು. ಈ ವಿಷಯದಲ್ಲಿ ಜ್ಞಾನಿಗೂ, ಅಜ್ಞಾನಿಗೂ ಯಾವ ವೈಶಿಷ್ಟ್ಯವೂ ಇಲ್ಲವು. ಹೀಗೆ, ಒಂದುವೇಳೆ ಜ್ಞಾನಿಯೂ ಹೇಗೋ ಕಾರಣಾಂತರಗಳಿಂದ ಅನಾಸಕ್ತನಾಗಿಯೇ ಪ್ರಾಪಂಚಿಕಗಳಾದ ಸಿದ್ಧಿ ಸಾಧನಗಳಲ್ಲಿ ವ್ಯಾಪಾರ (ಪ್ರಯತ್ನ) ಮಾಡಿದರೆ ಅವನಿಗೂ ಅಜ್ಞಜನರಿಗೆ ಹೇಗೋ ಹಾಗೆ ಸಕಲ ಸಿದ್ಧಿಗಳೂ ಪ್ರಾಪ್ತವಾಗುವುದರಲ್ಲಿ ಸಂಶಯವಿಲ್ಲ

೩೫. ಆ ವೀತಹವ್ಯ ಮುನಿಯಾದರೋ ಸ್ವಾತ್ಮತತ್ತ್ವ ಜ್ಞಾನದಲ್ಲಿ ಇಚ್ಛೆಯುಳ್ಳವನಾಗಿದ್ದ ಕಾರಣ, ಜ್ಞಾನೇತರಗಳಾದ ಆಕಾಶ ಗಮನಾದಿ ಸಿದ್ಧಿಗಳಲ್ಲಿ ಇಚ್ಛೆಯುಳ್ಳವನಾಗಿರಲಿಲ್ಲ. ಅದು ಕಾರಣವೇ ಅವನು ಸಿದ್ಧಿಗಳಿಗಾಗಿ ಪ್ರಯತ್ನಿಸಲೂ ಇಲ್ಲ. ಅವನು ಮುಮುಕ್ಷುವಾಗಿ ತತ್ತ್ವ ಜ್ಞಾನೇಚ್ಛೆಯಿಂದ ಮಾತ್ರವೇ ವಿವೇಕ ವೈರಾಗ್ಯಾಭ್ಯಾಸ ಮೊದಲಾದ ಪ್ರಯತ್ನಗಳನ್ನು ಮಾಡಿದನು. ಕೂಡಲೇ ಅವನ ಪ್ರಯತ್ನಾನುಗುಣವಾಗಿ ತತ್ತ್ವಜ್ಞಾನವನ್ನೂ ಪಡೆದನು. ಅವನು ವಿಂಧ್ಯ ಪರ್ವತದ ಕಾಡಿನಲ್ಲಿ ಜ್ಞಾನಾಭ್ಯಾಸಕ್ಕೋಸ್ಕರ ಹೇಗೆ ಉದ್ಯುಕ್ತನಾದನೆಂಬುದನ್ನು ಮೊದಲೇ ನಾನು ನಿನಗೋಸ್ಕರ ವರ್ಣಿಸಿರುವೆನು.

೩೬. ಹೀಗೆ, ನಿಯತವಾದ ದೇಶ, ಕಾಲ, ಕ್ರಿಯಾ ಮಂತ್ರ, ಮಣ್ಯಾದಿ ದ್ರವ್ಯ ಮುಂತಾದವುಗಳ ಪ್ರಯೋಗ ವಶದಿಂದ ಆಯಾ ವಸ್ತು ಸ್ವಭಾವಜನ್ಯಗಳಾದ

ಯಾಃ ಫಲಾವಲಯೋ ಯೇನ ಸಂಪ್ರಾಪ್ತಾಃ ಸಿದ್ಧಿನಾಮಿಕಾಃ ।
ತಾಸ್ತೇನಾಧಿಗತಾ ರಾಮ ನಿಜಾತ್ ಪ್ರಯತನದ್ರುಮಾತ್ ॥ ೩೭ ॥

ಮಹತಾಂ ನಿತ್ಯ ತೃಪ್ತಾನಾಂ ತಜ್ಞಾನಾಂ ಭಾವಿತಾತ್ಮನಾಂ ।
ಈಹಿತಂ ಸಂಪ್ರಯಾತಾನಾಂ ನೋಪಕುರ್ವಂತಿ ಸಿದ್ಧಯಃ ॥ ೩೮ ॥

ಶ್ರೀ ರಾಮ ಉವಾಚ :—
ಅಯಂ ಮೇ ಸಂಶಯೋ ಬ್ರಹ್ಮನ್ ವೀತಹವ್ಯಸ್ಯ ಸಾ ತನುಃ ।
ಕ್ರವ್ಯಾದೈರ್ನ ಕಥಂ ಭುಕ್ತಾ ಕಥಂ ಕ್ಲಿನ್ನಾ ನ ಭೂತಲೇ ॥ ೩೯ ॥

ಆಕಾಶ ಗಮನಾದಿ ನಾನಾ ಸಿದ್ಧಿ ಜಾಲಗಳು ಆಯಾ ಜನಗಳ ಇಚ್ಛಾನುಸಾರವಾಗಿ ಅವರವರ ಪ್ರಯತ್ನಕ್ಕೆ ತಕ್ಕಂತೆ ಕಾಲಕ್ರಮದಲ್ಲಿ ಸಂಪಾದಿಸಲ್ಪಟ್ಟು ಅತ್ಯವಶ್ಯವಾಗಿ ತಾನಾಗಿಯೇ ಸಿದ್ಧಿಸುವುವು.

೩೭. ಅಯ್ಯ ರಾಮ, ವಿವಿಧ ಸಿದ್ಧಿಗಳೆಂಬ ಹೆಸರುಳ್ಳ ಯಾವ ಯಾವ ಫಲ ಸಮೂಹಗಳನ್ನು ಯಾರು ಯಾರು ಪಡೆದಿರುವರಾಗಿ ನಮಗೆ ಕಾಣುತ್ತಿರುವರೋ, ಅವರವರು ಆಯಾ ಫಲಗಳನ್ನು ಸ್ವಪ್ರಯತ್ನವೆಂಬ ವೃಕ್ಷದ ದೆಸೆಯಿಂದಲೇ ಪಡೆದಿರುವರೆಂದು ತಿಳಿ.

೩೮. ಅಖಂಡಾಕಾರ ವೃತ್ತಿಯಿಂದ ಆತ್ಮತತ್ತ್ವ ಸಾಕ್ಷಾತ್ಕಾರವನ್ನು ಮಾಡಿರುವ ಮಹಾತ್ಮರಾದ ಆತ್ಮಜ್ಞರು ಪರ್ಯಾಪ್ತ ಸರ್ವಕಾಮರಾಗಿರುವ ಕಾರಣ ನಿತ್ಯ ತೃಪ್ತರು. ಸರ್ವಾಭಿಲಷಿತವಾದ ಮತ್ತು ಪರಮ ಪ್ರೇಮಾಸ್ಪದವಾದ ನಿತ್ಯ ನಿರತಿಶಯಾತ್ಮಾನಂದವನ್ನು ಅವಿಚ್ಛಿನ್ನವಾಗಿ ಅನುಭವಿಸತಕ್ಕವರು. ಇಂತಹ ಜ್ಞಾನಿಗಳಿಗೆ ಈ ಅವಿದ್ಯಕಗಳಾದ ಆಕಾಶ ಗಮನಾದಿ ಸಿದ್ಧಿಗಳು ಯಾವುವೂ ಎಂದಿಗೂ ಎಳ್ಳಷ್ಟೂ ಉಪಯೋಗಕಾರಿಗಳಲ್ಲವೇ ಅಲ್ಲವು.

ಶ್ರೀರಾಮನು ಕೇಳಿದನು :—

೩೯. ಸ್ವಾಮಿ ಬ್ರಹ್ಮರ್ಷಿಗಳೇ, ನನಗೆ ಈಗ ಈ ಬೇರೊಂದು ಸಂಶಯವು ಅಂಕುರಿಸಿರುವುದು. ಆ ವೀತಹವ್ಯ ಮುನಿಯ ಆ ಶರೀರವನ್ನು ವಿಂಧ್ಯ ಪರ್ವತದ ಕಾಡಿನಲ್ಲಿ ವಾಸವಾಗಿದ್ದ ಮಾಂಸಾಹಾರಿಗಳಾದ ಸಿಂಹ ವ್ಯಾಘ್ರಾದಿ ಕ್ರೂರ ಜಂತುಗಳು ತಿನ್ನದೆಯೇ ಇದ್ದುದು ಹೇಗೆ? ಮತ್ತು ಅದು ನೆಲದೊಳಗೆ ಒಂದು ಬಿರುಕಿ

ತಥೈವ ವೀತಹವ್ಯೋಽಸೌ ಕಥಂ ವನಗತಃ ಪ್ರಭೋ ।
ವಿದೇಹ ಮುಕ್ತತಾಂ ಶೀಘ್ರಂ ಯಥಾವದಿತಿ ಮೇ ವದ ॥ ೪೦ ॥

ಶ್ರೀ ವಸಿಷ್ಠ ಉವಾಚ:—

ಯಾ ಸಂವಿದ್ಮಲಿತಾ ಸಾಧೋ ವಾಸನಾಮಲತಂತುನಾ ।
ಸುಖದುಃಖ ದಶಾದಾಹ ಭಾಗಿನೀ ಭವತೀಹ ಸಾ ॥ ೪೧ ॥

ನಿರ್ಮುಕ್ತವಾಸನಾ ಶುದ್ಧ ಸಂವಿನ್ಮಾತ್ರಮಯೀ ತು ಸಾ ।
ತನುಸ್ತಿಷ್ಠತಿ ತಚ್ಛೇದೇ ಶಕ್ತಾ ನೇಹ ಹಿ ಕೇಚನ ॥ ೪೨ ॥

ನಲ್ಲಿ ಸಿಕ್ಕಿ ಹೂತು ಹೋಗಿ ಎಷ್ಟೋ ಕಾಲವಾಗಿದ್ದರೂ ಅಲ್ಲಿಯೇ ಕೆಸರಿನಿಂದ ಅದು ಕೊಳೆತು ನಾಶಹೊಂದದೆಯೇ ಇದ್ದುದು ಹೇಗೆ? ಅವುಗಳಿಗೆ ಕಾರಣವೇನು?

೪೦. ಸ್ವಾಮಿ ಪ್ರಭುಗಳೇ, ಮತ್ತು ಅರಣ್ಯದಲ್ಲಿದುಗೊಂಡಿದ್ದ ಆ ವೀತಹವ್ಯನು ಭೂಮಿಯ ರಂಧ್ರದೊಳಗೆ ಪ್ರವೇಶ ಮಾಡಿದ ಕಾಲದಲ್ಲಿಯೇ ಬಹು ಬೇಗನೆ ವಿದೇಹ ಮುಕ್ತಿಯನ್ನು ಪಡೆದುದು ಹೇಗೆ? ದಯೆಮಾಡಿ ತಾವು ನನಗೆ ಈ ಎರಡು ಪ್ರಶ್ನೆಗಳಿಗೂ ಉತ್ತರವನ್ನು ಯಥಾಸ್ಥಿತವಾಗಿ ಅಪ್ಪಣೆ ಕೊಡಿಸಿ ನನ್ನ ಸಂಶಯಗಳನ್ನು ಪರಿಹರಿಸಬೇಕೆಂದು ಬೇಡುವೆನು.

ಶ್ರೀ ವಸಿಷ್ಠರು ಹೇಳಿದರು:—

೪೧. ಅಯ್ಯ ಸಾಧುವಾದ ರಾಮನೇ ಕೇಳು. ಯಾವ ಚೈತನ್ಯವು ರಾಗ ದ್ವೇಷಾದಿ ಮಲದಿಂದ ದೂಷಿತವಾದ-ದೇಹಾದಿಗಳಲ್ಲಿ ನಿರೂಢವಾದ ಅಹಂಭಾವ ವಾಸನಾರೂಪ ತಂತುಜಾಲದಿಂದ ದೃಢವಾಗಿ ಸುತ್ತುಗಟ್ಟಲ್ಪಟ್ಟಿರುವುದೋ-ಅಂತಹ ಅಜ್ಞಚಿತ್ತು ಮಾತ್ರವೇ ಲೋಕದಲ್ಲಿ ತನಗೆ ಅಭಿಮತವಾದ ದೇಹದ ಭೇದಭೇದಾದಿಗಳಿಂದ ಉಂಟಾಗುವ ಸುಖದುಃಖ ದಶೆಗಳೆಂಬ ದಾಹಕ್ಕೆ ಗುರಿಯಾಗುವುದು.

೪೨. ಜೀವನ್ಮುಕ್ತನ ಶರೀರವಾದರೋ ಜ್ಞಾನಬಾಧಿತವಾಗಿರುವ ಕಾರಣ-ಕೇವಲ ಶುದ್ಧ ಚೈತನ್ಯಮಯವಾಗಿರುವುದು. ಮತ್ತು ಅಹಂಭಾವ ವಾಸನಾಶೂನ್ಯವಾಗಿರುವುದು. ರಾಗಾದಿ ಮಲರಹಿತವಾಗಿಯೂ ಇರುವುದು. ಇಂತಹ ಶುದ್ಧ

ಶೃಣು ಯುಕ್ತ್ಯಾ ಕಯಾ ಯೋಗೀ ತನುಚ್ಛೇದಾದಿ ವಿಭ್ರಮೈಃ ।
ನಾಕ್ರಮ್ಯತೇ ಮಹಾಬಾಹೋ ಬಹುವರ್ಷ ಶತೈರಪಿ ॥ ೪೩ ॥

ಚೇತಃ ಪದಾರ್ಥೇ ಪತತಿ ಯಸ್ಮಿನ್ ಯಸ್ಮಿನ್ ಯದಾ ಯದಾ ।
ತನ್ಮಯಂ ತದ್ಭವತ್ಯಾಶು ತಸ್ಮಿಂಸ್ತಸ್ಮಿಂಸ್ತದಾ ತದಾ ॥ ೪೪ ॥

ಚಿನ್ಮಾತ್ರಕವಾದ ದೇಹವನ್ನು ಕತ್ತರಿಸುವುದಕ್ಕಾಗಲೀ ಭೇದಿಸುವುದಕ್ಕಾಗಲೀ ಅಥವಾ ಇನ್ನಾವ ರೀತಿಯಿಂದಲೂ ನಾಶಪಡಿಸುವುದಕ್ಕಾಗಲಿ ಪ್ರಪಂಚದಲ್ಲಿ ಯಾರೊಬ್ಬರೂ ಸರ್ವಥಾ ಶಕ್ತರಾಗಿಲ್ಲವೇ ಇಲ್ಲ.

(ಅಚ್ಛೇದ್ಯೋಽಯಮದಾಹ್ಯೋಽಯಂ ಅಕ್ಲೇದ್ಯೋಽಶೋಷ್ಯಏವಚ । ನಿತ್ಯಃ ಸರ್ವಗತಃ ಸ್ಥಾಣುಃ ಅಚಲೋಽಯಂ ಸನಾತನಃ ಗೀತಾ ೨-೨೪)

೪೩. ಅಯ್ಯ ಮಹಾಬಾಹುವೇ, ಅನೇಕ ಸಾವಿರಾರು ವರ್ಷಗಳು ಕಳೆದು ಹೋದರೂ ಕೂಡ-ಶರೀರವನ್ನು ಕತ್ತರಿಸುವುದು, ಒಡೆಯುವುದು, ಸುಡುವುದು ಮುಂತಾದುವುಗಳಿಂದ ಉಂಟಾಗತಕ್ಕ ಭಯಭ್ರಾಂತ್ಯಾದಿ ವಿಕಾರಗಳು ಯೋಗನಿಷ್ಠನಾದ ಆತ್ಮಜ್ಞನನ್ನು ಎಂದಿಗೂ ಆಕ್ರಮಿಸುವುದಿಲ್ಲ ಎಂಬ ಸಿದ್ಧಾಂತವನ್ನು ಸಮರ್ಥಿಸುವ ವಿಷಯದಲ್ಲಿ ಈಗ ನಾನು ನಿನಗೆ ಮತ್ತೊಂದು ಬಗೆಯಾದ ಉಪಪತ್ತಿಯನ್ನು ವಿವರಿಸುವೆನು. ಅವಹಿತನಾಗಿ ಕೇಳುವವನಾಗು.

೪೪. ಮನಸ್ಸು ಯಾವ ಯಾವಾಗ ಯಾವ ಯಾವ ಪದಾರ್ಥದ ಮೇಲೆ ಹೋಗಿ ಬೀಳುವುದೋ ಅದು ಆಗಾಗಲೆಲ್ಲ ಆಯಾ ಪದಾರ್ಥದಲ್ಲಿ ಬಹು ಬೇಗನೇ ಆಯಾ ಪದಾರ್ಥಮಯವಾಗಿಯೇ ಪರಿಣಾಮ ಹೊಂದುವುದು. [ಹೇಗೆಂದರೆ ಒಳಗೆರೆಯಲ್ಲಿರುವ ನೀರು ತೂಬುಗಳ ಮೂಲಕ ಹೊರಕ್ಕೆ ಬಂದು ಕಾಲುವೆಗಳ ರೂಪದಲ್ಲಿ ಹರಿದು ಮುಂದಕ್ಕೆ ಹೋಗಿ ಗದ್ದೆಗಳನ್ನು ಪ್ರವೇಶಿಸಿ ಆ ಗದ್ದೆಗಳ ಆಕಾರವಾಗಿ ಹೇಗೆ ಕೂಡಲೆ ಪರಿಣಾಮ ಹೊಂದುವುದೋ ಹಾಗೇಯೇ ಶರೀರದೊಳಗಿರುವ ಮನಸ್ಸು ಚಕ್ಷುರಾದೀಂದ್ರಿಯಗಳ ಮೂಲಕ ಹೊರಕ್ಕೆ ಬಂದು-ವಿಷಯಗಳ ಕಡೆಗೆ ಹೋಗಿ-ಅವುಗಳ ಆಕಾರವಾಗಿ ಪರಿಣಮಿಸುವುದು.]

ತಥಾ ದೃಷ್ಟ್ವಾರಿ ಹಿ ಮನೋ ವಿಕಾರ ಮುಪಗಚ್ಛತಿ ।
ದೃಷ್ಟ್ವ ಮಿತ್ರಂ ಸುಹೃದ್ಯತ್ವಂ ಸ್ವಯಮಿತ್ಯನುಭೂಯತೇ　　॥ ೪೫ ॥

ರಾಗದ್ವೇಷ ವಿಹೀನೇ ತು ಪಥಿಕೇ ಪಾದಪೇ ಗಿರೌ ।
ಭವತ್ಯರಾಗದ್ವೇಷಂ ಚ ಸ್ವಯಮಿತ್ಯನು ಭೂಯತೇ　　॥ ೪೬ ॥

ಮೃಷ್ಟೇ ಲೌಲ್ಯ ಮುಪಾದತ್ತೇ ದುರ್ಭೋಜ್ಯೇ ಯಾತಿ ನಿಸ್ಪೃಹಂ ।
ವೈರಸ್ಯಂ ಯಾತಿ ಕಟುನಿ ಸ್ವಯಮಿತ್ಯನುಭೂಯತೇ　　॥ ೪೭ ॥

---

೪೫. ಇದು ಹಾಗೆಯೇ ಸರಿ-ಈಮನಸ್ಸು ಶತ್ರುಗಳನ್ನು ಯಾವಾಗ ಕಾಣು ವುದೋ ಆಗಲೇ ತಾನೂ ದ್ವೇಷರೂಪವಾದ ವಿಕಾರವನ್ನು ಹೊಂದುವುದು. ಹಾಗಾಗದೆ ಅದು ತನಗೆ ಪ್ರಿಯವಾದ ವಸ್ತುವನ್ನು (ಮಿತ್ರನನ್ನು) ಕಂಡಾಗ ತಕ್ಷಣವೇ ತಾನೂ ಸೌಹಾರ್ದ (ಪ್ರೀತಿ= ರಾಗ)ಮಯವಾದ ಒಳ್ಳೆ ಸೌಮ್ಯಾಕಾರವನ್ನು ತಾಳುವುದು. ಈ ವಿಚಾರವು ಪ್ರಪಂಚದಲ್ಲಿ ಸರ್ವರಿಗೂ ಸ್ವತಃ ಪ್ರತ್ಯಕ್ಷವಾಗಿ ಅನುಭವ ಗೋಚರವಾದುದೇ ಆಗಿರುವುದು.

೪೬. ಮತ್ತು ರಾಗದ್ವೇಷಾದಿಗಳೊಂದೂ ಇಲ್ಲದೆ ಕೇವಲ ಉದಾಸೀನ ಸ್ವಭಾವವುಳ್ಳ ಅಪರಿಚಿತನಾದ ಒಬ್ಬ ಪ್ರಯಾಣೀಕನಾಗಲೀ, ಒಂದು ವೃಕ್ಷವಾಗಲಿ ಅಥವಾ ಒಂದು ಪರ್ವತವಾಗಲೀ ಗೋಚರಿಸಿದಾಗ-ಈ ಮನಸ್ಸೂ ಕೂಡ ರಾಗ ದ್ವೇಷಾದಿ ವಿಕಾರಗಳೊಂದೂ ಇಲ್ಲದುದಾಗಿಯೇ ತಟಸ್ಥ ಭಾವದಿಂದಲೇ ಇರುವುದು. ಈ ವಿಚಾರವೂ ಸರ್ವಾನುಭವ ಗೋಚರವಾದುದೇ ಆಗಿರುವುದು.

೪೭. ಮತ್ತು ಮನಸ್ಸು ಸುಭೋಜ್ಯವಾದ ಮೃಷ್ಟಾನ್ನವನ್ನು ಕಂಡರೆ ಕೂಡಲೆ ಅದರಲ್ಲಿ ಆಶೆಯಿಂದ ತಾನು ಚಾಪಲ್ಯವನ್ನು ಹೊಂದುವುದು. ದುರ್ಭೋಜ್ಯವಾದ ನೀರಸ ಪದಾರ್ಥವು ದೊರೆತರೆ ಅದರಲ್ಲಿ ಆಶೆಯನ್ನು ತೊರೆದುಬಿಡುವುದು. ಕಟುವಾದ ವಸ್ತುವನ್ನು ಕಂಡಾಗ ತಾನು ಅದರ ವಿಷಯದಲ್ಲಿ (ನೀರಾಗವನ್ನು) ದ್ವೇಷಬುದ್ಧಿಯನ್ನು ಪ್ರಕಟಿಸುವುದು. ಇದೂ ಸರ್ವಾನುಭವ ಗೋಚರವಾದ ವಿಚಾರವೇ.

ಸಮಸಂವಿದ್ವಿಲಾಸಾಢ್ಯೇ ಯದ್ಯದಾ ಯತಿದೇಹಕೇ ।
ಹಿಂಸ್ರಚೇತಃ ಪತತ್ಯಾಶು ಸಮತಾಮೇತಿ ತತ್ತದಾ ॥ ೪೮ ॥

ಸರ್ವ ಸಂಗ ವಿಮುಕ್ತತ್ವಾ ಚ್ಛೇದಾದೌ ನ ಪ್ರವರ್ತತೇ ।
ಪಾಂಥೋ ವ್ಯರ್ಥಂ ಪಥಿ ಗ್ರಾಮೇ ಯಥಾ ಗ್ರಾಮೀಣ ಕರ್ಮಣಿ ॥ ೪೯ ॥

---

೪೮. ಜ್ಞಾನನಿಷ್ಠವಾದ ಯೋಗಿಯ ಶರೀರವು ರಾಗದ್ವೇಷ ವೈಷಮ್ಯ ಶೂನ್ಯವಾದ ಚಿದ್ವಿಲಾಸದಿಂದ ವಿಶೇಷವಾಗಿ ಪರಿಪೂರ್ಣವಾಗಿರುವ ಕಾರಣ-ಅಂತಹ ಯೋಗಿ ಶರೀರದ ಮೇಲೆ ಯಾವಾಗ ಮಾಂಸಾಹಾರಿಗಳಾದ ಘಾತುಕ ಮೃಗಗಳ ಮನಸ್ಸು ಹೋಗಿಬೀಳುವುದೋ ಆಗಲೇ ಅದು ಥಟ್ಟನೆ ಆ ಯೋಗಿ ಶರೀರದಂತೆಯೇ ಸಮರಸವಾಗಿ ರಾಗದ್ವೇಷ ಶೂನ್ಯವಾಗುವುದು (ಎಂಬುದು ಮೇಲೆ ಉದಹರಿಸಿದ ನಿದರ್ಶನದಿಂದ ಪ್ರಕೃತದಲ್ಲಿ ಸುಸ್ಪಷ್ಟವಾಗುವುದು.)

೪೯. ಒಬ್ಬ ಪ್ರಯಾಣಿಕನು ಮಾರ್ಗವಶದಿಂದ ತನಗೆ ಮಧ್ಯದಲ್ಲಿ ಸಿಕ್ಕಿದ ಯಾವುದೋ ಒಂದು ಹಳ್ಳಿಗೆ ಹೋಗಿ-ಆ ಗ್ರಾಮದ ಜನರು ಮಾಡಬೇಕಾದ ಕೆಲಸದಲ್ಲಿ ತಾನು ವ್ಯರ್ಥವಾಗಿ ಹೇಗೆ ಪ್ರವರ್ತಿಸದೆ ಇರುವನೋ ಹಾಗೆಯೇ-ಘಾತುಕ ಜಂತುವೂ ಕೂಡ ರಾಗದ್ವೇಷ ರಹಿತನಾಗಿ ಸಮದರ್ಶಿಯಾಗಿರುವ ಯೋಗಿಯ ಸಾನ್ನಿಧ್ಯ ಪ್ರಭಾವದಿಂದ ದ್ವೇಷಾದಿ ದುಷ್ಟಸ್ವಭಾವವನ್ನು ನಾಶಪಡಿಸಿ ಕೊಂಡದ್ದಾಗಿರುವ ಕಾರಣ-ಯಾರೊಬ್ಬರನ್ನೂ ಹಿಂಸಿಸುವ, ಕಚ್ಚುವ, ತಿನ್ನುವ ಮುಂತಾದ ದುಷ್ಟ ಕೆಲಸದಲ್ಲಿ ಎಂದಿಗೂ ಪ್ರವರ್ತಿಸುವುದೇ ಇಲ್ಲ. [ಇದಕ್ಕೆ ಪೂರ್ವಕಾಲದ ಋಷ್ಯಾಶ್ರಮಗಳೇ ನಿದರ್ಶನವು. ಶಾಶ್ವತವಾದ ನೈಸರ್ಗಿಕ ದ್ವೇಷವುಳ್ಳ ಗಜಸಿಂಹ-ಗೋವ್ಯಾಘ್ರ ಸರ್ಪನಕುಲ ಮುಂತಾದ ಪ್ರಾಣಿಗಳೂ ಋಷ್ಯಾಶ್ರಮಗಳಲ್ಲಿ ಋಷಿಗಳ ಸಾನ್ನಿಧ್ಯ ಪ್ರಭಾವದ ದೆಸೆಯಿಂದ ತಮ್ಮ ದ್ವೇಷವನ್ನು ಪರಿತ್ಯಜಿಸಿ ಪರಸ್ಪರ ಸೌಹಾರ್ದದಿಂದ ಏಕತ್ರ ಜೊತೆಗೂಡಿ ವಾಸಮಾಡಿಕೊಂಡಿರುವುವು. ಎಂಬ ವಿಷಯವನ್ನು ನಾವು ಗ್ರಂಥಗಳಿಂದಲೂ ಅರಿಯಬಹುದು.]

[ಅಹಿಂಸಾ ಪ್ರತಿಷ್ಠಾಯಾಂ ತತ್ಸನ್ನಿಧೌ ವೈರತ್ಯಾಗಃ ಪಾತಂಜಲಯೋಗ ಸೂತ್ರಗಳು ಸಾಧನಪಾದ ೩೫. ಅಹಿಂಸೆಯನ್ನು ಸರ್ವದಾ ಭಾವಿಸುವ ಮಹಾತ್ಮನ ಸನ್ನಿಧಿಯಲ್ಲಿ ಸಹಜ ವಿರೋಧಿಗಳಾದ ಅಹಿನಕುಲಾದಿ ಪ್ರಾಣಿಗಳೂ ವೈರವನ್ನು ಬಿಟ್ಟು ಒಟ್ಟಿಗೆ ವಾಸಮಾಡುವುವು. ಹಿಂಸ್ರ ಮೃಗಗಳೂ ಕೂಡ ಸಹಜವಾದ ಹಿಂಸ್ರಭಾವವನ್ನು ತ್ಯಜಿಸುವುವು ಎಂದರ್ಥ.]

ಯೋಗಿದೇಹ ಸಮೀಪಾತ್ತು ಗತ್ವಾ ಪ್ರಾಪ್ನೋತಿ ಹಿಂಸ್ರತಾಂ ।
ಯದ್ಯದ್ಭವತಿ ತತ್ರಾಶು ತಥಾ ರೂಪಂ ನ ಸಂಶಯಃ ॥ ೫೦ ॥

ಇತಿ ಹಿಂಸ್ರೈರ್ಮೃಗ ವ್ಯಾಘ್ರ ಸಿಂಹ ಕೀಟಸರೀಸೃಪೈಃ ।
ನ ಚ್ಛಿನ್ನಾ ವೀತಹವ್ಯಸ್ಯ ತನುರ್ಭೂತಲ ಶಾಯಿನೀ ॥ ೫೧ ॥

ಸರ್ವತ್ರ ವಿದ್ಯತೇ ಸಂವಿತ್ ಕಾಷ್ಠಲೋಷ್ಟೋಪಲಾದಿಕೇ ।
ಸತ್ತಾ ಸಾಮಾನ್ಯ ರೂಪೇಣ ಸಂಸ್ಥಿತಾ ಮೂಕ ಬಾಲವತ್ ॥ ೫೨ ॥

ಪೋಪ್ಲೂಯಮಾನಾ ತರಲಾ ಕೇವಲಂ ಪರಿದೃಶ್ಯತೇ ।
ತಸ್ಮಿನ್ ಪುರ್ಯಷ್ಟಕೇಷ್ವೇವ ಪ್ರತಿಬಿಂಬಂ ಜಲೇಷ್ವಿವ ॥ ೫೩ ॥

---

೫೦. ಹಿಂಸ್ರಜಂತುವಿನ ಮನಸ್ಸು ಯೋಗಿಯ ದೇಹದ ಸಾಮೀಪ್ಯವನ್ನು ಬಿಟ್ಟು ದೂರದಲ್ಲಿ ಬೇರೆ ಸ್ಥಳಕ್ಕೆ ಹೋಗಿ ಆಮೇಲೆ ಅಲ್ಲಿರುವ ಎಂತೆಂತಹ ದೋಷದುಷ್ಟವಾದ ಯಾವ ಯಾವ ಜಂತುವಿನ ಸಮೀಪಕ್ಕೆ ಸೇರುವುದೋ-ಆಯಾ ಜಂತುವಿನ ಸ್ವಭಾವಾನುಗುಣವಾಗಿಯೇ ಹಿಂಸಾತ್ಮಕ ದುಷ್ಟ ಸ್ವಭಾವವನ್ನೇ ಬಲು ಬೇಗನೆ ಹೊಂದಿಬಿಡುವುದು. ಇದರಲ್ಲಿ ಸಂಶಯವಿಲ್ಲ.

೫೧. ಈ ಬಗೆಯಾದ ಎರಡು ಕಾರಣಗಳಿಂದ-ಆಗ ಆ ವನಭೂಮಿಯ ಮೇಲೆ ಬಿದ್ದಿದ್ದ ಆ ವೀತಹವ್ಯ ಮುನೀಶ್ವರನ ದೇಹವು ಹುಲಿ, ಸಿಂಹ ಮುಂತಾದ ಹಿಂಸ್ರ ಪ್ರಾಣಿಗಳಿಂದಲಾಗಲಿ ಸರ್ಪಾದಿ ವಿಷಮಯ ಕ್ರಿಮಿಕೀಟಗಳಿಂದಾಗಲಿ ಛೇದಿಸಲ್ಪಡಲೇ ಇಲ್ಲ.

[ಮೇಲೆ ವರ್ಣಿಸಿದ ಎರಡನೆಯ ಸಮಾಧಾನದಿಂದ "ಆ ವೀತಹವ್ಯನ ಸುತ್ತಲೂ ಇದ್ದ ಕಾಡುಮೃಗಗಳು ಆತನ ಸೌಜನ್ಯ ಯೋಗನಿಷ್ಠೆ, ಅಹಿಂಸೆ ಮುಂತಾದವುಗಳ ಮಹಿಮೆಗೆ ಒಳಪಟ್ಟು-ತಮ್ಮ ಹಿಂಸ್ರ ಸ್ವಭಾವವನ್ನುಳಿದು ಸಾಧುಗಳಾಗಿದ್ದುದರಿಂದ ಅವು ಆತನ ದೇಹದ ಗೋಜಿಗೆ ಹೋಗದೆ ಇದ್ದುವು" ಎಂಬ ಅರ್ಥವು ನಿಷ್ಕೃಷ್ಟವಾಯಿತು.]

೫೨. ಕಾಷ್ಠ, ಹೆಂಟೆ, ಕಲ್ಲು ಮುಂತಾದ ವಸ್ತುಗಳಲ್ಲಿಯೂ ಸರ್ವತ್ರ

ತೇನ ಭೂಜಲ ವಾಯ್ವಗ್ನಿ ಸಂವಿತ್ತ್ಯಾ ಸಮರೂಪಯಾ ।
ನಿರ್ವಿಕಾರಂ ತನುರ್ನೀತಾ ವೀತಹವ್ಯಸ್ಯ ರಾಘವ ॥ ೫೪ ॥

ಅನ್ಯಚ್ಚ ಶೃಣು ಮೇ ರಾಮ ಸ್ಪಂದೋ ನಾಶಸ್ಯ ಕಾರಣಂ ।
ವಿಕಾರಃ ಸ ಚ ಚಿತ್ತೋತ್ಥೋ ವಾತಜೋ ವಾ ಜಗತ್ಸ್ಥಿತೌ ॥ ೫೫ ॥

ಚಿತ್ತು ಇದ್ದೇ ಇದೆ. ಆದರೆ ಇವುಗಳಲ್ಲೆಲ್ಲಾ ಆ ಚೈತನ್ಯವು ಮೂಕನಾದ ಬಾಲನಂತೆ ಸತ್ತಾ ಸಾಮಾನ್ಯ ರೂಪದಿಂದ ಇರುವ ಕಾರಣ ಅನುಪಲಬ್ಧವಾಗಿರುವುದು.

೫೩. ಆದರೂ–ಅಸಮಾಹಿತಚಿತ್ತರಾದ ಅಜ್ಞಜನರು- ಪ್ರವಾಹದಲ್ಲಿ ಕೊಚ್ಚಿಕೊಂಡು ತೇಲಿಹೋಗುತ್ತಿರುವ ತರಗೆಲೆಯಂತೆ- ಈ ಚೈತನ್ಯವು ತರಳವಾಗಿಯೂ (ನಾನಾ ವಿಧ ಪರಿಣಾಮ ಸಹಸ್ರಗಳಿಂದ ಅತ್ಯಂತ ವಿಷಮವಾಗಿಯೂ) ದೇಶಕಾಲಾದಿಗಳಿಂದ ಕೃಶವಾಗಿಯೂ (ಪರಿಚ್ಛಿನ್ನ).ಒಂದು ಸರೋವರದ ಸುತ್ತಲೂ ಇರುವ ವೃಕ್ಷಾದಿಗಳು ನಿಶ್ಚಲವಾಗಿಯೂ ನಿರ್ಮಲವಾಗಿಯೂ ಇರುವ ಸರಸ್ಸಿನ ನೀರಿನಲ್ಲಿ ಪ್ರತಿಬಿಂಬಿಸುವಂತೆ-ಪುರ್ಯಷ್ಟಕಗಳಲ್ಲಿ ಮಾತ್ರವೇ ವಿಶೇಷವಾಗಿ ಉಪಲಬ್ಧವಾಗುವುದೆಂದು ಕಾಣುವರು.

೫೪. ಅಯ್ಯ ರಾಘವ, ಹೀಗಿರುವ ಕಾರಣ, ಆ ವೀತಹವ್ಯನ ಪುರ್ಯಷ್ಟಕದಿಂದ-ತತ್ತ್ವಜ್ಞಾನ ಸಮಾಧಿ ನಿಷ್ಠೆಗಳ ಪ್ರಭಾವದ ದೆಸೆಯಿಂದ ವೈಷಮ್ಯ ರಹಿತ ಸ್ವಭಾವವನ್ನು (ಸಮರಸಭಾವವನ್ನು) ಹೊಂದಿಸಲ್ಪಟ್ಟ ಪೃಥಿವ್ಯಪ್ತೇಜೋವಾಯುಗಳ ಚೈತನ್ಯದಿಂದ (ಸಂವಿತ್ತಿನಿಂದ) ಆವನ ಆ ಭೌತಿಕ ಶರೀರವೂ ಸರ್ವ ವಿಕಾರ ಶೂನ್ಯವಾದ ಬ್ರಹ್ಮ ಭಾವವನ್ನು ಹೊಂದಿಸಲ್ಪಟ್ಟಿತು. ಅದು ಕಾರಣವೇ ಆ ವೀತಹವ್ಯ ದೇಹವು ಅಷ್ಟು ದೀರ್ಘಕಾಲ ನೆಲದೊಳಗೆ ಬಿರುಕಿನಲ್ಲಿ ಸಿಕ್ಕಿಕೊಂಡು ಬಿದ್ದಿದ್ದರೂ ಯಾವ ವಿಕಾರವನ್ನೂ ಹೊಂದದೆ ಅಕ್ಷತವಾಗಿ ಇದ್ದಿತು.

[ಪುರ್ಯಷ್ಟಕ= ಪಂಚಭೂತ ಸಮುದಾಯ-ಇಂದ್ರಿಯ ಪಂಚಕ, ಮನಸ್ಸು ಬುದ್ಧಿ-ವಾಸನಾ ಕರ್ಮ, ಪ್ರಾಣಪಂಚಕ, ಅವಿದ್ಯಾ ಇವುಗಳ ಸಂಘಾತ]

ಪ್ರಾಣಾನಾಂ ಪ್ರಾಣನಂ ಸ್ಪಂದಃ ತಚ್ಛಾಂತೌ ತೇ ದೃಷತ್ಸಮಾಃ ।
ಯತಃ ಸ್ಥಿತಾ ಧಾರಣಯಾ ತೇನಾನಷ್ಟಾಸ್ಯ ಸಾ ತನುಃ　　॥ ೫೬ ॥

ಸಬಾಹ್ಯಾಭ್ಯಂತರಂ ಸ್ಪಂದಃ ಚಿತ್ತಜೋ ವಾತಜೋಽಥವಾ ।
ನ ಯಸ್ಯ ವಿದ್ಯತೇ ತಸ್ಯ ದೂರಸ್ಥೌ ಪ್ರಕೃತಿ ಕ್ಷಯೌ　　॥ ೫೭ ॥

ಸಬಾಹ್ಯಾಭ್ಯಂತರೇ ಶಾಂತೇ ಸ್ಪಂದೇ ತತ್ವವಿದಾಂ ವರ ।
ಧಾತವಃ ಸಂಸ್ಥಿತಿಂ ದೇಹೇ ನ ತ್ಯಜಂತಿ ಕದಾಚನ •　　॥ ೫೮ ॥

---

೫೫. ಅಯ್ಯ ರಾಮ, ನಾನು ನಿನಗೆ ಈಗ ಇನ್ನೂ ಒಂದು ಯುಕ್ತಿಯನ್ನು ಹೇಳುವೆನು ಕೇಳು. ಏನೆಂದರೆ—ಸ್ಪಂದವೇ ನಾಶಕ್ಕೆ ಕಾರಣವು. ಆ ಸ್ಪಂದವೆಂಬ ವಿಕಾರವು (ಚಲನವು) ಚಿತ್ತದಿಂದ ಉದ್ಭವಿಸಿದುದಾದರೂ ಅಥವಾ ವಾಯುವಿನಿಂದ ಜನ್ಯವಾದುದಾದರೂ ಆಗಿರಬಹುದು-ಎಂಬುದು ಲೋಕವ್ಯವಹಾರದಲ್ಲಿ ಸರ್ವಜನ ಪ್ರಸಿದ್ಧವು.

೫೬. ಹೀಗೆ, ಪ್ರಾಣವಾಯುಗಳ ಉಚ್ಛ್ವಾಸ ನಿಃಶ್ವಾಸರೂಪ ಸಂಚಾರವು (ಸ್ಪಂದವು) ಸಂಪೂರ್ಣವಾಗಿ ನಿಂತುಹೋಗಿಬಿಟ್ಟ ಬಳಿಕ, ಆ ಪ್ರಾಣವಾಯುಗಳು ದೇಹದೊಳಗೆ ಶಿಲಾಸದೃಶಗಳಾಗಿ ದೃಢವಾಗಿ ಬಿಡುವುವು. ಹೀಗೆ ಆ ವೀತಹವ್ಯನು ಯೋಗಾಭ್ಯಾಸ ಬಲದಿಂದ ಪ್ರಾಣಾಯಾಮ ಪೂರ್ವಕವಾಗಿ ತನ್ನ ದೇಹದೊಳಗೆ ಪ್ರಾಣಾದಿ ವಾಯುಗಳ ಚಲನವನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟು-ಆ ವಾಯುವನ್ನು ಶಿಲಾಸದೃಶವಾಗಿ ನಿಶ್ಚಲವಾಗಿರುವಂತೆ ಮಾಡಿಕೊಂಡಿದ್ದ ಕಾರಣ (ನಾಶಕಾರಣವಾದ ಸ್ಪಂದವೇ ಇಲ್ಲದೆಹೋದುದರಿಂದ) ಅವನ ಆ ಶರೀರವೂ ನಾಶ ಹೊಂದದೆ ಅವಿಕೃತವಾಗಿದ್ದಿತು.

೫೭. ಯಾವನ-ಹಸ್ತಪಾದಾದಿ ಬಾಹ್ಯೇಂದ್ರಿಯಗಳಿಂದಲೂ ಮನಸ್ಸು ಪ್ರಾಣಗಳು ಮುಂತಾದ ಆಭ್ಯಂತರಗಳಿಂದಲೂ ಕೂಡಿರುವ ದೇಹದೊಳಗೆ- ಚಿತ್ತಜನ್ಯವಾದ ಸ್ಪಂದವು ಸರ್ವಥಾ ಇಲ್ಲದೆ ಹೋಗಿಬಿಡುವುದೋ ಅವನಿಗೆ ವೃದ್ಧಿಕ್ಷಯಾದಿ ವಿಕಾರಗಳು ಯಾವುದೊಂದೂ ಸಮೀಪದಲ್ಲಿಯೂ ನಿಲ್ಲದೆ ಬಹುದೂರ ಓಡಿಹೋಗಿಬಿಡುವುವು.

ಸಂಶಾಂತೇ ದೇಹ ಪ್ರಸ್ಪಂದೇ ಚಿತ್ತವಾತಮಯೇ ತಥಾ ।
ಧಾತವೋ ವೈರವಂ ಸ್ಥೈರ್ಯಂ ಯಾಂತಿ ಸಂಸ್ತಂಭಿತಾತ್ಮಕಾಃ ॥ ೫೯ ॥

ತಥಾ ಚ ದೃಶ್ಯತೇ ಲೋಕೇ ಸ್ಪಂದಶಾಂತೌ ದೃಢಾ ಸ್ಥಿತಿಃ ।
ದಾರೂಣಾಮಿವ ಧೀರಾಣಾಂ ಶವಾಂಗಾನಾಮಚೋಪತಾ ॥ ೬೦ ॥

---

೫೮. ಅಯ್ಯ ಆತ್ಮತತ್ತ್ವಜ್ಞರಲ್ಲಿ ಉತ್ತಮನಾದ ರಾಮ, ಹೀಗೆ ದೇಹದಲ್ಲಿ ಒಳಗೂ ಹೊರಗೂ ಚಿತ್ತಜನ್ಯವಾದ ಅಥವಾ ವಾಯುಜನ್ಯವಾದ ಸ್ಪಂದವು ಸಮಗ್ರವಾಗಿ ನಿಂತುಹೋದ ಬಳಿಕ, ಆ ದೇಹದ ಧಾತುಗಳು ಎಂದಿಗೂ ತಮ್ಮ ತಮ್ಮ ಪೂರ್ವಾವಸ್ಥೆಯನ್ನು ಸ್ವಲ್ಪವೂ ಬಿಟ್ಟಿರುವುದಿಲ್ಲ [ರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜಾ, ಶುಕ್ರ, ಕೇಶ ತ್ವಕ್, (ಚರ್ಮ) ಸ್ನಾಯು ಇವು ಹತ್ತು ಧಾತುಗಳು.]

೫೯. ಹೀಗೆ, ಚಿತ್ತ ಅಥವಾ ವಾಯುಜನ್ಯವಾದ ದೇಹಸ್ಪಂದವು ಸಂಪೂರ್ಣವಾಗಿ ಶಾಂತವಾಗಲಾಗಿ–ಆ ದೇಹದ ಧಾತುಗಳೂ ದೃಢವಾಗಿ ಸ್ತಂಭೀಭೂತವಾಗಿ-ಮೇರುಪರ್ವತ ಸದೃಶವಾದ ಸ್ಥಿರಭಾವವನ್ನು ಹೊಂದುವುವು.

೬೦. ಪ್ರಾಣಾದಿ ವಾಯುಗಳ ಚಲನವು (ಉಚ್ಛ್ವಾಸ ನಿಃಶ್ವಾಸ ಕ್ರಮವು) ಸಂಪೂರ್ಣವಾಗಿ ಇಲ್ಲದೆ ನಿಂತುಹೋಗಲು-ಆಗ ಆ ಮೃತದೇಹದ ಅವಯವಗಳು ಯಾವುವೂ ಸ್ವಲ್ಪವೂ ಕದಲದೆ ಒಂದು ಕಡೆ ಬಿದ್ದುಕೊಂಡಿರುವಂತೆ-ವಿವೇಕ ವೈರಾಗ್ಯಾಭ್ಯಾಸ ಲಬ್ಧವಾದ ತತ್ತ್ವಜ್ಞಾನದಿಂದ ತಮ್ಮ ಚಿತ್ತವನ್ನು ಲಯಗೊಳಿಸಿಕೊಂಡು ಪ್ರಶಾಂತರಾಗಿರುವ ಸ್ಥಿರಚಿತ್ತರಾದ ಜ್ಞಾನನಿಷ್ಠರೂ ಪ್ರಾಣಾಯಾಮ ಪೂರ್ವಕವಾಗಿ ಪ್ರಾಣಗತಿಯನ್ನೂ ಚಿತ್ತವೃತ್ತಿಯನ್ನೂ ನಿರೋಧಗೊಳಿಸಿಕೊಂಡಿರುವ ಯೋಗನಿಷ್ಠರೂ ವಾಯುಜನ್ಯವಾದ ಅಥವಾ ಚಿತ್ತಜನ್ಯವಾದ ಸ್ಪಂದಶೂನ್ಯರಾಗಿರುವ ಕಾರಣ-ವೃಕ್ಷಶೈಲಾದಿ ಸ್ಥಾವರ ವಸ್ತುಗಳ ಹಾಗೆ ದೃಢವಾದ ಸ್ಥಿತಿಯನ್ನು ಪಡೆದು ಸ್ಥಿರವಾಗಿರುವರೆಂಬುದು ಪ್ರಪಂಚದಲ್ಲಿ ಸರ್ವರಿಗೂ ಪ್ರತ್ಯಕ್ಷವಾಗಿರುವುದು.

ಇತಿ ವರ್ಷ ಸಹಸ್ರಾಣಿ ದೇಹಾ ಜಗತಿ ಯೋಗಿನಾಂ ।
ನ ಕ್ಲಿದ್ಯಂತೇ ನ ಭಿದ್ಯಂತೇ ಮಗ್ನವಜ್ಜಲದಾ ಇವ ॥ ೬೧ ॥

ತಥೈವ ವೀತಹವ್ಯೋಽಸೌ ಶೃಣು ಕಿಂ ನೋಪಶಾಂತವಾನ್ ।
ದೇಹ ಮುತ್ಸೃಜ್ಯ ತತ್ವಜ್ಞೋ ಜ್ಞಾತಜ್ಞೇಯವತಾಂ ವರಃ ॥ ೬೨ ॥

ಯೇ ಹಿ ವಿಜ್ಞಾತವಿಜ್ಞೇಯಾ ವೀತರಾಗಾ ಮಹಾಧಿಯಃ ।
ವಿಚ್ಛಿನ್ನ ಗ್ರಂಥಯಃ ಸರ್ವೇ ತೇ ಸ್ವತಂತ್ರಾಸ್ತನೌ ಸ್ಥಿತಾಃ ॥ ೬೩ ॥

ದೈವಂ ವಾಪಿ ಚ ಕರ್ಮಾಣಿ ಪ್ರಾಕ್ತನಾನ್ಯೈಹಿಕಾನಿ ಚ ।
ವಾಸನಾ ವಾ ನ ತೇಷಾಂ ತಚ್ಚೇತೋ ನಿಯಮಯಂತ್ಯಲಂ ॥ ೬೪ ॥

---

೬೧. ಹೀಗೆ ಈ ಉಪಪತ್ತಿ ಪ್ರಕಾರವೇ ಯೋಗಿಗಳ ದೇಹಗಳು ಅನೇಕ ವರ್ಷ ಸಹಸ್ರಗಳ ಕಾಲವೂ ಕೂಡ ಈ ಜಗತ್ತಿನಲ್ಲಿ ಮೇಘಗಳ ಹಾಗೆ ನೀರಿನಿಂದ ನೆನೆದು ಕೊಳೆತು ಶಿಥಿಲವಾಗುವುದಿಲ್ಲ. ಮತ್ತು ಭೂಮಿಯೊಳಗೆ ಮಗ್ನವಾಗಿರುವ ಕಲ್ಲುಬಂಡೆಯಂತೆ ಭಿನ್ನವಾಗಿ ನಾಶಹೊಂದುವುದೂ ಇಲ್ಲ.

೬೨. ಅತ್ಯವಶ್ಯ ಜ್ಞಾತವ್ಯವಾಗಿರುವ ಬ್ರಹ್ಮಾತ್ಮೈಕ್ಯ ತತ್ವವನ್ನು ಸಾಕ್ಷಾತ್ಕರಿಸಿರತಕ್ಕ ಜ್ಞಾನಿಗಳಲ್ಲಿ ಉತ್ತಮನಾಗಿದ್ದರೂ ಕೂಡ ತತ್ತ್ವಜ್ಞನಾದ ಆ ವೀತಹವ್ಯನು ಮುಂಚೆಯೇ ಜ್ಞಾನವನ್ನು ಸಂಪಾದಿಸಿಕೊಂಡಾಗಲೇ ಈ ದೇಹವನ್ನು ಪರಿತ್ಯಜಿಸಿ ಏತಕ್ಕಾಗಿ ವಿದೇಹ ಕೈವಲ್ಯವನ್ನು ಪಡೆದು ಉಪಶಾಂತನಾಗಲಿಲ್ಲವೆಂಬ ನಿನ್ನ ಕೊನೆಯ ಪ್ರಶ್ನೆಗೆ ಈಗ ಇನ್ನು ಮುಂದೆ ಸಮಾಧಾನವನ್ನು ಹೇಳುವೆನು-ಕೇಳುವವನಾಗು.

೬೩. ಯಾವ ಮಹಾ ಜ್ಞಾನಿಗಳಾದರೆ ಐಹಿಕಾಮುಷ್ಮಿಕ ಫಲಭೋಗಗಳಲ್ಲಿ ಸರ್ವತ್ರ ಅತ್ಯಂತ ವಿರಕ್ತರಾಗಿಯೂ ಪರಬ್ರಹ್ಮ ತತ್ತ್ವವನ್ನು ಸಾಕ್ಷಾತ್ಕರಿಸಿದವರಾಗಿಯೂ ತಮ್ಮ ಹೃದಯ ಗ್ರಂಥಿಗಳನ್ನು ತತ್ತ್ವಜ್ಞಾನವೆಂಬ ಖಡ್ಗಧಾರೆಯಿಂದ ಕತ್ತರಿಸಿಹಾಕಿ ಪ್ರಶಾಂತರಾಗಿರುವರೋ ಅಂತಹ ಜ್ಞಾನನಿಷ್ಠರೆಲ್ಲರೂ ದೇಹಗಳ ವಿಷಯದಲ್ಲಿ ಸ್ವತಂತ್ರರಾಗಿರುವರು. (ಪರಾಧೀನರಾಗಿರುವುದಿಲ್ಲ) [ತಸ್ಯಹನ ದೇವಾಶ್ಚ ನಾ ಭೂತ್ಯಾ ಈಶತೇ ಆತ್ಮಾಹ್ಯೇಷಾಂಸಭವತಿ ಬೃಹದಾರಣ್ಯಕ.]

೬೪. ಅಂತಹ ಸ್ಥಿತಪ್ರಜ್ಞರ ಪ್ರಾರಬ್ಧಶೇಷ ಭೋಗಕ್ಕಾಗಿ ಪ್ರವೃತ್ತವಾದ ಮನಸ್ಸನ್ನು ವೇದಾಂತಿಗಳ ಸಿದ್ಧಾಂತ ರೀತಿಯಾಗಿ ಜನ್ಮಾಂತರಾರ್ಜಿತಗಳಾದ

ತೇನ ತತ್ತ್ವವಿದಾಂ ತಾತ ಕಾಕತಾಲೀಯಮನ್ಮನಃ ।
ಯದ್ಯದ್ಭಾವಯತಿ ಕ್ಷಿಪ್ರಂ ತತ್ತದಾಶು ಕರೋತ್ಯಲಂ ॥ ೬೫ ॥

ಕಾಕತಾಲೀಯ ಯೋಗೇನ ವೀತಹವ್ಯಸ್ಯ ಸಂವಿದಾ ।
ಸಾಂಪ್ರತಂ ಜೀವಿತಂ ಬುದ್ಧಂ ತದೇವಾಶು ಸ್ಥಿರೀ ಕೃತಂ ॥ ೬೬ ॥

ಪ್ರಾಕ್ತನ ಕರ್ಮಗಳ ಫಲವನ್ನು ಕೊಡುವುದರಲ್ಲಿ ಉನ್ಮುಖನಾದ ಈಶ್ವರ (ದೈವ) ನಾಗಲೀ, ಅಥವಾ ಪ್ರಾಕ್ತನ ಕರ್ಮಗಳಾಗಲಿ, (ಇದು ಮೀಮಾಂಸಕರ ಮಾತು) ಈಗ ಈ ದೇಹದಿಂದ ಆಚರಿಸಿದ ಕರ್ಮಗಳಾಗಲೀ, ಅಥವಾ ವಾಸನೆಗಳಾಗಲೀ ಇತ್ಯಾದಿ ಯಾವುದೊಂದು ಕೂಡ ಎಂದಿಗೂ ಖಂಡಿತವಾಗಿಯೂ ನಿಯಮನ ಮಾಡ ಲಾರವು. (ಬೇರೆ ರೀತಿಯಾಗಿ ಪ್ರವರ್ತಿಸುವಂತೆ ಮಾಡಲಾರವು.)

[ತ್ರಿಶೀರ್ಷಾಣಂ ತ್ವಾಷ್ಟ್ರಮಹನಂ ಅರುನ್ಮುಖಾ‌ನ್ ಯತೀನ್ ಸಾಲಾವೃಕೇಭ್ಯಃ ಪ್ರಾಯಚ್ಛಂ. ಇತ್ಯಾದಿಯಾದ ಮಂತ್ರವು-ಕೊನೆಯಲ್ಲಿ "ತಸ್ಯಮೇ ತತ್ರನ ಲೋಮಚ ಮೀಯತೇ-ಸಯೋಮಾಂ ವಿಜಾನೀಯಾತ್ ನಾಸ್ಯಕೇನಚ ಕರ್ಮಣಾ ಲೋಕೋಮೀಯತೇ. ನಮಾತೃವಧೇನ, ನಪಿತೃವಧೇನ ಎಂದು ಮುಂದುವರಿದಿರು ವುದು. ಕೌಷೀತಕಬ್ರಾಹ್ಮಣೋಪನಿಷತ್. ಅಧ್ಯಾಯ ೩. ಮಂತ್ರ ೧. ತ್ವಾಷ್ಟ್ರಹನ ನಾದಿ ಕ್ರೂರಕರ್ಮಗಳನ್ನು ಮಾಡಿದವನಾಗಿದ್ದರೂ ಬ್ರಹ್ಮಭೂತನಾದ ನನ್ನ ಒಂದು ಕೂದಲನ್ನೂ ಕೂಡ ಆ ಪಾಪವು ಹಿಂಸಿಸಲಾರದು ಎಂದು ಹೇಳಿರುವುದರ ತಾತ್ಪರ್ಯವನ್ನು ಚೆನ್ನಾಗಿ ಗ್ರಹಣ ಮಾಡಿ ತಿಳಿಯಬೇಕು ಈ ವಾಕ್ಯವು ಮೇಲಣ ಶ್ಲೋಕದ ಅರ್ಥವನ್ನು ದೃಢೀಕರಿಸಿ ಪೋಷಿಸುವುದು. ವಿವರಗಳಿಗೆ ಶ್ರೀಮಚ್ಛಾಂಕರ ಸೂತ್ರಭಾಷ್ಯದ ಪ್ರತರ್ದನಾಧಿಕರಣವನ್ನು ಓದಿ ತಿಳಿಯಿರಿ.]

೬೫. ಅಪ್ಪಾ ರಾಮ, ಈ ಕಾರಣದಿಂದ-ತತ್ತ್ವಜ್ಞಾನಿಗಳ ಮನಸ್ಸು ಕಾಕತಾಳೀಯ ನ್ಯಾಯದಂತೆ ಆಕಸ್ಮಿಕವಾಗಿ ಪ್ರಾರಬ್ಧ ಕರ್ಮವಶದಿಂದ ಸಂಪ್ರಾಪ್ತ ವಾದ ಜೀವವನ್ನಾಗಲೀ, ಮರಣವನ್ನಾಗಲೀ ಯಾವಯಾವದನ್ನು ಭಾವನೆಮಾಡು ವುದೋ ಅದದನ್ನು ಕ್ಷಿಪ್ರದಲ್ಲಿಯೇ ಕೂಡಲೆ ಸಮಗ್ರವಾಗಿ ಮಾಡುವುದು.

೬೬. ಹೀಗೆಯೇ ತತ್ತ್ವಜ್ಞಾನಿಯಾಗಿದ್ದ ವೀತಹವ್ಯನ ಚೈತನ್ಯವು ಕಾಕತಾಳೀಯ ನ್ಯಾಯದಿಂದ ಆಗ ಆಕಸ್ಮಿಕವಾಗಿ ಪ್ರಾರಬ್ಧ ಶೇಷೋಪಭೋಗ

ಯದಾ ತು ತಸ್ಯ ಪ್ರತಿಭಾ ವಿದೇಹೋನ್ಮುಕ್ತತಾಂ ಗತಾ ।
ತದಾ ವಿದೇಹ ಮುಕ್ತೋಽಭೂದಸೌ ಸ್ವಾತಂತ್ರ್ಯ ಸಂಸ್ಥಿತಿಃ ॥ ೬೭ ॥

ವಿಗತವಾಸನಮಾಶು ವಿಪಾಶತಾ ।
ಮುಪಗತಂ ಮನ ಆತ್ಮತಯೋದಿತಂ ।
ಯದಭಿವಾಂಛತಿ ತದ್ಭವತಿ ಕ್ಷಣಾತ್ ।
ಸಕಲ ಶಕ್ತಿಮಯೋ ಹಿ ಮಹೇಶ್ವರಃ ॥ ೬೮ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು
ಉಪಶಮಪ್ರಕರಣೇ "ಸದ್ವಿಲಾಸ ವಿಚಾರಯೋಗೋಪದೇಶೋ" ನಾಮ
ಏಕೋನ ನವತಿತಮಃ ಸರ್ಗಃ

ಕ್ಕೋಸ್ಕರ-ಜೀವಿಸಿರಬೇಕೆಂದು ಮನಸ್ಸಿನಿಂದ ಭಾವನೆ ಮಾಡಿ ತಿಳಿದುಕೊಂಡಿತು. ಕೂಡಲೇ ಹಾಗೆಯೇ ಅದನ್ನೇ ಸ್ಥಿರವಾಗಿ ಸ್ವೀಕರಿಸಿತು.

೬೭. ಯಾವಾಗ-ಪ್ರಾರಬ್ಧ ಶೇಷವು ಸಮಾಪ್ತವಾಯಿತೋ ಆಗ ಅವನ ಚೈತನ್ಯವು ವಿದೇಹ ಕೈವಲ್ಯವನ್ನು ಪಡೆಯಬೇಕೆಂದು ಭಾವಿಸಿಕೊಂಡಿತು. ಆ ಕ್ಷಣ ದಲ್ಲಿಯೇ-ಸಂಪೂರ್ಣವಾಗಿ ಸರ್ವಸ್ವತಂತ್ರ ಸ್ಥಿತಿಯುಳ್ಳವನಾದ ಆ ವೀತಹವ್ಯನೂ ಸರ್ವಬಂಧ ವಿನಿರ್ಮುಕ್ತನಾಗಿ ವಿದೇಹ ಮುಕ್ತಿಯನ್ನೇ ಪಡೆದನು.

೬೮. ಸಮಸ್ತ ವಾಸನಾ ಶೂನ್ಯನಾಗಿಯೂ ಸಕಲ ಬಂಧ ವಿಮುಕ್ತ ನಾಗಿಯೂ ಇರುವ ಕಾರಣ ವಾಸ್ತವವಾದ ಆತ್ಮ ಸ್ವಭಾವದಿಂದ ಆವಿರ್ಭವಿಸಿದ ಮನ ಉಪಾಧಿಕನಾದ ಜೀವನು ಯಾವ ಯಾವದನ್ನು ಮನಸ್ಸಿನಿಂದ ಭಾವಿ ಸುವನೋ ಅದೇ ಆಕ್ಷಣವೇ ತಾನು ಆಗಿಬಿಡುವನು. ಏಕೆಂದರೆ ವಾಸ್ತವ ವಾಗಿಯೂ ಸರ್ವಶಕ್ತಿಮಯನಾದ ಸಾಕ್ಷಾತ್ ಪರಮೇಶ್ವರನೇ ತಾನಾಗಿರುವನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ "ಸದ್ವಿಲಾಸ ವಿಚಾರಯೋಗೋಪದೇಶ"ವೆಂಬ
ಎಂಭತ್ತೊಂಭತ್ತನೆಯ ಸರ್ಗವು

ನವತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಯದಾಹ್ಯಸ್ತಂಗತಪ್ರಾಯಂ ಜಾತಂ ಚಿತ್ತಂ ವಿಚಾರತಃ ।
ತದಾ ಹಿ ವೀತಹವ್ಯಸ್ಯ ಜಾತಾ ಮೈತ್ರ್ಯಾದಯೋ ಗುಣಾಃ ॥ ೧ ॥

ತೊಂಭತ್ತನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು :—

೧. ಅಯ್ಯ ರಾಮಚಂದ್ರ, ಯಾವಾಗ ಆ ವೀತಹವ್ಯನ ಚಿತ್ತವು ವಿಚಾರ ಜನ್ಯವಾದ ಆತ್ಮತತ್ತ್ವ ಸಾಕ್ಷಾತ್ಕಾರದಿಂದ ಬಾಧಿತವಾಗಿ ಅಸ್ತಂಗತವಾದಂತೆಯೇ ಕಾರ್ಯಾಕ್ಷಮವಾಗಿದ್ದುಬಿಟ್ಟಿತೋ-ಆಗಲೇ ಆವನಿಗೆ ಮೈತ್ರೀ ಕರುಣಾ ಮುಂತಾದ ಚಿತ್ತಪ್ರಸಾದನ ಹೇತುವಾದ ಗುಣಗಳು ಉಂಟಾದವು.

["ಮೈತ್ರೀ ಕರುಣಾ ಮುದಿತಾ ಉಪೇಕ್ಷಾಣಾಂ ಸುಖದುಃಖ ಪುಣ್ಯಾಪುಣ್ಯ ವಿಷಯಾಣಾಂ ಭಾವನಾತಃ ಚಿತ್ತಪ್ರಸಾದನಂ"-ಪಾತಂಜಲ ಯೋಗಸೂತ್ರ. ೧ ಸಮಾಧಿಪಾದ. ೩೩ ಸೂತ್ರ.] (ಅಸ್ತಂಗತ ಪ್ರಾಯಂ= ಹುರಿದ ಬೀಜದಂತೆ ಮೊಳಕೆಯು ಮೊಳೆಯುವ ಶಕ್ತಿಯನ್ನು ಕಳೆದುಕೊಂಡಿರುವದರಿಂದ ಅಸ್ತಂಗತ ವಾದುದಾದರೂ ಮೇಲೆ ನೋಡುವುದಕ್ಕೆ ಮಾತ್ರ ಬೀಜವಾಗಿಯೇ ಕಾಣುವ ಕಾರಣ ಅಸ್ತಂಗತವಲ್ಲದೆಯೂ ಇರುವಿಕೆ ಎಂದು ತಾತ್ಪರ್ಯ ಪ್ರಕಾಶ ಟೀಕಾಕಾರರ ಮತ. ಇದರಿಂದ ಇಲ್ಲಿ ಪ್ರಕೃತ-ಮನಸ್ಸಿನ ಸ್ವರೂಪ ಮಾತ್ರ ನಾಶವಾಗಿಲ್ಲ. ಆದರೆ ಅದರ ಕಾರ್ಯಕರಣ ಶಕ್ತಿಯು ಸಂಪೂರ್ಣವಾಗಿ ನಾಶಹೊಂದಿರುವುದು ಎಂದು ತಾತ್ಪರ್ಯವೆಂದು ತಿಳಿಯಬೇಕು.)

ಶ್ರೀರಾಮ ಉವಾಚ :—
ವಿಚಾರಾಭ್ಯುದಯಾಚ್ಚಿತ್ತಸ್ವರೂಪೇಽಂತರ್ಹಿತೇ ಮುನೇ ।
ಮೈತ್ರ್ಯಾದಯೋ ಗುಣಾ ಭೂತಾ ಇತ್ಯುಕ್ತಂ ಕಿಂ ತ್ವಯಾ ಪ್ರಭೋ ॥ ೨ ॥

ಬ್ರಹ್ಮಣ್ಯಸ್ತಂಗತೇ ಚಿತ್ತೇ ಕಸ್ಯ ಮೈತ್ರ್ಯಾದಯೋ ಗುಣಾಃ ।
ಕ್ವ ವಾ ಪರಿಸ್ಫುರಂತೀತಿ ವದ ಮೇ ವದತಾಂ ವರ ॥ ೩ ॥

ಶ್ರೀ ವಸಿಷ್ಠ ಉವಾಚ :—
ದ್ವಿವಿಧಶ್ಚಿತ್ತನಾಶೋಽಸ್ತಿ ಸರೂಪೋಽರೂಪ ಏವ ಚ ।
ಜೀವನ್ಮುಕ್ತಃ ಸರೂಪಃ ಸ್ಯಾದರೂಪೋ ದೇಹ ಮುಕ್ತಿಜಃ ॥ ೪ ॥

ಶ್ರೀ ರಾಮನು ಹೇಳಿದನು:—

೨-೩. ಸ್ವಾಮಿ ಪ್ರಭುಗಳಾದ ಮಹರ್ಷಿಗಳೇ, "ವಿಚಾರಪೂರ್ವಕವಾದ ತತ್ತ್ವಜ್ಞಾನೋದಯದ ದೆಸೆಯಿಂದ ವೀತಹವ್ಯನ ಚಿತ್ತದಸ್ವರೂಪವು ಅನಭಿವ್ಯಕ್ತವಾಗಿ ಒಳಗೆ ಅಡಗಿಕೊಂಡಿದ್ದಿತು. ಆಗ ಅದರಲ್ಲಿ ಮೈತ್ರ್ಯಾದಿ ಗುಣಗಳು ಉಂಟಾದವು." ಎಂಬುದು ತಮ್ಮ ಮಾತಿನ ಅಭಿಪ್ರಾಯವೇನು ? ಅಥವಾ ಆ ವೀತಹವ್ಯನ ಮನಸ್ಸೇ ಜ್ಞಾನಬಾಧಿತವಾಗಿ ಬ್ರಹ್ಮನಲ್ಲಿ ಲೀನವಾಗಿ ಅಸ್ತಂಗತವಾಯಿತು. ಆಗ ಮೈತ್ರ್ಯಾದಿ ಗುಣಗಳುಂಟಾದುವು ಎಂದು ತಮ್ಮ ಅಭಿಪ್ರಾಯವೋ ? ಆ ಮೈತ್ರ್ಯಾದಿ ಗುಣಗಳು ಜ್ಞಾನಬಾಧಿತವಾದ ಚಿತ್ತಕ್ಕೆ ಉಂಟಾದುವೇ ? ಅಥವಾ ಅದರ ಅದಿಷ್ಠಾನಕ್ಕೆ ಉಂಟಾದುವೇ ? ಮತ್ತು ಆ ಗುಣಗಳು ಸ್ಫುರಿಸಿದುದು ಎಲ್ಲಿ ? ಚಿದಾಭಾಸದಲ್ಲಿಯೋ ಅಥವಾ ಬೀಜ ಚೈತನ್ಯದಲ್ಲಿಯೋ (ಚಿತ್ತವೆಂಬುದು ಒಂದಿದ್ದರಲ್ಲವೆ ಅದರಲ್ಲಿ ಗುಣಗಳು ಹುಟ್ಟುವುವೆಂದು ಹೇಳಬಹುದು. ಚಿತ್ತವೇ ಜ್ಞಾನಬಾಧಿತವಾಗಿ (ಅತ್ಯಂತಾಸತ್ತಾಗಿ) ಬ್ರಹ್ಮನಲ್ಲಿ ಲಯಹೊಂದಿದ ಬಳಿಕ, ಆ ಗುಣಗಳು ಎಲ್ಲಿ ಸ್ಫುರಿಸಬೇಕು. ಜ್ಞಾನಬಾಧಿತವಾದ ಅತ್ಯಂತ ಅಸತ್ತಾದ ಬಿಸಿಲುಗುದುರೆಯ ನದಿಗಾಗಲಿ ಅಥವಾ ಅದರ ಅಧಿಷ್ಠಾನವಾದ ಮರುಭೂಮಿಗಾಗಲೀ ಶೈತ್ಯ, ಮಾಧುರ್ಯ, ಮುಂತಾದ ಗುಣಗಳು ಸಂಭವಿಸುವುದೇ ಇಲ್ಲವಷ್ಟೇ.) ಅದು ಕಾರಣ-ಉಪದೇಶಕರಲ್ಲಿ-ಅಗ್ರಗಣ್ಯರಾದ ಗುರುಗಳೇ, ತಾವು ದಯೆಮಾಡಿ ತಮ್ಮ ಮಾತಿನ ಅಭಿಪ್ರಾಯವನ್ನು ಸುಸ್ಪಷ್ಟವಾಗಿ ಅಪ್ಪಣೆಕೊಡಿಸಬೇಕಾಗಿ ಪ್ರಾರ್ಥಿಸುವೆನು

ಶ್ರೀ ವಸಿಷ್ಠರು ಹೇಳಿದರು :—

೪. ಅಯ್ಯ ರಾಮ, ಚಿತ್ತನಾಶವೆಂಬುದು ಸರೂಪವೆಂದೂ ಅರೂಪವೆಂದೂ ಎರಡು ಪ್ರಕಾರವಾಗಿರುವುದು. ಜೀವನ್ಮುಕ್ತನ ಚಿತ್ತನಾಶವು ಸರೂಪವೆನ್ನಿಸುವುದು.

ಚಿತ್ತಸತ್ತೇಹ ದುಃಖಾಯ ಚಿತ್ತನಾಶಃ ಸುಖಾಯ ತು ।
ಚಿತ್ತಸತ್ತಾಂ ಕ್ಷಯಂ ನೀತ್ವಾ ಚಿತ್ತಂ ನಾಶ ಮುಪಾನಯೇತ್ ॥ ೫ ॥

ತಾಮಸೈರ್ವಾಸನಾಜಾಲೈರ್ವ್ಯಾಪ್ತಂ ಯಜ್ಜನ್ಮ ಕಾರಣಂ ।
ವಿದ್ಯಮಾನಂ ಮನೋ ವಿದ್ಧಿ ತದ್ದುಃಖಾಯೈವ ಕೇವಲಂ ॥ ೬ ॥

ಪ್ರಾಕ್ತನಂ ಗುಣಸಂಭಾರಂ ಮಮೇತಿ ಬಹು ಮನ್ಯತೇ ।
ಯತ್ತು ಚಿತ್ತಮತತ್ತ್ವಜ್ಞಂ ದುಃಖಿತಂ ಜೀವ ಉಚ್ಯತೇ ॥ ೭ ॥

ವಿದೇಹಮುಕ್ತನಿಗೆ ಆಗುವ ಚಿತ್ತನಾಶವು ಅರೂಪವೆನ್ನಿಸುವುದು. [ಸ್ವಚ್ಛವಾದ ಸ್ಫಟಿಕ ಶಿಲಾಮಯವಾದ ಗೋಡೆಯೊಳಗೆ ಪ್ರತಿಫಲಿತವಾಗಿರುವ ತನ್ನ ಪ್ರತಿಬಿಂಬದಲ್ಲಿ ಬೇರೊಬ್ಬ ಮನುಷ್ಯನೆಂಬ ಭ್ರಾಂತಿಯ ಆಭಾಸದಂತೆ ಪ್ರತಿಭಾಸಮಾನವಾದ ಚಿತ್ತ ರೂಪದಿಂದ ಸಹಿತವಾದುದು ಸರೂಪವು. ಅದರಿಂದ ರಹಿತವಾದುದು ಅರೂಪವು. ಎಂದು ತಾ. ಪ್ರ.]

೫. ಚಿತ್ತದ ಸತ್ತೆಯು ಈ ಜಗತ್ತಿನಲ್ಲಿ ವಿವಿಧಾನೇಕ ದುಃಖ ಪರಂಪರೆಗೆ ಹೇತುವಾಗಿರುವುದು. ಆ ಚಿತ್ತದ ನಾಶವಾದರೋ ನಿತ್ಯನಿರತಿಶಯಾನಂದ ಪ್ರಾಪ್ತಿಗೆ ಮಾರ್ಗವಾಗಿರುವುದು. ಅದು ಕಾರಣ, ರಾಮ, ಮುಮುಕ್ಷುವು ಚಿತ್ತಸತ್ತೆಯನ್ನು ಕ್ರಮೇಣ ಕ್ಷಯಗೊಳ್ಳಿಸಿ, ಕೊನೆಗೆ ಚಿತ್ತವನ್ನು ನಾಶಹೊಂದಿಸಬೇಕು.

೬. ಅಬಾಧಿತವಾದ ಅಜ್ಞಾನದಿಂದ ಉದ್ಭವಿಸಿದ-ಕೇವಲ ತಮೋಗುಣ ಪ್ರಧಾನವಾದ ನಾನಾ ವಿಷಯವಾಸನಾಜಾಲಗಳಿಂದ ವ್ಯಾಪ್ತವಾಗಿರುವ ಮನಸ್ಸು ಯಾವುದಿರುವುದೋ ಅದನ್ನು ಸತ್ತಾನ್ವಿತವಾದ (ಇರುವ) ಮನಸ್ಸೆಂದು ತಿಳಿ. ಅದು ಜನ್ಮಾದಿಗಳಿಗೆ ಕಾರಣವಾಗಿರುವುದರಿಂದ ಕೇವಲ ನಿರವಧಿಕವಾದ ದುಃಖ ಪರಂಪರೆಗಳನ್ನು ನಿರಂತರವೂ ಒಡ್ಡುತ್ತಲೇ ಇರುವುದೆಂದೂ ತಿಳಿ.

೭. ಯಾವ ಚಿತ್ತವಾದರೆ ತತ್ತ್ವಜ್ಞಾನರಹಿತವಾಗಿರುತ್ತಾ, ಅನಾದ್ಯಧ್ಯಾಸ ಸಿದ್ಧವಾದ ದೇಹ, ಇಂದ್ರಿಯ-ವಿಷಯ ಮುಂತಾದವುಗಳ ವಿವಿಧ ಧರ್ಮಗಳ ಸಮುದಾಯವನ್ನು ಆತ್ಮಸಂಸರ್ಗಾಧ್ಯಾಸದಿಂದ ತನಗೆ ಸಂಬಂಧಪಟ್ಟದೆಂದು ಭ್ರಮಿಸಿ ಬಹುವಾಗಿ ಅಭಿಮಾನಪಡುವುದೋ ಅದನ್ನು ಜೀವನೆಂದು (ಬದುಕಿರತಕ್ಕ

ವಿದ್ಯಮಾನಂ ಪುನೋ ಯಾವತ್ತಾವದ್ದುಃಖ ಕ್ಷಯಃ ಕುತಃ ।
ಮನಸ್ಯಸ್ತಂ ಗತೇ ಜಂತೋಃ ಸಂಸಾರೋಽಸ್ತ ಮುಪಾಗತಃ ॥ ೮ ॥

ದುಃಖಮೂಲ ಮವಷ್ಟಬ್ಧಮಸ್ಮಿನ್ನೇವ ವಿನಿಶ್ಚಲಂ ।
ವಿದ್ಯಮಾನಂ ಮನೋ ವಿದ್ಧಿ ದುಃಖ ವೃಕ್ಷವನಾಂಕುರಂ ॥ ೯ ॥

ಶ್ರೀರಾಮ ಉವಾಚ :—

ನಷ್ಟಂ ಕಸ್ಯ ಮನೋ ಬ್ರಹ್ಮನ್ ನಷ್ಟಂ ಪಾ ಕೀದೃಶಂ ಭವೇತ್ ।
ಕೀದೃಶಶ್ಚಾಸ್ಯ ನಾಶಃ ಸ್ಯಾತ್ ಸತ್ತಾ ನಾಶಸ್ಯ ಕೀದೃಶೀ ॥ ೧೦ ॥

ಮನಸ್ಸು) ಎಂದು ಪ್ರಾಜ್ಞರು ಹೇಳುವರು. ಅಂತಹ ಬದುಕಿರುವ ಮನಸ್ಸು ಸರ್ವದಾ ಅವಿಚ್ಛಿನ್ನವಾಗಿ ಅತ್ಯಂತ ದುಃಖಮಯವಾದದು.

೮. ಎಲ್ಲಿಯವರೆವಿಗೆ ಈ ಮನಸ್ಸು ಸತ್ತಾನ್ವಿತವಾಗಿ ಬದುಕಿರುವುದೋ-ಅದುವರೆವಿಗೂ ಜಗತ್ತಿನಲ್ಲಿ ಪ್ರಾಣಿಗಳಿಗೆ ದುಃಖಕ್ಷಯವು ಎಲ್ಲಿಂದ ಹೇಗೆ ಸಂಭವಿಸುವುದು ? (ದುಃಖಕ್ಷಯವಾಗುವ ಪ್ರಸಕ್ತಿಯೂ ಇಲ್ಲವೇ ಇಲ್ಲವೆಂದರ್ಥ) ಆದರೆ ಯಾವಾಗ ಈ ಮನಸ್ಸು ಅಸ್ತಂಗತವಾಗಿ ಇಲ್ಲವಾಗಿಬಿಡುವುದೋ ಆಗಲೇ ಮನೋಮೂಲಕವಾದ ಈ ಸಂಸಾರವೆಲ್ಲವೂ ಮನಸ್ಸಿನ ಜೊತೆಯಲ್ಲಿ ಸ್ವತಏವ ಅಸ್ತಂಗತವಾಗಿಯೇ ನಿರ್ನಾಮವಾಗುವುದರಲ್ಲಿ ಸಂದೇಹವಿಲ್ಲ.

೯. ಅಯ್ಯ ರಾಮ, ಕೇವಲ ಅಜ್ಞಾನಿಗಳಾದ ಪ್ರಾಣಿಗಳಲ್ಲಿ ಮಾತ್ರವೇ ಈ ಮನಸ್ಸು ಅವಿದ್ಯಾ ಕಾಮಕರ್ಮಾದಿ ನಾನಾ ವಿಷಯ ವಾಸನೆಗಳೆಂಬ ಶಾಖೋಪಶಾಖೆಗಳಿಂದಲೂ ಪಲ್ಲವ ರಾಶಿಗಳಿಂದಲೂ ದೃಢವಾಗಿಯೂ ನಿಶ್ಚಲವಾಗಿಯೂ ಪ್ರತಿಷ್ಠಿತವಾಗಿರುವುದು ಹೀಗೆ ಉಲ್ಲಾಸಗೊಂಡು ಜೀವಿಸಿರುವ ಮನಸ್ಸೇ ದುಃಖವೆಂಬ ವೃಕ್ಷಕ್ಕೆ ಆಧಾರವಾದ ಬೇರು ಎಂದು ತಿಳಿ. ಇದರ ದೆಸೆಯಿಂದಲೇ ವಿವಿಧ ದುಃಖ ಪರಂಪರೆಗಳೆಂಬ ನಾನಾ ಅಂಕುರಗಳು ಮೊಳೆತು ವೃದ್ಧಿಹೊಂದಿ ಅತ್ಯಂತ ದುರ್ಗಮವಾದ ಸಂಸಾರವೆಂಬ ದೊಡ್ಡ ಮರಗಳ ತೋಪು ಕಲ್ಪಿತವಾಗಿರುವುದು.

ಶ್ರೀರಾಮನು ಕೇಳಿದನು :—

೧೦. ಸ್ವಾಮಿ ಬ್ರಹ್ಮಜ್ಞರೇ, ಪ್ರಪಂಚದಲ್ಲಿ ಯಾರಿಗೆ ಮನಸ್ಸು ನಷ್ಟವಾಗಿರುವುದು ? ನಷ್ಟವಾದ ಬಳಿಕ ಅದು ಹೇಗೆ ಇರುವುದು ? ಇದರ ನಾಶವು ಯಾವರೀತಿ

ಶ್ರೀ ವಸಿಷ್ಠ ಉವಾಚ :—
ಚೇತಸಃ ಕಥಿತಾ ಸತ್ತಾ ಮಯಾ ರಘುಕುಲೋದ್ವಹ !
ಅಸ್ಯ ನಾಶಮಿದಾನೀಂ ತ್ವಂ ಶೃಣು ಪ್ರಶ್ನವಿದಾಂವರ ॥ ೧೧ ॥

ಸುಖದುಃಖದಶಾ ಧೀರಂ ಸಾಮ್ಯಾನ್ನ ಪ್ರೋದ್ಧರಂತಿ ಯಂ ।
ನಿಃಶ್ವಾಸಾ ಇವ ಶೈಲೇಂದ್ರಂ ಚಿತ್ತಂ ತಸ್ಯ ಮೃತಂ ವಿದುಃ ॥ ೧೨ ॥

ಅಯಂ ಸೋಹಮಯಂ ನಾಹಮಿತಿ ಚಿಂತಾ ನರೋತ್ತಮಂ ।
ಖರ್ವೀಕರೋತಿ ಯಂ ನಾಂತಃ ನಷ್ಟಂ ತಸ್ಯ ಮನೋ ವಿದುಃ ॥ ೧೩ ॥

ಯಾದುದು ? (ಎಂತಹುದು ?) ಅಭಾವತ್ವವನ್ನು ಹೊಂದುವುದೇ ಅಲ್ಲವೆ ನಾಶ ವೆನ್ನಿಸುವುದು. ಅಂತಹ ನಾಶದ ಸತ್ತೆಯು ಅಥವಾ ವ್ಯವಹಾರ ಯೋಗ್ಯವಾದ ಸ್ಥಿತಿಯು ಯಾವ ಲಕ್ಷಣಗಳುಳ್ಳದು ?
ಶ್ರೀ ವಸಿಷ್ಠರು ಹೇಳಿದರು :—

೧೧. ಅಯ್ಯ ರಘುಕುಲೋತ್ತಮನಾದ ರಾಮ, ಔಚಿತ್ಯವರಿತು ಪ್ರಶ್ನೆ ಮಾಡುವವರಲ್ಲಿ ನೀನು ಶ್ರೇಷ್ಠನಾಗಿದ್ದೀಯೆ. ನಿನ್ನ ಈ ಕೌಶಲವನ್ನು ಬಹುವಾಗಿ ಮೆಚ್ಚಿದೆನು. ಇದೇ ಸರ್ಗದ ಆರನೆಯ ಶ್ಲೋಕದಿಂದ ಮೊದಲು ಇಲ್ಲಿಯ ವರೆವಿಗೆ ನಾನು ನಿನಗೆ ಚಿತ್ತ ಸತ್ತೆಯ ವಿಚಾರವನ್ನು ಹೇಳಿ ಯಾಯಿತು. ಇನ್ನು ಮುಂದೆ ಈಗಲೇ ಆ ಚಿತ್ತ ನಾಶದ ವಿಚಾರವನ್ನು ಹೇಳುವೆನು. ಕೇಳು.

೧೨. ಪ್ರಾಣಿಯ ನಿಃಶ್ವಾಸ ವಾಯುಗಳು ಪರ್ವತ ರಾಜನಾದ ಹಿಮವಂತ ನನ್ನು ಸ್ವಲ್ಪ ಮಾತ್ರವೂ ಅಲುಗಾಡಿಸುವುದಕ್ಕೆ ಶಕ್ತಿಯಿಲ್ಲದವುಗಳಾಗಿರುವಂತೆ ಬಾಹ್ಯಗಳೇ ಆಗಲಿ ಅಥವಾ ಆಭ್ಯಂತರಗಳೇ ಆಗಲಿ ಸುಖ ದುಃಖ ದಶೆಗಳು ಯಾವ ಧೀರನಾದ ಪುರುಷನನ್ನು ಸರ್ವಸಮಸ್ವಭಾವವಾದ ಸ್ವಾತ್ಮ ಸ್ವರೂಪ ಸ್ಥಿತಿಯಿಂದ (ಸಾಮ್ಯಾತ್) ಕದಲಿಸಲಾರದವುಗಳಾಗಿರುವುವೋ ಅಂತಹ ಮಹಾ ಪುರುಷನ ಚಿತ್ತವು ಮೃತವಾಗಿರುವುದೆಂದು. (ಸತ್ತಿರುವುದೆಂದು) ಜ್ಞಾನಿಗಳು ತಿಳಿದಿರುವರು.

೧೩. ಏಳು ಚೋಟುದ್ದದ ಆಕಾರವುಳ್ಳ ಈ ದೇಹವು ಮಹಾ ಪ್ರಸಿದ್ಧನಾದ ನಾನು. ಅದಕ್ಕಿಂತ ಬೇರೆಯಾದ ಇದೆಲ್ಲವು ನಾನಲ್ಲ ಎಂಬೀ ಭಾವನೆಯು ಯಾವ ಪುರುಷನನ್ನು ಅಂತರಂಗದಲ್ಲಿ ಒಂದು ಪರಿಮಿತಿಗೆ ಅಳವಟ್ಟ ಪರಿಚ್ಛಿನ್ನರೂಪನನ್ನಾಗಿ

ಆಪತ್ಕಾರ್ಪಣ್ಯ ಮುತ್ಸಾಹೋ ಮದೋ ಮಾಂದ್ಯಂ ಮಹೋತ್ಸವಃ ।
ಯಂ ನಯಂತಿ ನ ವೈರೂಪ್ಯಂ ತಸ್ಯ ನಷ್ಟಂ ವಿದುರ್ಮನಃ ॥ ೧೪ ॥

ಏಷ ಸಾಧೋ ಮನೋನಾಶೋ ನಷ್ಟಂ ಚೇಹ ಮನೋ ಭವೇತ್ ।
ಚಿತ್ತನಾಶದಶಾ ಚೈಷಾ ಜೀವನ್ಮುಕ್ತಸ್ಯ ವಿದ್ಯತೇ ॥ ೧೫ ॥

ಮನಸ್ತಾಂ ಮೂಢತಾಂ ವಿದ್ಧಿ ಯದಾ ನಶ್ಯತಿ ಸಾನಘ ।
ಚಿತ್ತನಾಶಾಭಿಧಾನಂ ಹಿ ತದಾ ಸತ್ವಮುದೇತ್ಯಲಂ ॥ ೧೬ ॥

ಮಾಡುವುದಿಲ್ಲವೋ ಅಂತಹ ಪುರುಷೋತ್ತಮನ ಮನಸ್ಸು ಒಳಗೆ ನಷ್ಟವಾಗಿರುವುದೆಂದು ಜ್ಞಾನಿಗಳು ತಿಳಿದಿರುವರು.

೧೪. ಪ್ರಪಂಚದಲ್ಲಿ ವಿಪತ್ತು, ಕಾರ್ಪಣ್ಯ, ಉತ್ಸಾಹ, ಮದ, ಮೌಢ್ಯ, ಮಹೋತ್ಸವ (ಆನಂದ) ಇತ್ಯಾದಿಗಳು ಯಾವುವೊಂದೂ ಯಾವ ಮಹಾನುಭಾವನ ಮುಖದ ತೇಜಸ್ಸನ್ನು ಕೆಡಿಸಿ ವಿಕಾರಗೊಳಿಸುವುದಿಲ್ಲವೋ, ಅವನ ಮನಸ್ಸನ್ನು ನಷ್ಟವಾಗಿರುವುದೆಂದು ಪ್ರಾಜ್ಞರು ತಿಳಿಯುವರು.

೧೫. ಎಲೈ ಸಾಧುವೇ, ಇದೇ ಮನೋನಾಶದ ಲಕ್ಷಣವು. ಮತ್ತು ಈ ಲಕ್ಷಣಗಳಿಂದ ಕೂಡಿ ಈರೀತಿಯಲ್ಲಿರತಕ್ಕ ಮನಸ್ಸನ್ನೇ ಇಲ್ಲಿ ನಾನು "ನಷ್ಟವಾದ ಮನಸ್ಸು" (ನಷ್ಟಂ ಮನಃ) ಎಂದು ಹೇಳಿದುದು. ಇಂತಹ ಚಿತ್ತನಾಶದಶೆಯು ಜೀವನ್ಮುಕ್ತನಿಗೆ ಸರ್ವದಾ ಇದ್ದೇ ಇರುವುದು.

೧೬. ಅಯ್ಯ ಅನಘ, ದೃಶ್ಯವಾದ ಜಗತ್ತನ್ನು ಭ್ರಾಂತಿಯಿಂದ ಪರಮಾರ್ಥ ಸತ್ಯವೆಂದು ತಪ್ಪಾಗಿಯೇ ತಿಳಿದುಕೊಂಡು ಸರ್ವದಾ ಅದನ್ನು ಮನನ ಮಾಡುವ ಮನಸ್ಸಿನ ಸ್ವಭಾವವನ್ನು (ಮನಸ್ತಾಂ) ಮಹಾ ದುರ್ಭೇದ್ಯವಾದ ಮೌಢ್ಯವೆಂಬುದಾಗಿ ತಿಳಿ. ಆ ಬಗೆಯಾದ ಮನನ ಸ್ವಭಾವವೆಂಬ ಮನಸ್ಸಿನ ಮೌಢ್ಯವು ಯಾವಾಗ ನಾಶಹೊಂದಿಬಿಡುವುದೋ ಆಗಲೇ ಚಿತ್ತನಾಶವೆಂಬ ಹೆಸರಿನಿಂದ ಪ್ರಸಿದ್ಧವಾದ ಶುದ್ಧ ಸತ್ವ್ವಭಾವವು ಸ್ವತಏವ ವಿಶೇಷವಾಗಿ ಆವಿರ್ಭವಿಸುವುದು.

ತಸ್ಯ ಸತ್ವ ವಿಲಾಸಸ್ಯ ಚಿತ್ತನಾಶಸ್ಯ ರಾಘವ ।
ಜೀವನ್ಮುಕ್ತ ಸ್ವಭಾವಸ್ಯ ಕೈಶ್ಚಿಚ್ಚಿತ್ತಾಭಿಧಾ ಕೃತಾ ॥ ೧೭ ॥

ಮೈತ್ರ್ಯಾದಿಭಿರ್ಗುಣೈರ್ಯುಕ್ತಂ ಭವತ್ಯುತ್ತಮ ವಾಸನಂ ।
ಭೂಯೋ ಜನ್ಮವಿನಿರ್ಮುಕ್ತಂ ಜೀವನ್ಮುಕ್ತ ಮನೋಽನಘ ॥ ೧೮ ॥

ವ್ಯಾಪ್ತಂ ವಾಸನಯಾ ಯತ್ಸ್ಯಾತ್ ಭೂಯೋ ಜನನ ಮುಕ್ತಯಾ ।
ಜೀವನ್ಮುಕ್ತ ಮನಃಸತ್ತಾ ರಾಮ ತತ್ಸತ್ವಮುಚ್ಯತೇ ॥ ೧೯ ॥

[ಮನನ ಸ್ವಭಾವವೆಂಬ ಮನಸ್ಸಿನ ಮೌಢ್ಯ ನಾಶವೇ ಮನೋನಾಶವೆನ್ನಿಸುವುದು. ಆಗಲೇ ಮನಸ್ಸಿನ ಕೇವಲ ಶುದ್ಧ ಸತ್ಸ್ವಭಾವವು ಉದಯಿಸಿ ಪ್ರಕಟವಾಗುವುದು.]

೧೭. ಅಯ್ಯ ರಾಘವ, ಈ ಪೂರ್ವೋಕ್ತವಾದ ಮನಸ್ಸಿನ ಶುದ್ಧ ಸತ್ಸ್ವಭಾವದ ವಿಲಾಸವೇ ಚಿತ್ತನಾಶವೆನ್ನಿಸುವುದು. ಇದೇ ಜೀವನ್ಮುಕ್ತಾತ್ಮನ ಸಹಜವಾದ ಸ್ವಭಾವವು. ಇದರ ತತ್ತ್ವವನ್ನು ತಿಳಿಯದ ಕೆಲವರು ಮೂಢರು ಇದಕ್ಕೆ ಚಿತ್ತವೆಂಬ ಹೆಸರನ್ನೂ ಕಲ್ಪಿಸಿರುವರು.

೧೮. ಅಪ್ಪಾ ಅನಘನಾದ ರಾಮಭದ್ರ, ಅಂತಹ ಶುದ್ಧ ಸತ್ಸ್ವಭಾವವಾದ (ಸತ್ವ) ಜೀವನ್ಮುಕ್ತನ ಮನಸ್ಸೇ ಮೈತ್ರೀ ಮುಂತಾದ ಭಾವನಾವಿಶಿಷ್ಟವಾದ ಸದ್ಗುಣಗಳಿಂದ ಯುಕ್ತವಾಗಿ, ಅತ್ಯುತ್ತಮವಾದ ಬ್ರಹ್ಮಾಕಾರ ಸಂಸ್ಕಾರ (ವಾಸನಾ) ವುಳ್ಳದ್ದಾಗಿಯೂ, ಪುನರ್ಜನ್ಮರಹಿತವಾಗಿಯೂ ಇರುವುದು.

೧೯. ಅಯ್ಯ ರಾಮ, ಪುನರ್ಜನ್ಮರಹಿತವಾದ ಕೇವಲ ಬ್ರಹ್ಮಾಕಾರ ವಾಸನೆಯಿಂದ ವ್ಯಾಪ್ತವಾಗಿರುವ ಯಾವ ಜೀವನ್ಮುಕ್ತನ ಮನಸ್ಸಿನ ಸತ್ತೆಯು (ಸದ್ಭಾವವು) ಇರುವುದೋ ಅದನ್ನೇ ಶಾಸ್ತ್ರಜ್ಞರು ಸತ್ವವೆಂಬ ಹೆಸರನಿಂದ ವ್ಯವಹರಿಸುವರು.

ಸಂಪ್ರತ್ಯೇವಾನುಭೂತತ್ವಾತ್ಸತ್ವಾವ್ಯಾಪ್ತ್ಯಾ ತನ್ವಸಂಯುತಃ ।
ಸರೂಪೋಽಸೌ ಮನೋನಾಶೋ ಜೀವನ್ಮುಕ್ತಸ್ಯ ವಿದ್ಯತೇ　　॥ ೨೦ ॥

ಮೈತ್ರ್ಯಾದಯೋಽಥ ಮುದಿತಾಃ ಶಶಾಂಕ ಇವ ದೀಪ್ತಯಃ ।
ಜೀವನ್ಮುಕ್ತ ಮನೋನಾಶೇ ಸರ್ವದಾ ಸರ್ವಥಾ ಸ್ಥಿತಾಃ　　॥ ೨೧ ॥

ಜೀವನ್ಮುಕ್ತ ಮನೋನಾಶೇ ಸತ್ವನಾಮ್ನಿ ಹಿಮಾಲಯೇ ।
ವಸಂತ ಇವ ಮಂಜರ್ಯಃ ಸ್ಫುರಂತಿ ಗುಣ ಸಂಪದಃ　　॥ ೨೨ ॥

---

೨೦. ಈ ಮನೋನಾಶವು ಸಮಾಧಿಯಿಂದ ಬಹಿರ್ಮುಖನಾದ ಕಾಲದಲ್ಲಿ ಮಾತ್ರವೇ ಪ್ರತಿಭಾಸಮಾನವಾಗಿ ಅನುಭವ ಗೋಚರವಾಗುವ ಕಾರಣ ಸಾಕಾರ (ಸರೂಪ)ವಾಗಿರುವಂತೆಯೂ, ಶುದ್ಧ ಸನ್ಮಾತ್ರ ಸ್ವಭಾವ ಪ್ರಾಪ್ತಿಯಿಂದ ಅರೂಪ ವಾಗಿಯೂ (ದೇಹಾದಿ ಪರಿಚ್ಛೇದದ ಸಂಪರ್ಕವಿಲ್ಲದುದಾಗಿಯೂ) ಮತ್ತು ಮನನ ಮಾಡಬೇಕಾದ ದೃಶ್ಯವೇ ಇಲ್ಲದ ಕಾರಣ ಮನನ ಸ್ವಭಾವ ಶೂನ್ಯವಾಗಿ (ಮನೋ ನಾಶವಾಗಿಯೂ) ಯೂ ಜೀವನ್ಮುಕ್ತನಿಗೆ ಇದ್ದುಕೊಂಡಿರುವುದು.

೨೧. ಜೀವನ್ಮುಕ್ತನ ಮನೋನಾಶವೆಂಬುದು ಹೀಗೆ ಮನನ ಸ್ವಭಾವ ಶೂನ್ಯವೂ, ಶುದ್ಧ ಸತ್ವಸ್ವಭಾವವೂ ಆಗಿರುವುದರಿಂದಲೇ, ಬಳಿಕಲೂ ಮನಃ ಪ್ರಸಾದ ಜನಕಗಳಾದ ಮೈತ್ರೀ ಮೊದಲಾದ ಗುಣಗಳು ಚಂದ್ರನಲ್ಲಿ ಪ್ರಸನ್ನಗಳಾದ ಕಲೆಗಳಿರುವಂತೆ ಆ ಚಿತ್ತದಲ್ಲಿ ಸರ್ವದಾ ಸರ್ವಪ್ರಕಾರವಾಗಿಯೂ ಇದ್ದೇ ಇರುವುವು.

೨೨. ಇಲ್ಲಿಯೇ ೧೯ನೆಯ ಶ್ಲೋಕದಲ್ಲಿ ಹೇಳಿದಂತೆ ಸತ್ವವೆಂಬ ಹೆಸರಿನಿಂದ ವ್ಯವಹಾರ ಯೋಗ್ಯವಾಗಿರುವ ಜೀವನ್ಮುಕ್ತ ಮನೋನಾಶವು ಹಿಮದಂತೆ ತಂಪಾದ ಸಂತೋಷಕ್ಕೆ ಗಣಿಯಾಗಿರುವುದು. ವಸಂತರ್ತುವಿನಲ್ಲಿ ಪುಷ್ಪ ಮಂಜರಿಗಳು ಸ್ಫುರಿಸುವಂತೆ ಅದರಲ್ಲಿ ಮೈತ್ರ್ಯಾದಿ ಗುಣ ಗಣಗಳು ಸಮೃದ್ಧಿಯಾಗಿ ಸ್ಫುರಿಸುವುವು.

ಅರೂಪಸ್ತು ಮನೋನಾಶೋ ಯೋ ಮಯೋಕ್ತೋ ರಘೂದ್ವಹ ।
ವಿದೇಹಮುಕ್ತ ಏವಾಸೌ ವಿದ್ಯತೇ ನಿಷ್ಕಲಾತ್ಮಕಃ ॥ ೨೩ ॥

ಸಮಗ್ರಾಗ್ರ್ಯ ಗುಣಾಧಾರಮಪಿ ಸತ್ವಂ ಪ್ರಲೀಯತೇ ।
ವಿದೇಹ ಮುಕ್ತೇ ವಿಮಲೇ ಪದೇ ಪರಮ ಪಾವನೇ ॥ ೨೪ ॥

ವಿದೇಹ ಮುಕ್ತಿ ವಿಷಯೇ ತಸ್ಮಿನ್ಸತ್ವ ಕ್ಷಯಾತ್ಮಕೇ ।
ಚಿತ್ತನಾಶೇ ವಿರೂಪಾಖ್ಯೇ ನ ಕಿಂಚಿದಪಿ ವಿದ್ಯತೇ ॥ ೨೫ ॥

---

೨೩. ಅಯ್ಯ ರಘುಕುಲೋತ್ತಮನಾದ ರಾಮ, ನಾನು ಈಗ ಆಗಲೇ ನಿನಗೆ ಹೇಳಿರುವ ಅರೂಪ ಮನೋನಾಶವಾದರೋ ವಿದೇಹ ಮುಕ್ತನಲ್ಲಿ ಮಾತ್ರವೇ ನಿಷ್ಕಲಾತ್ಮಕವಾಗಿರುವುದು.

೨೪. ಪರಮ ಪಾವನವೂ, ದೋಷ ಶೂನ್ಯವೂ ಆದ ವಿದೇಹ ಮುಕ್ತನ ಸ್ಥಿತಿಯಲ್ಲಿ ಸಮಸ್ತ ಉದಾತ್ತ ಗುಣಗಳಿಗೆ ಆಶ್ರಯವಾಗಿರುವ ಪ್ರಾತಿಭಾಸಿಕ ಮನಸ್ಸೂ ಕೂಡ ಲಯಹೊಂದಿಬಿಡುವುದು. (ಸತ್ವ = ಪ್ರಾತಿಭಾಸಿಕವಾದ ಮನಸ್ಸು.)

೨೫. ಹೀಗೆ ವಿದೇಹ ಮುಕ್ತರಿಗೆ ಮಾತ್ರವೇ ವಿಷಯವಾಗಿರತಕ್ಕ ಪ್ರಾತಿಭಾಸಿಕ ಮನೋಲಯ ರೂಪವಾದ ಅರೂಪವೆಂಬ ಹೆಸರುಳ್ಳ ಮನೋನಾಶದಲ್ಲಿ ಯಾವುದೊಂದು ದೃಶ್ಯವೂ ಸರ್ವಥಾ ಸುತರಾಂ ಇರುವುದೇ ಇಲ್ಲ.

[" ಯತ್ರ ನಾನ್ಯತ್ ಪಶ್ಯತಿ, ನಾನ್ಯತ್ ಶೃಣೋತಿ, ನಾನ್ಯತ್ ವಿಜಾನಾತಿ ಸ ಭೂಮಾ " ಯೋವೈ ಭೂಮಾ ತತ್ ಸುಖಂ ನಾಲ್ಪೇ ಸುಖಮಸ್ತಿ ಭೂಮೈವ ಸುಖಂ ಭೂಮಾತು ಏವ ವಿಜಜ್ಞಾಸಿತವ್ಯಃ. ಛಾಂದೋಗ್ಯ ಅಧ್ಯಾಯ. ೭. ಖಂಡ ೨೩-೨೪.]

ನ ಗುಣಾ ನಾಗುಣಾಸ್ತತ್ರ ನ ಶ್ರೀಃನಾಶ್ರೀರ್ನ ಲೋಲತಾ ।
ನ ಚೋದಯೋ ನಾಸ್ತಮಯೋ ನ ಹರ್ಷಾಮರ್ಷ ಸಂವಿದಃ ॥ ೨೬ ॥

ನ ತೇಜೋ ನ ತಮಃ ಕಿಂಚಿನ್ನ ಸಂಧ್ಯಾ ದಿನರಾತ್ರಯಃ ।
ನ ದಿಶೋ ನ ಚ ವಾಕಾಶೋ ನಾಧೋ ನಾನರ್ಥ ರೂಪತಾ ॥ ೨೭ ॥

ನ ವಾಸನಾ ನ ರಚನಾ ನೇಹಾನೀಹೇ ನ ರಂಜನಾ ।
ನ ಸತ್ತಾ ನಾಪಿ ವಾಽಸತ್ತಾ ನ ಚ ಸಾಧ್ಯಂ ಹಿ ತತ್ಪದಂ ॥ ೨೮ ॥

ಅತಮಸ್ತೇಜಸಾ ವ್ಯೋಮ್ನಾ ವಿತಾರೇಂದ್ವರ್ಕವಾಯುನಾ ।
ತತ್ಸಮಂ ಶರದಚ್ಛೇನ ನಿಃಸಂಧ್ಯೇನಾರಜಸ್ತ್ವಿಷಾ ॥ ೨೯ ॥

೨೬–೨೮. ಅದರಲ್ಲಿ ಗುಣಗಳೂ ಇಲ್ಲ. ಅಗುಣಗಳೂ ಇರುವುದಿಲ್ಲ. ಶ್ರೀಯು (ಸಂಪತ್ತು) ಇಲ್ಲ. ಅಶ್ರೀಯು (ಸಂಪತ್ತು ಇಲ್ಲದಿರುವಿಕೆಯು ಅಥವಾ ವಿಪತ್ತು) ಇರುವುದಿಲ್ಲ. ಚಪಲತೆಯೂ ಇಲ್ಲ. ಉದಯವೂ ಇರುವುದಿಲ್ಲ. ಅಸ್ತಮಯವೂ ಇರುವುದಿಲ್ಲ. ಹರ್ಷ ಕ್ರೋಧಗಳ ಜ್ಞಾನಗಳೂ ಇರುವುದಿಲ್ಲ. ತೇಜಸ್ಸೂ ಇಲ್ಲ. ತಮಸ್ಸೂ ಇಲ್ಲ. ಸಂಧ್ಯಾಕಾಲ (ಸಂಜೆ) ಹಗಲು ರಾತ್ರಿಗಳು ಒಂದೂ ಇಲ್ಲ. ದಿಕ್ಕುಗಳೂ ಇರುವುದಿಲ್ಲ ಆಕಾಶವೂ ಇರುವುದಿಲ್ಲ. ಅಧೋ ಭಾಗವೂ ಇರುವುದಿಲ್ಲ. (ಪಾತಾಳ), ಅನರ್ಥ ರೂಪತ್ವವೂ ಇರುವುದಿಲ್ಲ. ವಾಸನೆ (ಪೂರ್ವತನ ಸಂಸ್ಕಾರ)ಯೂ ಇರುವುದಿಲ್ಲ. ರಚನೆಯೂ ಇಲ್ಲ. ಇಚ್ಛಾನಿಚ್ಛೆಗಳೂ ಇರುವುದಿಲ್ಲ. ರಾಗವೂ (ಲೇಪವೂ) ಇರುವುದಿಲ್ಲ. ಭಾವವೂ ಇರುವುದಿಲ್ಲ ಮತ್ತು ಅಭಾವವೂ ಇರುವುದಿಲ್ಲ. ಇಂತಹ ಉತ್ತಮೋತ್ತಮವಾದ (ಭೂಮಾತ್ಮ) ಪದವು ಸರ್ವ ಸಾಧಾರಣವಾಗಿ ಅಜ್ಞಜನ ಸಾಧ್ಯವಲ್ಲ. [ಅನೇಕ ಜನ್ಮ ಸಂಸಿದ್ಧಃ ತತೋಯಾತಿ ಪರಾಂಗತಿಂ. ಗೀತಾ. ೬-೪೫.]

೨೯. ಇಂತಹ ಆ (ಭೂಮಾತ್ಮ) ಪದವು. ತಮಸ್ಸೂ, ತೇಜಸ್ಸೂ ಇಲ್ಲದೆಯೂ, ನಕ್ಷತ್ರ, ಚಂದ್ರ, ಸೂರ್ಯ, ವಾಯುಗಳೊಂದೂ ಇಲ್ಲದೆಯೂ, ಸಂಧ್ಯಾಕಾಲವಿಲ್ಲದೆಯೂ, ರಜಸ್ಸಿನಿಂದಲೂ (ಧೂಳಿ) ಸೂರ್ಯನ ಪ್ರಕಾಶದಿಂದಲೂ ರಹಿತವಾಗಿಯೂ ಇರುವ ಸ್ವಚ್ಛವಾದ ಶರದೃತುವಿನ ಆಕಾಶಕ್ಕೆ ಸಮನಾಗಿ ಪ್ರಶಾಂತವಾಗಿರುವುದು.

ಯೇಹಿ ಪಾರಂ ಗತಾ ಬುದ್ಧೇಃ ಸಂಸಾರಾಚರಣಸ್ಯ ಚ ।
ತೇಷಾಂ ತದಾಸ್ಪದಂ ಸ್ಫಾರಂ ಪವನಾನಾಮಿವಾಂಬರಂ ॥ ೩೦ ॥

ಸಂಶಾಂತ ದುಃಖಮಜಡಾತ್ಮಕಮೇವ ಸುಪ್ತ ।
ಮಾನಂದ ಮಂಥರ ಮಪೇತ ರಜಸ್ತಮೋ ಯತ್ ।
ಆಕಾಶಕೋಶ ತನವೋಽತನವೋ ಮಹಾಂತ ।
ಸ್ತಸ್ಮಿನ್ಪದೇ ಗಲಿತ ಚಿತ್ತಲವಾ ವಸಂತಿ ॥ ೩೧ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಚಿತ್ತೋಪದೇಶ ವಿಚಾರಯೋಗೋಪದೇಶೋ" ನಾಮ ನವತಿತಮಃ ಸರ್ಗಃ

---

೩೦. ಯಾರಾದರೆ ನಿಷ್ಕೃಷ್ಟವಾದ ಸ್ವಾತ್ಮತತ್ತ್ವಜ್ಞಾನ ನಿಷ್ಠೆಯಿಂದ ಸಾಂಸಾರಿಕ ಸಕಲ ವ್ಯವಹಾರಗಳನ್ನು ದಾಟಿ (ಅತಿಕ್ರಮಿಸಿ) ಪಾರಂಗತರಾಗಿರುವರೋ, ಅಂತಹ ಮುಕ್ತರಿಗೆ ಮಾತ್ರವೇ ಆ ಸತ್ವಪದವು ವಾಯುಗಳಿಗೆ ಅತಿ ವಿಶಾಲವಾದ ಆಕಾಶವು ಆಸ್ಪದವಾಗಿರುವಂತೆ ಆಸ್ಪದವಾಗಿರುವುದು.

೩೧ ಆ ಸತ್ವ ಪದವು ಸರ್ವ ದುಃಖರಹಿತವಾದುದು. (ಅಜಡವಾದ ಅಂದರೆ) ಕೇವಲ ಚಿದ್ರೂಪವಾಗಿಯೇ ಸರ್ವದಾ ಇದ್ದುಕೊಂಡಿದ್ದರೂ ಸುಷುಪ್ತ ಸ್ಥಿತಿಯನ್ನು ಪಡೆದಿರುವಂತೆ (ಸುಪ್ತ) ಉನ್ಮೇಷ ನಿಮೇಷಾದಿ ಕ್ರಿಯಾಶೂನ್ಯವಾಗಿರುವುದು. ರಜಸ್ತಮಶ್ಶೂನ್ಯವಾಗಿರುವುದು. ಇಂತಹ ಆ ದಿವ್ಯ ಪರಮಪದದಲ್ಲಿ ಆಕಾಶ ಕೋಶದಂತೆ ಅತ್ಯಂತ ಸೂಕ್ಷ್ಮರಾಗಿರತಕ್ಕ ವಿದೇಹಮುಕ್ತರಾದ ಮಹಾತ್ಮರು ಪ್ರಾತಿಭಾಸಿಕವಾದ ಮನೋ ಲೇಶವನ್ನೂ ಕೂಡ ನಾಶಪಡಿಸಿಕೊಂಡವರಾಗಿ (ಲಯಗೊಳ್ಳಿಸಿದವರಾಗಿ) ಪುನರಾವೃತ್ತಿಯಿಲ್ಲದಂತೆ ಸ್ಥಿರವಾಗಿ ನೆಲೆಸಿರುವರು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಚಿತ್ತೋಪದೇಶ ವಿಚಾರಯೋಗೋಪದೇಶ" ವೆಂಬ ತೊಂಭತ್ತನೆಯ ಸರ್ಗವು

ಏಕ ನವತಿತಮಃ ಸರ್ಗಃ

ಶ್ರೀರಾಮ ಉವಾಚ :—

ಪರಮಾಕೋಶಕೋಶಾದ್ರಿ ರೂಢ ಲೋಕಾಂತರದ್ರುಮಂ ।
ತಾರಕಾ ಪುಷ್ಪ ಶಬಲಂ ದೇವಾಸುರ ವಿಹಂಗಮಂ ॥ ೧ ॥

ವಿದ್ಯುನ್ಮಂಜರಿತೋಪಾಂತ ನೀಲನೀರದ ಪಲ್ಲವಂ ।
ಸರ್ವರ್ತುರವ್ಯ ಚಂದ್ರಾರ್ಕಗಣ ರಮ್ಯಕದಂತುರಂ ॥ ೨ ॥

ಸಪ್ತಾಬ್ಧಿವಾಪೀ ವಲಿತಂ ಸರಿಚ್ಛತ ಮನೋಹರಂ ।
ಚತುರ್ದಶ ವಿಧಾನಂತ ಭೂತಜಾತೋಪ ಜೀವಿತಂ ॥ ೩ ॥

ಜಗತ್ಕಾನನ ಮಾಕ್ರಮ್ಯ ಸ್ಥಿತಾಯಾಃ ಕೃತ ಜಾಲಕಂ ।
ಬ್ರಹ್ಮನ್ ಸಂಸೃತಿ ಮೃದ್ವೀಕಾಲತಾಯಾ ವಿತತಾಕೃತೇಃ ॥ ೪ ॥

ಜರಾಮರಣ ಪರ್ವಾಯಾಃ ಸುಖದುಃಖ ಫಲಾವಲೇಃ ।
ಆರೂಢ ಮೂಲಮಾಲಾಯಾ ಮೋಹಸೇಕ ಜಲಾಂಜಲೇಃ ॥ ೫ ॥

ಕಿಂ ಬೀಜಮಥ ಬೀಜಸ್ಯ ತಸ್ಯ ಕಿಂ ಬೀಜ ಮುಚ್ಯತೇ ।
ಅಥ ತಸ್ಯಾಪಿ ಕಿಂ ಬೀಜಂ ಬೀಜಂ ತಸ್ಯಾಪಿ ಕಿಂ ಭವೇತ್ ॥ ೬ ॥

ಸರ್ವಮೇತ ತ್ಸಮಾಸೇನ ಪುನರ್ಬೋಧ ವಿವೃದ್ಧಯೇ ।
ಸಿದ್ಧಯೇ ಜ್ಞಾನಸಾರಸ್ಯ ವದ ಮೇ ವದತಾಂವರ ॥ ೭ ॥

ತೊಂಭತ್ತೊಂದನೆಯ ಸರ್ಗವು

ಶ್ರೀರಾಮನು ಹೇಳಿದನು :—

೧-೭. ದೇಶಿಕೋತ್ತಮರಾದ (ವದತಾಂವರ) ಬ್ರಹ್ಮರ್ಷಿ ವರ್ಯರೇ, ಈ ಜಗತ್ತೆಂಬ ಅರಣ್ಯವು ನಿರ್ವಿಶೇಷ ಸಚ್ಚಿದಾನಂದ ರೂಪ ಪರಬ್ರಹ್ಮಕ್ಕೆ (ಪರಮಾಕಾಶ ಕೋಶ) ಪರ್ವತದಂತೆ ಆವರಕವಾದ (ಮರೆಯಿಸುವ) ಅವ್ಯಾಕೃತ (ಮಾಯಾ

ಅವಿದ್ಯಾ)ವೆಂಬ ಪರ್ವತದಲ್ಲಿ ಬೆಳೆದಿರುವ ಅತಿ ವಿಚಿತ್ರ, ನಾನಾ ಬ್ರಹ್ಮಾಂಡಗಳೆಂಬ ವೃಕ್ಷ ಸಮೂಹಗಳಿಂದ ವ್ಯಾಪ್ತವಾಗಿರುವುದು. ನಕ್ಷತ್ರಗಳೆಂಬ ಪುಷ್ಪಗಳಿಂದ ನಾನಾ ವರ್ಣ ಮಯವಾಗಿ ಶೋಭಿಸುತ್ತಿರುವುದು. ದೇವತೆಗಳೂ, ರಾಕ್ಷಸರೂ ಮೊದಲಾದ ನಾನಾ ವ್ಯಕ್ತಿಗಳೆಂಬ ಪಕ್ಷಿಗಳಿಗೆ ಆಶ್ರಯವಾಗಿರುವುದು. ದಿಕ್ಕುಗಳೆಂಬ ಶಾಖೆ (ಕೊಂಬೆ)ಗಳ ಕೊನೆಯಲ್ಲಿ ಮಿಂಚುಗಳೆಂಬ ಕುಸುಮ ಮಂಜರಿಗಳು ಶೋಭಿಸುತ್ತಿರುವುವು. ಮತ್ತು ನೀಲ, ಶುಕ್ಲ ಮುಂತಾದ ಬಣ್ಣಗಳುಳ್ಳ ವಿವಿಧ ಮೇಘಗಳೆಂಬ ಪಲ್ಲವಗಳು ವಿರಾಜಿಸುತ್ತಿರುವುವು. ಎಲ್ಲ ಋತುಗಳಲ್ಲಿಯೂ ಅತ್ಯಂತ ರಮಣೀಯಗಳಾದ ಚಂದ್ರ, ಸೂರ್ಯ ಮುಂತಾದ ಗ್ರಹಗಣಗಳೆಂಬ ಚೆನ್ನಾಗಿ ವಿಕಸಿತವಾದ ಪುಷ್ಪಗಳಿಂದ ನಗುತ್ತಿರುವಂತೆ ಇರುವುದು. ಸಪ್ತ ಸಮುದ್ರಗಳೆಂಬ ಭಾವಿಗಳಿಂದ ಕೂಡಿರುವುದು. ನೂರಾರು ನದಿಗಳಿಂದ ಮನೋಹರವಾಗಿರುವುದು. ಹದಿನಾಲ್ಕು ಲೋಕಗಳ ಭೇದಗಳಿಂದ ಹದಿನಾಲ್ಕು ವಿಧಗಳಾಗಿ ಒಂದೊಂದು ಲೋಕದಲ್ಲಿಯೂ ಅನಂತ (ಅಸಂಖ್ಯಾಕ)ವಾಗಿರುವ ಭೂತ ಸಮುದಾಯಗಳಿಂದ ಆಶ್ರಯಿಸಲ್ಪಟ್ಟಿರುವುದು ಇಂತಹ ಜಗತ್ತೆಂಬ ಕಾನನವನ್ನು ಆಕ್ರಮಿಸಿಕೊಂಡು ಸಂಸಾರವೆಂಬ ದ್ರಾಕ್ಷಾಲತೆಯು ಬಹು ವಿಸ್ತಾರವಾಗಿ ಹರಡಿಕೊಂಡಿರುವುದು. ಇದು ವಾಸನೆಗಳೆಂಬ ಕೊಡಿಗಳಿಂದ ಸರ್ವತ್ರ ಸುತ್ತು ಹಾಕಿಕೊಂಡು ಬಲೆಯ ಹಾಗೆ ಹೆಣೆದಿರುವ ರೀತಿಯಲ್ಲಿ ಹಬ್ಬಿಕೊಂಡಿರುವುದು. ಈ ಸಂಸಾರ ಲತೆಗೆ ಜರಾಮರಣಗಳೆಂಬ ಗೆಣ್ಣುಗಳು (ಕಾಂಡ ಗ್ರಂಥಿಗಳು ಕಬ್ಬಿನ ಜಲ್ಲೆಯಲ್ಲಿರುವಂತಹವು) ಇರುವುವು. ಅನೇಕಾನೇಕ ಸುಖದುಃಖ ಪರಂಪರೆಗಳೆಂಬ ಹಣ್ಣುಗಳ ಗೊಂಚಲುಗಳಿಂದ ಕೂಡಿರುವುದು. ಇವರ ಬೇರುಗಳ ಗುಂಪುಗಳು ಊರ್ಧ್ವಮುಖವಾಗಿ ಹೊರಟುಕೊಂಡಿವೆ. ನಾನಾವಿಧ ಮೋಹಗಳೆಂಬ ಜಲಾಂಜಲಿಗಳ ಸೇಚನದಿಂದ ಇದು ಉಲ್ಲಾಸವಾಗಿ ಬೆಳೆದಿರುವುದು. ಇಂತಹ ಸಂಸಾರವೆಂಬ ದ್ರಾಕ್ಷಾಲತೆಗೆ ಬೀಜವು (ಮೂಲ ಕಾರಣವು) ಯಾವುದು ? ಆ ಬೀಜಕ್ಕೆ ಬೀಜವು ಯಾವುದು ? ಅದಕ್ಕೂ ಬೀಜವು ಯಾವುದು ? ಆ ಬೀಜಕ್ಕೂ ಯಾವುದು ಬೀಜವು? ಇದೆಲ್ಲವನ್ನೂ ಸಂಗ್ರಹವಾಗಿ, ನನಗೆ ಜ್ಞಾನವು ವೃದ್ಧಿಯಾಗುವುದಕ್ಕೋಸ್ಕರವೂ ಜ್ಞಾನಸಾರವು ಸಿದ್ಧಿಸುವುದಕ್ಕೋಸ್ಕರವೂ ತಾವು ಪುನಃ ಅಪ್ಪಣೆ ಕೊಡಿಸೋಣಾಗಲಿ.

ಶ್ರೀ ವಸಿಷ್ಠ ಉವಾಚ :—

ಅಂತರ್ಲೀನ ಘನಾರಂಭ ಶುಭಾ ಶುಭ ಮಹಾಂಕುರಂ ।
ಸಂಸೃತಿವ್ರತತೇಃ ಬೀಜಂ ಶರೀರಂ ವಿದ್ಧಿ ರಾಘವ ॥ ೮ ॥

ಶಾಖಾಪ್ರತಾನಗಹನಾ ಫಲಪಲ್ಲವ ಶಾಲನೀ ।
ತೇನೇಯಂ ಭವತಿ ಸ್ಫೀತಾ ಶರದೀವ ವಸುಂಧರಾ ॥ ೯ ॥

ಭಾವಾಭಾವದಶಾಕೋಶಂ ದುಃಖರತ್ನ ಸಮುದ್ಗಕಂ ।
ಬೀಜಮಸ್ಯ ಶರೀರಸ್ಯ ಚಿತ್ತಮಾಶಾವಶಾನುಗಂ ॥ ೧೦ ॥

ಚಿತ್ತಾದಿದ ಮುದೇತ್ಯುಚ್ಚೈಃ ಸದಸಚ್ಛಾಂಗ ಜಾಲಕಂ ।
ತಥಾ ಚೈತತ್ಸ್ವಯಂ ಸ್ವಪ್ನ ಸಂಭ್ರಮೇಷ್ವನುಭೂಯತೇ ॥ ೧೧ ॥

ಶ್ರೀ ವಸಿಷ್ಠರು ಹೇಳಿದರು:—

೮. ಅಯ್ಯ ರಾಘವ, ಲಿಂಗ ದೇಹದಲ್ಲಿ ಒಳಗೆ ಅಡಗಿಕೊಂಡಿರುವ ವಿಚಿತ್ರ ಅನಂತ ಕಾರ್ಯ ಪ್ರಯೋಜಕಗಳಾದ ಶುಭಾಶುಭ ಕರ್ಮಗಳೆಂಬ ದೊಡ್ಡ ಅಂಕುರಗಳುಳ್ಳ ಈ ಶರೀರವೇ ಸಂಸಾರವೆಂಬ ಲತೆಗೆ ಬೀಜವೆಂದು ತಿಳಿ.

೯. ಶರದೃತುವಿನಲ್ಲಿ ಭೂಮಿಯು ಸಸ್ಯ ಸಮೃದ್ಧಿಯಿಂದ ಅಭಿವೃದ್ಧಿ ಹೊಂದುವಂತೆ ಅಂತಹ ಶರೀರದಿಂದ ಈ ಸಂಸಾರವೆಂಬ ಲತೆಯು ಶಾಖೋಪಶಾಖೆಗಳಾಗಿ ಅನೇಕ ಕವಲೊಡೆದು, ಹಣ್ಣುಗಳ ಗೊಂಚಲುಗಳಿಂದಲೂ, ಪಲ್ಲವಗಳಿಂದಲೂ ಶೋಭಿಸುತ್ತಾ ಅತ್ಯಂತ ಗಹನವಾಗಿ ವೃದ್ಧಿಹೊಂದಿರುವುದು.

೧೦. ಈ ಸಂಸಾರ ಬೀಜವಾದ ಶರೀರಕ್ಕೆ ಸಾವಿರಾರು ಆಶೆಗಳಿಗೆ ವಶವರ್ತಿಯಾಗಿ ಸೇವಕನಾಗಿರುವ ಈ ಚಿತ್ತವೆಂಬುದೇ ಬೀಜವು. ಈ ಚಿತ್ತವಾದರೋ ಪ್ರಾಪಂಚಿಕ ವಿಭವಗಳ (ಸಂಪತ್ತುಗಳ) ವೃದ್ಧಿ ಕ್ಷಯುಗಳೆಂಬ ನಾನಾ ದುರವಸ್ಥೆಗಳಿಗೆ ಆಕರವಾಗಿ ದುಃಖ ಪರಂಪರೆಗಳೆಂಬ ರತ್ನಗಳಿಗೆ ಸಂಪುಟವಾಗಿರುವುದು.

೧೧. ಈಗಿನ, ಹಿಂದೆ ಕಳೆದು ಹೋದ, ಮತ್ತು ಮುಂದೆ ಬರುವ ಅಂದರೆ ವರ್ತಮಾನ, ಅತೀತ, ಅನಾಗತಗಳಾದ ಈ ಶರೀರ ಸಮುದಾಯುಗಳೆಲ್ಲವೂ ಸಮಗ್ರ

ಯಥಾ ಗಂಧರ್ವ ಸಂಕಲ್ಪಾತ್ಪುರಮೇವಂ ಹಿ ಚೇತಸಃ ।
ಸವಾತಾಯನವಾಕಾರ ಭಾಸುರಂ ಜಾಯತೇ ವಪುಃ ॥ ೧೨ ॥

ಚಿತ್ತದ ದೆಸೆಯಿಂದಲೇ ಉದಯಿಸುವುವು. ಈ ವಿಷಯವು ನಿತ್ಯವೂ ಪ್ರತಿಯೊಬ್ಬನೂ ಅನುಭವಿಸುವ ಕನಸುಗಳಲ್ಲಿ ಎಲ್ಲರಿಗೂ ಅನುಭವಗೋಚರವಾಗಿರುವುದೇ ಆಗಿದೆ. (ಸ್ವಪ್ನ ದೃಕ್ ಪ್ರಚರನ್ ಸ್ವಪ್ನೇ ದಿಕ್ಷು ವೈ ದಶಸು ಸ್ಥಿತಾನ್ । ಅಂಡಜಾನ್ ಸ್ವೇದ ಜಾನ್ ವಾಪಿ ಜೀವಾನ್ ಪಶ್ಯತಿ ಯಾನ್ ಸದಾ ॥ ಸ್ವಪ್ನ ದೃಕ್ಚಿತ್ತ ದೃಶ್ಯಾಸ್ತೇ ನ ವಿದ್ಯಂತೇ ತತಃ ಪೃಥಕ್ । ತಥಾತದ್ದೃಶ್ಯ ಮೇವೇದಂ ಸ್ವಪ್ನ ದೃಕ್ಚಿತ್ತ ಮಿಷ್ಯತೇ ॥ ಸ್ವಪ್ನವನ್ನು ಕಾಣುವ ಮನುಷ್ಯನು ಭ್ರಾಂತಿಮಯವಾದ ಸ್ವಪ್ನ ಕಾಲದಲ್ಲಿ ಹತ್ತು ದಿಕ್ಕುಗಳಲ್ಲಿಯೂ ಸಂಚರಿಸುತ್ತಾ ಅಲ್ಲಿರುವ ಅಂಡಜ ಸ್ವೇದಜಾದಿ ಯಾವ ಯಾವ ಪ್ರಾಣಿಗಳನ್ನು ಕಾಣುವನೋ ಅವೆಲ್ಲವೂ ಅವನ ಚಿತ್ತದಿಂದ ಕಲ್ಪಿತಗಳಾಗಿ ಕಾಣುವುವು. ಪೃಥಕ್ಕಾಗಿ ಇರುವುದೇ ಇಲ್ಲ. ಇತ್ಯಾದಿ. ಶ್ರೀ ಗೌಡಪಾದೀಯ ಮಾಂಡೂಕ್ಯೋಪನಿಷತ್ಕಾರಿಕಾ. ಅಲಾತ ಶಾಂತಿ. ಶ್ಲೋಕ. ೬೨-೬೩. ನೋಡಿ. ನಿಮ್ಮ ಸ್ವಂತ ಅನುಭವದೊಡನೆ ಹೋಲಿಸಿರಿ.]

೧೨. ಭ್ರಾಂತನಿಗೆ ಒಂದೊಂದು ಸಲ ನಿರ್ಮಲಾಕಾಶದಲ್ಲಿಯೂ ಕೂಡ, ಅಕಾರಣವಾಗಿಯೇ ಒಂದು ನಗರದ ಆಕಾರವು ಎದ್ದು ಕಾಣುವುದು. ಅದಕ್ಕೇ ಗಂಧರ್ವ ನಗರವೆಂಬ ವ್ಯವಹಾರವಿರುವುದು. ವಿಚಾರ ಮಾಡಿ ನೋಡಿದರೆ ಇಂತಹ ಒಂದು ದಿವ್ಯವಾದ ನಗರವು ಅದರಲ್ಲಿಯೂ ಆಕಾಶದಲ್ಲಿ ಅಕಸ್ಮಾತ್ ಭಾಸಿಸುವುದಕ್ಕೆ ಯಾವ ಕಾರಣ ಸಾಮಗ್ರಿಯೂ ಇಲ್ಲವೆಂಬುದು ಸ್ಪಷ್ಟ. ಆದರೆ ಅದು ಆಗ ಭ್ರಾಂತಿ ಕಾಲದಲ್ಲಿ ನಿಷ್ಕಾರಣವಾಗಿಯೇ ಅವನ ಚಿತ್ತದ ದೆಸೆಯಿಂದ ಸಂಕಲ್ಪದ ಮೂಲಕ ಮಿಥ್ಯಾಕಲ್ಪಿತವಾಗಿಯೇ (ಮರುಮರೀಚಿಕಾದಿ) ಪ್ರಾತಿಭಾಸಿಕಗಳಂತೆ ತೋರುವುದಾಗಿದೆ. ಅದು ಕೇವಲ ಭ್ರಾಂತಿಮಯವಾದ ಪ್ರಾತಿಭಾಸಿಕ. ವಾಸ್ತವವಲ್ಲ. ಈ ದೃಷ್ಟಾಂತದಲ್ಲಿ ಗಂಧರ್ವ ನಗರವು ಹೇಗೆ ಸಂಕಲ್ಪದ ಮೂಲಕ ಚಿತ್ತದ ದೆಸೆಯಿಂದಲೇ ಕಲ್ಪಿತವಾಗುವುದೋ ಹಾಗೆಯೇ ಮನೆಯ ಗವಾಕ್ಷಗಳಂತಿರುವ ಚಕ್ಷುರಾದೀಂದ್ರಿಯಗಳ ನವದ್ವಾರಗಳಿಂದ ಕೂಡಿ ಒಂದು ಆಕಾರದಿಂದ ಭಾಸಮಾನವಾಗಿರುವ ಈ ದೇಹವೂ ಮನಸ್ಸಿನಿಂದಲೇ ಕಲ್ಪಿತವಾಗಿ ಗೋಚರಿಸುವುದು.

ಯದಿದಂ ಕಿಂಚಿದಾಭೋಗಿ ಜಗತಂ ದೃಶ್ಯತಾಂ ಗತಂ ।
ರೂಪಂ ತಚ್ಚೇತಸಃ ಸ್ಫಾರಂ ಘಟಾದಿತ್ವಂ ಮೃದೋ ಯಥಾ ॥ ೧೩ ॥

ದ್ವೇ ಬೀಜೇ ಚಿತ್ತ ವೃಕ್ಷಸ್ಯ ವೃತ್ತಿವ್ರತತಿ ಧಾರಿಣಃ ।
ಏಕಂ ಪ್ರಾಣ ಪರಿಸ್ಪಂದೋ ದ್ವಿತೀಯಂ ದೃಢ ಭಾವನಾ ॥ ೧೪ ॥

[ಈ ಶ್ಲೋಕ ವ್ಯಾಖ್ಯಾನದಲ್ಲಿ ತಾ. ಪ್ರ. ಟೀಕಾಕಾರರು "ಯಥಾ ಗಂಧರ್ವಾಣಾಂ ಮುಮೂರ್ಷೋಃ ಉತ್ಪಾದಿತ ಪ್ರದರ್ಶನ ಸಂಕಲ್ಪಾತ್ ಚೇತಸಃ ಸಕಾಶಾದೇವ ಪುರಂ ಜಾಯತೇ ತದ್ವತ್'' ಎಂದು ಬರೆದಿರುವರು. ಒಬ್ಬನು ಗಂಧರ್ವ ಲೋಕಾವಾಪ್ತಿಯ ಆಕಾಂಕ್ಷೆಯಿಂದ ಜಪ, ತಪಸ್ಸು, ಉಪಾಸನೆ ಮುಂತಾದವುಗಳನ್ನು ಅನುಷ್ಠಾನ ಮಾಡಿ ಕೊನೆಗೆ ದೇಹಾವಸಾನ ಕಾಲದಲ್ಲಿ ಪ್ರಾಣೋತ್ಕ್ರಮಣವಾಗುವುದಕ್ಕಿಂತ ಮುಂಚೆ ತನ್ನ ಕರ್ಮವಾಸನಾನುಗುಣವಾಗಿ ಮುಂದೆ ಬರಲಿಕ್ಕಿರುವ ತನ್ನ ಸಂಕಲ್ಪದ ಮೂಲಕ ಚಿತ್ತದ ದೆಸೆಯಿಂದಲೇ ಉತ್ಪಾದಿತವಾಗಿ ಪ್ರದರ್ಶಿಸಲ್ಪಡುವ ಗಂಧರ್ವ ಪುರವನ್ನು (ಪುರ = ದೇಹ ಅಥವಾ ನಗರ) ತನ್ನೊಳಗೆಯೇ ಭಾವಿಸುವಂತೆ, ಎಂದರ್ಥ ಹೇಳಬೇಕಾಗಿರುವುದು ಮುಮೂರ್ಷುವು ತನ್ನ ಕಾಮ ಕರ್ಮಾನುಗುಣವಾಗಿ ಸ್ವಚಿತ್ತಕಲ್ಪಿತವಾದ ಭಾವಿ ದೇಹಾನ್ತರವನ್ನು ತನ್ನೊಳಗೆಯೇ ಕಂಡರಿಯುವನು ಎಂಬ ಸಿದ್ಧಾಂತವನ್ನು ಅನುಸರಿಸಿ ಹೇಳಿದೆ]

೧೩. ಘಟ ಶರಾವಾದಿ ಮೃಣ್ಮಯ ವಸ್ತುಗಳು ಮೃದ್ವಿಕಾರವಾಗಿಯೇ ಇರುವಂತೆ ದೃಶ್ಯಭಾವವನ್ನು ಹೊಂದಿದ ಮತ್ತು ಅತ್ಯಂತ ವಿಶಾಲವಾದ ಯಾವ ಯಾವ ಈ ಜಗದ್ರೂಪವು ತೋರುವುದೋ ಅದದೆಲ್ಲವೂ ಹೈರಣ್ಯಗರ್ಭ ಮನೋ ವಿಕಾರ ಮಾತ್ರವೇ ಎಂಬುದು ಸರ್ವ ಶ್ರುತಿ ಪುರಾಣಗಳಲ್ಲಿ ಪ್ರಸಿದ್ಧವಾಗಿ ಪ್ರತಿಪಾದಿತವಾಗಿರುವುದು.

೧೪. (ಅಥ ತಸ್ಯಾಪಿ ಕಿಂ ಬೀಜಂ ಎಂಬ ಮೂರನೆಯ ಪ್ರಶ್ನೆಗೆ ಉತ್ತರ.) ಬಗೆ ಬಗೆಗಳಾದ ವೃತ್ತಿಗಳೆಂಬ ಲತೆಗಳನ್ನು ಧರಿಸಿಕೊಂಡಿರುವ ಚಿತ್ತವೆಂಬ ವೃಕ್ಷಕ್ಕೆ ಪ್ರಾಣ ಪರಿಸ್ಪಂದವೆಂಬುದೂ ಮತ್ತು ದೃಢವಾದ ವಾಸನೆಯೆಂಬುದೂ, ಇವೆರಡೂ ಬೀಜಗಳಾಗಿವೆ.

ಯದಾ ಪ್ರಸ್ಪಂದತೇ ಪ್ರಾಣೋ ನಾಡೀ ಸಂಸ್ಪರ್ಶನೋದ್ಯತಃ ।
ತದಾ ಸಂವೇದನ ಮಯಂ ಚಿತ್ತಮಾಶು ಪ್ರಜಾಯತೇ ॥ ೧೫ ॥

ಯದಾ ನಸ್ಪಂದತೇ ಪ್ರಾಣಃ ಶಿರಾಸರಣಿ ಕೋಟರೇ ।
ಅಸಂವಿತ್ತಿ ವಶಾತ್ತೇನ ಚಿತ್ತಮಂತರ್ನ ಜಾಯತೇ ॥ ೧೬ ॥

ಪ್ರಾಣಸ್ಪಂದನ ಮೇವೇದಂ ಚಿತ್ತ ದ್ವಾರೇಣ ದೃಶ್ಯತೇ ।
ಜಗನ್ನಾಮಾಗತಂ ವ್ಯೋಮ್ನಿ ನೀಲತ್ವಾದಿವದೀದೃಶಂ ॥ ೧೭ ॥

ಪ್ರಾಣಸ್ಪಂದನಸುಪ್ತಾ ಚ ತಚ್ಛಾಂತಿಃ ಶಾಂತಿರುಚ್ಯತೇ ।
ಪ್ರಾಣಸ್ಪಂದನಾತ್ ಸಾ ಸಂವಿತ್ ಯಾತಿ ವೀಟೀವ ಚೋದಿತಾ ॥ ೧೮ ॥

---

೧೫. ಯಾವಾಗ ಪ್ರಾಣವು ನಾಡಿಗಳನ್ನು ಸ್ಪರ್ಶಿಸುವುದಕ್ಕೆ ಉದ್ಯುಕ್ತವಾಗಿ ಚಲಿಸುವುದೋ ಆಗಲೇ ಥಟ್ಟನೇ (ಬಲುಬೇಗ) ಚಿದ್ವಿಕಾರ ಪ್ರಾಯವಾದ ಚಿತ್ತವು ಉದ್ಭವಿಸುವುದು.

೧೬. ಯಾವಾಗ ಪ್ರಾಣ ವಾಯುವು ಎಪ್ಪತ್ತೆರಡು ಸಾವಿರ ನಾಡಿಗಳ ಮಾರ್ಗ ಮಧ್ಯದಲ್ಲಿರುವ ರಂಧ್ರಗಳಲ್ಲಿ ಚಲಿಸದೆಯೇ ಸ್ಥಾಯಿಯಾಗಿರುವುದೋ, ಆಗ ಅದರಿಂದ ಬಾಹ್ಯ ವಿಷಯುಗಳ ಜ್ಞಾನ ಸಂಸ್ಕಾರವು ಉದ್ಬೋಧವಾಗದೆ ಹೋಗುವ ಕಾರಣ ಒಳಗೆ ಈ ಚಿತ್ತವು ಹುಟ್ಟುವುದೇ ಇಲ್ಲ.

೧೭. ಹೈರಣ್ಯ ಗರ್ಭ ಚೈತನ್ಯಕ್ಕೆ ಬಂದಂಥ ಈ ಜಗತ್ತೆಂಬ ಹೆಸರೂ ಕೂಡ (ಜಗದಾಕಾರ ಭಾವವೂ ಕೂಡ) ಸಮಷ್ಟಿ ಪ್ರಾಣ ಸ್ಪಂದದ ಮೂಲಕ ಉಂಟಾದುದೇ ಹೊರತು ಬೇರೆಯಲ್ಲ. ಇಂತಹ ಜಗದಾಕಾರ ಭಾವವು ಈ ಚಿತ್ತದ ಮೂಲಕವಾಗಿಯೇ, ಆಕಾಶದಲ್ಲಿ ನೀಲತ್ವಾದಿಗಳಂತೆ ತೋರುವುದು.

೧೮. ಆ ಹೈರಣ್ಯ ಗರ್ಭ ಚೈತನ್ಯವು ಸಮಷ್ಟಿ ಪ್ರಾಣಸ್ಪಂದನ ವಿಷಯದಲ್ಲಿ ಕೆಲಸ ಮಾಡುವುದನ್ನು ನಿಲ್ಲಿಸಿ ಶಾಂತವಾಗಿ ಅಂದರೆ ನಿಷ್ಕ್ರಿಯವಾಗಿರುವಿಕೆಯೇ ಜಗತ್ತಿನ ಪ್ರಲಯ ಅಥವಾ ಮೋಕ್ಷವೆನ್ನಿಸುವುದು. ಕೈಗಳಿಂದ ಹೊಡೆಯಲ್ಪಟ್ಟ ಚೆಂಡಿನಂತೆ ಚಿತ್ತು ಪ್ರಾಣಸ್ಪಂದನ ವಶದಿಂದ ನೀಚೋಚ್ಚ ಭಾವಗಳನ್ನು ಹೊಂದುವುದು.

ಸಂವಿತ್ಸ್ಫುರತಿ ದೇಹೇಷು ಪ್ರಾಣಸ್ಪಂದ ಪ್ರಬೋಧಿತಾ ।
ಚಕ್ರಾವರ್ತೈ ರಂಗಣೇಷು ವೀಟೇವ ಕರತಾಡಿತಾ　　॥ ೧೯ ॥

ಸತೀ ಸರ್ವಗತಾ ಸಂವಿತ್ಪ್ರಾಣ ಸ್ಪಂದೇನ ಬೋಧ್ಯತೇ ।
ಸೂಕ್ಷ್ಮಾತ್ಸೂಕ್ಷ್ಮತರಾಕಾರಾ ಗಂಧಲೇಖೇವ ವಾಯುನಾ　　॥ ೨೦ ॥

ಸಂವಿತ್ಸಂರೋಧನೇ ಶ್ರೇಯಃ ಪರಮಂ ವಿದ್ಧಿ ರಾಘವ ।
ಕಾರಣಾತ್ಕ್ರಮಣಂ ಯತ್ರ ಕ್ಷೋಭಸ್ತತ್ರ ನ ವಿದ್ಯತೇ　　॥ ೨೧ ॥

ಸಂವಿತ್ಸಮುದಿತೈವಾಶು ಯಾತಿ ಸಂವೇದ್ಯ ಮಾದರಾತ್ ।
ಸಂವೇದನಾದನಂತಾನಿ ತತೋ ದುಃಖಾನಿ ಚೇತಸಃ　　॥ ೨೨ ॥

---

೧೯. ಸಂವಿತ್ತು (ಚಿತ್ತ) ಪ್ರಾಣಸ್ಪಂದದ ದೆಸೆಯಿಂದ ಉದ್ಬುದ್ಧವಾಗಿ ಕೈಯಿಂದ ಹೊಡೆಯಲ್ಪಟ್ಟ ಚೆಂಡು ಅಂಗಳಗಳೊಳಗೆಯೇ ಚಕ್ರಾಕಾರವಾಗಿ ಸುತ್ತಾಡುವಂತೆ ದೇಹಗಳೊಳಗೆ ವಿಶೇಷವಾಗಿ ಸ್ಫುರಿಸುವುದು.

೨೦. ವಾಯುವಿನ ಚಲನದಿಂದ ಗಂಧವು ಸ್ಫುರಿಸುವಂತೆ ಸೂಕ್ಷ್ಮವಾದ ವಸ್ತುವಿಗಿಂತಲೂ ಹೆಚ್ಚು ಸೂಕ್ಷ್ಮವಾದ ಆಕಾರವುಳ್ಳ ಚಿತ್ತ (ಸಂವಿತ್ತು) (ಚಿತ್ತ ವೃತ್ತಿ) ಸ್ವತಃ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವುದಾದರೂ ಕೂಡ ಪ್ರಾಣ ಸ್ಪಂದದಿಂದ ಮಾತ್ರವೇ ಎಚ್ಚರಗೊಂಡು ಸ್ಫುರಿಸುವುದು.

೨೧. ಅಯ್ಯ ರಾಘವ, ಚಿತ್ತ ವೃತ್ತಿ ನಿರೋಧದ ದೆಸೆಯಿಂದ ವಿಕ್ಷೇಪವಿಲ್ಲವಾಗಿ ಬಿಡುವುದು. ಅದನ್ನೇ ಪರಮ ಶ್ರೇಯಸ್ಸು (ಮೋಕ್ಷ) ಎಂದು ತಿಳಿ. ಏಕೆಂದರೆ, ಚಿತ್ತ ಕ್ಷೋಭಕ್ಕೆ ಕಾರಣವಾದ ಪ್ರಾಣಸ್ಪಂದವನ್ನು ಪ್ರಾಣಾಯಾಮಾಭ್ಯಾಸದಿಂದ ನಾಶಗೊಳಿಸಿಬಿಟ್ಟರೆ ಆ ಚಿತ್ತ ಕ್ಷೋಭಕ್ಕೆ ಪ್ರಸಕ್ತಿಯೇ ಇರುವುದಿಲ್ಲವಷ್ಟೇ.

೨೨. ಚಿತ್ತ ವೃತ್ತಿಯು ಉತ್ಪನ್ನವಾದ ಕೂಡಲೇ ಅದು ಬಾಹ್ಯ ವಿಷಯಗಳನ್ನು ಹುಡುಕಿಕೊಂಡು ರಾಗದಿಂದ ಅವುಗಳ ಕಡೆಗೆ ಓಡುವುದು. ಅನಂತರ ಬಾಹ್ಯವಿಷಯೋಪಭೋಗಾನುಭವದಿಂದ ಮನಸ್ಸಿಗೆ ಅನಂತ ದುಃಖಗಳು ಸಂಭವಿಸುವುವು.

ಸಂಸುಪ್ತಾಂತರಬೋಧಾಯ ಸಂವಿತ್ಸಂತಿಷ್ಠತೇ ಯದಾ ।
ಲಬ್ಧಂ ಭವತಿ ಲಬ್ಧವ್ಯಂ ತದಾ ತದಮಲಂ ಪದಂ ॥ ೨೩ ॥

ತಸ್ಮಾತ್ಪ್ರಾಣ ಪರಿಸ್ಪಂದೈಃ ವಾಸನಾಜೋದಸ್ಯೈಸ್ತಥಾ ।
ಸೋಽಜೇತ್ಸಂವಿದ ಮುಚ್ಛೂನಾಂ ಕರೋಷಿ ತದಜೋ ಭವಾನ್ ॥ ೨೪ ॥

ಸಂವಿದುಚ್ಛೂನತಾಚ್ಚಿತ್ತಂ ವಿದ್ಧಿ ತೇನೇದಮಾತತಂ ।
ಅನರ್ಥ ಜಾಲ ಮಾಲೂನ ವಿಶೀರ್ಣ ಜನಜೀವಕಂ ॥ ೨೫ ॥

---

೨೩. ಯಾವಾಗಲಾದರೋ ಈ ಚಿತ್ತ ವೃತ್ತಿಯು ಬಾಹ್ಯ ವಿಷಯಗಳಲ್ಲಿ ಆಸಕ್ತಿಯನ್ನು ತೊರೆದು (ಚೆನ್ನಾಗಿ ಗಾಢ ನಿದ್ರೆಯಲ್ಲಿರುವಂತೆ) ಸುಪ್ತಪ್ರಾಯವಾಗಿ ರುತ್ತಾ ಅಂತರಾತ್ಮನ ತತ್ತ್ವಜ್ಞಾನ ಪ್ರಾಪ್ತಿಗೋಸ್ಕರವಾಗಿ ಉದ್ಯುಕ್ತವಾಗುವುದೋ ಆಗ ಅತ್ಯವಶ್ಯವಾಗಿ ಸರ್ವರಿಗೂ ಪಡೆಯಬೇಕಾಗಿರುವ (ಲಬ್ಧವ್ಯ) ಆ ನಿಷ್ಕಲಂಕ ಪರಮ ಪದವು (ಮೋಕ್ಷವು) ತಾನಾಗಿಯೇ ಲಬ್ಧವಾಗುವುದು.

೨೪. ಹೀಗಿರುವ ಕಾರಣ ಅಯ್ಯ ರಾಮ, ಮೂಢ ಜನರಂತೆ ನೀನು ಪ್ರಾಣಪರಿಸ್ಪಂದಗಳಿಂದಲೂ ಮತ್ತು ರಾಗಾತಿಶಯದ ಮೂಲಕ ಬಾಹ್ಯ ವಿಷಯ ವಾಸನೆಗಳನ್ನು ಎಬ್ಬಿಸುವುದರಿಂದಲೂ ನಿನ್ನ ಚಿತ್ತ ವೃತ್ತಿಯನ್ನು ಕೊಬ್ಬಿಸಿ (ಪುಷ್ಟೀಕರಿಸಿ) ಬಾಹ್ಯ ವಿಷಯಗಳ ಕಡೆಗೆ ಓಡತಕ್ಕುದನ್ನಾಗಿ ಮಾಡದೆ ತಡೆದು ಬಿಟ್ಟ ಪಕ್ಷದಲ್ಲಿ ಆಗ ನೀನು ವಸ್ತುತಃ ಜನನ ಮರಣಾದಿ ಸರ್ವ ವಿಕಾರ ವಿವರ್ಜಿತ ನಾದ ಮುಕ್ತನೇ ಆಗಿರುವೆ. ಅಥವಾ (ಬೇರೊಂದು ವಿಧವಾದ ಅರ್ಥವೇನೆಂದರೆ) ಪ್ರಾಣಗಳನ್ನು ಚಲಿಸಗೊಡದಿರುವುದರಿಂದಲೂ, ವಿಷಯ ವಾಸನೆಗಳನ್ನು ಕಳೆಯು ವುದರಿಂದಲೂ, ನೀನು ನಿನ್ನ ಚೈತನ್ಯವನ್ನು (ಸಂವಿತ್ತನ್ನು) ವೃದ್ಧಿಗೊಳಿಸದೆಯೂ, ಮನೋಭಾವವನ್ನು ಹೊಂದಿಸದೆಯೂ ಇದ್ದ ಪಕ್ಷದಲ್ಲಿ ಆಗ ನೀನು ವಸ್ತುತಃ ಜನನಾದಿ ಸರ್ವ ವಿಕಾರ ಶೂನ್ಯನಾದ ಮುಕ್ತನೇ ಆಗಿರುವೆ.

೨೫. ಚಿತ್ತು ಸ್ಥೂಲತ್ವವನ್ನು ಹೊಂದಿ ಬಾಹ್ಯ ವಿಷಯಗಳ ಕಡೆಗೆ ಓಡುವಿಕೆಯೇ ಚಿತ್ತವೆಂದು ತಿಳಿ. ಆ ಚಿತ್ತದಿಂದಲೇ ಈ ಅನರ್ಥ ಪರಂಪರೆಯು ಅಪಾರವಾಗಿ ಎಲ್ಲೆಲ್ಲಿಯೂ ಸರ್ವದಾ ವಿಸ್ತಾರವಾಗಿ ಹರಡಿಕೊಂಡಿರುವುದು.

ಯೋಗಿನಶ್ಚಿತ್ತ ಶಾಂತ್ಯರ್ಥಂ ಕುರ್ವಂತಿ ಪ್ರಾಣರೋಧನಂ ।
ಪ್ರಾಣಾಯಾಮೈಸ್ತಥಾ ಧ್ಯಾನೈಃ ಪ್ರಯೋಗೈರ್ಯುಕ್ತಿ ಕಲ್ಪಿತೈಃ ॥ ೨೬ ॥

ಚಿತ್ತೋಪಶಾಂತಿ ಫಲದಂ ಪರಮಂ ಸಾಮ್ಯಕಾರಣಂ ।
ಸುಭಗಂ ಸಂವಿದಃ ಸ್ವಾಸ್ಥ್ಯಂ ಪ್ರಾಣ ಸಂರೋಧನಂ ವಿದುಃ ॥ ೨೭ ॥

ಜ್ಞಾನವದ್ಭಿಃ ಪ್ರಕಟಿತಾಮನುಭೂತಾಂ ಚ ರಾಘವ ।
ಚಿತ್ತಸ್ಯೋತ್ಪತ್ತಿಮಪರಾಂ ವಾಸನಾ ಜೀವಿತಾಂ ಶೃಣು ॥ ೨೮ ॥

ಈ ಅನರ್ಥ ಪರಂಪರೆಗಳಿಗೆ ಸಿಕ್ಕಿ ಮನುಷ್ಯಾದಿ ಸಕಲ ಪ್ರಾಣಿ ಸಮೂಹಗಳೂ ಖಂಡ ಖಂಡ (ಚೂರು ಚೂರಾಗಿ) ಗಳಾಗಿ ಕತ್ತರಿಸಲ್ಪಟ್ಟು ಝುರ್ಝುರಿತರಾಗಿರುವರು. (ದುರ್ಬಲರಾಗಿರುವರು= ಮೃತಪ್ರಾಯರಾಗಿರುವರು.)

೨೬. ಆದುದರಿಂದಲೇ ಯೋಗೀಶ್ವರರು ಚಿತ್ತಶಾಂತಿಗೋಸ್ಕರವಾಗಿ ಪ್ರಾಣಾಯಾಮಗಳಿಂದಲೂ, ಪರಮೇಶ್ವರನ ಧ್ಯಾನಗಳಿಂದಲೂ, ಯೋಗಶಾಸ್ತ್ರೋಕ್ತಗಳಾದ ಮತ್ತು ಸದ್ಗುರು ಸತ್ಸಂಪ್ರದಾಯಾದಿ ಸಿದ್ಧವಾದ ಯುಕ್ತಿಗಳಿಂದ ಕಲ್ಪಿಸಲ್ಪಟ್ಟ ಯೋಗೋಪಾಯಗಳನ್ನು ಅಭ್ಯಾಸ ಮಾಡುವ ಪ್ರಯೋಗಗಳಿಂದಲೂ ಪ್ರಾಣ ನಿರೋಧವನ್ನು (ಪ್ರಾಣ ವಾಯುವಿನ ಸಂಚಾರಕ್ಕೆ ಅಡ್ಡಿಯನ್ನು) ಮಾಡುವರು.

೨೭. ಪ್ರಾಣ ನಿರೋಧವನ್ನೇ ಚಿತ್ತ ಶಾಂತಿ ರೂಪ ಫಲಪ್ರದವಾಗಿಯೂ, ಸರ್ವತ್ರ ಸಮದೃಷ್ಟಿಯುಂಟುಮಾಡುವ ಪರಮ ಕಾರಣವಾಗಿಯೂ ಸರ್ವ ಮುಮುಕ್ಷುಗಳಿಗೂ ಸ್ಪೃಹಣೀಯವಾಗಿಯೂ ಇರುವ ಚಿತ್ತೈಕಾಗ್ರತೆಯೆಂದು ಶಾಸ್ತ್ರಜ್ಞರು ಭಾವಿಸುವರು.

೨೮. ಅಯ್ಯ ರಾಘವ, ದೃಢವಾದ ವಾಸನಾ ಬಲದಿಂದ ಮಾತ್ರವೇ ಜೀವಿಸಿಕೊಂಡಿರುವ ಚಿತ್ತದ ಬೇರೊಂದು ವಿಧವಾದ ಉತ್ಪತ್ತಿ ಪ್ರಕಾರವನ್ನು ಈಗ ನಾನು ನಿನಗೆ ನಿರೂಪಣೆ ಮಾಡುವೆನು. ಕೇಳುವವನಾಗು. ಈ ಪ್ರಕಾರವು ತತ್ತ್ವಜ್ಞಾನಿಗಳಿಂದ ಸ್ವತಃ ಅನುಭವಿಸಲ್ಪಟ್ಟು ಸ್ಪಷ್ಟವಾಗಿ ಉಪದಿಷ್ಟವಾಗಿರುವುದು.

ದೃಢ ಭಾವನಯಾ ತ್ಯಕ್ತ ಪೂರ್ವಾಪರ ವಿಚಾರಣಂ ।
ಯದಾದಾನಂ ಪದಾರ್ಥಸ್ಯ ವಾಸನಾ ಸಾ ಪ್ರಕೀರ್ತಿತಾ ॥ ೨೯ ॥

ಭಾವಿತಸ್ತೀವ್ರಸಂವೇಗಾದಾತ್ಮನಾ ಯತ್ತದೇವ ಸಃ ।
ಭವತ್ಯಾಶು ಮಹಾಬಾಹೋ ವಿಗತೇತರ ಸಂಸ್ಮೃತಿಃ ॥ ೩೦ ॥

ತಾದೃಗ್ರೂಪೋ ಹಿ ಪುರುಷೋ ವಾಸನಾ ವಿವಶೀಕೃತಃ ।
ಯತ್ಪಶ್ಯತಿ ತದೇ ತತ್ತತ್ಸದ್ವಸ್ತ್ವಿತಿ ವಿಮುಹ್ಯತಿ ॥ ೩೧ ॥

---

೨೯. ಪ್ರಾಕ್ತನ ದೃಢ ಭಾವನೆಯಿಂದ ದೇಹೇಂದ್ರಿಯಾದಿ ಪದಾರ್ಥಗಳಲ್ಲಿ "ಅಹಂ-ಮಮ" (ನಾನು-ನನ್ನದು.) ಎಂಬೀ ಮೊದಲಾದ ಅಭಿಮಾನವನ್ನು ಇಟ್ಟುಕೊಂಡು ಅದೇ ವಿಧವಾದ ಸಂಸ್ಕಾರದ ಮೂಲಕ ಪೂರ್ವಾಪರ ವಿವೇಚನೆಯೇ ಇಲ್ಲದೆ ಪದಾರ್ಥಗಳನ್ನು ಗ್ರಹಿಸುವಿಕೆಗೆ "ವಾಸನಾ" ಎಂದು ವ್ಯವಹಾರವು ರೂಢವಾಗಿರುವುದು.

[ದೇಹಾದಿ ಭಾವೇನ ಆತ್ಮಾನಂ ವಾಸಯತಿ ಭಾವಯತಿ ಇತಿ ವಾಸನಾ. ಆತ್ಮನನ್ನು ದೇಹಾದಿ ರೂಪದಿಂದ ಭಾವಿಸುವುದು ಯಾವುದೋ ಅದಕ್ಕೆ ವಾಸನಾ ಎಂದು ಸಂಜ್ಞೆ.]

೩೦. ಅಯ್ಯ ಮಹಾ ಬಾಹುವೇ, ಯಾವ ಅಜ್ಞಾನಿಯು ಯಾವ ಯಾವ ದೇಹಾದಿ ಅನಾತ್ಮ ವಸ್ತುಗಳನ್ನು ತೀವ್ರವಾದ ವಾಸನಾ ದಾರ್ಢ್ಯದಿಂದ ಆತ್ಮರೂಪವಾಗಿ ಪರಿಭಾವಿಸುವನೋ ಅವನು ಆ ಕೂಡಲೇ ಇತರ ವಿಧವಾದ ಸ್ಮರಣೆಯೇ ಇಲ್ಲದವನಾಗಿ ಅದೇ ವಸ್ತುವಾಗಿ ಬಿಡುವನು.

೩೧. ಹೀಗೆ ಅಜ್ಞಾನಿ ಮನುಷ್ಯನಿಗೆ ವಾಸನೆಯು ಅನಾತ್ಮ ದೇಹಾದಿಗಳಲ್ಲಿ ಆತ್ಮ ಬುದ್ಧಿಯನ್ನುಂಟುಮಾಡುವಂತೆ ಈ ವಿಧವಾದ ಅಜ್ಞನನ್ನು ವಾಸನೆಯು ತನ್ನ ವಶಪಡಿಸಿಕೊಂಡು ಅವನಿಗೆ ಗೋಚರಿಸುವ ಬಾಹ್ಯ ವಸ್ತುಗಳೆಲ್ಲವೂ ಸದ್ವಸ್ತುಗಳೆಂಬ ಭ್ರಾಂತಿಯನ್ನು ಕೂಡ ಉಂಟುಮಾಡಿ ಅತಿಯಾಗಿ ಮೋಹಗೊಳಿಸುವುದು.

ವಾಸನಾವೇಗ ವೈವಶ್ಯಾತ್ಸ್ವರೂಪಂ ಪ್ರಜಹಾತಿ ತತ್ ।
ಭ್ರಾಂತಂ ಪಶ್ಯತಿ ದುರ್ದೃಷ್ಟಿಃ ಸರ್ವಂ ಮದವಶಾದಿವ ॥ ೩೨ ॥

ಅಸಮ್ಯಗ್‌ಜ್ಞಾನವಾನೇವ ಭವತ್ಯಾಧಿ ಪರಿಪ್ಲುತಃ ।
ಅಂತಸ್ಥಯಾ ವಾಸನಯಾ ವಿಷೇಣೇವ ವಶೀಕೃತಃ ॥ ೩೩ ॥

ಅಸಮ್ಯಗ್ದರ್ಶನಂ ಯಸ್ಮಾದನಾತ್ಮನ್ಯಾತ್ಮ ಭಾವನಂ ।
ಯದ ವಸ್ತುನಿ ವಸ್ತುತ್ವಂ ತಚ್ಚಿತ್ತಂ ವಿದ್ಧಿ ರಾಘವ ॥ ೩೪ ॥

ದೃಢಾಭ್ಯಾಸ ಪದಾರ್ಥೈಕವಾಸನಾದತಿ ಚಂಚಲಂ ।
ಚಿತ್ತಂ ಸಂಜಾಯತೇ ಜನ್ಮ ಜರಾಮರಣ ಕಾರಣಂ ॥ ೩೫ ॥

---

೩೨. ಅಂತಹ ಅಜ್ಞನು ತೀವ್ರವಾದ ವಾಸನೆಗೆ ಅಧೀನನಾಗಿರುವ ಕಾರಣ ತಾತ್ತ್ವಿಕವಾದ ನಿಜ ಸ್ವರೂಪವನ್ನೇ ಬಿಟ್ಟುಬಿಡುವನು. ಮತ್ತು ಆವಿದ್ಯಕ ದೋಷ ದುಷ್ಟವಾದ ದೃಷ್ಟಿಯುಳ್ಳವನಾಗಿ, ವಾಸನೋಪ ಸ್ಥಾಪಿತವಾದ ಸರ್ವ ಜಗದ್ರೂಪ ವನ್ನೂ ಭ್ರಾಂತಿಮಯವಾದುದನ್ನಾಗಿ ಕಾಣುವನು.

೩೩. ಅಂತಹ ಅಜ್ಞನು ವಿಷದ ವ್ಯಾಪನೆಯಿಂದ ಜ್ಞಾನ ತಪ್ಪಿ ಮೂರ್ಛೆ ಗೊಂಡವನಂತೆ ಮನಸ್ಸಿನಲ್ಲಿ ರೂಢವಾದ ವಾಸನೆಯ ದೆಸೆಯಿಂದಲೇ ನಾನಾ ಮನೋ ವ್ಯಥೆಗಳಿಗೆ ಗುರಿಯಾಗಿ ಒದ್ದಾಡುವನು. ಮತ್ತು ತತ್ತ್ವಜ್ಞಾನವಿಲ್ಲದವನಾಗಿಯೇ ಇರುವನು.

೩೪. ಭ್ರಾಂತಿಮಯವಾದ ಯಾವ ಅಜ್ಞಾನದ ದೆಸೆಯಿಂದ ದೇಹೇಂದ್ರಿ ಯಾದ್ಯನಾತ್ಮ ಬಾಹ್ಯ ವಸ್ತುವಿನಲ್ಲಿ ಆತ್ಮಭಾವನೆಯುಂಟಾಗುವುದೋ ಮತ್ತು ಅತ್ಯಂತಾಸತ್ತಾದ ಅವಸ್ತುವಿನಲ್ಲಿ ವಸ್ತುತ್ವ (ಸತ್ಯತ್ವ) ಭ್ರಾಂತಿಯು ಉದಯಿಸು ವುದೋ ಅಂತಹ ಅಜ್ಞಾನವನ್ನೇ ಅಸಮ್ಯಗ್ಜ್ಞಾನವೆಂದು ಜ್ಞಾನಿಗಳು ಹೇಳುವರು. ಅಯ್ಯ ರಾಘವ, ಆ ಅಸಮ್ಯಗ್ದರ್ಶನವನ್ನೇ ಚಿತ್ತವೆಂದು ತಿಳಿ.

೩೫. ಚಿರಕಾಲದಿಂದ ದೃಢವಾಗಿರುವ ಅಭ್ಯಾಸ ವಶದಿಂದ ಅನಾತ್ಮ ಬಾಹ್ಯ ದೃಶ್ಯ ಪದಾರ್ಥಗಳಲ್ಲಿ ಮಾತ್ರವೇ ಭಾವನೆಯನ್ನಿಡುವುದರಿಂದ ಆ ವಾಸನಾ

ಯದಾ ನ ವಾಸ್ಯತೇ ಕಿಂಚಿದ್ಧೇಯೋಪಾದೇಯರೂಪಿ ಯತ್ ।
ಸ್ಥೀಯತೇ ಸಕಲಂ ತ್ಯಕ್ತ್ವಾ ತದಾ ಚಿತ್ತಂ ನ ಜಾಯತೇ ॥ ೩೬ ॥

ಅವಾಸನತ್ವಾತ್ಸತತಂ ಯದಾ ನ ಮನುತೇ ಮನಃ
ಅಮನಸ್ತಾ ತದೋದೇತಿ ಪರಮೋಪಶಮ ಪ್ರದಾ ॥ ೩೭ ॥

ಯದಾ ಕಿಂಚಿನ್ನ ಸಂವಿತೌ ಸ್ಫುರತ್ಯಭ್ರಮಿವಾಂಬರೇ ।
ತದಾ ಪದ್ಮ ಇವಾಕಾಶೇ ಚಿತ್ತಮಂತರ್ನ ಜಾಯತೇ ॥ ೩೮ ॥

ಪ್ರಯುಕ್ತವಾದ ಈ ಚಿತ್ತವು ಉದ್ಭವಿಸುವುದು. ಇದು ಅತ್ಯಂತ ಚಂಚಲವಾಗಿಯೂ, ಜನನ, ಜರಾ, ಮರಣಾದಿ ಸಕಲ ವಿಕಾರಗಳಿಗೂ, ಕಾರಣವಾಗಿಯೂ ಇರುವುದು.

೩೬. ಹೇಯೋಪಾದೇಯ ರೂಪವಾದ ಈ ದೃಶ್ಯ ವಸ್ತುವೊಂದೂ ಕೂಡ ಸತ್ತೆಯನ್ನು ಪಡೆದುದಾಗಿಲ್ಲ. ಅಸತ್ ಆದುದೇ ಸರಿ. ಎಂಬ ಭಾವನೆಯು ಯಾವಾಗ ಉಂಟಾಗುವುದೋ ಆವಾಗ ವಾಸನೆಯು ನಷ್ಟವಾಗಿ ಬಿಡುವ ಕಾರಣ ಚಿತ್ತು ಸಕಲ ದೃಶ್ಯಗಳನ್ನೂ ಪರಿತ್ಯಜಿಸಿ ಸ್ವಸ್ಥವಾಗಿರುವುದು. ಆಗ ಚಿತ್ತವು ಉದಯಿಸುವುದೇ ಇಲ್ಲ.

೩೭. ಮನಸ್ಸು ಸಂತತವೂ ವಾಸನಾ ಶೂನ್ಯವಾಗಿರುತ್ತಾ ಯಾವಾಗ ಯಾವುದೊಂದು ದೃಶ್ಯವನ್ನೂ ಮನನ ಮಾಡದೆ ಸ್ವಸ್ಥವಾಗಿ ಇರುವುದೋ ಆಗ ಪ್ರಪಂಚೋಪಶಮ ರೂಪವೂ, ಉತ್ತಮೋತ್ತಮವಾದ ಪರಮ ಪುರುಷಾರ್ಥ (ಮುಕ್ತಿ) ಪ್ರದವೂ ಆಗಿರುವ ಅಮನಸ್ಕ ಸ್ಥಿತಿಯು ಸ್ವತ ಏವ ಅಭಿವ್ಯಕ್ತವಾಗುವುದು.

೩೮. ಶರದೃತುವಿನ ನಿರ್ಮಲಾಕಾಶದಲ್ಲಿ ಮೇಘಗಳೊಂದೂ ಸುಳಿದಾಡದಿರುವಂತೆ ಚಿತ್ತಿನಲ್ಲಿ ಯಾವೊಂದು ದೃಶ್ಯವೂ ಯಾವಾಗ ಸ್ಫುರಿಸದೆ ಇರುವುದೋ ಆವಾಗ ಆಕಾಶದಲ್ಲಿ ಕಮಲವು ಹುಟ್ಟದಿರುವಂತೆಯೇ ಒಳಗೆ ಚಿತ್ತಿನಲ್ಲಿ ಚಿತ್ತವೂ, ಎಂದಿಗೂ ಜನಿಸುವುದೇ ಇಲ್ಲ.

ಯದಾ ನ ಭಾವ್ಯತೇ ಭಾವಃ ಕ್ವಚಿಜ್ಜಗತಿ ವಸ್ತುನಿ ।
ತದಾ ಹೃದಂಬರೇ ಶೂನ್ಯೇ ಕಥಂ ಚಿತ್ತಂ ಪ್ರಜಾಯತೇ ॥ ೩೯ ॥

ಏತಾವನ್ಮಾತ್ರಕಂ ಮನ್ಯೇ ರೂಪಂ ಚಿತ್ತಸ್ಯ ರಾಘವ ।
ಯದ್ಭಾವನಂ ವಸ್ತುನೋಽಂತರ್ವಸ್ತುತ್ವೇನ ರಸೇನ ಚ ॥ ೪೦ ॥

ನ ಕಿಂಚಿತ್ಕಲ್ಪನಾಯೋಗ್ಯಂ ದೃಶ್ಯಂ ಭಾವಯತಸ್ತತಃ ।
ಆಕಾಶಕೋಶಸ್ವಚ್ಛಸ್ಯ ಕುತಶ್ಚಿತ್ತೋದಯೋ ಭವೇತ್ ॥ ೪೧ ॥

ಯದಭಾವನ ಮಾಸ್ಥಾಯ ಯದಭಾವಸ್ಯ ಭಾವನಂ ।
ಯದ್ಯಥಾವಸ್ತುದರ್ಶಿತ್ವಂ ತದಚಿತ್ತತ್ವಮುಚ್ಯತೇ ॥ ೪೨ ॥

---

೩೯. ಅಸತ್ತಾದ ಈ ಜಗತ್ತಿನೊಳಗೆ ಮಿಥ್ಯಾಭೂತವಾಗಿರುವ ಯಾವುದೊಂದು ವಸ್ತುವಿನಲ್ಲಿಯೂ ಕೂಡ ಯಾವಾಗ ಭಾವನೆಯು ಸುತರಾಂ ಭಾವಿಸಲ್ಪಡುವುದಿಲ್ಲವೋ ಆಗ ಶೂನ್ಯವಾದ (ನಿರ್ವಿಷಯವಾದ) ಹೃದಯಾಕಾಶದೊಳಗೆ ಚಿತ್ತವು ಹೇಗೆ ತಾನೆ ಉದಯಿಸುವುದು? ಹೇಗೂ ಎಂದಿಗೂ ಉದಯಿಸುವುದಿಲ್ಲವೆಂದರ್ಥ.

೪೦. ಅಯ್ಯ ರಾಘವ, ಈ ಪ್ರಾಪಂಚಿಕ ದೃಶ್ಯಗಳೆಲ್ಲವೂ ಸ್ವತಃ ಅಸದ್ವಸ್ತುಗಳಾಗಿದ್ದರೂ ಅವುಗಳನ್ನು ಸದ್ವಸ್ತುಗಳೆಂಬುದಾಗಿ ರಾಗದಿಂದ ಮನಸ್ಸಿನೊಳಗೆ ಭಾವನೆ ಮಾಡುವಿಕೆ ಎಂಬುದು ಯಾವುದೋ ಅದಷ್ಟು ಮಾತ್ರವೇ ಚಿತ್ತದ ರೂಪವೆಂದು ನಾನು ತಿಳಿಯುವೆನು.

೪೧. ಯುಕ್ತಿಗಳಿಂದ ಸಮರ್ಥನೆ ಮಾಡುವುದಕ್ಕೆ ಅಯೋಗ್ಯವಾದ ಯಾವೊಂದು ದೃಶ್ಯ ವಸ್ತುವನ್ನೂ ಕೂಡ ಒಳಗೆ ಭಾವನೆ ಮಾಡದೆ ಇರುವ, ಅದು ಕಾರಣವೇ ರಾಗ ದ್ವೇಷಾದಿ ದೋಷರಹಿತನಾಗಿ ಆಕಾಶ ಕೋಶದಂತೆ ನಿರ್ಮಲನಾಗಿರುವ ಪುಣ್ಯಾತ್ಮನಿಗೆ ಯಾವ ಕಾರಣದಿಂದ (ಹೇಗೆ ತಾನೇ) ಚಿತ್ತವು ಉದಯಿಸಬಲ್ಲುದು? (ಕಾರಣವೇ ಇಲ್ಲದಿರುವುದರಿಂದ ಚಿತ್ತವೂ ಉದಯಿಸಲಾರದು.)

೪೨. ಬಾಹ್ಯ ಅನಾತ್ಮ ವಸ್ತುಗಳನ್ನು ಸ್ಮರಿಸದೆ ಸ್ವಸ್ಥನಾಗಿರುವಿಕೆಯೆಂಬ ಚಿತ್ತ ನಿರೋಧೋಪಾಯವನ್ನು ಪಡೆದು ಸಮಸ್ತವಾದ ಈ ದೃಶ್ಯ ಜಗತ್ತನ್ನು

ಸರ್ವಮಂತಃ ಪರಿತ್ಯಜ್ಯ ಶೀತಲಾಶಯವರ್ತಿ ಯತ್ ।
ವೃತ್ತಿಸ್ಥಮಪಿ ತಚ್ಚಿತ್ತಮಸದ್ರೂಪ ಮುದಾಹೃತಂ ॥ ೪೩ ॥

ವಾಸನಾಯಾ ರಸಾಧ್ಯಾನಾದ್ರಾಗೋ ಯಸ್ಯ ನ ವಿದ್ಯತೇ ।
ತಸ್ಯ ಚಿತ್ತಮಚಿತ್ತತ್ವಂ ಗತಂ ಸತ್ವಂ ತದುಚ್ಯತೇ ॥ ೪೪ ॥

ಅಸತ್ಯವಾದುದೆಂಬ ಬುದ್ಧಿಯಿಂದ ನಿಷೇಧಮಾಡಿ ಪ್ರಪಂಚಾಭಾವ (ನಿಷ್ಪ್ರಪಂಚಾತ್ಮ ಭಾವ)ವನ್ನು ಸದಾ ಭಾವನೆ ಮಾಡುತ್ತಾ, ಪರಮಾರ್ಥವಾದ ಆತ್ಮತತ್ತ್ವ ಸಾಕ್ಷಾತ್ಕಾರದಿಂದ ಆವಿರ್ಭವಿಸಿದ ಸ್ವರೂಪವೆಂಬುದು ಯಾವುದೋ ಅದೇ ಅಚಿತ್ತತ್ವವು (ಅಮನಸ್ಕತೆ) ಎಂದು ಉಕ್ತವಾಗಿರುವುದು.

೪೩. ಜೀವನ್ಮುಕ್ತರ ಮನಸ್ಸು ಸಮಸ್ತವಾದ ವಾಸನಾ ಜಾಲವನ್ನು ಸಂಪೂರ್ಣವಾಗಿ ಪರಿತ್ಯಜಿಸಿ, ಒಳಗೆ ಪ್ರಶಾಂತವಾದ ಮತ್ತು ಸ್ವಚ್ಛವಾದ ಆಶಯದಿಂದ ಕೂಡಿರುವುದು. ಅದು ಕಾರಣವೇ, ಜೀವನ್ಮುಕ್ತ ಚಿತ್ತವು ಸವೃತ್ತಿಕವಾಗಿದ್ದರೂ ಕೂಡ ವಸ್ತುತಃ ಅದು ಅಸದ್ರೂಪವೆಂದೇ ಉದಾಹರಿಸಲ್ಪಟ್ಟಿರುವುದು.

[ಒಂದು ಪಟವನ್ನು ಬೆಂಕಿಯಿಂದ ಸುಟ್ಟ ಬಳಿಕ, ಅದರ ಬೂದಿಯು ಪಟಾಕಾರವಾಗಿ ಕಂಡರೂ ಅದನ್ನು ಪಟವೆಂದು ಹೇಳಲಾಗುವುದಿಲ್ಲವಷ್ಟೆ; ಅದರಂತೆ ಚಿತ್ತವು ಸರ್ವ ವಾಸನಾವಿರಹಿತವಾಗಿರುವ ಕಾರಣ, ವೃತ್ತಿಗಳಿಂದ ಕೂಡಿದ್ದರೂ, ಅದು ಅಸತ್ತಾಗಿಯೇ ಇರುವುದು. ಚಿತ್ತವೆನ್ನಿಸುವದಿಲ್ಲ.]

೪೪. ವಾಸನೆಯ ಮೂಲಕ, ಶಬ್ದಾದಿ ವಿಷಯಗಳ ರಸ (ಸುಖ) ಗಳನ್ನು ಧ್ಯಾನಿಸುವುದರಿಂದುಂಟಾಗುವ ರಂಜನಾತ್ಮಕವಾದ ವಿಷಯಾಸಕ್ತಿಯು ಯಾವನಿಗೆ ಉಂಟಾಗುವುದಿಲ್ಲವೋ ಅಂತಹ ಧೀರನ ಚಿತ್ತವು ಚಿತ್ತಭಾವವನ್ನು ಬಿಟ್ಟು ಅಚಿತ್ತವೆನ್ನಿಸುವುದು. ಮತ್ತು ಬಟ್ಟೆಯು ಸುಟ್ಟು ಹೋದ ಬಳಿಕ ಉಳಿದಿರುವ ಭಸ್ಮದಂತೆ ಅನಾತ್ಮ ಜಗತ್ತೆಲ್ಲವೂ, ಜ್ಞಾನಬಾಧಿತವಾದಾಗಲೂ, ಸರ್ವಾಧಿಷ್ಠಾನವಾಗಿ ಉಳಿದಿರುವ ಸತ್ತ್ವವು ಅದೇ ಎನ್ನಿಸುವುದು.

ಘನಾ ನ ವಾಸನಾ ಯಸ್ಯ ಪುನರ್ಜನನಕಾರಿಣೀ ।
ಜೀವನ್ಮುಕ್ತಃ ಸ ಸತ್ವಸ್ಥಶ್ಚಕ್ರ ಭ್ರಮುವದಾಸ್ಥಿತಃ ॥ ೪೫ ॥

ಭೃಷ್ಟ ಬೀಜೋಪಮಾ ಯೇಷಾಂ ಪುನರ್ಜನನ ವರ್ಜಿತಾ ।
ವಾಸನಾರಸ ನಿರ್ಹೀನಾ ಜೀವನ್ಮುಕ್ತಾ ಹಿ ತೇ ಸ್ಥಿತಾಃ ॥ ೪೬ ॥

ಸತ್ವರೂಪ ಪರಿಪ್ರಾಪ್ತ ಚಿತ್ತಾಸ್ತೇ ಜ್ಞಾನಪಾರಗಾಃ ।
ಅಚಿತ್ತಾ ಇತಿ ಕಥ್ಯಂತೇ ದೇಹಾಂತೇ ವ್ಯೋಮರೂಪಿಣಃ ॥ ೪೭ ॥

---

೪೫. ಪುನರ್ಜನ್ಮಾದಿ ನಾನಾ ಸಾಂಸಾರಿಕ ಕ್ಲೇಶಗಳನ್ನು ಉಂಟುಮಾಡ ತಕ್ಕ ಘನತರವಾದ ವಾಸನೆಯು ಯಾವ ಮಹಾತ್ಮನಿಗೆ ಇಲ್ಲವಾಗಿಬಿಡುವುದೋ ಅವನೇ ಜೀವನ್ಮುಕ್ತನು. ಅವನೇ ಸತ್ತ್ವಸ್ಥನು. ಅಂದರೆ ಸರ್ವಾಧಿಷ್ಠಾನವಾದ ಮತ್ತು ಕಾಲತ್ರಯಾಬಾಧಿತವಾದ ಸ್ವಸ್ವರೂಪದಲ್ಲಿ ಪರಿನಿಷ್ಠಿತನು. ಇಂತಹ ಜೀವನ್ಮುಕ್ತನು ಕುಂಬಾರನ ಘಟಾದಿ ನಿರ್ಮಾಣ ಕಾರ್ಯಾನಂತರವೂ ಅವನ ಚಕ್ರವು ನಿಲ್ಲದೆ ಸ್ವಲ್ಪಕಾಲ ವೇಗವು ನಿಲ್ಲುವವರೆವಿಗೂ ಮೊದಲಿನಂತೆಯೇ ಸುತ್ತುತ್ತಿರುವ ರೀತಿಯಲ್ಲಿ ಪ್ರಾರಬ್ಧಕರ್ಮಕ್ಷಯಪರ್ಯಂತವೂ ಅನಾಸಕ್ತ ನಾಗಿಯೇ ಆಯಾ ಕಾಲಗಳಲ್ಲಿ ಯದೃಚ್ಛಾ ಪ್ರಾಪ್ತವಾದ ವ್ಯವಹಾರಗಳನ್ನು ಮಾತ್ರ ಮಾಡಿಕೊಂಡಿರುವನು. ಇವನಿಗೆ ಆ ವ್ಯವಹಾರಗಳಿಂದ ಸುಖ ದುಃಖ ಲಾಭ ನಷ್ಟಾದಿಗಳ ಲೇಪವು ಸುತರಾಂ ಇಲ್ಲವು.

೪೬. ಬೀಜಗಳನ್ನು ಹುರಿದುಬಿಟ್ಟ ಬಳಿಕ, ಅವುಗಳಿಂದ ಪುನಃ ಮೊಳಕೆ ಗಳು ಮೊಳೆಯುವುದಿಲ್ಲವಷ್ಟೆ. ಅದರಂತೆ ಯಾವ ಮಹಾತ್ಮರ ಅವಿದ್ಯಾ ಕಾಮ ಕರ್ಮಾದಿ ವಾಸನೆಯು ತತ್ತ್ವಜ್ಞಾನವೆಂಬ ಅಗ್ನಿಯಿಂದ ದಗ್ಧವಾಗಿಬಿಟ್ಟು, ರಾಗ ರಹಿತವೂ ಪುನರ್ಜನ್ಮಗಳನ್ನುಂಟುವ ಶಕ್ತಿಯಿಲ್ಲದುದೂ ಆಗಿರುವುದೋ ಅಂತಹ ವರು ಜೀವನ್ಮುಕ್ತರೇ ಸರಿ. ಅವರು ಸತ್ತ್ವಸ್ಥರೇ. ಇದರಲ್ಲಿ ಸಂದೇಹವಿಲ್ಲ.

೪೭. ತತ್ತ್ವಜ್ಞಾನ ಪಾರಂಗತರಾದ ಆ ಜೀವನ್ಮುಕ್ತರು ಸ್ವಾತ್ಮ ಸ್ವರೂಪ ವನ್ನು ಸಾಕ್ಷಾತ್ಕರಿಸಿ ಅದರಲ್ಲಿಯೇ ಪರಿನಿಷ್ಠಿತವಾದ ಚಿತ್ತವುಳ್ಳವರಾಗಿರುವ ಕಾರಣ ಅಚಿತ್ತರು (ಚಿತ್ತವಿಲ್ಲದವರು) ಎಂದೇ ಹೇಳಲ್ಪಡುವರು. ಅವರ ಪ್ರಾಕೃತ ದೇಹವು

21

ದ್ವೇ ಬೀಜೇ ರಾಮ ಚಿತ್ತಸ್ಯ ಪ್ರಾಣಸ್ಪಂದನ ವಾಸನೇ ।
ಏಕಸ್ಮಿಂಶ್ಚ ತಯೋಃ ಕ್ಷೀಣೇ ಕ್ಷಿಪ್ರಂ ದ್ವೇ ಅಪಿ ನಶ್ಯತಃ ॥ ೪೮ ॥

ಮಿಥಃ ಕಾರಣಮೇತೇ ಹಿ ಬೀಜೇ ಜನ್ಮನಿ ಚೇತಸಃ ।
ಜಲಾಂಗೀಕರಣೇ ರಾಮ ಜಲಾಶಯ ಘಟಾವಿವ ॥ ೪೯ ॥

ಘನಾ ನ ವಾಸನಾ ಯಸ್ಯ ಪುನರ್ಜನನ ಕಾರಿಣೀ ॥ ೫೦ ॥

ಕೊನೆಗಂಡಾಗ ಅಂದರೆ ಪ್ರಾರಬ್ಧಕ್ಷಯ ಕಾಲದಲ್ಲಿ ಪರಮಾಕಾಶ ರೂಪ ಸ್ವಾತ್ಮಭಾವ ಸಂಪನ್ನರಾಗಿ ವಿರಾಜಿಸುವರು.

[ತಸ್ಯ ತಾವದೇವ ಚಿರಂ ಯಾವನ್ನ ವಿಮೋಕ್ಷ್ಯೇ ಅಥ ಸಂಪತ್ಸ್ಯೇ. ಛಾಂದೋಗ್ಯ. ೬.]

೪೮. ಅಯ್ಯ ರಾಮ, ಈ ಚಿತ್ತವೆಂಬ ಮೊಳಕೆಗೆ ಪ್ರಾಣಸ್ಪಂದ ಮತ್ತು ಅವಿದ್ಯಾ ಕಾಮ ಕರ್ಮಾದಿ ವಾಸನೆ ಎಂಬಿವೆರಡೂ ಬೀಜಗಳೆಂದು ತಿಳಿ. ಅವೆರಡರೊಳಗೆ ಯಾವೊಂದು ಬೀಜವು ನಷ್ಟವಾದರೂ ಆಗಲೇ ಆ ಎರಡು ಬೀಜಗಳೂ ನಾಶಹೊಂದುವುವು. (ತತ್ಕ್ಷಣ ಮತ್ತೊಂದೂ ನಾಶಹೊಂದಿದಂತೆಯೇ ಕಾರ್ಯಾಕ್ಷಮವಾಗಿಬಿಡುವುದೆಂದರ್ಥ.)

೪೯. ಏಕೆಂದರೆ ನಮ್ಮ ಉಪಯೋಗಕ್ಕೋಸ್ಕರ ಜಲವನ್ನು ಒಂದು ಘಟದೊಳಗೆ ತುಂಬಿಸಿ ತೆಗೆದುಕೊಳ್ಳುವ ವಿಷಯದಲ್ಲಿ ಜಲಾಶಯವೂ, ಘಟವೂ ಒಟ್ಟುಗೂಡಿ ಕಾರಣವಾಗುವಂತೆ ಚಿತ್ತದ ಜನನವಾಗಬೇಕಾದರೆ ಪೂರ್ವ ಶ್ಲೋಕದಲ್ಲಿ ಉಕ್ತವಾದ ಪ್ರಾಣಸ್ಪಂದ ವಾಸನೆಗಳೆರಡೂ ಒಟ್ಟಿಗೆ ಕೂಡಿಕೊಂಡು ಪರಸ್ಪರ ಸಹಕೃತಗಳಾಗಿ ಕಾರಣವಾಗುವುದು. ಆ ಎರಡು ಬೀಜಗಳಲ್ಲಿ ಪ್ರತ್ಯೇಕವಾಗಿ ಒಂದೊಂದಕ್ಕೆ ಮಾತ್ರವೇ ಚಿತ್ತಜನನ ಸಾಮರ್ಥ್ಯವಿಲ್ಲವು.

೫೦. ಪ್ರಾಣಸ್ಪಂದನದ ಸಾಹಾಯ್ಯವಿಲ್ಲದೆ ಘನವಾದ ವಾಸನೆಯೊಂದು ಮಾತ್ರವೇ ಬಲಾತ್ಕರಿಸಿ ಪುನರ್ಜನ್ಮಕಾರಿಣಿಯಾಗುವುದಿಲ್ಲ. (ಅಂತೆಯೇ ವಾಸನೆಯಿಲ್ಲದೆಯೇ ಪ್ರಾಣಸ್ಪಂದನವೂ ಪುನರ್ಜನ್ಮಕಾರಿಣಿಯಲ್ಲವು. ಎಂಬರ್ಥವೂ ಸೂಚಿತವಾಗುವುದು.)

ಬೀಜಾಂಕುರವದೇತೇ ಹಿ ಸಂಸ್ಥಿತೇ ತಿಲ ತೈಲವತ್ ।
ಅವಿನಾಭಾವಿನೀ ನಿತ್ಯಂ ಕಾಲಾ ಕಾಂಕ್ಷಿಕ್ರಮೇ ತಥಾ ॥ ೫೧ ॥

ಸರ್ವ ಮುತ್ಪಾದಯತ್ಯೇ ತಚ್ಚಿತ್ತಕಃ ಸಂವಿದಾತ್ಮಕಃ ।
ಯಥಾ ಪ್ರಾಣೇಂದ್ರಿಯಾನಂದಮಾನಂದ ಪವನಾವುಭೌ ॥ ೫೨ ॥

ಚಿತ್ತಸ್ಯೋತ್ಪಾದಿಕೇ ಸಾರ್ಥಂ ಯದ್ವೈತೇ ವಾಸನೇ ತದಾ
ಆಮೋದ ಪುಷ್ಪವತ್ತೈಲ ತಿಲವಚ್ಚ ವ್ಯವಸ್ಥಿತೇ ॥ ೫೩ ॥

("ಬೀಜಂತಸ್ಯಾಪಿ ಕಿಂ ಭವೇತ್" ಎಂಬ ನಾಲ್ಕನೆಯ ಪ್ರಶ್ನೆಗೆ ಉತ್ತರ.)

೫೧. ಪ್ರಾಣಸ್ಪಂದನ ಮತ್ತು ವಾಸನೆ ಎಂಬ ಎರಡೂ ಬೀಜಾಂಕುರಗಳಂತೆ ಒಂದೊಂದು ಇನ್ನೊಂದೊಂದಕ್ಕೆ ಕಾಲಕ್ರಮದಲ್ಲಿ ಕಾರಣವಾಗುತ್ತಾ, ಪರಸ್ಪರ ಕಾರಣವಾಗಿಯೂ ತಿಲ ತೈಲಗಳಂತೆ ಸರ್ವದಾ ಅವಿನಾಭಾವಿಗಳಾಗಿಯೂ ಒಂದನ್ನೊಂದು ಎಂದಿಗೂ ಎಡಬಿಡದೆ ಹೊಂದಿಕೊಂಡಿರುವಂಥವುಗಳಾಗಿಯೂ ಇರುವುವು.

೫೨-೫೩. ಅಂತಃಕರಣ ವೃತ್ತ್ಯಾತ್ಮಕವಾದ ಚಿತ್ತವೂ ಕೂಡ ಯಥಾಕ್ರಮವಾಗಿ ಮೊದಲು ಪ್ರಾಣವನ್ನೂ, ಆಮೇಲೆ ಇಂದ್ರಿಯಗಳನ್ನೂ ಅನಂತರ ಇಂದ್ರಿಯ ಪ್ರಯುಕ್ತವಾದ ಶಬ್ದಾದಿ ವಿಷಯಾನುಭವರೂಪ ಆನಂದವನ್ನೂ, ಹೀಗೆ ಇವೆಲ್ಲವನ್ನೂ ಉತ್ಪತ್ತಿ ಮಾಡುವುದು. (ಚಿತ್ತವು ಪ್ರಾಣಸ್ಪಂದ ವಾಸನೆಗಳಿಗೂ ಇಂದ್ರಿಯ ಪ್ರಯುಕ್ತವಾದ ಸುಖಾದಿಗಳಿಗೂ ಕಾರಣವೆಂದರ್ಥ.) ಹೀಗೆ ಹಿಂದೆ ಅನುಭೂತವಾದ ವಿಷಯಾನಂದವೂ ತಾತ್ಕಾಲಿಕ ಜೀವನವೆಂಬ ಪ್ರಾಣ ವಾಯು ಸ್ಪಂದನವೂ ಇವೆರಡೂ ಯಾವಾಗ ವಾಸನಾತ್ಮಕವಾಗಿ ಪರಿಣತವಾಗುವುವೋ ಆಗ ಅವೆರಡೂ ಒಟ್ಟಿಗೆ ಕೂಡಿಕೊಂಡು ಚಿತ್ತವನ್ನು ಉತ್ಪತ್ತಿ ಮಾಡುವುವು ಆದುದರಿಂದ ಪ್ರಾಣಸ್ಪಂದ ವಾಸನೆಗಳೆರಡೂ, ಪರಿಮಳ ಪುಷ್ಪಗಳಂತೆಯೂ, ತೈಲ ತಿಲಗಳಂತೆಯೂ ಅನ್ಯೋನ್ಯಾಶ್ರಯವುಳ್ಳವುಗಳಾಗಿಯೂ ಬೀಜಾಂಕುರಗಳಂತೆ ಪರಸ್ಪರ ಕಾರಣಗಳಾಗಿಯೂ ಇರುವುದು ಉಪಪನ್ನವೇ.

ವಾಸನಾವಶತಃ ಪ್ರಾಣಸ್ಪಂದಸ್ತೇನ ಚ ವಾಸನಾ ।
ಜಾಯತೇ ಚಿತ್ತ ಬೀಜಸ್ಯ ತೇನ ಬೀಜಾಂಕುರಕ್ರಮಃ ॥ ೫೪ ॥

ವಾಸನೋತ್ಪ್ಲವ ಮಾನತ್ವಾತ್ ಸಂವಿತ್ಸ್ವಕ್ಷೋಭ ಕರ್ಮಣಾ ।
ಪ್ರಾಣಸ್ಪಂದಂ ಬೋಧಯತಿ ತೇನ ಚಿತ್ತಂ ಪ್ರಜಾಯತೇ ॥ ೫೫ ॥

ಪ್ರಾಣಃ ಸ್ಪಂದನ ಧರ್ಮಿತ್ವಾತ್ ಸ್ಪಂದತೇ ಸ್ಪೃಷ್ಟ ಹೃದ್ಗುಣಃ ।
ಸಂವಿದಂ ಬೋಧಯಂಸ್ತೇನ ಚಿತ್ತಬಾಲಃ ಪ್ರಜಾಯತೇ ॥ ೫೬ ॥

ಏವಂ ಹಿ ವಾಸನಾಪ್ರಾಣ ಸ್ಪಂದೌ ದ್ವೌ ತಸ್ಯ ಕಾರಣಂ ।
ತಯೋ ರೇಕಕ್ಷಯೇ ನಾಶೋ ದ್ವಯೋಶ್ಚಿತ್ತಸ್ಯ ರಾಘವ ॥ ೫೭ ॥

---

೫೪. ವಾಸನಾ ಬಲದಿಂದ ಪ್ರಾಣವಾಯು ಸ್ಪಂದವೂ, ಪ್ರಾಣ ಸ್ಪಂದದಿಂದ ವಾಸನೆಯೂ ಜನಿಸುವುವು. ಹೀಗೆ ಚಿತ್ತ ಬೀಜಗಳಾದ ಪ್ರಾಣಸ್ಪಂದ ವಾಸನೆಗಳಿಗೆ ಬೀಜಾಂಕುರ ನ್ಯಾಯವು ಉಪಪನ್ನವಾಗುವುದು.

೫೫. ವಾಸನೆಯು ಪ್ರಬಲವಾಗಿ ಉದ್ಬುದ್ಧವಾಗುವುದರಿಂದ ಚಿತ್ತ ವೃತ್ತಿಗೆ ಕ್ಷೋಭವು ಸಂಭವಿಸುವುದು. ಇದರ ಮೂಲಕ ವಾಸನೆಯು ಪ್ರಾಣಸ್ಪಂದ ವನ್ನು ಪ್ರವರ್ತಿಸುವಂತೆ ಮಾಡುವುದು. ಆ ಪ್ರಾಣಸ್ಪಂದದಿಂದ ಚಿತ್ತವು ಜನಿಸುವುದು.

೫೬. ಪ್ರಾಣವಾಯುವು ಚಲಿಸತಕ್ಕ ಸ್ವಭಾವವುಳ್ಳದ್ದಾದ ಕಾರಣ, ಹೃದಯ ವನ್ನು ಹೊಕ್ಕು ಅಲ್ಲಿ ನೆಲೆಸಿರತಕ್ಕ ರಾಗಾದಿ ವಾಸನೆಗಳನ್ನು ಪ್ರೇರೇಪಿಸಿ, ಚಿತ್ತ ವೃತ್ತಿಗಳನ್ನು ಪ್ರಬೋಧಗೊಳಿಸತಕ್ಕದ್ದಾಗಿ ಚಲಿಸುವುದು. ಆ ವಿಧವಾದ ಪ್ರಾಣ ಸ್ಪಂದದಿಂದ ಆಕ್ಷಣವೇ ಚಿತ್ತವೆಂಬ ಶಿಶುವು ಜನಿಸುವದು.

೫೭. ಈ ಪ್ರಕಾರವಾಗಿ ವಾಸನಾ ಪ್ರಾಣಸ್ಪಂದನಗಳೆರಡೂ ಒಟ್ಟಿಗೆ ಸೇರಿ ಆ ಚಿತ್ತಕ್ಕೆ ಕಾರಣವಾಗಿರುವುವು. ಅಯ್ಯ ರಾಘವ, ಈ ಎರಡರೊಳಗೆ ಯಾವುದಕ್ಕೆ ನಾಶವುಂಟಾದರೂ ಮತ್ತೊಂದಕ್ಕೂ ನಾಶವು ಸಂಭವಿಸಿ ಆ ಎರಡು ಕಾರಣಗಳು ನಾಶ ಹೊಂದುವುದು ಮಾತ್ರವೇ ಅಲ್ಲದೆ ಅವುಗಳ ಕಾರ್ಯವಾದ ಚಿತ್ತವೂ ಕೂಡ ಸರ್ವಥಾ ನಷ್ಟವಾಗಿ ಬಿಡುವುದು.

ಸುಖದುಃಖ ಮನಸ್ಪಂದಂ ಶರೀರಕ ಬೃಹತ್ಫಲಂ ।
ಕಾರ್ಯ ಪಲ್ಲವಿತಾಕಾರಂ ಕೃತಿವ್ರತತಿವೇಷ್ಟಿತಂ　　|| ೫೮ ||

ತೃಷ್ಣಾ ಕೃಷ್ಣಾಹಿ ವಲಿತಂ ರಾಗರೋಗಬಕಾಲಯಂ ।
ಅಜ್ಞಾನ ಮೂಲಂ ಸುದೃಢಂ ಲೀನೇಂದ್ರಿಯ ವಿಹಂಗಮಂ　　|| ೫೯ ||

ವಾಸನಾ ಕ್ಷಯ ಮಾನೀತಾ ಚಿತ್ತವೃಕ್ಷಂ ಕ್ಷಣೇನ ಹಿ ।
ಪ್ರಪಾತಯತಿ ವಾತೌಘಃ ಕಾಲಪಕ್ವ ಫಲಂ ಯಥಾ　　|| ೬೦ ||

೫೮-೬೦. ವತ್ಸ ರಾಮ, ಚಿತ್ತವೆಂಬುದು ಸಂಸಾರಾರಣ್ಯದಲ್ಲಿ ಮಹಾ ವೃಕ್ಷದಂತಿರುವುದು. ಹೇಗೆಂದರೆ, ಈ ಚಿತ್ತ ವೃಕ್ಷವು ನಾನಾ ಸುಖದುಃಖಾಕುಲವಾದ ಮನನವೆಂಬ ಚಲನವುಳ್ಳದ್ದಾಗಿರುವುದು. ಸ್ಥೂಲ ದೇಹವೆಂಬ ದೊಡ್ಡ ಫಲದಿಂದ ಕೂಡಿರುವುದು. ವಿವಿಧ ಕಾರ್ಯ ಸಮುದಾಯಗಳೆಂಬ ಪಲ್ಲವ ರಾಜಿಗಳಿಂದ ಶೋಭಿಸುವ ಆಕಾರವುಳ್ಳದು. ಪ್ರಯತ್ನಗಳೆಂಬ ಲತೆಗಳಿಂದ ಪರಿವೃತವಾಗಿರುವುದು. ಅನೇಕ ತೃಷ್ಣೆಗಳೆಂಬ ಕೃಷ್ಣ ಸರ್ಪಗಳು ಇದನ್ನು ಸುತ್ತಿಕೊಂಡು ಇರುವುವು. ರಾಗಗಳೂ, ಭೋಗಗಳೂ ಎಂಬ ಬಕ ಪಕ್ಷಿಗಳು ಇದರಲ್ಲಿ ಗೂಡು ಕಟ್ಟಿಕೊಂಡು ಸರ್ವದಾ ವಾಸಮಾಡಿಕೊಂಡಿರುವುವು ಪ್ರಬಲವಾದ ಅಜ್ಞಾನವೆಂಬ ಬುಡದಿಂದ ಸುದೃಢವಾಗಿರುವುದು. ಇಂದ್ರಿಯ ಸಮೂಹಗಳೆಂಬ ವಿವಿಧ ಪಕ್ಷಿಗಳು ಇದರಲ್ಲಿ ಅಡಗಿಕೊಂಡಿರುವುವು. ಫಲಗಳು ಪಕ್ವವಾಗಿರುವ ಕಾಲದಲ್ಲಿ ಚೆನ್ನಾಗಿ ಕಳಿತು ಮಾಗಿ ತೊಟ್ಟಿನೊಂದಿಗೆ ಅಂಟಿಕೊಂಡಿರುವ ಒಂದು ಹಣ್ಣನ್ನು ಬಿರುಗಾಳಿಯು ಕೆಡವಿಬಿಡುವಂತೆ ಇಂತಹ ಚಿತ್ತವೆಂಬ ವೃಕ್ಷವನ್ನು ಕ್ಷಯಗೊಳಿಸಲ್ಪಟ್ಟಂಥ ವಾಸನೆಯು ಒಂದು ಕ್ಷಣದೊಳಗೆ ಅತಿ ಸುಲಭವಾಗಿ ಕೆಡವಿಬಿಡುವುದು. (ಪ್ರಯತ್ನಪಟ್ಟು ಮೊದಲಿಂದಲೂ ದೃಢವಾಗಿರುವ ವಾಸನೆಯನ್ನು ಕ್ರಮೇಣ ಕ್ಷಯಗೊಳಿಸಿ ನಾಶಪಡಿಸಿಕೊಂಡರೆ, ವಾಸನಾ ನಾಶದೊಂದಿಗೆ ಚಿತ್ತ ನಾಶವೂ ಸಂಭವಿಸುವುದು ಎಂದು ತಾತ್ಪರ್ಯ.)

ಪಾಂಡುರೀಕೃತ ಸರ್ವಾಂಶಂ ಸ್ಥಗಿತಾಖಿಲ ದರ್ಶನಂ ।
ವಿಲೋಲ ಜಲದಾಕಾರ ಮಜ್ಞಾನಾವ ಕರೋತ್ಥಿತಂ ॥ ೬೧ ॥

ತೃಷ್ಣಾ ತೃಣಲವ ವ್ಯಾಪ್ತಂ ಸ್ತಂಭಾಕೃತಿ ಶರೀರಕಂ
ಸ್ಫುರತ್ತನು ತನುಕ್ಷುಬ್ಧಂ ಸುಖಮುತ್ಪ್ಲವನಂ ಪ್ರತಿ ॥ ೬೨ ॥

ಅಂತಃಸ್ಥಿತ ಮಹಾಲೋಕಮಪಶ್ಯತ್ರ ವಿಲೀಯತೇ ।
ಪವನಸ್ಪಂದರೋಧಾಚ್ಚ ರಾಮ ಚಿತ್ತರಜಃ ಕ್ಷಣಾತ್ ॥ ೬೩ ॥

೬೧-೬೩. ಅಯ್ಯ ರಾಮ, ಚಿತ್ತವನ್ನು ಬಿರುಗಾಳಿಯಿಂದ ಮೇಲಕ್ಕೆದ್ದ ಧೂಳೀ ಪಟಲವೆಂದು ತಿಳಿ. ವಾಯುವಿನ ಸಂಚಲನವು ನಿಲ್ಲುವುದರಿಂದ ಕೂಡಲೆ ಧೂಳಿಯೂ ಮೇಲಕ್ಕೆ ಏಳದೆ ಅಡಗಿರುವಂತೆ ಈ ಚಿತ್ತವೂ ಪ್ರಾಣ ವಾಯುವಿನ ಸ್ಪಂದ ನಿರೋಧದಿಂದ ವಿಲೀನವಾಗುವುದು. (ಉದ್ಬೋಧವಾಗದೆ ಹೋಗುವುದು.) ಧೂಳೀ ಪಟಲವು ಎಲ್ಲ ದಿಕ್ಕುಗಳನ್ನೂ ಕವಿದುಕೊಂಡು ಕಾಂತಿಹೀನವಾದ ಬಿಳುಪು ಗೊಳ್ಳಿಸುವಂತೆ ಈ ಚಿತ್ತವು ನಾನಾವಿಧ ಆಶಾಪರವಶರಾದ ಜನರನ್ನು ಬೆಳ್ಳಗೆ ಕಾಂತಿ ಹೀನರನ್ನಾಗಿ ಮಾಡಿಬಿಡುವುದು. ಧೂಳಿಯು ಮಾರ್ಗಸ್ಥರೆಲ್ಲರ ಕಣ್ಣುಗಳನ್ನು ಮುಸುಕಿ ಮುಚ್ಚಿಸಿಬಿಡುವಂತೆ ಚಿತ್ತವು ಪೂರ್ಣ ಚಿದ್ರೂಪವನ್ನು ಮರೆಮಾಡುವುದು. ಮೇಘಾಕಾರವಾಗಿ ಹರಡಿಕೊಂಡು ಅತಿ ಚಂಚಲವಾಗಿ ಹಾರಾಡುವ ಧೂಳೀ ಪಟಲದಂತೆ ಚಿತ್ತವು ಅತಿ ಚಂಚಲವಾಗಿ ಜಡತ್ವವನ್ನುಂಟುಮಾಡುವ ಸ್ವರೂಪವುಳ್ಳದ್ದಾಗಿದೆ. ಮಣ್ಣು, ಕಸ ಮುಂತಾದವುಗಳ ರಾಶಿಯಿಂದ ಧೂಳಿಯು ಏಳುವಂತೆ ದುರ್ಭೇದ್ಯವಾದ ಅಜ್ಞಾನದ ಪ್ರಾಬಲ್ಯದಿಂದ ಚಿತ್ತವೂ ಉದ್ಭವಿಸುವುದು. ಧೂಳೀಪಟಲವೆಂಬ ಈ ಚಿತ್ತದಲ್ಲಿ ನಾನಾ ತೃಷ್ಣೆಗಳೆಂಬ ಕಸ ಕಡ್ಡಿಗಳು ತುಂಬಿ ಕೊಂಡಿರುವುವು. ಧೂಳೀ ಪಟಲವು ಸುಂಟರಗಾಳಿಯ ಮೂಲಕ ಮೇಲಕ್ಕೆ ಹಾರಿ ಕೆಳಗಿನಿಂದ ಮೇಲಕ್ಕೆ ಒಂದೇ ಉದ್ದವಾದ ಸ್ತಂಭಾಕಾರವಾಗಿ ಕಾಣುವಂತೆ ಚಿತ್ತವೂ ಸ್ತಂಭಪ್ರಾಯವಾದ ಅಂದರೆ ವಿಮೂಢವಾದ ಬೃಹದಾಕಾರವುಳ್ಳದ್ದಾಗಿರುವುದು. ಧೂಳಿಯ ರಾಶಿಯು ವಿಶೇಷವಾಗಿ ಸ್ಫುರಿಸುವ ಸೂಕ್ಷ್ಮ ವಾಯುಗಳಿಂದ ಕ್ಷೋಭೆ ಗೊಳ್ಳುವಂತೆ ಚಿತ್ತವು ಸರ್ವದಾ ತನ್ನಲ್ಲಿ ಸ್ಫುರಿಸುತ್ತಲಿರುವ ಅತಿ ತುಚ್ಛವಾದ ವೃತ್ತಿ ಗಳಿಂದ ಕ್ಷೋಭೆಗೊಂಡಿರುವುದು. ಧೂಳೀ ಪಟಲವು ಅನಾಯಾಸವಾಗಿ ಮೇಲಕ್ಕೆ ಹಾರಿಹೋಗುವುದರಲ್ಲಿ ಸಮರ್ಥವಾಗಿರುವಂತೆ ಚಿತ್ತವು ಸುಖಗಳನ್ನು ಹುಡುಕುತ್ತಾ, ಅವುಗಳನ್ನು ಕಂಡಕೂಡಲೇ ಅವುಗಳ ಕಡೆಗೆ ಬಲುಬೇಗ ಹಾರಿಹೋಗತಕ್ಕ ಸಾಮರ್ಥ್ಯವನ್ನು ಪಡೆದಿರುವುದು. ಧೂಳೀಪಟಲದೊಳಗೆ ಅಡಗಿರುವ ಸೂರ್ಯನ

ವಾಸನಾ ಪ್ರಾಣ ಪವನಸ್ಪಂದಯೋರನಯೋರ್ದ್ವಯೋಃ ।
ಸಂವೇದ್ಯಂ ಬೀಜ ಮಿತ್ಯುಕ್ತಂ ಸ್ಫುರತಸ್ತೌ ಯತಸ್ತತಃ ॥ ೬೪ ॥

ಹೃದಿ ಸಂವೇದ್ಯ ಮಾಶ್ಯೈವ ಪ್ರಾಣಸ್ಪಂದೋಽಥ ವಾಸನಾ ।
ಉದೇತಿ ತಸ್ಮಾತ್ಸಂವೇದ್ಯಂ ಕಥಿತಂ ಬೀಜಮೇತಯೋಃ ॥ ೬೫ ॥

ಸಂವೇದ್ಯ ಸಂಪರಿತ್ಯಾಗಾತ್ಪ್ರಾಣಸ್ಪಂದನ ವಾಸನೇ ।
ಸಮೂಲಂ ನಶ್ಯತಃ ಕ್ಷಿಪ್ರಂ ಮೂಲಚ್ಛೇದಾದಿವ ದ್ರುಮಃ ॥ ೬೬ ॥

ಪ್ರಕಾಶವು ನೋಡುವದಕ್ಕೆ ಕೂಡ ಆಗದಿರುವಂತೆ ಈ ಚಿತ್ತದೊಳಗೆ ಇರುವ ಸ್ವಯಂ ಪ್ರಕಾಶಮಾನವೂ, ಪರಂಜ್ಯೋತಿಃ ಸ್ವರೂಪವೂ ಆದ ಪರಬ್ರಹ್ಮವನ್ನು ಸಾಕ್ಷಾತ್ಕರಿಸುವದಕ್ಕೆ ಆಗದಿರುವದು. ಇಂತಹ ಚಿತ್ತವು ಪ್ರಾಣಾದಿ ವಾಯುಗಳ ಸ್ಪಂದವನ್ನು ಪ್ರಾಣಾಯಾಮಾದಿ ಯೋಗಸಾಧನೋಪಾಯಗಳ ಮೂಲಕ ನಿರೋಧ ಮಾಡುವುದರಿಂದ ಒಂದು ಕ್ಷಣದಲ್ಲಿಯೇ ವಿಲೀನವಾಗುವುದು.

೬೪. ಚಿತ್ತಬೀಜಗಳಾದ ವಾಸನಾ ಮತ್ತು ಪ್ರಾಣವಾಯು ಸ್ಪಂದಗಳೆರಡೂ ಪ್ರಿಯವೂ, ಅಪ್ರಿಯವೂ ಆದ ಶಬ್ದಾದಿ ವಿಷಯಗಳಿಂದ ಸ್ಫುರಿಸುವುವು. ಅದು ಕಾರಣ, ಆ ಶಬ್ದಾದಿ ವಿಷಯ ರೂಪವಾದ ಸಂವೇದ್ಯವೇ ವಾಸನಾಪ್ರಾಣ ಸ್ಪಂದಗಳಿಗೆ ಬೀಜವೆನ್ನಿಸುವುದು.

೬೫. ಹೃದಯದಲ್ಲಿ ಪ್ರಿಯಾಪ್ರಿಯಗಳಾದ ಶಬ್ದಾದಿ ಬಾಹ್ಯಾರ್ಥಗಳ (ಸಂವೇದ್ಯ) ಸ್ಮರಣೆಯುಂಟಾದ ಕೂಡಲೇ ಅದರಿಂದಲೇ ಪ್ರಾಣ ಸ್ಪಂದವೂ ಮತ್ತು ವಾಸನೆಯೂ ಉದಯಿಸುವುವು. ಆದುದರಿಂದಲೇ ಸಂವೇದ್ಯವು ಅವೆರಡರ ಬೀಜವೆಂದು ತತ್ತ್ವಜ್ಞರು ಹೇಳುವರು.

೬೬. ಪ್ರಾಣಸ್ಪಂದನ ವಾಸನೆಗಳೆರಡಕ್ಕೂ ಸಂವೇದ್ಯಗಳೇ (ಶಬ್ದಾದಿ ವಿಷಯಗಳು) ಮೂಲವು ಅಂದರೆ ಅವೆರಡೂ ಸಂವೇದ್ಯಾಧೀನಗಳು. ಅದು ಕಾರಣ, ಮೂಲವನ್ನು (ಬೇರುಗಳನ್ನು ಅಥವಾ ಬುಡವನ್ನು) ಕತ್ತರಿಸಿಬಿಟ್ಟರೆ ಆಗಲೇ ಮರವು ನಾಶ ಹೊಂದುವಂತೆ ಪ್ರಾಣ ಸ್ಪಂದ ವಾಸನೆಗಳಿಗೆ ಮೂಲವಾದ ಸಂವೇದ್ಯಗಳನ್ನು ಸಮಗ್ರವಾಗಿ ಪರಿತ್ಯಾಗ ಮಾಡಿಬಿಟ್ಟರೆ ತದಧೀನಗಳಾದ ಅವೆರಡೂ ಕೂಡಲೆ ನಾಶ ಹೊಂದುವುವು.

ಸಂವಿದಂ ವಿದ್ಧಿ ಸಂವೇದ್ಯಂ ಬೀಜಂ ಧೀರತಯಾ ವಿನಾ ।
ನ ಸಂಭವತಿ ಸಂವೇದ್ಯಂ ತೈಲಹೀನಸ್ತಿಲೋ ಯಥಾ ॥ ೬೭ ॥

ನ ಬಹಿರ್ನಾಂತರೇ ಕಿಂಚಿತ್ಸಂವೇದ್ಯಂ ವಿದ್ಯತೇ ಪೃಥಕ್ ।
ಸಂವಿತ್ಸ್ಫುರಂತೀ ಸಂಕಲ್ಪಾತ್ಸಂವೇದ್ಯಂ ಪಶ್ಯತಿ ಸ್ವತಃ ॥ ೬೮ ॥

ಸ್ವಪ್ನೇ ಯಥಾತ್ಮ ಮರಣಂ ತಥಾ ದೇಶಾಂತರ ಸ್ಥಿತಿಃ ॥ ೬೯ ॥

ಸ್ವಚಮತ್ಕಾರ ಯೋಗೇನ ಸಂವೇದ್ಯಂ ಸಂವಿದಸ್ತಥಾ ।
ಸ್ವವೇದನಂ ಸ್ವಸಂಕಲ್ಪಾತ್ಸಂವಿದೋ ಯತ್ರ ವರ್ತತೇ ॥ ೭೦ ॥

---

೬೭. ರಾಮ, ಚಿತ್ತವೃತ್ತಿ ರೂಪವಾದ ಸಂವಿತ್ತೇ ಸ್ವಕೀಯವಾದ ಧೀರತ್ವ ವನ್ನು (ಅವಿಕೃತ ಸ್ಥಿತಿ) ಬಿಟ್ಟು ಶಬ್ದಾದಿ ವಿಷಯಾಕಾರವಾಗಿ (ಸಂವೇದ್ಯ) ಪರಿಣ ಮಿಸಿ ಚಿತ್ತದ ಉತ್ಪತ್ತಿಗೆ ಕಾರಣವಾಗುವುದು. ಆದುದರಿಂದ ಚಿತ್ತ ಬೀಜವಾದ ಸಂವೇದ್ಯವು ಸಂವಿತ್ ಎಂದೇ ತಿಳಿಯುವವನಾಗು. ಹೀಗೆ ಸಂವೇದ್ಯವು ಸಂವಿದ ಭಿನ್ನವಾದುದು. (ಸಂವಿತ್ತಿಗಿಂತ ಭಿನ್ನವಾದುದಾಗಿಲ್ಲ.) ಎಂದು ಭಾವಿಸುವಿಕೆಯೇ ಸಂವೇದ್ಯ ಪರಿತ್ಯಾಗವೆನ್ನಿಸುವದು.

೬೮. ಎಣ್ಣೆ ಇಲ್ಲದ ಎಳ್ಳು ಲೋಕದಲ್ಲಿ ಹೇಗೆ ಅಪ್ರಸಿದ್ಧವೋ ಹಾಗೆಯೇ ಸಂವಿತ್ತನ್ನು ಬಿಟ್ಟಿರುವ ಸಂವೇದ್ಯವೂ ಸರ್ವಥಾ ಅಪ್ರಸಿದ್ಧವು. ಸಂವಿತ್ತಿಗಿಂತಲೂ ಪೃಥಕ್ಕಾಗಿ ಸಂವೇದ್ಯವು ಒಳಗೂ, ಹೊರಗೂ ಯಾವುದೊಂದಾಗಿಯೂ ಸರ್ವಥಾ ಇಲ್ಲವೇ ಇಲ್ಲ. ಏಕೆಂದರೆ, ಸಂವಿತ್ತೇ ಸ್ವ ಸಂಕಲ್ಪದಿಂದ ಸ್ಫುರಿಸುವಂತಹುದಾಗಿ ಸ್ವತಃ ಸಂವೇದ್ಯವನ್ನು ಕಾಣುವುದು.

೬೯–೭೦. ಸ್ವಪ್ನದರ್ಶಿಯು ತಾನೇ (ಬದುಕಿಕೊಂಡಿದ್ದರೂ) ತನ್ನ ಮರಣ ವನ್ನೂ, ತಾನು ತನ್ನ ಮನೆಯ ಒಂದು ಮೂಲೆಯಲ್ಲಿ ಹಾಸಿಗೆಯ ಮೇಲೆ ಮಲಗಿ ಕೊಂಡಿದ್ದರೂ ದೇಶಾಂತರಗಳಿಗೆ ಹೋಗಿ ಅಲ್ಲಿ ನಾನಾ ವ್ಯವಹಾರಗಳನ್ನು ನಡೆ ಯಿಸುವುದನ್ನೂ ಸ್ವಪ್ನಕಾಲಗಳಲ್ಲಿ ಅನುಭವಿಸುವನಷ್ಟೇ ಇಂತಹ ಅತ್ಯದ್ಭುತ ವಾದ ಅತಿ ವಿಲಕ್ಷಣವಾದ ಮತ್ತು ಅತಿ ವಿರುದ್ಧವಾದ ಸಕಲ ಸ್ವಾಪ್ನ ಸಂವೇದ್ಯ ಗಳು ಸಂವಿತ್ತಿನ ದೆಸೆಯಿಂದ ಅದರ ಚಮತ್ಕಾರ ಮಾತ್ರ ಮೂಲಕವೇ ಹೇಗೆ

ಜಗಜ್ಜಾಲಮತೋ ಭಾತಿ ತದಿದಂ ರಘುನಂದನ ।　　॥ ೭೧ ॥

ಸಂಭವಿಸುವುವೋ ಹಾಗೆ ಜಾಗ್ರತ್ತಿನಲ್ಲಿಯೂ ಅತಿ ವಿಚಿತ್ರಗಳಾದ ಅನೇಕಾನೇಕ ಪ್ರಾಪಂಚಿಕ ವಿಷಯಗಳೂ ಸಂವಿತ್ತಿನ ಚಮತ್ಕಾರ ಮೂಲಕವೇ ಸಂವಿತ್ತಿನಿಂದಲೇ ಪ್ರತಿಭಾಸಿಸುವುವು.

೭೧ ಅಯ್ಯ ರಘುನಂದನ, ಪರಮಾರ್ಥತಃ ಅದ್ವಿತೀಯನಾದ ಕೇವಲಾತ್ಮನಲ್ಲಿ ಸ್ವಾತ್ಮತತ್ತ್ವ ದರ್ಶನ ವಿವೇಕ ವೈರಾಗ್ಯಾಭ್ಯಾಸ, ವಿಚಾರಾದಿ ಸಕಲ ಭೇದ ವ್ಯವಹಾರಗಳೂ ಸರ್ವಥಾ ಸಂಭವಿಸುವುದಿಲ್ಲವಾದ ಕಾರಣ, ಯಾವ ವಿವೇಕಾವಸ್ಥೆಯಲ್ಲಿ ಸ್ವಾತ್ಮತತ್ತ್ವ ಸಂದರ್ಶನವು ಪ್ರವರ್ತಿಸುವದೋ ಅಂತಹ ಸ್ವಾತ್ಮ ಸಂವೇದನವೂ ಕೂಡ ಸ್ವಸಂಕಲ್ಪದಿಂದಲೇ ಸ್ವಪ್ನಕಾಲಿಕವಾದ ಅನುಭವದಂತೆಯೇ ಸಂವಿತ್ತಿನ ದೆಸೆಯಿಂದ ಅದರ ಚಮತ್ಕಾರದ ಮೂಲಕ ಪ್ರವರ್ತಿಸುವದೆಂದು ಚೆನ್ನಾಗಿ ತಿಳಿ. ಹೀಗೆ, ಸ್ವಪ್ನ ಜಾಗ್ರತ್ತುಗಳೆಂಬ ಎರಡು ಕಾಲಗಳಲ್ಲಿಯೂ ಒಂದೇ ಸಮನಾಗಿ ಪರಿದೃಶ್ಯಮಾನವಾದ ಸಕಲ ಜಗಜ್ಜಾಲವು ಸಂವಿತ್ತಿನ ದೆಸೆಯಿಂದಲೇ ಪ್ರತಿಭಾಸಮಾನವಾಗಿರುವುದು. ಈ ವಿಷಯದಲ್ಲಿ ಸಂಶಯ ಪಡಬೇಡ.

[ವಿಶ್ವಂ ಪಶ್ಯತಿ ಕಾರ್ಯ ಕಾರಣತಯಾ ಸ್ವ ಸ್ವಾಮಿ ಸಂಬಂಧತಃ. ಶಿಷ್ಯಾಚಾರ್ಯತಯಾ ತಥೈವ ಪಿತೃ ಪುತ್ರಾದ್ಯಾತ್ಮನಾ ಭೇದತಃ । ಸ್ವಪ್ನೇ ಜಾಗ್ರತಿ ವಾ ಯ ಏಷ ಪುರುಷೋ ಮಾಯಾ ಪರಿಭ್ರಾಮಿತಃ ॥ ಎಂದು ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರವರು ದಕ್ಷಿಣಾಮೂರ್ತಿ ಸ್ತೋತ್ರದಲ್ಲಿ ಉಪದೇಶಿಸಿರುವರು. ಸ್ವಪ್ನ ವೃತ್ತಾವ ಪಿತ್ವಂತಃ ಚೇತಸಾಕಲ್ಪಿತಂ ತ್ವಸತ್ । ಬಹಿಶ್ಚೇತೋ ಗೃಹೀತಂ ಸತ್ ದೃಷ್ಟಂ ವೈತಥ್ಯ ಮೇತಯೋಃ । ಜಾಗ್ರದ್ವೃತ್ತಾವ ಪಿತ್ವಂತಃ ಚೇತ ಸಾಕಲ್ಪಿತಂ ತ್ವಸತ್ । ಬಹಿಶ್ಚೇತೋ ಗೃಹೀತಂ ಸತ್ ಯುಕ್ತಂ ವೈತಥ್ಯ ಮೇತಯೋಃ ॥ ಚಿತ್ತಕಾಲಾಹಿ ಯೇಂತಸ್ತು ದ್ವಯ ಕಾಲಾಶ್ಚಯೇ ಬಹಿಃ । ಕಲ್ಪಿತಾ ಏವತೇ ಸರ್ವೇ ವಿಶೇಷೋ ನಾನ್ಯ ಹೇತುಕಃ ॥ ಇತ್ಯಾದಿ ಶ್ರೀ ಗೌಡ ಪಾದಾಚಾರ್ಯ ವಿರಚಿತ ಮಾಂಡೂಕ್ಯಕಾರಿಕೆಯ ವೈತಥ್ಯ ಪ್ರಕರಣದ ಅರ್ಥವನ್ನು ಭಾವಿಸಿರಿ.

ಯಥಾ ಬಾಲಸ್ಯ ವೇತಾಲಃ ಸ್ವಸಂಕಲ್ಪೋದ್ಭವಾದ್ಭವೇತ್ ।
ಪುರುಷತ್ವಂ ಯಥಾ ಸ್ಥಾಣೋಃ ಸಂಪೇದ್ಯಂ ಸಂವಿದಸ್ತಥಾ ॥ ೭೨ ॥

ಯಥಾ ಚಂದ್ರಾರ್ಕರಶ್ಮೀನಾಂ ದಂಡತಾ ರೇಣುತಾ ತಥಾ ।
ಯಥಾ ನೌಸ್ಥಾಚಲಸ್ಪಂದಃ ಸಂವೇದ್ಯಂ ಸಂವಿದಸ್ತಥಾ ॥ ೭೩ ॥

ಏತನ್ಮಿಥ್ಯಾ ಹಿ ದುರ್ಜ್ಞಾನಂ ಸಮ್ಯಗ್ಜ್ಞಾನಾ ದ್ವಿಲೀಯತೇ ।
ರಜ್ಜ್ವಾಮಿವ ಭುಜಂಗತ್ವಂ ದ್ವೀನ್ದುತ್ವಂ ಸ್ವೀಕ್ಷಿತಾದಿವ ॥ ೭೪ ॥

---

೭೨. ಸ್ವಸಂಕಲ್ಪದಿಂದ ಉದ್ಭವಿಸಿದ ಭ್ರಾಂತಿಯ ಮೂಲಕವೇ, ಅಪ್ರಬುದ್ಧನಾದ ಬಾಲಕನಿಗೆ ಬೇತಾಳನೂ, ಅವಿವೇಕಿಯಾದ ಭ್ರಾಂತನಿಗೆ ಒಂದು ಮೋಟು ಮರವನ್ನು ಕಂಡಾಗ ಅದರಲ್ಲಿ ಪುರುಷಾಕಾರವೂ ತೋರುವಂತೆ ಸಂವಿತ್ತಿಗೆ ವಿಷಯಾಕಾರಗಳಾದ ಸಂವೇದ್ಯಗಳೂ ಮಿಥ್ಯೆಯಾಗಿಯೇ ಪ್ರತಿಭಾಸಿಸುವುವು.

೭೩. ಗವಾಕ್ಷಗಳ ಮೂಲಕ ಮನೆಯೊಳ ಹೊಕ್ಕ ಚಂದ್ರ ಸೂರ್ಯರ ಕಿರಣಗಳಲ್ಲಿ ದಂಡಾಕಾರವೂ, ಅದರ ಮಧ್ಯದಲ್ಲಿ ತ್ರಸರೇಣ್ವಾಕಾರವೂ ಭ್ರಮೆಯಿಂದ ತೋರುವಂತೆಯೂ, ಒಂದು ಹಡಗಿನಲ್ಲಿ ಕುಳಿತು ಪ್ರಯಾಣ ಮಾಡುವವನಿಗೆ ಹಡಗು ಅತಿ ವೇಗದಿಂದ ಓಡುತ್ತಿರುವಾಗ ಎರಡು ಪಾರ್ಶ್ವಗಳಲ್ಲಿಯೂ ನೆಲೆಯಾಗಿ ನಿಂತಿರುವ ಶೈಲ ವೃಕ್ಷಾದಿಗಳಲ್ಲಿ ಚಲನವು ತೋರುವಂತೆಯೂ, ಸಂವಿತ್ತಿನ ದೆಸೆಯಿಂದ ಸಂವೇದ್ಯವು ಭ್ರಾಂತಿ ಮೂಲಕವಾಗಿಯೇ ಮಿಥ್ಯೆಯಾಗಿ ಭಾಸಮಾನವಾಗಿರುವುದು.

೭೪. ಮಂದಾಂಧಕಾರದಲ್ಲಿ ನೆಲದಮೇಲೆ ಉದ್ದವಾಗಿ ಬಿದ್ದುಕೊಂಡಿರುವ ಒಂದು ಹಗ್ಗವನ್ನು ನೋಡಿ ಆದರಲ್ಲಿ ಮಿಥ್ಯೆಯಾಗಿಯೇ ಉದಯಿಸಿದ್ದ "ಇದು ಸರ್ಪವು" ಎಂಬ ಭ್ರಾಂತಿ ಜ್ಞಾನವು– "ಇದು ಸರ್ಪವಲ್ಲ" "ಹಗ್ಗವೇ" ಎಂಬ ಅನ್ವಯ ವ್ಯತಿರೇಕ ಪೂರ್ವಕವಾಗಿ ಪ್ರಮಾಣಜನ್ಯವಾದ ಯಥಾರ್ಥ ಜ್ಞಾನದಿಂದ ಹೇಗೆ ಬಾಧಿತವಾಗುತ್ತದೆಯೋ ಮತ್ತು ಅಂಗುಲಿವಿನ್ಯಾಸಾದಿ ದೋಷಗಳಿಂದ ಭ್ರಾಂತನ ದೃಷ್ಟಿಗೆ ಗಗನದಲ್ಲಿ ಎರಡು ಚಂದ್ರರಿರುವಂತೆ ಗೋಚರಿಸುವ ಮಿಥ್ಯಾ ಜ್ಞಾನವು ನಿರ್ದೋಷವಾದ ಸಮ್ಯಗ್ ಜ್ಞಾನದಿಂದ ಹೇಗೆ ಬಾಧಿತವಾಗಿ ನಿವೃತ್ತಿಯಾಗುವುದೋ ಹಾಗೆಯೇ ಸಂವೇದನ, ಸಂವೇದ್ಯಾದಿ ನಾನಾ ಭೇದಗಳಿಂದ

ಶುದ್ಧೈವ ಸಂವಿತ್ತಿ ಜಗತ್ಸಂವೇದ್ಯಂ ನಾನ್ಯದಸ್ತ್ಯಲಂ।
ಇತ್ಯಂತರ್ನಿಶ್ಚಯೋ ರೂಢಃ ಸಮ್ಯಗ್ಜ್ಞಾನಂ ವಿದುರ್ಬುಧಾಃ ॥ ೭೫ ॥

ಪೂರ್ವಂ ದೃಷ್ಟಮದೃಷ್ಟಂ ವಾ ಯದಸ್ಯಾಃ ಪ್ರತಿಭಾಸತೇ।
ಸಂವಿದಸ್ತತ್ಪ್ರಯತ್ನೇನ ಮಾರ್ಜನೀಯಂ ವಿಜಾನತಾ ॥ ೭೬ ॥

ತದಮಾರ್ಜನಮಾತ್ರಂ ಹಿ ಮಹಾ ಸಂಸಾರ ಸಂಗತಂ।
ತತ್ಪ್ರಮಾರ್ಜನ ಮಾತ್ರಂ ತು ಮೋಕ್ಷ ಇತ್ಯನುಭೂಯತೇ ॥ ೭೭ ॥

ಅದ್ವಿತೀಯಾತ್ಮನಲ್ಲಿ ಅವಿವೇಕ ಪುರಸ್ಸರವಾಗಿ ಅಧ್ಯಸ್ತವಾದ ಈ ಮಿಥ್ಯಾಭೂತ ಭ್ರಾಂತಿ ಜ್ಞಾನವು ಪರಮಾರ್ಥವಾದ ನಿರ್ದೋಷವೂ, ಪ್ರಮಾಣಜನ್ಯವೂ ಆದ ಸಮ್ಯಗ್ ಜ್ಞಾನದಿಂದ ಬಾಧಿತವಾಗಿ ನಿವೃತ್ತಿಯಾಗುವುದು.

೭೫. "ಜಗತ್ತ್ರಯಾತ್ಮಕವಾದ ಈ ದೃಶ್ಯ ಸಮೂಹವೆಲ್ಲವೂ ವಾಸ್ತವವಾಗಿ ನಿತ್ಯಶುದ್ಧವಾದ ಕೇವಲ ಜ್ಞಾನವೇ. ಜ್ಞಾನ (ಚಿತ್= ಸಂವಿತ್) ಕ್ಕಿಂತ ಬೇರೆಯಾಗಿ ಜ್ಞೇಯವಾದ ಈ ಜಗತ್ತೆಂಬುದು ಎಂದಿಗೂ ವಸ್ತುತಃ ಇಲ್ಲವೇ ಇಲ್ಲವು. ಎಂಬುದಾಗಿ ಅಂತಃ ದೃಢವಾಗಿಯೂ, ಸಿರ್ಣೀತವಾಗಿಯೂ ಸುಪ್ರತಿಷ್ಠಿತವಾದ ನಿಶ್ಚಯ ಜ್ಞಾನವನ್ನು ಪಂಡಿತರು ಸಮ್ಯಗ್ ಜ್ಞಾನನೆಂದು ತಿಳಿದಿರುವರು.

೭೬. ಹಿಂದೆ ಅನುಭೂತವಾದುದೇ ಆಗಿರಲಿ ಅಥವಾ ಅನನುಭೂತವಾದುದೇ ಆಗಿರಲಿ. ಯಾವ ಯಾವ ಸಂವೇದ್ಯವು (ದೃಶ್ಯ= ಜ್ಞೇಯ) ಈ ಸಂವಿತ್ತಿನ (ಚಿತ್ತ ವೃತ್ತಿಯ) ಮೂಲಕ ಪ್ರತಿಭಾಸಿಸುವುದೋ ಆಯಾ ಸಂವೇದ್ಯಗಳೆಲ್ಲವನ್ನೂ ವಿವೇಕಿಯಾದವನು ದೃಢ ಪ್ರಯತ್ನದಿಂದ ತೊಡೆದುಹಾಕಿಬಿಡಬೇಕು. ಅಂದರೆ ಚಿತ್ತ ವೃತ್ತಿಯನ್ನು ವಿವೇಕದಿಂದ ಪ್ರಯತ್ನಪಟ್ಟು ವಿಷಯ ಪರಾಙ್ಮುಖವಾದುದನ್ನಾಗಿ ಮಾಡಬೇಕು.

೭೭. ಹಾಗೆ ಜ್ಞಾನವು ದೃಶ್ಯ ವಿಷಯ ಪರಾಙ್ಮುಖವಾಗದಿರುವಿಕೆಯು ಎಂಬುದಿಷ್ಟು ಮಾತ್ರವೇ ಅಸಂಗನೂ, ನಿತ್ಯಶುದ್ಧಮುಕ್ತನೂ ಆಗಿರುವ ಅದ್ವಿತೀಯಾತ್ಮನಿಗೆ ಅಪಾರವಾದ ಈ ಮಹಾ ಸಂಸಾರದೊಡನೆ ಸಂಬಂಧವನ್ನು ಕಲ್ಪಿಸುವುದು. ದೃಶ್ಯ ವಿಷಯ ಪರಾಙ್ಮುಖವಾದರೋ ಅದೇ ಮೋಕ್ಷನೆಂದು ಸರ್ವಾನುಭವಸಿದ್ಧವಾಗಿರುವುದು. [ಜ್ಞಾನವು ವಿಷಯಾಭಿಮುಖವಾಗಿ ಪ್ರವರ್ತಿಸಿದಾಗ

ಸಂವೇದನ ಮನಂತಾಯ ದುಃಖಾಯ ಜನನಾತ್ಮನೇ ।
ಅಸಂವಿತ್ತಿ ರಜಾಡ್ಯಸ್ಥಾ ಸುಖಾಯಾಜನನಾತ್ಮನೇ ॥ ೭೮ ॥

ಅಜಡೋ ಗಲಿತಾನಂದಸ್ತ್ಯಕ್ತ ಸಂವೇದನೋ ಭವ ।
ಅಸಂವೇದ್ಯ ಪ್ರಬುದ್ಧಾತ್ಮಾ ಯಸ್ತು ಸ ತ್ವಂ ರಘೂದ್ವಹ ॥ ೭೯ ॥

ಅಪಾರವಾದ ಸಂಸಾರವನ್ನು ತಂದೊಡ್ಡಿ ಗಂಟು ಹಾಕುವುದು. ಅದೇ ಜ್ಞಾನವು ನಿರ್ವಿಷಯವಾಗಿ ಅಂದರೆ ವಿಷಯಗಳ ಕಡೆಯಿಂದ ನಿವೃತ್ತಿಯಾದರೋ ಆಗಲೇ ಮಿಥ್ಯೆಯಾಗಿಯೇ ಕಲ್ಪಿತವಾಗಿ ಗಂಟುಬಿದ್ದಿದ್ದ ಈ ಸಂಸಾರದಿಂದ ಮೋಕ್ಷ ವಾಗುವುದು.]

೭೮. ಚಿತ್ತವನ್ನು ವಿಷಯಾಭಿಮುಖವಾಗಿ ಓಡಿಸಿ ವೇದ್ಯಗಳಾದ ವಿಷಯ ಗಳನ್ನು ಅರಿಯುವಿಕೆಯು ಜನನ ಮರಣಾದಿ ರೂಪ ಅನಂತಾಪರಿಮಿತ ಸಾಂಸಾರಿಕ ದುಃಖ ಪರಂಪರೆಗೆ ಕಾರಣವಾಗಿರುವುದು. ಆದರೆ ತದ್ವಿರುದ್ಧವಾಗಿ ಚಿತ್ತವನ್ನು ವಿಷಯುಗಳ ಕಡೆಗೆ ಓಡಿಸದೆ ವೇದ್ಯ ವಿಷಯುಗಳನ್ನು ಅರಿಯದೆ ಇರುವಿಕೆಯು ಚೈತನ್ಯೈಕರಸವಾದ ಸ್ವಾತ್ಮ ಸ್ವರೂಪವಲ್ಲಿ ಪರಿನಿಷ್ಠಿತವಾಗಿ ಜನನ ಮರಣಾದಿ ವಿಕಾರ ಧರ್ಮ ವಿವರ್ಜಿತವೂ, ನಿತ್ಯಾತ್ಮ ಸ್ವರೂಪವೂ ಆಗಿರುವ ನಿರವದ್ಯ ನಿರತಿ ಶಯಾನಂದ ಪ್ರಾಪ್ತಿ ರೂಪ ಮುಕ್ತಿಗೆ ಕಾರಣವಾಗುವುದು.

೭೯. ಆದುದರಿಂದ ಅಯ್ಯ ರಘುಕುಲ ತಿಲಕನಾದ ರಾಮ, ನೀನೂ ಕೂಡ ವೇದ್ಯ ದರ್ಶನ (ಸಂವೇದನ) ವನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟು ಅಜಡನೂ (ಕೇವಲ ಶುದ್ಧ ಚಿತ್ಸ್ವರೂಪನೂ) ಪರಿಪೂರ್ಣಾನಂದರೂಪನೂ ಆಗಿ ಇರು. ಯಾವ ಆತ್ಮನು ವಸ್ತುತಃ ಅಸಂವೇದ್ಯನಾಗಿದ್ದರೂ ಕೂಡ (ಜ್ಞಾನಕ್ಕೆ ವಿಷಯ ವಾಗದೆ ಇರುವವನು. ಅಥವಾ ದೃಶ್ಯ ವಿವರ್ಜಿತನು) ಸ್ವತಃ ಪ್ರಬುದ್ಧ ನಾಗಿರುವನೋ ಅಂತಹ ಆತ್ಮನೇ ನೀನು ಸರ್ವದಾ ಆಗಿದ್ದೀಯೆ. (ಅನ್ಯನಾಗಿ ಇಲ್ಲವೇ ಇಲ್ಲ.

ಶ್ರೀ ರಾಮ ಉವಾಚ :—
ಅಜಡಶ್ಚಾಸ್ಯ ಸಂವಿತ್ತಿಃ ಕೀದೃಶೋ ಭವತಿ ಪ್ರಭೋ ।
ಅಸಂವಿತ್ತೌ ಚ ಜಾಡ್ಯಂ ತತ್ಕಥಂ ವಾ ವಿನಿವರ್ತತೇ ॥ ೮೦ ॥

ಶ್ರೀ ವಸಿಷ್ಠ ಉವಾಚ :—
ಯಃ ಸರ್ವತ್ರಾನವಸ್ಥಾಸ್ಥೋ ವಿಶ್ರಾಂತಸ್ಥೋ ನ ಕುತ್ರಚಿತ್ ।
ಜೀವೋ ನ ವಿಂದತೇ ಕಿಂಚಿದಸಂವಿದಜಡೋ ಹಿ ಸಃ ॥ ೮೧ ॥

ಶ್ರೀರಾಮನು ಕೇಳಿದನು :—

೮೦. ಮಹಾ ಪ್ರಭುಗಳಾದ ಗುರುಗಳೇ, ಜಡತ್ವವು ಇಲ್ಲದೆ ಹೋಗಬೇಕಾದರೆ ಅರ್ಥ ಜ್ಞಾನವು ಅವಶ್ಯವಾಗಿ ಇರಲೇಬೇಕು. ಸಂವೇದನ (ಅರ್ಥ ಜ್ಞಾನವನ್ನು) ವನ್ನು ತ್ಯಾಗ ಮಾಡಿದರೆ ಜಡತ್ವವು ಉಳಿದುಕೊಂಡಿರಲೇಬೇಕು. ತಾವು ಈಗಲೇ ನನ್ನನ್ನು ಕುರಿತು, "ನೀನು ಅಜಡನೂ, ಸಂವೇದನವನ್ನು ಬಿಟ್ಟವನೂ ಆಗಿರು" ಎಂದು ಉಪದೇಶ ಮಾಡಿದಿರಿ. ಇವೆರಡೂ ಪರಸ್ಪರ ವಿರುದ್ಧಗಳಾಗಿರುವಾಗ ಒಬ್ಬನೇ ಏಕ ಕಾಲದಲ್ಲಿ ಅಜಡವಾಗಿಯೂ ಮತ್ತು ಅಸಂವಿತ್ತಿಯಾಗಿಯೂ (ಬಾಹ್ಯಾರ್ಥ ಜ್ಞಾನರಹಿತನು) ಆಗಿರುವುದೆಂತು? (ಅವನು ಎಂತಹವನಾಗಿರುವನು ?) ಬಾಹ್ಯಾರ್ಥ ಜ್ಞಾನವೇ ಇಲ್ಲದಿರಲು ಆ ಜಡತ್ವವು ಹೇಗೆ ತಾನೇ ನಾಶವಾಗುವುದು ?

ಶ್ರೀ ವಸಿಷ್ಠರು ಹೇಳಿದರು :—

೮೧. ಅಯ್ಯ ರಾಮ, ಸಂ ಎಂದರೆ ಸತ್ಯತ್ವದಿಂದ, ವಿತ್ ಎಂದರೆ ಬಾಹ್ಯಾರ್ಥಗಳನ್ನು ತಿಳಿಯುವಿಕೆ ಎಂಬ ವ್ಯುತ್ಪತ್ತಿಗನುಸಾರವಾಗಿ ಅಸತ್ತಾದ ಬಾಹ್ಯ ದೃಶ್ಯ ವಸ್ತುಗಳನ್ನು ಸತ್ಯವಾದವುಗಳೆಂದು ತಪ್ಪಾಗಿ ತಿಳಿದುಕೊಳ್ಳುವ ಭ್ರಾಂತಿ ಜ್ಞಾನವೇ "ಸಂವಿತ್" ಎನ್ನಿಸಿಕೊಳ್ಳುವುದು. ಜೀವನ್ಮುಕ್ತ ಜೀವನಿಗೆ ಇಂತಹ ಸಂವಿತ್ತು ಇಲ್ಲವು. ಏಕೆಂದರೆ ಅವನು ಬಾಧಿತಾರ್ಥಾಭಾಸಗಳಿಂದ ವ್ಯವಹಾರಾಭಾಸವನ್ನು ತೋರ್ಪಡಿಸುತ್ತಿರುವವನಾಗಿದ್ದರೂ ಕೂಡ, ಸರ್ವತ್ರ ವರ್ತಮಾನ ವಿಷಯಗಳಲ್ಲಿ ಆಸ್ಥೆಯನ್ನು ಇಡದವನಾಗಿರುವನು. ಮತ್ತು ಅತೀತಾನಾಗತ ವಿಷಯಗಳೊಂದರಲ್ಲಿಯೂ ಕೂಡ ವಾಸನಾಕ್ಷಯವಾಗಿರುವ ಕಾರಣ ವಿಶ್ರಾಂತಿಗೊಂಡ ಆಸ್ಥೆಯುಳ್ಳವನಾಗಿಲ್ಲ. ಈ ಕಾರಣದಿಂದ ಅವನಿಗೆ ವೇದ್ಯವಾಗಿರುವುದು ಯಾವದೊಂದೂ ಬಾಹ್ಯ ವಿಷಯವು ಇಲ್ಲವು. ಹೀಗೆ ಈ ಅಂಶದಲ್ಲಿ ಅವನು ಕಾಷ್ಠ ಲೋಷ್ಟಗಳಂತೆಯೇ ಅಸಂವಿತ್ (ಸಂವಿತ್ ಇಲ್ಲದವನು) ಎಂದು ಎನ್ನಿ

ಸಂವಿದ್ವಸ್ತು ದೃಶಾಲಂಬಃ ಸ ಯಸ್ಯೇಹ ನ ವಿದ್ಯತೇ ।
ಸೋಽಸಂವಿದಜಡಃ ಪ್ರೋಕ್ತಃ ಕುರ್ವನ್ಕಾರ್ಯ ಶತಾನ್ಯಪಿ ॥ ೮೨ ॥

ಸಂವೇದ್ಯೇನ ಹೃದಾಕಾಶೋ ಮನಾಗಪಿ ನ ಲಿಪ್ಯತೇ ।
ಯಸ್ಯಾಸಾವಜಡೋಽಸಂವಿಜ್ಜೀವನ್ಮುಕ್ತಶ್ಚ ಕಥ್ಯತೇ ॥ ೮೩ ॥

ಯದಾ ನ ಭಾವ್ಯತೇ ಕಿಂಚಿನ್ನಿರ್ವಾಸನತಯಾತ್ಮನಿ ।
ಬಾಲ ಮೂಕಾದಿ ವಿಜ್ಞಾನ ಮಿವ ಚ ಸ್ಥೀಯತೇ ಸ್ಥಿರಂ ॥ ೮೪ ॥

ತದಾ ಜಾಡ್ಯ ವಿನಿರ್ಮುಕ್ತಮಚ್ಛವೇದನ ಮಾತತಂ ।
ಆಶ್ರಿತಂ ಭವತಿ ಪ್ರಾಜ್ಞೋ ಯಸ್ಮಾದ್ಭೂಯೋ ನ ಲಿಪ್ಯತೇ ॥ ೮೫ ॥

ಸಲ್ಪಡುವನು. ಆದರೆ ಅವನು ಸ್ವತಃ ಅಜಡನು. (ಸ್ವಪ್ರಕಾಶ ಚಿದೇಕರಸ ಪರಿಪೂರ್ಣನಾಗಿಯೇ) ಆಗಿಯೇ ಇರುವನು.

೮೨. ಸತ್ಯತ್ವ ಬುದ್ಧಿಯಿಂದ ಚಿತ್ತಿಗೆ ಬಾಹ್ಯಾರ್ಥಾವಲಂಬನವು ಯಾವುದುಂಟೋ ಅದೇ "ಸಂವಿತ್" ಎನ್ನಿಸಲ್ಪಡುವುದು. ಆ ಸಂವಿತ್ತು ಯಾವನಿಗೆ ಇರುವುದಿಲ್ಲವೋ ಅವನು ಜೀವನ್ಮುಕ್ತನು. ಅವನು ಈ ಪ್ರಪಂಚದಲ್ಲಿ ಸಂತತವೂ ನೂರಾರು ವ್ಯವಹಾರಗಳನ್ನು ಮಾಡುತ್ತಿರುವವನಾಗಿದ್ದರೂ ಕೂಡ, ಅವನು ಸರ್ವತ್ರ ಆಸ್ಥಾವಿರಹಿತನಾಗಿರುವ ಕಾರಣ, ಅಸಂವಿತ್ ಎಂದೂ, ಅಜಡನೆಂದೂ ಹೇಳಲ್ಪಟ್ಟಿರುವನು.

೮೩. ಯಾವನ ಬುದ್ಧಿಯು ಬಾಹ್ಯ ದೃಶ್ಯ ಶಬ್ದಾದಿ ವಿಷಯ ಸಂಪರ್ಕದಿಂದ (ಸಂವೇದ್ಯ) ಸ್ವಲ್ಪಮಾತ್ರವೂ ಲೇಪವನ್ನು ಪಡೆಯುವುದಿಲ್ಲವೋ, ಅವನು ಅಜಡನೆಂದೂ, ಅಸಂವಿತ್ ಎಂದೂ ಜೀವನ್ಮುಕ್ತನೆಂದೂ ಹೇಳಲ್ಪಡುವನು.

೮೪-೮೫. ವಾಸನಾಶೂನ್ಯವಾಗಿರುವ ಕಾರಣ ಯಾವಾಗ ಬುದ್ಧಿಯಲ್ಲಿ ಬಾಹ್ಯ ವಿಷಯವು ಕಿಂಚಿತ್ತಾದರೂ ಭಾವಿಸಲ್ಪಡುವುದಿಲ್ಲವೋ ಮತ್ತು ಬಾಲಮೂಕಾದಿಗಳ ವಿಜ್ಞಾನದಂತೆ ಯಾವಾಗ ಬುದ್ಧಿಯು ಒಂದೇ ಕಡೆ ಸ್ಥಿರವಾಗಿ ಸ್ವಲ್ಪ ಮಾತ್ರವೂ ವಿಕ್ಷಿಪ್ತವಾಗದೆಯೇ ನೆಲೆಗೊಂಡು ನಿಲ್ಲುವುದೋ ಆಗ ಜಡತ್ವ ವಿನಿರ್ಮುಕ್ತವೂ, ಸ್ವಚ್ಛವೂ, ಅಖಂಡವೂ, ಸರ್ವ ಬಾಹ್ಯಾರ್ಥ ವಿರಹಿತವೂ ಆದ ಪರಮಾರ್ಥ

ಸಮಸ್ತ ವಾಸನಾ ತ್ಯಾಗೀ ನಿರ್ವಿಕಲ್ಪ ಸಮಾಧಿತಃ ।
ನೀಲತ್ವಮಿವ ಖಾತ್ಸ್ಫಾರ ಆನಂದಃ ಸಂಪ್ರವರ್ತತೇ ॥ ೮೬ ॥

ಯೋಗಿನಸ್ತತ್ರ ತಿಷ್ಠಂತಿ ಸಂವೇದನ ಮುಸಂವಿದಃ !
ತನ್ಮಯತ್ವಾದನಾದ್ಯಂತಂ ತದಪ್ಯಂತರ್ವಿಲೀಯತೇ ॥ ೮೭ ॥

ಗಚ್ಛಂಸ್ತಿಷ್ಠನ್‌ಸ್ಪೃಶನ್ ಜಿಘ್ರನ್ನಪಿ ತೇನ ಸ ಉಚ್ಯತೇ ।
ಅಜಡೋ ಗಲಿತಾನಂದ ಸ್ತ್ಯಕ್ತಸಂವೇದನಃ ಸುಖೀ ॥ ೮೮ ॥

ತತ್ತ್ವಜ್ಞಾನವು ಸ್ವತ ಏವ ಪ್ರಕಟಿತವಾಗುವುದು. ಇಂತಹ ಜ್ಞಾನವನ್ನು ಆಶ್ರಯಿಸಿದ ಬಳಿಕ, ತತ್ತ್ವಜ್ಞನು ಪುನಃ ಎಂದಿಗೂ ಅಹಂಕಾರ ಮಮಕಾರಗಳಿಗೆ ಒಳಪಡುವುದೂ ಇಲ್ಲ. ಸಾಂಸಾರಿಕ ದುಃಖಗಳಿಂದ ವಿಲಿಪ್ತನಾಗುವುದೂ ಇಲ್ಲ.

೮೬. ಗಗನ ತಲದಲ್ಲಿ ಭ್ರಾಂತಿಯ ಮೂಲಕ ಪ್ರತಿಭಾಸಮಾನವಾಗಿದ್ದ ನೀಲತ್ವವನ್ನು ವಿವೇಕ ಜ್ಞಾನವು ಆಕಾಶದಿಂದ ತೊಲಗಿಸುವಂತೆ ನಿರ್ವಿಕಲ್ಪ ಸಮಾಧಿಯಿಂದ ಲಬ್ಧವಾದ ಚಿತ್ತ ನೈರ್ಮಲ್ಯವು ಸಮಸ್ತ ವಾಸನೆಗಳನ್ನೂ ಸಂಪೂರ್ಣವಾಗಿ ಹೊರಕ್ಕೆ ತಳ್ಳಿ ತೊಲಗಿಸಿಬಿಡುವುದು. ಆಗಲೇ-ಅಖಂಡವೂ, ನಿರತಿಶಯವೂ ಆದ ಬ್ರಹ್ಮಾನಂದವು ಸ್ವತ ಏವ ಪ್ರವರ್ತಿಸುವುದು.

೮೭. ಸಕಲಾನಾತ್ಮ ದೃಶ್ಯ ವಸ್ತುಗಳಲ್ಲಿ ಸತ್ಯತ್ವ ಬುದ್ಧಿ ವಿರಹಿತರಾದಂಥ ಯೋಗಿಗಳು ಬಾಹ್ಯಾರ್ಥಾವಲಂಬನವಿಲ್ಲದವರಾಗಿ ಕೇವಲ ಚಿದೇಕರಸ ಬ್ರಹ್ಮಾನಂದ ಮಯರಾಗಿ ಪರಿನಿಷ್ಠಿತರಾದ ಕಾರಣ, ಅವರು ಸರ್ವದಾ ಅಂತಹ ಬ್ರಹ್ಮಾನಂದ ಸ್ವರೂಪದಲ್ಲಿಯೇ ನೆಲೆಸಿರುವರು. ಅವರ ಅಪರಿಚ್ಛಿನ್ನ ಬ್ರಹ್ಮಾಕಾರವಾದ ಆ ಸಂವೇದನವೂ ಕೂಡ ಸ್ವಯಂ ದೇದೀಪ್ಯಮಾನವಾದ ಬ್ರಹ್ಮಜ್ಯೋತಿಯಿಂದ ಬಾಧ್ಯಮಾನವಾಗಿ ಅದರೊಳಗೇನೇ ಲಯಹೊಂದಿಬಿಡುವುದು.

೮೮. ಅಂತಹ ಜ್ಞಾನಿಯು ನಡೆಯುತ್ತಿರುವವನಾಗಿದ್ದರೂ, ನಿಂತಿದ್ದರೂ, ಮುಟ್ಟುತ್ತಿದ್ದರೂ, ಗಂಧವನ್ನು ಮೂಸಿ ನೋಡುತ್ತಿದ್ದರೂ, ಹೀಗೆ ಎಲ್ಲ ವ್ಯವಹಾರಗಳನ್ನು ಮಾಡುತ್ತಿದ್ದರೂ ಕೂಡ ಆ ವ್ಯವಹಾರಗಳಿಂದ ಹರ್ಷ ವಿಷಾದಾದಿ ಯಾವ ವಿಕಾರವೂ ಇಲ್ಲದೆ ಇರುವನು. ಆದುದರಿಂದ ಅವನು ಅಜಡನು, ಅಸಂವಿದನು,

ಏತಾಂ ದೃಷ್ಟಿಮವಷ್ಟಭ್ಯ ಕಷ್ಟಯಾ ಯತ್ನಚೇಷ್ಟಯಾ ।
ತರ ದುಃಖಾಂಬುಧೇಃ ಪಾರಮಪಾರ ಗುಣಸಾಗರ ॥ ೮೯ ॥

ಯಥಾ ಬೀಜಾದ್ಬೃಹದ್ವೃಕ್ಷೋ ವ್ಯೋಮ ವ್ಯಾಪ್ನೋತಿ ಕಾಲತಃ ।
ತಥೈವೇದಂ ಸ್ವಸಂಕಲ್ಪಾತ್ಸಂವೇದ್ಯಮಸದುತ್ಥಿತಂ ॥ ೯೦ ॥

ಯದಾ ಸಂಕಲ್ಪ್ಯ ಸಂಕಲ್ಪ್ಯ ಸಂವಿತ್ಸಂವಿಶತೇ ವಪುಃ ।
ತದಾಸ್ಯ ಜನ್ಮಜಾಲಸ್ಯ ಸೈವ ಗಚ್ಛತಿ ಬೀಜತಾಂ ॥ ೯೧ ॥

(ಬಾಹ್ಯಾರ್ಥ ಸಂವೇದನವಿಲ್ಲದವನು) ವೈಷಯಿಕಾನಂದ ವಿನಿರ್ಮುಕ್ತನು ಮತ್ತು ಸ್ವಾತ್ಮಾನಂದ ನಿರ್ಭರನಾದ ನಿತ್ಯ ಸುಖಿಯು ಎಂದು ಹೇಳಲ್ಪಡುವನು

೮೯. ಅಯ್ಯ ಅಪರಿಮಿತ ಶಮದಮಾದಿ ಗುಣಗಣಗಳಿಗೆ ಸಮುದ್ರಪ್ರಾಯನಾದ ರಾಮ, ನೀನೂ ಕೂಡ ಇಂತಹ ಪಾರಮಾರ್ಥಿಕ ದೃಷ್ಟಿಯನ್ನು ಅವಲಂಬಿಸಿ ಪ್ರಾಣಾಯಾಮಾದಿ ಬಹು ಶ್ರಮ ಸಾಧ್ಯವಾದ ಮತ್ತು ಸತತ ಪ್ರಯತ್ನ ಪೂರ್ವಕವಾಗಿ ಅಭ್ಯಾಸ ಬಲದಿಂದ ಸುದೃಢವಾದ ಚಿತ್ತ ನಿರೋಧಾದಿ ವ್ಯವಹಾರದಿಂದ ಅಪಾರನಾದ ಸಾಂಸಾರಿಕ ದುಃಖ ಸಮುದ್ರವನ್ನು ದಾಟುವವನಾಗು.

೯೦. ಒಂದು ಬೀಜದಿಂದ ಉದ್ಭವಿಸಿದ ಮೊಳಕೆಯು ಪ್ರಾರಂಭದಲ್ಲಿ ಅತ್ಯಂತ ಸಣ್ಣದಾಗಿದ್ದರೂ ಅದೇ ಸ್ವಲ್ಪ ಕಾಲಾನಂತರ ದೊಡ್ಡ ಮರವಾಗಿ ವೃದ್ಧಿಗೊಂಡು ಶಾಖೋಪಶಾಖೆಗಳಿಂದ ಹೇಗೆ ಆಕಾಶವನ್ನು ವ್ಯಾಪಿಸಿ ಹರಡಿಕೊಳ್ಳುವುದೋ, ಹಾಗೆಯೇ ಈ ಅನಾತ್ಮ ದೃಶ್ಯ ವಸ್ತುಮಯವಾದ ಜಗತ್ತು ವಸ್ತುತಃ ಅತ್ಯಂತ ಅಸತ್ತಾಗಿಯೇ ಸ್ವಸಂಕಲ್ಪದಿಂದ ಮಾತ್ರವೇ ಅತಿ ಹ್ರಸ್ವವಾಗಿ ಉದ್ಭವಿಸಿ ಬರುಬರುತ್ತಾ ಕಾಲಾನ್ತರದಲ್ಲಿ ವಾಸನಾಬಲದಿಂದ ಚೆನ್ನಾಗಿ ಬೇರೂರಿ ದುರ್ಭೇದ್ಯವಾಗಿ ಸರ್ವತ್ರ ನಾನಾಮುಖವಾಗಿ ವ್ಯಾಪಿಸಿಕೊಂಡು ಭಯಂಕರವಾಗುವುದು.

೯೧. ಯಾವಾಗ ಸಂವಿತ್ತು ಪುನಃ ಪುನಃ ವಿವಿಧ ಸಂಕಲ್ಪಗಳನ್ನು ಕಲ್ಪಿಸಿಕೊಂಡು ತನ್ನ ಸ್ಥೂಲವಾದ ಸಾಂಕಲ್ಪಿಕ ಸ್ವರೂಪವನ್ನು (ಆಕಾರ) ಪಡೆಯುವುದೋ ಆಗ ಆ ಸಂವಿತ್ತೇ ಈ ಜನನ ಮರಣ ಪ್ರವಾಹ ರೂಪವಾದ ಸಂಸಾರಕ್ಕೆ ಬೀಜವಾಗುವುದು.

ಜನಯಿತ್ವಾತ್ಮನಾತ್ಮಾನಂ ಮೋಹಯಿತ್ವಾ ಪುನಃ ಪುನಃ ।
ಸ್ವಯಂ ಮೋಕ್ಷಂ ನಯತ್ಯಂತಃ ಸಂವಿತ್ಸ್ವಂ ವಿದ್ಧಿ ರಾಘವ ॥ ೯೨ ॥

ಯದೇವ ಭಾವಯತ್ಯೇಷಾ ತದೇವ ಭವತಿ ಕ್ಷಣಾತ್ ।
ನ ಭವದ್ಭೂಮಿಕಾಮುಕ್ತಾ ಸಮಾಯಾತಿ ಚಿರಾದ್ವಪುಃ ॥ ೯೩ ॥

ದೇವೋ ನಾಸೌ ಸುರೋ ರಕ್ಷೋ ಯಕ್ಷಃ ಕಿಂ ಕಿನ್ನರೋ ಜನಃ ।
ಆತ್ಮೈವಾದ್ಯ ವಿಲಾಸಿನ್ಯಾ ಜಗನ್ನಾಟ್ಯಂ ಪ್ರನೃತ್ಯತಿ ॥ ೯೪ ॥

---

೯೨. ಅಯ್ಯ ರಾಘವ, ಈ ಸಂವಿತ್ತು ತನ್ನಿಂದಲೇ ತನ್ನನ್ನು ಉತ್ಪತ್ತಿ ಮಾಡಿಕೊಂಡು (ತನ್ನಿಂದ ತಾನೇ ಹುಟ್ಟಿ) ಪುನಃ ಪುನಃ ಮೋಹಗೊಳ್ಳಿಸಿ ಕೊನೆಗೆ ತನ್ನೊಳಗೆ ಹೃದಯದಲ್ಲಿರುವ ಆತ್ಮತತ್ತ್ವವನ್ನು ಸಾಕ್ಷಾತ್ಕರಿಸಿದಂಥಾದ್ದಾಗಿ, ತಾನೇ ತನ್ನನ್ನು ಮೋಕ್ಷಕ್ಕೆ ಒಯ್ಯುವುದು. ಇದು ಜ್ಞಾನಿಗಳ ಅನುಭವ ಸಿದ್ಧವು.

(ಸಂವಿತ್ – ಸ್ವಂ – ವಿತ್ - ಹಿ – ರಾಘವ ಎಂದು ೪ನೆಯ ಪಾದದ ಪದಚ್ಛೇದ. ತಾ. ಪ್ರ.)

೯೩. ಈ ಸಂವಿತ್ತು ಯಾವ ವಿಷಯವನ್ನು ಭಾವನೆ ಮಾಡುವುದೋ ಅದೇ ವಿಷಯಾಕಾರವಾಗಿ ಒಂದು ಕ್ಷಣದೊಳಗಾಗಿ ಅದು ಪರಿಣಮಿಸುವುದು. ಆದರೆ ಸಂವಿತ್ತು ರಾಗಾದಿ ಭೂಮಿಕೆಗಳಿಂದ ವಿನಿರ್ಮುಕ್ತವಾಗದೇ ಹೋದರೆ, ಆಗ ಬಹು ದೀರ್ಘಕಾಲವು ಕಳೆದು ಹೋದರೂ ಕೂಡ ಎಂದಿಗೂ ಸ್ವಸ್ವರೂಪವನ್ನು ಹೊಂದುವುದಿಲ್ಲ.

(ಭವಂತಿ ಇತಿ ಭವಂತಃ= ರಾಗಾದಯಃ । ತದ್ಭೂಮಿಕಾಭ್ಯಃ ಅಮುಕ್ತಾ ಎಂದು ಅನ್ವಯ.)

೯೪. ಈ ಕಾರಣದಿಂದಲೇ ಈ ಆತ್ಮನು ದೇವತೆಯೂ ಅಲ್ಲ. ಸುರ, ರಾಕ್ಷಸ, ಯಕ್ಷ, ಕಿನ್ನರ, ನರ ಇತ್ಯಾದಿ ಯಾವುದೊಂದೂ ಅಲ್ಲವು. ಅಂದರೆ ದೇವಾಸುರ ಗಂಧರ್ವಾದಿಗಳು ಆತ್ಮನ-ಕಲ್ಪಿತ ವೇಷಗಳಾಗಿವೆಯೇ ಹೊರತು

ಬದ್ಧ್ವಾತ್ಮಾನಂ ರುದಿತ್ವಾ ಚ ಕೋಶಕಾರ ಕೃಮಿರ್ಯಥಾ ।
ಚಿರಾತ್ಕೈವಲತಾಮೇತಿ ಸ್ವಯಂ ಸಂವಿತ್ಸ್ವಭಾವತಃ ॥ ೯೫ ॥

ಜಗಜ್ಜಲಧಿಜಾಲಾನಾಂ ಸಂವಿಜ್ಜಲಮಲಂ ಗತಾ ।
ಏಷೈವಾಪೂರ್ವದಿಕ್ಚಕ್ರಂ ಸ್ಫುರತ್ಯದ್ರ್ಯಾದಿತಾಂ ಗತಾ ॥ ೯೬ ॥

ವಾಸ್ತವವಾದ ರೂಪಗಳಲ್ಲ. ಆತ್ಮನೇ ಆದಿಸಿದ್ಧವಾದ ಸ್ವಮಾಯೆಯಿಂದ ಜಗದ್ವ್ಯವಹಾರ ರೂಪವಾದ ನಾಟ್ಯವನ್ನು ಕುಣಿಯುತ್ತಿರುವನು.

(ನಾಟಕದಲ್ಲಿ ರಾಜ, ರಾಣಿ ಮುಂತಾದ ಪಾತ್ರಗಳು) ತಾವು ವಸ್ತುತಃ ರಾಜ, ರಾಣಿ ಮುಂತಾದವರಲ್ಲವೆಂಬ ಜ್ಞಾನವು ಚೆನ್ನಾಗಿ ಸುದೃಢವಾಗಿದ್ದರೂ ಕೂಡ, ಕೇವಲ ನಾಟಕ ಪ್ರದರ್ಶನಾರ್ಥವಾಗಿ ಮಿಥ್ಯೆಯಾಗಿಯೇ ಆರೋಪಿತವಾದ ಅಭಿಮಾನಗಳಿಂದ ಕೂಡಿ ಪರಪ್ರೇರಣೆಯ ಮೂಲಕ, ಕಲ್ಪಿತವಾದ ಕೃತ್ರಿಮ ವೇಷಾಂತರಗಳನ್ನು ಧರಿಸಿ ನಿಜವಾಗಿರುವಂತೆಯೇ ಅಭಿನಯಿಸುತ್ತಾ ತಾವು ನಿರ್ಲಿಪ್ತರಾಗಿಯೇ ನಟಿಸುವರು ಪ್ರೇಕ್ಷಕರಿಗೆ ಮಾತ್ರ ಅವರು ರಾಜ ರಾಣಿಯರಂತೆ ತತ್ಕಾಲದಲ್ಲಿ ತೋರಿದರೂ ತಾತ್ಕಾಲಿಕವಾದ ಸುಖದುಃಖಾನುಭವವಿಲ್ಲದವರಾಗಿಯೇ ಅನಾಸಕ್ತರಾಗಿ ವ್ಯವಹರಿಸುವರು. ಈ ದೃಷ್ಟಾಂತದಂತೆಯೇ ಆತ್ಮನ ಜಗನ್ನಾಟ್ಯವು. ಎಂಬುದನ್ನು ವಾಚಕರು ಗಮನಿಸಬೇಕು.)

೯೫. ಈ ಸಂವಿತ್ತು ರೇಷ್ಮೆಯ ಹುಳುವಿನಂತೆ ತನ್ನನ್ನು ತಾನೇ ಸ್ವಚೇಷ್ಟೆಯಿಂದಲೇ ಕಲ್ಪಿತವಾದ ಸಂಸಾರವೆಂಬ ಬಲೆ (ಗೂಡು) ಯೊಳಗೆ ಸಿಕ್ಕಿಸಿಕೊಂಡು ಬಿಡಿಸಿಕೊಳ್ಳುವುದಕ್ಕೋಸ್ಕರ ಒದ್ದಾಡಿ ಬಹು ವಿಧವಾಗಿ ದುಃಖಪಟ್ಟು ಅತ್ತು ಅತ್ತು ಬಳಲಿ, ಕೊನೆಗೆ ಬಹು ದೀರ್ಘಕಾಲದ ಮೇಲೆ (ಸ್ವಾತ್ಮತತ್ತ್ವಜ್ಞಾನದ ಮೂಲಕ) ತಾನೇ ಸ್ವಭಾವದಿಂದಲೇ ಸಹಜವಾದ ಕೈವಲ್ಯವನ್ನು (ಅದ್ವಿತೀಯಾತ್ಮಭಾವವನ್ನು) ಪಡೆಯುವುದು.

೯೬. ಪರ್ಯಾಪ್ತವಾದ (ಅಲಂಗತಾ) ಈ ಸಂವಿತ್ತೇ ಜಗತ್ತಿನಲ್ಲಿರುವ ಅನೇಕಾನೇಕ ಸಮುದ್ರಗಳ ಸಮುದಾಯುಗಳೊಳಗೆ ಜಲವಾಗಿ ಸ್ಫುರಿಸುತ್ತಿರುವುದು. ಅಪೂರ್ವವಾದ ಈ ದಿಙ್ಮಂಡಲವೂ ಕೂಡ ಈ ಸಂವಿತ್ತೇ. ಮತ್ತು ಈ ಸಂವಿತ್ತೇ ಪರ್ವತಾದಿ ಸ್ಥಾವರ ಭಾವವನ್ನು ಹೊಂದಿ ಪ್ರತಿಭಾಸಿಸುತ್ತಿರುವುದು.

ದ್ಯೌಃ ಕ್ಷಮಾ ವಾಯುರಾಕಾಶಂ ಪರ್ವತಾಃ ಸರಿತೋ ದಿಶಃ ।
ಇತ್ಯಸ್ಯಾ ವೀಚಯಃ ಪ್ರೋಕ್ತಾಃ ಸಂವಿತ್ಸಲಿಲ ಸಂತತೇಃ ॥ ೯೭ ॥

ಸಂವಿನ್ಮಾತ್ರಂ ಜಗತ್ಸರ್ವಂ ದ್ವಿತೀಯಾ ನಾಸ್ತಿ ಕಲ್ಪನಾ ।
ಇತ್ಯೇವ ಸಮ್ಯಜ್ಞಾನೇನ ಸಂವಿದ್ಗಚ್ಛತಿ ನಾನ್ಯತಾಂ ॥ ೯೮ ॥

ಯದಾ ನ ವಿಂದತೇ ಕಿಂಚಿತ್ಸ್ಪಂದತೇ ನ ನ ವೇಪತೇ ।
ಸ್ವಾತ್ಮನ್ಯೇವ ಸ್ಥಿತಿಂ ಯಾತಿ ಸಂವಿನ್ನೋ ಲಿಪ್ಯತೇ ತದಾ ॥ ೯೯ ॥

ಅಥಾಸ್ಯಾಃ ಸಂವಿದೋ ರಾಮ ಸನ್ಮಾತ್ರಂ ಬೀಜಮುಚ್ಯತೇ ।
ಸಂವಿನ್ಮಾತ್ರಾದುದೇತ್ಯೇಷಾ ಪ್ರಾಕಾಶ್ಯಮಿವ ತೇಜಸಃ ॥ ೧೦೦ ॥

---

೯೭. ಸ್ವರ್ಗ, ಭೂಮಿ, ವಾಯು, ಆಕಾಶ, ಪರ್ವತಗಳು, ನದಿಗಳು, ದಿಕ್ಕುಗಳು ಮುಂತಾದವುಗಳೆಲ್ಲಾ ಈ ಸಂವಿದ್ರೂಪವಾದ ಜಲರಾಶಿಯಲ್ಲಿ ಆವಿರ್ಭವಿಸಿದ ತರಂಗಗಳೆನ್ನಿಸುವುವು.

೯೮. ಪರಿದೃಶ್ಯಮಾನವಾದ ಈ ಸಮಸ್ತ ಜಗತ್ತೂ ಕೇವಲ ಸಂವಿತ್ತೇ. ಅದಕ್ಕಿಂತ ಬೇರೆಯಾದ ಎರಡನೆಯ ವಸ್ತು ಕಲ್ಪನೆಯು ಎಂದಿಗೂ ಇಲ್ಲವೇ ಇಲ್ಲ. ಎಂಬೀರೀತಿಯಾದ ಪರಮಾರ್ಥ ಸಮ್ಯಗ್ ಜ್ಞಾನದಿಂದ, ಸಂವಿತ್ತು ಮಿಥ್ಯೆಯಾಗಿ ಸ್ವಾಜ್ಞಾನ ವಿಜೃಂಭಿತವಾದ ನಾನಾತ್ವವನ್ನು (ಸದ್ವಿತೀಯತ್ವ) ಪರಿಹರಿಸಿಕೊಂಡು ಕೇವಲಾ ದ್ವಿತೀಯಾತ್ಮ ಸ್ವರೂಪವನ್ನು ಪಡೆಯುವುದು.

೯೯. ಯಾವಾಗ ಈ ಸಂವಿತ್ತು ಯಾವೊಂದು ಬಾಹ್ಯಾನಾತ್ಮ-ದೃಶ್ಯ ವಿಷಯ ಸಂಬಂಧವನ್ನು ಹೊಂದುವುದಿಲ್ಲವೋ. ಸ್ವಲ್ಪವೂ ಚಲಿಸುವುದಿಲ್ಲವೋ ಮತ್ತೂ ಸ್ವಾತ್ಮ ಸ್ವರೂಪದಲ್ಲಿಯೇ ಸ್ಥಿರವಾಗಿ ನೆಲೆಸಿ ಸ್ವಸ್ಥವಾಗಿರುವುದೋ ಆಗ ಅದು ಯಾವ ಸಂಪರ್ಕವೂ ಇಲ್ಲದೆ ಸ್ವಭಾವತಃ ನಿರ್ಲಿಪ್ತವಾಗಿರುವುದು.

೧೦೦. ಇದುವರೆವಿಗೆ ಹೇಳಿದಂತೆ ಅಯ್ಯರಾಮ, ಚೆನ್ನಾಗಿ ಪರಿಶೋಧಿಸಿ ಪರಿಶೇಷಿತವಾದ ಈ ಸಂವಿತ್ತು ಅಂತಃಕರಣ ಪ್ರತಿಬಿಂಬ ಸಂವಿತ್ತೇ ಎಂದು ಭ್ರಾಂತಗೊಳ್ಳದಿರು. ಈ ಸಂವಿತ್ತಿಗೆ ಕೇವಲ ಸದ್ರೂಪವಾದ ಪರಬ್ರಹ್ಮವೇ ಬೀಜವೆಂದು ತಿಳಿ. ಲೋಕದಲ್ಲಿ ಸೂರ್ಯ, ಚಂದ್ರ, ಅಗ್ನಿ ಮುಂತಾದ ತೇಜಸ್ಸಿನ ದೆಸೆಯಿಂದ

ದ್ವೇ ರೂಪೇ ತತ್ರ ಸತ್ತಾಯಾ ಏಕಂ ನಾನಾಕೃತಿ ಸ್ಥಿತಂ ।
ದ್ವಿತೀಯಮನೇಕ ರೂಪಂ ತು ವಿಭಾಗೋಽಯಂ ತಯೋಃ ಶೃಣು ॥ ೧೦೧ ॥

ಘಟತಾ ಪಟತಾ ಚೈವ ತ್ವತ್ತಾ ಮತ್ತೇತಿ ಕಥ್ಯತೇ ।
ಸತ್ತಾರೂಪ ವಿಭಾಗೇನ ಯತ್ತನ್ನಾನಾಕೃತಿ ಸ್ಥಿತಂ ॥ ೧೦೨ ॥

ವಿಭಾಗಂ ತು ಪರಿತ್ಯಜ್ಯ ಸತ್ತೈಕಾತ್ಮತಯಾ ತತಂ ।
ಸಾಮಾನ್ಯೇನೈವ ಸತ್ತಾಯಾ ರೂಪಮೇಕ ಮುದಾಹೃತಂ ॥ ೧೦೩ ॥

ಬೆಳಕು (ಪ್ರಕಾಶ) ಹೇಗೆ ಉದಯಿಸುವುದೋ ಹಾಗೆ ಈ ಪ್ರತಿಬಿಂಬ ಭೂತ ಸಂವಿತ್ತು ಬಿಂಬಭೂತವಾದ ಸಂವಿನ್ಮಾತ್ರ ರೂಪ ಬ್ರಹ್ಮನ ದೆಸೆಯಿಂದಲೇ ಉದಯಿಸುವುದು.

೧೦೧. ಅಯ್ಯ ರಾಮ, ಸತ್ತೆಯೆಂಬುದು ಎರಡು ವಿಧ ರೂಪವುಳ್ಳದ್ದಾಗಿರುವುದು. ಅವುಗಳಲ್ಲೊಂದಾದ, ಘಟ ಪಟಾದಿ ನಾನಾ ವಸ್ತುಗಳಲ್ಲಿರುವ ಅರ್ಥ ಕ್ರಿಯಾಸಾಮರ್ಥ್ಯ ರೂಪ ವ್ಯಾವಹಾರಿಕ ಸತ್ತೆಯು ಪ್ರಪಂಚದಲ್ಲಿ ಎಷ್ಟು ವಿಧಗಳಾದ ವಸ್ತುಗಳಿವೆಯೋ ಅಷ್ಟು ಅಪರಿಮಿತ ನಾನಾಕಾರಗಳುಳ್ಳದ್ದು. ಎರಡನೆಯದಾದ ಪಾರಮಾರ್ಥಿಕ ಸತ್ತೆಯಾದರೋ ಅದ್ವಿತೀಯಾತ್ಮ ಸ್ವರೂಪವೇ ಆದಕಾರಣ ಏಕ ರೂಪವಾದುದೇ. ಅದರಲ್ಲಿ ನಾನಾತ್ವ (ಭೇದ)ವು ಇಲ್ಲವೇ ಇಲ್ಲ. ಅವೆರಡರ ವಿಭಾಗವನ್ನು ನಾನು ಹೇಳುವೆನು ಕೇಳು.

೧೦೨. ಘಟತ್ವ, ಪಟತ್ವಾದಿಗಳೂ ತ್ವತ್ತಾ (ನೀನು ಎಂಬುದರ ಭಾವ) ಮತ್ತಾ (ನಾನು ಎಂಬುದರ ಭಾವ) ಮುಂತಾದ ಉಪಾಧಿಗಳೂ ಅರ್ಥಕ್ರಿಯಾ ಭೇದಗಳಲ್ಲಿ ಸ್ವರೂಪ ಯೋಗ್ಯತಾರೂಪ ನಾನಾ ಪ್ರಕಾರಗಳುಳ್ಳ ನಾನಾ ರೂಪ ವಿಭಾಗದಿಂದ ಕೂಡಿರುವ ವ್ಯಾವಹಾರಿಕ ಸತ್ತಾ ವಿಶೇಷಗಳೇ. ಅದು ಕಾರಣ, ಅದು ನಾನಾಕಾರವಾಗಿರುವುದು.

೧೦೩. ಪಾರಮಾರ್ಥಿಕ ಸತ್ತೆಯಾದರೋ ಕೇವಲಾದ್ವಿತೀಯಾತ್ಮ ಸ್ವರೂಪವಾಗಿರುವ ಕಾರಣ, ಪೂರ್ವೋಕ್ತ ವಿಭಾಗವನ್ನು ಬಿಟ್ಟು, ಸಮಸ್ತ ಜಗದಧಿಷ್ಠಾನತ್ವ ರೂಪ ಸಾಧಾರಣ ಸ್ವಭಾವದಿಂದಲೇ ಸರ್ವತ್ರ ಅನುಗತವಾಗಿ ವ್ಯಾಪಿಸಿಕೊಂಡಿರುವುದು. ಆದುದರಿಂದ ಅದು ಏಕರೂಪವಾದುದೆಂದು ಹೇಳಲ್ಪಟ್ಟಿದೆ.

ವಿಶೇಷಂ ಸಂಪರಿತ್ಯಜ್ಯ ಸನ್ಮಾತ್ರಂ ಯದಲೇಪಕಂ ।
ಏಕರೂಪರಿ ಮಹಾರೂಪಂ ಸತ್ತಾಯಾಸ್ತತ್ಪದಂ ವಿದುಃ ॥ ೧೦೪ ॥

ರೂಪಂ ನಾನಾಕೃತಿತ್ವೇನ ಸತ್ತಾಯಾ ನ ಕದಾಚನ ।
ಅಸಂವೇದ್ಯಂ ಸಂಭವತಿ ತಸ್ಮಾದೇತದ ವಸ್ತುಕಂ ॥ ೧೦೫ ॥

ಏಕರೂಪಂ ತು ಯದ್ರೂಪಂ ಸತ್ತಾಯಾ ವಿಮಲಾತ್ಮಕಂ ।
ನ ಕದಾಚನ ತದ್ಯಾತಿ ನಾಶಂ ನಾಪಿ ಚ ವಿಸ್ಮೃತಿಂ ॥ ೧೦೬ ॥

---

೧೦೪. ಪ್ರಪಂಚದಲ್ಲಿರುವ ವಸ್ತು ವೈವಿಧ್ಯಕ್ಕೆ ಅನುಸಾರವಾಗಿ ವಿಭಿನ್ನವಾದ ವಿಶೇಷಾಕಾರವನ್ನು ಸಂಪೂರ್ಣವಾಗಿ ಪರಿತ್ಯಜಿಸಿ ನಿರ್ವಿಶೇಷವೂ, ನಿರ್ಲಿಪ್ತವೂ ಆದ ಕೇವಲ ಸನ್ಮಾತ್ರವು ಯಾವುದುಂಟೋ ಅದೇನೇ ಪಾರಮಾರ್ಥಿಕ ಸತ್ತೆಯು ಏಕರೂಪವೂ, ಮಹಾರೂಪವೂ ಆದ ವಸ್ತು ತತ್ತ್ವವೆಂದು ಜ್ಞಾನಿಗಳು ತಿಳಿದಿರುವರು.

೧೦೫. ವ್ಯಾವಹಾರಿಕ ಸತ್ತೆಗೆ ಘಟತ್ವಾದಿ ನಾನಾ ವಿಧಗಳಾಗಿ' ನಾನಾಕಾರಗಳಾಗಿ ತೋರುವ ರೂಪವು ಘಟಾದಿಗಳು ಧ್ವಂಸವನ್ನು ಪಡೆದು ನಷ್ಟವಾದಾಗ ಅವುಗಳ ಕಪಾಲ (ದೊಡ್ಡ ಬೋಕಿ ಹೆಂಚು) ಚೂರುಗಳು, ಪುಡಿ ಮುಂತಾದ ಅವಸ್ಥೆಗಳಲ್ಲಿ ಅನುವರ್ತಿಸಿಕೊಂಡಿರುವುದಾಗಿ ಕಾಣಲ್ಪಡುವುದಿಲ್ಲ. ಆದುದರಿಂದ ಅವಸ್ತುಕವಾದ ವ್ಯಾವಹಾರಿಕ ಸತ್ತೆಯ ರೂಪವು ಸತ್ಯವೆಂದು ಹೇಳಿದರೆ ಅದು ಸರ್ವಥಾ ಎಂದಿಗೂ ಸಂಭವಿಸುವುದಿಲ್ಲ. (ಅಸಂಗತವೆಂದರ್ಥ.)

೧೦೬. ಪಾರಮಾರ್ಥಿಕ ಸತ್ತೆ (ಸದ್ರೂಪ) ಯಾದರೋ ಸದಾ ಸರ್ವತ್ರ ಸರ್ವಾವಸ್ಥೆಗಳಲ್ಲಿ ಅನುಗತವಾಗಿ ಸರ್ವಾನುಭವಸಿದ್ಧವಾದುದು. ಪಾರಮಾರ್ಥಿಕ ಸತ್ತೆಯ ರೂಪವು ಸದಾತ್ಮಕವು. ಅವಿದ್ಯಾದಿ ಮಲರಹಿತವು. ಮತ್ತು ಅದರಲ್ಲಿ ನಾನಾತ್ವವೆಂಬುದು ಎಂದಿಗೂ ಸರ್ವಥಾ ಇಲ್ಲವೇ ಇಲ್ಲ. ಅದು ಯಾವಾಗಲೂ ನಾಶವನ್ನು ಹೊಂದುವುದಿಲ್ಲ. ಅದು ಸರ್ವ ಕಾಲಗಳಲ್ಲಿಯೂ ನಿತ್ಯ ಶುದ್ಧ ಚಿದೇಕ ರಸಾತ್ಮಕವಾಗಿ ಸ್ಫುರಿಸುತ್ತಿರುವುದು. ಆದುದರಿಂದ ಅದು ವಿಸ್ಮೃತಿಯನ್ನು ಹೊಂದುವುದು ಕೂಡ ಇಲ್ಲವು.

ಕಾಲಸತ್ತಾ ಕಲಾಸತ್ತಾ ವಸ್ತು ಸತ್ತೇಯ ಮಿತ್ಯಪಿ ।
ವಿಭಾಗ ಕಲನಾಂ ತ್ಯಕ್ತ್ವಾ ಸನ್ಮಾತ್ರೈಕಪರೋ ಭವ ॥ ೧೦೭ ॥

ಕಾಲಸತ್ತಾ ಸ್ವಸತ್ತಾ ಚ ಪ್ರೋನ್ಮುಕ್ತಕಲನಾ ಸತೀ ।
ಯದ್ಯಪ್ಯುತ್ತಮಸದ್ರೂಪಾ ತಥಾಪ್ಯೇಷಾ ನ ವಾಸ್ತವೀ ॥ ೧೦೮ ॥

ವಿಭಾಗಕಲನಾ ಯತ್ರ ವಿಭಿನ್ನಪದದಾಯಿನೀ ।
ನಾನಾತಾ ಕಾರಣಂ ದೃಷ್ಟ್ವಾ ತತ್ಕಥಂ ಪಾವನಂ ಭವೇತ್ ॥ ೧೦೯ ॥

---

೧೦೭. ಕೇವಲ ಕೆಲವು ವಾದಿಗಳು ತಮ್ಮ ತಮ್ಮ ಬುದ್ಧಿಗಳಿಗೆ ಅನುಗುಣವಾಗಿ ಬೇರೆ ಬೇರೆ ಪ್ರಕಾರಗಳಲ್ಲಿ "ಕಾಲಸತ್ತೆ, ಕಲಾಸತ್ತೆ-ಮತ್ತು ವಸ್ತು ಸತ್ತೆ" ಎಂಬೀ ಮೊದಲಾದ ಪ್ರಕ್ರಿಯಾ ವೈಚಿತ್ರ್ಯಗಳಿಂದ ಸತ್ತಾ ವಿಭಾಗ ವೈವಿಧ್ಯವನ್ನು ಕಲ್ಪಿಸಿಕೊಂಡಿರುವರು. ಅಯ್ಯ ರಾಮ, ನೀನು ಅಂತಹ ವಿಭಾಗ ಕಲ್ಪನೆಗಳೆಲ್ಲವನ್ನೂ ಬಿಟ್ಟು ಬಿಟ್ಟು ಕೇವಲ ಪಾರಮಾರ್ಥಿಕವಾದ ಸನ್ಮಾತ್ರವೊಂದರಲ್ಲಿಯೇ ತತ್ಪರನಾಗಿರು. [ಲೋಕದಲ್ಲಿ ಘಟಪಟಾದಿ ಸಕಲ ವಸ್ತುಗಳಿಗೂ "ಅಸ್ತಿ" (ಇದೆ) ಎಂಬುದಾಗಿ ಭೂತ ಭವಿಷ್ಯತ್ಕಾಲಗಳಲ್ಲಿ ವ್ಯವಹಾರವು ಕಾಣುವುದಿಲ್ಲ ಆದುದರಿಂದ ಅವುಗಳಿಗೆ ವರ್ತಮಾನ ಕಾಲದಲ್ಲಿ ಮಾತ್ರವೇ ಸತ್ತೆಯಿರುವುದು ಎಂದು ಕೆಲವರ ಅಭಿಪ್ರಾಯ. ಇದಕ್ಕೇ ಕಾಲಸತ್ತೆ ಎಂದು ವ್ಯವಹಾರವು. ಅವಯವಗಳೇ ಒಟ್ಟುಗೂಡಿ ಅವಯವಿರೂಪದಿಂದ ಸ್ಫುರಿಸುವ ಕಾರಣ, ಅವಯವಗಳಾದ (ಕಲಾ) ಪರಮಾಣು ರೂಪಗಳೇ ಜಗತ್ಸತ್ತೆಯೆಂದು ಮತ್ತೆ ಕೆಲವರ ಮತ. ಇದಕ್ಕೇ ಕಲಾ ಸತ್ತೆಯೆಂದು ಹೆಸರು. ಅವಯವಿಗಳಲ್ಲಿ ಅನುಗತವಾದ ಸತ್ತಾ ರೂಪ ಜಾತಿಯು ಬೇರೊಂದು ಇರುವುದು ಎಂದು ಇನ್ನೂ ಬೇರೆ ವಾದಿಗಳು ಹೇಳುವರು. ಅದೇ ವಸ್ತುಸತ್ತೆಯೆನ್ನಿಸುವುದು.]

೧೦೮. ಕಾಲಾದಿ ಸತ್ತೆಯು ಸಮಸ್ತ ಪ್ರಪಂಚದಂತೆ ಕಲ್ಪಿತ ಭೇದವುಳ್ಳದ್ದು. ಅಧ್ಯಸ್ತವಾದ ಭೇದ ಕಲ್ಪನೆಗಳನ್ನು ತ್ಯಾಗಮಾಡಿಬಿಟ್ಟರೆ ಸನ್ಮಾತ್ರವೇ ಪರಿಶೇಷವಾಗಿ ಇರುವುದರಿಂದ ಆ ಸತ್ತೆಯು ಉತ್ತಮವಾದುದೇ ಆಗುವುದು. ಆದಾಗ್ಯೂ ಕೂಡ ಅದು ಅದರ ವಿಭಕ್ತ ರೂಪದಿಂದ ಬಾಧಾರ್ಹವಾಗಿರುವ ಕಾರಣ ವಾಸ್ತವವಾದುದಲ್ಲವು.

೧೦೯. ಯಾವ ವ್ಯಾವಹಾರಿಕ (ಕಾಲಾದಿ) ಸತ್ತೆಯಲ್ಲಿ ವಿಭಾಗ ಕಲ್ಪನೆಯು

ಸತ್ತಾಸಾಮಾನ್ಯಮೇವೈಕಂ ಭಾವಯತ್ಸಕಲಂ ವಪುಃ ।
ಪರಿಪೂರ್ಣ ಪರಾನಂದೀ ತಿಷ್ಠಾಭರಿತದಿಗ್ಭರಃ ॥ ೧೧೦ ॥

ಸತ್ತಾಸಾಮಾನ್ಯಮಾತ್ರಸ್ಯ ಯಾ ಕೋಟಿಃ ಕೋವಿದೇಶ್ವರ ।
ಸೈವಾಸ್ಯ ಬೀಜತಾಂ ಯಾತಾ ತತ ಏವ ಪ್ರವರ್ತತೇ ॥ ೧೧೧ ॥

ಸತ್ತಾಸಾಮಾನ್ಯ ಪರ್ಯಂತೇ ಯತ್ತತ್ಕಲನಯೋಜ್ಝಿತಂ ।
ಪದಮಾದ್ಯಮನಾದ್ಯಂತಂ ತಸ್ಯ ಬೀಜಂ ನ ವಿದ್ಯತೇ ॥ ೧೧೨ ॥

ನಾನಾತ್ವ (ಭೇದ) ವ್ಯವಹಾರಕ್ಕೆ ಕಾರಣವಾಗಿದ್ದುಕೊಂಡು, ಪರಸ್ಪರಾತ್ಯಂತ ವಿಭಿನ್ನ ಪದದಾಯಕವಾಗಿ ಅನರ್ಥಹೇತುವಾಗಿರುವುದೋ ಅಂತಹ ಸತ್ತೆಯು ಹೇಗೆತಾನೇ ಪಾವನವಾದೀತು ? (ಸರ್ವಜನಾದರಣೀಯವಾದೀತು ?)

೧೧೦. ವತ್ಸ ರಾಮ, ಸಕಲವಾದ ಶರೀರವನ್ನೂ ಒಂದೇ ಒಂದಾದ ಸತ್ತಾ ಸಾಮಾನ್ಯವೆಂದೇ ಭಾವನೆ ಮಾಡುತ್ತಾ ಆ ಸತ್ತಾ ಸಾಮಾನ್ಯ ರೂಪದಿಂದಲೇನೇ ಸಮಸ್ತ ದಿಕ್ಕುಗಳನ್ನೂ ಮತ್ತು ಅವುಗಳಲ್ಲಿರುವ ಸಕಲ ಪದಾರ್ಥಗಳನ್ನೂ ಸುತ್ತಲೂ ತುಂಬಿದವನಾಗಿ ನಿರತಿಶಯ ಪರಿಪೂರ್ಣಾನಂದ ಸ್ವರೂಪನಾಗಿರು.

೧೧೧. ಅಯ್ಯ ಪಂಡಿತಾಗ್ರಣಿಯೇ, ರಾಮ, ಯಾವ ಪರಮಾರ್ಥಸತ್ತೆಯು ಈ ಸಾಮಾನ್ಯ ಸತ್ತಾ ಮಾತ್ರಕ್ಕೆ ಅಂದರೆ ಪ್ರಪಂಚದಲ್ಲಿರ ವ ಘಟಪಟಾದಿಗಳ ನಾನಾ ವಿಭಿನ್ನ ಸತ್ತೆಗಳಿಗೆ ಅತ್ಯನ್ನತವಾದ ಪರಮಾವಧಿಯಾಗಿರುವುದೋ, ಆ ಸತ್ತೆಯೇ ಈ ಜಗತ್ತಿಗೂ, ಪ್ರತಿಬಿಂಬ ಚಿತ್ತಿಗೂ ಕೂಡ ಬೀಜ ಭಾವವನ್ನು ಹೊಂದಿರುವುದು. ಅದರ ದೆಸೆಯಿಂದಲೇ ಇದೆಲ್ಲವೂ ಪ್ರವರ್ತಿಸುವುದು.

೧೧೨. ಸರ್ವ ಸತ್ತೆಗಳ ತುಟ್ಟ ತುದಿಯಲ್ಲಿ ಯಾವುದರ ಸಂಪರ್ಕವೂ ಇಲ್ಲದೆ, ಸಮಸ್ತ ಭೇದ ಕಲ್ಪನೆಗಳಿಂದ ವಿರಹಿತವಾಗಿ ಯಾವ ಸನ್ಮಾತ್ರವು ಸರ್ವದಾ ಪ್ರತಿಷ್ಠಿತವಾಗಿರುವುದೋ, ಅದೇನೇ ಆದ್ಯಂತ ರಹಿತವಾದ ಸ್ವತಃ ಸಿದ್ಧವಾದ ಪರಮ ಪದವು. ಅದೇ ಸಮಸ್ತ ಮುಮುಕ್ಷುಗಳಿಗೂ ಪ್ರಾಪ್ಯವಾದುದು. ಅದೇ ಆದ್ಯವು. ಅದಕ್ಕೆ ಕಾರಣವು ಬೇರೊಂದಿಲ್ಲವೇ ಇಲ್ಲ. (ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ । ಸ ವೇತ್ತಿ ಸರ್ವಂ ನಚತಸ್ಯಾಸ್ತಿ ವೇತ್ತಾ ತಮಾಹುರಗ್ರ್ಯಂ ಪುರುಷಂ ಮಹಾನ್ತಂ ॥ ಶ್ವೇತಾಶ್ವತರ. ಸನ್ಮಾತ್ರ

ಸತ್ತಾ ಲಯಂ ಯಾತಿ ಯತ್ರ ನಿರ್ವಿಕಾರಂ ಚ ತಿಷ್ಠತಿ ।
ಭೂಯೋನಾವರ್ತತೇ ದುಃಖೇ ತತ್ರ ಲಬ್ಧಪದಃ ಪುಮಾನ್ ॥ ೧೧೩ ॥

ತದ್ಧೇತುಃ ಸರ್ವ ಹೇತೂನಾಂ ತಸ್ಯ ಹೇತುರ್ನ ವಿದ್ಯತೇ ।
ಸಂಸಾರಃ ಸರ್ವಸಾರಾಣಾಂ ತಸ್ಮಾತ್ಸಾರಂ ನ ವಿದ್ಯತೇ ॥ ೧೧೪ ॥

ತಸ್ಮಿಂಶ್ಚಿದ್ದರ್ಪಣೇ ಸ್ಫಾರೇ ಸಮಸ್ತಾ ವಸ್ತುದೃಷ್ಟಯಃ ।
ಇಮಾಸ್ತಾಃ ಪ್ರತಿಬಿಂಬಂತಿ ಸರಸೀವ ತಟದ್ರುಮಾಃ ॥ ೧೧೫ ॥

ರೂಪನಾದ ಆತ್ಮನಿಗೆ ಕಾರ್ಯಕರಣಗಳೊಂದೂ ಇಲ್ಲ. ಸಮನೂ ಇಲ್ಲ. ಹೆಚ್ಚಿನವನೂ ಮೊದಲೇ ಇಲ್ಲ. ಅವನೇ ಎಲ್ಲವನ್ನೂ ಅರಿಯುವನು. ಅವನನ್ನು ಅರಿಯುವವನು ಬೇರೊಬ್ಬನಿಲ್ಲ. ಆದುದರಿಂದ ಅವನೇ ಉತ್ತಮನಾದ ಮಹಾ ಪುರುಷ. ಎಂದರ್ಥ.)

೧೧೩. ಯಾವ ಸ್ಥಿತಿಯಲ್ಲಿ ಧರ್ಮ ಧರ್ಮಿಗಳೆಂಬ ವಿಭಾಗಗಳನ್ನು ಲಯಗೊಳಿಸಿಕೊಂಡು ತಾನೂ ಲಯವನ್ನು ಹೊಂದುವುದೋ, ಪುನಃ ವಿಕಾರಗಳಿಗೆ ಸಿಕ್ಕದೆ ನಿರ್ವಿಕಾರವಾಗಿಯೇ ಇರುವುದೋ ಮತ್ತು ತಿರುಗಿಯೂ ಸಾಂಸಾರಿಕ ದುಃಖದಲ್ಲಿ ಬಂದು ಬೀಳುವುದಿಲ್ಲವೋ, ಅಂತಹ ಪರಮ ಪಾವನವಾದ ಉತ್ತಮ ಸ್ಥಿತಿಯಲ್ಲಿ ಪರಿನಿಷ್ಠಿತನಾಗಿರುವ ಮಹಾತ್ಮನೇ ಪರಮ ಪುರುಷಾರ್ಥ ಸಾಧನ ಸಮರ್ಥನಾಗಿರುವ ಕಾರಣ, ನಿಜವಾಗಿಯೂ ಧೀರನಾದ ಪುರುಷನೆನ್ನಿಸುವನು. ಇತರರಾದರೋ ಸ್ತ್ರೀ ಸದೃಶರಾದ ಹೇಡಿಗಳೇ ಸರಿ.

೧೧೪. ಆ ಸನ್ಮಾತ್ರವೇ ಸರ್ವಕ ರಣಗಳಿಗೂ ಕಾರಣವು. ಅವಕ್ಕೆ ಕಾರಣವು ಇಲ್ಲವೇ ಇಲ್ಲ ಮತ್ತು ಸಾರವಾದವುಗಳಲ್ಲೆಲ್ಲಾ ಅದೇ ನಿರತಿಶಯ ಸಾರತಮವಾದುದು. ಅದಕ್ಕಿಂತ ಹೆಚ್ಚು ಸಾರವಾದುದು (ಸಾರತರ) ಬೇರೆ ಯಾವುದೂ, ಎಂದಿಗೂ, ಎಲ್ಲಿಯೂ, ಸರ್ವಥಾ ಇಲ್ಲವು.

೧೧೫. ಆ ಸನ್ಮಾತ್ರವೇ ಚಿದ್ರೂಪವು. ಅದು ಸ್ವಯಂಪ್ರಕಾಶಮಾನವಾದ (ಸೂರ್ಯ ಚಂದ್ರಾದಿಗಳಿಗೂ ತೇಜಃ ಪ್ರದವಾದ) ಜ್ಯೋತಿಯು. ಅದು ನಿರ್ಮಲವಾದ ಕನ್ನಡಿಯಂತೆ ನಿತ್ಯಶುದ್ಧವೂ, ಬಿಂಬ ಗ್ರಹಣ ಸಮರ್ಥವೂ ಆದುದು. ಇಂತಹ "ಚಿತ್" ಎಂಬ ಮಹತ್ತಮವಾದ ದರ್ಪಣದೊಳಗೆ ಈ ಸಮಸ್ತವಾದ

ಸರ್ವೇ ಭಾವಾ ಇಮೇ ತತ್ರ ಸ್ವದಂತೇ ಸ್ವಾಧು ವಾರಿಧೇಃ ।
ಷಡ್ರಸಾ ಇವ ಜಿಹ್ವಾಯಾಃ ಪ್ರಕಟತ್ವಂ ಪ್ರಯಾಂತಿ ಚ ॥ ೧೧೬ ॥

ತಸ್ಮಾದಚ್ಛತರಸ್ಯಾಪಿ ಚಿದಾಕಾಶಸ್ಯ ವೈ ಪದಂ ।
ಸರ್ವೇಷಾಂ ಸ್ವಾದುಜಾತೀನಾಮುಲಮಾಸ್ವಾದನಂ ಚ ತತ್ ॥ ೧೧೭ ॥

ವಸ್ತು ದೃಷ್ಟಿಗಳು-ಒಂದು ಸರೋವರದ ತಿಳಿಯಾದ ಜಲದಲ್ಲಿ ಎರಡು ದಡಗಳ ಮೇಲೆ ಬೆಳೆದಿರುವ ವೃಕ್ಷಗಳಂತೆ ಪ್ರತಿಬಿಂಬಿಸುವುವು.

೧೧೬. ನಾಲಗೆಗೆ ಎಲ್ಲ ರುಚಿಗಳನ್ನೂ ಆಸ್ವಾದಿಸಿ ಕಂಡು ಹಿಡಿಯುವ ಶಕ್ತಿಯಿರುವುದು. ಅದು ಕಾರಣ, ಆ ನಾಲಗೆಗೆ ಬೆಲ್ಲ ಮುಂತಾದ ವಸ್ತುಗಳ ಸಂಪರ್ಕವುಂಟಾದಾಗ ನಾಲಗೆಯ ಮೂಲಕ ವಸ್ತುಗತ ಷಡ್ರಸಗಳೂ ಅಭಿವ್ಯಕ್ತವಾಗಿ ಸ್ಫುರಿಸುವುವು. ಹಾಗೆಯೇ ಪ್ರತ್ಯಗ್ರೂಪನಾದ ಸಚ್ಚಿನ್ಮಾತ್ರಾತ್ಮನಲ್ಲಿ ಸಮಸ್ತವಾದ ಈ ದೃಶ್ಯ ವಿಷಯಗಳು ಅಧ್ಯಸ್ತವಾಗಿರುವುದರಿಂದ ಮಾತ್ರವೇ ಆಯಾ ಇಂದ್ರಿಯ ಪ್ರೀತಿಯನ್ನು ಉಂಟುಮಾಡುವುವು. ಆತ್ಮನು ಆನಂದಸಾಗರನೂ ಆಗಿರುವ ಕಾರಣವೇ ಅವನಿಂದಲೇ ಆ ವಿಷಯಗಳು ಸತ್ತೆಯನ್ನೂ, ಸ್ಫೂರ್ತಿಯನ್ನೂ ಪಡೆಯುವುವು.

೧೧೭. ಶಬ್ದಾದಿ ವಿಷಯಗಳು ವಸ್ತುತಃ ಸ್ವಾದುತ್ವಶೂನ್ಯವಾದವುಗಳು. ಅದು ಕಾರಣ, ಅವು ಸ್ವಭಾವತಃ ಪ್ರಿಯಗಳೂ ಅಲ್ಲ. ಆನಂದವೂ ಅಲ್ಲ. ಆದಾಗ್ಯೂ ಅವು ಆತ್ಮನಲ್ಲಿ ಅಧ್ಯಸ್ತವಾಗಿರುವ ಕಾರಣ, ಆತ್ಮ ಸಂಬಂಧದಿಂದ ಇಂದ್ರಿಯ ಪ್ರೀತಿದಾಯಕಗಳಾಗಿವೆ. ಆದುದರಿಂದಲೇ, ಪ್ರಿಯಾ ಪ್ರಿಯತ್ವಾದಿ ಸಕಲ ದೋಷಗಳಿಂದ ಅಸಂಸ್ಪೃಷ್ಟವಾಗಿ ಅತ್ಯಂತ ಸ್ವಚ್ಛವಾದುದಾದರೂ ಆ ಚಿದಾಕಾಶದ ಸ್ವರೂಪವು ಸಮಸ್ತವಾದ ಆನಂದಗಳೊಳಗೆ ಮತ್ತು ಪ್ರಿಯಗಳೊಳಗೆ ಅತ್ಯಂತ ನಿತ್ಯ ನಿರವದ್ಯ ನಿರತಿಶಯ ಪರಮಾನಂದ ರೂಪವೂ, ಪ್ರಿಯತಮವೂ ಆಗಿರುವುದು.

(ರಸೋ ವೈಸಃ । ರಸಗ್ಗ್ಂ ಹ್ಯೇವಾಯಂ ಲಬ್ಧ್ವಾ ಆನಂದೀ ಭವತಿ । ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ । ಯದೇಷ ಆಕಾಶ ಆನಂದೋ ನ ಸ್ಯಾತ್ । ಏಷ ಹ್ಯೇವಾನಂದಯಾತಿ ॥ ತೈತ್ತಿರೀಯ ಆನಂದವಲ್ಲೀ.)

ಜಾಯತೇ ವರ್ತತೇ ಚೈವ ವರ್ಧತೇ ಸ್ಪೃಶ್ಯತೇಽಥ ವಾ ।
ತಿಷ್ಠಂತಿ ಚ ಗಲಂತೀಹ ತತ್ರಾಂಗ ಜಗತಾಂ ಗಣಾಃ ॥ ೧೧೮ ॥

ತತ್ತದ್ಗುರು ಗರಿಷ್ಠಾನಾಂ ತತ್ತಲ್ಲಘು ಲಘೀಯಸಾಂ ।
ತತ್ತತ್ಸ್ಥೂಲಂ ಸ್ಥವಿಷ್ಠಾನಾ ಮಣೀಯಸ್ತದಣೀಯಸಾಂ ॥ ೧೧೯ ॥

ದವೀಯಸಾಂ ದವಿಷ್ಠಂ ತದಂತಿಕಾನಾಂ ತದಂತಿಕಂ ।
ಕನೀಯಸಾಂ ಕನೀಯಸ್ತತ್ತತ್ ಜ್ಯೇಷ್ಠಂ ಜ್ಯಾಯಸಾಮಪಿ ॥ ೧೨೦ ॥

---

೧೧೮. ಅಯ್ಯ ರಾಮ, ಸಕಲ ದೃಶ್ಯ ವಿಕಾರ ವಿಷಯಗಳೂ ಆ ಸಚ್ಚಿದಾನಂದ ರೂಪ ಆತ್ಮನಲ್ಲಿ ಮಿಥ್ಯೆಯಾಗಿಯೇ, ರಜ್ಜುವಿನಲ್ಲಿ ಸರ್ಪಾದಿಗಳಂತೆ ಅಧ್ಯಸ್ತವಾಗಿ ಆರೋಪಿತವಾಗಿರುವ ಕಾರಣ, ಈ ಮಿಥ್ಯಾಭೂತಗಳಾದ ಜಗದ್ಗಣಗಳು ಸ್ವಾಧಿಷ್ಠಾನವಾದ ಆತ್ಮನಲ್ಲಿ ಹುಟ್ಟುವುವು. ಸ್ಥಿತಿಯನ್ನು ಪಡೆದಿರುವುವು. ವೃದ್ಧಿ ಹೊಂದುವುವು. ವಿಪರಿಣಾಮವನ್ನು ಹೊಂದುವುವು (ಮುಟ್ಟಲ್ಪಡುವುವು.) ಅಪಕ್ಷಯೋನ್ಮುಖಗಳಾಗಿ ಇವೆ. ಮತ್ತು ಅವು ಕೊನೆಗೆ ಜ್ಞಾನಬಾಧಿತಗಳಾಗಿ ಸ್ವಾಧಿಷ್ಠಾನದಲ್ಲಿಯೇ ವಿಲೀನವಾಗಿ ನಾಶ ಹೊಂದುವುವು.

(ಜಾಯತೇ-ಅಸ್ತಿ -ವರ್ಧತೇ - ವಿಪರಿಣಮತೇ - ಅಪಕ್ಷೀಯತೇ - ನಶ್ಯತಿಚ. ಅಂದರೆ ಜನನ, ಸ್ಥಿತಿ, ವೃದ್ಧಿ, ವಿಪರಿಣಾಮ, ಅಪಕ್ಷಯ ಮತ್ತು ವಿನಾಶ. ಇವು ಆರು ಭಾವ ವಿಕಾರಗಳು.) (ಜಾಯತೇ ಮುಂತಾದ ಕ್ರಿಯಾಪದಗಳನ್ನು ಬಹು ವಚನಕ್ಕೆ ಪರಿವರ್ತಿಸಬೇಕು.)

೧೧೯. ಎಲ್ಲಕ್ಕೂ ಆತ್ಮವಾಗಿರುವ ಆ ಸನ್ಮಾತ್ರವೇ. ಗುರುವಾದವುಗಳೊಳಗೆ ಗುರುತಮವಾಗಿಯೂ, ಲಘುವಾದವುಗಳೊಳಗೆ ಲಘುತಮವಾಗಿಯೂ. ಸ್ಥೂಲವಾದವುಗಳೊಳಗೆ ಸ್ಥೂಲತಮವಾಗಿಯೂ, ಸೂಕ್ಷ್ಮವಾದವುಗಳೊಳಗೆ ಸೂಕ್ಷ್ಮತಮವಾಗಿಯೂ ಇರುವುದು. (ಗುರುತ್ವ ಲಘುತ್ವಾದಿ ವೈಚಿತ್ರ್ಯಗಳಿಗೂ ನಿರ್ವಾಹಕವಾದುದು ಆ ಸನ್ಮಾತ್ರವೇ ಎಂದು ಅರ್ಥ,) (ಅಣೋರಣೀಯಾನ್ ಮಹತೋ ಮಹೀಯಾನಾತ್ಮಾ ಇತ್ಯಾದಿ ನಾರಾಯಣೀಯೋಪನಿಷತ್.)

೧೨೦. ಮತ್ತು ಆ ಸನ್ಮಾತ್ರವು, ದೂರಸ್ಥವಾದವುಗಳೊಳಗೆ ಅತ್ಯಂತ ಹೆಚ್ಚು ದೂರಸ್ಥವಾಗಿಯೂ, ಸಮೀಪಸ್ಥವಾದವುಗಳೊಳಗೆ ಬಹಳ ಹೆಚ್ಚು ಸಮೀಪಸ್ಥ

ತೇಜಸಾಮಪಿ ತತ್ತೇಜಸ್ತಮಸಾಮಪಿ ತತ್ತಮಃ ।
ವಸ್ತೂನಾಮಪಿ ತದ್ವಸ್ತು ದಿಶಾಮಪ್ಯಂಗ ದಿಕ್ಪರಾ ॥ ೧೨೧ ॥

ತನ್ನ ಕಿಂಚಿಚ್ಚ ಕಿಂಚಿಚ್ಚ ತತ್ತದಸ್ತೀವ ನಾಸ್ತಿ ಚ ।
ತತ್ತದ್ದೃಶ್ಯಮದೃಶ್ಯಂ ಚ ತತ್ತದಸ್ಮಿ ನ ಚಾಸ್ಮಿ ಚ ॥ ೧೨೨ ॥

ರಾಮ ಸರ್ವಪ್ರಯತ್ನೇನ ತಸ್ಮಿನ್ಪರಮಪಾವನೇ ।
ಪದೇ ಸ್ಥಿತಿಮುಪಾಯಾಸಿ ಯಥಾ ಕುರು ತಥಾನಘ ॥ ೧೨೩ ॥

ವಾಗಿಯೂ, ಚಿಕ್ಕವಾದವುಗಳೊಳಗೆ ಕನಿಷ್ಠವಾಗಿಯೂ ಮತ್ತು ದೊಡ್ಡ ವಾದವುಗಳೊಳಗೆ ಜ್ಯೇಷ್ಠ (ಎಲ್ಲಕ್ಕಿಂತಲೂ ಹೆಚ್ಚು ದೊಡ್ಡದು) ವಾಗಿಯೂ ಇರುವುದು.

೧೨೧. ವತ್ಸ, ಆಸನ್ಮಾತ್ರವೇ, ತೇಜಸ್ಸುಗಳಿಗೆಲ್ಲಾ ತೇಜಃ ಪ್ರದವಾದ ಪರಮೋತ್ತಮ ದಿವ್ಯ ಸ್ವಯಂ ಜ್ಯೋತಿಯೂ, ಅಂಧಕಾರಗಳಲ್ಲೆಲ್ಲಾ ಹೆಚ್ಚು ಅಂಧಕಾರವಾಗಿಯೂ, ವಸ್ತುಗಳೊಳಗೆಲ್ಲಾ ಅದೇ ಪರಮಾರ್ಥ ಸತ್ಯವಸ್ತು ವಾಗಿಯೂ, ದಿಕ್ಕುಗಳೊಳಗೆಲ್ಲಾ ಅದೇ ಉತ್ಕೃಷ್ಟವಾದ ದಿಕ್ಕಾಗಿಯೂ ಇರುವುದು.

೧೨೨. ವತ್ಸ ಆಸನ್ಮಾತ್ರವು ಲೋಕಪ್ರಸಿದ್ಧವಾದ ಯಾವುದೂ ಅಲ್ಲ. ಪ್ರಸಿದ್ಧವಾದುದು ಎಷ್ಟೇ ಅಲ್ಪತರವಾದುದಾವರೂ, ಅದು ಆಸನ್ಮಾತ್ರವೇ. ಅದು ಭಾವಾತ್ಮಕವಾಗಿ ಇರುವಂತೆ ತೋರುವುದು. ಅಭಾವಾತ್ಮಕವಾಗಿ ಇಲ್ಲವು. ಅಸ್ಮಿ ಎಂಬುದಾಗಿ ಪ್ರತ್ಯಗಾತ್ಮ ರೂಪದಿಂದ ಅನುಭವಾರೂಢವಾದುದೂ ಅದೇ ಸನ್ಮಾತ್ರವೇ. ಮತ್ತು ಅದು ಅಹಂಭಾವ ರೂಪದಿಂದ ದೃಶ್ಯವಾಗಿರುವುದೂ ಸ್ವತಃ ಅದೃಶ್ಯವಾದುದೂ ಕೂಡ ಆ ಸನ್ಮಾತ್ರವೇ.

೧೨೩. ಅಯ್ಯ ಅನಘನಾದ ರಾಮ, ಪರಮ ಪವಿತ್ರವಾದ ಆ ಸನ್ಮಾತ್ರ ರೂಪ ಪರಮ ಪದದಲ್ಲಿ ಸಮಸ್ತ ಪ್ರಯತ್ನಗಳಿಂದಲೂ ನೀನು ಹೇಗೆ ಸ್ಥಿತಿಯನ್ನು ಪಡೆಯುವಿಯೋ ಹಾಗೆ ಮಾಡು.

ತದಮಲ ಮಜರಂ ತದಾತ್ಮತತ್ತ್ವಂ ।
ತದವಗತಾ ವುಪಶಾಂತಿಮೇತಿ ಚೇತಃ ।
ಅವಗತ ವಿತತೈಕತತ್ಸ್ವರೂಪೋ ।
ಭವ ಭಯ ಮುಕ್ತ ಪದೋಽಸಿ ತಚ್ಚಿರಾಯ ॥ ೧೨೪ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಸಂಸೃತಿಬೀಜ ವಿಚಾರಯೋಗೋಪದೇಶೋ" ನಾಮ ಏಕನವತಿತಮಃ ಸರ್ಗಃ

---

೧೨೪. ಆತ್ಮನ ಪಾರಮಾರ್ಥಿಕ ಸ್ವರೂಪವು ಪ್ರಸಿದ್ಧವಾದ ಆ ಸನ್ಮಾತ್ರವೇ ಅದು ನಿಷ್ಕಳಂಕವೂ, ಜನ್ಮ ಜರಾಮರಣಾದಿ ವಿಕಾರ ವಿರಹಿತವೂ ಆದುದು. ಆ ಸನ್ಮಾತ್ರಾತ್ಮ ಸ್ವರೂಪವನ್ನು ತತ್ತ್ವತಃ ಸಾಕ್ಷಾತ್ಕರಿಸಿದ ಕೂಡಲೇ ಮನಸ್ಸು ಬಾಧಿತವಾಗಿ ನಷ್ಟವಾಗುವುದು. ಅದು ಕಾರಣ, ನೀನು ಯಾವಾಗ ಅಖಂಡಾ ಪರಿಚ್ಛಿನ್ನಾಕಾರವೂ, ಅದ್ವಿತೀಯವೂ ಆದ ಆ ಸನ್ಮಾತ್ರಾತ್ಮ ಸ್ವರೂಪವನ್ನು ಯಥಾರ್ಥವಾಗಿ ಸಾಕ್ಷಾತ್ಕಾರ ಮಾಡುವೆಯೋ ಆಗಲೇ ಪುನರಾವೃತ್ತಿ ರಹಿತವಾದ ಮೋಕ್ಷಕ್ಕೋಸ್ಕರ ಸಂಸಾರ ಭಯದಿಂದ ವಿನಿರ್ಮುಕ್ತವಾದ ಪರಮ ಪದ ಸ್ವರೂಪನೇ ಆಗಿರುತ್ತೀ.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಸಂಸೃತಿ ಬೀಜ ವಿಚಾರಯೋಗೋಪದೇಶ"ವೆಂಬ ತೊಂಭತ್ತೊಂದನೆಯ ಸರ್ಗವು

ದ್ವಿ ನವತಿತಮಃ ಸರ್ಗಃ

ಶ್ರೀರಾಮ ಉವಾಚ :—

ಏತಾನಿ ತಾನಿ ಪ್ರೋಕ್ತಾನಿ ತ್ವಯಾ ಬೀಜಾನಿ ಮಾನದ ।
ಕತಮಸ್ಯ ಪ್ರಯೋಗೇಣ ಶೀಘ್ರಂ ತತ್ಪ್ರಾಪ್ಯತೇ ಪದಂ ॥ ೧ ॥

ಶ್ರೀ ವಸಿಷ್ಠ ಉವಾಚ :—

ಏತೇಷಾಂ ದುಃಖಬೀಜಾನಾಂ ಪ್ರೋಕ್ತಂ ಯದ್ಯನ್ಮಯೋತ್ತರಂ ।
ತಸ್ಯ ತಸ್ಯ ಪ್ರಯೋಗೇಣ ಶೀಘ್ರಮಾಸಾದ್ಯತೇ ಪದಂ ॥ ೨ ॥

ತೊಂಭತ್ತೆರಡನೆಯ ಸರ್ಗವು

ಶ್ರೀ ರಾಮನು ಹೇಳಿದನು:—

೧. ಸ್ವಾಮಿ, ದುರಭಿಮಾನವನ್ನು ಖಂಡಿಸಬಲ್ಲ, ತತ್ತ್ವಜ್ಞರಾದ ಗುರುಗಳೇ, ತಾವು ಇದುವರೆವಿಗೆ ದೇಹಾದಿಗಳು ಸಂಸಾರವೆಂಬ ಲತೆಗೆ ಬೀಜಗಳೆಂಬುದಾಗಿ ಅಪ್ಪಣೆ ಕೊಡಿಸಿದಿರಿ. ಯಾವ ಉಪಾಯದಿಂದ ಪೂರ್ವೋಕ್ತಗಳಾದ ಈ ಸಂಸಾರ ಬೀಜಗಳು ನಿವೃತ್ತಿಯಾಗಿ ಆ ಪರಮ ಪದವು (ಮೋಕ್ಷವು) ಬೇಗನೆ ಸುಲಭವಾಗಿ ಪ್ರಾಪ್ತವಾಗುವುದು ?

ಅಥವಾ

ಹಿಂದಿನ ಸರ್ಗದಲ್ಲಿ ಭೂಮಿಕಾಭೇದ ರೂಪಗಳಾದ ಮೋಕ್ಷ ಬೀಜಗಳನ್ನು ತಾವು ಈಗಲೇ ಉಪದೇಶ ಮಾಡಿದಿರಿ ಅಲ್ಲವೆ. ಅವುಗಳೊಳಗೆ ಯಾವುದನ್ನು ಆಶ್ರಯಿಸಿದರೆ, ಬೇಗನೆ ಆ ಪರಮ ವದವು ದೊರಕುವುದು ?

ಶ್ರೀ ವಸಿಷ್ಠರು ಹೇಳಿದರು :—

೨. ಹಿಂದೆ ನಾನು ನಿರೂಪಣೆ ಮಾಡಿದ ಈ ಸಾಂಸಾರಿಕ ದುಃಖ ಬೀಜಗಳಾದ ದೇಹಾದಿಗಳೊಳಗೆ ಯಾವುದು ಯಾವುದು ಉತ್ತರೋತ್ತರವಾದುದೋ ಅದದನ್ನು ನಿಗ್ರಹಿಸುವುದರಿಂದ ಪೂರ್ವಪೂರ್ವವಾದವುಗಳು ತಾವಾಗಿಯೇ ನಿವೃತ್ತಗಳಾಗುವುವು. ಆಗ ಶೀಘ್ರವಾಗಿಯೇ ಆ ಪರಮ ಪದವು ಪ್ರಾಪ್ತವಾಗುವುದು.

ಸತ್ತಾ ಸಾಮಾನ್ಯ ಕೋಟಿಸ್ಥೇ ದ್ರಾಗಿತ್ಯೇವ ಪದೇ ಯದಿ ।
ಪೌರುಷೇಣ ಪ್ರಯತ್ನೇನ ಬಲಾತ್ಸಂತ್ಯಜ್ಯ ವಾಸನಾಂ ॥ ೩ ॥

ಸ್ಥಿತಿಂ ಬಧ್ನಾಸಿ ತತ್ವಜ್ಞ ಕ್ಷಣಮಪ್ಯಕ್ಷಯಾತ್ಮಿಕಾಂ ।
ಕ್ಷಣೇಽಸ್ಮಿನ್ನೇವ ತತ್ಸಾಧು ಪದಮಾಸಾದಯಸ್ಯಲಂ ॥ ೪ ॥

ಸತ್ತಾಸಾಮಾನ್ಯರೂಪೇ ವಾ ಕರೋಷಿ ಸ್ಥಿತಿಮಂಗ ಚೇತ್ ।
ತತ್ಕಿಂಚಿದಧಿಕೇನೇಹ ಯತ್ನೇನಾಪ್ನೋಷಿ ತತ್ಪದಂ ॥ ೫ ॥

೩–೪. ಅಯ್ಯ ತತ್ತ್ವಜ್ಞನಾದ ರಾಮ, ನೀನು ನಿನ್ನ ಪೌರುಷದಿಂದ ಬಹು ಪ್ರಯತ್ನ ಪೂರ್ವಕವಾಗಿ ನಿನ್ನ ಮನಸ್ಸಿನಲ್ಲಿ ನೆಲೆಗೊಂಡಿರುವ ಸಕಲ ವಾಸನೆಗಳನ್ನೂ ಸಂಪೂರ್ಣವಾಗಿ ಪರಿತ್ಯಜಿಸಿ, ಸತ್ತಾ ಸಾಮಾನ್ಯದ (ಅಂದರೆ ಶೋಧಿತ "ತತ್" ಪದಾರ್ಥದ ಪರಾಕಾಷ್ಠೆ (ತುಟ್ಟ ತುದಿ) ಯಲ್ಲಿರುವ, ಚಿದ್ರೂಪ ಶೋಧಿತ "ತ್ವಂ" ಪದಾರ್ಥೈಕ್ಯದಿಂದ ಅಖಂಡೈಕರಸವಾದ ಆ ಪರಮ ಪದದಲ್ಲಿ ನಿನ್ನ ಮನಸ್ಸಿಗೆ ಒಂದು ಕ್ಷಣಕಾಲವಾದರೂ ಬಲಾತ್ಕಾರವಾಗಿ ನಿಶ್ಚಲವಾದ ಸ್ಥಿತಿಯನ್ನು (ಅಕ್ಷಯಾತ್ಮಕವಾದ ಸ್ಥಿತಿಯನ್ನು) ಉಂಟುಮಾಡಿದ್ದೇ ಆದರೆ, ಆ ಕ್ಷಣದಲ್ಲಿಯೇ ಆ ಸತ್ಪದವನ್ನು ಸಂಪೂರ್ಣವಾಗಿ ತತ್ತ್ವತಃ ಸಾಕ್ಷಾತ್ಕರಿಸಿ ಬಹುಬೇಗನೆ ಹೊಂದುತ್ತೀಯೆ.

[ತತ್ತ್ವಮಸಿ ಎಂಬ ಮಹಾ ವಾಕ್ಯದಲ್ಲಿ, ತತ್ ತ್ವಂ ಅಸಿ ಎಂಬ ಮೂರು ಪದಗಳುಂಟು. ಅದು (ಬ್ರಹ್ಮವು) ನೀನು ಆಗಿದ್ದೀ; ಅಂದರೆ ಭ್ರಾಂತಿಯಿಂದ ನೀನು ನಿನ್ನನ್ನು ಅಲ್ಪಜ್ಞನೆಂದೂ, ಪರಿಚ್ಛಿನ್ನನೆಂದೂ ಜನನಾದಿ ಧರ್ಮಗಳುಳ್ಳವನೆಂದೂ ಭಾವಿಸಿರುವೆ. ಅದು ತಪ್ಪು. ಹಾಗಲ್ಲವೆ ನೀನು ಯಥಾರ್ಥವಾಗಿಯೂ, ಸರ್ವಜ್ಞನೂ, ಅಪರಿಚ್ಛಿನ್ನನೂ ಜನನಾದಿ ಸಮಸ್ತ ಧರ್ಮ ವಿವರ್ಜಿತನೂ ಆದ ಪರಬ್ರಹ್ಮವೇ ಆಗಿರುವೆ. ಎಂದರ್ಥ. ಈ ವಾಕ್ಯದಲ್ಲಿ ಜೀವ ಬ್ರಹ್ಮೈಕ್ಯವು ಶಾಸ್ತ್ರದಿಂದ ನಿಸ್ಸಂದೇಹವಾಗಿ ಉಪದಿಷ್ಟವಾಗಿರುವುದು. ಇದೇ ಅಖಂಡಾರ್ಥವು. ಹೆಚ್ಚಿನ ವಿವರಗಳನ್ನು ಗುರುಮುಖೇನ ಅರಿಯಬೇಕು.]

೫. ವತ್ಸ, ಜೀವ ಬ್ರಹ್ಮೈಕ್ಯ ರೂಪ ಅಖಂಡಾರ್ಥ ಬೋಧವು ಅತ್ಯಧಿಕ ಪ್ರಯತ್ನ ಸಾಧ್ಯವಾಗದ ಪಕ್ಷದಲ್ಲಿ ಇನ್ನೂ ಸ್ವಲ್ಪ ಹೆಚ್ಚಾದ ಪ್ರಯತ್ನವನ್ನು ಮಾಡಿ ನೀನು ಸತ್ತಾ ಸಾಮಾನ್ಯ ರೂಪದಲ್ಲಿ ಅಂದರೆ ಶೋಧಿತ ಜಗತ್ಕಾರಣ ತತ್ತ್ವದಲ್ಲಿ

ಸಂವಿತ್ತತ್ತ್ವೇ ಕೃತಧ್ಯಾನೋ ಯದಿ ತಿಷ್ಠಸಿ ಚಾನಘ ।
ತದ್ಯತ್ನೇನಾಧಿಕೇನೋಚ್ಚೈರಾಸಾದಯಸಿ ತತ್ಪದಂ　　　　॥ ೬ ॥

ಸಂವೇದ್ಯೇ ಕೇವಲೇ ಧ್ಯಾನಂ ನ ಸಂಭವತಿ ರಾಘವ ।
ಸರ್ವತ್ರ ಸಂಭವಾದಸ್ಯಾಃ ಸಂವಿತ್ತೇರೇವ ಸರ್ವದಾ　　　　॥ ೭ ॥

ಯಚ್ಚಿಂತಯಸಿ ಯದ್ಯಾಸಿ ಯತ್ತಿಷ್ಠಸಿ ಕರೋಷಿ ಚ ।
ತತ್ರ ತತ್ರ ಸ್ಥಿತಾ ಸಂವಿತ್ಸಂವಿದೇವ ತದೇವ ಸಾ　　　　॥ ೮ ॥

ಯಾದರೂ, ನಿನ್ನ ಮನಸ್ಸಿಗೆ ಅಕ್ಷಯವಾದ ಸ್ಥಿತಿಯನ್ನು (ನಿಲುಕಡೆ) ಉಂಟುಮಾಡಿದ್ದೇ ಆದರೆ, ನೀನು ಇಲ್ಲಿಯೇ ಆ ಪರಮ ಪದವನ್ನು ಪಡೆಯುತ್ತೀಯೆ.

೬. ಅಯ್ಯ ದೋಷರಹಿತನಾದ ರಾಮ, ನೀನು ಚಿತ್ತೈಕಾಗ್ರತೆಯಿಂದ ಸಂವಿತ್ತತ್ತ್ವವನ್ನು ಅಂದರೆ ಶೋಧಿತ "ತ್ವಂ" ಪದಾರ್ಥವನ್ನು ಧ್ಯಾನಮಾಡುತ್ತಿರುವೆ ಯಾದರೆ ಆಗ ಆ ಅಧಿಕ ಪ್ರಯತ್ನದಿಂದಲೇ ಅತ್ಯುನ್ನತವಾದ ಆ ಪರಮ ಪದವನ್ನು ಹೊಂದುತ್ತೀಯೆ.

೭. ಅಯ್ಯ ರಾಘವ, ಈ ಸಂವಿತ್ತು (ಜ್ಞಾನ) ಸರ್ವತ್ರ ಸರ್ವದಾ ಸ್ವತಂತ್ರ ವಾಗಿ ಸ್ಫುರಿಸುತ್ತಲಿರುವುದು. ಅದು ಕಾರಣವೇ ಆ ಸಂವಿದಂಶವನ್ನು ಮರೆ ಮಾಚುವುದಕ್ಕೆ ಆಗುವುದೇ ಇಲ್ಲ. ಒಂದುವೇಳೆ ಮರೆಮಾಚಿದರೂ ಸಂವೇದ್ಯ (ಜ್ಞೇಯ) ಸ್ಫೂರ್ತಿಯೇ ಆಗುವುದಿಲ್ಲ. ಆದುದರಿಂದ ಸಂವಿದಂಶವನ್ನು ಬಿಟ್ಟು ಕೇವಲ ಸಂವೇದ್ಯಾಂಶದಲ್ಲಿ ಧ್ಯಾನವು ಎಂದಿಗೂ, ಹೇಗೂ ಸಂಭವಿಸುವುದೇ ಇಲ್ಲವು.

೮. ರಾಮ, ನೀನು ಎಲ್ಲೆಲ್ಲಿ ಯಾವ ಯಾವಾಗ ಚಿಂತಿಸುವೆಯೋ, ನಡೆಯು ವೆಯೋ, ನಿಲ್ಲುವೆಯೋ ಮತ್ತು ಮಾಡುವೆಯೋ ಅಲ್ಲಲ್ಲೆಲ್ಲ ಸರ್ವದಾ ಸಂವಿತ್ತು ಇದ್ದೇ ಇರುವುದು. ನಿನ್ನ ಚಿಂತನೆ, ಗಮನ, ಕರಣ ಮುಂತಾದ ಸಕಲ ವ್ಯವಹಾರ ಗಳಿಗೆ ವಿಷಯವಾದುದೆಲ್ಲವೂ ಆ ಸಂವಿತ್ತೇ. ಮತ್ತು ನಿನ್ನ ಚಿಂತನಾದಿ ಸಮಸ್ತ ವ್ಯವಹಾರವೂ ಆ ಸಂವಿತ್ತೇ. ಎಲ್ಲವೂ ಸಂವಿತ್ತತ್ತ್ವವೇ.

ವಾಸನಾಸಂಪರಿತ್ಯಾಗೇ ಯದಿ ಯತ್ನಂ ಕರೋಷಿ ಚ ।
ತತ್ತೇ ಶಿಥಿಲತಾಂ ಯಾಂತಿ ಸರ್ವಾಧಿವ್ಯಾಧಯಃ ಕ್ಷಣಾತ್ ॥ ೯ ॥

ಪೂರ್ವೇಭ್ಯಸ್ತು ಪ್ರಯತ್ನೇಭ್ಯೋ ವಿಷಮೋಽಯಂ ಹಿ ಸಂಸ್ಮೃತಃ ।
ದುಃಸಾಧ್ಯೋ ವಾಸನಾತ್ಯಾಗಃ ಸುಮೇರೂನ್ಮೂಲನಾದಪಿ ॥ ೧೦ ॥

ಯಾವದ್ವಿಲೀನಂ ನ ಮನೋ ನ ತಾವದ್ವಾಸನಾಕ್ಷಯಃ ।
ನ ಕ್ಷೀಣಾ ವಾಸನಾ ಯಾವಚ್ಚಿತ್ತಂ ತಾವನ್ನ ಶಾಮ್ಯತಿ ॥ ೧೧ ॥

ಯಾವನ್ನ ತತ್ವವಿಜ್ಞಾನಂ ತಾವಚ್ಚಿತ್ತಶಮಃ ಕುತಃ ।
ಯಾವನ್ನ ಚಿತ್ತೋಪಶಮೋ ನ ತಾವತ್ತತ್ವವೇದನಂ ॥ ೧೨ ॥

---

೯. ನಿನ್ನ ಮನಸ್ಸಿನಲ್ಲಿ ಬೇರೂರಿಕೊಂಡಿರುವ ವಾಸನಾಜಾಲಗಳನ್ನು ಸಂಪೂರ್ಣವಾಗಿ ಬಿಡುವುದರಲ್ಲಿಯೂ ಮತ್ತು ಮನಸ್ಸನ್ನು ನಾಶಗೊಳಿಸುವುದರಲ್ಲಿಯೂ ನೀನು ದೃಢ ಪ್ರಯತ್ನವನ್ನು ಮಾಡಿದ್ದೇ ಆದರೆ, ಆಗ ನಿನ್ನ ಸರ್ವವಿಧವಾದ ಮಾನಸಿಕ ಮತ್ತು ಶಾರೀರಕ ದುಃಖಗಳೆಲ್ಲವೂ ಒಂದು ಕ್ಷಣದೊಳಗಾಗಿ ಶೈಥಿಲ್ಯವನ್ನು ಹೊಂದಿಬಿಡುವುವು.

೧೦. ಈಗ ನಾನು ಉಪದೇಶಿಸಿದ ವಾಸನಾ ತ್ಯಾಗ ಮತ್ತು ಮನೋನಾಶರೂಪವಾದ ಪ್ರಯತ್ನವು ಪೂರ್ವೋಕ್ತ ಪ್ರಯತ್ನಗಳಿಗಿಂತ ಹೆಚ್ಚು ವಿಷಮವಾದುದೇ ಹೊರತು ಸುಗಮವಾದುದಲ್ಲ. ಏಕೆಂದರೆ, ಈ ವಾಸನಾತ್ಯಾಗ ಪ್ರಯತ್ನವು ಮೇರು ಪರ್ವತವನ್ನು ಬುಡಸಹಿತ ಕಿತ್ತು ಬಿಸಾಡುವ ಪ್ರಯತ್ನಕ್ಕಿಂತಲೂ ಹೆಚ್ಚು ದುಸ್ಸಾಧ್ಯವಾದುದು.

೧೧. ಎದುವರೆವಿಗೆ ಮನಸ್ಸು ಲಯವನ್ನು ಹೊಂದುವುದಿಲ್ಲವೋ, ಅದುವರೆವಿಗೂ ವಾಸನಾಕ್ಷಯವಾಗುವುನೇ ಇಲ್ಲ. ಹಾಗೆಯೇ ವಾಸನಾಕ್ಷಯವಾಗುವವರೆವಿಗೂ ಚಿತ್ತವೂ ನಾಶವಾಗುವುದಿಲ್ಲ.

೧೨. ಎದುವರೆವಿಗೆ ತತ್ವಜ್ಞಾನವು ಸಾಕ್ಷಾತ್ಕೃತವಾಗುವುದಿಲ್ಲವೋ ಅದುವರೆವಿಗೆ ಹೇಗೂ ಚಿತ್ತ ಶಾಂತಿಯು (ಮನೋನಾಶವು) ಸಂಭವಿಸುವುದೇ ಇಲ್ಲ. ಮನೋನಾಶವಾಗುವ ವರೆವಿಗೂ ತತ್ತ್ವಜ್ಞಾನವೂ ಸಾಕ್ಷಾತ್ಕೃತವಾಗುವುದಿಲ್ಲ.

ಯಾವನ್ನ ವಾಸನಾನಾಶಸ್ತಾವತ್ತತ್ತ್ವಾಗಮಃ ಕುತಃ ।
ಯಾವನ್ನ ತತ್ವಸಂಪ್ರಾಪ್ತಿರ್ನ ತಾವದ್ವಾಸನಾಕ್ಷಯಃ ॥ ೧೩ ॥

ತತ್ವಜ್ಞಾನಂ ಮನೋನಾಶೋ ವಾಸನಾಕ್ಷಯ ಏವ ಚ ।
ಮಿಥಃ ಕಾರಣತಾಂ ಗತ್ವಾ ದುಃಸಾಧ್ಯಾನಿ ಸ್ಥಿತಾನ್ಯತಃ ॥ ೧೪ ॥

ತಸ್ಮಾದ್ರಾಘವ ಯತ್ನೇನ ಪೌರುಷೇಣ ವಿವೇಕಿನಾ ।
ಭೋಗೇಚ್ಛಾಂ ದೂರತಸ್ತ್ಯಕ್ತ್ವಾ ತ್ರಯಮೇತತ್ಸಮಾಶ್ರಯೇತ್ ॥ ೧೫ ॥

ಸರ್ವಥಾ ತೇ ಸಮಂ ಯಾವನ್ನ ಸ್ವಭ್ಯಸ್ತಾ ಮುಹುರ್ಮುಹುಃ ।
ತಾವನ್ನ ಪದಸಂಪ್ರಾಪ್ತಿರ್ಭವತ್ಯಪಿ ಸಮಾಶತೈಃ ॥ ೧೬ ॥

---

೧೩. ಅಂತೆಯೇ ಎಲ್ಲಿಯವರೆವಿಗೆ ವಾಸನಾನಾಶವಾಗುವುದಿಲ್ಲವೋ, ಅಲ್ಲಿಯ ವರೆವಿಗೆ ತತ್ತ್ವಜ್ಞಾನ ಸಾಕ್ಷಾತ್ಕಾರವೆಲ್ಲಿಯದು ? ತತ್ತ್ವಜ್ಞಾನ ಪ್ರಾಪ್ತಿಯಾಗುವ ವರೆವಿಗೂ, ವಾಸನಾ ನಾಶವೂ, ಹೇಗೂ ಆಗುವುದೇ ಇಲ್ಲ.

೧೪. ಈ ಕಾರಣದಿಂದ ಹೀಗೆ ತತ್ತ್ವಜ್ಞಾನ, ಮನೋನಾಶ, ವಾಸನಾಕ್ಷಯ, ಎಂಬೀ ಮೂರೂ ಪರಸ್ಪರ ಕಾರ್ಯ ಕಾರಣ ಭಾವವನ್ನು ಹೊಂದಿ ಅತ್ಯಂತ ದುಸ್ಸಾಧ್ಯಗಳಾಗಿರುವುವು.

೧೫. ಆದುದರಿಂದ ಅಯ್ಯ ರಾಮ, ಮುಮುಕ್ಷುವಾದವನು ನಿತ್ಯಾನಿತ್ಯ ವಸ್ತು ವಿವೇಕ ಜ್ಞಾನಸಂಪನ್ನನಾಗಿರುತ್ತಾ, ಅನಿತ್ಯಗಳಾದ ಐಹಿಕಾಮುಷ್ಮಿಕ ಫಲೋಪಭೋಗಗಳಲ್ಲಿನ ಇಚ್ಛೆಯನ್ನು ಬಹು ದೂರದಲ್ಲಿ ಬಿಟ್ಟುಬಿಟ್ಟು, ದೃಢವಾದ ಪೌರುಷ ಪ್ರಯತ್ನದಿಂದ ಈ ಮೂರನ್ನೂ (ತತ್ತ್ವಜ್ಞಾನ, ವಾಸನಾ ಕ್ಷಯ, ಮನೋನಾಶ) ಆಶ್ರಯಿಸಿ ಸಾಧಿಸಬೇಕು.

೧೬. ಈ ಮೂರನ್ನೂ, ಸರ್ವಪ್ರಕಾರಗಳಿಂದಲೂ ಒಟ್ಟಿಗೆ ಏಕಕಾಲದಲ್ಲಿ ಪುನಃ ಪುನಃ ಚೆನ್ನಾಗಿ ಅಭ್ಯಾಸ ಮಾಡಿ ಸಾಧಿಸಿದ ಹೊರತು ಸಾವಿರಾರು ವರ್ಷಗಳು ಕಳೆದರೂ, ಎಂದಿಗೂ ಪರಮ ಪದ ಪ್ರಾಪ್ತಿಯುಂಟಾಗುವುದೇ ಇಲ್ಲ.

ವಾಸನಾಕ್ಷಯ ವಿಜ್ಞಾನ ಮನೋನಾಶಾ ಮಹಾಮತೇ ।
ಸಮಕಾಲಂ ಚಿರಾಭ್ಯಸ್ತಾ ಭವಂತಿ ಫಲದಾ ಮುನೇ ॥ ೧೭ ॥

ಏಕೈಕಶೋ ನಿಷೇವ್ಯಂತೇ ಯದ್ಯೇತೇ ಚಿರಮಪ್ಯಲಂ ।
ತನ್ನ ಸಿದ್ಧಿಂ ಪ್ರಯಚ್ಛಂತಿ ಮಂತ್ರಾಃ ಸಂಕೀಲಿತಾ ಇವ ॥ ೧೮ ॥

ಚಿರಕಾಲೋಪರಚಿತಾ ಅಪ್ಯೇತೇ ಸುಧಿಯಾಪಿ ಚ ।
ಏಕಶಃ ಪರಮಭ್ಯೇತುಂ ನ ಶಕ್ತಾಃ ಸೈನಿಕಾ ಇವ ॥ ೧೯ ॥

ಸಮ ಮುದ್ಯೋಗಮಾನೀತಾಃ ಸಂತ ಏತೇ ಹಿ ಧೀಮತಾ ।
ಸಂಸಾರಾಬ್ಧಿಂ ನಿಕೃಂತಂತಿ ಜಲಾನ್ಯದ್ರಿ ತಟಾನಿವ ॥ ೨೦ ॥

---

೧೭. ಅಯ್ಯ ಮನನಶೀಲನೂ, ಮಹಾ ಪ್ರಾಜ್ಞನೂ ಆದ ರಾಮ, ಈ ವಾಸನಾ ಕ್ಷಯ, ತತ್ತ್ವಜ್ಞಾನ, ಮನೋ ನಾಶಗಳು ಮೂರೂ ಒಟ್ಟಿಗೆ ಏಕ ಕಾಲದಲ್ಲಿ ಬಹು ಕಾಲ (ಸಾಧ್ಯವಾಗುವ ಪರ್ಯಂತ) ಚೆನ್ನಾಗಿ ದೃಢ ಪ್ರಯತ್ನ ದಿಂದ ಅಭ್ಯಾಸ ಮಾಡಲ್ಪಟ್ಟರೆ, ಅವು ನಿಸ್ಸಂಶಯವಾಗಿಯೂ ಫಲಪ್ರದ ಗಳಾಗುವುವು.

೧೮. ಹಾಗಲ್ಲದೆ, ಈ ಮೂರರಲ್ಲಿ ಒಂದೊಂದನ್ನೇ ಪ್ರತ್ಯೇಕವಾಗಿ ಅತಿ ದೀರ್ಘಕಾಲ ಅಭ್ಯಾಸ ಮಾಡಿದ್ದೇ ಆದರೆ, ಅವುಗಳು ಮಂತ್ರ ಶಾಸ್ತ್ರೋಕ್ತಗಳಾದ ಮೂರ್ಛಾದಿ ದೋಷಗಳಿಂದ ಪ್ರತಿಬಂಧಿತಗಳಾದ ಮಂತ್ರಗಳಂತೆ ಸಂಪೂರ್ಣವಾಗಿ ಸಿದ್ಧಿಯನ್ನು ಕೊಡುವುದಿಲ್ಲ.

೧೯. ಸೈನಿಕರು ಮಹಾ ವೀರರೂ, ಸ್ವಾಮಿ ಭಕ್ತರೂ ಆಗಿದ್ದರೂ, ಒಬ್ಬೊಬ್ಬರೇ (ಪರಸ್ಪರ ಸಹಾಯವಿಲ್ಲದೆ) ಹೇಗೆ ಶತ್ರುವನ್ನು ಎದುರಿಸುವುದಕ್ಕೆ ಶಕ್ತರಾಗುವುದಿಲ್ಲವೋ ಹಾಗೆ– ಈ ಮೂರನ್ನೂ ವಿವೇಕಿಯಾದವನು ಪ್ರತ್ಯೇಕವಾಗಿ ಚಿರಕಾಲ ಚೆನ್ನಾಗಿ ಅಭ್ಯಾಸಮಾಡಿ ವಶಪಡಿಸಿಕೊಂಡು ಒಂದೊಂದನ್ನೇ ಸ್ವಕಾರ್ಯ ದಲ್ಲಿ ನಿಯಮಿಸಿದಾಗ್ಯೂ ಕೂಡ, ಅವುಗಳು ಪರಸ್ಪರ ಸಹಾಯವಿಲ್ಲದೆ ಪರಮಾತ್ಮ ನನ್ನು ಎದುರುಗೊಳ್ಳುವುದಕ್ಕೆ (ಸಾಕ್ಷಾತ್ಕರಿಸುವುದಕ್ಕೆ) ಸಮರ್ಥಗಳಾಗುವುದಿಲ್ಲ.

೨೦. ಪರಮಪದವನ್ನು ಬಯಸುವ ಮಹಾ ಬುದ್ಧಿಶಾಲಿಯಾದ ಮನುಜನು ಈ ಮೂರನ್ನೂ ಒಟ್ಟಿಗೆ ಏಕ ಕಾಲದಲ್ಲಿ ಅಭ್ಯಾಸ ಮಾಡಿ ವಶಪಡಿಸಿಕೊಂಡು

ವಾಸನಾಕ್ಷಯ ವಿಜ್ಞಾನ ಮನೋನಾಶಾಃ ಪ್ರಯತ್ನತಃ ।
ಸಮಂ ಸೇವ್ಯಾಸ್ತ್ವಯ ಚಿರಂ ತೇನ ತಾತ ನ ಲಿಪ್ಯಸೇ ॥ ೨೧ ॥

ತ್ರಿಭಿರೇತೈಶ್ಚಿರಾಭ್ಯಸ್ತೈಃ ಹೃದಯ ಗ್ರಂಥಯೋ ದೃಢಾಃ ।
ನಿಃಶೇಷಮೇವ ತ್ರುಟ್ಯಂತಿ ಬಿಸಚ್ಛೇದಾದ್ಗುಣಾ ಇವ ॥ ೨೨ ॥

ಜನ್ಮಾಂತರ ಶತಾಭ್ಯಸ್ತಾ ರಾಮ ಸಂಸಾರ ಸಂಸ್ಥಿತಿಃ ।
ಸಾ ಚಿರಾಭ್ಯಾಸ ಯೋಗೇನ ವಿನಾ ನ ಕ್ಷೀಯತೇ ಕ್ವಚಿತ್ ॥ ೨೩ ॥

ಸ್ವಕಾರ್ಯದಲ್ಲಿ ನಿಯಮಿಸಿದ್ದೇ ಆದರೆ-ಆಗ, ಭೂಮಿಯ ಮೇಲೆ ಎಲ್ಲೆಲ್ಲಿಯೋ ಬಿದ್ದ ನೀರುಗಳು ಒಟ್ಟಿಗೆ ಕಲೆತು ಪ್ರವಾಹ ರೂಪವಾಗಿ ಹರಿಯುತ್ತಾ ಪರ್ವತಗಳ ಬುಡಗಳನ್ನೂ ಕೊರೆದುಬಿಡುವಂತೆ ಅವು ಮೂರೂ ಒಟ್ಟಿಗೆ ಅನ್ಯೋನ್ಯ ಸಹಾಯದಿಂದ ಸಂಸಾರ ಸಾಗರವನ್ನು ಸಂಪೂರ್ಣವಾಗಿ ಛೇದಿಸಿಬಿಡಲು ಸಮರ್ಥಗಳಾಗುವುವು.

೨೧. ಅಪ್ಪಾ ರಾಮ, ಅದುಕಾರಣ ನೀನು ಅತಿ ಪ್ರಯತ್ನ ಪೂರ್ವಕವಾಗಿ ಈ ವಾಸನಾ ಕ್ಷಯ, ತತ್ತ್ವಜ್ಞಾನ, ಮನೋನಾಶಗಳನ್ನು ಬಹು ದೀರ್ಘಕಾಲ (ಸಿದ್ಧಿ ಪರ್ಯಂತ) ಬಿಡದೆ ಅತ್ಯವಶ್ಯವಾಗಿ ಒಟ್ಟಿಗೆ ಸಂತತವಾಗಿ ಅಭ್ಯಾಸ ಮಾಡಲೇಬೇಕು. ಅದರಿಂದ ನೀನು ಸರ್ವದಾ ನಿರ್ಲಿಪ್ತವಾದ ಸ್ವಾತ್ಮ ಭಾವದಲ್ಲಿ ಪ್ರತಿಷ್ಠಿತನಾಗುವೆ.

೨೨. ಈ ಮೂರನ್ನೂ ಒಟ್ಟಿಗೆ ಅತಿ ದೀರ್ಘಕಾಲ ಚೆನ್ನಾಗಿ ಅಭ್ಯಾಸಮಾಡಿ ಕಾರ್ಯಕ್ಷಮವಾಗುವಂತೆ ಸಾಧಿಸಿಬಿಟ್ಟರೆ ಆಗ ತಾವರೆಯ ದಂಟನ್ನು ಮುರಿದರೆ ಅದರೊಳಗಿನ ತಂತುಗಳು ಹೇಗೆ ಸುಲಭವಾಗಿ ಬೇರೆ ಪ್ರಯತ್ನವಿಲ್ಲದೆಯೇ ಹೇಗೆ ಕತ್ತರಿಸಲ್ಪಟ್ಟು ತುಂಡು ತುಂಡಾಗಿ ಬಿಡುವುವೋ ಹಾಗೆ ಅಂತಃಕರಣದ ಮತ್ತು ಕಾಮ ಸಂಕಲ್ಪಾದಿಗಳ ಅದರ ಧರ್ಮಗಳ ತಾದಾತ್ಮ್ಯ ಸಂಸರ್ಗಾಧ್ಯಾಸಗಳೆಂಬ ಹೃದಯ ಗ್ರಂಥಿಗಳು ಅತಿ ಸುಲಭವಾಗಿ ಕತ್ತರಿಸಲ್ಪಡುವುವು.

೨೩. ಅಯ್ಯಾ ರಾಮ, ದ್ವೈತವಾಸನಾರೂಪವಾದ ಈ ಸಂಸಾರ ಸಂತತಿಯು ಸಾವಿರಾರು ಜನ್ಮಾಂತರಗಳಿಂದಲೂ ಅಭ್ಯಸ್ತವಾಗಿ ಬೆಂಬಿಡದೆ ಅನುಸರಿಸಿಕೊಂಡು ಬರುತ್ತಿರುವುದು. ಇಂತಹ ಸಂಸಾರ ಸಂತತಿಯನ್ನು ನಾಶಗೊಳಿಸಬೇಕಾದರೆ

ಗಚ್ಛತ್, ಶೃಣ್ವತ್, ಸ್ಪೃಶತ್, ಜಿಘ್ರತ್, ಶಿಷ್ಠತ್, ಜಾಗ್ರತ್, ಸ್ವಪತ್ ತಥಾ ।
ಶ್ರೇಯಸೇ ಪರಮಾಯಾಸ್ಯ ತ್ರಯಸ್ಯಾಭ್ಯಾಸವಾನ್ ಭವ ॥ ೨೪ ॥

ವಾಸನಾ ಸಂಪರಿತ್ಯಾಗಸಮಂ ಪ್ರಾಣ ನಿರೋಧನಂ ।
ವಿದುಸ್ತತ್ವವಿದಸ್ತಸ್ಮಾತ್ತದಪ್ಯೇವಂ ಸಮಾಹರೇತ್ ॥ ೨೫ ॥

ವಾಸನಾ ಸಂಪರಿತ್ಯಾಗಾಚ್ಚಿತ್ತಂ ಗಚ್ಛತ್ಯಚಿತ್ತತಾಂ ।
ಪ್ರಾಣಸ್ಪಂದ ನಿರೋಧಾಚ್ಚ ಯಥೇಚ್ಛಸಿ ತಥಾ ಕುರು ॥ ೨೬ ॥

ಪೂರ್ವೋಕ್ತ ವಾಸನಾಕ್ಷಯಾದಿ ತ್ರಿವಿಧ ಸಾಧನಗಳನ್ನು ಬಹು ದೀರ್ಘಕಾಲ ಒಟ್ಟಿಗೆ ಚೆನ್ನಾಗಿ ಅಭ್ಯಾಸಮಾಡಿ ವಶಪಡಿಸಿಕೊಳ್ಳಲೇಬೇಕು. ಅನ್ಯಥಾ ಎಂದಿಗೂ ಸಂಸಾರ ಸಂತತಿಯು ನಾಶಹೊಂದುವುದೇ ಇಲ್ಲ.

೨೪. ಆದು ಕಾರಣ, ನೀನು ನಡೆಯುವಾಗಲೂ, ಶಬ್ದಗಳನ್ನು ಕೇಳುವಾಗಲೂ, ಮುಟ್ಟುವಾಗಲೂ, ವಾಸನೆ ನೋಡುವಾಗಲೂ, ನಿಂತಿರುವಾಗಲೂ, ಎಚ್ಚರದಿಂದಿರುವಾಗಲೂ, ಮಲಗಿರುವಾಗಲೂ ಹೀಗೆ ಸರ್ವಾವಸ್ಥೆಗಳಲ್ಲಿಯೂ ಸರ್ವದಾ ಪರಮಪದ ಪ್ರಾಪ್ತಿರೂಪ ಪರಮ ಶ್ರೇಯಸ್ಸಿನ ಲಾಭಕ್ಕಾಗಿ ಈ ಮೂರನ್ನೂ ಒಟ್ಟಿಗೆ ಸಂತತವೂ ದೃಢವಾಗಿ ಅಭ್ಯಾಸ ಮಾಡುವವನಾಗು.

೨೫. ಪ್ರಾಣಾಯಾಮ ಪುರಸ್ಸರವಾಗಿ ಪ್ರಾಣಾದಿ ವಾಯುಗಳ ಸಂಚಾರವನ್ನು ನಿರೋಧಪಡಿಸುವಿಕೆಯು ವಾಸನಾ ತ್ಯಾಗಕ್ಕೆ ಸದೃಶವಾದ ಪರಮ ಪದ ಪ್ರಾಪ್ತ್ಯುಪಾಯವೆಂದು ತತ್ತ್ವಜ್ಞರು ತಿಳಿದಿರುವರು ಆದು ಕಾರಣ ಆ ಪೂರ್ವೋಕ್ತ ವಾಸನಾಕ್ಷಯಾದಿ ಮೂರು ಉಪಾಯಗಳ ಜೊತೆಯಲ್ಲಿ ನಾಲ್ಕನೆಯದಾದ ಈ ಪ್ರಾಣಾಯಾಮವನ್ನೂ ಅಭ್ಯಾಸ ಮಾಡಬೇಕು.

೨೬. ವಾಸನಾ ತ್ಯಾಗದಿಂದಲೂ ಮತ್ತು ಪ್ರಾಣಾದಿ ವಾಯುಗಳ ಚಲನವನ್ನು ನಿರೋಧಪಡಿಸುವುದರಿಂದಲೂ ಚಿತ್ತವು ಚಿತ್ತ ಭಾವವನ್ನು ಬಿಟ್ಟು (ಚೇತ್ಯೋನ್ಮುಖವಾಗದೆ) ಸ್ವಸ್ಥವಾಗಿದ್ದುಕೊಂಡು ತತ್ತ್ವಜ್ಞಾನ ಸಾಕ್ಷಾತ್ಕಾರಕ್ಕೆ ಅನುಕೂಲವಾಗಿ ಪರಿಣಮಿಸುವುದು. ಅಂದರೆ ಚಿಂತನಾದಿ ವ್ಯಾಪಾರಗಳನ್ನು ತೊರೆದು ನಾಶ ಹೊಂದುವುದು. ಆದುದರಿಂದ ನೀನು ನಿನ್ನ ಇಷ್ಟದಂತೆ ಯಾವ ಉಪಾಯವನ್ನಾದರೂ ಆಚರಿಸುವವನಾಗು.

ಪ್ರಾಣಾಯಾಮಚಿರಾಭ್ಯಾಸೈರ್ಯುಕ್ತ್ಯಾ ಚ ಗುರುದತ್ತಯಾ ।
ಆಸನಾಶನಯೋಗೇನ ಪ್ರಾಣಸ್ಪಂದೋ ನಿರುಧ್ಯತೇ　　　　|| ೨೭ ||

ಯಥಾ ಭೂತಾರ್ಥದರ್ಶಿತ್ವಾದ್ವಾಸನಾ ನ ಪ್ರವರ್ತತೇ ।
ಆದಾವಂತೇ ಚ ವಸ್ತೂನಾಮವಿಸಂವಾದಿ ಯತ್ಸ್ಥಿತಂ　　　　|| ೨೮ ||

ರೂಪಂ ತದ್ದರ್ಶನಂ ಜ್ಞಾನಂ ಕ್ಷೀಯತೇ ತೇನ ವಾಸನಾ ।
ನಿಃಸಂಗ ವ್ಯವಹಾರಿತ್ವಾದ್ಭವಭಾವನ ವರ್ಜನಾತ್　　　　|| ೨೯ ||

ಶರೀರನಾಶ ದರ್ಶಿತ್ವಾತ್ ವಾಸನಾ ನ ಪ್ರವರ್ತತೇ ।
ವಾಸನಾವಿಭವೇ ನಷ್ಟೇ ನ ಚಿತ್ತಂ ಸಂಪ್ರವರ್ತತೇ　　　　|| ೩೦ ||

---

೨೭. ಬಹು ದೀರ್ಘಕಾಲ ಪ್ರಾಣಾಯಾಮವನ್ನು ಅಭ್ಯಾಸ ಮಾಡುವುದರಿಂದಲೂ, ಯೋಗಾಭ್ಯಾಸ ನಿಪುಣರಾದ ಗುರುಗಳಿಂದ ಉಪದಿಷ್ಟವಾದ ಯುಕ್ತಿಯಿಂದಲೂ, ಸ್ವಸ್ತಿಕಾದಿ ಆಸನ ಜಯದಿಂದಲೂ, ಹಿತವೂ, ಮಿತವೂ, ಶುದ್ಧವೂ, ಸಂಸ್ಕೃತವೂ ಆದ ಆಹಾರವನ್ನು ತೆಗೆದುಕೊಳ್ಳುವುದರಿಂದಲೂ, ಯಮ ನಿಯಮಾದಿ ಯೋಗಗಳಿಂದಲೂ ಪ್ರಾಣಾದಿ ವಾಯುಗಳ ಚಲನವು ನಿರೋಧಿಸಲ್ಪಡುವುದು.

೨೮. ಪರಮಾರ್ಥವಾದ ಸನ್ಮಾತ್ರವು ಸಕಲ ವಿಧ ವಸ್ತುಗಳ ಆದಿಮಧ್ಯಾವಸಾನಗಳಲ್ಲಿ ಸರ್ವದಾ ಅವಿಸಂವಾದಿಯಾಗಿರುವುದು. ಅಂತಹ ಯಥಾ ಭೂತಾರ್ಥವಾದ ಸನ್ಮಾತ್ರದ ತತ್ತ್ವ ಸಾಕ್ಷಾತ್ಕಾರದಿಂದ ವಾಸನೆಯು ಪ್ರವರ್ತಿಸುವುದಿಲ್ಲ.

೨೯. ತತ್ತ್ವಜ್ಞಾನ ಪರಾಙ್ಮುಖರಾದ ಅಜ್ಞ ಜನರ ಸಂಗರಹಿತವಾಗಿಯೂ, ಸಂಕಲ್ಪರಹಿತವಾಗಿಯೂ, ಯದೃಚ್ಛಾಪ್ರಾಪ್ತಗಳಾದ ವ್ಯವಹಾರಗಳನ್ನು ಮಾತ್ರ ನಿರ್ವಹಿಸುವ ಶೀಲದಿಂದಲೂ, ಸಾಂಸಾರಿಕ ಮನೋರಥಗಳನ್ನು ವರ್ಜಿಸುವುದರಿಂದಲೂ, ರೂಪವೂ ಅದರ ದರ್ಶನಾತ್ಮಕವಾದ ಜ್ಞಾನವೂ ಕ್ಷಯಿಸುವುದು. ಅದರಿಂದ ವಾಸನೆಯೂ ಕ್ಷೀಣವಾಗಿ ಕ್ರಮೇಣ ನಾಶವನ್ನು ಹೊಂದುವುದು.

೩೦. ತನಗೆ ಆಶ್ರಯವಾದ ಶರೀರವು ನಾಶಹೊಂದಿದುದನ್ನು ಕಂಡು ವಾಸನೆಯು ಪ್ರವರ್ತಿಸುವುದಿಲ್ಲ. ವಾಸನೆಯೆಂಬ ತನ್ನ ಧನ ಸಂಚಯವು ನಾಶಹೊಂದಿದ ಕಾರಣ, ಲಜ್ಜೆಯಿಂದಲೋ ಎಂಬಂತೆ ಚಿತ್ತವೂ ಪ್ರವರ್ತಿಸುವುದಿಲ್ಲ.

ಸಂಶಾಂತೇ ಪವನಸ್ಪಂದೇ ಯಥಾ ಪಾಂಸುರ್ನಭಸ್ತಲೇ ।
ಯಃ ಪ್ರಾಣಪವನಸ್ಪಂದ ಶ್ಚಿತ್ತಸ್ಪಂದಃ ಸ ಏವ ಹಿ ।
ತಸ್ಮಾಜ್ಜಗತಿ ಜಾಯಂತೇ ಪಾಂಸವೋಽವಕರಾದಿವ ॥ ೩೧ ॥

ಪ್ರಾಣಸ್ಪಂದ ಜಯೇ ಯತ್ನಃ ಕರ್ತವ್ಯೋ ಧೀಮತೋಚ್ಚಕೈಃ ।
ಉಪವಿಶ್ಯೋಪವಿಶ್ಯೈಕ ಚಿತ್ತಕೇನ ಮುಹುರ್ಮುಹುಃ ॥ ೩೨ ॥

ಅಥವೈನಂ ಕ್ರಮಂ ತ್ಯಕ್ತ್ವಾ ಚಿತ್ತಾಕ್ರಮಣಮೇವ ಚೇತ್ ।
ರೋಚತೇ ತತ್ತದಾಪ್ನೋಷಿ ಕಾಲೇನ ಬಹುನಾ ಪದಂ ॥ ೩೩ ॥

---

೩೧. ಧೂಳಿಯ ಚಲನವು ವಾಯು ಚಲನಾಧೀನವಾಗಿರುವಂತೆ ಚಿತ್ತ ಸ್ಪಂದವೂ ಕೂಡ ಪ್ರಾಣಾದಿ ವಾಯು ಚಲನಾಧೀನವಾದುದು. ವಾಯು ಚಲನವಿಲ್ಲದಿರುವಾಗ ಅಂತರಿಕ್ಷದಲ್ಲಿ ಧೂಳಿಯು ಚಲಿಸದೆ ಇರುವುದು. ಅಂತೆಯೇ ಪ್ರಾಣಾದಿ ವಾಯುಗಳ ಚಲನವು ನಿರುದ್ಧವಾದಾಗ ಚಿತ್ತ ಚಲನವೂ ನಿರುದ್ಧವಾಗಿ ಬಿಡುವುದು. ಏಕೆಂದರೆ ಪ್ರಾಣವಾಯುವಿನ ಸ್ಪಂದವೇ ನಿಜವಾಗಿಯೂ ಚಿತ್ತ ಸ್ಪಂದವೆನ್ನಿಸುವುದು. ಆದುದರಿಂದ ಧೂಳಿಯ ರಾಶಿಯಿಂದ ಧೂಳಿಯು ಉದಯಿಸುವಂತೆ ಪ್ರಾಣಸ್ಪಂದದಿಂದ ಚಿತ್ತ ಸ್ಪಂದವು ಉದಯಿಸುವುದೆಂದು ತಿಳಿ.

೩೨. ಆದು ಕಾರಣ, ವಿವೇಕಿಯಾದ ಸಾಧಕನು ಪ್ರಾಣಾದಿ ವಾಯುಗಳ ಸ್ಪಂದವನ್ನು ತಡೆದು ಜಯವನ್ನು ಪಡೆಯುವ ವಿಷಯದಲ್ಲಿ ಸ್ವಸ್ತಿಕಾದ್ಯಾಸನ ವಶೀಕರಣ ಪುರಸ್ಸರವಾಗಿ ಚಿತ್ತೈಕಾಗ್ರತೆಯಿಂದ ಪುನಃ ಪುನಃ ವಿಶೇಷವಾಗಿ ಹೆಚ್ಚು ಪ್ರಯತ್ನಗಳನ್ನು ಮಾಡಬೇಕು. (ಇದು ಹಠಯೋಗವೆಂದು ತಿಳಿಯಬೇಕು.

೩೩. ಅಥವಾ, ರಾಮ, ಈ ಕ್ರಮವನ್ನು ಬಿಟ್ಟು ಬೇರೆ ರಾಜಯೋಗಾದಿ ಕ್ರಮದಿಂದ ನೀನು ಮನೋನಿಗ್ರಹವನ್ನು ಮಾಡಲು ಬಯಸುವೆಯಾದರೆ, ಆಗ ಅದರಿಂದ ಬಹು ಕಾಲದ ಅನಂತರ ಆ ಪರಮ ಪದವನ್ನು ಹೊಂದುವವನಾಗುವೆ.

ನ ಶಕ್ಯತೇ ಮನೋ ಜೇತುಂ ವಿನಾ ಯುಕ್ತಿಮನಿಂದಿತಾಂ ।
ಅಂಕುಶೇನ ವಿನಾ ಮತ್ತಂ ಯಥಾ ದುಷ್ಟಂ ಮತಂಗಜಂ ॥ ೩೪ ॥

ಅಧ್ಯಾತ್ಮವಿದ್ಯಾಧಿಗಮಃ ಸಾಧುಸಂಗಮ ಏವ ಚ ।
ವಾಸನಾ ಸಂಪರಿತ್ಯಾಗಃ ಪ್ರಾಣಸ್ಪಂದ ನಿರೋಧನಂ ॥ ೩೫ ॥

ಏತಾಸ್ತಾ ಯುಕ್ತಯಃ ಪುಷ್ಟಾಃ ಸಂತಿ ಚಿತ್ತಜಯೇ ಕಿಲ ।
ಯಾಭಿಸ್ತಜ್ಜೀಯತೇ ಕ್ಷಿಪ್ರಂ ಧಾರಾಭಿರಿವ ಭೂರಜಃ ॥ ೩೬ ॥

ಸತೀಷು ಯುಕ್ತಿಷ್ವೇತಾಸು ಹಠಾನ್ನಿಯಮಯಂತಿ ಯೇ ।
ಚೇತಸ್ತೇ ದೀಪ ಮುತ್ಸೃಜ್ಯ ವಿನಿಘ್ನಂತಿ ತಮೋಽಂಜನೈಃ ॥ ೩೭ ॥

---

೩೪. ಅಂಕುಶದ ಸಹಾಯವಿಲ್ಲದೆ ಮದಿಸಿದ ದುಷ್ಟ ಗಜವನ್ನು ವಶಪಡಿಸಿಕೊಳ್ಳುವಿಕೆಯು ಹೇಗೆ ಅಸಾಧ್ಯವೋ ಹಾಗೆ ಶಾಸ್ತ್ರ ವಿಹಿತವಾಗಿ ಅತಿ ಪ್ರಶಸ್ತವಾದ ಅಧ್ಯಾತ್ಮವಿದ್ಯಾ ಸಾಧುಸಂಗ ಸಹಿತವಾದ ದ್ವಿವಿಧ ರಾಜಯೋಗ ಸಾಧನವಿಲ್ಲದೆ ದುರ್ದಾಂತವಾದ ಮನಸ್ಸನ್ನು ಜಯಿಸಿ ವಶಪಡಿಸಿಕೊಳುವುದು ಅಸಾಧ್ಯವು.

೩೫-೩೬. ಅಧ್ಯಾತ್ಮ ಜ್ಞಾನ ಪ್ರಾಪ್ತಿಯೂ, ಸಾಧು ಸಂಗವೂ, ವಾಸನಾ ತ್ಯಾಗವೂ, ಪ್ರಾಣ ವಾಯುಸ್ಪಂದ ನಿರೋಧವೂ, ಇವುಗಳೇ ಚಿತ್ತ ಜಯವನ್ನು ಸಾಧಿಸಿಕೊಡುವ ಪುಷ್ಕಲವಾದ ಉಪಾಯಗಳಾಗಿರುವುವು. ವರ್ಷಧಾರೆಗಳಿಂದ ಭೂಮಿಯ ಮೇಲಿರುವ ಧೂಳಿಯು ನಿಗೃಹೀತವಾಗಿ ಅಡಗುವಂತೆ, ಚಿತ್ತವು ಈ ಯುಕ್ತಿಗಳಿಂದ ನಿಗ್ರಹಿಸಲ್ಪಡುವುದು.

೩೭. ಇಂತಹ ಸುಕರವಾದ (ರಾಜಯೋಗ) ಯುಕ್ತಿಗಳು ಶಾಸ್ತ್ರವಿಹಿತಗಳಾಗಿದ್ದಾಗ್ಯೂ ಕೂಡ, ಅವುಗಳನ್ನು ಅನಾದರಿಸಿ ಯಾರು ಹಠಯೋಗದಿಂದಲೇನೇ ತಮ್ಮ ಮನಸ್ಸನ್ನು ನಿಗ್ರಹ ಮಾಡಲು ಬಯಸುವರೋ- ಅವರು ನಿಜವಾಗಿಯೂ ಉರಿಯುತ್ತಿರುವ ದೀಪವನ್ನು ಪರಿತ್ಯಜಿಸಿ ಅಂಜನ (ಕಾಡಿಗೆ) ಗಳಿಂದ ಅಂಧಕಾರವನ್ನು ನಿವಾರಣೆ ಮಾಡಿಕೊಳ್ಳಲು ಪ್ರಯತ್ನಿಸುವ ಮೂಢರಂತೆ ಕೃತಕೃತ್ಯರಾಗದೆ ವ್ಯರ್ಥವಾಗಿ ಶ್ರಮಿಸುವರು.

ವಿಮೂಢಾಃ ಕರ್ತುಮುದ್ಯುಕ್ತಾ ಯೇ ಹಠಾಚ್ಚೇತಸೋ ಜಯಂ ।
ತೇ ನಿಬಧ್ನಂತಿ ನಾಗೇಂದ್ರಮುತ್ತಮಂ ಬಿಸತಂತುಭಿಃ ॥ ೩೮ ॥

ಚಿತ್ತಂ ಚಿತ್ತಸ್ಯ ವಾಽದೂರಂ ಸಂಸ್ಥಿತಂ ಸ್ವಶರೀರಕಂ ।
ಸಾಧಯಂತಿ ಸಮುತ್ಸೃಜ್ಯ ಯುಕ್ತಿಂ ಯೇ ತಾನ್ ಹಠಾನ್ ವಿದುಃ ॥ ೩೯ ॥

ಭಯಾದ್ಭಯ ಮುಪಾಯಾಂತಿ ಕ್ಲೇಶಾತ್ಕ್ಲೇಶಂ ವ್ರಜಂತಿ ತೇ ।
ನಿರ್ವೃತಿಂ ನಾಧಿಗಚ್ಛಂತಿ ದುರ್ಭಗಾ ಇವ ಜಂತವಃ ॥ ೪೦ ॥

ಭ್ರಮಂತಿ ಗಿರಿಕೂಟೇಷು ಫಲಪಲ್ಲವ ಭೋಜನಾಃ ।
ಮುಗ್ಧ ಮುಗ್ಧಧಿಯೋ ಭೀತಾ ಮರಾಕಾ ಹರಿಣಾ ಇವ ॥ ೪೧ ॥

---

೩೮. ಮತ್ತು ಯಾರು ಅತ್ಯಂತ ವಿಮೋಹಿತರಾಗಿ ಸುಕರವಾದ ರಾಜ ಯೋಗವನ್ನು ಬಿಟ್ಟು, ಹಠಯೋಗದಿಂದಲೇ ತಮ್ಮ ಮನಸ್ಸನ್ನು ಜಯಿಸುವ ಕಾರ್ಯದಲ್ಲಿ ತೊಡಗುವರೋ, ಅವರು ಉನ್ಮತ್ತವಾದ ವನ್ಯ ಗಜರಾಜನನ್ನು ತಾವರೆ ದಂಟಿನ ಅತಿ ಸೂಕ್ಷ್ಮವಾದ ತಂತುಗಳಿಂದ ಕಟ್ಟಿಹಾಕಲು ಬಯಸುವ ಹುಚ್ಚರೇ ಸರಿ.

೩೯. ಪೂರ್ವೋಕ್ತ ಚತುರ್ವಿಧ ಯುಕ್ತಿಗಳನ್ನು ಉಪೇಕ್ಷಿಸಿ ಬಿಟ್ಟುಬಿಟ್ಟು ಪ್ರಕಾರಾಂತರದಿಂದ ಯಾರು ತಮ್ಮ ಚಿತ್ತವನ್ನೂ, ಚಿತ್ತ ಸನ್ನಿಹಿತವಾದ ಶರೀರ ವನ್ನೂ ಸ್ಥಿರಗೊಳಿಸುವುದಕ್ಕೆ ಪ್ರಯತ್ನಿಸುವರೋ, ಅಂತಹ ಪುರುಷರನ್ನು ವ್ಯರ್ಥವಾಗಿ ಶ್ರಮಿಸುವ ಹಠಯೋಗಿಗಳೆಂಬುದಾಗಿ ಸಂಪ್ರದಾಯಜ್ಞರು ಭಾವಿಸುವರು.

೪೦. ಇಂತಹ ಹಠಯೋಗಿಗಳು ಅಡಿಗಡಿಗೆ ಒಂದು ಭಯದಿಂದ ಮತ್ತೊಂದು ಭಯವನ್ನೂ, ಕ್ಲೇಶದಿಂದ ಕ್ಲೇಶವನ್ನೂ ಹೊಂದುವರು. ಮತ್ತು ಮಹಾ ಪಾಪಿಗಳಾದ ಕ್ಷುದ್ರ ಜಂತುಗಳಂತೆ ಕೊನೆಗೆ ಎಂದಿಗೂ, ಎಲ್ಲಿಯೂ ಸರಿಯಾಗಿ ಚಿತ್ತ ಸ್ಥೈರ್ಯವನ್ನೂ, ವಿಶ್ರಾಂತಿಯನ್ನೂ ಹೊಂದುವುದೇ ಇಲ್ಲ.

೪೧. ಅಂತಹವರು ಅತ್ಯಂತ ವಿಮೂಢ ಬುದ್ಧಿಯುಳ್ಳವರಾಗಿ, ಹಣ್ಣು ಹಂಪಲುಗಳನ್ನೂ, ಚಿಗುರೆಲೆಗಳನ್ನೂ ತಿನ್ನುತ್ತಾ, ಸದಾ ಭಯವಿಹ್ವಲರಾಗಿ,

ಮತಿರಾಲೂನ ಶೀರ್ಣಾ ಗೀ ತದೀಯಾ ಪೇಲನಾಂಗಿಕಾ ।
ನ ಕ್ವಚಿದ್ಯಾತಿ ವಿಶ್ವಾಸಂ ವೃಗೀ ಗ್ರಾಮಗತಾ ಯಥಾ　　　　　　　　|| ೪೨ ||

ಕಲ್ಲೋಲಕಲಿತ ಚೇತಸ್ತೇಷಾಂ ಜಲ ಇವಾಹಿತೇ ।
ಪ್ರೋಹ್ಯತೇ ಪ್ರಪತದ್ದೂರಂ ತೃಣಂ ಗಿರಿನದೀಷ್ವಿವ　　　　　　　　|| ೪೩ ||

ಕಾಲಂ ಯಜ್ಞ ತಪೋದಾನತೀರ್ಥ ದೇವಾರ್ಚನಭ್ರಮೈಃ ।
ಚಿರಮಾಧಿಶತೋಪೇತಾಃ ಕ್ಷಪಯಂತಿ ವೃಗಾ ಇವ　　　　　　　　|| ೪೪ ||

ಭಯಗ್ರಸ್ತಗಳಾದ ಕ್ಷುದ್ರ ಜಿಂಕೆಗಳಂತೆ ಪರ್ವತಗಳ ಶಿಖರಗಳಲ್ಲಿ ಅವಿಶ್ರಾಂತಗಳಾಗಿ ತೊಳಲುವರು.

೪೨. ಮತ್ತು ಅವರ ಬುದ್ಧಿಯೂ ಕೂಡ ಕಾಡಿನಿಂದ ಹಿಡಿದು ಊರಿಗೆ ತರಲ್ಪಟ್ಟ ಅತಿ ಸೂಕ್ಷ್ಮವಾದ ಅಂಗಗಳುಳ್ಳ ಹೆಣ್ಣು ಜಿಂಕೆಯಂತೆ ನೂರಾರು ತುಂಡುಗಳಾಗಿ ಕತ್ತರಿಸಲ್ಪಟ್ಟು ಜರ್ಜರಿತವಾಗಿಯೂ, ಬಲ್ಬಜವಾಗಿಯೂ ಸರ್ವದಾ ಸರ್ವತ್ರ ವಿಶ್ವಾಸವನ್ನು (ನಂಬುಗೆ) ಪಡೆಯದೆ ಶಂಕೆಗಳೊಳಗಾಗಿ ಚಕಿತವಾಗಿರುವುದು.

೪೩. ದೊಡ್ಡ ದೊಡ್ಡ ಅಲೆಗಳಂತೆ ಮೇಲಿಂದ ಮೇಲೆ ಏಳುತ್ತಲಿರುವ ವಿವಿಧ ಸಂಕಲ್ಪ ವಿಕಲ್ಪಗಳಿಂದ ವಿಕ್ಷಿಪ್ತವಾದ ಆ ಹಠಯೋಗಿಗಳ ಮನಸ್ಸು ಬಾಹ್ಯ ವಿಷಯಗಳನ್ನು ಹುಡುಕಿಕೊಂಡು ಅವುಗಳ ಕಡೆಗೆ ಓಡುವ ಸ್ವಭಾವವುಳ್ಳದ್ದಾಗಿ ಗಿರಿ ನದಿಗಳ ಜಲ ಪ್ರವಾಹ ಭರದಲ್ಲಿ ಬಿದ್ದು ಸಿಕ್ಕಿಕೊಂಡಿರುವ ಹುಲ್ಲು ಕಡ್ಡಿಯು ಬಹುದೂರ ಕೊಚ್ಚಿಕೊಂಡು ಹೋಗುವಂತೆ ಭಯಸ್ಥಾನಗಳಲ್ಲಿ ರಾಗ ದ್ವೇಷಾದಿಗಳಿಗೆ ಸಿಕ್ಕಿಹಾಕಿಕೊಂಡು ಬಲಾತ್ಕಾರವಾಗಿ ಬಹು ದೂರಕ್ಕೆ ಕೊಚ್ಚಿಕೊಂಡು ಹೋಗಿ ಕೊನೆಗೆ ನಿರ್ನಾಮವಾಗುವುದು.

೪೪. ಮತ್ತು ಅಂತಹ ಹಠಯೋಗಿಗಳು ನಿಶ್ಚಿತವಾಗಿ ನಿರತಿಶಯವಾದ ಮೋಕ್ಷ ಸಾಮ್ರಾಜ್ಯ ಸುಖ ರೂಪ ಫಲವನ್ನು ಕೊಡುವ ಧರ್ಮ ಮೇಘವೆಂಬ ಸಮಾಧ್ಯಭ್ಯಾಸವನ್ನು ಪರಿತ್ಯಜಿಸಿ ಬಹು ಕ್ಲೇಶ ಸಾಧ್ಯವೂ, ಅಲ್ಪಫಲಕವೂ ಆದ ಯಜ್ಞಾದಿ ಕರ್ಮಾನುಷ್ಠಾನ, ದಾನ ಮಾಡುವುದು, ತಪಶ್ಚರ್ಯೆ, ತೀರ್ಥಯಾತ್ರೆ, ದೇವತಾರಾಧನೆ ಮುಂತಾದ ಭ್ರಾಂತಿ ಮಯವಾದ ವ್ಯರ್ಥ ಸಂಕಲ್ಪಗಳಿಂದ ಬಹು ಕಾಲ ಅನೇಕಾನೇಕ ಮಾನಸಿಕ ವ್ಯಥೆಗಳಿಗೆ ಸಿಕ್ಕಿ ನರಳುತ್ತಾ, ಕಾಡು ವೃಗಗಳಂತೆ ತಮ್ಮ ಜೀವಿತ ಕಾಲವನ್ನು ವ್ಯರ್ಥವಾಗಿ ಕಳೆಯುವರು,

ಆತ್ಮತತ್ತ್ವಂ ವಿಧಿವಶಾತ್ಕದಾಚಿತ್ಕೇಚಿದೇವ ತೇ ।
ದುಃಖದೋಷ ಶತಾದಗ್ಧಾ ವಿಂದಂತಿ ನ ವಿದಂತಿ ವಾ ॥ ೪೫ ॥

ಆಗಮಾಪಾಯಿನೋಽನಿತ್ಯಾ ನರಕ ಸ್ವರ್ಗಮಾನುಷೈಃ ।
ಪಾತೋತ್ಪಾತಕರಾಕಾರಾಃ ಕ್ಷೀಯಂತೇ ಕಂದುಕಾ ಇವ ॥ ೪೬ ॥

ಭಯಗ್ರಸ್ತಗಳಾದ ಕ್ಷುದ್ರ ಜಿಂಕೆಗಳಂತೆ ಪರ್ವತಗಳ ಶಿಖರಗಳಲ್ಲಿ ಅವಿಶ್ರಾಂತವಾಗಿ ತೊಳಲುವರು.

[ಯಜ್ಞ, ದಾನ, ತಪಸ್ಸು, ಮುಂತಾದ ಧರ್ಮಗಳು ಸರ್ವಥಾ ಉಪೇಕ್ಷಣೀಯವಾದವುಗಳು ಎಂಬ ತಾತ್ಪರ್ಯದಿಂದ ಶ್ರೀ ವಸಿಷ್ಠರು ಇಲ್ಲಿ ಶ್ರೀರಾಮನಿಗೆ ಹೀಗೆ ಉಪದೇಶ ಮಾಡಿಲ್ಲ. "ಯಜ್ಞೋದಾನಂ ತಪಶ್ಚೈವ ಪಾವನಾನಿ ಮನೀಷಿಣಾಂ" ಎಂದು ಭಗವದ್ಗೀತೆಯಲ್ಲಿ ಭಗವಂತನು ಉಪದೇಶಿಸಿರುವನು. ಚಿತ್ತಶುದ್ಧಿಗೋಸ್ಕರ ಪರಮೇಶ್ವರ ಪ್ರೀತ್ಯರ್ಥವಾಗಿ ಯಜ್ಞಾದಿ ನಿತ್ಯನೈಮಿತ್ತಿಕ ವಿಹಿತ ಕರ್ಮಗಳನ್ನು ಯಥಾ ವಿಧಿಯಾಗಿ ಆಚರಿಸಲೇಬೇಕು. ಆದರೆ ಅವು ನೇರವಾಗಿ ಮೋಕ್ಷ ಫಲವನ್ನು ಕೊಡತಕ್ಕವುಗಳಲ್ಲ ಮತ್ತು ಆಯಾಸ ಬಹುಳ ಸಾಧ್ಯವಾದವು. ರಾಜಯೋಗದ ಮೂಲಕ ಸಮಾಧ್ಯಭ್ಯಾಸವಾದರೋ ಅಲ್ಪ ಕ್ಲೇಶದಿಂದ ನಿರತಿಶಯ ಮೋಕ್ಷರೂಪ ಫಲವನ್ನು ನಿಶ್ಚಿತವಾಗಿ ಕೊಡತಕ್ಕುದು. ಎಂಬ ಇದಿಷ್ಟೇ ಅಭಿಪ್ರಾಯದಿಂದ ಪ್ರಕೃತಾರ್ಥದ ಪ್ರಶಂಸೆಗಾಗಿ ಹೇಳಿರುವ ಮಾತು ಇದು. ಎಂದು ವಾಚಕರು ತಿಳಿದು ನೆನಪಿನಲ್ಲಿಡಬೇಕು.]

೪೫. ಮತ್ತು ಪೂರ್ವೋಕ್ತ ಹಠಯೋಗಿಗಳು ನಿರಂತರವೂ ಅನೇಕಾನೇಕ ದುಃಖಗಳಿಂದಲೂ, ರಾಗ ದ್ವೇಷಾದಿ ದೋಷಗಳಿಂದಲೂ ಪೀಡಿತರಾಗಿರುವರು. ಅವರಲ್ಲಿ ಯಾರೋ ಕೆಲವರು ಮಾತ್ರ ಯಾವುದೋ ಒಂದು ಕಾಲದಲ್ಲಿ ಜನ್ಮಾಂತರೀಯ ಸುಕೃತ ವಿಶೇಷ ಪರಿಪಾಕದಿಂದ ಆತ್ಮ ತತ್ತ್ವವನ್ನು ಪರಮಾರ್ಥವಾಗಿ ಒಂದುವೇಳೆ ತಿಳಿಯಲೂಬಹುದು ಅಥವಾ ತಿಳಿದುಕೊಳ್ಳದೆಯೇ ಇರಬಹುದು. ಹೇಳಲಿಕ್ಕಾಗುವುದಿಲ್ಲ.

೪೬. ಮತ್ತು ಆ ಹಠಯೋಗಿಗಳು ವಿವಿಧಗಳಾದ ಲಾಭನಷ್ಟಗಳಿಗೆ ಸಿಕ್ಕಿಬಿದ್ದು ಯಾವೊಂದು ಸ್ಥಳದಲ್ಲಿಯೂ ನೆಲೆಯಾಗಿ ನಿಲ್ಲದೆ ಅವ್ಯವಸ್ಥಿತಚಿತ್ತರಾಗಿ ನರಕ,

ಇತೋ ಗಚ್ಛಂತಿ ನರಕಂ ತತಃ ಸ್ವರ್ಗಮಿಹೈವ ಚ ।
ಆವೃತ್ತಿಭಿರ್ನಿ ವರ್ತಂತೇ ಸರಸೀವ ತರಂಗಕಾಃ ॥ ೪೭ ॥

ತಸ್ಮಾಚ್ಛೈತ್ಯತಾಂ ಪರಿತ್ಯಜ್ಯ ದುರ್ದೃಷ್ಟಿಂ ರಘುನಂದನ ।
ಶುದ್ಧಾಂ ಸಂವಿದಮಾಶ್ರಿತ್ಯ ವೀತರಾಗಃ ಸ್ಥಿರೋ ಭವ ॥ ೪೮ ॥

ಜ್ಞಾನವಾನೇವ ಸುಖವಾನ್ ಜ್ಞಾನವಾನೇವ ಜೀವತಿ ।
ಜ್ಞಾನವಾನೇವ ಬಲವಾಂಸ್ತಸ್ಮಾತ್ ಜ್ಞಾನಮಯೋ ಭವ ॥ ೪೯ ॥

ಸ್ವರ್ಗ, ಮನುಷ್ಯಲೋಕ ಮುಂತಾದ ಲೋಕಗಳಲ್ಲಿ ವಿವಿಧ ಭೋಗಾನುಭವ ನಿಮಿತ್ತದಿಂದ ಚೆಂಡುಗಳಂತೆ ಒಂದು ಸಲ ಮೇಲಕ್ಕೆ ಹಾರುತ್ತಲೂ ಕೂಡಲೆ ಕೆಳಗೆ ಬೀಳುತ್ತಲೂ ಇರುವ ದೇಹಬೇಧಗಳುಳ್ಳವರಾಗಿ ಮರಣಾದಿಗಳಿಂದ ಸದಾ ಪೀಡಿಸಲ್ಪಡುವರು.

೪೭. ಅವರು ಒಂದು ಸಲ ಪಾಪಕರ್ಮಗಳ ಫಲಾನುಭವಕೋಸ್ಕರ ಇಲ್ಲಿಂದ ನರಕಕ್ಕೆ ಹೋಗುವರು. ಅನಂತರ ಮತ್ತೊಂದುಸಲ ತಮ್ಮ ಪುಣ್ಯಕರ್ಮಗಳ ಫಲವಾಗಿ ಅಲ್ಲಿಂದ ಸ್ವರ್ಗಕ್ಕೆ ತೆರಳುವರು. ಸ್ವರ್ಗಸುಖವನ್ನು ಅನುಭವಿಸಿದ ಬಳಿಕ, ಪುಣ್ಯವು ಕ್ಷೀಣವಾಗಲು ಅಲ್ಲಿಂದ ಪುನಃ ಅವರವರ ಕರ್ಮಸಂಸ್ಕಾರಾನುಸಾರವಾಗಿ ಈ ಭೂಲೋಕದಲ್ಲಿಯೇ ವಿವಿಧ ಜನ್ಮಗಳನ್ನು ಹೊಂದುತ್ತಾ, ಸರೋವರದಲ್ಲಿನ ಅಲೆಗಳು ಗಾಳಿಯ ಭರದಿಂದ ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ಓಡಾಡುವಂತೆಯೇ ನಾನಾ ಜನ್ಮಾವೃತ್ತಿಗಳಿಂದ ಸರಿದಾಡುವರು.

೪೮. ಅಯ್ಯ ರಘುನಂದನ, ಆದುಕಾರಣ ನೀನು ಈ ಹಠಯೋಗಾತ್ಮಕವಾದ ಕುದೃಷ್ಟಿಯನ್ನು ಬಿಟ್ಟು ಶುದ್ಧವಾದ ಆತ್ಮತತ್ವಜ್ಞಾನವನ್ನು ಆಶ್ರಯಿಸಿ (ತಿಳಿದು) ರಾಗದ್ವೇಷಾದಿ ದೋಷರಹಿತನಾಗಿ ಸ್ಥೈರ್ಯದಿಂದಿರು.

೪೯. ಸ್ವಾತ್ಮತತ್ತ್ವಜ್ಞಾನಿಯೇ ಸರ್ವದಾ ಸುಖಿಯಾಗಿರುವನು. ಜ್ಞಾನಿಯು ಮಾತ್ರವೇ ನಿಜವಾಗಿ ಜೀವಿಸಿರತಕ್ಕವನು. (ಜ್ಞಾನಿಯ ಜೀವನವು ಮಾತ್ರವೇ ಸಾರ್ಥಕವು.) ಆತ್ಮಜ್ಞಾನಿಯೇ ಮಹಾ ಬಲಿಷ್ಠನು. ಆದುದರಿಂದ ನೀನು ಸರ್ವಥಾ ನಿರಂತರವೂ ಜ್ಞಾನಮಯನಾಗಿರು.

ಸಂವೇದ್ಯವರ್ಜಿತ ಮನುತ್ತಮವಮಾದ್ಯಮೇಕಂ ।
ಸಂವಿತ್ಪದಂ ವಿಕಲನಂ ಕಲಯನ್ಮಹಾತ್ಮನ್ ।
ಹೃದ್ಯೇವ ತಿಷ್ಠ ಕಲನಾರಹಿತಃ ಕ್ರಿಯಾಂ ತು ।
ಕುರ್ವನ್ನಕರ್ತೃ ಪದಮೇತ್ಯ ಶಮೋದಿತಶ್ರೀಃ ॥ ೫೦ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮಪ್ರಕರಣೇ "ಸಂಸ್ಕೃತಿ ನಿರಾಕರಣಕ್ರಮ ಯೋಗೋಪದೇಶೋ" ನಾಮ ದ್ವಿನವತಿತಮಃ ಸರ್ಗಃ

---

೫೦. ಅಯ್ಯ, ಮಹಾತ್ಮ, ನಿರ್ವಿಕಲ್ಪವೂ, ನಿರ್ವಿಕಾರವೂ, ನಿರ್ವಾಸನವೂ, ಉತ್ತಮೋತ್ತಮವೂ, ನಿಷ್ಪ್ರಪಂಚವೂ, ಆಗಿರುವ ಚಿದ್ರೂಪ ಆತ್ಮತತ್ವವನ್ನು ನಿರಂತರವೂ ನಿನ್ನ ಹೃದಯದಲ್ಲಿಯೇ ಧ್ಯಾನಮಾಡುತ್ತಿರು. ನಿನ್ನ ಮನಸ್ಸನ್ನು ಬಾಹ್ಯದೃಶ್ಯಗಳಲ್ಲಿ ಅಭಿಮುಖವಾಗಿ ಓಡಿಸದೆ ಸರ್ವತಃ ನಿಗ್ರಹಮಾಡಿ ಅದನ್ನು ಹೃದಯಾಕಾಶಮಧ್ಯವರ್ತಿಯಾದ 'ಪರಬ್ರಹ್ಮನಲ್ಲಿಯೇ ಸ್ಥಿರವಾಗಿರುವಂತೆ ನಿಲ್ಲಿಸು. ಸಮಾಧಿಯಿಂದ ಬಹಿರ್ಮುಖನಾದ ಕಾಲದಲ್ಲಿ (ವ್ಯುತ್ಥಾನಕಾಲ) ಯಾದರೋ ಯಥೋಚಿತವಾದ ಕ್ರಿಯೆಗಳನ್ನು ಮಾಡುತ್ತಿರುವವನಾದರೂ ಅವುಗಳಲ್ಲಿ ಆಸಕ್ತಿಯನ್ನು ತ್ಯಜಿಸಿ ಫಲಾಫಲಗಳಲ್ಲಿ ಅಭಿಮಾನ ರಾಹಿತ್ಯಪೂರ್ವಕ ಪ್ರಶಾಂತನಾಗಿರುವುದರಿಂದ ಜೀವನ್ಮುಕ್ತಗುಣಸಂಪನ್ನನಾಗಿ ಕರ್ತೃತ್ವಾದಿ ಸಕಲ ಧರ್ಮವಿವರ್ಜಿತವಾದ ನಿತ್ಯಮುಕ್ತಾತ್ಮಸ್ವರೂಪದಲ್ಲಿರುವವನಾಗು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಸಂಸೃತಿ ನಿರಾಕರಣಕ್ರಮ ಯೋಗೋಪದೇಶ" ವೆಂಬ ತೊಂಭತ್ತೆರಡನೆಯ ಸರ್ಗವು

ತ್ರಿನವತಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಮನಾಗಪಿ ವಿಚಾರೇಣ ಚೇತಸಃ ಸ್ವಸ್ಯ ನಿಗ್ರಹಃ ।
ಮನಾಗಪಿ ಕೃತೋ ಯೇನ ತೇನಾಪ್ತಂ ಜನ್ಮನಃ ಫಲಂ ॥ ೧ ॥

ವಿಚಾರಕಣಿಕಾ ಯ್ಯೈಷಾ ಹೃದಿ ಸ್ಫುರತಿ ಪೇಲವಾ ।
ಏಷೈವಾಭ್ಯಾಸಯೋಗೇನ ಪ್ರಯಾತಿ ಶತಶಾಖತಾಂ ॥ ೨ ॥

ಕಿಂಚಿತ್ಪ್ರೌಢ ವಿಚಾರಂ ತು ನರಂ ವೈರಾಗ್ಯ ಪೂರ್ವಕಂ ।
ಸಂಶ್ರಯಂತಿ ಗುಣಾಃ ಶುದ್ಧಾಃ ಸರಃ ಪೂರ್ಣಮಿವಾಂಡಜಾಃ ॥ ೩ ॥

ತೊಂಭತ್ತಮೂರನೆಯ ಸರ್ಗವು

ಶ್ರೀ ವಸಿಷ್ಠರು ಹೇಳಿದರು:—

೧. ಅಯ್ಯ ರಾಮಚಂದ್ರ, ಯಾವಮನುಜನು ಪ್ರಾರಂಭದಲ್ಲಿ ಅತ್ಯಲ್ಪವಾದರೂ ಅಧ್ಯಾತ್ಮವಿಚಾರದಿಂದ ಸ್ವಲ್ಪಮಟ್ಟಿಗಾದರೂ ತನ್ನ ಮನಸ್ಸನ್ನು ನಿಗ್ರಹಿಸುವನೋ ಅವನೇ ನಿಜವಾಗಿಯೂ ಧನ್ಯನು. ಅವನು ಜನ್ಮಸಾಫಲ್ಯವನ್ನು ಪಡೆದವನಾಗುವನು. [ಈ ವಾಕ್ಯದಿಂದ : ವಿಚಾರಶೂನ್ಯನ ಜನ್ಮವು ನಿಷ್ಫಲನಾದುದೇ ಸರಿ ಎಂಬರ್ಥವು ಧ್ವನಿತವಾಯಿತು.]

೨. ವಿಚಾರವೆಂಬ ಕಲ್ಪವೃಕ್ಷದ ಅಂಕುರವು ಮೊಟ್ಟಮೊದಲು ಅತಿಸೂಕ್ಷ್ಮವಾಗಿ ಹೃದಯದಲ್ಲಿ ಸ್ಫುರಿಸಿದರೂ ಕೂಡ ಅದೇನೇ ಸ್ವಲ್ಪಕಾಲಾನಂತರ ಅಭ್ಯಾಸಯೋಗದ ದಾರ್ಢ್ಯದಿಂದ ನೂರಾರು ಶಾಖೋಪಶಾಖೆಗಳಾಗಿ ಹಬ್ಬಿಕೊಂಡು ವೃದ್ಧಿಹೊಂದುವುದು.

೩. ವೈರಾಗ್ಯಪೂರ್ವಕ ಸ್ವಲ್ಪ ವಿಶೇಷವಾಗಿ ಪ್ರೌಢವಾದ ಅಧ್ಯಾತ್ಮವಿಚಾರ ಸಂಪನ್ನನಾದ ಪುರುಷಶ್ರೇಷ್ಠನನ್ನು ದೋಷರಹಿತಗಳಾಗಿ ಪರಮಪಾವನ

ಸಮ್ಯಗ್ವಿಚಾರಣಂ ಪ್ರಾಜ್ಞಂ ಯಥಾಭೂತಾವಲೋಕಿನಂ ।
ಆಸಾದಯಂತ್ಯಪಿ ಸ್ಫಾರಾ ನಾವಿದ್ಯಾವಿಭವಾ ಭೃಶಂ ॥ ೪ ॥

ಕಿಂ ಕುರ್ವಂತೀಹ ವಿಷಯಾ ಮಾನಸ್ಯೋ ವೃತ್ತಯಸ್ತಥಾ ।
ಆಧಯೋ ವ್ಯಾಧಯೋ ವಾಪಿ ಸಮ್ಯಗ್ದರ್ಶನಸನ್ಮತೇಃ ॥ ೫ ॥

ಕ್ವ ಭ್ರಮತ್ಪವನಾ ಪೂರಾಸ್ತಟಿತ್ಪಟಲ ಪಾಟಲಾಃ ।
ಪುಷ್ಕರಾವರ್ತಜಲದಾ ಗೃಹೀತಾ ಬಾಲಮುಷ್ಟಿಭಿಃ ॥ ೬ ॥

ಗಳಾದ ಶಮದಮಾದಿ ಸದ್ಗುಣಗಳು ಜಲಸಮೃದ್ಧಿಯಿಂದ ಸಂಪೂರ್ಣವಾದ ಒಂದು ಸರೋವರವನ್ನು ಹಂಸಾದಿ ಪಕ್ಷಿಗಳೂ ಮೀನುಗಳೂ ಆಶ್ರಯಿಸುವಂತೆ ತಾವಾಗಿಯೇ ಆಶ್ರಯಿಸುವುವು.

೪. ಸಂಶಯವಿಪರ್ಯಾಸಾದಿ ದೋಷಗಳಿಗೆ ಆಸ್ಪದವೇ ಇಲ್ಲದ ರೀತಿಯಲ್ಲಿ ಚೆನ್ನಾಗಿ ಸದ್ಗುರುವಿನ ಅನುಗ್ರಹವನ್ನು ಸಂಪಾದಿಸಿ ಅಧ್ಯಾತ್ಮಿಕ ಶಾಸ್ತ್ರವಿಚಾರಪರತೆಯ ಮೂಲಕ, ಯಥಾರ್ಥವಾಗಿ ಆತ್ಮತತ್ತ್ವಸಾಕ್ಷಾತ್ಕಾರಶೀಲನಾದ ಪ್ರಾಜ್ಞನನ್ನು ಪ್ರಚಯಪ್ರಕರ್ಷಗಳಿಂದ ಸುಪ್ರಸಿದ್ಧಗಳಾದ ಅವಿದ್ಯಾಕಾರ್ಯಭೂತಗಳಾದ ಹೈರಣ್ಯಗರ್ಭಪದಪರ್ಯಂತ ವಿಭವಗಳೂ ಕೂಡ ಸ್ವಲ್ಪವಾದರೂ ಪ್ರಲೋಭಗೊಳಿಸುವುದಿಲ್ಲ.

೫. ಯಥಾರ್ಥವಾದ ಆತ್ಮತತ್ತ್ವಸಾಕ್ಷಾತ್ಕಾರದಿಂದ ಪ್ರಶಸ್ತತಮ ಜ್ಞಾನನಿಷ್ಠನಾದ ಮಹಾತ್ಮನಿಗೆ ಪ್ರಾಪಂಚಿಕ ವಿಷಯಗಳಾಗಲೀ, ಮಾನಸಿಕವೃತ್ತಿಗಳಾಗಲೀ, ಮನೋರೋಗಗಳಾಗಲೀ ಮತ್ತೂ ಇತರ ವಿಧವಾದ ಶಾರೀರಿಕ ರೋಗಾದಿಗಳಾಗಲೀ ಸ್ವಲ್ಪವೂ ಯಾವವಿಕಾರವನ್ನೂ ಸರ್ವಥಾ ಉಂಟುಮಾಡುವುದಿಲ್ಲ.

೬. ಹೈರಣ್ಯಗರ್ಭಪದವಿಯೇ ಮೊದಲಾದ ಅವಿದ್ಯಾ ಕಾರ್ಯಗಳೆನ್ನಿಸಿದ ಸಮಸ್ತ ಪ್ರಾಪಂಚಿಕವಿಭವಗಳು ಆತ್ಮತತ್ತ್ವಜ್ಞನಿಗೆ ಪ್ರಲೋಭವನ್ನು ಉಂಟುಮಾಡುವ ವಿಷಯದಲ್ಲಿ ಸುತರಾಂ ಅಸಮರ್ಥಗಳಾಗಿರುವುವು ಎಂಬ ಪೂರ್ವೋಕ್ತ ವಿಚಾರವನ್ನು ಇನ್ನುಮುಂದೆ ಕೆಲವು ಅನ್ಯೋಕ್ತಿಗಳ ಸಹಾಯದಿಂದ ದೃಢಪಡಿಸುವರು. ಗಗನಮಂಡಲದಲ್ಲಿ ಪ್ರಚಂಡವಾಗಿ ಬೀಸುತ್ತಿರುವ ವಾಯುವಿನಿಂದ ಕ್ಷೋಭೆಗೊಳಿಸಲ್ಪಟ್ಟವುಗಳಾಗಿ ಮಿಂಚುಗಳ ಸಮುದಾಯಗಳಿಂದ ಪಾಟಲಗಳಾಗಿ

ಕ್ವ ನಭೋ ಮಧ್ಯಸಂಸ್ಥೇಂದು ಮುರ್ಗ್ಧೈರ್ಮಣಿ ಸಮುದ್ಗಕೈಃ ।
ಮುಗ್ಧಯಾಂಗನಯಾ ಬದ್ಧೋ ಮುಗ್ಧೇಂದೀವರ ಶಂಕಯಾ || ೭ ||

ಕ್ವ ಕಟಪ್ರೋಚ್ಚಲ ದ್ಭೃಂಗಮಂಡಲೋತ್ಪಲ ಶೇಖರಾಃ ।
ಮುಗ್ಧಸ್ತ್ರೀ ಶ್ವಾಸಮಧುರೈರ್ಮಶಕೈರ್ಮಥಿತಾ ಗಜಾಃ || ೮ ||

ಕ್ವೇಭಮುಕ್ತಾ ಫಲೋಲ್ಲಾಸಲಸತ್ಸನ್ನಖ ಪಂಜರಾಃ ।
ಸಿಂಹಾಃ ಸಮರ ಸಂರಬ್ಧಾ ಹರಿಣೈಃ ಪ್ರವಿ ಮರ್ದಿತಾಃ || ೯ ||

ರುವ (ಬಿಳುಪು ಮಿಶ್ರವಾದ ಕೆಂಬಣ್ಣ) ಪುಷ್ಕರಾವರ್ತಗಳೆಂಬ ಪ್ರಳಯಕಾಲದ ಮೇಘಗಳನ್ನು ಯಾವ ಹುಡುಗರು ಎಲ್ಲಿತಾನೆ ತಮ್ಮ ಕೈ ಹಿಡಿ (ಮುಷ್ಟಿ)ಗಳಿಂದ ಹಿಡಿದುಕೊಂಡಿರುವರು ? ಯಾರೂ ಎಲ್ಲಿಯೂ ಇಲ್ಲವೆಂದರ್ಥ.

೭. ಮುಗ್ಧಳಾದ ಯಾವ ಸ್ತ್ರೀಯು ಎಲ್ಲಿತಾನೇ ಗಗನಮಧ್ಯದಲ್ಲಿ ವಿರಾಜಿಸುತ್ತಿರುವ ಚಂದ್ರಮಂಡಲವನ್ನು ನೋಡಿ "ಇನ್ನೇನು, ಈ ಬೆಳದಿಂಗಳಿಂದ ಕನ್ನೈದಿಲೆಗಳು ಚೆನ್ನಾಗಿ ಅರಳಿ ಕಂಗೊಳಿಸುವುವು ಆವುಗಳಿಂದ ಆಗ ತನ್ನ ನೇತ್ರ ಕಾಂತಿಗಳಿಗೆ ಪರಾಭವವುಂಟಾಗುವುದು" ಎಂಬ ಶಂಕೆಯಿಂದ ಆ ನೈದಿಲೆಗಳ ವಿಕಾಸಕ್ಕೆ ಕಾರಣವಾದ ಚಂದ್ರಬಿಂಬವನ್ನು ಅತಿಸುಂದರವಾದ ರತ್ನಮಯ ಸಂಪುಟಗಳೊಳಗೆ ಸೇರಿಸಿ ಹೊರಗೆಬರದಂತೆ ಬಂಧಿಸಿರುವಳು ?

೮. ಗಂಡಸ್ಥಳಗಳಿಂದ ಮೇಲಕ್ಕೆ ಹಾರುತ್ತಿರುವ ದುಂಬಿಗಳ ಸಮೂಹಗಳಿಂದ ಕನ್ನೈದಿಲೆಗಳಿಂದಲೋ ಎಂಬಂತೆ ಅಲಂಕೃತವಾದ ಕುಂಭಸ್ಥಳಗಳುಳ್ಳ ಮದ್ದಾನೆಗಳು ಮುಗ್ಧ ಸ್ತ್ರೀಯರ ಶ್ವಾಸಕ್ಕೂ ನಿಲ್ಲಲಾರದಷ್ಟು ನಿರ್ವೀರ್ಯವಾಗಿರುವ ಚಿಕ್ಕ ಸೊಳ್ಳೆಗಳಿಂದ ಎಲ್ಲಿ ತಾನೇ ಪರಿಭವವನ್ನು ಹೊಂದಿರುವುವು ?

೯. ತಮ್ಮಿಂದಲೇ ಸೀಳಲ್ಪಟ್ಟ ಮತ್ತಗಜಗಳ ಕುಂಭಸ್ಥಳಗಳನ್ನು ಬಗಿಯುವಾಗ ಸಿಕ್ಕಿಹಾಕಿಕೊಂಡ ಮುತ್ತುಗಳ ಕಾಂತಿಗಳಿಂದ ಪ್ರಕಾಶಮಾನವಾದ ನಖಪಂಗ್ತಿಗಳುಳ್ಳ ಸಿಂಹಗಳು ಉತ್ಸಾಹದಿಂದ ಯುದ್ಧಸನ್ನದ್ಧಗಳಾಗಿರುವಾಗ ಎಲ್ಲಿ ತಾನೇ ಜಿಂಕೆಗಳಿಂದ ಮರ್ದಿಸಲ್ಪಟ್ಟಿರುವುವು ?

ಕ್ವ ವಿಷೋಲ್ಲಾಸ ನಿರ್ಯಾಸದಗ್ಧೋನ್ನತವನದ್ರುಮಾಃ ।
ಕ್ಷುಧಿತಾ ಜಗರಾಃ ಕ್ಷುಬ್ಧೈಃನಿಗೀರ್ಣಾ ಬಾಲದರ್ದುರೈಃ ॥ ೧೦ ॥

ಕ್ವ ಪ್ರಾಪ್ತಭೂಮಿಕೋ ಧೀರೋ ಜ್ಞಾತಜ್ಞೇಯೋ ವಿವೇಕವಾನ್ ।
ಆಕ್ರಾಂತಃ ಕಿಲ ವಿಕ್ರಾಂತೋ ವಿಷಯೇಂದ್ರಿಯ ದಸ್ಯುಭಿಃ ॥ ೧೧ ॥

ವಿಚಾರಧಿಯಮಪ್ರೌಢಾಂ ಹರಂತಿ ವಿಷಯಾರಯಃ ।
ಪ್ರಚಂಡ ಪವನಾವ್ಯೃದ್ವೀಂ ಕೃತ್ತವೃಂತಾಂ ಲತಾಮಿವ ॥ ೧೨ ॥

ನ ವಿವೇಕಲವಂ ಪ್ರೌಢಂ ಭಂಕ್ತುಂ ಶಕ್ತಾ ದುರಾಶಯಾಃ ।
ಕಲ್ಪಕ್ಷೋಭ ಮಹಾಧೀರಂ ಶೈಲಂ ಮಂದಾನಿಲಾ ಇವ ॥ ೧೩ ॥

---

೧೦. ವಿಷವು ಹೆಚ್ಚಿ- ಹೆಬ್ಬಾವುಗಳ (ಅಜಗರ) ಬಾಯಿಂದ ಹೊರಕ್ಕೆ ಉಕ್ಕುತ್ತಿರಲು ಆ ವಿಷಬಿಂದುಗಳಿಂದ ಹೊರಟ ಜ್ವಾಲೆಗಳು ಕಾಡಿನಲ್ಲಿ ಬಲು ಎತ್ತರವಾಗಿ ಬೆಳೆದಿರುವ ದೊಡ್ಡ ಮರಗಳನ್ನೂ ಸುಟ್ಟುಬಿಡುವುವು. ಅಂತಹ ಹೆಬ್ಬಾವುಗಳು ಹಸಿವುಗೊಂಡು ಮನುಷ್ಯರಂತೆ ಕೂಗುತ್ತಾ ಹತ್ತಿರಕ್ಕೆ ಬರುವ ಪ್ರಾಣಿಗಳನ್ನು ಸರಕ್ಕನೆ ನುಂಗಿಬಿಡುವ ಸಲುವಾಗಿ ಬಾಯನ್ನು ತೆರೆದಿರಲಿಕ್ಕಾಗಿ ಭಯಭ್ರಾಂತಗಳಾದ ಕ್ಷುದ್ರಕಪ್ಪೆಗಳು ಅವುಗಳನ್ನು ಎಲ್ಲಿತಾನೆ ನುಂಗಿರುವುವು?

೧೧. ಸಮಾಧ್ಯಭ್ಯಾಸ ಬಲದಿಂದ ಚತುರ್ಥ ಪಂಚಮಾದಿ ಜ್ಞಾನಭೂಮಿಕೆಗಳನ್ನು ಪಡೆದು, ಮುಂದಿನ ಭೂಮಿಕೆಗಳನ್ನು ಜಯಿಸಲು ತಕ್ಕಷ್ಟು ಅರ್ಹತೆಯಿಂದ ಉದ್ಯುಕ್ತನಾಗಿರುವ ಅವಿಕೃತ ಚಿತ್ತನಾಗಿಯೂ, ಆತ್ಮತತ್ತ್ವಜ್ಞನಾಗಿಯೂ, ವಿವೇಕಶಾಲಿಯಾಗಿಯೂ ಇರುವ ಮಹಾತ್ಮನು ಎಲ್ಲಿ ತಾನೇ ವಿಷಯೇಂದ್ರಿಯಗಳೆಂಬ ಕಳ್ಳರಿಂದ ಆಕ್ರಮಿಸಲ್ಪಟ್ಟು ಅಪಹೃತನಾಗಿರುವನು ?

೧೨. ಕತ್ತರಿಸಲ್ಪಟ್ಟು ಕೆಳಗೆ ಬಿದ್ದಿರುವ ಅತಿ ಕೋಮಲವಾದ ಲತೆಯನ್ನು ಬಿರುಗಾಳಿಗಳು ಅಪಹರಿಸಿಬಿಡುವಂತೆ ಪ್ರಾಪಂಚಿಕ ವಿಷಯಗಳೆಂಬ ಶತ್ರುಗಳು ಚೆನ್ನಾಗಿ ದೃಢವಾದ ರೀತಿಯಲ್ಲಿ ತತ್ತ್ವವಿಚಾರ ಮಾಡದೆ ಅಪ್ರೌಢವಾಗಿರುವ ಬುದ್ಧಿಯನ್ನು ಮಾತ್ರವೇ ಸುಲಭವಾಗಿ ಅಪಹರಿಸಿಬಿಡುವುವು.

೧೩. ಅವಾಂತರ ಕಲ್ಪಗಳ ಕ್ಷೋಭ ಕಾಲಗಳಲ್ಲಿ ಕೂಡ ಸ್ವಲ್ಪವೂ ಕವಲದೆ ಅತ್ಯಂತ ಸ್ಥೈರ್ಯದಿಂದಿರುವ ಮೇರು ಮುಂತಾದ ಪರ್ವತಗಳನ್ನು ಕದಲಿಸುವುದಕ್ಕೆ

ಅಗೃಹೀತ ಮಹೀಪೀಠಂ ವಿಚಾರ ಕುಸುಮದ್ರುಮಂ ।
ಚಿಂತಾವಾತ್ಯಾ ವಿಧುನ್ವಂತಿ ನಸ್ಥಿರಸ್ಥಿತಿ ಸುಸ್ಥಿತಂ ॥ ೧೪ ॥

ಗಚ್ಛತಸ್ತಿಷ್ಠತೋ ವಾಪಿ ಜಾಗ್ರತಃ ಸ್ವಪತೋಽಪಿ ವಾ ।
ನ ವಿಚಾರಮಯಂ ಚೇತೋ ಯಸ್ಯಾಸೌ ಮೃತ ಉಚ್ಯತೇ ॥ ೧೫ ॥

ಮಂದಮಾರುತಗಳಿಗೆ ಸ್ವಲ್ಪವೂ ಸುತರಾಂ ಸಾಮರ್ಥ್ಯವಿಲ್ಲದಿರುವಂತೆ ಸಂತತ ವಿಚಾರ ಪರತೆಯಿಂದ ಪ್ರೌಢಿಮೆಯನ್ನು ಹೊಂದಿರುವ ವಿವೇಕಲವನನ್ನು ನಾಶ ಗೊಳಿಸುವುದಕ್ಕೆ ದುಷ್ಟವಾದ ರಾಗಾದಿ ವೃತ್ತಿಗಳಿಗೆ ಸರ್ವಥಾ ಸಾಮರ್ಥ್ಯ ವಿಲ್ಲವು.

೧೪. ಯಾವಾಗಲೋ ಒಂದೊಂದು ಸಲ ಮಾತ್ರ ಅಧ್ಯಾತ್ಮ ವಿಚಾರ ಮಾಡುತ್ತಾ, ಅದು ಕಾರಣವೇ ಸ್ಥಿರವಾಗಿ ತತ್ತ್ವಜ್ಞಾನ ಪರಿನಿಷ್ಠಿತನಾಗದ ಅಜ್ಞ ಜನರನ್ನು ನಾನಾ ಸಾಂಸಾರಿಕ ಚಿಂತೆಗಳು, ಚೆನ್ನಾಗಿ ಬೇರುಬಿಟ್ಟುಕೊಳ್ಳದೆಯೂ. ದಪ್ಪವಾದ ಬುಡವನ್ನು ಗ್ರಹಿಸದೆಯೂ ಇರುವ ಪುಷ್ಪ ವೃಕ್ಷವನ್ನು ಬಿರುಗಾಳಿ ಗಳಂತೆ ಕ್ಷಣ ಮಾತ್ರದಲ್ಲಿ ಸುಲಭವಾಗಿ ಉರುಳಿಸಿಬಿಡುತ್ತವೆ. ಆದರೆ, ಸಂತತವೂ ಆತ್ಮತತ್ತ್ವ ವಿಚಾರದಲ್ಲಿ ಸ್ಥಿರವಾದ ಸ್ಥಿತಿಯನ್ನು ಪಡೆದು ಆತ್ಮಜ್ಞಾನನಿಷ್ಠನಾದ ಜ್ಞಾನಿಯನ್ನು ಮಾತ್ರ ಅವು ಎಂದಿಗೂ, ಸ್ವಲ್ಪವೂ ಅಲುಗಾಡಿಸಲಾರವು.

೧೫. ನಡೆಯುವಾಗಲೂ, ಒಂದುಕಡೆ ನಿಂತಿರುವಾಗಲೂ, ಎಚ್ಚರದಿಂದಿರು ವಾಗಲೂ ಮತ್ತು ಮಲಗಿರುವಾಗಲೂ ಸರ್ವದಾ ಸರ್ವಾವಸ್ಥೆಗಳಲ್ಲಿಯೂ ಯಾವನ ಮನಸ್ಸು ಆಧ್ಯಾತ್ಮಿಕ ವಿಚಾರಮಯವಾಗಿರುವುದಿಲ್ಲವೋ, ಅಂತಹ ನರ ಪಶುವನ್ನು ಮೃತನೆಂದೇ ಜ್ಞಾನಿಗಳು ಹೇಳುವರು. ಏಕೆಂದರೆ ವಿಚಾರ ವಿಚ್ಛಿತ್ತಿ ಕಾಲಗಳಲ್ಲಿ ಪ್ರಮತ್ತನಾಗಿರುವ ಅಜ್ಞನನ್ನು ರಾಗಾದಿ ಅರಿಷಡ್ವರ್ಗವೆಂಬ ಮೃತ್ಯುವು ಸದಾ ಸಮೀಪದಲ್ಲಿದ್ದುಕೊಂಡು ನುಂಗಿಬಿಡುವುದು.

("ಸಾ ಹಾನಿಃ ತತ್ ಮಹತ್ ಛಿದ್ರಂ ಸಾ ಅಂಧತಾ ಸಾ ಚಮೂಕತಾ । ಯತ್ ಕ್ಷಣಂ ವಾ ಮುಹೂರ್ತಂ ವಾ ಶಿವ ಮೇಕಂ ನ ಚಿಂತಯೇತ್" । ಲೈಂಗ ಮಹಾ ಪುರಾಣ.)

ಕಿಮಿದಂ ಸ್ಯಾಜ್ಜಗತ್ಕಿಂ ಸ್ಯಾದ್ದೇಹಮಿತ್ಯನಿಶಂ ಶನೈಃ ।
ವಿಚಾರಯಥಾಧ್ಯಾತ್ಮದೃಶಾ ಸ್ವಯಂ ವಾ ಸಜ್ಜನೈಃ ಸಹ ॥ ೧೬ ॥

ಅಂಧಕಾರ ಹರೇಣಾಶು ವಿಚಾರೇಣ ಪರಂ ಪದಂ ।
ದೃಶ್ಯತೇ ವಿಮಲಂ ವಸ್ತು ಪ್ರದೀಪೇನೇವ ಭಾಸ್ವತಾ ॥ ೧೭ ॥

ಜ್ಞಾನೇನ ಸರ್ವದುಃಖಾನಾಂ ವಿನಾಶ ಉಪಜಾಯತೇ ।
ಕೃತಾಲೋಕ ವಿಲಾಸೇನ ತಮಸಾಮಿವ ಭಾನುನಾ ॥ ೧೮ ॥

ಜ್ಞಾನೇ ಪ್ರಕಟತಾಂ ಯಾತೇ ಜ್ಞೇಯಂ ಸ್ವಯಮುದೇತ್ಯಲಂ ।
ರವಾವಭ್ಯುದಿತೇ ಭೂಮಾವಾಲೋಕ ಇವ ನಿರ್ಮಲಃ ॥ ೧೯ ॥

---

೧೬. ಅದು ಕಾರಣ, ಅಯ್ಯ ರಾಮ, " ಈ ಜಗತ್ತೆಂಬುದು ಏನಿರಬಹುದು? ದೇಹವೆಂಬುದು ಯಾವುದು ಇರಬಹುದು ? ಎಂಬುದಾಗಿ ಸಂತತವೂ ನೀನೊಬ್ಬನೇ ಏಕಾಂತದಲ್ಲಿಯಾಗಲೀ ಅಥವಾ ಜ್ಞಾನನಿಷ್ಠರಾದ ಸಜ್ಜನರೊಂದಿಗೆ ಕೂಡಿಯಾಗಲೀ ಅಧ್ಯಾತ್ಮ ದೃಷ್ಟಿಯಿಂದ ಕ್ರಮೇಣ ವಿಚಾರ ಮಾಡುತ್ತಾ ಅವುಗಳ ನಿಸ್ಸಾರತ್ವವನ್ನು ಮನಗಾಣುವವನಾಗು.

೧೭. ಪ್ರಕಾಶಮಾನವಾಗಿ ಉರಿಯುತ್ತಿರುವ ದೊಡ್ಡ ದೀಪದಿಂದ ಅಂಧಕಾರವು ತೊಲಗಿ ಪದಾರ್ಥಗಳು ಸ್ಪಷ್ಟವಾಗಿ ಕಣ್ಣಿಗೆ ಗೋಚರಿಸುವಂತೆ ವಿವೇಕ ಪೂರ್ಣವಾದ ಆತ್ಮತತ್ತ್ವ ವಿಚಾರವನ್ನು ಅವಿಚ್ಛಿನ್ನವಾಗಿ ಮಾಡುವುದರಿಂದ ಅಜ್ಞಾನಾಂಧಕಾರವು ನಿಶ್ಶೇಷವಾಗಿ ನಾಶಹೊಂದುವುದು. ಆಗಲೇ ನಿತ್ಯಶುದ್ಧವಾದ ಪರಮಪದರೂಪ ಆತ್ಮತತ್ತ್ವ ಸಾಕ್ಷಾತ್ಕಾರವಾಗುವುದು.

೧೮. ಸೂರ್ಯನು ಉದಯವಾಗುತ್ತಲೇ ಅವನ ಪ್ರಕಾಶಮಾನವಾದ ತೇಜಸ್ಸು ಸರ್ವತ್ರ ಪ್ರಸರಿಸಿ, ಎಲ್ಲೆಲ್ಲಿಯೂ ಅಡಗಿರುವ ಅಂಧಕಾರಗಳೆಲ್ಲ ನಾಶವಾಗುವಂತೆ ಸ್ವಾತ್ಮತತ್ತ್ವ ಜ್ಞಾನೋದಯವಾದ ಕೂಡಲೇ ಅದರ ಮಹಿಮೆಯಿಂದ ಸಮಸ್ತ ದುಃಖಗಳೂ ಸ್ವತಃ ನಿಃಶ್ಶೇಷವಾಗಿ ನಾಶ ಹೊಂದುವುವು.

೧೯. ನಿರುಪಾಧಿಕವಾದ ಆತ್ಮತತ್ತ್ವ ಜ್ಞಾನವು ಸುನಿಶ್ಚಿತವಾಗಿ ಪ್ರಕಟವಾಗಲಾಗಿ ಜ್ಞೇಯವಾಗಿದ್ದ ಈ ದೃಶ್ಯವೆಲ್ಲವೂ ತಾನಾಗಿಯೇ ಸಂಪೂರ್ಣವಾಗಿ ನಾಶ

ಯೇನ ಶಾಸ್ತ್ರವಿಚಾರೇಣ ಬ್ರಹ್ಮತತ್ವಂ ಪ್ರಬುಧ್ಯತೇ ।
ತದ್ಧ್ಯಾನಮುಚ್ಯತೇ ಜ್ಞೇಯಾದಭಿನ್ನಮಿವ ಸಂಸ್ಥಿತಂ ॥ ೨೦ ॥

ವಿಚಾರೋತ್ಥಾತ್ಮ ವಿಜ್ಞಾನಂ ಜ್ಞಾನಮಂಗ ವಿದುರ್ಬುಧಾಃ ।
ಜ್ಞೇಯಂ ತಸ್ಯಾಂತರೇವಾಸ್ತಿ ಮಾಧುರ್ಯಂ ಪಯಸೋ ಯಥಾ ॥ ೨೧ ॥

ಸಮ್ಯಗ್ ಜ್ಞಾನಸಮಾಲೋಕಃ ಪುಮಾನ್ ಜ್ಞೇಯಮಯಃ ಸ್ವಯಂ ।
ಭವತ್ಯಾಪೀತ ಮೈರೇಯಃ ಸದಾ ಮದಮಯೋ ಯಥಾ ॥ ೨೨ ॥

ಹೊಂದಿ ಅದ್ವಿತೀಯಾತ್ಮ ಸ್ವರೂಪವು ಸರ್ವತ್ರ ಪರಿಪೂರ್ಣವಾಗಿ ಭಾಸಿಸುವುದು. ಸೂರ್ಯನು ಉದಯವಾಗಲಾಗಿ, ಭೂಮಿಯಮೇಲೆ ಎಲ್ಲ ಕಡೆಗಳಲ್ಲಿಯೂ ಜಡತ್ವವು ತೊಲಗಿ ನಿರ್ಮಲವಾದ ಪ್ರಕಾಶವು ತಾನಾಗಿಯೇ ವಿರಾಜಿಸುವುದು.

೨೦. ಯಾವ ಶಾಸ್ತ್ರ ವಿಚಾರದಿಂದ ಬ್ರಹ್ಮತತ್ತ್ವವು ಸ್ಪಷ್ಟವಾಗಿ ತಿಳಿಯಲ್ಪಡುವುದೋ ಅದನ್ನೇ ಧ್ಯಾನವೆಂದು ಪ್ರಾಜ್ಞರು ಹೇಳುವರು. ಆ ಧ್ಯಾನವು ಜ್ಞೇಯ ಬ್ರಹ್ಮಾಕಾರವಾಗಿರುವುದರಿಂದಲೂ, ಭೇದಬಾಧರೂಪವಾಗಿರುವುದರಿಂದಲೂ ಜ್ಞೇಯಕ್ಕಿಂತ (ಬ್ರಹ್ಮ) ಅಭಿನ್ನವಾಗಿರುವಂತೆ ದೃಢ ಪ್ರತಿಷ್ಠಿತವಾಗಿರುವುದು.

೨೧. ವತ್ಸ, ರಾಮಭದ್ರ, ಅಧ್ಯಾತ್ಮ ವಿಚಾರಜನ್ಯವಾದ ಆತ್ಮತತ್ತ್ವ ಜ್ಞಾನವನ್ನೇ ಪರಮ ಪುರುಷಾರ್ಥ ರೂಪ ಮೋಕ್ಷ ಪ್ರದವಾದ ಜ್ಞಾನವೆಂದು ಜ್ಞಾನಿಗಳು ತಿಳಿದಿರುವರು. ಹಾಲಿನೊಳಗೆ ಮಾಧುರ್ಯವು ಐಕ್ಯದಿಂದ ಸೇರಿಕೊಂಡಿರುವಂತೆ ಜ್ಞೇಯವಾದ ಪರಬ್ರಹ್ಮವು ತತ್ತ್ವಜ್ಞಾನದೊಳಗೆಯೇ ಐಕ್ಯದಿಂದ ಸೇರಿಕೊಂಡಿರುವುದು. (ಜ್ಞೇಯವಾದ ಪರಬ್ರಹ್ಮವು ಜ್ಞಾನಾಭಿನ್ನವಾದುದೆಂದರ್ಥ. ಸತ್ಯಂ ಜ್ಞಾನಂ ಅನಂತಂ ಬ್ರಹ್ಮ. ವಿಜ್ಞಾನಮಾನಂದಂ ಬ್ರಹ್ಮ. ಇತ್ಯಾದಿ ಶ್ರುತಿಗಳು ಪ್ರಮಾಣವು)

೨೨. ವಿಶೇಷವಾಗಿ ಸುರಾಪ ನ ಮಾಡಿದವನು, ಮದಾಧಿಕ್ಯದಿಂದ ಉನ್ಮತ್ತನಾಗಿರುವಂತೆ ಪಾರಮಾರ್ಥಿಕ ಆತ್ಮಜ್ಞಾನ ಪ್ರಕಾಶವುಳ್ಳ ಮನುಷ್ಯನು ಸರ್ವದಾ ತಾನೇ ಪ್ರಚುರವಾದ ಬ್ರಹ್ಮಾನಂದವನ್ನು ಅನುಭವಿಸುತ್ತಿರುವನು.

ಸಮಂ ಸ್ವರೂಪ ಮಮಲಂ ಜ್ಞೇಯಂ ಬ್ರಹ್ಮ ಪರಂ ವಿದುಃ ।
ಜ್ಞಾನಾಭಿಗಮ ಮಾತ್ರೇಣ ತತ್ಸ್ವಯಂ ಸಂಪ್ರಸೀದತಿ ॥ ೨೩ ॥

ಜ್ಞಾನವಾನುದಿತಾನಂದೋ ನ ಕ್ವಚಿತ್ಪರಿಮಜ್ಜತಿ ।
ಜೀವನ್ಮುಕ್ತೋ ಗತಾಸಂಗಃ ಸಮ್ರಾಡಾತ್ಮೇವ ತಿಷ್ಠತಿ ॥ ೨೪ ॥

ಜ್ಞಾನವಾನ್ಹೃದ್ಯ ಶಬ್ದೇಷು ವೀಣಾವಂಶರವಾದಿಷು ।
ಕಾಮಿನ್ಯಾಃ ಕಾಂತಗೀತೇಷು ಸಂಭೋಗ ಮಲಿನೇಷು ಚ ॥ ೨೫ ॥

ವಸಂತ ಮದಮತ್ತಾನಾಂ ಷಟ್ಪದಾನಾಂ ಸ್ವನೇಷು ಚ ।
ಪ್ರಾವೃಟ್ಪ್ರಸರಪುಷ್ಪೇಷು ಜಲದಸ್ತನಿತೇಷು ಚ ॥ ೨೬ ॥

ಉತ್ತಾಂಡವ ಶಿಖಂಡೇಷು ಕೇಕಾಕಲರವೇಷು ಚ ।
ರಣಿತಾಂಭೋದ ಖಂಡೇಷು ಸಾರಸಕ್ಕ್ವಣಿತೇಷು ಚ ॥ ೨೭ ॥

ಕರ್ತರ್ಯಾದಿಕರಾಂತೇಷು ಗಂಭೀರ ಮುರಜೇಷು ಚ ।
ತತಾವನದ್ಧ ಸುಷಿರಚಿತ್ರವಾದ್ಯಸ್ವನೇಷು ಚ ॥ ೨೮ ॥

ಕೇಷುಚಿನ್ನ ನಿಬಧ್ನಾತಿ ರೂಕ್ಷೇಷು ಮಧುರೇಷು ಚ ।
ರಣಿತೇಷು ರತಿಂ ರಾಮ ಪದ್ಮೇಷ್ವಿವ ನಿಶಾಕರಃ ॥ ೨೯ ॥

---

೨೩. ಸಮವೂ (ಭೇದರಹಿತ) ಅವಿದ್ಯಾದಿ ಸಕಲ ದೋಷರಹಿತವಾಗಿ ನಿತ್ಯ ಶುದ್ಧವೂ ಆಗಿರುವ ಸ್ವ ಸ್ವರೂಪವನ್ನೇ ಜ್ಞೇಯವಾದ ಪರಬ್ರಹ್ಮವೆಂದು ಜ್ಞಾನಿಗಳು ಭಾವಿಸುವರು. ಅಂತಹ ನಿತ್ಯ ಶುದ್ಧಾತ್ಮ ಸ್ವರೂಪವು ಕೇವಲ ತತ್ತ್ವಜ್ಞಾನ ಸಾಕ್ಷಾತ್ಕಾರದಿಂದಲೇ ಸ್ವತ ಏವ – ಅವಿದ್ಯೆಯನ್ನೂ, ಅವಿದ್ಯಾ ಕಾರ್ಯ ಗಳಾದ ರಾಗಾದಿ ಮಾಲಿನ್ಯಗಳನ್ನೂ ಧ್ವಂಸ ಮಾಡಿಕೊಂಡು ರಾರಾಜಿಸುವುದು.

೨೪. ಸ್ವಾತ್ಮಜ್ಞಾನ ಸಂಪನ್ನನಾದ ಜೀವನ್ಮುಕ್ತನು ಸ್ವತಸ್ಸಿದ್ಧವಾದ ಬ್ರಹ್ಮಾನಂದವನ್ನು ಸದಾ ಅನುಭವಿಸುತ್ತಿರುವವನಾಗಿ ಎಂದಿಗೂ. ಎಲ್ಲಿಯೂ ಯಾವೊಂದು ಕ್ಷುಲ್ಲಕವಾದ ಇತರ ಸುಖಗಳಲ್ಲಿ ಮುಳುಗುವುದೇ ಇಲ್ಲ. ಏಕೆಂದರೆ ಅವನು ಜಗದಧೀಶ್ವರನಾದ ಪರಮಾತ್ಮನೇ ಆಗಿದ್ದುಕೊಂಡು ಸರ್ವತ್ರ ಅನಾಸಕ್ತ ನಾಗಿ, ರಾಜಾಧಿರಾಜನಾದ ಚಕ್ರವರ್ತಿಯಂತೆ ಪರಿಪೂರ್ಣ ಮನೋರಥನಾಗಿ ನಿತ್ಯ ತೃಪ್ತನಾಗಿರುವನು.

೨೫–೨೯. ಅಯ್ಯ ರಾಮಚಂದ್ರ, ಆತ್ಮಜ್ಞಾನನಿಷ್ಠನು. ವೀಣೆ, ಕೊಳಲು

ಜ್ಞಾನವಾನ್ಬಾಲಕದಲೀಸ್ತಂಭ ಪಲ್ಲವ ಪಾಲಿಷು ।
ಸುರಗಂಧರ್ವ ಕನ್ಯಾಂಗಲತಾನಂದನ ಕೇಲಿಷು ॥ ೩೦ ॥

ಕೇಷು ಕ್ವಚಿನ್ನ ಬಧ್ನಾತಿ ಸ್ವಾಯತ್ತೇಷ್ವಪ್ಯಸಕ್ತಧೀಃ ।
ರಾಮ ಸ್ಪರ್ಶರತಿಂ ಧೀರೋ ಹಂಸೋ ಮರುಮಹೀಷ್ವಿವ ॥ ೩೧ ॥

ಮುಂತಾದ ವಾದ್ಯಗಳ ಮನೋಹರವಾದ ಮೃದು ಮಧುರ ಧ್ವನಿಗಳಲ್ಲಿಯೂ, ಕಾಮಿನಿಯರ ಸಂಭೋಗ ಮಲಿನಗಳಾದ ಮತ್ತು ವಿಲಾಸಮಯಗಳಾದ ಮನೋನೋಹಕ ಸಂಗೀತಗಳಲ್ಲಿಯೂ, ವಸಂತರ್ತುವಿನ ಆವಿರ್ಭಾವದಿಂದ ಮದೋನ್ಮತ್ತಗಳಾದ ಭ್ರಮರಗಳ ಝುಂಕಾರಗಳಲ್ಲಿಯೂ, ವರ್ಷರ್ತುವಿನಲ್ಲಿ ಅತಿ ಕೋಮಲವಾಗಿ ಅರಳಿ ಸೌರಭವನ್ನು ಬೀರುತ್ತಿರುವ ಪುಷ್ಪರಾಶಿಗಳಲ್ಲಿಯೂ, ಮೇಘಧ್ವನಿಗಳಲ್ಲಿಯೂ, ಮಯೂರಗಳ ನೃತ್ಯಗಳಲ್ಲಿಯೂ, ಅವುಗಳ ಅವ್ಯಕ್ತ ಮಧುರವಾದ ಕೇಕಾ ಧ್ವನಿಗಳಲ್ಲಿಯೂ, ಮನೋಜ್ಞವಾಗಿ ಧ್ವನಿಮಾಡುತ್ತಿರುವ ಮೇಘ ಖಂಡಗಳಲ್ಲಿಯೂ, ಸಾರಸ ಪಕ್ಷಿಗಳ ಸಿನಾದಗಳಲ್ಲಿಯೂ, ಕರ್ತರಿ, ಸೂಜಿ, ಸಲಾಕೆ, ತಂತಿ, ಮುಳ್ಳು, ಉಗುರು ಮುಂತಾದ ಉಪಾಯಗಳಿಂದ ಬಾರಿಸಲ್ಪಡುವ ವಿವಿಧ ವಾದ್ಯ ವಿಶೇಷಗಳಲ್ಲಿಯೂ, ಅತಿ ಗಂಭೀರಗಳಾದ ಮೃದಂಗಗಳಲ್ಲಿಯೂ, ತಂತಿಗಳಿಂದ ವ್ಯಾಪ್ತವಾದ ಪಿಟೀಲು, ಚರ್ಮ ಹೊದ್ದಿಸಿರುವ ಮದ್ದಳೆ, ಒಳಗೆ ರಂಧ್ರಗಳುಳ್ಳ ಓಲಗ ಕೊಳಲು ಮುಂತಾದ ವಿಚಿತ್ರ ವಾದ್ಯ ಧ್ವನಿಗಳಲ್ಲಿಯೂ ಹೀಗೆ ಅನುರಾಗಿ ಜನಗಳು ಆಶಿಸತಕ್ಕ ಸಮಸ್ತ ಪ್ರಾಪಂಚಿಕ ಇಂಪಾದ ಧ್ವನಿಗಳಲ್ಲಿ ಯಾವದರಲ್ಲಿಯೂ ಪದ್ಮಗಳ ವಿಷಯದಲ್ಲಿ ಚಂದ್ರನಂತೆ ಅನುರಾಗವನ್ನು ಇಡದೆ ಉದಾಸೀನನಾಗಿರುವನು. ಮತ್ತು ಕಠೋರವಾದ ಧ್ವನಿಗಳ ವಿಷಯದಲ್ಲಿ ದ್ವೇಷವನ್ನು ತೋರುವುದೂ ಇಲ್ಲ.

೩೦-೩೧. ಅಯ್ಯ ರಾಮ, ಮತ್ತು ಆತ್ಮತತ್ತ್ವ ಜ್ಞಾನಿಯು, ಸರ್ವದಾ ಅವಿಕೃತ ಚಿತ್ತನಾಗಿರುವ ಕಾರಣ ಎಳೆಯ ಬಾಳೆ ಕಂಭಗಳ ಪಲ್ಲವ ಶ್ರೇಣಿಗಳಿಂದ ಕಂಗೊಳಿಸುವ ಮತ್ತು ದೇವಗಂಧರ್ವ ಕನ್ಯೆಯರಂತೆ ಕೋಮಲವಾದ ಅವಯವಗಳುಳ್ಳ ಬಹುವಿಧಲತೆಗಳಿಂದ ವಿರಾಜಮಾನವಾದ ನಂದನ ವನದಲ್ಲಿ ಲೀಲೆಯಿಂದ ಕ್ರೀಡಿಸುವುದರಲ್ಲಿಯೂ, ತನಗೆ ಅಧೀನವಾಗಿದ್ದರೂ ಕೂಡ ಸರ್ವಥಾ ಆಸಕ್ತಿಯಿಲ್ಲದವನಾಗಿ, ಅಂತಹುದೊಂದರಲ್ಲಿಯೂ, ಎಂದಿಗೂ, ಹಂಸ ಪಕ್ಷಿಯು ಮರುಭೂಮಿಗಳಲ್ಲಿ ಹೇಗೋ ಹಾಗೆ ಭೋಗೇಚ್ಛೆಯನ್ನು ಇಡುವುದಿಲ್ಲ.

ಜ್ಞಾನವಾನ್ಪಿಂಡ ಖರ್ಜೂರಕದಂಬ ಪನಸಾದಿಷು ।
ವೃದ್ಧೀಕೌರ್ವಾರುಕಾಕ್ಷೋಟ ಬಿಂಬಜಂಬೀ ರಜಾತಿಷು । ॥ ೩೨ ॥

ಮದಿರಾ ಮಧುಮೈರೇಯ ಮಾರ್ದ್ವೀಕಾ ಸವಭೂಮಿಷು ।
ದಧಿಕ್ಷೀರ ಘೃತಾಮಿಕ್ಷಾ ನವನೀತೌದನಾದಿಷು ॥ ೩೩ ॥

ಷಡ್ರಸೇಷು ವಿಚಿತ್ರೇಷು ಲೇಹ್ಯಪೇಯ ವಿಲಾಸಿಷು ।
ಫಲೇಷ್ವನ್ಯೇಷು ಮೂಲೇಷು ಶಾಕೇಷ್ವಸ್ಯಾಮಿಷೇಷು ಚ ॥ ೩೪ ॥

ಕೇಷು ಚಿನ್ನಾನುಬಧ್ನಾತಿ ತೃಪ್ತ ಮೂರ್ತಿರಸಕ್ತಧೀಃ ।
ಆಸ್ವಾದನರತಿರ್ವಿಪ್ರಃಸ್ವಶರೀರಲವೇಷ್ವಿವ ॥ ೩೫ ॥

[ಅಥವಾ ೩೦ನೆ ಶ್ಲೋಕದ ಉತ್ತರಾರ್ಥಕ್ಕೆ ದೇವ ಗಂಧರ್ವ ಕನ್ಯೆಯರ (ಲತಾಪದೃಶಗಳಾದ) ಕೋಮಲವಾದ ಅಂಗಗಳ ಸ್ಪರ್ಶಗಳಿಂದ ಕೂಡಿ ನಂದನ ವನದೊಳಗೆ ಲೀಲೆಯಿಂದ ಕ್ರೀಡಿಸುವಿಕೆಗಳಲ್ಲಿಯೂ ಎಂಬರ್ಥವನ್ನೂ ಹೇಳ ಬಹುದು.)

೩೨-೩೫. ಮತ್ತು ಆತ್ಮ ಜ್ಞಾನಿಯು ಅಖಂಡೈಕ ರಸ ಬ್ರಹ್ಮಾನಂದಾನು ಭವದಿಂದ ನಿತ್ಯ ತೃಪ್ತನಾಗಿರುತ್ತಾ, ಪಿಂಡ ಖರ್ಜೂರ, ಕದಂಬ, ಹಲಸು ಮುಂತಾದ ಫಲಗಳಲ್ಲಿಯೂ, ದ್ರಾಕ್ಷೆ, ಸೌತೇಕಾಯಿ, ಅಕ್ಷೋಟ, ತೊಂಡೆಹಣ್ಣು, ನಿಂಬೆ ಮತ್ತು ಅದೇ ಜಾತಿಯ ಚಕ್ಕೋತ ಮೊದಲಾದ ಹಣ್ಣುಗಳಲ್ಲಿಯೂ, ಮದಿರಾ, ಮೈರೇಯ ಮಾಧ್ವೀಕ, ಆಸವ ಮುಂತಾದ ಮದ್ಯ ವಿಶೇಷಗಳಲ್ಲಿಯೂ, ಮೊಸರು, ಹಾಲು, ತುಪ್ಪ, ಕೆನೆ ಮೊಸರು, ಬೆಣ್ಣೆ ಮುಂತಾದವುಗಳಿಂದ ಕೂಡಿದ ಅನ್ನಾದ್ಯಾ ಹಾರಗಳಲ್ಲಿಯೂ, ಮಧುರಾದ್ಯಾದಿ ಷಡ್ರಸೋಪೇತಗಳಾದ ವಿವಿಧ ವಿಚಿತ್ರ ಲೇಹ್ಯ ಪಾನೀಯಾದಿಗಳನ್ನು ಸೇವಿಸುವ ವಿನೋದಗಳಲ್ಲಿಯೂ, ನಾನಾ ವಿಧಗಳಾದ ಇತರ ಹಣ್ಣು ಹಂಪಲುಗಳಲ್ಲಿಯೂ, ಕಂದಮೂಲಗಳಲ್ಲಿಯೂ, ಕಾಯಿಪಲ್ಯಗಳಲ್ಲಿಯೂ, ಮಾಂಸಾದಿಗಳಲ್ಲಿಯೂ ಹೀಗೆ ಚತುರ್ವಿಧಗಳಾದ ಆಹಾರ ಸಾಮಗ್ರಿಗಳಲ್ಲಿ ಸ್ವಲ್ಪವೂ ಆಸಕ್ತಿಯೇ ಇಲ್ಲದವನಾಗಿ ಚೆನ್ನಾಗಿ ಷಡ್ರಸೋಪೇತಗಳಾದ ಭಕ್ಷ್ಯ ಭೋಜ್ಯಾದಿ ಗಳನ್ನು ತಿಂದು ತಿಂದು ರುಚಿಗಂಡಿರುವ ಬ್ರಾಹ್ಮಣನು ತನ್ನ ಶರೀರದ ಮಾಂಸ ಖಂಡಗಳಲ್ಲಿ ಹೇಗೋ ಹಾಗೆ ಯಾವದರಲ್ಲಿಯೂ ಭೋಗೇಚ್ಛೆಯನ್ನು ಮಾಡುವುದೇ ಇಲ್ಲ.

ಜ್ಞಾನವಾನ್ ಯಮಚಂದ್ರೇಂದ್ರ ರುದ್ರಾರ್ಕಾನಿಲ ಸದ್ಮಸು ।
ಮೇರು ಮಂದರ ಕೈಲಾಸ ಸಹ್ಯದರ್ದುರಸಾನುಷು ॥ ೩೬ ॥

ಕೌಶೇಯದಲಜಾಲೇಷು ಚಂದ್ರಬಿಂಬ ಕಲಾದಿಷು।
ಕಲ್ಪಪ ದಪಕುಂಜೇಷು ದೇಹಶೋಭಾ ವಿಲಾಸಿಷು ॥ ೩೭ ॥

ರತ್ನಕಾಂಚನ ಕುಡ್ಯೇಷು ಮುಕ್ತಾಮಣಿಮಯೇಷು ಚ ।
ತಿಲೋತ್ತಮೋರ್ವಶೀರಂಭಾ ಮೇನಕಾಂಗಲತಾಸು ಚ ॥ ೩೮ ॥

ಕೇಷು ಚಿದ್ದರ್ಶನಂ ಶ್ರೀಮನ್ನಾಭಿವಾಂಛತ್ಯಸಕ್ತಧೀಃ ।
ಪರಿಪೂರ್ಣಮನಾ ಮಾನೀ ಮೌನೀ ಶತ್ರುಷು ಚಾಚಲಃ ॥ ೩೯ ॥

೩೬-೩೯. ಮತ್ತು ಆತ್ಮ ಜ್ಞಾನಿಯೂ ಮಾನಿಯಾಗಿಯೂ (ಚಿತ್ತ ಸಮುನ್ನತಿ ಯುಳ್ಳವನು) ಮೌನವ್ರತಿಯಾಗಿಯೂ, ಕಾಮಾದ್ಯರಿಷಡ್ವರ್ಗಗಳ ವಿಷಯದಲ್ಲಿ ವಿಕಾರಗೊಳ್ಳದೆಯೂ (ಅಚಲನಾಗಿಯೂ) ಅಖಂಡಾಕಾರವಾದ ಬ್ರಹ್ಮಾನಂದದಿಂದ ಪರಿಪೂರ್ಣವಾದ ಮನಸ್ಸುಳ್ಳವನಾಗಿಯೂ ನಿರವಧಿಕವಾದ ಪಾರಮೈಶ್ವರ್ಯ ಸಂಪನ್ನನಾಗಿಯೂ ಇರುವ ಕಾರಣ, ಯಮ, ಚಂದ್ರ, ಇಂದ್ರ, ಈಶಾನ, ಸೂರ್ಯ, ವಾಯು ಮುಂತಾದ ದೇವತೆಗಳ ನಿವಾಸ ಗೃಹಗಳಲ್ಲಿಯೂ. ಮೇರು, ಮಂದರ, ಕೈಲಾಸ, ಸಹ್ಯ, ದರ್ದುರ ಮುಂತಾದ ಪರ್ವತಗಳ ಪ್ರಸ್ಥಭೂಮಿಗಳಲ್ಲಿಯೂ, ರೇಷ್ಮೆಯಂತೆ ಮೃದುವಾದ ಪಲ್ಲವ ಸಮುದಾಯಗಳನ್ನು ಒತ್ತಾಗಿ ಹಾಸಿರುವ ಹಾಸುಗೆಗಳಲ್ಲಿಯೂ, ಚಂದ್ರಮಂಡಲದ ಕಲೆಗಳಲ್ಲಿಯೂ. ಕಲ್ಪ ವೃಕ್ಷಗಳ ತಲದಲ್ಲಿ ಕ್ಲುಪ್ತವಾದ ಲತಾ ಮಂಟಪಗಳಲ್ಲಿಯೂ, ದಿವ್ಯ ಶರೀರ ಲಾವಣ್ಯದಿಂದ ಥಳಥಳಿಸುವ ದೇವಯೋನಿಗಳಲ್ಲಿಯೂ, ರತ್ನಖಚಿತಗಳಾದ ಸುವರ್ಣಮಯ ಗೋಡೆಗಳಿಂದ ವಿರಾಜಿಸುವ ಸೌಧಗಳಲ್ಲಿಯೂ, ಮುತ್ತಿನ ಗೊಂಚಲುಗಳನ್ನು ತೂಗು ಹಾಕಿರುವ ಮಣಿಮಯ ಪ್ರಾಸಾದಗಳಲ್ಲಿಯೂ, ತಿಲೋತ್ತಮೆ, ಊರ್ವಶೀ, ರಂಭಾ, ಮೇನಕಾ ಮೊದಲಾದ ಅಪ್ಸರಸ್ ಸ್ತ್ರೀಯರ ಅಂಗಾ ಲಿಂಗನಾದಿಗಳಲ್ಲಿಯೂ, ಇತ್ಯಾದಿ ಸಕಲ ಐಹಿಕಾಮುಷ್ಮಿಕ ಸುಖಗಳಲ್ಲಿ ಯಾವುದರಲ್ಲಿಯೂ, ಸ್ವಲ್ಪವೂ ಆಸಕ್ತಿಗೊಳ್ಳದವನಾಗಿ ಅವುಗಳನ್ನು ನೋಡಬೇಕೆಂಬುದಾಗಿಯೂ ಮನಸ್ಸಿನಲ್ಲಿ ಬಯಸುವುದಿಲ್ಲ. ಹೀಗಿರುವಾಗ ಆ ಸುಖಾನುಭವಕ್ಕಾಗಿ ಅಭಿಲಷಿಸುವುದಿಲ್ಲವೆಂದು ಹೇಳಬೇಕಾದ ಅವಶ್ಯಕತೆಯು ಯಾವುದು.)

ಜ್ಞಾನವಾನ್ ಕುಂದ ಮಂದಾರಕಹ್ಲಾರ ಕಮಲಾದಿಷು ।
ಕುಮುದೋತ್ಪಲ ಪುನ್ನಾಗ ಕೇತಕ್ಯಗುರುಜಾತಿಷು ॥ ೪೦ ॥

ಕದಂಬ ಚೂತಜಂಬ್ವಾಮ್ರ ಕಿಂಶುಕಾಶೋಕ ಶಾಖಿಷು ।
ಜಪಾತಿ ಮುಕ್ತಸೌ ವೀರಬಿಂಬ ಪಾಟಲಜಾತಿಷು ॥ ೪೧ ॥

ಚಂದನಾಗುರು ಕರ್ಪೂರಲಾಕ್ಷಾ ಮೃಗಮದೇಷು ಚ ।
ಕಾಶ್ಮೀರಜಲವಂಗೈಲಾ ಕಂಕೋಲತಗರಾದಿಷು ॥ ೪೨ ॥

ಕೇಷು ಚಿನ್ನ ನಿಬಧ್ನಾತಿ ಸೌಗಂಧ್ಯರತಿ ಮೇಕಧೀಃ ।
ಸಮಬುದ್ಧಿರ ವಿಕ್ಷೋಭೋ ಮದ್ಯಾಮೋದೇಷ್ವಿವ ದ್ವಿಜಃ ॥ ೪೩ ॥

೪೮-೪೩. ಕೇವಲ ಸ್ವಾತ್ಮ ತತ್ತ್ವದಲ್ಲಿ ಮಾತ್ರವೇ ಪರಿನಿಷ್ಠಿತವಾದ ಬುದ್ಧಿಯುಳ್ಳ ಜ್ಞಾನಿಯು, ಸರ್ವತ್ರ ಪ್ರಿಯಾಪ್ರಿಯಗಳಲ್ಲಿ ಸಮದರ್ಶನವಾಗಿಯೂ, ಭಯ ಕಾಲಗಳಲ್ಲಿ ಚಿತ್ತವಿಕ್ಷೋಭವಿಲ್ಲದವನಾಗಿಯೂ, ಕುಂದ (ಮಾಘ ಮಲ್ಲಿಗೆ) ಮಂದಾರ, ಕಲ್ಹಾರ, ಕಮಲ, ಬಿಳಿ ನೈದಿಲೆ (ಕುಮುದ) ಕನ್ನೈದಿಲೆ, (ಉತ್ಪಲ) ಪುನ್ನಾಗ, ಕೇತಕೀ (ಗೇದಗೆ= ತಾಳೆ ಹೂವು) ಅಗುರು, ಜಾಜಿ ಮುಂತಾದ ಪುಷ್ಪ ವಿಶೇಷಗಳಲ್ಲಿಯೂ ಕದಂಬ, ಮಾವು, ನೇರಳೆ, ಆಮ್ರ, ಮುತ್ತುಗ, ಅಶೋಕ ಮೊದಲಾದ ವೃಕ್ಷ ಜಾತಿಗಳಲ್ಲಿಯೂ, ಕೆಂಪು ದಾಸವಾಳ (ಜಪಾ ಕುಸುಮ) ಅತಿಮುಕ್ತ, ಸೌವೀರ, ತೊಂಡೆ (ಬಿಂಬ) ಪಾದರೀ (ಪಾಟಲ) ಮುಂತಾದ ಲತಾ ವಿಶೇಷಗಳಲ್ಲಿಯೂ, ಕೆಂಪು ಗಂಧ, ಕರಿ ಗಂಧ, (ಚಂದನ+ಅಗರು) ಕರ್ಪೂರ, ಅರಗು ರಸ (ಲಾಕ್ಷಾ) ಕಸ್ತೂರಿ (ಮೃಗಮದ) ಮುಂತಾದ ಮೈಗೆ ಹಚ್ಚುವ ಗಂಧ ದ್ರವ್ಯಗಳಲ್ಲಿಯೂ, ಕುಂಕುಮ ಕೇಸರಿ, ಲವಂಗ, ಏಲಕ್ಕಿ, ಕಚೋರ (ಕಂಕೋಲ) ತಗರ ಮೊದಲಾದ ಸುಗಂಧ ದ್ರವ್ಯಗಳಲ್ಲಿಯೂ, ಹೀಗೆ ಯಾವುದರಲ್ಲಿಯೂ, ಸದಾಚಾರ ಸಂಪನ್ನನಾದ ಶ್ರೋತ್ರಿಯ ಬ್ರಾಹ್ಮಣನು ಮದ್ಯಗಂಧಗಳಲ್ಲಿ ಹೇಗೋ ಹಾಗೆ, ಎಂದಿಗೂ, ಹೇಗೂ ಸೌಗಂಧ್ಯಾಭಿಲಾಷೆಯಿಂದ ಅನುರಾಗವನ್ನು ಹೊಂದುವುದಿಲ್ಲ. (ಅಂತೆಯೇ ದುರ್ಗಂಧದಲ್ಲಿ ದ್ವೇಷವನ್ನೂ ತೋರುವುದಿಲ್ಲವೆಂಬರ್ಥವು ಸೂಚಿತವಾಗುವುದು.)

ಅಬ್ಧೌ ಗುಡಗುಡಾರಾವೇ ಪ್ರತಿಶ್ರುತ್ಪಸ್ವನೇ ಗಿರೌ ।
ನಿನಾದೇ ಚ ಮೃಗೇಂದ್ರಾಣಾಂ ನ ಕ್ಷುಭ್ಯತಿ ಮನಾಗಪಿ ॥ ೪೪ ॥

ದ್ವಿಷದ್ಭೇರಿ ನಿನಾದೇನ ಪಟಹಾರಣಿತೇನ ಚ ।
ಕಟು ಕೋದಂಡ ಘೋಷೇಣ ನ ಬಿಭೇತಿ ಮನಾಗಪಿ ॥ ೪೫ ॥

ಮತ್ತವಾರಣ ಬೃಂಹಾಸು ವೇತಾಲ ಕಲನಾಸು ಚ ।
ಪಿಶಾಚರಕ್ಷಃ ಕ್ಷ್ವೇಡಾಸು ಮನಾಗಪಿ ನ ಕಂಪತೇ ॥ ೪೬ ॥

ಅಶನಿಸ್ವನ ಘೋಷೇಣ ನಗಸ್ಫೋಟರವೇಣ ಚ ।
ಐರಾವಣ ನಿನಾದೇನ ಸಮ್ಯಗ್ಧ್ಯಾನೀ ನ ಕಂಪತೇ ॥ ೪೭ ॥

---

೪೪. ಸಮುದ್ರದ ಅತಿ ಭಯಂಕರವಾದ ಘೋರ್ಗರೆಯುವ ಕಠೋರ ಧ್ವನಿಗಳಲ್ಲಿಯೂ, ಆಕಾಶದಲ್ಲಿ ಉತ್ಪನ್ನವಾಗಿ ಪ್ರತಿಧ್ವನಿಗೊಡುವ ಗುಡುಗುಡು ಎಂಬ ಧ್ವನಿಗಳಲ್ಲಿಯೂ, ಸಿಡಿಲು ಬೀಳುವಾಗ ಕೇಳಿಸುವ ಕರ್ಕಶ ಧ್ವನಿಗಳಲ್ಲಿಯೂ, ಪರ್ವತ ಧ್ವನಿಗಳಲ್ಲಿಯೂ, ಸಿಂಹಗಳ ಗರ್ಜನೆಗಳಲ್ಲಿಯೂ, ಜ್ಞಾನನಿಷ್ಠನು ಸ್ವಲ್ಪವಾದರೂ, ಎಂದಿಗೂ, ಭಯಪಟ್ಟುಕೊಂಡು ಭ್ರಾಂತಚಿತ್ತನಾಗುವುದಿಲ್ಲ.

೪೫. ಹಾಗೆಯೇ ಜ್ಞಾನನಿಷ್ಠನು, ಶತ್ರುಗಳ ರಣಭೇರೀ ಧ್ವನಿಗಳಿಂದಲೂ, ತಮಟೆಗಳ (ಢಕ್ಕಾ) ಢಮ ಢಮ ಶಬ್ದಗಳಿಂದಲೂ, ಕರ್ಕಶವಾದ ಧನುಷ್ಟಂಕಾರಗಳಿಂದಲೂ, ಸ್ವಲ್ಪ ಮಾತ್ರವೂ ಎಂದಿಗೂ ಭಯಗೊಳ್ಳುವುದಿಲ್ಲ.

೪೬. ಮದಿಸಿದ ಆನೆಗಳ ಸೀತ್ಕಾರ (ಬೃಂಹಣ) ಗಳಿಂದಲೂ, ಭೇತಾಳಗಳು ಪರಸ್ಪರ ಜಗಳವಾಡುವ ಧ್ವನಿಗಳಿಂದಲೂ, ಪಿಶಾಚ, ರಾಕ್ಷಸಾದಿಗಳ ಸಿಂಹಗರ್ಜನೆಗಳಿಂದಲೂ, ಜ್ಞಾನಿಯು ಸ್ವಲ್ಪವೂ, ಎಂದಿಗೂ ಹೆದರಿಕೊಂಡು ಕಂಪಿಸುವುದಿಲ್ಲ.

೪೭. ಸಮ್ಯಗ್ ಜ್ಞಾನಿಯಾದ ತತ್ತ್ವಜ್ಞನು ಸರ್ವದಾ ಸ್ವಾತ್ಮತತ್ತ್ವಾನುಸಂಧಾನದಲ್ಲಿ ಮಾತ್ರ ತತ್ಪರನಾಗಿರುವ ಕಾರಣ, ಸಿಡಿಲುಗಳು ಬೀಳುವ ಕಾಲದಲ್ಲಿ ಉಂಟಾಗುವ ಭೀಕರ ಧ್ವನಿಗಳಿಂದಲೂ, ಪರ್ವತಗಳು ಬಿರಿಯುವುದರಿಂದ ಉದ್ಭವಿಸುವ ಕಠೋರ ಶಬ್ದಗಳಿಂದಲೂ, ಐರಾವತವೆಂಬ ಇಂದ್ರನ ಆನೆಯು (ದಿಗ್ಗಜ) ಕೋಪ ಪೂರಿತವಾದ ಆರ್ಭಟಗಳಿಂದಲೂ ಹೆದರಿ ತತ್ತ್ವಾನುಸಂಧಾನವನ್ನು ಬಿಟ್ಟು ಕದಲುವುದಿಲ್ಲ.

ವಹತ್ಕ್ರಕಚಕಾಷೇಣ ಸಿತಾಸಿದಲನೇನ ಚ ।
ಶರಾಶನಿನಿ ಪಾತೇನ ಕಂಪತೇ ನ ಸ್ವರೂಪತಃ ॥ ೪೮ ॥

ನಾನಂದ ಮೇತ್ಯುಪವನೇ ನ ಖೇದ ಮುಪಗಚ್ಛತಿ ।
ನ ಖೇದಮೇತಿ ಮರುಷು ನಾನಂದಮುಪಗಚ್ಛತಿ ॥ ೪೯ ॥

ಪೂತಾಂಗಾರ ಸಮಾಕಲ್ಪಸ್ಯೈಕತೇಷ್ವಪಿ ಧನ್ವಸು ।
ಪುಷ್ಪಪ್ರಕರಸಂಚ್ಛನ್ನ ಮೃದು ಶಾದ್ವಲ ಭೂಮಿಷು ॥ ೫೦ ॥

ಕ್ಷುರಧಾರಾಸು ತೀಕ್ಷ್ಣಾಸು ಶಯ್ಯಾಸು ಚ ನವೋತ್ಪಲೈಃ ।
ಉನ್ನತಾಚಲದೇಶೇಷು ಕೂಪಕೋಶತಲೇಷು ಚ ॥ ೫೧ ॥

ಶಿಲಾಸ್ವರ್ಕಾಂಶುರೂಕ್ಷಾಸು ಮೃದ್ವೀಷು ಲಲನಾಸು ಚ ।
ಸಂಪತ್ಸ್ವಾಪತ್ಸು ಚೋಗ್ರಾಸು ರಮಣೇಷೂತ್ಸವೇಷು ಚ ॥ ೫೨ ॥

ವಿಹರನ್ನಪಿ ನೋದ್ವೇಗೀ ನಾನಂದ ಮುಪಗಚ್ಛತಿ ।
ಅಂತರ್ಮುಕ್ತಮನಾ ನಿತ್ಯಂ ಕರ್ಮಕರ್ತೇವ ತಿಷ್ಠತಿ ॥ ೫೩ ॥

---

೪೮. ಚಲಿಸುತ್ತಿರುವ ಗರಗಸಗಳಿಂದ ತನ್ನ ದೇಹಕ್ಕೆ ಸಂಘರ್ಷಣವುಂಟಾದರೂ, ಬಹು ಹರಿತವಾದ ಕತ್ತಿಗಳಿಂದ ತನ್ನ ದೇಹವು ಛೇದಿಸಲ್ಪಡುವಾಗಲೂ, ಬಾಣಗಳಾಗಲೀ, ಸಿಡಿಲುಗಳಾಗಲೀ ತನ್ನಮೇಲೆ ಬಂದು ಬೀಳುವಾಗಲೂ, ಹೀಗೆ ಎಂತಹ ಮಹಾ ವಿಪತ್ಕಾಲವು ಒದಗಿದಾಗಲೂ, ಯಾವುದರಿಂದಲೂ, ಸ್ವಲ್ಪವೂ ಹೆದರದೆ ಜ್ಞಾನನಿಷ್ಠನು ಸ್ವರೂಪ ಸ್ಥಿತಿ ರೂಪ ಸಮಾಧಿಯನ್ನು ಬಿಟ್ಟು ಚಲಿಸುವುದಿಲ್ಲ.

೪೯. ಜ್ಞಾನನಿಷ್ಠನು ಉದ್ಯಾನವನದಲ್ಲಿರುವಾಗ ಆನಂದಪಡುವುದೂ ಇಲ್ಲ ಅಥವಾ ದುಃಖಿಸುವುದೂ ಇಲ್ಲ. ಮತ್ತು ಮರುಭೂಮಿಗಳಲ್ಲಿ ಪ್ರಯಾಣ ಮಾಡಬೇಕಾದಾಗ ದುಃಖವನ್ನಾಗಲಿ, ಸಂತೋಷವನ್ನಾಗಲೀ ಅನುಭವಿಸುವುದಿಲ್ಲ.

೫೦-೫೩. ಬೂದಿ ಮುಸುಕದೆ ಚೆನ್ನಾಗಿ ಪ್ರಜ್ವಲಿಸುತ್ತಲಿರುವ ಕೆಂಡಗಳಿಗೆ ಸಮನಾಗಿ ಬಿಸಿಲಿನ ತಾಪದಿಂದ ಕೆಂಪಗೆ ಕಾದು, ಸಹಿಸುವುದಕ್ಕೆ ಅಶಕ್ಯವಾದಷ್ಟು

ಅಯಃ ಸಂಕುಚಿತಾಂಗಾಸು ನರಕಾರಣ್ಯ ಭೂಮಿಷು ।
ಪರಸ್ಪರೇರಿತಾನಂತ ಕುಂತತೋಮರ ವೃತ್ತಿಷು ॥ ೫೪ ॥

ನ ಬಿಭೇತಿ ನ ಪಾದತ್ತೇ ವೈವಶ್ಯಂ ನ ಚ ದೀನತಾಂ ।
ಸಮಃ ಸ್ವಸ್ಥಮನಾ ಮೌನೀ ಧೀರಸ್ತಿಷ್ಠತಿ ಶೈಲವತ್ ॥ ೫೫ ॥

ಹೆಚ್ಚಾಗಿ ಸುಡುತ್ತಿರುವ ಮರಳು ರಾಶಿಗಳಿಂದ ಬಹು ಸಂತಾಪಕರವಾದ ಮರು ಭೂಮಿಗಳಲ್ಲಿಯೂ, ಕೆಳಗೆ ಉದುರಿರುವ ಪುಷ್ಪರಾಶಿಗಳಿಂದ ಸಿಬಿಡವಾಗಿ ಗರಕೆ ಹುಲ್ಲು ಚೆನ್ನಾಗಿ ಬೆಳೆದು ಹಸುರಾದ, ಮೃದುವಾಗಿರುವ ಉದ್ಯಾನವನ ಭೂಮಿ ಗಳಲ್ಲಿಯೂ, ಬಹಳ ಹರಿತಗಳಾದ (ಚೂಪಾದ) ಕತ್ತಿಗಳ ಅಲಗುಗಳ ಮೇಲೆಯೂ ಅಥವಾ ಆಗತಾನೇ ಅರಳಿದ ನೈದಿಲೆಗಳ ದಳಗಳಿಂದ ರಚಿತವಾದ ಹಾಸಿಗೆಗಳ ಮೇಲಿರುವಾಗಲೂ, ಎತ್ತರವಾದ ಪರ್ವತಗಳ ಪ್ರಸ್ಥಭೂಮಿಗಳ ಮೇಲೆಯೂ, ಆಳವಾದ ಭಾವಿಗಳ (ಸೇದುವ ಭಾವಿ) ಒಳಗಡೆ ಅಧೋಭಾಗಗಳಲ್ಲಿಯೂ, ಸೂರ್ಯ ಕಿರಣ ಜಾಲಗಳಿಂದ ಕಾದು ಸಂತಾಪಕರವಾಗಿ ಒರಟಾಗಿರುವ ಕಲ್ಲುಬಂಡೆಗಳ ಮೇಲಿರುವಾಗಲೂ, ಸುಂದರಿಯರ ಅತಿ ಕೋಮಲವಾದ ದೇಹದೊಂದಿಗೆ ಆಲಿಂಗ ನಾಧಿಗಳು ಸಂಭವಿಸಿದಾಗಲೂ, ಸುಖಕರ ಸಂಪತ್ತುಗಳಲ್ಲಿಯೂ, ಭೀಕರ ವಿಪತ್ತು ಗಳಲ್ಲಿಯೂ, ವಿವಿಧ ಕ್ರೀಡಾ ವಿನೋದ ಕಾಲಗಳಲ್ಲಿಯೂ, ಅತಿ ಸಂಭ್ರಮಪ್ರದ ಗಳಾದ ವಿವಾಹಾದಿ ಮಹೋತ್ಸವಗಳಲ್ಲಿಯೂ, ಜ್ಞಾನಿಯು ನಿರಂತರವೂ ವಿಹರಿಸು ತ್ತಿದ್ದರೂ ಕೂಡ, ಅವನು ಸರ್ವದಾ ಜ್ಞಾನನಿಷ್ಠಾರೂಪ ಸಮಾಧಿಯಲ್ಲಿ ಅಪ್ರಮತ್ತ ನಾಗಿಯೂ, ಅಂತಸ್ಸಂಗ ವಿನಿರ್ಮುಕ್ತಮನಸ್ಕನಾಗಿಯೂ ಇರುವ: ಕಾರಣ, ಯಾವುದರಿಂದಲೂ ಎಂದಿಗೂ, ಸ್ವಲ್ಪವೂ ಸುಖದುಃಖಗಳನ್ನು ಅನುಭವಿಸುವುದೇ ಇಲ್ಲ. ಕೂಲಿಗಾಗಿ ದುಡಿಯುವ ಭೃತ್ಯನು ತನ್ನ ಯಜಮಾನನಿಗೋಸ್ಕರವೇ ತನಗೆ ನೇಮಿಸಲ್ಪಟ್ಟ ಕೆಲಸಗಳಲ್ಲಿ ಲಾಭ ನಷ್ಟಗಳ ವಿಚಾರವೇ ಇಲ್ಲದೆ ಅನಾಸಕ್ತ ನಾಗಿಯೇ ವ್ಯವಹರಿಸುವಂತೆ ಜ್ಞಾನನಿಷ್ಠನೂ ಅತ್ಯವಶ್ಯ ಕರ್ತವ್ಯಗಳಾಗಿ ಯದೃಚ್ಛಾಪ್ರಾಪ್ತವಾದ ಕೇವಲ ಶಾರೀರಕ ಕರ್ಮಗಳಲ್ಲಿ ಉದಾಸೀನನಾಗಿಯೇ ವ್ಯವಹರಿಸುವನು. ಗೀತೆಯ ದ್ವಿತೀಯಾಧ್ಯಾಯದಲ್ಲಿ ಉಪದಿಷ್ಟವಾಗಿರುವ ಸ್ಥಿತ ಪ್ರಜ್ಞನ ವ್ಯವಹಾರದೊಂದಿಗೆ ಹೋಲಿಸಿರಿ.)

೫೪-೫೫ ಮತ್ತು ಜ್ಞಾನಿಯು ಪ್ರಾರಬ್ಧಕರ್ಮಶೇಷ ವಶದಿಂದ ಸಂಪ್ರಾಪ್ತ ವಾದ, ಕಬ್ಬಿಣದ ಯಂತ್ರಗಳಿಂದ ಸಂಕುಚಿತಾಂಗಗಳಾದ ಮಹಾ ರೌರವಾದಿ ನರಕ

ಅಪವಿತ್ರಮುಪಥ್ಯಂ ಚ ವಿಷಸಿಕ್ತಂ ಮಲಾದ್ಯಪಿ ।
ಭುಕ್ತ್ವಾ ಜರಯತಿ ಕ್ಷಿಪ್ರಂ ಕ್ಲಿನ್ನಂ ನಷ್ಟಂ ಚ ಮೃಷ್ಟವತ್ ॥ ೫೬ ॥

ಬಿಂಬಪ್ರತಿ ವಿಷಾಕಲ್ಕ ಕ್ಷೀರೇಕ್ಷು ಸಲಿಲಾಂಧಸಾಂ ।
ಅಸಕ್ತ ಬುದ್ಧಿಸ್ತತ್ವಜ್ಞೋ ಭವತ್ಯಾಸ್ವಾದನೇ ಸಮಃ ॥ ೫೭ ॥

ಲೋಕಗಳ ವನಪ್ರಾಂತಗಳಲ್ಲಿಯೂ ಅಥವಾ ದ್ವಂದ್ವ ಯುದ್ಧಗಳಲ್ಲಿ (ಪರಸ್ಪರ ಹೊಡೆದಾಟಗಳಲ್ಲಿ) ಒಬ್ಬರ ಮೇಲೆ ಇನ್ನೊಬ್ಬರು ಎಸೆಯುವ ಈಟಿ ಭಲ್ಲೆ ಮುಂತಾದ ನಾನಾ ಶಸ್ತ್ರಾಸ್ತ್ರಗಳ ವೃಷ್ಟಿಗಳಲ್ಲಿಯೂ ಭಯಪಡುವುದಿಲ್ಲ. ಕಳವಳಗೊಳ್ಳುವುದೂ ಇಲ್ಲ ಮತ್ತು ದೈನ್ಯವನ್ನು ಅವಲಂಬಿಸುವುದೂ ಇಲ್ಲ. ಆದರೆ ಎಂತಹ ವಿಷಮ ಸ್ಥಿತಿಯು ಪ್ರಾಪ್ತವಾದರೂ, ಸಮಬುದ್ಧಿಯುಳ್ಳವನಾಗಿಯೂ ಸ್ವಸ್ಥಚಿತ್ತನಾಗಿಯೂ, ಹರಟದವನಾಗಿಯೂ (ಮೌನಿ) ವಿಕಾರಗೊಳ್ಳದವನಾಗಿಯೂ (ಧೀರ) ಪರ್ವತದಂತೆ ಕದಲದೆ ಅಚಲನಾಗಿರುವನು.

೫೬. ಅಪರಿಶುದ್ಧವೂ ಅನಾರೋಗ್ಯಕರವೂ, ವಿಷಮಿಶ್ರವಾದುದೂ, ಹಳಸಿ ನೀರು ಕಾರುತ್ತಿರುವುದೂ, ನೀರಸವೂ (ರುಚಿಯಿಲ್ಲದುದು) ಇರುವ ಎಂತಹುದೇ ಅದ ಆಹಾರವು ಯಾದೃಚ್ಛಿಕವಾಗಿ ದೊರೆತರೂ, ಒಂದುವೇಳೆ ಅದು ಸೆಗಣಿಯೇ (ಮಲವೇ) ಆಗಿದ್ದರೂ ಜ್ಞಾನಿಯು ಅಸಹ್ಯಪಡದೆ ಅದನ್ನು ಮೃಷ್ಟಾನ್ನದಂತೆಯೇ ಭಾವಿಸಿ ಸಂತೋಷದಿಂದ ಊಟ ಮಾಡಿಯೂ, ಸುಲಭವಾಗಿ ಜೀರ್ಣಿಸಿ ಕೊಳ್ಳುವನು.

೫೭. ಮತ್ತು ತತ್ತ್ವಜ್ಞನು ಸದಾ ಸರ್ವ ವಿಷಯಗಳಲ್ಲಿ ಅನಾಸಕ್ತ ಚಿತ ನಾಗಿರುವ ಕಾರಣ, ತಿಂದೊಡನೆಯೇ ಬುದ್ಧಿನಾಶಕವೆಂದು ಪ್ರಸಿದ್ಧವಾದ ಬಿಂಬ ಫಲಗಳನ್ನಾಗಲಿ, ಅತ್ಯಂತ ವಿಷಪ್ರಾಯಗಳಾಗಿ ಬಹು ಕಹಿಯಾದ ಕಷಾಯ ಗಳನ್ನಾಗಲೀ, ಹಾಲು, ಕಬ್ಬಿನ ರಸ, ಪಾನಕ, ಸೀನೀರು, ಅನ್ನ ಮುಂತಾದವು ಗಳನ್ನಾಗಲೀ ಸೇವಿಸುವ ವಿಷಯ (ತಿನ್ನುವ ಅಥವಾ ಕುಡಿಯುವ) ದಲ್ಲಿ ಒಂದೇ ಸಮನಾದ ಚಿತ್ತವೃತ್ತಿಯುಳ್ಳವನಾಗಿರುವನು.

ಮೈರೇಯ ಮದಿರಾಕ್ಷೀರರಕ್ತ ಮೇದೋರಸಾಸವೈಃ ।
ರೂಕ್ಷಾಸ್ಥಿತೃಣಕೇ ಶಾಂತ್ಯೈರ್ನ ಹೃಷ್ಯತಿ ನ ಕುಪ್ಯತಿ ॥ ೫೮ ॥

ಜೀವಿತಸ್ಯಾಪಿ ಹರ್ತಾರಂ ದಾತಾರಂ ಚೈಕರೂಪಯಾ ।
ದೃಶಾ ಪ್ರಸಾದ ಮಾಧುರ್ಯ ಶಾಲಿನ್ಯಾ ಪರಿಪಶ್ಯತಿ ॥ ೫೯ ॥

ಸ್ಥಿರಾಸ್ಥಿರ ಶರೀರೇಷು ರಮ್ಯಾರಮ್ಯೇಷು ವಸ್ತುಷು ।
ನ ಹೃಷ್ಯತಿ ಗ್ಲಾಯತಿ ವಾ ಸದಾ ಸಮತಯೋದ್ಧಯಾ ॥ ೬೦ ॥

---

೫೮. ರಾಕ್ಷಸ ಪಿಶಾಚಾದಿ ಪಾಪಯೋನಿಗಳಲ್ಲಿ ಜನಿಸಿದವರಾದರೂ, ಕಾಲಾಂತರದಲ್ಲಿ ಆತ್ಮತತ್ತ್ವ ಸಾಕ್ಷಾತ್ಕಾರವನ್ನು ಪಡೆದುಜೀವನ್ಮುಕ್ತರಾಗಿರುವವರು. ತಮ್ಮ ಜಾತಿ ಸ್ವಭಾವಾನುಗುಣವಾಗಿ ಪೂರ್ವದಂತೆಯೇ ಯದೃಚ್ಛಾ ಪ್ರಾಪ್ತವಾದ ಮೈರೇಯ, ಮದಿರಾ, ಆಸವ ಮೊದಲಾದ ಮದ್ಯ ವಿಶೇಷಗಳು, (ನಿಷಿದ್ಧ ಪಾನೀಯ) ಹಾಲು, ರಕ್ತ, ಮೇದೋರಸ, ಕರ್ಕಶವಾದ ಮೂಳೆಗಳು, ಹುಲ್ಲು ಕಡ್ಡಿಗಳು, ಕೂದಲಿನ ತುಂಡುಗಳು ಮೊದಲಾದ ಜುಗುಪ್ಸಾಕರವಾದ ವಸ್ತುಗಳಿಂದಲೂ ಪೂರ್ವದಂತೆ ಸಂತೋಷಪಡುವುದೂ ಇಲ್ಲ. ಅಥವಾ ಕೋಪಗೊಳ್ಳುವುದೂ ಇಲ್ಲ.

೫೯. ಮತ್ತೂ ತತ್ತ್ವಜ್ಞನು ತನ್ನನ್ನು ಕೊಂದು ಜೀವವನ್ನೇ ಅಪಹರಿಸಲು ಹೊಂಚು ಹಾಕುತ್ತಿರುವ ಶತ್ರುವನ್ನೂ, ಪ್ರಾಣವನ್ನು ಕೊಡಲು ಸಿದ್ಧನಾಗಿರುವ ಮಿತ್ರನನ್ನೂ ಕೂಡ, ಪ್ರಸನ್ನವೂ, ಮಧುರವೂ, ನಿಷ್ಕಳಂಕವೂ, ಸಹಜವೂ ಆದ ಒಂದೇ ರೂಪವಾದ ಸಮ ದೃಷ್ಟಿಯಿಂದಲೇ ಕಾಣುವನು.

೬೦. ಕಲ್ಪಾಂತದವರೆವಿಗೆ ಚಿರಕಾಲಸ್ಥಾಯಿಗಳಾದ ದೇವಾದಿ ದೇಹಗಳಲ್ಲಿಯೂ, ಕ್ಷಣ ವಿಧ್ವಂಸಿಗಳಾದ ಮನುಷ್ಯಾದಿ ದೇಹಗಳಲ್ಲಿಯೂ, ರಮ್ಯಗಳಾದ ಪಾರಲೌಕಿಕ ಭೋಗಗಳಲ್ಲಿಯೂ, ವಿರಸವಾದ ಮಾನುಷ ಭೋಗಗಳಲ್ಲಿಯೂ ಸರ್ವದಾ ವಿರಾಜಿಸುತ್ತಿರುವ ಸಮತ್ವ ಬುದ್ಧಿಯಿಂದ ತತ್ತ್ವಜ್ಞನು ಹರ್ಷಿಸುವುದೂ ಇಲ್ಲ. ವ್ಯಸನಪಡುವುದೂ ಇಲ್ಲ.

ಮುಕ್ತಾಸ್ಥತ್ವಾದನಾಸ್ಥೇಯ ರೂಪತ್ವಾಜ್ಜಗತಃ ಸ್ಥಿತೌ ।
ನೂನಂ ವಿದಿತವೇದ್ಯತ್ವಾನ್ನೀರಾಗತ್ವಾತ್ ಸ್ವಚೇತಸಃ ॥ ೬೧ ॥

ನ ಕಸ್ಯಚಿನ್ನೋ ಕದಾಚಿದಕ್ಷಸ್ಯ ವಿಷಯ ಸ್ಥಿತೌ ।
ದದಾತಿ ಪ್ರಸರಂ ಸಾಧುರಾಧಿ ಪ್ರೋಜ್ಝಿತಯಾ ಧಿಯಾ ॥ ೬೨ ॥

ಅತತ್ವಜ್ಞಮವಿಶ್ರಾಂತಮಲಬ್ಧಾತ್ಮಾನಮಸ್ಥಿತಿಂ ।
ನಿಗಿರಂತೀಂದ್ರಿಯಾಣ್ಯಾಶು ಹರಿಣಾ ಇವ ಪಲ್ಲವಂ ॥ ೬೩ ॥

ಉಹ್ಯಮಾನಂ ಭವಾಂಭೋಧೌ ವಾಸನಾವೀಚಿ ವೇಲ್ಲಿತಂ ।
ನಿಗಿರಂತೀಂದ್ರಿಯಗ್ರಾಹಾ ಮಹಾಕ್ರಂದ ಪರಾಯಣಂ ॥ ೬೪ ॥

೬೧-೬೨. ಮತ್ತು ತತ್ತ್ವಜ್ಞನ ಮನಸ್ಸು ರಾಗರಹಿತವಾಗಿಯೂ (ವಿರಕ್ತ) ವೇದ್ಯವಾದ ಸ್ವಾತ್ಮತತ್ತ್ವವನ್ನು ತಿಳಿದು ಕೃತಕೃತ್ಯತೆಯನ್ನು ಪಡೆದುದಾಗಿಯೂ ಇರುವ ಕಾರಣ ಪ್ರಾಪಂಚಿಕ ಸ್ಥಿತಿಗಳಲ್ಲಿ ಹಿಂದಿದ್ದ ಆಸ್ಥೆಯನ್ನು ತೊರೆದು ಅನಾಸಕ್ತವಾಗುವುದು. ಮತ್ತು ಪ್ರಾಪಂಚಿಕ ವಿಷಯಗಳು ಅತ್ಯಂತ ಮಿಥ್ಯಾಭೂತವಾದವುಗಳೆಂಬ ನಿಶ್ಚಯ ಜ್ಞಾನದಿಂದ ಅವುಗಳಲ್ಲಿ ಆಸ್ಥೆಯನ್ನಿಡಲು ಅವು ಅಯೋಗ್ಯವಾದವುಗಳೆಂದು ಯಥಾರ್ಥವಾಗಿ ತಿಳಿದು, ಅಭಿಮಾನವನ್ನು ತೊರೆದುಬಿಡುವುದು. ಅದು ಕಾರಣ, ತತ್ತ್ವಜ್ಞನು ಸದಾ ಆಧಿವಿವರ್ಜಿತವಾದ ಸಮಬುದ್ಧಿಯಿಂದ ಯಾವ ಕಾಲದಲ್ಲಿಯೂ, ಯಾವ ಇಂದ್ರಿಯಕ್ಕೂ ವಿಷಯಗಳ ಕಡೆಗೆ ಪ್ರವೃತ್ತಿಯನ್ನು ಎಂದಿಗೂ ಕೊಡುವುದೇ ಇಲ್ಲ.

೬೩. ಜಿಂಕೆಗಳು ಚಿಗುರೆಲೆಗಳನ್ನು ಬೇಗನೆ ನುಂಗಿಬಿಡುವಂತೆ ತತ್ತ್ವಜ್ಞಾನರಹಿತನಾಗಿಯೂ, ಅದು ಕಾರಣವೇ, ಸ್ವಾತ್ಮಸ್ವರೂಪ ಲಾಭವನ್ನು ಪಡೆಯದವನಾಗಿಯೂ, ಆದುದರಿಂದಲೇ ಎಲ್ಲಿಯೂ ಒಂದು ಕ್ಷಣವೂ ವಿಶ್ರಾಂತಿಯೇ ಇಲ್ಲದೆ ಅಲೆಯುವವನಾಗಿಯೂ ಅನವಸ್ಥಿತನಾಗಿಯೂ ಇರುವ ನರಾಧಮನನ್ನು ಮಾತ್ರವೇ ಈ ಇಂದ್ರಿಯಗಳು ಬಹು ಬೇಗ ಸುಲಭವಾಗಿ ನುಂಗುವುವು.

೬೪. ಅವಿದ್ಯಾ ಕಾಮ ಕರ್ಮ ಸಂಕಲ್ಪಾದಿ ನಾನಾವಿಧ ವಾಸನೆಗಳೆಂಬ ತರಂಗಮಾಲೆಗಳ ಹೊಡೆತಕ್ಕೆ ಸಿಕ್ಕಿ ಹೊರಳಾಡಿಸಲ್ಪಡುತ್ತಲೂ, ಅಪಾರವಾದ ಸಂಸಾರವೆಂಬ ಸಾಗರದಲ್ಲಿ ಕೊಚ್ಚಿಕೊಂಡು ಹೋಗುತ್ತಲೂ, ತಾನು ಹಾಳಾಗುವ

ವಿಚಾರಿಣಂ ಭವ್ಯಪದಂ ವಿಶ್ರಾಂತಧಿಯಮಾತ್ಮನಿ ।
ನ ಹರಂತಿ ವಿಕಲ್ಪೌಘಾ ಜಲೌಘಾ ಇವ ಪರ್ವತಂ ॥ ೬೫ ॥

ಸರ್ವ ಸಂಕಲ್ಪ ಸೀಮಾಂತೇ ವಿಶ್ರಾಂತಾ ಯೇ ಪರೇ ಪದೇ ।
ತೆ"ಷಾಂ ಲಬ್ಧ ಸ್ವರೂಪಾಣಾಂ ಮೇರುರೇವ ತೃಣಾಯತೇ ॥ ೬೬ ॥

ಜಗಜ್ಜರ ತ್ತೃಣಲವೋ ವಿಷಂ ಚಾಮೃತಮೇವ ಚ ।
ಕ್ಷಣಃ ಕಲ್ಪಸಹಸ್ರಂ ಚ ಸಮಮಾತತ ಚೇತಸಾಂ ॥ ೬೭ ॥

ನೆಂಬ ಭೀತಿಯಿಂದ ಕಂಗೆಟ್ಟು ಅತಿ ದೀನನಾಗಿ (ಸಂಸಾರ ಸಾಗರವನ್ನು ದಾಟಿಸತಕ್ಕ ವಿವೇಕ, ವೈರಾಗ್ಯಾಭ್ಯಾಸಾದಿ ತತ್ತ್ವಜ್ಞಾನ ಸಾಧನೋಪಾಯವೆಂಬ ಭದ್ರವಾದ ನಾವೆಯ ಸಹಾಯದಿಂದ ಪ್ರಯತ್ನಪಡದೆಯೇ) ಸುಮ್ಮನೆ ವ್ಯರ್ಥವಾಗಿ ಉಚ್ಚ ಸ್ವರದಿಂದ ಅಳುತ್ತಿರುವ ಮಹಾ ಮೂಢನನ್ನು ಇಂದ್ರಿಯಗಳೆಂಬ ಮೊಸಳೆಗಳು ನುಂಗಿಬಿಡುತ್ತವೆ.

೬೫. ಒಂದು ದೊಡ್ಡ ಪರ್ವತವನ್ನು ಕೊಚ್ಚಿಕೊಂಡು ಹೋಗುವುದಕ್ಕೆ ಜಲ ಪ್ರವಾಹಗಳಿಗೆ ಸ್ವಲ್ಪವೂ ಶಕ್ತಿಯಿಲ್ಲದಂತೆ ಅನವರತವೂ, ಆತ್ಮತತ್ತ್ವ ವಿಚಾರ ಶೀಲನಾಗಿಯೂ, ಪರಮ ಮಂಗಳ ಸ್ವರೂಪವಾದ ಆತ್ಮ ತತ್ತ್ವವನ್ನು ಸಾಕ್ಷಾತ್ಕರಿಸಿದವನಾಗಿಯೂ ಮತ್ತು ಆತ್ಮನಲ್ಲಿ ಮಾತ್ರವೇ ಅಚಲವಾಗಿ ನೆಲೆಗೊಂಡಿರುವ ಬುದ್ಧಿಯುಳ್ಳವನಾಗಿಯೂ ಇರುವ ಮಹಾ ಪುರುಷನನ್ನು ಕದಲಿಸುವುದಕ್ಕೆ ಕೂಡ ಲೋಭ ಮೋಹಾದಿ ವಿಕಲ್ಪಗಳಿಗೆ ಸರ್ವಥಾ ಶಕ್ತಿಯಿಲ್ಲವು.

೬೬. ಸಮಸ್ತ ಸಂಕಲ್ಪಗಳ ಎಲ್ಲೆಯ ಕೊನೆಯಲ್ಲಿ ಹೊರಗೆ ಅವುಗಳ ಸಂಪರ್ಕವೇ ಇಲ್ಲದ ಸ್ವಾತ್ಮ ತತ್ತ್ವರೂಪ ಪರಮ ಪದದಲ್ಲಿ ಯಾವ ಮಹಾತ್ಮರು ಸತತವೂ ವಿಶ್ರಾಂತರಾಗಿರುವರೋ ಅಂತಹ ಸ್ವಾತ್ಮ ಸ್ವರೂಪ ಪ್ರಾಪ್ತಿಯಿಂದ ಪರಿಪೂರ್ಣ ಸರ್ವಕಾಮರಾಗಿ ನಿತ್ಯ ತೃಪ್ತರಿಗೆ ಚಿನ್ನದ ಬೆಟ್ಟವಾದ ಮೇರುವೂ ಕೂಡ ಹುಲ್ಲಿಗೆ ಸಮನಾಗಿರುವುದು.

೬೭. ಪರಿಪೂರ್ಣಾತ್ಮಾಕಾರ ಅತ್ಯುದಾರಚಿತ್ತರಾದ ತತ್ತ್ವಜ್ಞರಿಗೆ ಈ

ಸಂವಿನ್ಮಾತ್ರಂ ಜಗದಿತಿ ಮತ್ವಾ ಮುದಿತಬುದ್ಧಯಃ ।
ಸಂವಿನ್ಮಯತ್ವಾದಂತಸ್ಥ ಜಗತ್ಕಾ ವಿಹರಂತ್ಯಮೀ ॥ ೬೮ ॥

ಸಂವಿನ್ಮಾತ್ರ ಪರಿಸ್ಪಂದೇ ಜಾಗತೇ ವಸ್ತು ಪಂಜರೇ ।
ಕಿಂ ಹೇಯಂ ಕಿಮುಪಾದೇಯಮಿಹ ತತ್ವವಿದಾಂ ಮತಂ ॥ ೬೯ ॥

ಸಂವಿದೇವೇದಮಖಿಲಂ ಭ್ರಾಂತಿಮನ್ಯಾಂ ತ್ಯಜಾನಘ ।
ಸಂವಿನ್ಮಯವಪುಃ ಸ್ಫಾರಂ ಕಿಂ ಜಹಾತಿ ಕಿಮೀಹತೇ ॥ ೭೦ ॥

ಜಗತ್ತೂ ಒಂದು ಹಳೆಯ ಹುಲ್ಲುಕಡ್ಡಿಯೂ, ವಿಷವೂ, ಅಮೃತವೂ, ಒಂದು ಕ್ಷಣಕಾಲವೂ ಸಾವಿರಕಲ್ಪಪರಿಮಿತಕಾಲವೂ, ಹೀಗೆ ಎಲ್ಲವೂ ಒಂದೇಸಮ ವಾಗಿರುವುದು.

೬೮. ಈ ದೃಶ್ಯ ಪ್ರಪಂಚವೆಲ್ಲವೂ ಕೇವಲ ಚಿದ್ರೂಪವೇ ಎಂದು ತತ್ತ್ವತಃ ತಿಳಿದು ನಿತ್ಯ ನಿರತಿಶಯ ಸ್ವಾತ್ಮಾನಂದ ಲಾಭದಿಂದ ಸದಾ ಸಂತುಷ್ಟಚಿತ್ತರಾಗಿ ರುವ ಈ ತತ್ತ್ವಜ್ಞರು ಸ್ವತಃ ಕೇವಲ ಚಿನ್ಮಯರಾಗಿರುವ ಕಾರಣ, ಸ್ವಸ್ವರೂಪ ದಲ್ಲಿಯೇ ಅಂತರ್ಗತವಾದ ಸಮಸ್ತ ಪ್ರಪಂಚವುಳ್ಳವರಾಗಿ ವಿಹರಿಸಿಕೊಂಡು ಆತ್ಮಾರಾಮರಾಗಿರುವರು.

೬೯. ಈ ಪ್ರಾಪಂಚಿಕ (ಐಹಿಕ ಮತ್ತು ಪಾರ ಲೌಕಿಕ) ಪದಾರ್ಥ ಸಮು ದಾಯಗಳೆಲ್ಲವೂ ಕೇವಲ ಚಿದ್ರೂಪಾತ್ಮನ ಸಂಕಲ್ಪಕಲ್ಪಿತವಾಗಿ ಪ್ರಚಲಿತವಾದುದು. ಹೀಗಿರುವಾಗ ಇದರೊಳಗೆ ತತ್ತ್ವಜ್ಞರಿಗೆ ಅನಭಿಮತವಾಗಿ ತ್ಯಾಜ್ಯವಾಗಿರುವುದು ಯಾವುದು ? ಅಥವಾ ಗ್ರಾಹ್ಯವಾಗಿರುವುದು ಯಾವುದು ?

೭೦. ಅಯ್ಯ ಅನಘನಾದ ರಾಮಭದ್ರ, ಈ ದೃಶ್ಯಜಾತವೆಲ್ಲವೂ ಚಿನ್ಮಾತ್ರವೇ ಇತರವಾದ ದ್ವೈತ ಭ್ರಾಂತಿಯನ್ನು ಬಿಟ್ಟುಬಿಡು. ಸ್ವಯಂ ಜ್ಯೋತೀ ರೂಪ ಚಿನ್ಮಯಾಕಾರನಾದ ತತ್ತ್ವಜ್ಞನು ಈ ಜಗತ್ತಿನಲ್ಲಿ ಯಾವುದನ್ನು ತಾನೇ ಬಯಸಿ ಗ್ರಹಿಸುವನು ? ಯಾವುದನ್ನು ದ್ವೇಷಿಸಿ ತ್ಯಜಿಸುವನು.

ಯದೇತಜ್ಜಾಯತೇ ಭೂಮೇರ್ಭವಿಷ್ಯತ್ಪಲ್ಲ ವಾಂಕುರಂ ।
ತತ್ಸಂವಿದೇವ ಪ್ರಥತೇ ತಥಾ ತತ್ತ್ವಾಂಕುರಸ್ಥಿತಂ ॥ ೭೧ ॥

ಆದಾವಂತೇ ಚಯನ್ನಾಸ್ತಿ ವರ್ತಮಾನೇಽಪಿ ತಸ್ಯ ಚ ।
ಕಿಂಚಿತ್ಕಾಲಲವಂ ದೃಷ್ಟ್ವಾ ಸತ್ತಾಸೌ ಸಂವಿದೋ ಭ್ರಮಃ ॥ ೭೨ ॥

ಇತಿ ಮತ್ವಾ ಧಿಯಂ ತ್ಯಕ್ತ್ವಾ ಭಾವಾಭಾವಾನುಪಾತಿನೀಂ ।
ನಿಃಸಂಗ ಸಂವಿದ್ಬ್ರೂಪೋ ಭವ ಭಾವಾಂತ ಮಾಗತಃ ॥ ೭೩ ॥

---

೭೧. ಹಿಂದೆ ಯಾವಾಗಲೋ ಇದ್ದು ಈಗ ನಾಶ ಹೊಂದಿರುವ ಅತೀತ ವಾದ ವಿಷಯದಲ್ಲಿ ಇಚ್ಛೆಯೇ ಕಾಣುವುದಿಲ್ಲ. ತತ್ತ್ವಜ್ಞಾನ ಶೂನ್ಯರಾದ ಅಜ್ಞಾನಿ ಗಳೆಂಬ ಹರಿಣಗಳು ಆಸೆಪಡುವ ಪಲ್ಲವಾಂಕುರ ಪ್ರಾಯಗಳಾದ ಯಾವ ವಿಷಯ ಸಮೂಹಗಳು ಈಗ ಭೂಮಿಯ ದೆಸೆಯಿಂದ ಉದ್ಭವಿಸುತ್ತಲಿವೆಯೋ ಮತ್ತೂ ಇನ್ನು ಮುಂದೆ ಉದ್ಭವಿಸುವುವೋ ಅವುಗಳೆಲ್ಲವೂ ತತ್ತ್ವಜ್ಞಾನ ದೃಷ್ಟಿಯಿಂದ ಹೇಗೆ ಕೇವಲ ಚಿದ್ರೂಪವಾಗಿಯೇ ಸ್ಫುರಿಸುವುದೋ ಹಾಗೆ ಆಕಾಶಾದಿ ಪಂಚ ಮಹಾ ಭೂತಗಳ ತತ್ತ್ವಾಂಕುರಗಳಂತಿರುವ ಶಬ್ದಾದಿ ವಿಷಯಾಂತರಗಳೂ ಕೂಡ ಕೇವಲ ಚಿದ್ರೂಪವಾಗಿಯೇ ಪ್ರತಿಭಾಸಮಾನವಾಗಿರುವುವು.

೭೨. ಯಾವುದು ಉತ್ಪತ್ತಿಗಿಂತ ಮುಂಚೆ ಆದಿಯಲ್ಲಿಯೂ ಧ್ವಂಸವಾದ ಬಳಿಕ ಕೊನೆಯಲ್ಲಿಯೂ ಇಲ್ಲವೇ ಇಲ್ಲವೋ, ಅದು ಈಗಲೂ (ವರ್ತಮಾನ ಕಾಲದಲ್ಲೂ) ಇಲ್ಲವೆಂದೇ ತಿಳಿಯಬೇಕು. ಏಕೆಂದರೆ, ಈಗ ಬಹಳ ಸ್ವಲ್ಪಕಾಲ ಮಾತ್ರವೇ. ಮಧ್ಯಕಾಲದಲ್ಲಿ ಕಾಣತಕ್ಕ ಅದರ ಸತ್ತೆಯು (ಇರುವಿಕೆ) ಸಂವಿತ್ತಿನ ಭ್ರಾಂತಿಯೇ ಸರಿ. [ಶ್ರೀ ಗೌಡಪಾದೀಯ ಮಾಂಡೂಕ್ಯ ಕಾರಿಕಾ. ವೈತಥ್ಯ ಪ್ರಕರಣ. ೬ ರಿಂದ ೧೦. ನೋಡಿ.]

೭೩. ರಾಮ, ಹೀಗೆ ಇದುವರೆವಿಗೂ ನಾನು ಉಪದೇಶಿಸಿದ ತತ್ತ್ವ ವಿಚಾರ ವನ್ನು ಯಥಾರ್ಥವಾಗಿ ತಿಳಿದುಕೊಂಡು ಮನನ ಮಾಡುವುದರ ಮೂಲಕ ಅದನ್ನು ದೃಢಪಡಿಸಿಕೊಂಡು ಭಾವಾಭಾವ ವಿಕಲ್ಪಗಳ ಕಡೆಗೆ ವ್ಯರ್ಥವಾಗಿ ಹಾರಾಡುವ ಚಪಲ ಬುದ್ಧಿಯನ್ನು ಪರಿತ್ಯಜಿಸು. ಬಳಿಕ; ನೀನು ನಿನ್ನ ಮನಸ್ಸನ್ನು ಸ್ವಾತ್ಮ

ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ ।
ಕರ್ಮ ಕುರ್ವನ್ನ ಕುರ್ವನ್ವಾ ನಿಃಸಂಗಃ ಸನ್ನ ಲಿಪ್ಯತೇ ॥ ೭೪ ॥

ಗತಸಂಗೇನ ಮನಸಾ ಕುರ್ವನ್ನಪಿ ನ ಲಿಪ್ಯತೇ ।
ಸುಖದುಃಖೈರ್ಮಹಾಬಾಹೋ ಮನೋರಥದಶಾಸ್ವಿವ ॥ ೭೫ ॥

ಗತಸಂಗಾಂ ಮತಿಂ ಕುರ್ವನ್ಕುರ್ವನ್ನಪ್ಯಂಗ ಯಷ್ಟಿಭಿಃ ।
ನ ಲಿಪ್ಯತೇ ಸುಖೈರ್ದುಃಖೈರ್ಮನೋರಥದಶಾಸ್ವಿವ ॥ ೭೬ ॥

ತತ್ತ್ವದಲ್ಲಿ ಲಯಗೊಳ್ಳಿಸಿದವನಾಗಿ, ಅಸಂಗ ಸ್ವಪ್ರಕಾಶ ಕೇವಲ ಚಿದ್ರೂಪ ನಾಗಿರು.

೭೪. ತತ್ತ್ವಜ್ಞನು ಕ್ರಿಯಾಕಾರಕ ಫಲಾದಿ ಭೇದ ಬುದ್ಧಿರಹಿತನಾಗಿಯೂ, ಅನಾಸಕ್ತನಾಗಿಯೂ ಇರುವ ಕಾರಣ, ಅವನು ದೇಹದಿಂದಲಾಗಲಿ, ಮನೋಬುದ್ಧಿ ಗಳಿಂದಲಾಗಲೀ ಮತ್ತು ಅಭಿಸಂಧ್ಯಾತ್ಮಕ ದೋಷ ಶೂನ್ಯಗಳಾದ ಚಕ್ಷು ರಾದೀಂದ್ರಿಯಗಳಿಂದಲಾಗಲೀ, ಅಂತರ್ಮುಖಿಯಾಗಿದ್ದುಕೊಂಡಾಗಲೀ ಅಥವಾ ಬಹಿರ್ಮುಖಿಯಾಗಿದ್ದುಕೊಂಡಾಗಲೀ, ಕರ್ಮಗಳನ್ನು ಮಾಡುವವನಾಗಿರಲಿ ಅಥವಾ ಮಾಡದೆಯೇ ಇರಲಿ ಹೇಗೂ ಆ ವ್ಯವಹಾರಗಳಿಂದ ಸ್ವಲ್ಪವೂ ಸರ್ವಥಾ ಲಿಪ್ತನಾಗುವುದಿಲ್ಲ. (ಭಗವದ್ಗೀತಾ ಅಧ್ಯಾಯ ೫. ಶ್ಲೋಕ. ೭-೨ ನೋಡಿ.)

೭೫. ಅಯ್ಯ ಮಹಾ ಬಾಹುವೇ, ಕೇವಲ ಮನೋರಥ (ಸಂಕಲ್ಪ) ಗಳಿಂದ ಕಲ್ಪಿತಗಳಾದ (ತಿರುಕನ ಕನಸಿನಂತೆ) ಮನೋರಾಜ್ಯ ವೈಭವಾದಿಗಳು ನಷ್ಟ ವಾದರೂ ಅಥವಾ ನಷ್ಟವಾಗದೆ ಇದ್ದರೂ ಅವುಗಳಿಂದ ಸುಖದುಃಖಗಳ ಲೋಪವಿಲ್ಲ ದಿರುವಂತೆ ಫಲಾಭಿಸಂಧಿಯೇ ಮೊದಲಾದ ಸಂಸಕ್ತಿ ಶೂನ್ಯವಾದ ಮನಸ್ಸಿನಿಂದ ಕರ್ಮಗಳನ್ನು ಮಾಡಿದರೂ ಕೂಡ, ಕರ್ಮಫಲಗಳಾದ ಸುಖ ದುಃಖಗಳ ಲೇಪವು ಸಂಭವಿಸುವುದೇ ಇಲ್ಲ.

೭೬. ಕರ್ತೃತ್ವ ಭೋಕ್ತೃತ್ವಾದಿ ಸಕಲ ಧರ್ಮವಿವರ್ಜಿತನಾಗಿ ಅಸಂಗನೂ, ನಿಷ್ಕ್ರಿಯನೂ ಆದ ಸ್ವಾತ್ಮದರ್ಶನದಿಂದ ತನ್ನ ಬುದ್ಧಿಯನ್ನು ಸಂಸಂಗಶೂನ್ಯ ವಾದುದನ್ನಾಗಿ ಮಾಡಿಕೊಂಡು, ಅಚೇತನಗಳಾದ ದೇಹೇಂದ್ರಿಯಗಳಿಂದ

ಗತಸಂಗಮನಾ ದೃಷ್ಟ್ವಾ ಪಶ್ಯನ್ನಪಿ ನ ಪಶ್ಯತಿ ।
ಏತದನ್ಯಸ್ಥ ಚಿತ್ತತ್ವಾದ್ಬಾಲೇನಾಪ್ಯನುಭೂಯತೇ ॥ ೭೭ ॥

ಗತಸಂಗಮನಾಜಂತುಃ ಪಶ್ಯನ್ನೇವ ನ ಪಶ್ಯತಿ ।
ನ ಶೃಣೋತ್ಯಪಿ ಶೃಣ್ವಂಶ್ಚ ನ ಸ್ಪೃಶತ್ಯಪಿ ಚ ಸ್ಪೃಶನ್ ॥ ೭೮ ॥

ನ ಜಿಘ್ರತ್ಯಪಿ ಸಂಜಿಘ್ರನ್ನುನ್ಮಿಷನ್ನಿಮಿಷನ್ನಪಿ ।
ಪದಾರ್ಥೇ ಚ ಪತತ್ಯೇವ ಬಲಾತ್ಪತತಿ ನಾಪ್ಯಯಂ ॥ ೭೯ ॥

ಮಾತ್ರವೇ ಕರ್ಮಗಳನ್ನು ಮಾಡುತ್ತಿದ್ದರೂ ಕೂಡ ಆತ್ಮ ತತ್ತ್ವಜ್ಞನು ಮನೋರಾಜ್ಯ ವೈಭವಗಳಿಂದ ಹೇಗೋ ಹಾಗೆ ಸುಖ ದುಃಖಗಳಿಂದ ಸ್ವಲ್ಪವೂ ಲಿಪ್ತನಾಗುವುದಿಲ್ಲ.

೭೭. ಆತ್ಮ ತತ್ತ್ವಜ್ಞನ ಮನಸ್ಸು ಸ್ವರೂಪದಲ್ಲಿಯೇ ವಿಲೀನವಾಗಿಯೂ, ಸಕಲ ಸಂಗವಿವರ್ಜಿತವಾಗಿಯೂ ಇರುವುದು. ಇಂತಹ ಅನಾಸಕ್ತ ಮನಸ್ಸುಳ್ಳ ಜ್ಞಾನನಿಷ್ಠನು ಕಣ್ಣನ್ನು ಬಿಚ್ಚಿಕೊಂಡು ನೋಡುತ್ತಿರುವವನಾಗಿ ತೋರಿದರೂ ಅವನು ವಾಸ್ತವವಾಗಿ ಏನನ್ನೂ ನೋಡುವುದೇ ಇಲ್ಲ, ಏಕೆಂದರೆ ಯಾವುದೋ ಒಂದು ವಿಷಯದಲ್ಲಿ ಮನಸ್ಸು ಸಂಸಕ್ತವಾಗಿರುವಾಗ ಕೇವಲ ಚಕ್ಷುರಾದೀಂದ್ರಿಯಗಳು ಮನಸ್ಸಿನ ಸಹಾಯವಿಲ್ಲದೆಯೇ ಬೇರೆ ವಿಷಯಗಳನ್ನು ಸರ್ವಥಾ ಗ್ರಹಿಸಲಾರವು. ಈ ವಿಚಾರವು ಲೋಕದಲ್ಲಿ ಸಣ್ಣ ಬಾಲಕರು ಮೊದಲುಗೊಂಡು ಸರ್ವರಿಗೂ ನಿತ್ಯಾನುಭವಗೋಚರ ಪ್ರಸಿದ್ಧವಾದುದೇ.

೭೮. ಆಸಕ್ತಿ ರಹಿತವಾದ ಮನಸ್ಸುಳ್ಳ ಪ್ರಾಣಿಯು ತನ್ನ ಕಣ್ಣಿನಿಂದ ರೂಪಗಳನ್ನು ನೋಡುತ್ತಿದ್ದರೂ ವಾಸ್ತವವಾಗಿ ನೋಡುತ್ತಲೇ ಇಲ್ಲವೆಂದು ತಿಳಿಯಬೇಕು. (ಏಕೆಂದರೆ ಅವನ ಇಂದ್ರಿಯಗಳು ವಿಷಯಗಳ ಜ್ಞಾನವನ್ನುಂಟು ಮಾಡುವುದಿಲ್ಲ.) ಹಾಗೆಯೇ ಕಿವಿಯಿಂದ ಶಬ್ದಗಳನ್ನು ಕೇಳುತ್ತಿದ್ದರೂ ಕೇಳುತ್ತಲೇ ಇಲ್ಲ. ತ್ವಗಿಂದ್ರಿಯದಿಂದ ಸ್ಪರ್ಶ ಮಾಡುತ್ತಿದ್ದರೂ ಮುಟ್ಟುತ್ತಲೇ ಇಲ್ಲ.

೭೯. ಮೂಗಿನಿಂದ ವಾಸನೆ ನೋಡುತ್ತಿದ್ದರೂ ವಾಸನೆಯನ್ನು ಗ್ರಹಿಸುವುದೇ ಇಲ್ಲ. ಮತ್ತು ಕಣ್ಣುಗಳನ್ನು ತೆರೆದುಕೊಂಡಿದ್ದರೂ ಕಣ್ಣುಗಳನ್ನು ನಿಜ

ದೇಶಾಂತರಸ್ಥಚೇತೋಭಿರೇತದಾತ್ಮ ಗೃಹಸ್ಥಿತೈಃ ।
ಅಪ್ರೌಢ ಮತಿಭಿಃ ಸಾಧುಮೂರ್ಖೈರಪ್ಯನುಭೂಯತೇ ॥ ೮೦ ॥

ಸಂಗಃ ಕಾರಣಮರ್ಥಾನಾಂ ಸಂಗಃ ಸಂಸಾರಕಾರಣಂ ।
ಸಂಗಃ ಕಾರಣಮಾಶಾನಾಂ ಸಂಗಃ ಕಾರಣಮಾಪದಾಂ ॥ ೮೧ ॥

ಸಂಗತ್ಯಾಗಂ ವಿದುರ್ಮೋಕ್ಷಂ ಸಂಗತ್ಯಾಗಾದ ಜನ್ಮತಾ ।
ಸಂಗಂ ತ್ಯಜ ತ್ವಂ ಭಾವನಾಂ-ಜೀವನ್ಮುಕ್ತೋ ಭವಾನಘ ॥ ೮೨ ॥

ವಾಗಿಯೂ ಮುಚ್ಚಿಕೊಂಡಿರುವುದೆಂದೇ ತಿಳಿಯಬೇಕು. ಹೀಗೆಯೇ ಕರ ಚರಣಾದಿ ಕರ್ಮೇಂದ್ರಿಯಗಳು ತಮ್ಮ ತಮ್ಮ ವಿಷಯ ಪದಾರ್ಥಗಳಲ್ಲಿ ಪೂರ್ವ ಸಂಸ್ಕಾರ ಬಲದಿಂದ ಹೋಗಿ ಬೀಳುತ್ತಿರುವಾಗಲೂ ಕೂಡ, ಅವು ನಿಜವಾಗಿಯೂ ಬೀಳುವುದೇ ಇಲ್ಲ.

೮೦. ತಮ್ಮ ಮನೆಯಲ್ಲಿಯೇ ಇದ್ದರೂ, ತಮ್ಮ ಮನಸ್ಸನ್ನು ಮಾತ್ರ ಬೇರೆ ಬೇರೆ ಕಡೆಗಳಲ್ಲಿ ಓಡಿಸಿಕೊಂಡು ಸಂಚಾರ ಮಾಡಿಸುತ್ತಿರುವ ಕೇವಲ ಅಲ್ಪ ಬುದ್ಧಿ ಗಳಾದ ಪಾಮರರಿಗೂ ಕೂಡ ಈ ಮೇಲಣ ವಿಷಯವು ಚೆನ್ನಾಗಿ ಅನುಭವ ಗೋಚರವೇ ಆಗಿರುವುದು.

೮೧. ಬಾಹ್ಯಾನಾತ್ಮ ದೃಶ್ಯ ವಸ್ತುಗಳ ಮೇಲೆ ಪ್ರಾಣಿಗಳಿಗೆ ಸಹಜವಾಗಿ ರುವ ಮಮತಾರೂಪವಾದ ಆಸಕ್ತಿಯೇ ಸರ್ವಾರ್ಥಗಳಿಗೂ ಕಾರಣ. ಈ ಆಸಕ್ತಿಯೇ ಸಂಸಾರಕ್ಕೆ ಕಾರಣವು. ಸಕಲ ಆಶೆಗಳಿಗೂ, ಸಮಸ್ತ ಆಪತ್ತುಗಳಿಗೂ ಇದೇ ಮೂಲ ಕಾರಣವು.

೮೨. ಅಯ್ಯ ಅನಘನಾದ ರಾಮ, ಈ ಬಗೆಯಾದ ಸಂಗತ್ಯಾಗವನ್ನೇ ಮೋಕ್ಷವೆಂಬುದಾಗಿ ಜ್ಞಾನಿಗಳು ವ್ಯವಹರಿಸುವರು. ಏಕೆಂದರೆ ಸಂಗತ್ಯಾಗದಿಂದ

ಶ್ರೀ ರಾಮ ಉವಾಚ :—

ಸರ್ವಸಂಶಯನೀಹಾರಶರನ್ಮಾರುತ ಹೇ ಮುನೇ ।
ಸಂಗಃ ಕಿಮುಚ್ಯತೇ ಬ್ರೂಹಿ ಸಮಾಸೇನ ಮಮ ಪ್ರಭೋ ॥ ೮೩ ॥

ಶ್ರೀ ವಸಿಷ್ಠ ಉವಾಚ :—

ಭಾವಾಭಾವೇ ಪದಾರ್ಥಾನಾಂ ಹರ್ಷಾಮರ್ಷ ವಿಕಾರದಾ ।
ಮಲಿನಾ ವಾಸನಾ ಯೈಷಾ ಸಾ ಸಂಗ ಇತಿ ಕಥ್ಯತೇ ॥ ೮೪ ॥

ಪುನರ್ಜನ್ಮವು ಇಲ್ಲದೆ ಹೋಗುವುದು. ಅದು ಕಾರಣ, ನೀನು ಸಮಸ್ತ ಅನಾತ್ಮ ವಸ್ತುಗಳ ಮೇಲಿರಿಸಿರುವ ಸಂಗವನ್ನು (ಅಭಿಮಾನ) ಪರಿತ್ಯಜಿಸಿ ಜೀವನ್ಮುಕ್ತನಾಗಿರು.

[ಮೋಕ್ಷ = ಈಗಿರುವ ದೇಹೇಂದ್ರಿಯಾದಿಗಳ ಸಂಬಂಧ ನಿವೃತ್ತಿ. ಅಜನ್ಮತಾ = ಮುಂದೆ ಬರುವ ದೇಹಾದಿಗಳ ಬಂಧ ನಿವಾರಣೆ. ತಾ. ಪ್ರ.]

ಶ್ರೀ ರಾಮನು ಕೇಳಿದನು :—

೮೩. ಸ್ವಾಮಿ, ಸಮಸ್ತ ಸಂದೇಹಗಳೆಂಬ ಹಿಮ ಜಲವನ್ನು ನಿವಾರಣೆ ಮಾಡುವುದರಲ್ಲಿ ಶರದೃತುವಿನ ವಾಯುವಾದ ಮುನೀಶ್ವರರಾದ ಗುರುಗಳೇ, ತಾವು ಹೇಳಿದ ಈ ಸಂಗವೆಂಬುದು ಯಾವುದು? ಅದರ ಸ್ವರೂಪವನ್ನು ಸಂಕ್ಷೇಪವಾಗಿ ದಯೆಮಾಡಿ ನನಗೆ ಹೇಳೋಣಾಗಲಿ.

ಶ್ರೀ ವಸಿಷ್ಠರು ಹೇಳಿದರು :—

೮೪. ನಮಗೆ ಇಷ್ಟವಾದ ಪದಾರ್ಥಗಳ ಸಂಯೋಗ ಕಾಲದಲ್ಲಿ ಹರ್ಷವನ್ನೂ, ವಿಯೋಗ ಕಾಲದಲ್ಲಿ ದುಃಖವನ್ನೂ, ಹಾಗೆಯೇ ಅನಿಷ್ಟ ಪದಾರ್ಥಗಳ ಪ್ರಾಪ್ತಿಯಿಂದ ದುಃಖ ಕೋಪ ತಾಪಗಳನ್ನೂ ನಿವಾರಣೆಯಿಂದ ಹರ್ಷವನ್ನೂ ಉಂಟುಮಾಡುವ ಆತ್ಯಂತ ಮಲಿನವಾದ ರಾಗ ದ್ವೇಷಾದಿ ವಾಸನೆಯನ್ನೇ ಪ್ರಾಜ್ಞರು "ಸಂಗ" ವೆಂದು ಹೇಳುವರು.

ಜೀವನ್ಮುಕ್ತ ಶರೀರಾಣಾಮಪುನರ್ಜನ್ಮಕಾರಿಣೀ ।
ಮುಕ್ತಾ ಹರ್ಷ ವಿಷಾದಾಭ್ಯಾಂ ಶುದ್ಧಾ ಭವತಿ ವಾಸನಾ ॥ ೮೫ ॥

ತಾಮಸಂಗಾಭಿಧಾಂ ವಿದ್ಧಿ ಯಾವದ್ದೇಹಂ ಚ ಭಾವಿನೀ ।
ತಯಾ ಯತ್ಕ್ರಿಯತೇ ಕರ್ಮ ನ ತದ್ಬ ಧಾಯ ವೈಪುನಃ ॥ ೮೬ ॥

ಅಜೀವನ್ಮುಕ್ತ ರೂಪಾಣಾಂ ದೀನಾನಾಂ ಮೂಢ ಚೇತಸಾಂ ।
ಯುಕ್ತಾ ಹರ್ಷ ವಿಷಾದಾಭ್ಯಾಂ ಬಂಧಿನೀ ವಾಸನಾ ಭವೇತ್ ॥ ೮೭ ॥

ಸೈವೋಕ್ತಾ ಸಂಗಶಬ್ದೇನ ಪುನರ್ಜನನಕಾರಿಣೀ ।
ತಯಾ ಯತ್ಕ್ರಿಯತೇ ಕರ್ಮ ತದ್ಬಂಧಾಯೈವ ಕೇವಲಂ ॥ ೮೮ ॥

[ಈ ಮಲಿನವಾದ ವಾಸನಾರೂಪ ಸಂಗವು ಪುನರ್ಜನ್ಮಾದಿ ಕಾರಣವಾಗಿ ಸಮಸ್ತ ಅಜ್ಞ ಜನ ಸಾಮಾನ್ಯವು.]

೮೫-೮೬. ಜೀವನ್ಮುಕ್ತ ಶರೀರಗಳಿಗಾದರೋ, ಈ ವಾಸನೆಯು ಹರ್ಷ ವಿಷಾದ ರಹಿತವಾಗಿರುವ ಕಾರಣ ಅತಿ ನಿರ್ಮಲವಾಗಿರುವುದು. ಆದುದರಿಂದಲೇ ಅದು ಪುನರ್ಜನ್ಮ ಪ್ರದವಾಗಿಲ್ಲ. ಈ ವಾಸನೆಯು ಪ್ರಾರಬ್ಧಶೇಷ ಕ್ಷಯ ಪರ್ಯಂತವೂ ಇರುವುದು. ಇಂತಹ ವಾಸನೆಯ ಮೂಲಕ ಯಾವ ಕರ್ಮವನ್ನು ಮಾಡಿದರೂ ಅದು ಪುನಃ ಸಂಸಾರ ಬಂಧ ಹೇತುವಾಗುವುದಿಲ್ಲ. ಈ ಕಾರಣ ದಿಂದ ಈ ಶುದ್ಧ ವಾಸನೆಯನ್ನು ಅಸಂಗವೆಂಬುದಾಗಿಯೂ ಕರೆಯಬಹುದು.

೮೭. ವಾಸನೆಯು ಜೀವನ್ಮುಕ್ತರಾಗದೇ ಇರುವ ಅತ್ಯಂತ ದೀನರೂ, ಮೂಢ ಬುದ್ಧಿಗಳೂ ಆದ ಅಜ್ಞ ಜನರಿಗೆ, ಕೋಪ ತಾಪಗಳಿಂದ ಕೂಡಿದುದಾಗಿ ಬಂಧಕವಾಗಿರುವುದು.

೮೮. ಪುನರ್ಜನ್ಮ ಹೇತುವಾದ ಈ ದುಷ್ಟವಾದ ವಾಸನೆಯನ್ನೇ ಸಂಗವೆಂಬ ಹೆಸರಿನಿಂದಲೂ ಕರೆಯುವರು. ಅವಿದ್ಯಾ ಕಾಮ ಕರ್ಮ ವಾಸನೆಯೆಂಬ ಸಂಗದಿಂದ ಮಾಡಿದ ಕರ್ಮವು ಮಾತ್ರವೇ ಸಂಸಾರ ಬಂಧಜನಕವಾಗಿರುವುದು.

ಏವಂ ರೂಪಂ ಪರಿತ್ಯಜ್ಯ ಸಂಗಂ ಸ್ವಾತ್ಮವಿಕಾರದಂ ।
ಯದಿ ತಿಷ್ಠಸಿ ನಿರ್ವ್ಯಗ್ರಃ ಕುರ್ವನ್ನಪಿ ನ ಲಿಪ್ಯಸೇ ॥ ೮೯ ॥

ಹರ್ಷಾಮರ್ಷ ವಿಷಾದಾಭ್ಯಾಂ ಯದಿ ಗಚ್ಛಸಿ ನಾನ್ಯತಾಂ ।
ವೀತರಾಗ ಭಯಕ್ರೋಧಸ್ತದಸಂಗೋಽಸಿ ರಾಘವ ॥ ೯೦ ॥

ದುಃಖೈರ್ನ ಗ್ಲಾನಿಮಾಯಾಸಿ ಯದಿ ಹೃಷ್ಯಸಿ ನೋ ಸುಖೈಃ ।
ಆಶಾ ವೈವಶ್ಯ ಮುತ್ಸೃಜ್ಯ ತದಸಂಗೋಽಸಿ ರಾಘವ ॥ ೯೧ ॥

ವಿಹರನ್ವ್ಯವಹಾರೇಷು ಸುಖದುಃಖದಶಾಸು ಚ ।
ನ ವಿಮುಂಚಸಿ ಸತ್ಸಾಮ್ಯಂ ತದಸಂಗೋಽಸಿ ರಾಘವ ॥ ೯೨ ॥

---

೮೯. ಅಯ್ಯ ರಾಮಚಂದ್ರ. ಆದುದರಿಂದ ನೀನು ನಿನ್ನೊಳಗೆ ಕೋಪ ತಾಪಾದಿ ಸಮಸ್ತ ವಿಕಾರಗಳನ್ನುಂಟುಮಾಡತಕ್ಕ ಪೂರ್ವೋಕ್ತ ಪ್ರಕಾರವಾದ ಸಂಗವನ್ನು ಪರಿತ್ಯಜಿಸಿ, ಸ್ವಸ್ಥನಾಗಿರುವೆಯಾದರೆ, ಆಗ ನೀನು ಕರ್ಮಗಳನ್ನು ಮಾಡುತ್ತಿರುವವನಾದರೂ, ಆ ವ್ಯವಹಾರಗಳಿಂದ ಸ್ವಲ್ಪವೂ ಲೇಪವನ್ನು ಹೊಂದದೆ ಇರುವೆ. (ಫಲಾಭಿ ಸಂಧಿಯಿಲ್ಲದ ಕಾರಣ, ಕರ್ಮ ಲೇಪವು ಇರುವುದಿಲ್ಲ.)

೯೦. ಅಯ್ಯ ರಾಘವ, ನೀನು ಹರ್ಷ, ಕೋಪ, ವಿಷಾದ ಮುಂತಾದವುಗಳಿಂದ ವೈರೂಪ್ಯವನ್ನು ಹೊಂದದೆ ಸಮ ಪ್ರಶಾಂತ ಚಿತ್ತನಾಗಿಯೇ ಸರ್ವದಾ ಇರುವೆಯಾದರೆ- ರಾಗ, ಭಯ, ಕ್ರೋಧಾದಿಗಳೊಂದೂ ಇಲ್ಲದವನಾಗಿ, ಅಸಂಗನೇ (ಸಂಗರಹಿತ) ಆಗಿರುವೆ.

೯೧. ಮತ್ತೂ, ರಾಘವ, ನೀನು ಆಶಾಪರವಶನಾಗದೆ ದುಃಖಗಳಿಂದ ಮನಸ್ತಾಪವನ್ನೂ ಸುಖಗಳಿಂದ ಹರ್ಷವನ್ನೂ ಪಡೆಯದೆ ಸಮಸ್ಥಿತಿಯುಳ್ಳವನಾಗಿರುವ ಪಕ್ಷದಲ್ಲಿ ಅಸಂಗನಾಗಿರುವೆ.

೯೨. ಮತ್ತೂ, ರಾಘವ, ನೀನು ಪ್ರಾಪಂಚಿಕ ವ್ಯವಹಾರಗಳಲ್ಲಿ ಲೀಲೆಯಿಂದ ವಿಹರಿಸುತ್ತಾ ಸುಖಗಳಾಗಲೀ ದುಃಖಗಳಾಗಲಿ ಪ್ರಾಪ್ತವಾದ ಸಂದರ್ಭಗಳಲ್ಲಿ

ಸಂವೇದ್ಯೋ ಯದಿ ಚೈವಾತ್ಮಾ ವೇದಿತೇ ಲಕ್ಷ್ಯತೇ ಸಮಃ ।
ಯಥಾ ಪ್ರಾಪ್ತಾನುವರ್ತೀ ಚ ತದಸಂಗೋಽಸಿ ರಾಘವ ॥ ೯೩ ॥

ಅಸಂಗತಾಮನಾಯಾಸಾಜ್ಜೀವನ್ಮುಕ್ತ ಸ್ಥಿತಿಂ ಸ್ಥಿರಾಂ ।
ಅವಲಂಬ್ಯ ಸಮಃ ಸ್ವಸ್ಥೋ ವೀತರಾಗೋ ಭವಾನಘ ॥ ೯೪ ॥

ಜೀವನ್ಮುಕ್ತಮತಿ ರ್ಮೌನೀ ನಿಗೃಹೀತೇಂದ್ರಿಯಗ್ರಹಃ ।
ಅಮಾನ ಮದಮಾತ್ಸರ್ಯ ಮಾರ್ಯಸ್ತಿಷ್ಠತಿ ವಿಜ್ವರಂ ॥ ೯೫ ॥

ಸತ್ಸಾಮ್ಯವನ್ನು (ಬ್ರಹ್ಮಾತ್ಮೈಕರಸ ಸ್ವಭಾವವನ್ನು) ಬಿಡದೆ ಇರುವುದಾದರೆ ಅಸಂಗನಾಗಿರುವೆ.

೯೩. ಅಯ್ಯ ರಾಘವ, ಆತ್ಮನು ಯಥಾರ್ಥವಾಗಿ ತತ್ತ್ವತಃ ತಿಳಿಯಲ್ಪಡಬೇಕು. ಆತ್ಮತತ್ತ್ವವನ್ನು ತಿಳಿದುಕೊಂಡುಬಿಟ್ಟರೆ ಆಗ ಚಿತ್ತಸ್ವಭಾವವು ಸರ್ವದಾ ಹರ್ಷವಿಷಾದಾದಿದಶೆಗಳಲ್ಲಿ ಸಮವಾಗಿಯೂ ಅವಶ್ಯಕರ್ತವ್ಯಗಳಾಗಿ ಸಂಪ್ರಾಪ್ತವಾದ ಕರ್ಮಗಳಲ್ಲಿ ಮಾತ್ರವೇ ವ್ಯವಹರಿಸುವುದಾಗಿಯೂ ಇರುವುದು. ಆಗ ನೀನು ಸ್ವತಃ ಅಸಂಗನಾಗಿಯೇ ಇರುವೆ.

೯೪. ಅಯ್ಯ ಅನಘನಾದ ರಾಘವ, ನೀನು ಈಬಗೆಯಾದ ಅಸಂಗತಾ ರೂಪವಾದ ಮತ್ತು ಶಾಶ್ವತವಾದ ಜೀವನ್ಮುಕ್ತ ಸ್ಥಿತಿಯನ್ನು ಅವಲಂಬಿಸಿ ಅನಾಯಾಸನಾಗಿರುತ್ತಾ ಸಮನಾಗಿಯೂ, ಸ್ವಸ್ಥನಾಗಿಯೂ, ರಾಗ ದ್ವೇಷಾದಿ ವಿಕಾರ ರಹಿತನಾಗಿಯೂ ಇರು.

೯೫. ಜೀವನ್ಮುಕ್ತನಾದ ತತ್ತ್ವಜ್ಞನು ಸದಾ ವಾಙ್ನಿಯಮವುಳ್ಳವನೂ ಇಂದ್ರಿಯಗಳೆಂಬ ಪಾಶಗಳನ್ನು ನಿಗ್ರಹಿಸಿದವನೂ, ಸದ್ವೃತ್ತನೂ ಆಗಿ ಮಾನ ಮದ ಮಾತ್ಸರ್ಯಗಳಿಲ್ಲದೆಯೇ, ಸಕಲ ಸಂತಾಪ ಶೂನ್ಯನಾಗಿರುವನು.

ಸದಾ ಸಮಗ್ರೇಪಿ ಹಿ ವಸ್ತುಜಾಲೇ ।
ಸಮಾಶಯೋಽಪ್ಯಂತರದೀನ ಸತ್ವಃ ।
ವ್ಯಾಪಾರಮಾತ್ರಾತ್ಸಹಜಾತ್ಕ್ರಮಸ್ಥಾತ್ ।
ನ ಕಿಂಚಿದಪ್ಯನ್ಯದಸೌ ಕರೋತಿ ॥ ೯೬ ॥

ಯದೇವ ಕಿಂಚಿತ್ಪ್ರಕೃತಂ ಕ್ರಮಸ್ಥಂ ।
ಕರ್ತವ್ಯಮಾತ್ಮೀಯಮಸೌ ತದೇವ ।
ಸಂಸರ್ಗ ಸಂಬಂಧವಿಹೀನಯೈವ ।
ಕುರ್ವನ್ನ ಖೇದಂ ರಮತೇ ಧಿಯಾಂತಃ ॥ ೯೭ ॥

ಅಥಾಪದಂ ಪ್ರಾಪ್ಯ ಸುಸಂಪದಂ ವಾ ।
ಮಹಾಮತಿಃ ಸ್ವಪ್ರಕೃತಂ ಸ್ವಭಾವಂ ।
ಜಹಾತಿ ನೋ ಮಂದರವೇಲ್ಲಿತೋಪಿ ।
ಶೌಕ್ಲ್ಯಂ ಯಥಾ ಕ್ಷೀರಮಯಾಂಬುರಾಶಿಃ ॥ ೯೮ ॥

---

೯೬. ಭೋಗ ವಿಕ್ಷೇಪಾದಿ ಹೇತುಗಳಾದ ಭೋಗ್ಯವಸ್ತುಗಳ ಸಮುದಾಯವು ಸದಾ ಸಮಗ್ರವಾಗಿ ಇದ್ದಾಗ್ಯೂ ಕೂಡ ತನ್ನೊಳಗೆ ವಿಕಾರಕ್ಕೊಳಗಾಗದ ಮತ್ತು ಸಮವಾದ ಚಿತ್ತವುಳ್ಳವನೂ, ಹೊರಗೂ ಕೂಡ ದೈನ್ಯ ಸ್ವಭಾವವನ್ನು ತೋರದಿರುವವನೂ ಆಗಿದ್ದುಕೊಂಡು, ಆತ್ಮ ಜ್ಞಾನಿಯು ತನಗೆ ವರ್ಣಾಶ್ರಮೋಚಿತವೂ, ಶಾಸ್ತ್ರ ವಿಹಿತವೂ ಕುಲಕ್ರಮಾಗತವೂ ಆದ ಸ್ವಾಭಾವಿಕ ಕರ್ಮಗಳಲ್ಲಿ ಮಾತ್ರವೇ ವ್ಯವಹರಿಸುವವನಾಗಿರುವನು. ಇನ್ಯಾವ ಇತರ ಕರ್ಮಗಳನ್ನೂ ಮಾಡುವುದಿಲ್ಲ.

೯೭. ಯಾವ ಕರ್ಮವು ಪ್ರಕೃತವೋ ಅವಶ್ಯ ಕರ್ತವ್ಯವೋ ಕುಲಕ್ರಮಾಗತವೋ, ಸ್ವವರ್ಣಾಶ್ರಮಾದಿಗಳಿಗೆ ವಿಹಿತವಾಗಿರುವುದೋ ಅಂತಹ ಸ್ವಕೀಯ ಕರ್ಮಗಳನ್ನು ಮಾತ್ರವೇ ಅನಾಯಾಸವಾಗಿ ಆತ್ಮಜ್ಞನು ಕಾರ್ಯಾಭಿನಿವೇಶ ಫಲಾಭಿಲಾಷೆ, ಮುಂತಾದ ದೋಷಗಳಿಲ್ಲದ ಅಸಂಗ ಬುದ್ಧಿಯಿಂದಲೇ ಮಾಡುತ್ತಾ ಸ್ವಾತ್ಮ ಸ್ವರೂಪದಲ್ಲಿಯೇ ಸದಾ ಸಂತುಷ್ಟನಾಗಿ ಕ್ರೀಡಿಸುವನು.

೯೮. ಕ್ಷೀರ ಸಮುದ್ರವು ಮಂದರ ಪರ್ವತದಿಂದ ಕಡೆಯಲ್ಪಟ್ಟರೂ ಕೂಡ ತನ್ನ ಸಹಜವಾದ ಶುಕ್ಲತ್ವವನ್ನು ಹೇಗೆ ಬಿಡಲಿಲ್ಲವೋ ಹಾಗೆಯೇ ಅತ್ಯುದಾರ

ಸಂಪ್ರಾಪ್ಯ ಸಾಮ್ರಾಜ್ಯಮಥಾಪದಂ ವಾ ।
ಸರೀಸೃಪತ್ವಂ ಸುರನಾಥತಾಂ ವಾ ।
ತಿಷ್ಠತ್ಯಖೇದೋದಯ ಮಸ್ತಹರ್ಷಂ ।
ಕ್ಷಯೋದಯೇಽಪ್ಯಿಂದುರಿವೈಕ ರೂಪಃ ॥ ೯೯ ॥

ನಿರಸ್ತಸಂರಂಭ ಮಪಾಸ್ತಭೇದಂ ।
ಪ್ರಶಾಂತ ನಾನಾ ಫಲವಲ್ಗುವೇಷಂ ।
ವಿಚಾರಯಾತ್ಮಾನ ಮದೀನ ಸತ್ತ್ವೋ ।
ಯಥಾ ಭವಸ್ಯುತ್ತಮಕಾರ್ಯನಿಷ್ಠಃ ॥ ೧೦೦ ॥

ಚಿತ್ತನಾದ ಆತ್ಮತತ್ತ್ವಜ್ಞನು ಅತ್ಯಂತ ದುಸ್ಸಹವಾದ ವಿಪತ್ತುಗಳಿಗೆ ಗುರಿಯಾದರೂ ಅಥವಾ ಸುಸಮೃದ್ಧವಾದ ಸಂಪತ್ತುಗಳನ್ನು ಪಡೆದರೂ ಕೂಡ ಎಂದಿಗೂ ತನ್ನ ಪೂರ್ವಸಿದ್ಧವಾದ, ಶಾಂತಿ, ದಾಂತಿ, ಪ್ರಸಾದ ಸಮದರ್ಶನಾದಿ ಸ್ವಭಾವವನ್ನು ಬಿಡದೆ ಅವಿಕೃತನಾಗಿರುವನು.

೯೯. ಆತ್ಮಜ್ಞನು ಸಾಮ್ರಾಜ್ಯ ಪದವಿಯನ್ನೋ ಅಥವಾ ಬಡತನವೇ ಮೊದಲಾದ ವಿಪತ್ತನ್ನೋ ಹೊಂದಿರಲಿ ಮತ್ತು ದೇವರಾಜನೇ ಆಗಿರಲಿ ಅಥವಾ ಹಾವು ಮುಂತಾದ ಕ್ಷುದ್ರ ಜನ್ಮವನ್ನು ಪಡೆದಿರಲಿ ಹೇಗಿದ್ದರೂ ಕೂಡ ಶುಕ್ಲ, ಕೃಷ್ಣ ಪಕ್ಷಗಳಲ್ಲಿ ವೃದ್ಧಿ ಕ್ಷಯಗಳು ಕ್ರಮವಾಗಿ ಉಂಟಾದರೂ ಉದಯಾಸ್ತಮಯ ಕಾಲಗಳಲ್ಲಿಯೂ ಚಂದ್ರನು ಏಕ ರೂಪನಾಗಿಯೇ ಇರುವಂತೆ ಸಂಪತ್ತು ವಿಪತ್ತುಗಳ ಕಾಲಗಳಲ್ಲಿ ಸರ್ವದಾ ಹರ್ಷ ವಿಷಾದಗಳೊಂದೂ ಇಲ್ಲದೆ ಏಕರೂಪನಾಗಿರುವನು.

೧೦೦. ಅಯ್ಯ ರಾಮಭದ್ರ, ನೀನು ದೈನ್ಯವನ್ನು ಬಿಟ್ಟು ಬಿಟ್ಟು ಧೀರ ಸ್ವಭಾವನಾಗಿ ಕೋಪ ತಾಪಗಳನ್ನು ಪರಿತ್ಯಜಿಸಿ, ಕ್ರಿಯಾಕಾರಕ ಫಲಾದಿ ಭೇದ ಬುದ್ಧಿಯನ್ನು ದೂರಮಾಡಿ, ವಿವಿಧಾನೇಕ ಕ್ಷುದ್ರ ಫಲಾಭಿಲಾಷೆಯಿಂದ ಸಂಕುಚಿತವಾದ ಸ್ವಭಾವವನ್ನು ಪರಿಹರಿಸಿಕೊಂಡು ಪೂರ್ವೋಕ್ತ ಜೀವನ್ಮುಕ್ತಿ ರೂಪ ನಿತ್ಯ ನಿರತಿಶಯ ಸಹಜಾತ್ಮಾನಂದ ಪ್ರಾಪ್ತಿಯ ಸಲುವಾಗಿ ಸ್ವಾತ್ಮತತ್ತ್ವ ವಿಚಾರದಲ್ಲಿ ತತ್ಪರನಾಗಿರು. ಅದರಿಂದ ಅವಶ್ಯ ಸಂಪಾದ್ಯವಾದ ಚರಮ ಪುರುಷಾರ್ಥ (ಮೋಕ್ಷ) ದಲ್ಲಿ ನೀನು ಪರಿನಿಷ್ಠಿತನಾಗುವೆ.

ತಯೋದಿತ ಪ್ರಸರ ವಿಶಾಲ ಶುದ್ಧ್ಯಾ ।
ಗತಜ್ವರಂ ಪದಮವಲಂಬಯಾಲಂ ।
ಧೀಯೇದ್ಧಯಾ ಪುನರಿಹ ಜನ್ಮಬಂಧನೈಃ ।
ನ ಬಧ್ಯಸೇ ಸಮಾಧಿಗತಾತ್ಮದೃಶ್ಯಯಾ ॥ ೧೦೧ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು
ಉಪಶಮಪ್ರಕರಣೇ "ಸಮದರ್ಶನಂ" ನಾಮ ತ್ರಿನವತಿತಮಃ ಸರ್ಗಃ

---

೧೦೧. ಈವಿಧವಾದ ಆತ್ಮ ವಿಚಾರದಿಂದ ಉದಯಿಸಿದ ಸಮಾಧಿ ವಿಲಾಸದ ದೆಸೆಯಿಂದ ಸಮಸ್ತ ಭೇದ ದುರ್ವಾಸನೆಗಳೂ ಕ್ಷೀಣವಾಗಿ ಬುದ್ಧಿಯು ನಿರ್ಮಲ ವಾಗುವುದು. ಆಗ ಅತ್ಯವಶ್ಯ ದ್ರಷ್ಟವ್ಯವಾದ ಆತ್ಮ ಸ್ವರೂಪವು ಸಾಕ್ಷಾತ್ಕೃತ ವಾಗುವುದು. ಅದು ಕಾರಣವೇ, ಆ ಬುದ್ಧಿಯು ಅವಿದ್ಯೆಯನ್ನೂ, ಅದರ ಕಾರ್ಯ ಗಳನ್ನೂ, ಸುಟ್ಟು ಬೂದಿಮಾಡಲು ಸಮರ್ಥವಾಗಿ ಸ್ವತಃ ಪ್ರಕಾಶಮಾನವಾಗಿರು ವುದು. ಇಂತಹ ಬುದ್ಧಿ ಬಲದಿಂದ ನೀನು, ನಿರ್ದುಃಖ, ನಿರುಪದ್ರವ, ನಿರತಿ ಶಯಾನಂದ ರೂಪವೂ, ನಿತ್ಯ ಶುದ್ಧವೂ ಆದ ಪರಮ ಪದವನ್ನು ಅವಲಂಬಿಸಿ ಅದರಲ್ಲಿ ಪರಿನಿಷ್ಠನಾಗಿರು. ಹೀಗೆ ಪರಮ ಪದವನ್ನು ಅವಲಂಬಿಸಿದರೆ, ಪುನಃ ನೀನು ಈ ಸಂಸಾರದಲ್ಲಿ ಜನ್ಮ ಜರಾ ಮರಣಾದಿ ಬಂಧನಗಳಿಗೆ ಸಿಕ್ಕಿಕೊಂಡು ಬದ್ಧ ನಾಗುವುದಿಲ್ಲ.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ "ಸಮದರ್ಶನ" ವೆಂಬ ತೊಂಭತ್ತ ಮೂರನೆಯ ಸರ್ಗವು

ಉಪಶಮ ಪ್ರಕರಣವು ಸಮಾಪ್ತವು.